
ಕಸ್ತೂರಿ






1985
THE
TINC

ನಿಮ್ಮ ಪ್ರಯಾಣದ ಪಟ್ಟಿಯಲ್ಲಿ
ಹುಬ್ಬಳ್ಳಿ ಇದೆಯೆ ? ಹಾಗಾದರೆ,
ಮರೆಯದೆ ನಮ್ಮಲ್ಲಿ ಬನ್ನಿ.

ಶಾನಭಾಗ

ರೆಸ್ಟೋರೆಂಟ್

ಸುಜಾತಾ ಕಾಂಪ್ಲೆಕ್ಸ್, ಹುಬ್ಬಳ್ಳಿ
☎ 64754

ಪ್ರವಾಸದ ದಣಿವು, ತಣಿಯ
ಬೇಕಾದರೆ -
ಆಹ್ಲಾದಕರ ವಾತಾವರಣ-
ವಿರಬೇಕು, ಸ್ವಚ್ಛ, ರುಚಿಕರ,
ಆರೋಗ್ಯಕರವಾದ ಆಹಾರ
ಉಪಹಾರಗಳು ಅವಶ್ಯ
ಅವನ್ನು ನಗುಮುಖದಿಂದ
ನೀಡಲು ನಮ್ಮ ಸೇವಕವರ್ಗ-
ವಿರಬೇಕು
ಅವೆಲ್ಲವೂ ನಮ್ಮಲ್ಲಿವೆ!
ಬನ್ನಿ,
ನಾವಿರುವುದು ಪೂನಾ-
ಬೆಂಗಳೂರು ಹೆದ್ದಾರಿಯ-
ಮೇಲೆ. ಅಲ್ಲಿ ವಿಪುಲವಾದ
ಪಾರ್ಕಿಂಗ ನೆಲವೂ ಇದೆ.
ನಿಮಗೆ ಸ್ವಾಗತ, ಸುಸ್ವಾಗತ.








ದಕ್ಷಿಣ ಭಾರತೀಯ
ಉತ್ತರ ಭಾರತೀಯ
ಚೈನೀಸ್
ಊಟ ಉಪಹಾರಗಳು


ಬೆಂಗಾಲಿ
ಸಿಹಿ ತಿನಿಸುಗಳು



SRISHTI ADVT









ಕನ್ನಡ ಕುಲಕೋಟಿಗೆ
ದೀಪಾವಳಿಯ
ಹಾರ್ದಿಕ
ಶುಭಾಶಯಗಳು



With best compliments from :

BHARAT FOUNDERS

Pearlite Industrial Estate
P. B. No. 100
N. T. Road, SHIMOGA-577202

Grams : PEARLITE — **Phone : 2091 (3 Lines) 2941**

Manufacturers of Centrifugally Cast Pearlite Cylinder Liners

Conforming to I. S. S., B. S. S., DIN., ASIM AND Other specifications in the following ranges

Length	:	**100mm to 1600mm**
O. D.	:	**90mm to 510mm**
I. D.	:	**50mm to 460mm**
Weight	:	**5 kgs to 600 kgs**


For further details, please contact :

Pearlite Liners Private Ltd.,



P. B. No. 100, Nehru Road,
SHIMOGA-577201.
(Karnataka)

Grams : PEARLITE — **Phone : 2941**




Fire Insurance Policy

Here are 13 reasons why every small scale industry should take it

Risks like:

Fire
Lightning
Riots
Strikes
Malicious damage
Explosions
Floods
Storms
Cyclones
Landslides
Earthquakes
Volcanic eruptions
Aerial damage



Here is one weighty reason why even the tiniest industry can afford it:

Premiums considerably reduced: you pay as little as One rupee for a Thousand insured.

This policy is specially for small scale industries whose original investment does not exceed Rs.5 lacs and where total sum insured is not over Rs.10 lacs.



आपत्काले रक्षिष्यामि

GENERAL INSURANCE CORPORATION OF INDIA

AQUARIUS/GIC/2/85

Get more information from our following subsidiaries:



National Insurance Company Limited.




The New India Assurance Company Limited.



The Oriental Insurance Company Limited.



United India Insurance Company Limited.



ಈ ಅನುಭವ
ಲಕ್ಷಾಂತರ
ಓದುಗರದು...

ನನ್ನ ಅಪ್ಪನಿಗೆ ಎರಡು ಹವ್ಯಾಸಗಳು : ಡಾ. ಕೋಟ ಶಿವರಾಮ ಕಾರಂತರು ಬರೆದ ಎಲ್ಲಾ ಪುಸ್ತಕಗಳನ್ನು ಕ್ರಯಕ್ಕೆ ಕೊಳ್ಳುವುದು ಮತ್ತು ತಪ್ಪದೇ 'ಕಸ್ತೂರಿ'ಯನ್ನು ಕೊಂಡು ತಂದು, ಆರು ಕಸ್ತೂರಿಗಳಿಗೆ ಒಂದರಂತೆ ಬುಕ್ ಬೈಂಡ್ ಮಾಡಿ ಇಡುವುದು. ಹಾಗೆ 'ಕಸ್ತೂರಿ'ಯ ಒಂದನೇ ಸಂಚಿಕೆಯಿಂದ ಇಂದಿನವರೆಗೆ ಎಲ್ಲಾ ಪ್ರತಿಗಳು ನಮ್ಮಲ್ಲಿ ಬುಕ್‌ಬೈಂಡ್ ಆಗಿವೆ...ನನ್ನ ಅಧ್ಯಯನಕ್ಕೆ ಪೂರಕವಾಗಿ ಸಹಕರಿಸಿದ್ದು ಈ 'ಕಸ್ತೂರಿ'.... ಆದರಿಂದ ನನಗಾದ ಲಾಭ ಬಲು ದೊಡ್ಡದು.

—ವಿಜಯ ಶಂಕರ
ಕಲ್ಯಾಣಪುರ

ವಿದ್ಯಾರ್ಥಿ ದೆಸೆಯಿಂದಲೇ 'ಕಸ್ತೂರಿ' ನನ್ನ ಗಮನ ಸೆಳೆಯಿತು. ನನ್ನ ನೂರಾರು ವಿದ್ಯಾರ್ಥಿಗಳಿಗೆ ನಾನು 'ಕಸ್ತೂರಿ'ಯಿಂದ ಪಡೆದುದನ್ನು ಈ ಎಲ್ಲ ವರುಷ ಹಂಚಿರುವೆ.

'ಕಸ್ತೂರಿ'ಯ ಸಂಚಿಕೆಗಳನ್ನು ನನ್ನ ಜೀವವಿಮಾ ಪಾಲಿಸಿಗಳಷ್ಟೇ ಜೋಪಾನವಾಗಿ ಇಟ್ಟಿದ್ದೇನೆ....


-ವಿ. ಎ. ಜೋಶಿ
ಅಂಕೋಲಾ



ಕಸ್ತೂರಿ

ವಿಶ್ವಕ್ಕೊಂದು ಬೆಳಕಿಂಡಿ
ಕನ್ನಡದಲ್ಲಿ ವಿಶಿಷ್ಟ ಪತ್ರಿಕೆ
ತಿಂಗಳಿಗೊಮ್ಮೆ ನಿಮ್ಮ ಕೈಸೇರುವ
ಕಿರಿಯ ವಿಶ್ವಕೋಶ

ಸಂಯುಕ್ತ ಕರ್ನಾಟಕ ಬಳಗದ
ಹೆಮ್ಮೆಯ ಪ್ರಕಟಣೆ.



ಕನ್ನಡಿಗರೇ ಕಟ್ಟಿ, ಬೆಳೆಸಿ ನಡೆಸುತ್ತಿರುವ
ಏಕೈಕ ರಾಜ್ಯವ್ಯಾಪಿ ಕನ್ನಡ ದಿನಪತ್ರಿಕೆ

ಸಂಯುಕ್ತ ಕರ್ನಾಟಕ

ಹುಬ್ಬಳ್ಳಿ-ಬೆಂಗಳೂರಿನಿಂದ
ಏಕಕಾಲಕ್ಕೆ ಪ್ರಕಟಿತ

ಸ್ವಾತಂತ್ರ್ಯ ಸಂಗ್ರಾಮದೊಡನೆ ಬೆಳೆದು,
ಕರ್ನಾಟಕ ಏಕೀಕರಣದ ಗುರಿಸಾಧಿಸಿ
ನಾಡ-ನುಡಿಯ ಅಭ್ಯುದಯಕ್ಕೆ
ಮುಡುಪಾಗಿ, ಪ್ರತಿದಿನ ಲಕ್ಷಾಂತರ
ಅಭಿಮಾನಿ ಓದುಗರ ಕೈಸೇರುತ್ತಿದೆ.



ನೀವೂ ದಯವಿಟ್ಟು
ಈ ಬಳಗಕ್ಕೆ ಬನ್ನಿ.

ವಿಷಯಾನುಕ್ರಮಣಿಕೆ

ಛಾಯಾಚಿತ್ರಗಳು

ಕ್ಷತ್ರಿ ಸ್ಟುಡಿಯೊ ಹುಬ್ಬಳ್ಳಿ, ಅಮಜದ್, ಮುಸ್ತಾಕ ಅಹಮ್ಮದ, ಗೋವರ್ಧನ್ ಫೋಟೋಸ್, ಮತ್ತು ಡಿ. ಬಾಬುರಾಜ್, ಬೆಂಗಳೂರು

ವ್ಯಂಗ್ಯ ಚಿತ್ರಗಳು

ನರೇಂದ್ರ, ಕೆ. ಆರ್. ಸ್ವಾಮಿ, ಪ್ರೇಮಕುಮಾರ್ ವಿ. ಗೋಪಾಲ್, ವಿ. ಆರ್. ಸಿ. ಶೇಖರ್, ಎಚ್. ಬಿ. ಮಂಜುನಾಥ, ಅನಿಲ, ಶ್ರೀಕಾಂತ, ಶ್ರೀನಿವಾಸಲು, ಕುಮುದ.

ಚುಟುಕ- ಹನಿಗವನ

ಶಂ. ಗು. ಬಿರಾದಾರ, ಅನ್ನದಾನಿ ಹಿರೇಮಠ, ಶಾಮ ಹುದ್ದಾರ, ಅಶೋಕ ಚೊಳಚಗುಡ್ಡ, ರಾಜೀವ, ಜಿ. ಎಚ್. ಕೆ., ವನರಾಗಶರ್ಮ, ಕೆ. ಗುರುರಾಜ, ಜಿ. ಎಸ್. ಅನ್ನದಾನಿ, ಸೀತಾರಾಮ ಪುರಾಣಿಕ, ಸುರೇಶ ಪಾಟೀಲ, ಗವೀಶ ಹಿರೇಮಠ, ಪ್ರಕಾಶ ದೇಶಪಾಂಡೆ.

ಕವನಗಳು

ದಿ. ದ. ರಾ. ಬೇಂದ್ರೆ, ರಾಘವೇಂದ್ರ ಕುಲಕರ್ಣಿ, ಶ್ರೀಮೂಜಗಂ. ಕು. ಸುಕನ್ಯಾ ಮಾರುತಿ, ಕಂಚಾಣಿ ಶರಣಪ್ಪ.

ಮುಖಚಿತ್ರ : ಶ್ರೀಪಾದ

ಒಳಗಿನ ವರ್ಣ ವ್ಯಂಗ್ಯ ಚಿತ್ರಗಳು : ನರೇಂದ್ರ.

ಕಲಾವಿದರು : ಪಿ. ಆರ್. ಪಾಟೀಲ, ಶಶಿಧರ್, ಮನೋಹರ್.

ಕರ್ಮವೀರ



ವ್ಯವಸ್ಥಾಪಕ ಸಂಪಾದಕರು :

ಆರ್. ಜೆ. ದೇಸಾಯಿ

ಸಂಪಾದಕ :

ಧ್ರುವರಾಜ ಮುತಾಲಿಕದೇಸಾಯಿ

ಜಾಹೀರಾತು

ಎಸ್. ಆರ್. ಗುರುರಾಜಾರಾವ್

ಎಸ್. ಜಿ. ಕಾಶೀಕರ್

ಪ್ರಸಾರಾಂಗ

ಎಸ್. ಕೆ. ಕಾತೋಟೆ

ಕೆ. ಎಂ. ನಂಜಪ್ಪ

ಮುದ್ರಕ-ಪ್ರಕಾಶಕ

ವಿ. ಜಿ. ವೈದ್ಯ

ಸಂಯುಕ್ತ ಕರ್ನಾಟಕ

ಹುಬ್ಬಳ್ಳಿ-ಬೆಂಗಳೂರು

ನಮ್ಮ ನುಡಿ

'ಕರ್ಮವೀರ' ಕನ್ನಡದಲ್ಲಿ ದೀಪಾವಳಿ ಸಂಚಿಕೆಯ ಪರಂಪರೆಯನ್ನು ಆರಂಭಿಸಿದ ಮೊದಲ ಪತ್ರಿಕೆ. ಅತಿ ಹೆಚ್ಚು ಪುಟಗಳೊಂದಿಗೆ ಸಮೃದ್ಧ ವಿಶೇಷಾಂಕವನ್ನು ಹೊರತರುತ್ತಿದ್ದುದು ಅದರ ಹೆಗ್ಗಳಿಕೆ. ಅರವತ್ತೈದು ವರ್ಷಗಳ ಸುದೀರ್ಘ ಇತಿಹಾಸವಿರುವ 'ಕರ್ಮವೀರ'ದ ಪ್ರತಿಯೊಂದು ವಿಶೇಷಾಂಕವೂ ಸಂಗ್ರಾಹ್ಯ.

ಸ್ವಾತಂತ್ರ್ಯಪೂರ್ವಕಾಲದಿಂದಲೂ ಕತ್ತಲೆ-ಬೆಳಕಿನೊಡನೆ ಸೆಣಸಾಡುತ್ತಲೇ ಬೆಳೆದು ಬಂದ 'ಕರ್ಮವೀರ' ಕೆಲವು ಕಾಲ ತೆರೆಯ ಮರೆಗಿದ್ದು, ಈಗ ಮತ್ತೆ ಸಡಗರದಿಂದ ನಿಮ್ಮ ಕೈಸೇರುತ್ತಿದೆ. ರಾಷ್ಟ್ರದ ಅದರಲ್ಲಿಯೂ ವಿಶೇಷವಾಗಿ ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸುತ್ತ ಬಂದ 'ಕರ್ಮವೀರ' ಈಸಲ ಅನೇಕ ತೊಂದರೆಗಳನ್ನು ಎದುರಿಸಿಯೂ ಪ್ರಕಟಗೊಳ್ಳುತ್ತಿದೆ. ಸಹೃದಯರಾದ ನೀವು ಇದನ್ನು ಪ್ರೀತ್ಯಾದರಗಳಿಂದ ಸ್ವಾಗತಿಸುವಿರೆಂದು ನಂಬಿದ್ದೇವೆ.


ವಿಶೇಷಾಂಕವಾಗಿ ಹೊರಬಂದ ಈ ಪತ್ರಿಕೆ ಮತ್ತೆ ಮೊದಲಿನಂತೆ ನಿಯತಕಾಲಿಕವಾಗಿ ಪ್ರಕಟವಾಗುವ ಭವ್ಯ ಆಶೆಯನ್ನು ಹೊತ್ತಿದೆ. ಕನ್ನಡ ಜನಕೋಟಿಯ ಅಭಿಮಾನ ವಿಶ್ವಾಸಗಳೇ ನಮ್ಮ ಆಸ್ತಿ. ನಿಮ್ಮ ಸಹಕಾರ, ಆಶೀರ್ವಾದ ನಮಗೆ ಅತ್ಯಗತ್ಯ. ದೀಪಾವಳಿಯ ಈ ವಿಶೇಷ ಸಂಚಿಕೆಗೆ ನೆರವಾದವರೆಲ್ಲರಿಗೂ ನಮ್ಮ ಧನ್ಯವಾದಗಳು.

ನಮ್ಮ ಓದುಗರಿಗೂ ಅಭಿಮಾನಿಗಳಿಗೂ ದೀಪಾವಳಿಯ ಶುಭಾಶಯಗಳು.

—ಸಂಪಾದಕ



ಕರ್ಮವೀರ



'ಕರ್ಮವೀರ' ಕನ್ನಡ ನಾಡಿನ ಪತ್ರಿಕಾ ಪ್ರಪಂಚದಲ್ಲಿಯ ವೈಶಿಷ್ಟ್ಯಪೂರ್ಣವಾದ ತಾರೆ. ಬಾಂದಳದಲ್ಲಿ ಮಿನುಗಿ, ಪ್ರಜ್ವಲಿಸಿ ಶಾಂತವಾಗಿ, ಸುಪ್ತವಾಗಿ, ಕಾಲಾಂತರದಲ್ಲಿ ಮತ್ತೆ ಕಣ್ಣು ಕೋರೈಸುವಂತೆ ಉದಯವಾಗುವ ಅನೇಕ ಆಕಾಶಕಾಯಗಳುಂಟು. ಈ 'ಕರ್ಮವೀರ' ಪತ್ರಿಕೆ ಕೂಡ ಅದೇ ವರ್ಗಕ್ಕೆ ಸೇರಿದುದು ಎಂದು ಅಭಿಮಾನವಾಗಿ ಹೇಳಬೇಕಾಗಿದೆ. ಈ ಶತಮಾನದಲ್ಲಿ ಅರ್ಧಶತಮಾನಕ್ಕಿಂತಲೂ ಹೆಚ್ಚು ಕಾಲ, ಅಂದರೆ ಐವತ್ತೇಳು ವರ್ಷಕಾಲ ಬಾಳಿ ಬೆಳಗಿ ವೈಶಿಷ್ಟ್ಯಪೂರ್ಣವಾಗಿ ಮಾರ್ಗದರ್ಶನ ಮಾಡಿ 1978ರ ಜೂನ್‌ದಲ್ಲಿ ವಿರಾಮ ಪಡೆದ ಕರ್ಮವೀರ ವಾರ ಪತ್ರಿಕೆ ಏಳು ವರ್ಷಗಳ ದೀರ್ಘ ವಿರಾಮದ ನಂತರ ಈಗ ಕನ್ನಡಿಗರ ಅಭಿಮಾನದ ಪ್ರೋತ್ಸಾಹಗಳ ದ್ಯೋತಕವಾಗಿ ಈ ದೀಪಾವಳಿ ಸಂಚಿಕೆಯ ರೂಪದಲ್ಲಿ ಮತ್ತೆ ಓದುಗರೆದುರಿಗೆ ಬಂದಿದೆ. ಕರ್ಮವೀರ, ತನ್ನ ಜೀವನದಲ್ಲಿ, ಹೀಗೆ ವಿರಾಮವನ್ನು ಅನುಭವಿಸಬೇಕಾಗಿ ಬಂದುದು ಇದೇ ಮೊದಲಲ್ಲ. ಹಿಂದೆ ಕೂಡ ಇಂಥ ಸಂದರ್ಭಗಳು ಬಂದದ್ದುಂಟು. ಆಗ ಹಲ ಕೆಲವು ಸಲ ವಿರಾಮ ಪಡೆಯಬೇಕಾಗಿದ್ದ ಸಂದರ್ಭಗಳು ಜರುಗಿ ಆಗಿದ್ದವು. ಕೆಲ ವರ್ಷ ಕಾಲ, ಕಾಲಮಾನ ಪರಿಸ್ಥಿತಿಗೆ ತಲೆಬಾಗಿ ಕರ್ಮವೀರ 'ಸಂಯುಕ್ತ ಕರ್ನಾಟಕ'ದಲ್ಲಿ ಅಂಗರ್ಭಿತವಾಗಿ ಸೇವೆ ಸಲ್ಲಿಸಬೇಕಾಗಿ ಬಂದದ್ದೂ ಉಂಟು. ದೇಶದ ಸ್ವಾತಂತ್ರ್ಯ ಸಮರದೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡ ಕಾರಣಕ್ಕಾಗಿಯೂ ಕರ್ಮವೀರ ಅನೇಕಾವರ್ತಿ ವಿರಮಿಸಬೇಕಾಗಿ ಬಂದದ್ದು ಉಂಟು. ಹಾಗೆ ನೋಡಿದರೆ ಕರ್ಮವೀರ ಜನ್ಮ ತಾಳಿದ್ದೇ ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಗಳ ಗುರಿ ಸಾಧಿಸುವ ಉದ್ದೇಶದಿಂದ. 1921ರ ಫೆಬ್ರವರಿಯಲ್ಲಿ ಉದಯವಾದ ಕರ್ಮವೀರ 1978ರ ಜೂನದವರೆಗೆ ನಡೆದು ಬಂದ ದಾರಿಯ ಸಿಂಹಾವಲೋಕನ ಇಲ್ಲಿ ಪ್ರಸ್ತುತ.






ದೇಶದ ಸ್ವಾತಂತ್ರ್ಯ ಸಮರದೊಂದಿಗೆ ಸಮರಸವಾಗಿ, ಮುಂದೆ ಸ್ವತಂತ್ರ ದೇಶದ ಪುನರ್ನಿರ್ಮಾಣಕ್ಕಾಗಿ ಹೆಣಗಿದ ಕರ್ಮವೀರದ ಚರಿತ್ರೆ ಸಾಹಸಪೂರ್ಣವಾಗಿದ್ದಷ್ಟೇ ಸ್ಫೂರ್ತಿದಾಯಕವೂ ಆಗಿದೆ.

ಆಧುನಿಕ ಕನ್ನಡ ಪತ್ರಿಕಾ ಪ್ರಪಂಚದ ಚರಿತ್ರೆ ನೂರು ವರ್ಷಗಳಷ್ಟು ಹಿಂದೆಯೇ ಪ್ರಾರಂಭವಾಗಿದೆ. ಈ ಶತಮಾನದ ಪ್ರಾರಂಭದ ದಶಕದಲ್ಲಿ "ಸದ್ಬೋಧ ಚಂದ್ರಿಕೆ" (1907 ರಲ್ಲಿ) ಮಾಸಪತ್ರಿಕೆಯಾಗಿ ಮೂಡಿಬಂದು ಇನ್ನೂವರೆಗೆ ತನ್ನ ಸಾಹಿತ್ಯಕ ಸೇವೆಯನ್ನು ಮುಂದುವರಿಸಿಕೊಂಡು ಬಂದಿದೆ. ಇನ್ನೂ ಹಲ ಕೆಲವು ಪತ್ರಿಕೆಗಳೂ ಈ ಶತಮಾನದ ಪ್ರಾರಂಭದಲ್ಲಿದ್ದವು. ಅವೆಲ್ಲ ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೀಸಲಾಗಿದ್ದವು. 1921ರ ಫೆಬ್ರುವರಿಯಲ್ಲಿ ಕರ್ಮವೀರ ವಾರಪತ್ರಿಕೆಯಾಗಿ ಮೂಡಿಬಂತು ಏಕೆ? ಭಾರತ ಸ್ವಾತಂತ್ರ್ಯ ಸಮರದ ಇತಿಹಾಸವನ್ನು ಅವಲೋಕಿಸಿದರೆ ಈ ಪ್ರಶ್ನೆಗೆ ಉತ್ತರ ದೊರೆಯಬಲ್ಲದು. ಭಾರತ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಲು 1885 ರಲ್ಲಿ ಕಾಂಗ್ರೆಸ್ಸು ಸ್ಥಾಪಿತವಾದರೂ ಕದನ ಚಳವಳಿಗೆ ತೀವ್ರ ಸ್ವರೂಪ ಪ್ರಾಪ್ತವಾದುದು ಇಪ್ಪತ್ತನೆ ಶತಮಾನದಲ್ಲಿಯೇ ಎನ್ನಬೇಕು. 1906-07ರಲ್ಲಿ ವಂಗಭಂಗ ಚಳುವಳಿ. ಮುಂದಿನ ದಶಕದಲ್ಲಿ ಶಾಲೆ, ಕಾಲೇಜ ಬಹಿಷ್ಕಾರ, ಅಸಹಕಾರ ಚಳವಳಿ, ನಂತರ ಕಾಯದೇಭಂಗ ಸತ್ಯಾಗ್ರಹ, 1942 ರಲ್ಲಿ ಚಲೇಜಾವ ಚಳವಳಿ ಹೀಗೆ ನಾನಾ ರೀತಿಯ ಸಮರಗಳನ್ನು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ನಡೆಸಿದ ಭಾರತವು 1947ರಲ್ಲಿ ಬ್ರಿಟಿಷ್ ನೊಗವನ್ನು ಕಿತ್ತಿ ಒಗೆದು ಸರ್ವತಂತ್ರ ಸ್ವತಂತ್ರವಾಯಿತು. ನಂತರದ ದೇಶ ನಿರ್ಮಾಣದ ಚಟುವಟಿಕೆಗಳ ಚರಿತ್ರೆ ಇಂದಿನ ಪೀಳಿಗೆಯವರಿಗೆ ವಿದಿತವಾದದ್ದೇ ಆಗಿದೆ.

ವಂಗಭಂಗ ಚಳವಳಿಯೇ ಆಗಲಿ, ಅಸಹಕಾರ ಚಳವಳಿಯೇ ಆಗಲಿ ದೇಶದಲ್ಲಿ ಪ್ರಾರಂಭವಾದಾಗ ಕರ್ನಾಟಕವು ಅಷ್ಟೊಂದು ಜಾಗ್ರತವಾಗಿರಲಿಲ್ಲ. ಕನ್ನಡಿಗರು ಉಚ್ಚ ಶಿಕ್ಷಣಕ್ಕಾಗಿ ಪುಣೆ-ಮುಂಬಯಿಗಳಿಗೆ ಧಾವಿಸಬೇಕಾಗುತ್ತಿತ್ತು. ಇಲ್ಲಿ ಈ ಭಾಗದಲ್ಲಿ ಶಿಕ್ಷಣ ಸೌಕರ್ಯ ಕಡಿಮೆ ಇದ್ದದ್ದರಿಂದ ಜನರಲ್ಲಿ ಜಾಗ್ರತಿಯೂ ಅಷ್ಟೊಂದಾಗಿರಲಿಲ್ಲ. ಜನ ಜಾಗ್ರತಿಗಾಗಿ ಪ್ರಯತ್ನಗಳು ನಡೆಯಬೇಕಾಗಿದ್ದವು. ಹೊಸ ಸಾಧನವಾದ ಪತ್ರಿಕೆಗಳ ಮೂಲಕ ಈ ಜಾಗ್ರತಿ ಆಗಬೇಕು. ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಲೋಕಮಾನ್ಯ ಬಾಳ ಗಂಗಾಧರ ಟಿಳಕರು ಜನಜಾಗ್ರತಿಯ ಕಾರ್ಯವನ್ನು ಕೇಸರಿ-ಮರಾಠಿ ಪತ್ರಿಕೆಗಳ ಮುಖಾಂತರ 1914 ರಿಂದ ಪ್ರಾರಂಭಿಸಿದ್ದರು. ಅವರ ಪತ್ರಿಕೆ








ಗಳು ಉತ್ತರ ಕರ್ನಾಟಕಕ್ಕೂ ಬರುತ್ತಿದ್ದವು. ಇಲ್ಲಿಯ ಸುಶಿಕ್ಷಿತ ವರ್ಗವೆಲ್ಲ ಆ ಪತ್ರಿಕೆಗಳಿಂದ ಪ್ರಭಾವಿತವಾಗಿ ಜಾಗ್ರತವಾಗಿದ್ದಿತು. ಆದರೆ ಇಡೀ ಜನಸಮೂಹವನ್ನೇ ಎಚ್ಚರಿಸುವ ಕಾರ್ಯ ಅವರ ಮಾತೃಭಾಷೆಯ ಮೂಲಕವೇ ಸಾಧ್ಯ. ಕನ್ನಡದಲ್ಲಿ ಆಗ ಇದ್ದ ಪತ್ರಿಕೆಗಳು ಕೇವಲ ಸಾಹಿತ್ಯಕ ಚಟುವಟಿಕೆಗಳಲ್ಲಿ ಮಾತ್ರ ನಿರತವಾಗಿದ್ದವು. ರಾಜಕೀಯ ಪ್ರಚಾರಕ್ಕೂ ಅವಕ್ಕೂ ಬಹುದೂರ. ರಾಜಕೀಯ ಪ್ರಚಾರಕ್ಕಿಳಿದು ಆಳರಸರ ಕಟಾಕ್ಷಕ್ಕೆ ಗುರಿಯಾಗಿ ತಾಪತ್ರಯ ಅನುಭವಿಸುವದು ಅವರಿಗೆ ಬೇಕಾಗಿರಲಿಲ್ಲವೆಂದು ತೋರುತ್ತದೆ.

ದೇಶದ ತುಂಬೆಲ್ಲ ಸ್ವಾತಂತ್ರ್ಯ ಸಮರದ ಗಾಳಿ ಬೀಸುತ್ತಿರುವಾಗ ಕರ್ನಾಟಕ ಹಿಂದೆ ಬೀಳುವದುಂಟೆ? ರಾಜಕೀಯ ಪ್ರಚಾರಕ್ಕಾಗಿ, ಜನರಲ್ಲಿ ಜಾಗ್ರತಿಯನ್ನು ಉಂಟುಮಾಡುವದಕ್ಕಾಗಿ ಸ್ವತಂತ್ರ ಪತ್ರಿಕೆಯೊಂದನ್ನು ಪ್ರಾರಂಭಿಸಬೇಕು ಎಂದು ಧಾರವಾಡದ ತ್ರಿಮೂರ್ತಿಗಳು– ಶ್ರೀ ರಂಗರಾವ್ ದಿವಾಕರ, ಶ್ರೀ ಮಧ್ವರಾವ್ ಕಬ್ಬೂರ ಹಾಗೂ ಶ್ರೀ ರಾಮರಾವ್ ಹುಕ್ಕೇರಿಕರ ವಿಚಾರಿಸಿ, ಆಲೋಚಿಸಿ 1921 ರಲ್ಲಿ ಒಂದು ಯೋಜನೆಯನ್ನು ರೂಪಿಸಿದರು. ಒಂದು ಪತ್ರಿಕೆಯನ್ನು ಪ್ರಾರಂಭಿಸುವದೆಂದರೆ [illegible] ಕೇವಲ [illegible] ರಾಜಕೀಯ ವಿಚಾರ ಪ್ರಚಾರಕ್ಕಾಗಿ ಹೋರಟ ಪತ್ರಿಕೆಯನ್ನು ಬೇರೆ ಯಾವ ಮುದ್ರಣಾಲಯವೂ ಮುದ್ರಿಸಿಕೊಡುವದಿಲ್ಲ. ಅದಕ್ಕೊಂದು ಸ್ವಂತ ಮುದ್ರಣಾಲಯ ಬೇಕು, ಪತ್ರಿಕೆ ಮುದ್ರಿಸಲಿಕ್ಕೆ ಕಾಗದ ಬೇಕು, ಸಿದ್ಧಗೊಳಿಸಲಿಕ್ಕೆ ಸಿಬ್ಬಂದಿ ಬೇಕು. ಹೀಗೆ ಸಂಸ್ಥೆಯ ಲಗ್ನಕ್ಕೆ ಹುಟ್ಟು-ಜನಿವಾರದಿಂದ ಸಿದ್ಧತೆ ಆಗಬೇಕು. ಕನ್ನಡಿಗರ ಸುದೈವ! ಈ ತ್ರಿಮೂರ್ತಿಗಳ ನಿರ್ಧಾರ ಅಚಲ, ಸಾಹಸ ಅಪಾರವಾಗಿದ್ದುದರಿಂದಲೇ 'ಕರ್ಮವೀರ' ವಾರ ಪತ್ರಿಕೆಯ ಪ್ರಪ್ರಥಮ ಸಂಚಿಕೆ ದಿ|| 15-2-1921 ರಂದು ಕನ್ನಡಿಗರ ಕೈಸೇರಿತು. ಆಗ ಮುದ್ರಣಾಲಯದ ಹೊಣೆ ಶ್ರೀ ಹುಕ್ಕೇರಿಕರ ಅವರದು. ಪತ್ರಿಕೆಯ ಸಂಪಾದಕೀಯ ಲೇಖನದ ಹೊಣೆ ಶ್ರೀ ದಿವಾಕರ ರಂಗರಾಯರದು, ಅಲ್ಲದೆ ಸಂಘಟನೆಯ ಹೊಣೆ ಶ್ರೀ ಮಧ್ವರಾವ್ ಕಬ್ಬೂರ ಅವರದು ಆಗಿದ್ದಿತು. ಇವರಿಗೆ ಈ ಕಾರ್ಯದಲ್ಲಿ ಬೆಂಬಲವಾಗಿ ನಿಂತ ಸ್ನೇಹಿತವರ್ಗದಲ್ಲಿ ಶ್ರೀ ಆಲೂರು ವೆಂಕಟರಾಯರು, ಶ್ರೀ ಮುದವೀಡ ಕೃಷ್ಣರಾಯರು, ಶ್ರೀ ಶಂ ಬಾ ಜೋಶಿ ದ. ಪ. ಕರಮರಕರರಂಥವರು ಪ್ರಮುಖರಾಗಿದ್ದರು. ಹುಬ್ಬಳ್ಳಿಯ ಶ್ರೀ ರಾಮರಾವ ಶೇವಡೆ ಹಾಗೂ ಶ್ರೀ ವಿಷ್ಣು ಪಾಟೀಲ್ ಟೇಂಬೆ ಅವರು ಒಟ್ಟಿಗೆ ಒಂದು ಸಾವಿರ ರೂಗಳನ್ನಿತ್ತು ಪತ್ರಿಕೆ ಪ್ರಾರಂಭಿಸುವದಕ್ಕೆ ನೆರವಾದದು "ಕರಿಷ್ಯೇ ವಚನಂ ತವ" ಎಂದು ಅರ್ಜುನನು ಶ್ರೀಕೃಷ್ಣನಿಗೆ ವಚನವಿತ್ತ ಹಾಗೆ ಈ ತ್ರಿಮೂರ್ತಿಗಳು ದೇಶನಾಯಕ ಮಹಾತ್ಮಾ ಗಾಂಧಿಯವರಿಗೆ ವಚನವಿತ್ತಂತೆ ಈ ರಾಷ್ಟ್ರ ಜಾಗ್ರತಿಯ ಕಾರ್ಯಕ್ಕೆ ಧುಮುಕಿದ್ದರು. ತಮ್ಮದೇ ಆದ, ಅಂದರೆ ಪತ್ರಿಕೆಯ, ಸಾಧನದ ಮೂಲಕ. ಜನಜಾಗ್ರತಿ ಸಾಧಿಸುವ ಛಲ ಅವರದಾಗಿತ್ತು.

ಕರ್ಮವೀರ ಮೂಡಿ ಬಂದಾಗ ದೇಶದಲ್ಲೆಲ್ಲ ಪಿಕೆಟಿಂಗ್ ಚಳವಳಿ ಭರದಿಂದ ಸಾಗಿತ್ತು. ಪಾನನಿರೋಧ ಕಾರ್ಯಕ್ರಮದ ಅಂಗವಾಗಿ ಗಡಂಗಗಳ ಮುಂದೆ ಪಿಕೆಟಿಂಗ್ ಸತ್ಯಾಗ್ರಹ ನಡೆಸುವದು ಕರ್ನಾಟಕದಲ್ಲಿಯೂ ಪ್ರಾರಂಭವಾಗಿತ್ತು. ಸ್ವದೇಶೀ ಸ್ವಾತಂತ್ರ್ಯ, ಸ್ವಾಭಿಮಾನದ ವಿಚಾರಗಳ ಪ್ರಚಾರವನ್ನು ಕರ್ಮವೀರ ಭರದಿಂದಲೇ ಸಾಗಿಸಿತ್ತು. ಪತ್ರಿಕೆಯ ಜನಪ್ರಿಯತೆ ಹೆಚ್ಚುತ್ತಲೇ ನಡೆಯಿತು. ಕೇವಲ ಮೂರೇ ತಿಂಗಳುಗಳಲ್ಲಿ ಕರ್ಮವೀರ ಗಳಿಸಿದ ಜನಪ್ರಿಯತೆಯನ್ನು ಕಂಡ ಧಾರವಾಡದ ಆಗಿನ ಕಲೆಕ್ಟರ ಪೇಂಟರ್ ಸಾಹೇಬನು ಹೇಗಾದರೂ ಮಾಡಿ ಪತ್ರಿಕೆಯನ್ನು ನಿಲ್ಲಿಸಿಬಿಡಬೇಕು ಎಂದು ಹವಣಿಸುತ್ತಿದ್ದನು. ಆತನು ಸಂಪಾದಕ ಶ್ರೀ ದಿವಾಕರ ರಂಗರಾಯರನ್ನೂ ಶ್ರೀ ಕಬ್ಬೂರ ಮಧ್ವರಾಯರನ್ನೂ ಕರೆಸಿ "ನಿಮ್ಮ ರಕ್ತಕ್ಕಾಗಿ ಹಪಾಪಿಸುತ್ತಿದ್ದೇನೆ" ಎಂದು ಬೆದರಿಸಿದನು. ಆದರೆ ಅಗ್ನಿದಿವ್ಯಕ್ಕೆ ಸಿದ್ಧರಾದವರಿಗೆ ಕೊಳ್ಳಿಯ ಬೆದರಿಕೆಯೆ? ಎಂಬಂತಾಯಿತು ಈ ಶ್ರಮದ ಸರಿ ಕರ್ಮವೀರ ಎಂದಿನಂತೆ ಪ್ರಕಟವಾಗುತ್ತಲೇ ಇತ್ತು. ಆಳರಸರ ಗಾಬರಿ ಹೆಚ್ಚುತ್ತಲೇ ನಡೆಯಿತು.


1921ರಲ್ಲಿ ಪಾನನಿರೋಧ ಕಾರ್ಯಕ್ರಮದ ಅಂಗವಾಗಿ ಗಡಂಗಗಳೆದುರು ಪಿಕೆಟಿಂಗ್ ಸತ್ಯಾಗ್ರಹ ಭರದಿಂದ ಸಾಗಿತ್ತು.



ಘಾರವಾಡದಲ್ಲಿಯೂ ಪಿಕೆಟಿಂಗ ನಡೆದಿತ್ತು. ಜುಲೈ [illegible] ಪೋಲೀಸರು ವಿನಾಕಾರಣ ಪಿಕೆಟಿಂಗ ಸತ್ಯಾಗ್ರಹಿಗಳ ಮೇಲೆ ಗೋಳೀಬಾರ ಮಾಡಿದರು. ಮುಂದಾಳುಗಳನ್ನು ಸೆರೆಮನೆಗೆ ಅಟ್ಟಲು ಪೋಲೀಸರಿಗೆ ಒಂದು ಅವಕಾಶ ದೊರೆಯಿತು. ಶ್ರೀ ದಿವಾಕರ ರಂಗರಾಯರಾದಿಯಾಗಿ 24 ಜನರನ್ನು ಬಂಧಿಸಿದರು. ಅಕ್ಟೋಬರ 9 ರವರೆಗೆ ಈ ಪ್ರಕರಣದ ವಿಚಾರಣೆ ನಡೆದು ಶ್ರೀ ದಿವಾಕರರೊಬ್ಬರನ್ನುಳಿದು ಮಿಕ್ಕ 23 ಜನರಿಗೆ ಬೇರೆ ಬೇರೆ ಅವಧಿಯ ಶಿಕ್ಷೆ ಆಯಿತು. ಮೋಜಿನ ಸಂಗತಿ ಅಂದರೆ ಕರ್ಮವೀರ ಪತ್ರಿಕೆಯ ಸಂಪಾದಕ ಶ್ರೀ ದಿವಾಕರರು ಜುಲೈ 2 ರಿಂದ ಅಕ್ಟೋಬರ 9 ರವರೆಗೆ ವಿಚಾರಣೆ ಕೈದಿ ಎಂದು ಜೇಲಿನಲ್ಲಿದ್ದರೂ ಕರ್ಮವೀರ ಪತ್ರಿಕೆಯು ವ್ಯವಸ್ಥಿತವಾಗಿ ಪ್ರತಿವಾರ, ಇನ್ನಷ್ಟು ಉಗ್ರಲೇಖನಗಳಿಂದ ಕೂಡಿಕೊಂಡು ಪ್ರಕಟವಾಗುತ್ತಿತ್ತು. ಸರ್ವಶ್ರೀ ಆಲೂರ ವೆಂಕಟರಾಯರು, ಶಂಬಾ ಜೋಶಿ, ರಾಮರಾವ ಹುಕ್ಕೇರಿಕರ ಅವರ ಈ ಸಾಹಸ ಪ್ರಶಂಸನೀಯ. ಆಳರಸರಿಗೆ ಇದು ಕಣ್ಣಿಸುರಾಯಿತು. ಧಾರವಾಡ ಗೋಳೀಬಾರಿನ ನೀತಿಯನ್ನು ಟೀಕಿಸಿದ "ಭೂರಕ್ತಸ್ರಾವ ಸ್ವಾಹಾ" ಎಂಬ ಅಗ್ರಲೇಖ ರಾಜದ್ರೋಹಾತ್ಮಕವಿದೆ ಎಂದು ಶ್ರೀ ದಿವಾಕರರನ್ನು ಬಂಧಿಸಿ ಜೇಲಿಗೆ ಕಳಿಸುವ ಪ್ರಯತ್ನ ನಡೆಯಿತು. ಅದನ್ನು ಅವರು ಬರೆದಿರಲೇ ಇಲ್ಲವಾದ್ದರಿಂದ ಶ್ರೀ ದಿವಾಕರರು ಉಳಿದುಕೊಂಡರು. ಮುಂದೆ ಕವಿ ಶ್ರೀಧರ ಖಾನೋಳಕರರು ಬರೆದ "ದೇಶೀ ದುಂದುಮೆ" ಎಂಬ ಲಾವಣಿಯನ್ನು ಕರ್ಮವೀರದಲ್ಲಿ ಪ್ರಕಟಿಸಿದ್ದಕ್ಕಾಗಿ, ಅದೂ ರಾಜದ್ರೋಹಾತ್ಮಕವಿದೆ ಎಂದು ಶ್ರೀ ದಿವಾಕರರ ಮೇಲೆ ಖಟ್ಲೆ ಹಾಕಲಾಯಿತು. ಈ ಖಟ್ಲೆಯಲ್ಲಿ ಶ್ರೀ ದಿವಾಕರರು ಎರಡು ವರ್ಷ ಶಿಕ್ಷೆಗೆ ಗುರಿಯಾದರು. ಶ್ರೀ ಹುಕ್ಕೇರಿಕರರು ಹೊರಗೇ ಉಳಿದದ್ದರಿಂದ ಕರ್ಮವೀರ ಪ್ರಕಟವಾಗುತ್ತಲೇ ನಡೆಯಿತು. ರಾಜಕೀಯ ವಿಚಾರಗಳ ಪ್ರಚಾರ ಈ ಪತ್ರಿಕೆಯ ಮುಖಾಂತರ ಅಖಂಡವಾಗಿ ಸಾಗಿತ್ತು. ಕರ್ಮವೀರ ಹುಟ್ಟಿದಂದಿನಿಂದ ಅಸಹಕಾರ ಸತ್ಯಾಗ್ರಹದ ಪ್ರಚಾರದಲ್ಲಿ ತೊಡಗಿತ್ತು. 1924ರಲ್ಲಿ ಕಾಂಗ್ರೆಸು ಕೌನ್ಸಿಲ್ ಪ್ರವೇಶದ ನಿರ್ಣಯ ಕೈಕೊಂಡು ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧೀಯವರು ಅದನ್ನು ಪುರಸ್ಕರಿಸಿದಾಗ ಕರ್ಮವೀರವು ತನ್ನ ಧೋರಣೆಯಲ್ಲಿ ಮಾರ್ಪಾಡು ಮಾಡಿಕೊಂಡು ಕೌನ್ಸಿಲ್ ಪ್ರವೇಶಕ್ಕೆ ಪರವಾಗಿ ಕಾಂಗ್ರೆಸ್ ಹುರಿಯಾಳುಗಳಿಗೆ ಬೆಂಬಲ ದೊರಕಿಸುವ ಪ್ರಚಾರದಲ್ಲಿ ತೊಡಗಿತು. ಅಲ್ಲದೆ 1920ರಲ್ಲಿ ಕಾಂಗ್ರೆಸ್ಸನ್ನು ಭಾಷಾವಾರು [illegible] ಮೇಲೆ ಸಂಘಟಿಸಬೇಕು ಎಂಬ ನಿರ್ಣಯ ಕೈಕೊಂಡಿದ್ದರಿಂದ ಕರ್ನಾಟಕ ಏಕೀಕರಣದ ಚಳವಳಿಗೆ ನಾಂದಿ ಆದಂತಾಯಿತು. ಹರಿದು ಹಂಚಿಹೋಗಿದ್ದ [illegible] ಅಗತ್ಯವಾದ [illegible] ಅಂಶಗಳನ್ನು ಸಂಗ್ರಹಿಸಿ ನೆಹರೂ ಸಮಿತಿ ಎದುರು ಮಂಡಿಸಲಾಯಿತು, ಪ್ರಶಂಸೆಯನ್ನು ಪಡೆಯಲಾ[illegible] [illegible] ಈ ಕಾರ್ಯದಲ್ಲಿ ಶ್ರೀ ದಿವಾಕರರು, ಹಾಗೇ ಕರ್ಮವೀರ ತೋರಿದ ಆಸಕ್ತಿ ಸಂಡಿತ [illegible].

1929 ರಲ್ಲಿ ಲಾಹೋರ ಕಾಂಗ್ರೆಸ್ಸು ಪಂ. ಜವಾಹರ ಲಾಲರ ಅಧ್ಯಕ್ಷತೆಯಲ್ಲಿ 'ಸಂಪೂರ್ಣ ಸ್ವಾತಂತ್ರ್ಯ' ಪಡೆಯುವ ನಿರ್ಣಯ ಸ್ವೀಕರಿಸಿತು. 1930ರ ಏಪ್ರಿಲ್ 6 ರಂದು ಉಪ್ಪಿನ ಸತ್ಯಾಗ್ರಹದ ಅಂಗವಾಗಿ ಮಹಾತ್ಮಾ ಗಾಂಧಿ ಅವರ ದಾಂಡಿ ಸತ್ಯಾಗ್ರಹ ಪ್ರಾರಂಭವಾಯಿತು. ಕಾಂಗ್ರೆಸ್ಸು ಅಕ್ರಮಕೂಟ ಎಂದು ಸರಕಾರ ಘೋಷಿಸಿತು. ತತ್ಪರಿಣಾಮವಾಗಿ ಸರಕಾರವು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯನ್ನು ಅಕ್ರಮ ಎಂದು ಸಾರಿ ಅದರ ಕಚೇರಿಯನ್ನು ಜಪ್ತಿ ಮಾಡಿ ಬೀಗ ಜಡಿಯಿತು. ಕರ್ಮವೀರದ ಕಚೇರಿಯೂ ಅದೇ ಕಟ್ಟಡದಲ್ಲಿದ್ದದ್ದರಿಂದ ಅದನ್ನೂ ಮುಚ್ಚಬೇಕಾಯಿತು. ಕರ್ಮವೀರ ಕಚೇರಿ ಮುಚ್ಚಲು ಬರುವದಿಲ್ಲ ಎಂದು ಆಕ್ಷೇಪಿಸಲಾಗಿ, ಪತ್ರಿಕೆಗೆ ಅವರು ಒಂದು ಸಾವಿರ ರೂಪಾಯಿಗಳ ಠೇವು ಕೇಳಿದರು. ಸರಕಾರಕ್ಕೆ ಠೇವು ಕೊಡಬಾರದೆಂದು ಕಾಂಗ್ರೆಸ್ ಹೇಳಿಕೆ ಇದ್ದದ್ದರಿಂದ ಕರ್ಮವೀರ ಪತ್ರಿಕೆ ಪ್ರಥಮ ಸಲ ನಿಂತು ಹೋಯಿತು. ಪತ್ರಿಕೆಯ ಸಂಪಾದಕ ವರ್ಗದಲ್ಲಿದ್ದ ಶ್ರೀ ದ. ಪ. ಕರಮರಕರ ಹಾಗೂ ಶ್ರೀ ಹ.ರಾ. ಪುರೋಹಿತರು ಕರನಿರಾಕರಣೆ ಸತ್ಯಾಗ್ರಹ ಸಂಘಟಿಸಲು ಅಂಕೋಲೆಗೆ ತೆರಳಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಶ್ರೀ ದಿವಾಕರರು ಸೆರೆಮನೆ ಕಂಡಿದ್ದರು. ಹೀಗಾಗಿ ಕರ್ಮವೀರಕ್ಕೆ ವಿರಾಮ ಅನಿವಾರ್ಯವಾಯಿತು.

ಕರ್ನಾಟಕದಲ್ಲಿ ರಾಜಕೀಯ ಜಾಗೃತಿ ಆಗತೊಡಗಿದಂತೆ ರಾಜಕೀಯ ವಿಚಾರ ಪ್ರಣಾಲಿಯ ಪತ್ರಿಕೆಗಳೂ ಹುಟ್ಟತೊಡಗಿದವು. 1929ರಲ್ಲಿ ಬೆಳಗಾವಿಯಲ್ಲಿ ಶ್ರೀದಾತಾರ ಬಳವಂತ ರಾಯರು, ಶ್ರೀ ನಾರಾಯಣರಾವ್ ಜೋಶಿ, ಶ್ರೀ ಎಸ್. ಜಿ. ಕಟ್ಟಿ ಮುಂತಾದ ಸ್ನೇಹಿತರು 'ಸಂಯುಕ್ತ ಕರ್ನಾಟಕ' ಎಂಬ ವಾರಪತ್ರಿಕೆ ಪ್ರಾರಂಭಿಸಿದರು. ಅದರಂತೆ ವಿಜಾಪುರದಲ್ಲಿ ಶ್ರೀ ಹನುಮಂತರಾವ್ ಮೊಹರೆ ಅವರ ಸಂಪಾದಕತ್ವದಲ್ಲಿ 'ಕರ್ನಾಟಕ ವೈಭವ' ಬಾಗಲಕೋಟೆಯಲ್ಲಿ ಶ್ರೀ ಶ್ರೀನಿವಾಸರಾವ್ ಮಂಗಳವೇಢೆ ಅವರ 'ಕನ್ನಡಿಗ' ವಾರ ಪತ್ರಿಕೆಗಳು ಪ್ರಕಟವಾಗಿ ಕನ್ನಡಿಗರನ್ನು ಆಕರ್ಷಿಸಿದ್ದವು. ಕಾಯದೇಭಂಗ ಚಳವಳಿಯ ಪ್ರಭಾವದಿಂದ ಈ ಎಲ್ಲ ಪತ್ರಿಕೆಗಳ ಸಂಪಾದಕರು ಅವರ ಸ್ನೇಹಿತರು ಕೆಲವರು, ಹಿಂಡಲಗಿ ಜೇಲಿನಲ್ಲಿ ಒಟ್ಟುಗೂಡಿದ್ದರು. ಅವರ ಈ ಸಮ್ಮಿಲನದ ಫಲವಾಗಿ ಅವರಲ್ಲಿ ನಡೆದ ಚರ್ಚೆಯಲ್ಲಿ ಒಂದು ಪ್ರಭಾವಿ ಪತ್ರಿಕೆಯನ್ನು ಹೊರಡಿಸಬೇಕು ಅದಕ್ಕಾಗಿ ಒಂದು ಟ್ರಸ್ಟನ್ನು ಸ್ಥಾಪಿಸಬೇಕು ಅಂದರೆ ಪತ್ರಿಕೆಗೆ ಭದ್ರಬುನಾದಿ ಒದಗಿಸಿದಂತಾಗುವದು ಎಂಬ ನಿರ್ಣಯಕ್ಕೆ ಬಂದರು. ಜೇಲಿನಿಂದ ಬಿಡುಗಡೆ ಹೊಂದಿದ ಕೂಡಲೆ ಈ ನಿರ್ಣಯವನ್ನು ಜಾರಿಗೆ ತರಲು ಪ್ರಯತ್ನಿಸಬೇಕು ಎಂದೂ ಗೊತ್ತಾಯಿತು. ಪತ್ರಿಕೆಗಳಲ್ಲದೆ ರಾಷ್ಟ್ರ ಜಾಗೃತಿ ಕಾರ್ಯ ಅಸಾಧ್ಯ ಎಂಬಾಗಿ [illegible] ಬಿಡುಗಡೆಯಾದ [illegible] ಪತ್ರಿಕೆಗಳ [illegible]



ಟನೆಗೆ ಉದ್ಯುಕ್ತರಾಗಬೇಕು ಎಂದೂ ಮಾಡಿಕೊಂಡಿದ್ದರು.

ಮೊದಲು ಬಿಡುಗಡೆ ಹೊಂದಿದ ಶ್ರೀ ದಾತಾರ ಬಳವಂತ ರಾಯ, ಶ್ರೀ ನಾರಾಯಣರಾವ್ ಜೋಶಿ, ಶ್ರೀ ಕೇಶವರಾವ್ ಗೋಖಲೆ ಅವರು ಬೆಳಗಾವಿಗೆ ಬಂದಕೂಡಲೆ, ತಮ್ಮ 'ಸಂಯುಕ್ತ ಕರ್ನಾಟಕ' ವಾರಪತ್ರಿಕೆಯನ್ನು ದಿನಪತ್ರಿಕೆಯಾಗಿ ಪ್ರಕಟಿಸುವ ನಿರ್ಣಯಕ್ಕೆ ಬಂದು 27-4-33ಕ್ಕೆ ಅಕ್ಷಯ ತೃತೀಯದಂದು ಪ್ರಥಮ ಸಂಚಿಕೆಯನ್ನು ಪ್ರಕಟಿಸಿದರು. ಆಗ ಶ್ರೀ ಶೇಷಾಚಾರ್ಯ ಕಟ್ಟಿ ವಕೀಲರು ಅದರ ಸಂಪಾದಕ ರಾಗಿದ್ದರು. "ಭಾರತ ಸ್ವಾತಂತ್ರ್ಯ ಹಾಗೂ ಕರ್ನಾಟಕ ಏಕೀ ಕರಣವೇ ತಮ್ಮ ಗುರಿ" ಎಂದು ಆ ಸಂಚಿಕೆಯಲ್ಲಿ ಘೋಷಿಸಿ ದ್ದರು. ಸರಕಾರದ ಕಟಾಕ್ಷ ಈ ಪತ್ರಿಕೆಯ ಮೇಲೂ ಇತ್ತು.

ಶ್ರೀ ದಿವಾಕರ ರಂಗರಾಯರು ಜೇಲಿನಿಂದ ಬಿಡುಗಡೆ ಆಗಿ ಬಂದನಂತರ ಬೆಳಗಾವಿಯಲ್ಲಿ ಈ ಸ್ನೇಹಿತರೆಲ್ಲ ಒಂದುಗೂಡಿ, ವಿಚಾರ-ವಿನಿಮಯ ನಡೆಸಿ 1935ರಲ್ಲಿ "ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟ್"ನ್ನು ರಚಿಸಿ ಅದೇ ವರ್ಷ ಆಗಸ್ಟ 1ನೇ ದಿನಾಂಕದಂದು 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನೂ ಮುದ್ರಣಾಲಯವನ್ನೂ ಈ ಟ್ರಸ್ಟಿಗೆ, ಕರ್ನಾಟಕ ಪ್ರಕಾಶನ ಮಂಡಳವು ವಹಿಸಿಕೊಟ್ಟಿತು. ವಿಜಾಪುರದಿಂದ ಶ್ರೀ ಮೊಹರೆ ಹನುಮಂತರಾಯರನ್ನು 'ಸಂಯುಕ್ತ ಕರ್ನಾಟಕ' ದಿನಪತ್ರಿ ಕೆಯ ಸಂಪಾದಕರನ್ನಾಗಿ ಆಮಂತ್ರಿಸಲಾಯಿತು. ಅವರೂ ತಮ್ಮ ನಿಃಸ್ವಾರ್ಥ ಸೇವೆ ಸಲ್ಲಿಸುವದಾಗಿ ಹೇಳಿ, ಬೆಳಗಾವಿಗೆ ಬಂದು ಸಂಯುಕ್ತ ಕರ್ನಾಟಕದ ಸಂಪಾದಕ ಹುದ್ದೆಯನ್ನು ವಹಿಸಿಕೊಂಡರು. 1928ರಲ್ಲಿಯೇ ಕರ್ಮವೀರಕ್ಕೆ ಸೇರಿದ್ದ, ಮಧ್ಯ ಕರ ನಿರಾಕರಣೆ ಚಳವಳಿಯಲ್ಲಿ ತೊಡಗಿದ್ದ ಶ್ರೀ ಹ. ರಾ. ಪುರೋಹಿತರೂ ಮತ್ತೆ ಬಂದು 'ಸಂಯುಕ್ತ ಕರ್ನಾಟಕ' ಸೇರಿ ಕೊಂಡಿದ್ದರು. ಮತ್ತೆ ಹಲವಾರು ತರುಣ ವಿದ್ವಾಂಸರೂ ಸಂಪಾ ದಕ ವರ್ಗದಲ್ಲಿ 'ಕಂಬಳಿ-ಕರಾರು' ಕರಾರಿನ ಮೇರೆಗೆ ತಮ್ಮ ಸೇವೆ ಸಲ್ಲಿಸಲು ಅಣಿಯಾಗಿದ್ದರು. ಹೀಗಾಗಿ "ಸಂಯುಕ್ತ ಕರ್ನಾಟಕ"ದ ದಾರಿ ಸುಗಮವಾದಂತೆ ಕಾಣಹತ್ತಿತು. ಸಂಯುಕ್ತ ಕರ್ನಾಟಕದ ವಾರಪತ್ರಿಕೆಯಾಗಿ 'ಕರ್ಮವೀರ'ವನ್ನು ಪುನರುಜ್ಜೀವಿಸುವ ನಿರ್ಣಯವೂ ಆಯಿತು. ಶ್ರೀ ಹ.ರಾ ಪುರೋ ಹಿತರನ್ನು ಕರ್ಮವೀರದ ಸಂಪಾದಕರೆಂದು ಘೋಷಿಸಲಾಯಿತು. 1940ರಿಂದ ಕರ್ಮವೀರದ ಪ್ರತ್ಯೇಕ ಪ್ರಕಟನೆ ಆರಂಭ ವಾಯಿತು.

ಕರ್ನಾಟಕದ ಎಲ್ಲ ಪ್ರದೇಶಗಳಿಗೆ ಸಂಯುಕ್ತ ಕರ್ನಾಟಕ ವನ್ನು ಬೇಗನೇ ತಲುಪಿಸುವದಕ್ಕೆ ಬೆಳಗಾವಿಯಿಂದ ಸಾಧ್ಯವಿಲ್ಲ, ಆರ್ಥಿಕ [illegible] ಗಳಿಲ್ಲ ಎಂದು ಶ್ರೀ ಮೊಹರೆಯವರು ತಮ್ಮ [illegible] ಪತ್ರಿಕೆಯನ್ನು [illegible] ಕೇಂದ್ರ ಸ್ಥಳವಾದ ಹುಬ್ಬಳ್ಳಿಗೆ [illegible] ಒಪ್ಪಿಸಿ [illegible] ಸಂಯುಕ್ತ ಕರ್ನಾಟಕವು [illegible] ಹುಬ್ಬಳ್ಳಿಗೆ ಸ್ಥಳಾಂತರ [illegible]

ಆಗಿನವರೆಗೆ ತಕ್ಕ ಸ್ಥಳವೂ ದೊರಕಿತು. ಹುಬ್ಬಳ್ಳಿಯಿಂದ ಪತ್ರಿಕೆ ಬೇಗನೆ ದೊರೆಯಲಾರಂಭಿಸಿದ್ದರಿಂದ ಪ್ರಸಾರವೂ ಹೆಚ್ಚತೊಡಗಿತು. ರಾಷ್ಟ್ರೀಯ ದಿನಪತ್ರಿಕೆ ಎಂದು ಖ್ಯಾತಿಯೂ ದೊರೆಯಲಾರಂಭಿಸಿತು.

'ಸರ್ವಾರಂಭಾಃ ತಂಡುಲಾಃ ಪ್ರಸ್ಥಮೂಲಾಃ' ಇಲ್ಲಿಗೆ ಸ್ಥಳಾಂತರ ದ ನಂತರವೂ ಪತ್ರಿಕೆಯ ಆರ್ಥಿಕ ಪರಿಸ್ಥಿತಿ ಹೇಳಿಕೊಳ್ಳು ವಂತೆ ಸುಧಾರಿಸಿರಲಿಲ್ಲ. ಒಂದೆರಡು ವರ್ಷಗಳಲ್ಲಿಯೇ ದ್ವಿತೀಯ ಮಹಾಯುದ್ಧದ ಕಾರ್ಮೋಡಗಳು ಹರಡಿ ಆರ್ಥಿಕ ಸ್ಥಿತಿ ಮತ್ತಷ್ಟು ಸೂಕ್ಷ್ಮವಾಯಿತು. ಶ್ರೀ ದಿವಾಕರ ರಂಗರಾಯರು ದಿನಪತ್ರಿಕೆಗೆ ಆರ್ಥಿಕ ಸ್ಥಿರತೆಯನ್ನು ತಂದುಕೊಡುವ ಉದ್ದೇಶ ದಿಂದ, ಪತ್ರಿಕೆಗಾಗಿ "ಅಪದ್ಧನ" ಕೂಡಿಸುವ ನಿರ್ಣಯ ಕೈಕೊಂಡು 1-4-1940 ರಂದು ಪತ್ರಿಕಾ ಪ್ರಕಟಣೆ ಯೊಂದನ್ನು ಕೊಟ್ಟರು. ತತ್ಪರಿಣಾಮವಾಗಿ ಪತ್ರಿಕಾಭಿಮಾನಿ ಕನ್ನಡಿಗರಿಂದ ಹತ್ತುಸಾವಿರ ರೂಗಳ ಅಪದ್ಧನ ಸಂಗ್ರಹ ವಾಯಿತು. ದಾರಿ ತಕ್ಕಮಟ್ಟಿಗೆ ಸುಗಮವಾದಂತಾಯಿತು.

ಸ್ವಾತಂತ್ರ್ಯ ಚಳವಳಿಯು ಪ್ರಬಲವಾಗ ಹತ್ತಿದ್ದರಿಂದ ಸರಕಾರವು ಪ್ರಸಿದ್ಧಿ ಪೂರ್ವ ಸುದ್ದಿ ನಿಯಂತ್ರಣವನ್ನು 1940ರಲ್ಲಿ ತರಬಯಸಿದ್ದರಿಂದ ಸಂಯುಕ್ತ ಕರ್ನಾಟಕ ನಿಂತು ಹೋಗುವ ಭೀತಿ ಉಂಟಾಯಿತು. ಹುಬ್ಬಳ್ಳಿಯಿಂದ ಹನ್ನೆರಡು ಮೈಲು ದೂರದ ಧಾರವಾಡಕ್ಕೆ ಹೋಗಿ ಸುದ್ದಿಗಳನ್ನು ತೋರಿಸಿ, ಪಾಸು ಮಾಡಿಸಿಕೊಂಡು ಬಂದು ದಿನಪತ್ರಿಕೆ ಹೊರಡಿಸುವದು ಅಶಕ್ಯದ ಮಾತಾಗಿದ್ದಿತು. ಈ ಸಂಗತಿಯನ್ನು ಕಲೆಕ್ಟರನ ಗಮನಕ್ಕೆ ತರಲಾಯಿತು. ಅಷ್ಟರಲ್ಲಿ ಆ ಆಜ್ಞೆ ಬೇರೆ ಕೆಲವು ಪ್ರಾಂತಗಳಿಗಷ್ಟೇ ಅನ್ವಯಿಸಲ್ಪಟ್ಟದ್ದರಿಂದ ಸಂಯುಕ್ತ ಕರ್ನಾಟಕಕ್ಕೆ ಜೀವದಾನ ದೊರೆತಂತಾಯಿತು.

ಹಾಂ ಎನ್ನುವಷ್ಟರಲ್ಲಿ ಚಲೇಜಾವ ಚಳವಳಿ ಬಂದೇ ಬಿಟ್ಟಿತು. ಕರ್ಮವೀರ ಪತ್ರಿಕೆಯು ಮಹಾತ್ಮಾಗಾಂಧಿಯವರ "ಹರಿಜನ" ಪತ್ರಿಕೆಯ ಲೇಖನಗಳನ್ನು ಮುಂಗಡ ತರಿಸಿಕೊಂಡು ಕನ್ನಡದಲ್ಲಿ ಪ್ರಕಟಿಸುತ್ತಿತ್ತು. ಇಷ್ಟೇನೆ ಸಾಕಾಯಿತು. ಆ ಪತ್ರಿಕೆಯ ಕಾರ್ಯಾಲಯವನ್ನು ಜಪ್ತಿ ಮಾಡುವದಕ್ಕೆ, ಸಶಸ್ತ್ರ ಪೊಲೀಸರು ಅಧಿಕಾರಿಗಳು ಬಂದು ಕಾರ್ಯಾಲಯದ ಝಡತಿ ನಡೆಸಿದರು, ಕರ್ಮವೀರದ ಕಾಗದ ಪತ್ರಗಳನ್ನು ಜಪ್ತಿ ಮಾಡಿದರು. ಸಂಯುಕ್ತ ಕರ್ನಾಟಕವೂ ಅದೇ ಕಟ್ಟಡ ದಲ್ಲಿದ್ದುದರಿಂದ ಕಟ್ಟಡಕ್ಕೆ ಬೀಗಮುದ್ರೆ ಹಾಕಲಾದದು ತಪ್ಪಿತು. ಕರ್ಮವೀರ ಒಂದು ತಿಂಗಳ ಕಾಲ ಅಜ್ಞಾತವಾಸದಲ್ಲಿರ ಬೇಕಾದರೂ ಸಂಯುಕ್ತ ಕರ್ನಾಟಕ ಪಾರಾಯಿತು.

ನಾಡಿನಲ್ಲಿ ಚಳವಳಿಯು ಕಾವೂ ಏರುತ್ತಿದ್ದಿತು. ಸರಕಾ ರವು ಪತ್ರಿಕೆಗಳನ್ನು ಹತ್ತಿಕ್ಕಲು ಕ್ರಮಗಳನ್ನು ಕೈಕೊಳ್ಳಲಾ ರಂಭಿಸಿತು. ಜನತೆಯಲ್ಲಿ ನಾಡಿನ ಆಗು ಹೋಗುಗಳನ್ನು ಅರಿತುಕೊಳ್ಳುವ ತವಕ ಹೆಚ್ಚುತ್ತಲಿದ್ದಿತು. ಹೀಗಾಗಿ ಪ್ರಸಾರವೂ ಹೆಚ್ಚುತ್ತ ನಡೆಯಿತು. ಸಂಯುಕ್ತ



ಕರ್ನಾಟಕವು ಹೊರಗಿನ ಸುದ್ದಿ ಸಂಸ್ಥೆಗಳ ಮೂಲಕ ಟೆಲಿಪ್ರಿಂಟರಿನಲ್ಲಿ ಸುದ್ದಿಗಳನ್ನು ತರಿಸಿ ಜನರಿಗೆ ತತ್ಪರತೆಯಿಂದ ಒದಗಿಸುವ ಸಿದ್ಧತೆ ಮಾಡಿಕೊಳ್ಳಬೇಕಾಯಿತು. ಸಂಯುಕ್ತ ಕರ್ನಾಟಕ, ಅದರೊಂದಿಗೆ ಕರ್ಮವೀರ ಕೂಡ ಬಾಲಗ್ರಹ ದೋಷದಿಂದ ಮುಕ್ತವಾಗಿ ಶುಕ್ಲಪಕ್ಷದ ಚಂದ್ರನಂತೆ ಬೆಳೆಯ ಹತ್ತಿದವು. ಕಾರ್ಯಾಲಯದ ಸಿಬ್ಬಂದಿ ವರ್ಗವೆಲ್ಲ ಒಂದು ಕುಟುಂಬ ದವರಂತೆ ಕಳಕಳಿಯಿಂದ ಪತ್ರಿಕೆಯ ಏಳಿಗೆಗಾಗಿ ಪರಿಶ್ರಮಿಸುತ್ತಿದ್ದರು. ಅವರ ಸೇವಾ ಪ್ರವೃತ್ತಿ ಎಲ್ಲಿಯವರೆಗೆ ಮುಟ್ಟಿತೆಂದರೆ ಹುಬ್ಬಳ್ಳಿ ಜೀವನದ ಪ್ರಾರಂಭದ ವರ್ಷಗಳಲ್ಲಿ ವಾರಂಪ್ರತಿ ಕರ್ಮವೀರ ಪತ್ರಿಕೆಗಳನ್ನು ಮಡಿಚಿ, ಲೇಬಲ್ ಅಂಟಿಸಿ, ಅಂಚೆಗೆ ಕಳಿಸುವ ಸಿದ್ಧತೆಯನ್ನು ಅವರೆಲ್ಲ ಸ್ವಯಂಪ್ರೇರಣೆಯಿಂದ ಕಾರ್ಯಾಲಯದಲ್ಲಿ ಸೇರಿ, ಮಾಡಿ ಮುಗಿಸುತ್ತಿದ್ದರು.

1947ರ ಆಗಸ್ಟ್‌ದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಸಂಯುಕ್ತ ಕರ್ನಾಟಕ-ಕರ್ಮವೀರ ಪತ್ರಿಕೆಗಳ ಒಂದು ಗುರಿ ಈಡೇರಿದಂತಾಯಿತು. ಆದರೂ ಅವುಗಳ ಮುಂದೆ ಎರಡು ಗುರಿಗಳು ಉಳಿದೇ ಇದ್ದವು. ಸಮೃದ್ಧ ಭಾರತ ಮತ್ತು ಕರ್ನಾಟಕ ಏಕೀಕರಣ–ಇವೇ ಆ ಎರಡು ಗುರಿಗಳು. ಈ ಕಾರ್ಯಕ್ಕಾಗಿ ಜನತೆಯಲ್ಲಿ ಜಾಗೃತಿ ವಿಶೇಷವಾಗಿ ಆಗಬೇಕಾಗಿದ್ದುದರಿಂದ [illegible] ಈ ಕಾರ್ಯ [illegible] ಅತ್ಯಾಕರ್ಷಣ ಶೈಲಿ. ಅವರನ್ನು ಹುರಿದುಂಬಿಸುವ [illegible] ಪರಿವರ್ತನೆ ಹೊಂದಿತು. ನಿಷ್ಠಾವಂತ ಕಾರ್ಯಕರ್ತರು ಸಿಬ್ಬಂದಿವರ್ಗದವರ ದೆಸೆಯಿಂದ, ಅವರು ಕರ್ತವ್ಯ ಪರಾಯಣರೂ ಆಗಿದ್ದುದರಿಂದ ಸಂಯುಕ್ತ ಕರ್ನಾಟಕ ಕರ್ಮವೀರಗಳ ಪ್ರಸಾರ ಬೆಳೆಯುತ್ತ ನಡೆಯಿತು. ಆರ್ಥಿಕ ಸ್ಥಿತಿ ಉತ್ತಮವಾಗುತ್ತ ಈ ಪತ್ರಿಕೆಗಳು ನಿರಾತಂಕವಾಗಿ ನಡೆಯಬಲ್ಲವು ಎಂಬ ವಿಶ್ವಾಸ ಕಾರ್ಯಕರ್ತರಲ್ಲಿ ಮೂಡಿತು. ಶ್ರೀ ದಿವಾಕರ ರಂಗರಾಯರು ಪ್ರತ್ಯಕ್ಷ ರಾಜಕಾರಣದಲ್ಲಿ ತೊಡಗಿದ್ದರಿಂದ ಪತ್ರಿಕಾ ಸಂಪಾದಕ ಶ್ರೀ ಮೊಹರೆ ಹನುಮಂತರಾಯರೇ ಆಡಳಿತ ಸೂತ್ರಗಳನ್ನೂ ದಕ್ಷವಾಗಿ ನಿರ್ವಹಿಸುತ್ತ ಈ ಪತ್ರಿಕೆಗಳಿಗೆ ಅಖಿಲ ಭಾರತ ಖ್ಯಾತಿಯನ್ನು ತಂದಿತ್ತರು.

ಕರ್ಮವೀರಕ್ಕೆ ಮತ್ತೆ ಕಿರಿಕಿರಿ ತಪ್ಪಲಿಲ್ಲ. ಮುದ್ರಣ ಕಾಗದದ ಕೊರತೆಯಿಂದಾಗಿ ಸರಕಾರವು ಪುಟ–ದರ ನಿಯಂತ್ರಣವನ್ನು ಹೇರಿದ್ದರಿಂದ ಕರ್ಮವೀರ ಪತ್ರಿಕೆ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡು, ಸಂಯುಕ್ತ ಕರ್ನಾಟಕದ ಸೋಮ

ವಾರದ ಸಂಚಿಕೆ ಕರ್ಮವೀರ ಎಂದು 26-1-53 ರಿಂದ ಪ್ರಕಟವಾಗಲು ಶುರುವಾಯಿತು. 1956ರ ಜುಲೈದಲ್ಲಿ ಈ ಏರ್ಪಾಡು ಬದಲಾಗಿ ಸಂಯುಕ್ತ ಕರ್ನಾಟಕದ ರವಿವಾರದ ಪತ್ರಿಕೆಯಾಗಿ ಕರ್ಮವೀರ ಹೊರ ಬರಲಾರಂಭಿಸಿತು. ಮುಂದೆ ಎರಡುವರ್ಷಗಳ ನಂತರ 1959ರ ಜನವರಿಯಲ್ಲಿ ಕರ್ಮವೀರವು ಸಂಯುಕ್ತ ಕರ್ನಾಟಕದಿಂದ ಪ್ರತ್ಯೇಕವಾಗಿ ಸ್ವತಂತ್ರ ವಾರ ಪತ್ರಿಕೆ ಎಂದು ಜನತೆಯೆದುರು ಬಂದಿತು. ಈ ಎಲ್ಲ ಸ್ಥಿತ್ಯಂತರಗಳಲ್ಲೂ ಶ್ರೀ ಹ. ರಾ. ಪುರೋಹಿತರೇ ಕರ್ಮವೀರದ ಸಂಪಾದಕರಾಗಿದ್ದರು. ಮುಂದೆ 1964ರಲ್ಲಿ ಶ್ರೀ ಪುರೋಹಿತರು ನಿವೃತ್ತರಾಗುವವರೆಗೂ ಅವರೇ ಕರ್ಮವೀರದ ಸಂಪಾದಕರಾಗಿದ್ದರು. ಕರ್ಮವೀರದ ಪುರೋಹಿತರೆಂದೇ ಅವರು ನಾಡಿನ ತುಂಬೆಲ್ಲ ಪ್ರಖ್ಯಾತರಾಗಿದ್ದರು.

ಕರ್ಮವೀರದ ಈ ಸಾಹಸಮಯ ಜೀವನ-ಸ್ಥಿತ್ಯಂತರಗಳನ್ನು ಗಮನಿಸುವಾಗ ಒಂದು ಮಾತನ್ನು ನಾವು ಮರೆಯಬಾರದು. ಕನ್ನಡ ನಾಡಿನ ಬರಹಗಾರರಿಗೆ ಕರ್ಮವೀರ ಸ್ಫೂರ್ತಿಯ ಸೆಲೆಯಾಗಿದ್ದಿತು. ಆಗಲೇ ಪ್ರಸಿದ್ಧರಾಗಿದ್ದ ಲೇಖಕರಿಗೆ ಸಾಹಿತಿಗಳಿಗೆ ಕರ್ಮವೀರ ಹೆಚ್ಚಿನ ಪ್ರಸಿದ್ಧಿಯನ್ನು ತಂದು ಕೊಟ್ಟದ್ದಲ್ಲದೆ ಹೊಸ ಲೇಖಕ ವರ್ಗವನ್ನೇ ಸೃಷ್ಟಿಸಿತು ಎಂದು ಧಾರಾಳವಾಗಿ ಹೇಳಬಹುದು. ಜನತೆಗೆ ವಾರಪತ್ರಿಕೆಯಾಗಿ ಮನರಂಜನೆ ಒದಗಿಸುವದರ ಜೊತೆಗೆ ಧಾರ್ಮಿಕ, ರಾಷ್ಟ್ರೀಯ ವಿಚಾರಗಳನ್ನು ಪ್ರತಿಪಾದಿಸುತ್ತ ಲೋಕ ಶಿಕ್ಷಣ ಕಾರ್ಯವನ್ನೂ ಅದು ನಡೆಸಿಕೊಂಡು ಬಂದಿತು. ನಾಡಿನ ಗಣ್ಯ ಪತ್ರಿಕೆಗಳಲ್ಲಿ ಅದರ ಸ್ಥಾನಮಾನ ಹಿರಿದಾಗಿತ್ತು.

ಸಂಯುಕ್ತ ಕರ್ನಾಟಕವೂ ದಿನೇ ದಿನೇ ಉತ್ಕರ್ಷಪಥದಲ್ಲಿ ಸಾಗಿ 1957 ಸೆಪ್ಟೆಂಬರ್‌ನಲ್ಲಿ 'ಕಸ್ತೂರಿ' ಮಾಸಪತ್ರಿಕೆ ಪ್ರಕಟಣೆ ಆರಂಭಿಸಿತು. 1958ರಲ್ಲಿ ತನ್ನ ರಜತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. 1959ರಲ್ಲಿ ಸಂಯುಕ್ತ ಕರ್ನಾಟಕದ ಬೆಂಗಳೂರು ಆವೃತ್ತಿ ಪ್ರಾರಂಭವಾಯಿತು. ನಾಡಿನ ಎರಡು ಕೇಂದ್ರಗಳಿಂದ ಏಕಕಾಲಕ್ಕೆ ಪ್ರಕಟವಾಗುವ ಪತ್ರಿಕೆ ಎಂಬ ಖ್ಯಾತಿಗೆ ಪಾತ್ರವಾಯಿತು. ಸಂಯುಕ್ತ ಕರ್ನಾಟಕದ ಬಲ ಹೆಚ್ಚಿದಂತೆ ಕರ್ಮವೀರಕ್ಕೂ ಸಂಭ್ರಮ ಹೆಚ್ಚು.

ಪರಂಪರಾಪ್ರಿಯವಾಗಿದ್ದ ಕರ್ಮವೀರ ಪತ್ರಿಕೆ ಜನಮೆಚ್ಚುಗೆಯ ಪತ್ರಿಕೆಯಾಗಿ ಬಾಳುತ್ತ 1973ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿತು. ಮುಂದೆ ಐದು ವರ್ಷ ಕಾಲ ಬಾಳಿ, ಕಾರಣಾಂತರಗಳಿಂದ 25-6-1978 ರಂದು ಕೊನೆಯ ಸಂಚಿಕೆಯನ್ನು ಹೊರತಂದ ಕರ್ಮವೀರ ವಿರಾಮವನ್ನು ಬಯಸಿ ಜನತೆಗೆ ವಿದಾಯ ಹೇಳಿತು. ಕರ್ಮವೀರ ಪತ್ರಿಕೆಗೆ ಆದ ನಷ್ಟವನ್ನು ತುಂಬಿಕೊಳ್ಳಲಿಕ್ಕೆ ಸಾಧ್ಯವಿಲ್ಲವೆಂದು ಆಗಿನ ವ್ಯವಸ್ಥಾಪಕರು (ಲೋಕ ಶಿಕ್ಷಣ ಟ್ರಸ್ಟ್ ಅಲ್ಲ) ತಮ್ಮ ಪ್ರಕಟನೆಯಲ್ಲಿ ಹೇಳಿದ್ದಾರೆ. ಶ್ರೀ ಪುರೋಹಿತರ ವಿರಾಮದ ನಂತರ ಸುಮಾರು ಹನ್ನೆರಡುವರ್ಷ ಕಾಲ ಸಂಪಾದಕರಾಗಿದ್ದ ಶ್ರೀ ಶಂಕರಪಾಟೀಲರು ಏಕಪ್ರಯತ್ನಗಳಿಂದ ಕರ್ಮವೀರವನ್ನು ನಡೆಸಿಕೊಂಡು ಬಂದರು. ಅವರು 1977ರ ಮಾರ್ಚದಲ್ಲಿ ಸಂಸ್ಥೆಯನ್ನು ತ್ಯಜಿಸಿದರು. ಮುಂದೆ ಒಂದೂ ಕಾಲು ವರ್ಷದ ನಂತರ ಕರ್ಮವೀರ ದೀರ್ಘ ವಿರಾಮ ಪಡೆಯಿತು.

ಭಾರತ ಸ್ವಾತಂತ್ರ್ಯ-ಕರ್ನಾಟಕ ಏಕೀಕರಣ ತನ್ನ ಈ ಗುರಿಗಳನ್ನು ಕರ್ಮವೀರ ಸಾಧಿಸಿತಲ್ಲದೆ ಮುಂದೆ ಎರಡು ದಶಕಗಳ ಕಾಲ ಅವುಗಳ ಅಭಿವೃದ್ಧಿಗಾಗಿ ಹೆಣಗಿತು. ಕರ್ಮವೀರದ 57 ವರ್ಷಗಳ ಜೀವನವು ರಾಷ್ಟ್ರ ಜೀವನದೊಡನೆ ನಿಗದಿತವಾಗಿದೆ. ದೇಶದ ಚರಿತ್ರೆಯೇ ಕರ್ಮವೀರದ ಚರಿತ್ರೆ. ಮನಸ್ಸಿಟ್ಟು ನೋಡುವವರಿಗೆ ಕರ್ಮವೀರದ ಸಂಪುಟಗಳಲ್ಲಿ ಸ್ವಾತಂತ್ರ್ಯ ಚಳವಳಿಯ ಚರಿತ್ರೆ, ಕರ್ನಾಟಕ ಏಕೀಕರಣದ ಕಥೆ ಗೋಚರಿಸಬಲ್ಲದು. ನಾಡಿನ ಜನ-ಮನದ ಬೆಳವಣಿಗೆಯೂ ಕಂಡುಬಂದೀತು. ಇಂದಿನ ಪೀಳಿಗೆಯವರಿಗೆ ಕರ್ಮವೀರದ ಅದ್ಭುತ ಸಾಹಸದ ಚರಿತ್ರೆ ವಿದಿತವಾಗಲೆಂದೇ ಈ ಲೇಖನ ಬಂದಿದೆ. ಇಂದು ವ್ಯಾಪಾರೀವೃತ್ತಿಯುದಾಗಿರುವ ಪತ್ರಿಕಾ ಪ್ರಪಂಚ ಅಂದು ತ್ಯಾಗ-ನಿಷ್ಠೆ-ರಾಷ್ಟ್ರಪ್ರೇಮಗಳ ಪ್ರತೀಕವಾಗಿದ್ದಿತು. ಕರ್ಮವೀರ ನಡೆದು ಬಂದ ದಾರಿ ಈಗಲೂ ಇಂದಿನವರಿಗೆ ಸ್ಫೂರ್ತಿಪ್ರದ.

ಏಳು ವರ್ಷಗಳ ದೀರ್ಘವಿರಾಮದ ನಂತರ ಕರ್ಮವೀರ ಮತ್ತೆ ಈ ದೀಪಾವಳಿ ಸಂಚಿಕೆ ರೂಪದಲ್ಲಿ ಜನತೆಯೆದುರು ಕಾಣಿಸಿಕೊಂಡಿದೆ.



ಕನ್ನಡಿಗರ ವಿಶ್ವಾಸಕ್ಕೆ ಕೃತಜ್ಞತೆ

ಜನ ಹಿತದ ಚಿಂತನೆ ಸದಾಕಾಲ. ಅದಕ್ಕಾಗಿಯೇ ಅವರಿಗಾಗಿಯೇ ಕೈಕೊಳ್ಳುವ ಯೋಜನೆಗಳಿಗೆ ದರ–ಕರಭಾರ ಸ್ವಲ್ಪ ಹೆಚ್ಚಿಸಿದರೂ, ಕ್ಷಮಿಸಿ ಸಹಕರಿಸುತ್ತಾರೆಂಬ ನಂಬಿಕೆ ಜನತೆಯ ಮೇಲೆ, ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರಿಗೆ.


ವಿದ್ಯುತ್ ದರ– ಬಸ್ ಪ್ರಯಾಣದ ದರ ಏರಿಕೆಯ ವಿವಾದದ ಬಿಸಿಯ ಕಾಲದಲ್ಲೇ, ಪ್ರವಾಸ ಕೈಕೊಂಡರು. ಅಲ್ಲಿ ಕಂಡದ್ದೇನು? ಹಳ್ಳಿಹಳ್ಳಿಗಳಲ್ಲಿ ಜನರಿಂದ ಅದೇ ಪ್ರೀತಿ ವಿಶ್ವಾಸಗಳ ಪ್ರದರ್ಶನ.

ಮನ ಕರಗಿತು. ದರ–ಕರ ಭಾರ ಸ್ವಲ್ಪ ಹೆಚ್ಚಾದರೆ ಕ್ಷಮಿಸಿ ಎಂದು ಕೈಮುಗಿದರು. ಜನತೆ ನೀಡಿದ ಹಣದಲ್ಲಿ ಒಂದು ರೂಪಾಯಿ ಕೂಡ ಅಪವ್ಯಯ ಮಾಡದೆ, ಜನರ ಹಿತಕ್ಕಾಗಿಯೇ ಉಪಯೋಗಿಸುವದಾಗಿ ಮಾತುಕೊಟ್ಟರು.

ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರು ಕಳೆದ ತಿಂಗಳು ಮೂರನೇ ವಾರ ಬೆಂಗಳೂರು ಜಿಲ್ಲೆಯಲ್ಲಿ ಪ್ರವಾಸ ಕೈಕೊಂಡಾಗ ತಾವು ಸರ್ವತ್ರ ಕಂಡದ್ದು ಕುಗ್ಗದ ವಿಶ್ವಾಸದ ಇಂಥ ವಾತಾವರಣ.

ಮುಖ್ಯಮಂತ್ರಿಗಳು ಕರ್ಮವೀರ ದೀಪಾವಳಿ ವಿಶೇಷ ಸಂಚಿಕೆಗಾಗಿ ವಿಶೇಷ ಸಂದರ್ಶನ ನೀಡಿದ್ದು ಈ ಸಂಚಾರ ಸಮಯದಲ್ಲೇ. ರಾಜಕೀಯ, ಆರ್ಥಿಕ, ಸಾಮಾಜಿಕ, ಆಡಳಿತ ಇತ್ಯಾದಿ ಹಲವಾರು ವಿಷಯಗಳ ಪ್ರಸ್ತಾಪ. ಕಾರ್‌ನಲ್ಲಿ ಜೊತೆಯಿದ್ದ ಲೋಕೋಪಯೋಗಿ ಮಂತ್ರಿ ಶ್ರೀ ಎಚ್. ಡಿ. ದೇವೇಗೌಡರೂ ಅವರೊಡನೆ ಆಗಾಗ್ಗೆ ಧ್ವನಿಗೂಡಿಸಿದರು.

ಕಾರ್ ಚಲಿಸುತ್ತಿದ್ದಂತೆ ನಡೆದ ವಿಶೇಷ ಸಂದರ್ಶನದಲ್ಲಿ ಪ್ರಸ್ತಾಪವಾದ ಅಂಶಗಳ ಪೈಕಿ, ಪ್ರಚಲಿತ ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಕೆಲ ಪ್ರಶ್ನೋತ್ತರಗಳು ಹೀಗಿವೆ :



ನೋಡಿ, ನಾವು ಹೀಗೇ ಚನ್ನಾಗಿ ಜನಹಿತ ಕೆಲಸ ಮಾಡುತ್ತ ಹೋದರೆ 25 ವರ್ಷಗಳವರೆಗೂ ಕರ್ನಾಟಕದಲ್ಲಿ ಕಾಂಗ್ರೆಸ್ [ಐ] ಸರ್ಕಾರ ಮತ್ತೆ ಅಧಿಕಾರಕ್ಕೆ ಬರುವದಿಲ್ಲ....

ಸಂದರ್ಶನ

ಪ್ರಹ್ಲಾದ ಕುಳಲಿ

ಪ್ರಧಾನಿ ಪ್ರಶಂಸೆ

ಪ್ರ :– ಪ್ರಧಾನಮಂತ್ರಿ ಶ್ರೀ ರಾಜೀವ್ ಗಾಂಧಿ ಅವರ ಬಗ್ಗೆ ನೀವು ಹಲವಾರು ಬಾರಿ ಪ್ರಶಂಸಿಸಿ ಮಾತನಾಡಿದ್ದೀರಿ. ಏಕೆ ?

ಹೆಗಡೆ: ರಾಜ್ಯದ ಮುಖ್ಯಮಂತ್ರಿಯಾಗಿ ನನ್ನ ಅಭಿಪ್ರಾಯ ವ್ಯಕ್ತಪಡಿಸಬೇಕಾಗುತ್ತದೆ. ಪಕ್ಷಾಂತರ ನಿಷೇಧ ಶಾಸನ ಜಾರಿಗೆ ತಂದಿದ್ದಾರೆ. ಪಂಜಾಬ್ ಹಾಗೂ ಅಸ್ಸಾಂ ಸಮಸ್ಯೆ ಬಗೆಹರಿಸಿದ್ದಾರೆ. ನನ್ನ ಪ್ರಶಂಸೆ ಈ ಮೂರು ಅಂಶಗಳಿಗೆ ಮಾತ್ರ ಸೀಮಿತ. ದೇಶದ ಪ್ರಧಾನಿಯಾಗಿ ಅವರು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದಾರೆನ್ನಬೇಕಾದರೆ, ಆರ್ಥಿಕ ಸಮಸ್ಯೆಗಳೆಲ್ಲ ನಿವಾರಣೆಯಾಗಬೇಕು. ಅದೇ ಅವರ ದಕ್ಷತೆಗೆ ಒರೆಗಲ್ಲು ನಿಜವಾದ ಸತ್ವ ಪರೀಕ್ಷೆ.

ಬದಲಾದ ಧೋರಣೆ

ಪ್ರ :– ಕೇಂದ್ರ–ರಾಜ್ಯ ನಡುವಿನ ಸಂಬಂಧ ಸುಧಾರಣೆಯಾಗಿದೆ ಎಂದು ಹೇಳಿದ್ದೀರಿ. ಈಗ ಕೇಂದ್ರ ಮಲತಾಯಿ ಧೋರಣೆ ತಳೆದಿಲ್ಲ ಎಂದೂ ತಿಳಿಸಿದ್ದೀರಿ. ಇಂಥ ಅಭಿಪ್ರಾಯ ಉಂಟಾಗಲು ನೀವು ಕಂಡಿರುವ ಬದಲಾವಣೆಗಳೇನು ?

ಹೆಗಡೆ :– ಕೇಂದ್ರ ಸರ್ಕಾರದ ಮಂತ್ರಿಗಳ ಧೋರಣೆಯಿಂದ ಇದು ವ್ಯಕ್ತವಾಗುತ್ತದೆ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಜನತಾ



ಮುಖ್ಯ ಮಂತ್ರಿಗಳಿಗೇ ನೇರವಾಗಿ ಮನವಿ ಅವಕಾಶ: "ನಿತ್ಯ ಧರ್ಮ ದರ್ಶನ"

ಪಕ್ಷದ ಸರ್ಕಾರ ಇರೋ ಸರ್ಕಾರ. ಅದನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ ಎಂದು ಕೇಂದ್ರಕ್ಕೆ ಮನವರಿಕೆಯಾಗಿದೆ. ಹಿಂದೆ (ಅಂದರೆ ದಿ|| ಇಂದಿರಾ ಗಾಂಧಿ ಆಡಳಿತ ಕಾಲಕ್ಕೆ) ಜನತಾ ಸರ್ಕಾರವನ್ನು ಪದಚ್ಯುತಗೊಳಿಸಲು ಎರಡು ರೀತಿಯ ಪ್ರಯತ್ನಗಳು ನಡೆದವು. ಕಾಂಗ್ರೆಸ್(ಐ) ಪಕ್ಷದವರಿಂದ ನಡೆಸಿದ ಸರ್ಕಾರ ಉರುಳಿಸುವ ಪ್ರಯತ್ನಗಳು. ಇನ್ನೊಂದು ರೀತಿಯ ಪ್ರಯತ್ನವೆಂದರೆ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ವಿವಿಧ ರೀತಿಯ ಕಿರುಕುಳ ನೀಡುವದು. ಈಗ (ರಾಜೀವ್ ಪ್ರಧಾನಿಯಾದ ಬಳಿಕ) ಅಂಥ ಯಾವುದೇ ಪ್ರಯತ್ನಗಳು ನಡೆಯುತ್ತಿಲ್ಲ.

ಮತ್ತೆ ಕಾಂಗ್ರೆಗೆ ಅಧಿಕಾರ ಅಸಾಧ್ಯ

ಪ್ರ: ಮುಂದಿನ ಚುನಾವಣೆಗಳಲ್ಲಿ ಕರ್ನಾಟಕ, ಪಂಜಾಬ್ ಹಾಗೂ ಆಂಧ್ರ ಪ್ರದೇಶಗಳಲ್ಲಿ ಕಾಂಗ್ರೆಸ್ (ಐ) [illegible] ಅಧಿಕಾರಕ್ಕೆ [illegible] [illegible] ವ್ಯಕ್ತಪಡಿಸಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಹೆಗಡೆ : ಎ.ಐ.ಸಿ.ಸಿ. (ಐ) ಅಧ್ಯಕ್ಷರಾಗಿ, ಆ ಪಕ್ಷದ ಕೇಂದ್ರ ಸರ್ಕಾರದ ಪ್ರಧಾನಿಯಾಗಿ ಅವರು ಆ ರೀತಿ ಹೇಳುವದು ಸ್ವಾಭಾವಿಕ. ಮುಂದಿನ ಚುನಾವಣೆಗಳಲ್ಲಿ ಕೇಂದ್ರದಲ್ಲಿ ಪುನಃ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂದು ನಾವು ಹೇಳ್ತೀವೆ. ಕರ್ನಾಟಕದಲ್ಲಿ ಜನತಾ ಪಕ್ಷದ ಸರ್ಕಾರ ಇದೇ ರೀತಿ ಚನ್ನಾಗಿ ಜನ ಹಿತದ ಕೆಲಸಕಾರ್ಯಗಳನ್ನು ಮಾಡುತ್ತ ಹೋದರೆ, ಮುಂದಿನ ಐದು ವರ್ಷ ಅಷ್ಟೇ ಏಕೆ 25 ವರ್ಷಗಳವರೆಗೂ ಕರ್ನಾಟಕದಲ್ಲಿ ಕಾಂಗ್ರೆಸ್ (ಐ) ಮತ್ತೆ ಅಧಿಕಾರಕ್ಕೆ ಬರುವದು ಸಾಧ್ಯವಿಲ್ಲ.

ಪಕ್ಷದ ಕಟ್ಟಪ್ಪಣೆ

ಪ್ರ:– ನೀವು ಎರಡನೆ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಅಧಿಕಾರದಲ್ಲಿ ಪೂರ್ಣಾವಧಿ ಮುಂದುವರಿಯುವದಿಲ್ಲ ಎಂದು ಹೇಳಿದ್ದಿರಿ. ಆ ಮಾತನ್ನು ಎರಡು-ಮೂರು ಸಲ ಬೇರೆ ಬೇರೆ ಸಂದರ್ಭದಲ್ಲೂ ಪುನರುಚ್ಚರಿಸಿದ್ದೀರಿ. ಈ ರೀತಿ ಹೇಳಲು ಏನು ಕಾರಣ?

ಹೆಗಡೆ :– ಈ ವಿಷಯದಲ್ಲಿ ಏನೂ ಮಾತನಾಡಬಾರದೆಂದು ಪಕ್ಷ ನನಗೆ ಅಪ್ಪಣೆ ಮಾಡಿದೆ ಆದ್ದರಿಂದ ನಾನು ಏನೂ ಹೇಳುವದಿಲ್ಲ.

ಸಚಿವ ಶ್ರೀ ದೇವೇಗೌಡ :– ನಾನು ಹೇಳುತ್ತೇನೆ ಕೇಳಿ. ಐದು ವರ್ಷ ಅಧಿಕಾರ ನಡೆಸಬೇಕೆಂದು ಜನತಾ ಶಾಸಕಾಂಗ ಪಕ್ಷ ಇವರನ್ನು (ಶ್ರೀ ಹೆಗಡೆ) ಆಯ್ಕೆ ಮಾಡಿದೆ. ಅದನ್ನು ಉಲ್ಲಂಘಿಸಿ ಮಧ್ಯದಲ್ಲೇ ಅಧಿಕಾರ ಬಿಡುತ್ತೇನೆ ಎಂದು ಹೇಳಲು ಇವರಿಗೆ (ಹೆಗಡೆ) ಎಲ್ಲಿದೆ ಅಧಿಕಾರ? ಪಕ್ಷಕ್ಕಿಂತ ಇವರು ಮೇಲಿನವರಲ್ಲ. ಎರಡನೇ ಸಲ ಅಧಿಕಾರಕ್ಕೆ ಬಂದ ಎರಡೇ ವಾರದಲ್ಲಿ ಶ್ರೀ ಹೆಗಡೆ ಅವರು ಹೇಳಿಕೆ ನೀಡಿ ಪೂರ್ಣಾವಧಿ ಅಧಿಕಾರದಲ್ಲಿರುವ ಇಚ್ಛೆ ತಮಗಿಲ್ಲವೆಂದು ತಿಳಿಸಿದ್ದರು. ಅದರ ಅರ್ಥ ಏನೆಂದರೆ ಅಧಿಕಾರಕ್ಕೆ ಅಂಟಿಕೊಂಡಿರುವ ಉದ್ದೇಶ ತಮಗಿಲ್ಲ ಎಂದು ತಿಳಿಸುವದು ಅಷ್ಟೆ.





ಪತ್ನಿ ಶಕುಂತಲಾ ಅವರೊಡನೆ ಬೆಳಗಿನ ವಾಯು ವಿಹಾರ.

ಪ್ರ:- ಜನತಾ ಪಕ್ಷದ ನೀತಿ--ಕಾರ್ಯ ಕ್ರಮ-ಉದ್ದೇಶಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅನುಷ್ಠಾನಕ್ಕೆ ತರುವಲ್ಲಿ ಅಧಿಕಾರಿಶಾಹಿ ಸಹಕರಿಸುತ್ತಿದೆಯೆ?

ಹೆಗಡೆ :-ಬಹುತೇಕ ಅಧಿಕಾರಿಗಳು ನಮ್ಮ ಪಕ್ಷದ ಧ್ಯೇಯೋದ್ದೇಶಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಕಾರ್ಯ ಗತಗೊಳಿಸುತ್ತಿದ್ದಾರೆ. ಹಿಂದಿನ ಸಲ ಅಧಿಕಾರಿಗಳಲ್ಲಿ ಉಂಟಾಗಿದ್ದ "ಈ ಸರ್ಕಾರ ಉಳಿಯುತ್ತದೆಯೆ?" ಎಂಬ ಅನಿಶ್ಚಯತೆ ಈಗ ಇಲ್ಲ.

ಮೌಲ್ಯಾಧಾರಿತ ರಾಜಕಾರಣ

ಪ್ರ: ಮೌಲ್ಯಾಧಾರಿತ ರಾಜಕಾರಣ ನೀಡುವದಾಗಿ ಹೇಳುವ ನಿಮ್ಮ ಮಾತು ಗಳನ್ನು ಕಾಂಗ್ರೆಸ್ (ಐ) ಪ್ರತಿಪಕ್ಷದವರು ಪದೇಪದೇ ಮೂದಲಿಸುತ್ತಾರೆ.

ಆದರೆ ಈ ನೀತಿಯನ್ನು ಪರಿಣಾಮ ಕಾರಿಯಾಗಿ ಜಾರಿಗೆ ತರಲು ನಿಮಗೆ ಸಾಧ್ಯವಾಗಿದೆಯೆ? ಸಿ. ಬಿ. ಐ. ಚಾರ್ಜ್ ಶೀಟ್ ಇದ್ದರೂ ಶ್ರೀ ಎಚ್. ವಿ. ರೆಡ್ಡಿ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿ ಕಾರದ ಅಧ್ಯಕ್ಷರಾಗಿ ನೇಮಿಸಿದ್ದು ಎಂಥ ಮೌಲ್ಯಾಧಾರಿತ ರಾಜಕಾರಣ? ಎಂದೂ ಪ್ರತಿಪಕ್ಷದವರು ಕೇಳುತ್ತಾರೆ. ನೀವೇನು ಹೇಳುತ್ತೀರಿ?

ಹೆಗಡೆ: ಪ್ರತಿಪಕ್ಷದವರಿಗೆ ಟೀಕಿಸಲು ಬೇರೇನಾದರೂ ಇದೆಯೇ? ಬಿ. ಡಿ. ಎ. ಅಧ್ಯಕ್ಷರಾಗಿ ಶ್ರೀ ಎಚ್.ಜಿ.ವಿ.ರೆಡ್ಡಿ ಅವರ ನೇಮಕದ ಬಗ್ಗೆ ಕೇಳಿದ್ದೀರಿ ಒಳ್ಳೆಯ ಪ್ರಶ್ನೆ. ಅವರ ವಿರುದ್ಧ 1971 ರಲ್ಲಿ ಸಿ. ಬಿ. ಐ. ತನಿಖೆ ಆರಂಭವಾಯಿತು. 1979ರಲ್ಲಿ ಕೋರ್ಟಿಗೆ ಚಾರ್ಜ್‌ಶೀಟ್ ನೀಡಲಾಯಿತು. 1971 ರಿಂದ 9 ವರ್ಷ ಕಾಲ ತನಿಖೆಯೇ ನಡೆಯಿತು. ಆ ಅವಧಿ ಯಲ್ಲಿ ಕಾಫಿ ಮಂಡಳಿಯ ಅಧ್ಯಕ್ಷರಾಗಿ ಕೇಂದ್ರ ಸರ್ಕಾರ ನೇಮಿಸಿರಲಿಲ್ಲವೆ? 1979ರಲ್ಲಿ ಚಾರ್ಜ್‌ಶೀಟ್ ಸಲ್ಲಿಸಿದ ನಂತ ರವೂ ಮಂಗಳೂರು ರಾಸಾಯನಿಕ ಗೊಬ್ಬರ ಕಾರ್ಖಾನೆ ಹಾಗೂ ಕೆ. ಎಸ್.ಐ.ಐ.ಡಿ.ಸಿ. ಅಧ್ಯಕ್ಷರಾಗಿ ಹಿಂದಿನ ಕಾಂಗ್ರೆಸ್(ಐ)ರಾಜ್ಯ ಸರ್ಕಾರ ನೇಮಿಸಿರ ಲಿಲ್ಲವೆ? ಬಿ. ಡಿ. ಎ.ಗೆ ಓರ್ವ ಉತ್ಸಾಹಿ ಅಧ್ಯಕ್ಷರ ಅಗತ್ಯವಿತ್ತು. ಅಲ್ಲಿ ನಿವೇಶನ ಹಂಚಿಕೆ ಇತ್ಯಾದಿ ಕೆಲಸ ಕಾರ್ಯ ಬೇಗ ನಡೆ ಯುವಂತಾಗಲೆಂದು ಶ್ರೀ ರೆಡ್ಡಿ ಅವರನ್ನು ನೇಮಕ ಮಾಡಲಾಯಿತು. ಅದುವರೆಗೂ ಈ ಪ್ರಕರಣದಲ್ಲಿ ಏನೂ ಆಗದಿದ್ದುದು ಹಠಾತ್ತನೆ ಸಾಕಷ್ಟು ಪತ್ರಿಕಾ ಪ್ರಚಾರ ನಡೆಯಿತು. ಇದರಲ್ಲಿ 'ರಾಜಕೀಯವಿದೆ. ಶ್ರೀ ರೆಡ್ಡಿ ಅವರು ಈಗಲೂ ಕೇಂದ್ರ ಸರ್ಕಾರದ ಅನೇಕ ಕಂಪೆನಿಗಳಲ್ಲಿ ಸದಸ್ಯ ರಾಗಿ ಮುಂದುವರಿದಿಲ್ಲವೆ?

ಪ್ರತಿಪಕ್ಷದ ನಾಯಕರ ಕೆಲಸ ಏನು?

ಪ್ರ: ಪ್ರಜಾತಂತ್ರದಲ್ಲಿ ಪ್ರತಿಪಕ್ಷಗಳ ಹೊಣೆಗಾರಿಕೆ ಏನೆಂಬುದು ಸ್ಪಷ್ಟ ವಾಗಿದೆ. ನಮ್ಮ ರಾಜ್ಯದಲ್ಲಿ ಪ್ರತಿಪಕ್ಷದಿಂದ ಸಿಗಬೇಕಾದ ರಚನಾತ್ಮಕ ಸಹಕಾರವು ಸಿಗುತ್ತಿದೆಯೆ?

ಹೆಗಡೆ: ಭ್ರಷ್ಟಾಚಾರ-ಅವ್ಯವಹಾರ ಗಳ ಬಗ್ಗೆ ಮನಸ್ವೀ ಆರೋಪಮಾಡುವದು ಹಾಗೂ ಪತ್ರಿಕೆಗಳಲ್ಲಿ ಪ್ರಚಾರ ಸಿಗೋ ರೀತಿ ಹೇಳಿಕೆ ನೀಡುವದು ಇವಿಷ್ಟೇ ಪ್ರತಿ ಪಕ್ಷದ ನಾಯಕರ (ಶ್ರೀ ಬಂಗಾರಪ್ಪ) ಮುಖ್ಯ ಕೆಲಸವಾಗಿದೆ. ಪ್ರತಿಪಕ್ಷದ ನಾಯಕರಾದವರು ಆದಷ್ಟೂ ಅಧ್ಯಯನ ಮಾಡಿ, ಸಾಕಷ್ಟು ಸಂಗತಿಗಳನ್ನು ಸಂಗ್ರ ಹಿಸಿ ಕೆಲಸ ಮಾಡಬೇಕಾಗುತ್ತದೆ.

ಪ್ರ: ಈ ರಾಜ್ಯವನ್ನು ಆರ್ಥಿಕ ದಿವಾಳಿ ತನಕ್ಕೆ ದೂಡುತ್ತಿದ್ದೀರೆಂದು ನಿಮ್ಮ ಸರ್ಕಾರವನ್ನು ಮಾಜಿ ಮುಖ್ಯಮಂತ್ರಿ ಶ್ರೀ ಗುಂಡೂರಾವ್ ಟೀಕಿಸಿದ್ದಾರೆ.

ಹೆಗಡೆ: ಅವರೇನಾದರೂ ಹೇಳಲಿ. ನಮ್ಮ ಸರ್ಕಾರ ಜನತೆಯ ಜೀವನ ಸ್ಥಿತಿ- ಗತಿ ಸುಧಾರಣೆಗೆ ಹಾಗೂ ಯೋಜನೆಗಳಿಗೆ ಅಧಿಕ ಹಣ ಒದಗಿಸುತ್ತಿದೆ. ಈಗ ಓವರ್ ಡ್ರಾಫ್ಟ್ ಸಾಲವೂ ಇಲ್ಲ. ವಾರ್ಷಿಕ ಯೋಜನೆ 651 ಕೋಟಿ ರೂ. ಎಂದು ನಿಗದಿಯಾಗಿದ್ದರೂ ಇನ್ನೂ ಅದಕ್ಕಿಂತ ಹೆಚ್ಚಿಗೆ ಖರ್ಚು ಮಾಡುತ್ತೇವೆಂದು ವಿಶ್ವಾಸದಿಂದ ಹೇಳಬಲ್ಲೆ. ○





ಕ್ರೀಡಾ ಮನೋಭಾವ: ಗುಂಡೂರಾಯರ ಯಶದ ಗುಟ್ಟು

ಸಂದರ್ಶನ

ನಾರಾಯಣ ಘುಳಿಗಿ

ಸ್ವತಃ ನಿಷ್ಣಾತ ಕ್ರೀಡಾಪಟುವಾಗಿರುವ ಹಿಂದಿನ ಮುಖ್ಯ ಮಂತ್ರಿ ಶ್ರೀ ಆರ್. ಗುಂಡೂರಾವ್ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ತಪ್ಪ್ತ ಆ ಕ್ರೀಡಾ ಮನೋಭಾವವನ್ನು ತೋರಿಸಿಕೊಡುತ್ತಾರೆ. ಅಂಥ ಭಾವನೆಯೇ ತಮಗೆ ತಾರಕ ಮಂತ್ರ ಎಂಬುದು ಅವರ ಅಭಿಪ್ರಾಯ.

ಇತ್ತೀಚೆಗೆ "ಕರ್ಮವೀರ" ದೀಪಾವಳಿ ವಿಶೇಷ ಸಂಚಿಕೆಗಾಗಿ ಅವರ ಸಂದರ್ಶನ ಪಡೆಯಲು ಹೋದಾಗ ರಾಯರು ತುಂಬಾ ಬಿಚ್ಚು ಮನಸ್ಸಿನಿಂದ ಮಾತನಾಡಿದರಲ್ಲದೇ ಅಧಿಕಾರದಲ್ಲಿ ಇದ್ದಾಗಲೂ ಒಂದೇ ಇಲ್ಲದಿದ್ದಾಗಲೂ ಒಂದೇ ಎಂಬುದನ್ನು ತೋರಿಸಿಕೊಟ್ಟರು.

ಕ್ರೀಡಾ ಮನೋಭಾವ ಹಾಗೂ ಸಮಾಜದಲ್ಲಿ ಸಮರಸರಾಗಿ ಬಾಳುವ ಅವರ ಜೀವನ ಪ್ರವೃತ್ತಿಯೇ ಅವರನ್ನು ರಾಜಕೀಯಕ್ಕೆ ಎಳೆತಂದಿತು. "ರಾಜಕೀಯ ರಂಗದ ಪ್ರವೇಶ ಬಂದು ಆಕಸ್ಮಿಕ. ರಾಜಕೀಯದಲ್ಲಿ ಈಜಲು [illegible] ಗಾಗಿ ಕ್ರೀಡಾ ಮನೋಭಾವದಿಂದಲೇ ಬಂದಿದ್ದೇನೆ. ಇಂದಿಗೂ ಅದೇ ಭಾವನೆಯಿಂದಲೇ ಮುಂದುವರಿಯುತ್ತಿದ್ದೇನೆ" ಎಂಬ ಮಾತಿನಲ್ಲಿ ಅವರ ಯಶಸ್ಸಿನ ಗುಟ್ಟೇನು ಎಂಬುದು ತಾನೇ ಅಭಿವ್ಯಕ್ತವಾಯಿತು.


"ಅಪಯಶದ ಪ್ರಸಂಗಗಳೆಲ್ಲವೂ ಮುಂದಿನ ಯಶಸ್ಸಿನ ಮೆಟ್ಟಿಲುಗಳು" ಎಂದು ನುಡಿದಾಗ, ಜೀವನದಲ್ಲಿನ ಏರಿಳಿತಗಳನ್ನು ಸಮಚಿತ್ತರಾಗಿಯೇ ಸ್ವೀಕರಿಸಿದ್ದು ಸ್ಪಷ್ಟವಾಗಿತ್ತು.

ಮುಖ್ಯಮಂತ್ರಿಯಾಗಿದ್ದಾಗ ಶ್ರೀ ಗುಂಡುರಾಯರು ತುಂಬಾ ಚೈತನ್ಯಶಾಲಿ, ಭಾರಿ ಚಟುವಟಿಕೆ. ಇಂದಿಗೂ ಅದೇ ಚಟುವಟಿಕೆ ಅಬಾಧಿತವಾಗಿ ಸಾಗಿದ್ದು ಒಂದು ವೈಶಿಷ್ಟ್ಯ. ರಾಜಕೀಯ, ಸಾಮಾಜಿಕ ಹಾಗೂ ಇನ್ನಿತರ ಯಾವ ಕ್ಷೇತ್ರದಲ್ಲಿಯೂ ಅವರ ಪ್ರಭಾವ ಇದ್ದೇ ಇದೆ. ಅವರು ಅಲಕ್ಷಿತ ವ್ಯಕ್ತಿಯಾಗಿಲ್ಲ ಎಂಬುದು ಅವರ ಕಾರ್ಯಭಾರ ಜನಸಂಪರ್ಕಗಳಿಂದ ತಾನೇ ಸ್ಪಷ್ಟ ಗೋಚರ.

"ರಾಯರು ತುಂಬಾ "ಬಿಝಿ" ಮೀಟ್ ಮಾಡೋದೇ ಕಷ್ಟ" ಎಂಬ ಉತ್ತರ ಅವರ ಸಿಬ್ಬಂದಿಯಿಂದ ಸಿಕ್ಕಿತ್ತು. ಆದರೂ ಯತ್ನಿಸಿ ಅವರನ್ನು ಸಂದರ್ಶಿಸುವ ಅವಕಾಶ ಪಡೆದುಕೊಂಡೆ. ಅವರ ನಿವಾಸಕ್ಕೆ ಹೋದಾಗ ರಾಯರು ಎಡೆಬಿಡದ ಕೆಲಸಗಳಲ್ಲಿ ನಿರತರಾಗಿದ್ದರು. ಅರ್ಧ ಗಂಟೆ ಕಾದ ಬಳಿಕ ನನ್ನನ್ನು ಬರಮಾಡಿಕೊಂಡರು.

"ಮುಖ್ಯಮಂತ್ರಿ ಆಗಿದ್ದಾಗಿನಕಿಂತ ಈಗಲೇ ಕೆಲಸ ಜಾಸ್ತಿಯಾಗಿದೆ. ಜನರು ತಮ್ಮ ಅನೇಕ ಸಮಸ್ಯೆಗಳನ್ನು ಈಗಲೂ ನನ್ನ ಬಳಿ ತರುತ್ತಾರೆ. ಅವನ್ನು ನಿವಾರಿಸಲು ಸಾಧ್ಯವಾದ ಮಟ್ಟಿಗೂ ಪ್ರಯತ್ನಿಸುತ್ತಿದ್ದೇನೆ" ಇದರಲ್ಲಿ ಯಾವ ತೆಗ್ಗಿಕೆಯ ಲೇಶವೂ ಇರಲಿಲ್ಲ. ಅವರ ನಿವಾಸದಲ್ಲಿ ಸೇರಿದ್ದ ಸಮುದಾಯವೇ ಇದಕ್ಕೆ ಸಾಕ್ಷಿ.

ರಾಜಕೀಯವನ್ನು ಬಿಟ್ಟು ಇನ್ನೇನಾದರೂ ಮಾತನಾಡಬೇಕೆಂದಿದ್ದರೂ ಆ ವಿಚಾರ ನುಸುಳಿಬಿಟ್ಟಿತು. ರಾಜಕೀಯ ಕ್ಷೇತ್ರಕ್ಕೆ ನೀವು ಪ್ರವೇಶಿಸಿದ [illegible]? ಮೊದಲಿನಿಂದಲೂ ಅದರಲ್ಲಿ ಆಸಕ್ತಿ ಇದ್ದಿತ್ತೆ? ಎಂಬ [illegible]



"ರಾಜಕೀಯದಲ್ಲಿ ಆಸಕ್ತಿ ಇರಲಿಲ್ಲ. ಅದೇ ನನ್ನ ಸೆಳೆಯಿತು" ಎಂದು ಹೇಳಿದಾಗ "ಹೆಳವನಿದ್ದಲ್ಲಿಗೆ ಹೊಳೆ ಬಂದಿತು" ಎಂಬ ಬೇಂದ್ರೆ ಮಾತು ನೆನಪಿಗೆ ಬಂದಿತು.

"ಇಂಟರ್ ಮೀಡಿಯೆಟ್ ಪರೀಕ್ಷೆ ಮುಗಿಸಿದ ನಂತರ, ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ನೌಕರಿ ಸಿಕ್ಕರೆ ಸಾಕು ಎಂದು ಪರದಾಡುತ್ತಿದ್ದೆ. ಆಗ 1961–62 ರಲ್ಲಿ ಕುಶಾಲನಗರ ನಗರಸಭೆಯ ಚುನಾವಣೆಗಳು ನಡೆಯುತ್ತಿದ್ದವು. ಆಟಗಾರನಾಗಿದ್ದ ನನಗೆ ದೊಡ್ಡ ಸ್ನೇಹಿತರ ಬಳಗವಿತ್ತು. ಅವರು ಒತ್ತಾಯಿಸಿದರು. ನಗರಸಭೆಗೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದೆ. ಆಯ್ಕೆಗೊಳ್ಳುವೆನೆಂಬ ಭರವಸೆ ನನಗಿರಲಿಲ್ಲ. ಆದರೂ ಆಯ್ಕೆಗೊಂಡೆ. ಮುಂದೆ 1964 ರಲ್ಲಿ ನಗರಸಭೆಯ ಅಧ್ಯಕ್ಷ ಸ್ಥಾನಕ್ಕೂ ಏರಿದೆ. ಹೀಗೆ ಜೀವನದಲ್ಲಿ ನೌಕರಿಗಾಗಿ ಪರದಾಡುತ್ತಿದ್ದ ನನಗೆ ರಾಜಕೀಯದ ದೋಣಿ ಸಿಕ್ಕಿತು. ನನ್ನನ್ನು ಎತ್ತಿಕೊಂಡಿತು. ಇದೇ ನನ್ನ ರಾಜಕೀಯ ಜೀವನಕ್ಕೆ ನಾಂದಿಯಾಯಿತು" ಎಂದು ರಾಯರು ಹಿಂದಿನ ವಿದ್ಯಮಾನಗಳನ್ನು ನಿರೂಪಿಸಿದರು.

ಪಕ್ಷೇತರರಾಗಿದ್ದ ನೀವು ಕಾಂಗ್ರೆಸ್ಸಿನತ್ತ ಆಕರ್ಷಿತರಾದದ್ದೇಕೆ ಎಂದು ಕೇಳಿದಾಗ ರಾಯರು ಕ್ಷಣಕಾಲ ತಡೆದು ತಮ್ಮ ರಾಜಕೀಯ ಗುರು ದಿ॥ ದೇವರಾಜ ಅರಸರನ್ನು ನೆನೆದುಕೊಂಡರು. ಯುವಕರನ್ನು ಕಾಂಗ್ರೆಸ್ಸಿನತ್ತ ಆಕರ್ಷಿಸಲು ಅವರು ನಡೆಸಿದ ಯತ್ನಗಳನ್ನು ವಿವರಿಸಿದರು. ಯುವಕರಲ್ಲಿ ಅವರು ಇರಿಸಿದ್ದ ವಿಶ್ವಾಸವನ್ನು ಎತ್ತಿ ತೋರಿಸಿದರು. ಅವರೇ ಪ್ರೇರೇಪಿಸಿ ತಮ್ಮನ್ನು 1965 ರಲ್ಲಿ ಕಾಂಗ್ರೆಸ್ಸಿನಲ್ಲಿ ಸೇರಿಸಿದರು ಎಂದರು.

"ಕಾಂಗ್ರೆಸ್ ಪಕ್ಷ ಜನಸೇವೆಗಾಗಿ ತನ್ನನ್ನು ಸಮರ್ಪಿಸಿಕೊಂಡಿದೆ. ಉಜ್ವಲವಾದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಬಡವರ ಬಗ್ಗೆ ಅತ್ಯಂತಿಕ ಕಳಕಳಿಯನ್ನು ಹೊಂದಿರುವ ಇಂಥ ಹಿರಿಯ ರಾಜಕೀಯ ಪಕ್ಷದ ಸದಸ್ಯನಾಗಿ ಸೇವೆ ಸಲ್ಲಿಸುವದು ತಮಗೆ ಅತ್ಯಂತ ಸಮಾಧಾನ ತಂದಿದೆ" ಎಂದೂ ಅವರು ನುಡಿದರು.

ಕಾಂಗ್ರೆಸ್ ಪಕ್ಷದಲ್ಲಿನ ಏಣಿಗಳನ್ನು ಏರುವದನ್ನೂ ಆನುಷಂಗಿಕವಾಗಿ ವಿವರಿಸಿದ ಶ್ರೀ ಗುಂಡೂರಾಯರು, ಕೊಡಗಿನಲ್ಲಿ ಕಾಂಗ್ರೆಸ್ ಸದಸ್ಯ, ನಂತರ ಕಾರ್ಯದರ್ಶಿ ಆದುದನ್ನು ತಿಳಿಸಿದರು. ಕೊಡಗಿನಲ್ಲಿ ಯುವ ಕಾಂಗ್ರೆಸ್ಸನ್ನು ಸಂಘಟಿಸಿ, ದಿಲ್ಲಿಯಲ್ಲಿ ನಡೆದ ಯುವ ಕಾಂಗ್ರೆಸ್ ಶಿಬಿರದಲ್ಲಿ ಪಡೆದ ಸ್ಫೂರ್ತಿದಾಯಕ ತರಬೇತಿಯನ್ನು ನೆನೆದುಕೊಂಡರು.


ತಮಗೆ ಅನೇಕ ಅಧಿಕಾರ ಸ್ಥಾನಗಳನ್ನೂ ಅಷ್ಟೇ ಅಲ್ಲದೇ ಕರ್ನಾಟಕದ ಅತ್ಯುನ್ನತವಾದ ಮುಖ್ಯಮಂತ್ರಿ ಸ್ಥಾನವನ್ನೂ ಕೊಡಮಾಡಿದ ಕಾಂಗ್ರೆಸ್ ಪಕ್ಷಕ್ಕೆ ಕೃತಜ್ಞತೆಯನ್ನೂ ಸೂಚಿಸಿದರು.


ಅಧಿಕಾರದಿಂದ ದೂರವಾಗಿರುವ ರಾಯರ ರೀತಿ ನೀತಿ ಮನೋಭಾವ ತಿಳಿಯಬೇಕೆಂಬ ಕುತೂಹಲವಿತ್ತು. ನಾನು ಅಳುಕುತ್ತ ಕೇಳಿದ ಪ್ರಶ್ನೆಗೆ ಅವರು ಅಷ್ಟೇ ನಿರಾಳವಾಗಿ ಉತ್ತರಿಸಿದರು.

ಅಧಿಕಾರ ಹಾಗೂ ಅಧಿಕಾರರಾಹಿತ್ಯ ತಮ್ಮ ಜೀವನ ಕ್ರಮದಲ್ಲಿ ಯಾವ ಬದಲಾವಣೆಗಳನ್ನೂ ಮಾಡಿಲ್ಲ ಎಂದು ಅವರು ನೇರವಾಗಿ ನುಡಿದರು.

"ನಾನು ಕುಶಾಲನಗರ ಪುರಸಭೆ ಸದಸ್ಯನಾದಾಗಿನಿಂದ ಮೊದಲು ಮಾಡಿ 1983 ರಲ್ಲಿ ಮೂರು ವರ್ಷಗಳ ಮುಖ್ಯಮಂತ್ರಿ ಸ್ಥಾನ ಕೊನೆಗೊಳಿಸುವವರೆಗೂ ಒಂದಿಲ್ಲೊಂದು ರೀತಿಯ ಅಧಿಕಾರ ಸ್ಥಾನದಲ್ಲಿದ್ದು ಸೇವೆ ಸಲ್ಲಿಸಿದ್ದೇನೆ. ಆದರೆ ಈ ರಾಜಕೀಯ ಈ ಅಧಿಕಾರ ನನಗೆ ಆಕಸ್ಮಿಕವಾಗಿ ಒದಗಿ ಬಂದವುಗಳು. ಆದ್ದರಿಂದ ಅದಕ್ಕೆ ಅಂಟಿಕೊಂಡು ಚಡಪಡಿಸುವ ಪ್ರಸಂಗ ನನಗಂತೂ ಇಲ್ಲ. ನನಗೆ ಎಲ್ಲದಕ್ಕಿಂತ ಸೇವೆ ಮುಖ್ಯ. ಯಾರಿಗಾದರೂ ನನ್ನಿಂದ ಸಹಾಯ ಒದಗಿದ್ದಾದರೆ ಅದೇ ನನಗೆ ತೃಪ್ತಿ. ಹೀಗಿರುವದರಿಂದ ಈಗ ಅಧಿಕಾರದಲ್ಲಿಲ್ಲದಿದ್ದರೂ ಜನರು ನನ್ನ ಬಳಿ ಬರುತ್ತಾರೆ. ಅಧಿಕಾರದಿಂದ ದೂರ ಇದ್ದುದಕ್ಕೆ ನೋವಾಗಲಿ ಖಿನ್ನ ಅನುಭವವಾಗಲಿ ನನಗಿಲ್ಲ" ಎಂದರು.

ಪತ್ರಿಕೆಯವರೊಡನೆ ಅವರ ಸಂಬಂಧ ಹೇಗಿದೆ? ಯಾವ





ಪತ್ರಿಕೇತರ ಓದಿಗೆ "ಕರ್ಮವೀರ"ದ ಪಾತ್ರ

"ಬಾಲ್ಯದಲ್ಲಿ ನಮ್ಮ ಪತ್ರಿಕೇತರ ಓದು ಆರಂಭವಾದದ್ದೇ 'ಕರ್ಮವೀರ'ದಿಂದ. ಅದು ನಮ್ಮ ನೆಚ್ಚಿನ ಪತ್ರಿಕೆ. ಅದರ ಪ್ರಕಟಣೆ ನಿಂತಾಗ ನಮಗೆ ತುಂಬಾ ಕಸಿವಿಸಿ ಎನಿಸಿತು. ಕರ್ಮವೀರ ಪುನಃ ಆರಂಭವಾಗಬೇಕು. ಅದಕ್ಕೆ ಉಜ್ವಲ ಭವಿಷ್ಯವಿದೆ."

ರಾಜ್ಯದ ಹಿಂದಿನ ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ್ ಹಾಗೂ ಅವರ ಪತ್ನಿ ಶ್ರೀಮತಿ ವರಲಕ್ಷ್ಮಿ ಅವರ ಅಭಿಪ್ರಾಯವಿದು.

'ಕರ್ಮವೀರ'ದ ದೀಪಾವಳಿ ಸಂಚಿಕೆ ಈ ಸಲ ಹೊರಬಿದೆ ಎಂದು ನಾನು ಸಂದರ್ಶನದ ಆರಂಭದಲ್ಲಿ ತಿಳಿಸಿದಾಗ ಇಬ್ಬರೂ ತುಂಬಾ ಸಂತೋಷಪಟ್ಟರು. ದೀಪಾವಳಿಯ ಸಂಚಿಕೆಯೊಂದಿಗೆ ಕರ್ಮವೀರ ಮತ್ತೆ ಆರಂಭವಾಗಿ ಮುಂದುವರಿಯಲಿ ಎಂದು ಹಾರೈಸಿದರು.

ನಾವು ನಮಗೆ ಸನಿಹದಲ್ಲಿಯ ಮೈಸೂರಿಗೆ ಹೋದಾಗಲೆಲ್ಲ ನಮ್ಮ ತಂದೆ ನಮಗೆ ಕರ್ಮವೀರದ ಸಂಚಿಕೆಗಳನ್ನು ತರಲು ಹೇಳುತ್ತಿದ್ದರು. ಅವರಿಗೆ ಅದು ತುಂಬಾ ಅಚ್ಚುಮೆಚ್ಚಿನ ಅಭಿಮಾನದ ಪತ್ರಿಕೆಯಾಗಿತ್ತು ಎಂದರು ಗುಂಡೂರಾಯರು.

'ಕರ್ಮವೀರ'ಕ್ಕೆ ಉಜ್ವಲವಾದ ರಾಷ್ಟ್ರೀಯ ಹಿನ್ನೆಲೆಯಿದೆ. ನಮಗೆ ಚಿಕ್ಕಂದಿನಲ್ಲಿ ಅದು ಇಡೀ ಜಗತ್ತಿನ ದರ್ಶನ ಮಾಡಿಸುತ್ತಿದ್ದ ಪತ್ರಿಕೆ. ನಮ್ಮಲ್ಲಿ ಪತ್ರಿಕೇತರ ಓದಿನ ಅಭಿರುಚಿಯನ್ನು ಕುದುರಿಸಿದ ಶ್ರೇಯಸ್ಸು ಕರ್ಮವೀರ ಪತ್ರಿಕೆಯದು ಎಂದು ಗುಂಡೂರಾವ್ ತಮ್ಮ ಹದಿವಯದ ದಿನಗಳನ್ನು ನೆನೆಸಿಕೊಂಡು ಹೇಳಿದರು.

ಸಾಂಪ್ರದಾಯಿಕ ವಾತಾವರಣವಿದ್ದ ನಮ್ಮ ಮನೆಯಲ್ಲಿ ನಮ್ಮ ತಂದೆ ನಮಗೆ 'ಕರ್ಮವೀರ'ವನ್ನು ಕಡ್ಡಾಯವೆನ್ನುವ ರೀತಿಯಲ್ಲಿ ಓದಲು ಹಚ್ಚುತ್ತಿದ್ದರು. ಅದೇ ಅಭಿಮಾನ ಆಗ ಬೇರೆ ಪತ್ರಿಕೆ ಬಗ್ಗೆ ಇರಲಿಲ್ಲ ಎಂದು ಶ್ರೀಮತಿ ವರಲಕ್ಷ್ಮಿ ಗುಂಡೂರಾವ್ ನುಡಿದರು.

ಅಭಿಪ್ರಾಯ ಹೊಂದಿದ್ದಾರೆ ಎಂಬುದು ನನ್ನ ಕುತೂಹಲವಾಗಿತ್ತು. ನಾನೆಣಿಸಿದ್ದಂತೆ ಯಾವ ಕಹಿಭಾವನೆಯೂ ಅವರಲ್ಲಿಲ್ಲ.

"ಪತ್ರಕರ್ತರು ಸತ್ಯ ಹಾಗೂ ವಸ್ತುನಿಷ್ಠ ರೀತಿಯಲ್ಲಿ ಬರೆಯುತ್ತಾರೆ. ನಾನು ಅಧಿಕಾರದಲ್ಲಿದ್ದಾಗ ನಮ್ಮ ಸರಕಾರವನ್ನು ಬಹಳ ಕಠೋರವಾಗಿ ಟೀಕಿಸಿರಬಹುದು. ನಮ್ಮ ಅನೇಕ ದೋಷಗಳನ್ನು ಅವರು ಎತ್ತಿ ತೋರಿಸಿದ್ದಾರೆ. ಆದರೆ ಹೀಗೆ ಮಾಡುವಲ್ಲಿ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಪತ್ರಕರ್ತರಿಗೆ ಆ ರೀತಿಯ ಸ್ವಾತಂತ್ರ್ಯ ಇರಬೇಕು. ನಿರ್ಭಯವಾಗಿ ಸ್ವತಂತ್ರವಾಗಿ ತಮ್ಮ ಕರ್ತವ್ಯ ನಿರ್ವಹಿಸುವ ನಮ್ಮ ಪತ್ರಕರ್ತರ ಬಗ್ಗೆ ನನಗೆ ತುಂಬಾ ಅಭಿಮಾನವಿದೆ. ಮೆಚ್ಚಿಗೆ ಇದೆ. ನಾನು ಕೆಲವೊಮ್ಮೆ ಪತ್ರಕರ್ತರನ್ನು ಟೀಕಿಸಿರಬಹುದು. ಆದರೂ ಅವರು ಒಳ್ಳೇ ಕೆಲಸ ಮಾಡುತ್ತಿದ್ದಾರೆಂಬುದು ನನ್ನ ಅಭಿಮತ. ಎನ್. ಟಿ. ರಾಮರಾವ್ ಅವರು ಅಧಿಕಾರಕ್ಕೆ ಬರುವ ಮೊದಲು ಅವರನ್ನು ಹಾಡಿ ಹೊಗಳುತ್ತಿದ್ದ ಪತ್ರಕರ್ತರು ಈಗ ಅವರ ಸರಕಾರವನ್ನು ಟೀಕಿಸುತ್ತಿಲ್ಲವೇ? ನಮ್ಮ ರಾಜ್ಯದ ಜನತಾ ಸರಕಾರದ ಲೋಪದೋಷಗಳನ್ನು ಎತ್ತಿ ತೋರಿಸುವಲ್ಲಿ ನಮ್ಮ ಪತ್ರಿಕೆಗಳು ಹಿಂದೆ ಬಿದ್ದಿವೆ!" ಎಂದು ಅವರು ಪ್ರಶ್ನಿಸಿದರು.

ನಮ್ಮ ರಾಜ್ಯದಲ್ಲಿನ ಜನತಾ ಸರ್ಕಾರದ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು ನೇರವಾಗಿ ಪ್ರಶ್ನಿಸಿದೆ.

ಶ್ರೀ ರಾಯರು "ಈಗಿನ ಸರಕಾರ ನಿಷ್ಕ್ರಿಯವಾಗಿದೆ. ಏನೂ ಕೆಲಸ ಮಾಡುತ್ತಲಿಲ್ಲ. ಬರೀ ತತ್ವಗಳ ಪಠಣ ನಡೆದಿದೆಯೇ ಹೊರತು ಜನತೆಗೆ ಯಾವ ಪ್ರಯೋಜನವೂ ಆಗುತ್ತಿಲ್ಲ" ಎಂದರು.

"ವಿರೋಧಿ ಪಕ್ಷವಾಗಿರುವ ಕಾಂಗ್ರೆಸ್ಸು ಜನತಾ ಆಡಳಿತದ ಲೋಪದೋಷಗಳನ್ನು ಬಯಲಿಗೆಳೆಯಲು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗಿದೆ" ಎಂದು ಅಭಿಪ್ರಾಯಪಟ್ಟರು.

ಅವರು ಇತ್ತೀಚೆಗೆ ತುಂಬ ಸಮಯ ಓದುವದರಲ್ಲಿ ಕಳೆಯುತ್ತಿದ್ದಾರೆಂಬುದೂ ತಿಳಿಯಿತು. ಅವರು ಮುಖ್ಯಮಂತ್ರಿಗಳಾಗಿದ್ದಾಗ ಅನೇಕ ಸಂದರ್ಭಗಳಲ್ಲಿ ಹಳೆಯ ಗ್ರಂಥಗಳಲ್ಲಿನ ಉಲ್ಲೇಖನ ಮಾಡಿದ್ದು ನನಗೆ ನೆನಪಿಗೆ ಬಂದಿತು. ಈ ಮೊದಲು ಅವರನ್ನು ಕಾಣಲು ಹೋದಾಗ ಪತ್ನಿ ಸಮೇತರಾಗಿ ತಮ್ಮ ತೋಟಕ್ಕೆ ಹೊರಡುವವರಲ್ಲಿದ್ದರು. ಇದೆಲ್ಲ ಶ್ರೀ ಗುಂಡೂರಾಯರ ಹವ್ಯಾಸಗಳ ವಿವಿಧ ಮುಖಗಳನ್ನು ತೋರಿಸಿತು. ಅವರೊಡನೆ ನಡೆಸಿದ್ದ ಸಂದರ್ಶನ ತುಂಬಾ ಅನೌಪಚಾರಿಕವಾಗಿತ್ತು. ಅವರೂ ಸಹ ಅಷ್ಟೇ ಸಹಜ ರೀತಿಯಲ್ಲಿಯೇ ಉತ್ತರಿಸಿದರು. ಅವರೊಡನೆ ಹರಟುವದೂ ಒಂದು ಸಂತೋಷ.

○



ಜನಹಿತ ರಕ್ಷಣೆಯ ಹೊಣೆ

ಮಳೀಮಠರ ಮನನೀಯ ವಿಚಾರ



“ನ್ಯಾಯಾಂಗ ಮತ್ತು ಪತ್ರಿಕಾರಂಗ ಇವೆರಡೂ ಜನತೆಯ ಹಿತರಕ್ಷಣೆ ಮಾಡುವ ಶಕ್ತಿಗಳಾಗಿವೆ. ಒಂದು ಸಂದರ್ಭದಲ್ಲಿ ನ್ಯಾಯಾಂಗವು ಪ್ರಭಾವಿಯಾಗಿ ಕಾರ್ಯ ನಿರ್ವಹಿಸಿದ್ದರೆ, ಮತ್ತೊಂದು ಸಂದರ್ಭ ದಲ್ಲಿ ಪತ್ರಿಕೆಗಳು ಮಹತ್ವದ ಪಾತ್ರ ನಿರ್ವ ಹಿಸಿವೆ. ಇವೆರಡೂ ಪ್ರಜಾಪ್ರಭುತ್ವದ ರಕ್ಷಣೆಗೆ ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸುತ್ತವೆ.”

ಕರ್ನಾಟಕದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಶ್ರೀ ವಿ. ಎಸ್. ಮಳೀಮಠ ಅವರು ವ್ಯಕ್ತಪಡಿಸಿದ ವಿಚಾರ ಗಳು ಇವು:

“ಕರ್ಮವೀರ” ದೀಪಾವಳಿ ವಿಶೇಷ ಸಂಚಿಕೆಗಾಗಿ ಪಡೆದ ಸಂದರ್ಶನದ ಕಾಲಕ್ಕೆ ಅವರು ನ್ಯಾಯದಾನ ಹಾಗೂ ನ್ಯಾಯಾಂ ಗದ ಬಗ್ಗೆ ಕೇಳಿದ ಅನೇಕ ಪ್ರಶ್ನೆಗಳಿಗೆ ಬಿಚ್ಚು ಮನಸ್ಸಿನಿಂದ ಉತ್ತರಿಸಿದರು.

‘ಕರ್ಮವೀರ’ ‘ಸಂಯುಕ್ತ ಕರ್ನಾಟಕ’ ನಮ್ಮ ಜೀವನದ ಅವಿಭಾಜ್ಯ ಅಂಗಗಳು. ಇಂದಿಗೂ ನಾನು ತಪ್ಪದೇ ಸಂಯುಕ್ತ ಕರ್ನಾಟಕದ ಹುಬ್ಬಳ್ಳಿ ಆವೃತ್ತಿಯನ್ನೂ ಓದುತ್ತಿದ್ದೇನೆ ಎಂದು ಅವರು ಅಭಿಮಾನ ದಿಂದ ನುಡಿದರು.

ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ತರಲು ಅಥವಾ ಅದರಲ್ಲಿ ಹಸ್ತಕ್ಷೇಪ ಮಾಡಲು ಯಾರೂ ಯತ್ನ ಮಾಡದಂತೆ ಪತ್ರಿಕೆಗಳು ನೋಡಿಕೊಳ್ಳಬೇಕಾಗಿದೆ. ಅದ ಕ್ಕಾಗಿ ಪತ್ರಿಕೆಗಳು ಸದಾಕಾಲ ತುಂಬ ಜಾಗೃತವಾಗಿರಬೇಕು ಎಂದೂ ಅವರು ಈ ಸಂದರ್ಭದಲ್ಲಿ ಕೇಳಿಕೊಂಡರು.

ತುರ್ತು ಪರಿಸ್ಥಿತಿಯಲ್ಲಿ ಹಾಗೂ ಇನ್ನಿ ತರ ಸಂದರ್ಭಗಳಲ್ಲಿ ಪತ್ರಿಕೆಗಳು ವಹಿಸಿದ ಪಾತ್ರವನ್ನು ಅವರು ಪ್ರಶಂಸಿಸಿದರು.

ಬಡವರಿಗೆ ಕಾನೂನು ನೆರವು ಒದಗಿಸು ತ್ತಿರುವ ಯೋಜನೆಯು ಇನ್ನೂ ಹೆಚ್ಚು ಸಫಲವಾಗಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಕಾನೂನಿನ ನೆರವು

ಸಂದರ್ಶನ :

ಧ್ರುವರಾಜ ಮುತಾಲಿಕ ದೇಸಾಯಿ

ಬೇಕಾಗಿರುವ ಬಡವರಿಗೆ ಅವನ ಆಯ್ಕೆಯ ವಕೀಲರು ಸಿಕ್ಕುವಂತಾಗಬೇಕು. ಸಮರ್ಥ ವಕೀಲರ ಸೇವೆ ದೊರಕಿದರೆ ಮಾತ್ರ ಕಾನೂನು ನೆರವು ಯೋಜನೆ ಸಾರ್ಥಕವಾಗುವದು. ಸರಕಾರವು ತನ್ನ ಆಯ್ಕೆಯ ವಕೀಲನನ್ನು ಒದಗಿಸಿದ ಮಾತ್ರಕ್ಕೆ ಈ ಉದ್ದೇಶ ಸಫಲವಾಗದು. ಅನೇಕ ಹಿರಿಯ ವಕೀಲರಿಗೆ ಬಡವರಿಗೆ ಸಹಾಯ ಮಾಡಬೇಕೆಂಬ ಅಪೇಕ್ಷೆ ಇರು ತ್ತದೆ. ಅಂಥವರನ್ನು ವರ್ಷದಲ್ಲಿ ಇಂತಿಷ್ಟು ಪ್ರಮಾಣದಲ್ಲಿ ಬಡವರ ಪ್ರಕರಣಗಳನ್ನು ನಡೆಸುವಂತೆ ಕೇಳಿಕೊಳ್ಳಬೇಕು. ಧನಹೀನ ನಿಗೆ ಕಾನೂನಿನ ನೆರವು ಸಿಕ್ಕಬೇಕೆಂಬುದು ನಿಜ. ಆದರೆ ಹೀನ ಗುಣಮಟ್ಟದ ನೆರವು ಅಲ್ಲ ಎಂಬುದನ್ನು ಗಮನಿಸಬೇಕು.

ಶ್ರೇಷ್ಠ ನ್ಯಾಯಾಲಯದ ಎದುರು ಬರುವ ಪತ್ರಗಳನ್ನು ರಿಟ್ ಅರ್ಜಿಗಳೆಂದು ಪರಿಗಣಿಸಿ ಪರಿಹಾರ ಒದಗಿಸಿದ ಉದಾ ಹರಣೆಗಳಿವೆ ಎಂದು ಅವರು ಪ್ರಶ್ನೆ ಯೊಂದಕ್ಕೆ ಉತ್ತರಿಸಿದರು.

ಸಾರ್ವಜನಿಕ ಹಿತದ ದೃಷ್ಟಿಯಿಂದ ನ್ಯಾಯಾಲಯಕ್ಕೆ ಬರುವ ವ್ಯಕ್ತಿಗೆ ಪಾತ್ರತೆ



ನೀಡುವ ತತ್ವವನ್ನು ಸರ್ವೋಚ್ಚ ನ್ಯಾಯಾಲಯವು ಅಮಾನ್ಯೀಕರಿಸಿದೆ. ರಾಜ್ಯ ವ[illegible] ನ್ಯಾಯಾಲಯವು ವ್ಯಕ್ತಿಗತ ಸ್ವಾತಂತ್ರ್ಯಕ್ಕೆ ಧಕ್ಕೆ ತಪ್ಪಿದ ಸಂದರ್ಭದಲ್ಲಿ ಕೇವಲ ಸಾಮಾನ್ಯ ಪತ್ರವನ್ನು ವಿಚಾರಣೆಗೆ ಎತ್ತಿಕೊಂಡದ್ದುಂಟು. ಇದಲ್ಲದೇ ಮಾನವೀಯ ದೃಷ್ಟಿಯಿಂದ, ಕನಿಕರ ಹುಟ್ಟಿಸುವಂಥ ಪ್ರಕರಣಗಳನ್ನು ಔಪಚಾರಿಕ ವಿಧಾನ ಅನುಸರಿಸದೇ ಪರಿಶೀಲಿಸಿದ್ದೂ ಇದೆ ಎಂದು ಅವರು ವಿವರಿಸಿದರು.

ನ್ಯಾಯದಾನದಲ್ಲಿ ವಿಳಂಬ ಪರಿಹರಿಸುವ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಪ್ರಶ್ನಿಸಿದಾಗ, "ಇದರ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ತಡವಾಗಿ ಬರುವ ನ್ಯಾಯದಾನ ನ್ಯಾಯದ ನಿರಾಕರಣೆ ಎಂದು ಹೇಳುವದು ಒಂದು ಫ್ಯಾಶನ್ ಆಗಿ ಪರಿಣಮಿಸಿದೆ" ಎಂದರು.

ನ್ಯಾಯಾಧೀಶರು ತಮ್ಮ ಶಕ್ತಿ ಮೀರಿ ಪ್ರಕರಣಗಳನ್ನು ಇತ್ಯರ್ಥಪಡಿಸಿದಾಗ್ಯೂ ಬಾಕಿ ಉಳಿದರೆ ಅದಕ್ಕೆ ಯಾರು ಹೊಣೆ ? ಎಂದು ಮರು ಪ್ರಶ್ನೆ ಹಾಕಿದರು.

"ನ್ಯಾಯಾಲಯಕ್ಕೆ ಬರುವ ಪ್ರಕರಣಗಳ ಸಂಖ್ಯೆ ಸಿಕ್ಕಾಪಟ್ಟೆ ಹೆಚ್ಚಿದೆ. ಅದಕ್ಕೆ ತಕ್ಕ ಪ್ರಮಾಣದಲ್ಲಿ ನ್ಯಾಯಾಧೀಶರ ಸಂಖ್ಯೆ ಏರಿಲ್ಲ. ಉಳಿದ ಇಲಾಖೆಗಳಲ್ಲಿ ಅಧಿಕಾರಿಗಳ ಸಂಖ್ಯೆ ಹೆಚ್ಚಿದಂತೆ ನ್ಯಾಯಾಂಗದಲ್ಲಿ ಹೆಚ್ಚಿಲ್ಲ. ನಾನೇ 1970 ರಲ್ಲಿ 13ನೆಯ ನ್ಯಾಯಮೂರ್ತಿಯಾದಾಗ 13000 ಪ್ರಕರಣಗಳಿದ್ದವು. 1983ರಲ್ಲಿ ಮುಖ್ಯ ನ್ಯಾಯಮೂರ್ತಿಯಾದಾಗ 1,16,000 ಪ್ರಕರಣಗಳಿದ್ದವು. ನ್ಯಾಯಮೂರ್ತಿಗಳ ಸಂಖ್ಯೆ 24. ಜನಸಂಖ್ಯೆ ಹೆಚ್ಚಿದೆ, ಕಾನೂನುಗಳೂ ಹೆಚ್ಚಿವೆ. ಅದರಂತೆ ಪ್ರಕರಣಗಳೂ ಹೆಚ್ಚಿವೆ. ಕಾನೂನು ರಚಿಸುವಾಗ ಅದರಿಂದ ತಲೆ ಎತ್ತುವ ವ್ಯಾಜ್ಯಗಳ ಅಂದಾಜು ಅದಕ್ಕೆ ತಕ್ಕ ಮುಂಗಡ ಪತ್ರ ತಯಾರಿಸುವದಿಲ್ಲ. ಅದೊಂದು ಲೋಪ. ನ್ಯಾಯಾಂಗದ ಬೇಡಿಕೆ ಮಂಡಿಸುವವರೇ ಇಲ್ಲದಂತಾಗಿದೆ ಎಂದರು.

ನ್ಯಾಯಾಲಯದಲ್ಲಿ ವಿಳಂಬವಾಗುತ್ತದೆ ಎಂಬುದನ್ನು ಒಪ್ಪುವದಿಲ್ಲ ಎಂದು ನುಡಿದ ನ್ಯಾ. ಮೂ. ಮಳೀಮಠ ವರ್ಷಕ್ಕೆ 650 ಪ್ರಕರಣಗಳನ್ನು ಇತ್ಯರ್ಥ ಮಾಡುವ ನ್ಯಾಯಾಧೀಶ ಯೋಗ್ಯ ಎಂಬ ತತ್ವವಿದೆ. ಆದರೆ 2300 ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದುಂಟು. ಯಾರಿಗೆ ಹೇಳುವದು. ಈಗ ನಮಗೇ ನ್ಯಾಯ ಸಿಕ್ಕಬೇಕಾಗಿದೆ ಎಂದು ನಗುತ್ತ ನುಡಿದರು.

ಪ್ರಥಮ ಸ್ಥಾನ

ಪ್ರಕರಣಗಳನ್ನು ಇತ್ಯರ್ಥಪಡಿಸುವದರಲ್ಲಿ ಕರ್ನಾಟಕ ರಾಜ್ಯದ ಸ್ಥಾನ 14ನೆಯದಿದ್ದಿತು. ಈಗ ಪ್ರಥಮ ಸ್ಥಾನ ಪಡೆದಿದ್ದೇವೆ. ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಿಸದೇ ಬಾಕಿ ಉಳಿದ ಪ್ರಕರಣಗಳ ಸಂಖ್ಯೆಯನ್ನು ತಗ್ಗಿಸಿದ್ದೇವೆ. ಅದಕ್ಕೆ ಅನುಸರಿಸಿದ ವಿಧಾನಗಳೇ ಕಾರಣ. ಒಂದೇ ಪ್ರಶ್ನೆಯನ್ನು ಒಳಗೊಂಡ ನೂರಾರು ಪ್ರಕರಣಗಳನ್ನು ಒಂದೆಡೆ ಸೇರಿಸಿ ಒಂದೇ ವಾದ ವಿವಾದವನ್ನು ಕೇಳಿಕೊಂಡು ನಿರ್ಣಯಿಸುವದು, ಬಾಕಿ ಉಳಿದ ಪ್ರಕರಣಗಳ ಮೇಲೆ ನಿಗಾ ಇರಿಸಿ ಪರಿಣಾಮಕಾರಿ ಕ್ರಮ ಕೈಕೊಳ್ಳುವದು, ಆಯಾ ವಿಷಯದಲ್ಲಿಯೇ ಪರಿಣತರಾದ ನ್ಯಾಯಮೂರ್ತಿಗಳಿಗೆ ಅಂಥ ಪ್ರಕರಣಗಳನ್ನೇ ವಹಿಸಿಕೊಡುವದು, ನ್ಯಾಯಮೂರ್ತಿಗಳು ತಮ್ಮ ಕೆಲಸದಲ್ಲಿ ಮನಃಪೂರ್ವಕ ತೊಡಗುವಂತೆ ಮಾಡುವುದು, ನ್ಯಾಯಪೀಠಗಳನ್ನು ಮೇಲಿಂದ ಮೇಲೆ ಬದಲಿಸದಿರುವದು ಮುಂತಾದ ಕ್ರಮಗಳಿಂದ ಬೇಗ ನಿರ್ಣಯ ಕೊಡುವದು ಸಾಧ್ಯವಾಗಿದೆ ಎಂದರು.

ದಕ್ಷ ಮತ್ತು ಅಭ್ಯಾಸಪೂರ್ಣವಾದ ವಿವಾದಗಳು ಹಾಗೂ ನ್ಯಾಯಾಧೀಶನ ಸಾಮರ್ಥ್ಯ ಇವೇ ನ್ಯಾಯ ನಿರ್ಣಯ ಬೇಗ ನಡೆಯುವದಕ್ಕೆ ಮುಖ್ಯ ಅಂಶಗಳಾಗಿವೆ ಎಂದೂ ಅವರು ಒತ್ತಿ ಹೇಳಿದರು.

ನ್ಯಾಯಾಧೀಶರಾಗಿ ಹೊಸದಾಗಿ ನೇಮಕಗೊಳ್ಳುವವರಿಗೆ ಮಾತ್ರವಲ್ಲದೇ ಸೇವೆಯಲ್ಲಿ ಇರುವವರಿಗೂ ತರಬೇತಿ ಕೊಡುವ ಕಾರ್ಯಕ್ರಮವನ್ನು ತಾವು ಆರಂಭಿಸಿದ್ದಾಗಿಯೂ, ಈ ವಿಷಯದಲ್ಲಿ ಕರ್ನಾಟಕವೇ ಮೊದಲಿನದೆಂದೂ ಅವರು ಹೇಳಿದರು. 1984 ರಿಂದ ಒಬ್ಬ ನ್ಯಾಯಮೂರ್ತಿಯನ್ನು ನ್ಯಾಯಾಧೀಶರ ತರಬೇತಿ ಕಾರ್ಯದ ನಿರ್ದೇಶಕರನ್ನಾಗಿ ಮಾಡಲಾಗಿದೆ. ರಜಾ ದಿನಗಳಲ್ಲಿ ಮಾತ್ರ ಈ ವರ್ಗ ನಡೆಸಲಾಗುತ್ತಿತ್ತು. ಅದರಿಂದ ತರಬೇತಿ ಸಾಕಷ್ಟು ಜನರಿಗೆ ಒದಗದಂತಾಯಿತು. ಅದರ ಪರಿಣಾಮವಾಗಿ ಪತ್ರ ಮುಖೇನ ತರಬೇತಿ ನೀಡುವ ಉಪಕ್ರಮ ಆರಂಭಿಸಲಾಗಿದೆ.

"ನಾವು ಹೆಚ್ಚು ಕೆಲಸ ಮಾಡದೇ ಹೋದರೆ ಏನನ್ನೂ ಸಾಧಿಸಲಿಕ್ಕಾಗದು" ಎಂದು ಅವರು ಸ್ಪಷ್ಟವಾಗಿ ನುಡಿದರು.

ನ್ಯಾಯಾಧೀಶರಿಗೆ ತರಬೇತಿ ಕೊಡುವ ನಮ್ಮ ರಾಜ್ಯದಲ್ಲಿನ ಉಪಕ್ರಮ ಕೇಂದ್ರ ಸರಕಾರದ ಗಮನವನ್ನು ಸೆಳೆದಿದೆ. ಅದರಿಂದಾಗಿ ಬೆಂಗಳೂರಿನಲ್ಲಿ ಅಖಿಲಭಾರತ ನ್ಯಾಯಾಧೀಶರ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲು ಭಾರತ ಸರಕಾರ ಒಪ್ಪಿಕೊಂಡಿದೆ ಎಂಬುದನ್ನೂ ನ್ಯಾ. ಮೂ. ಮಳೀಮಠ ಬಹಿರಂಗಪಡಿಸಿದರು.

ನ್ಯಾಯಾಲಯಗಳು ನೀಡುವ ತೀರ್ಪುಗಳನ್ನು ಪ್ರಾಮಾಣಿಕವಾಗಿ ವಿಮರ್ಶಿಸಬಹುದು. ಅಂಥ ಯೋಗ್ಯವಾದ ವಿಮರ್ಶೆ ನ್ಯಾಯಾಲಯ ನಿಂದನೆಯ ವ್ಯಾಪ್ತಿಗೆ ಒಳಪಡುವದಿಲ್ಲ ಎಂದೂ ಅವರು ಈ ಸಂದರ್ಶನದ ಕಾಲಕ್ಕೆ ಸ್ಪಷ್ಟಪಡಿಸಿದರು.

ವ್ಯಾಪಾರಿ ಕೇಂದ್ರ

ಓದಿನಲ್ಲಿಲ್ಲ ಶಿಷ್ಯಂಗೆ ಆಸಕ್ತಿ.
ಇನ್ನೆಲ್ಲೋ ಹರಿಯುವದು
ಗುರುವಿನ ಶಕ್ತಿ !
ಶಾಲೆಗಳಾಗಿವೆ ಈಗ! "ವ್ಯಾಪಾರಿ
ಕೇಂದ್ರ"
ಇನ್ನೇನೆ ಮಾಡುವಸು ?
"ವಿದ್ಯಾಚಂದ್ರ" ॥ಅ॥

—ಸೀತಾರಾಮ ಪುರಾಣಿಕ



ಚಂಡನಾಡುತ ಬಂದ ವೀರನಾರಾಯಣ

ಶ್ರೀವನಿತೆಯ ಅರಸನು ವಿಮಲ
ರಾಜೀವ ಪೀಠನ ಪಿತನು
ನಂದನ ಕಂದನು ಸನಕಾದಿ ವಂದ್ಯನು
ಇಂದಿರಾ ರಮಣ ಶ್ರೀ ವೀರನಾರಾಯಣ
ಚಂಡನಾಡುತ ಬಂದನು–ಗದುಗಿಗೆ
ಲಕ್ಷ್ಮಣನಣ್ಣ ಸುರಮುನಿ ವಂದ್ಯನು.

ಬಲವಂತರಿಗೆ ಬಲನು ಮತ್ತೆ ತಾನು
ಬಲಹೀನರಿಗೂ ಬಲನು
ಬಲವಂತರಿಗೆ ಬಲ, ಬಲಹೀನರಿಗೆ ಬಲ
ಬಲುಹಿನಿಂದಲಿ ಶ್ರೀ ಭೂ ದೇವಿಯರೊಡಗೂಡಿ
ಚಂಡನಾಡುತ ಬಂದನು–ಗದುಗಿಗೆ
ಲಕ್ಷ್ಮಣನಣ್ಣ ಸುರಮುನಿ ವಂದ್ಯನು

ಬದರಿ ದ್ವಾರಕೆಗಳನು ದಾಟುತ
ಪಂಢರ ಪುರವು ತಿರುಪತಿಗಳನು
ಮುದದಿಂದ ಹೊರಟು ಶ್ರೀ ವೀರನಾರಾಯಣ
ಗದುಗಿನಭಿಮುಖನಾಗಿ ಮಂದಹಾಸದಿ–ಮುತ್ತಿನ
ಚಂಡನಾಡುತ ಬಂದನು–ಗದುಗಿಗೆ
ಲಕ್ಷ್ಮಣನಣ್ಣ ಸುರಮುನಿ ವಂದ್ಯನು

ಕ್ರೀಡಾದಿಗುಣ ಪರಿಪೂರ್ಣ
ರಮಾಚಿತ್ತ ಹೃದಯವಲ್ಲಭ ಸಂಪೂರ್ಣ
ಚಾರು ಚಕ್ರಗದಾ–ಶಂಖ ಪದ್ಮವಿಭೂಷಿತ
ಹೇಮ ಮುಕುಟ ವಜ್ರ ಖಚಿತ ವಿನೋದದಿ
ಚಂಡನಾಡುತ ಬಂದನು–ಗದುಗಿಗೆ
ಲಕ್ಷ್ಮಣನಣ್ಣ ಸುರಮುನಿ ವಂದ್ಯನು

ಭಕುತ ಹೃದಯ ಮಂದಾರ
ಕರುಣಾನಿಧೆ, ಸಕಲ ಸುಜನರಘ ಪರಿಹಾರ
ಭಕುತ ವತ್ಸಲ, ಕುಮಾರವ್ಯಾಸ ವರದ ಪ್ರಿಯ
ಕರ್ನಾಟ ಭಾರತ ಕಥನ ಕಾರಣ ಪುರುಷ
ಚಂಡನಾಡುತ ಬಂದನು-ಗದುಗಿಗೆ
ಲಕ್ಷ್ಮಣನಣ್ಣ ಸುರಮುನಿ ವಂದ್ಯನು

-ರಾಘವೇಂದ್ರ ಕುಲಕರ್ಣಿ

[ಗದುಗಿನಲ್ಲಿ ಶ್ರೀ ವೀರನಾರಾಯಣಸ್ವಾಮಿಯು ಶಂಖ, ಚಕ್ರ, ಗದಾ, ಪದ್ಮಗಳನ್ನಲ್ಲದೆ ಕೈಯಲ್ಲಿ ಚೆಂಡನ್ನು ಹಿಡಿದುಕೊಂಡು ನಿಂತಿದ್ದಾನೆ ಚೆಂಡನ್ನಾಡುತ್ತ ಗದುಗಿಗೆ ಬಂದ ಎಂದು ಪ್ರತೀತಿ]

ಬಯಸಿದ್ದೇನು ಆದದ್ದೇನು..



ಸಾಹಿತ್ಯದ ದಾರಿಯಲ್ಲಿ

'ತಾನೊಂದು ಬಗೆದರೆ ಮಾನವ, ಬೇರೊಂದು ಬಗೆವುದು ದೈವ" ಎಂಬ ಕವಿ ವಾಣಿ ನಿಜಕ್ಕೂ ಕಟು ಸತ್ಯ.

ನನ್ನ ಭಾವನೆಗಳೂ ಅನೇಕ ಬಯಕೆಗಳ ಹುಟ್ಟಿಗೆ ಬಿಟ್ಟ ಮಾಡುತ್ತಿತ್ತು. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ನನಗೆ ಯಾರು ಕೇಳಿದರೂ ತಪ್ಪದೆ ಹೇಳುತ್ತಿದ್ದೆ: 'ಮುಂದೆ ಓದಿ ನಾನು ಡಾಕ್ಟರ್ ಆಗು ತ್ತೇನೆ" ಎಂದು ಅವರೇನು ? ಅವರೆ ಬೇರೆ. ಆಗ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ನಾನು ದಿನವೂ ನನ್ನ ಹುಟ್ಟೂರಿನಿಂದ ಪಕ್ಕದ ಪಟ್ಟಣದ ಶಾಲೆಗೆ ಹೋಗಿ ಬರುತ್ತಿದ್ದೆ.


ಮಳೆಗಾಲದ ಒಂದು ದಿನ. ಬಿಳಿ ವಸ್ತ್ರ ಧರಿಸಿದ್ದೆ. ಅಂದು ಶಾಲೆಯಿಂದ ಹಳ್ಳಿಗೆ ಮರಳುತ್ತಿದ್ದೆ. ಜೊತೆಗೆ ಸ್ನೇಹಿತರೂ ಇದ್ದರು. ಆ ಕಾಲಿನಲ್ಲಿ ಮಳೆ ಘೋರ ಎಂದು ಸುರಿಯಿತ್ತು. ನಾನಿಯು ಮತ್ತು ನಲ್ಲೊಂದು ಚಿಕ್ಕ ನದಿ ಇದ್ದು ಅಲ್ಲಿ ಬಿಗಟು ಮಣ್ಣಿನ ಕೆಸರು (ಕೊಚ್ಚೆ). ಅರಿಯಲ್ಲದೇ ನನ್ನ ಎಡಗಾಲು ಕೆಸರಿನಲ್ಲಿ ಸಿಕ್ಕಿಕೊಂಡಿತು. ಸ್ನೇಹಿತರ ಸಹಾಯದಿಂದ ಕೊಸರಾಡಿ ಕೊಚ್ಚೆಯಿಂದ ಹೊರಬಂದೆ. ಆಗ ಅನುಭವಿಸಿದ ಕೊಂಚ ನೋವು, ಮುಂದೆ ಕಾಲು ವಿಕೃತಗೊಂಡಿತು.

ನಂತರದ ನಿರಂತರ ಚಿಕಿತ್ಸೆಗಳೆಲ್ಲವೂ ನಿಷ್ಪ್ರಯೋಜಕವಾದವು. ವೈದ್ಯರು ನನಗೆ ಸಾಯನ್ಸ್‌ಗೆ ಪ್ರವೇಶ ಕೊಡಿಸಬೇಡಿ ಎಂದು ಹೇಳಿದಾಗ ನನ್ನ ತಂದೆಯವರು ಒಪ್ಪದೇ ವಿಧಿ ಇರಲಿಲ್ಲ.

"ಕಾಲಾಯಾ ತಸ್ಮೈ ನಮಃ" ಎಂದು ಕೊಂಡ ನಾನು ಪಿ. ಯು. ಸಿ. ಆರ್ಟ್ಸ್‌ಗೆ ಪ್ರವೇಶ ಪಡೆದು, ಶ್ರದ್ಧೆಯಿಂದಲೇ ಓದಿ ಬಿ.ಎ. ಪದವೀಧರನಾದೆ. ಆಗ ನಾನೊಂದು ಹವ್ಯಾಸ ಬೆಳೆಸಿಕೊಂಡಿದ್ದೆ. ಅದೇ ಆಗೊಂದು ಈಗೊಂದು ಕವನ ಕಥೆ ಬರೆಯುವುದು. ಸಾಹಿತ್ಯದ ಬಗ್ಗೆ ವಿಶೇಷ ಒಲವು ಬೆಳೆಸಿಕೊಂಡ ನಾನು ಶಿಕ್ಷಕ ವೃತ್ತಿಗೆ ಹೋಗಲು ನಿರ್ಧರಿಸಿ ಬಿ.ಇಡಿ.ಗೆ ಅರ್ಜಿ ಹಾಕಿಕೊಂಡೆ. ಉತ್ತಮ ಸರಾಸರಿ ಇದ್ದಾಗ್ಯೂ ವಿಷಯಗಳ ಹೊಂದಾಣಿಕೆ ಇಲ್ಲದ್ದರಿಂದ ಪ್ರವೇಶ ದೊರೆಯದೆ ಮಗದೊಮ್ಮೆ ಸೋತು ಹೋದೆ. ಆಗಿನ ಸಂದಿಗ್ಧ ಪರಿಸ್ಥಿತಿ ಸರಳೀಕರಿಸಲು ನನಗೆ ಸಾಧ್ಯವಾಗಲಿಲ್ಲ.

ಒಂದು ಸಂದರ್ಭವಲ್ಲಂತೂ ಆತ್ಮಹತ್ಯೆಗೂ ಪ್ರಯತ್ನಿಸಿ ವಿಫಲನಾದೆ. ಯಾರೇನೇ ಅಂದುಕೊಳ್ಳಲಿ, ಹೆತ್ತವರ ಪ್ರೀತಿ, ವಾತ್ಸಲ್ಯ, ಅನುಕಂಪ, ಸಹಾನುಭೂತಿ ನನ್ನ ಮೇಲಿದೆಯಲ್ಲ ಎಂಬ ಸಮಾಧಾನದಿಂದಲೇ ಎಂ.ಎ.ಗೆ ಪ್ರವೇಶ ಪಡೆದೆ.

ಸ್ನೇಹಿತರ ಒತ್ತಾಯಕ್ಕಾಗಿ ಬ್ಯಾಂಕ್ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದೆ. ಎಂ.ಎ. ಪ್ರಥಮ ವರ್ಷದ ಪರೀಕ್ಷೆ ಮುಗಿಯುತ್ತಿದ್ದಂತೆಯೇ, ಸಂದರ್ಶನವೂ ಕೊಟ್ಟು ಬಂದಿದ್ದ ನನಗೆ ಗ್ರಾಮೀಣ ಬ್ಯಾಂಕಿನ ಆರ್ಡರ್ ಬಂದಿತು. 1981 ರಲ್ಲಿ



ಬಯಸಿದ್ದೇನು ಆದದ್ದೇನು..



ಗ್ರಾಮೀಣ ಬ್ಯಾಂಕ್‌ನಲ್ಲಿ ಸೇರಿಕೊಂಡೆ. ಮುಂದೆ ಮೂರು ವರ್ಷ ಸೇವೆಸಲ್ಲಿಸಿದ ನಂತರ, ಈ ಹಿಂದೆ ಅರ್ಜಿ ಸಲ್ಲಿಸಿ, ಲಿಖಿತ ಪರೀಕ್ಷೆ ಕೊಟ್ಟು, ಪಾಸ್‌ಮಾಡಿ ಮೌಖಿಕ ಪರೀಕ್ಷೆ ಎದುರಿಸಿದ್ದ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಉದ್ಯೋಗ ದೊರೆಯಿತು. ಗ್ರಾಮೀಣ ಬ್ಯಾಂಕ್ ಕೆಲಸಕ್ಕೆ ರಾಜಿನಾಮೆ ನೀಡಿ, 1984ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸೇರಿಕೊಂಡೆ. ಪಾಲಿಗೆ ಬಂದದ್ದು - ಪಂಚಾಮೃತ. ವೈದ್ಯಕದ ಮೂಲಕವಲ್ಲ ಸಾಹಿತ್ಯದ ಮುಖಾಂತರ ಸಾಗಿದೆ ನನ್ನ ಜನಸೇವೆ !

-ಚಿತ್ರಶೇಖರ ಕಂಠಿ
ಗುಲಬರ್ಗಾ

ಮಲೇರಿಯಾ ಡಾಕ್ಟರ್

ಡಾಕ್ಟರ್ ಆಗಬೇಕೆಂಬ, ಚಿಕ್ಕಂದಿನಿಂದಲೂ ಕಂಡಿದ್ದ ಕನಸು. ಆದದ್ದು ಆರೋಗ್ಯ ಇಲಾಖೆಯ ನೌಕರ. ಎಸ್. ಎಸ್. ಎಲ್. ಸಿ.ಯಲ್ಲಿ 45% ಮಾಡಿದಾಗಲೇ ನಾನು ಡಾಕ್ಟರ್ ಆಗುವದಿಲ್ಲೆಂದು ಅನಿಸಿದರೂ ಏನೋ ಕನಸಿನಿಂದ ಪಿ. ಯು. ಸಿ. ಸಾಯಿನ್ಸ್ ಹಚ್ಚಿದೆ. ಗೋತ ಹೊಡೆದು ಡಾಕ್ಟರ್ ಆಗುವ ಕನಸು ಮಣ್ಣುಗೂಡಿ ಆರ್ಟ್ಸ್ ಸೇರಿ ಪದವೀಧರನಾದೆ. ಆರೋಗ್ಯ ಇಲಾಖೆಯಲ್ಲಿ ಆರೋಗ್ಯ ಕಾರ್ಯಕರ್ತನೆಂದು ಸೇರಿಕೊಂಡನಂತರ, ಹಳ್ಳಿಯ ಜನ ಮಲೇರಿಯಾ ಡಾಕ್ಟರ್ ಅನ್ನತೊಡಗಿದರು. ಮನಸ್ಸಿಗೆ ಸಮಾಧಾನವಾಯಿತು. ಅಂತೂ ಡಾಕ್ಟರ ಆದೆನಲ್ಲ.

ಎಂ. ಎಲ್. ವಿನಾಯಕ
ಧಾರವಾಡ

ಕೈಹಿಡಿದು ಕಾಪಾಡಿದ ವಿಧಿ

ನನ್ನ ಜನ್ಮ 1947ರಲ್ಲಿ. ಶಿಕ್ಷಣ ಪ್ರೌಢ ಶಾಲೆಗೆ ಮುಕ್ತಾಯ. ಆದರೆ 1961ರಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಂಡಕ್ಟರನಾಗಿ ಸೇರಬೇಕಾಗಿದ್ದವನಿಗೆ ಪ್ಯೂನ್ ನೌಕರಿ ಪ್ರಾಪ್ತಿ. ಮನೆಯಲ್ಲಿ ತಂದೆ ತಾಯಿ ಒಪ್ಪದಿದ್ದರೂ ಆ ಕೆಳ ಹುದ್ದೆಗೇ ಸೇರಿಕೊಂಡೆ. ಧಾರವಾಡದಲ್ಲಿದ್ದ ನನ್ನ ಸೋದರ ಮಾವನ ಮಗಳ ಜೊತೆಗೆ ವಿವಾಹ ನಡೆಯಿತು. ಆಕೆ ಮ್ಯಾಟ್ರಿಕ್ ಮಾಡಿಕೊಂಡವಳು. ನಾನೊ ನಾನ್–ಮ್ಯಾಟ್ರಿಕ್. ಹೆಂಡತಿಯ ಪ್ರೋತ್ಸಾಹದಿಂದ ಮ್ಯಾಟ್ರಿಕ್ ಮಾಡಿಕೊಂಡೆ. ಹಿಂದುಳಿದ ವರ್ಗದವನಾದ ನನಗೆ ಗುಮಾಸ್ತೆ ಜಾಗೆಗೆ ಬಡತಿ ಕೊಡಬೇಕೆಂದು ಮೇಲಧಿಕಾರಿಗಳಿಗೆ ಅರ್ಜಿಗಳನ್ನು ಕಳಿಸುತ್ತಲೇ ಹೋದೆ. ಆ ಹುದ್ದೆಗೆ ಪಿ. ಯು. ಸಿ. ಬೇಕೆಂದರು. ಅದನ್ನೂ ಉತ್ತೀರ್ಣನಾಗಿ ಮತ್ತೆ ಯತ್ನಿಸಿದೆ. ಫಲ ಸಿಗಲಿಲ್ಲ. ಇತ್ತ ಶಿಕ್ಷಣ ಸಾಗಿಯೇ ಇತ್ತು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿಯ ಭ್ರಷ್ಟಾಚಾರ, ಲಂಚಗುಳಿತನ ನೋಡುತ್ತಲೇ ಇದ್ದೆ. ಶೀಘ್ರವೇ ಆ ಸಂಸ್ಥೆಯಲ್ಲಿ ಅಧಿಕಾರಿಯಾಗಿ ರಸ್ತೆ ಸಾರಿಗೆ ನೌಕರರ ಹಾಗೂ ಪ್ರಯಾಣಿಕರ ಕಲ್ಯಾಣಕ್ಕಾಗಿ ದುಡಿಯಬೇಕು ಎಂಬುದು ನನ್ನ ತೀವ್ರವಾದ ಬಯಕೆ. ನನಗೆ ಮೇಲ್ದರ್ಜೆ ಸಿಗಲಿಲ್ಲ. ಕನಸುಗಳೆಲ್ಲ ಮೂಲೆಗುಂಪಾದವು. ನನಗೆ ಆದ ಅನ್ಯಾಯವನ್ನು ಪ್ರತಿಭಟಿಸಿ ನೌಕರಿಗೆ ರಾಜೀನಾಮೆ ಕೊಟ್ಟೆ. ಇದರಿಂದ ಕನಸೇನೂ ಈಡೇರಿದಂತಾಗಲಿಲ್ಲ. ಆದರೆ ಮಾನಸಿಕ ನೆಮ್ಮದಿ ಸಿಕ್ಕಿತು.

ನಾನು ನೌಕರಿಯಿಂದ ಬಿಡುಗಡೆ ಆದ ಸಮಯಕ್ಕೆ (1982) ಹಿಂದೂಸ್ತಾನ ಪೆಟ್ರೋಲಿಯಂ ಕಂಪನಿಯವರು ಅಡಿಗೆ ಅನಿಲ ವಿತರಣೆಗಾಗಿ ಅರ್ಜಿಗಳನ್ನು ಕರೆದಿದ್ದರು. ನನ್ನ ಪ್ರಯತ್ನಕ್ಕೆ ಫಲ ಸಿಕ್ಕು ನಾನು ಅವರ ಏಜಂಟ ಆಗಿ ನೇಮಕ ಹೊಂದಿದೆ. ಗಣ್ಯ ನಾಗರಿಕನಂತೆ ಜೀವಿಸಲು ಅನುಕೂಲವಾಯ್ತು. ಆದರೆ ನನ್ನ ಮೊದಲಿನ ಕನಸು ಕನಸಾಗಿಯೇ ಉಳಿಯಿತು.

ಎನ್. ಆರ್. ತೇರದಾಳ
ಚಿಕ್ಕಮಗಳೂರು



ಬಯಸಿದ್ದೇನು ಸಿಕ್ಕದ್ದು.


ನೆಮ್ಮದಿಯ ಜೀವನ

ನನ್ನ ಜೀವನದ ಗುರಿ ಕಾಲೇಜು ಪ್ರಾಧ್ಯಾಪಕನಾಗುವುದು. ಇದು ರೂಪುಗೊಂಡುದು ನನ್ನ ಕಾಲೇಜು ದಿನಗಳಲ್ಲಿ. ಅಲ್ಲಿಯ ಪ್ರಾಧ್ಯಾಪಕರನ್ನು ಕಂಡಾಗ ಅವರ ವಿಷಯ ವಿವೇಚನೆ ಕೇಳುತ್ತಿದ್ದಾಗ, ಸಮಾಜದಲ್ಲಿ ಅವರಿಗಿರುವ ಗೌರವ ನೋಡಿದಾಗ, ಅದೇನೋ ಆಕರ್ಷಣೆ ಆ ಹುದ್ದೆಯಲ್ಲಿ.

ತಾಯಿ–ತಂದೆಯರಲ್ಲಿ ನನ್ನ ಈ ಆಶೆ ವ್ಯಕ್ತಪಡಿಸಿದಾಗ ಅವರಿಂದ ತುಂಬಾ ಪ್ರೋತ್ಸಾಹ ದೊರೆಯಿತು. ಕಷ್ಟಪಟ್ಟು ಓದಿ, ಸ್ನಾತಕೋತ್ತರ ಪದವಿ ಪಡೆದಾಗ ಕನಸು ನಿಧಾನವಾಗಿ ರೂಪುಗೊಳ್ಳುತ್ತಲಿದೆಯೆಂಬ ಸಂತಸದೊಂದಿಗೆ ಉದ್ಯೋಗದ ಬೇಟೆ ಶುರುವಾಯಿತು. ಆತಂಕ ತೀವ್ರವಾಗಿದ್ದರೂ ಮನಸ್ಸಿನಲ್ಲಿಯೇ ಅದೆಷ್ಟೋ ಬಾರಿ ಪ್ರಾಧ್ಯಾಪಕನಾಗಿ ಸಂತಸಪಟ್ಟಿದ್ದೆ.

ಆ ಸುದೈವ ಒಮ್ಮೆಲೆ ದೊರೆತಾಗ ಹೆತ್ತವರಿಗೆ ಆದ ಸಂತೋಷ ಅವರ್ಣನೀಯ. ನನ್ನನ್ನಂತೂ ಹಿಡಿದವರಿಲ್ಲ. ನನಗೋ ಜೀವನದ ಮಹತ್ವಾಕಾಂಕ್ಷೆ ಈಡೇರಿದ್ದಕ್ಕೆ ಅತೀವ ಹರ್ಷ. ಆದರೆ ನನಗೆ ದೊರೆತ ಪ್ರಾಧ್ಯಾಪಕ ಹುದ್ದೆ ಮಾತ್ರ ಕಿರಿಯ ಕಾಲೇಜಿನಲ್ಲಿ ತಾತ್ಕಾಲಿಕವಾದದ್ದಾಗಿತ್ತು. ಪ್ರತಿ ಶಿಕ್ಷಣ ವರ್ಷ ಶುರುವಾಗುತ್ತಲೇ ನೇಮಕಾತಿ ಹಾಗೂ ಶೈಕ್ಷಣಿಕ ವರ್ಷ ಮುಗಿಯುತ್ತಲೇ ಮನೆಗೆ [illegible] ನಿರುದ್ಯೋಗ [illegible] ಮಾನಸಿಕ ತುಮುಲ [illegible]

ನನ್ನ ಜೀವನದ ಗುರಿ ಇಷ್ಟೇನೆ? ಇದೆಲ್ಲ ಯಾಕೆ ಹೀಗೆ? ಹಾಗಾದರೆ ನಾನು [illegible] ಉದ್ಯೋಗಕ್ಕೆ [illegible]



ಲಿಲ್ಲ. ಎಲ್ಲವೂ ಅನಿಶ್ಚಿತತೆಯಿಂದ ಕೂಡಿ ಸಮಸ್ಯೆಯೇ ಭೂತಾಕಾರವಾಗಿ ಮನಸ್ಸಿನ ಶಾಂತಿ ಕದಡಿಹೋಗಿತು.

ಮೂರು ವರ್ಷಗಳ ಶಿಕ್ಷಕ ವೃತ್ತಿಯ ನಂತರದ ನಿರುದ್ಯೋಗದ ಅವಧಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಗುಮಾಸ್ತೆ ಹುದ್ದೆಗೆ ಆಯ್ಕೆಯಾದ ಆಜ್ಞೆ ಬಂದಿತ್ತು. ಆಗ ನನ್ನ ದ್ವಂದ್ವ ಶುರುವಾಯಿತು. ಕಾಯಂ ನೌಕರಿ ಸೇರುವಂತೆ ಮನೆಯ ಹಿರಿಯ, ಹಿತೈಷಿಗಳ ಆಗ್ರಹ ಒಂದೆಡೆಗೆ. ಪ್ರಾಧ್ಯಾಪಕ ಹುದ್ದೆಯ ಬಿಡದ ಆಕರ್ಷಣೆ ಇನ್ನೊಂದೆಡೆ. ಯಾವುದನ್ನು ಆರಿಸುವುದು? ಯಾವುದರಲ್ಲಿ ಮುಂದುವರಿಯುವುದು? ಎಂಬ ಧರ್ಮ ಸಂಕಟದಲ್ಲಿ ಊಟ ಬೇಡವಾಗಿ, ನಿದ್ದೆ ದೂರವಾಯಿತು. ಗುಮಾಸ್ತೆ ಹುದ್ದೆಯಲ್ಲಿಯ ನೆಮ್ಮದಿಯ ಜೀವನವೇ ಕೊನೆಗೆ ಈ ತಾಕಲಾಟದಿಂದ ಬಿಡುಗಡೆಗೆ ದಾರಿ ತೋರಿಸಿತು. ಉದ್ಯೋಗಕ್ಕೆ ಸೇರುವಾಗ ಅಸಮಾಧಾನದಿಂದಲೇ ಹೋದೆನು. ವಿದ್ಯಾರ್ಥಿಗಳೊಂದಿಗೆ ಇಷ್ಟು ದಿನಗಳವರೆಗೆ ಒಡನಾಡಿದ್ದ ನನಗೆ ಅಲ್ಲಿಯ ನಿರ್ಜೀವ ಕಡತಗಳೊಂದಿಗೆ ಹೊಂದಿಕೊಳ್ಳಲು ತುಂಬಾ ಸಮಯ ಬೇಕಾಯಿತು.

ಮಧ್ಯೆ ಹಳೆಯ ಕೆಲವು ಸ್ನೇಹಿತರು, ಸಹೋದ್ಯೋಗಿಗಳು ಸಿಕ್ಕಾಗ "ಕಾಯಂ ನೌಕರಿ ಸೇರಿದ್ದೇ ಒಳ್ಳೆ[illegible]" ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದೇ ಮೂರು ವರ್ಷಗಳಲ್ಲಿ ಕಲಿತ ವಿದ್ಯಾರ್ಥಿಗಳು ಸಿಕ್ಕಾಗ ಕರೆಯುವ "ಸರ್ ನಮಸ್ಕಾರ" ಎಂದು ಕೇಳುತ್ತಿರುವಂತೆಯೇ ಮೈಯೆಲ್ಲಾ ಪುಲಕಗೊಂಡು ಹಳೆಯ ವೇದನೆ ತೀವ್ರವಾಗಿ ಕಾಡುತ್ತದೆ. ಮತ್ತೆ ನನ್ನ ಸಹಪಾಠಿಗಳು ಭೆಟ್ಟಿಯಾದಾಗ ನಿರುದ್ಯೋಗ ಅವರನ್ನು ಇನ್ನೂ ಸತಾಯಿಸುತ್ತಿದ್ದುದನ್ನೂ, ಅವರ ನೋವು ನಿರಾಶೆಗಳನ್ನೂ ಕೇಳಿ, ಕಂಡು ಮನಸ್ಸು, ಈ ಆಯ್ಕೆಯನ್ನೇ ಸಮರ್ಥಿಸಿದೆ. ಅದೃಷ್ಟ ದೊರಕಿಸಿ ಕೊಟ್ಟ ನೆಮ್ಮದಿಯ ಜೀವನಕ್ಕೆ ಕಾಣದ ದೇವರಿಗೆ ಮನಸ್ಸಿನಲ್ಲಿಯೇ ಕೃತಜ್ಞತೆ ಅರ್ಪಿಸುತ್ತಿರುವೆ.

—ಅನಂತ ನಾ. ಕವಟೇಕರ್

ತಾನೊಂದು ಬಗೆದರೆ

ನನ್ನ ತಂದೆಯವರು ಸರಕಾರಿ ದವಾಖಾನೆಯಲ್ಲಿ ಕಾಂಪೌಂಡರಿದ್ದರು. ನಾ ಕನಸು ಕಂಡದ್ದು ವೈದ್ಯನಾಗಿ ನಾಲ್ಕಾರು ಜನರಿಗೆ ಸೇವೆ ಸಲ್ಲಿಸಬೇಕೆಂದು. ಮನೆಯ ತುಂಬ ಕಾಟುಗಳನ್ನು ಹಾಕಿ, ಬಂಧು ಬಳಗವನ್ನೆಲ್ಲಾ ರೋಗಿಗಳನ್ನಾಗಿ ಮಾಡಿ ಶುಶ್ರೂಷೆ ಮಾಡುವದಾಗಿ ಎಲ್ಲರಿಗೂ ಹೇಳಿದ್ದೆ ಐದು ವರ್ಷದವನಿದ್ದಾಗ.

ಎಲ್ಲರ ಕನಸಿನಂತೆ ನನ್ನ ಕನಸೂ ನನಸಾಯಿತೆ? ಈ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ. ಕಾರಣ 10 ವರ್ಷಗಳ ಖಾಸಗಿ ವೈದ್ಯಕೀಯ ವೃತ್ತಿಯ ನಂತರ ಸರಕಾರಿ ವೈದ್ಯನಾಗಿ ಪ್ರಥಮ ವರ್ಗದ ಗೆಜೆಟೆಡ್ ಅಧಿಕಾರಿಯಾಗಿದ್ದರೂ ಕೂಡ.

ಖಾಸಗಿ ವೈದ್ಯನಾಗಿದ್ದಾಗ ಸಾಕಷ್ಟು ರೋಗಿಗಳನ್ನು ನೋಡಿದ್ದೆ. ಔಷಧೋಪಚಾರ ನೀಡಿದ್ದೆ. ಈ ವೃತ್ತಿ ಇನ್ನೂ ಬೆಳೆಯಬೇಕು. ರೋಗಿಗಳು ಹೆಚ್ಚು ಹೆಚ್ಚು ಬರಬೇಕು. ಕಲಿತದ್ದೂ ಉಪಯೋಗವಾಗಬೇಕು. ಜನರ ಮನದಲ್ಲಿ ನಾನು ಉಳಿಯಬೇಕು. ನನ್ನ ಉತ್ಸಾಹ ಹುರುಪು ಎಲ್ಲವೂ ಸದ್ವಿನಿಯೋಗವಾಗಬೇಕು ಎಂಬ ಕನಸು ಕಂಡೆ. ನನ್ನ ಉತ್ಸಾಹ, ವೃತ್ತಿಗೆ ತಕ್ಕಷ್ಟು ರೋಗಿಗಳು ಬರದಾಗ ಖಾಸಗಿ ವೃತ್ತಿ ಬಿಟ್ಟೆ.



ಬಯಸಿದ್ದೇನು ಆದದ್ದೇನು..

ಸರಕಾರಿ ವೈದ್ಯನಾದರೆ ಹೆಚ್ಚು ಹೆಚ್ಚು ಬಡರೋಗಿಗಳ ಸೇವೆ ಮಾಡಬಹುದು. ಕಲಿತ ಜ್ಞಾನವೆಲ್ಲವೂ ಉಪಯೋಗವಾಗಬಹುದು, ಎಂದೆಲ್ಲ ಕನಸು ಹೊತ್ತು ಸರಕಾರ ಹಾಕಿದ ಹಳ್ಳಿಯಲ್ಲಿ ಬಂದೆ. ನಿಜವಾಗಿಯೂ ಇಂದು ದಿನಕ್ಕೆ ನಾಲ್ಕಾರು ಜನರ ಸೇವೆ ಮಾತ್ರ ಮಾಡುತ್ತಿದ್ದೇನೆ.

ಇದು ಯಾವ ವಿಪರ್ಯಾಸವೋ ಗೊತ್ತಿಲ್ಲ ಸರಕಾರಿ ವೈದ್ಯನಾಗಿ ಇಂದು ಕಲಿತದ್ದು, ಟಾಂಗಾದ ಕುದುರೆಯಂತೆ ಕಾಯದೆಗಳ ಹಳಿಯಲ್ಲಿಯೇ ಹೋಗುವ ಶೈಲಿನಂತೆ, ಕೇವಲ ಕಾರಕೂನಕಿ ಮಾಡುತ್ತ ಸಹಿ ಮಾಡುತ್ತ ಇದ್ದ ಬುದ್ಧಿಯನ್ನೆಲ್ಲ ಡಿಪಾರ್ಟ್‌ಮೆಂಟ್ ಪರೀಕ್ಷೆ, ಟಿ. ಎ., ಡಿ. ಎ., ಬೇಸಿಕ್ ಪೇ, ಸ್ಟಾಫ್ ಪೇಗಳಿಗಾಗಿ ವಿನಿಯೋಗಿಸುತ್ತಾ ಇರುವ ಪ್ರಥಮ ದರ್ಜೆಯ ಗುಮಾಸ್ತನಾಗಿ ಡೀಕುವ ಪಂಜರದ ಗಿಳಿಯಂತೆ. ನೀವೇ ಹೇಳಿ. ನಾ ಬಯಸಿದ್ದೇನು? ಆದದ್ದೇನು?

ಡಾ|| ಮಾ. ನಿ. ಕುಲಕರ್ಣಿ
ಯಲ್ಲಾಪುರ

ಪ್ರಾಧ್ಯಾಪಕನಾಗಲಿಲ್ಲ

'ಸಾರೇಂ ಜಹಾಂ ಸೆ ಅಚ್ಛಾ ಹಿಂದೂಸ್ತಾನ ಹಮಾರಾ' ಎಂಬ ಇಕ್ಬಾಲ ಕವಿಯ ಹಾಡು ನನ್ನನ್ನು ಚಿಕ್ಕಂದಿನಲ್ಲಿಯೇ ಆಕರ್ಷಿಸಿತ್ತು. ನನ್ನ ಮಿತ್ರ ನಜೀರ ಸೌದಾಗರನ ಮನೆಗೆ ಒಮ್ಮೆ ಹೋಗಿದ್ದಾಗ ಆತನ ತಂದೆ ಕವಿ ಇಕ್ಬಾಲರ ಹಾಡನ್ನು ವಿವರಿಸಿ ಇಂಥ ಅನೇಕಾನೇಕ ಹಾಡುಗಳು ಉರ್ದು ಸಾಹಿತ್ಯದಲ್ಲಿ ಹೇರಳವಾಗಿವೆ ಎಂದು ಹೇಳಿದರು. ಅಂದಿನಿಂದ ನಾನು ಉರ್ದು ಸಾಹಿತ್ಯವನ್ನು ಅಭ್ಯಾಸ ಮಾಡಬೇಕೆಂದು ಮನಸ್ಸಿನಲ್ಲಿ ನಿರ್ಧಾರ ಮಾಡಿದೆ. ಮಾಧ್ಯಮಿಕ ಶಾಲೆಗೆ ಬಂದ ಕೂಡಲೆ ನಾನು ಸಂಸ್ಕೃತವನ್ನು ಬಿಟ್ಟು ಉರ್ದು ಭಾಷೆಯ ಅಧ್ಯಯನ ಆಯ್ದುಕೊಂಡೆ. ಆದರೆ ನನ್ನ ಅಣ್ಣ ಅದೇ ಶಾಲೆಯಲ್ಲಿ, ಸಂಸ್ಕೃತ ಸ್ಕಾಲರ. ಆತನಿಗೆ ನನ್ನ ಆಯ್ಕೆ ತಿಳಿದ ಕೂಡಲೆ, ಆತ ನನ್ನನ್ನು ಜೆದರಿಸಿ, ಮುಖ್ಯಾಧ್ಯಾಪಕರ ವರೆಗೆ ಹೋಗಿ; ನನ್ನ ವಿಷಯವನ್ನು ಬಿಡಿಸಿ, ಸಂಸ್ಕೃತ ಆಯ್ದುಕೊಳ್ಳುವಂತೆ ಮಾಡಿದ. ಸಂಸ್ಕೃತದೊಂದಿಗೆ ಎಸ್ ಎಸ್ ಎಲ್ ಸಿ ಉತ್ತೀರ್ಣನಾದೆ. ಅಷ್ಟರೊಳಗೆ ಕನ್ನಡದಲ್ಲಿ ಬರೆಯುವದನ್ನು ರೂಢಿಸಿಕೊಂಡಿದ್ದೆ. ಪತ್ರಿಕೆಗಳಲ್ಲಿ ಕೆಲ ಲೇಖಗಳೂ, ನನ್ನವು, ಅಚ್ಚಾಗಿದ್ದವು.



ಕಾಲೇಜಿನಲ್ಲಿ ಕನ್ನಡ ಅಭ್ಯಸಿಸಬೇಕೆಂದೆ ತಂದೆಯವರಿಂದ ಅಡ್ಡಗಾಲು. ಸೋಶಿಯಾಲಜಿ ತೆಗೆದುಕೊಂಡು ಬೇಕಾದರೆ ಎಂ. ಎ. ಮಾಡಿಕೊ ಎಂದು ದುಂಬಾಲು ಬಿದ್ದರು. ಪಿತೃವಾಕ್ಯ ಪರಿಪಾಲಕನಾಗಿ ಸೋಶಿಯಾಲಜಿ ಬಿ. ಎ. ಆದೆ. ನಿರುದ್ಯೋಗ, ಬಿ. ಕಾಂ. ಓದುವ ಪ್ರಯತ್ನ. ಅಷ್ಟರಲ್ಲಿ ಸೋಷಿಯಾಲಜಿ ಬಿ. ಎ. ಆದವರಿಗೆ ನೌಕರಿಯ ಅವಕಾಶ ದೊರೆತು ನಾನು ಸರಕಾರಿ ನೌಕರನಾದೆ. ಅದೇ ವಿಷಯದೊಂದಿಗೆ ಎಂ ಎ ಆದೆ. ದಿಲ್ಲಿ ವಿಶ್ವವಿದ್ಯಾಲಯದ ಡಿ ಎಚ್ ಇ ಮುಗಿಸಿದೆ. ಇಲ್ಲಿಯ ಕುಟುಂಬ ಆರೋಗ್ಯ ಕಲ್ಯಾಣ ಕೇಂದ್ರದಲ್ಲಿ ಈಗ ಬೋಧಕನಾಗಿ ಮುಂದುವರೆದಿದ್ದೇನೆ. ಉರ್ದು ಇಲ್ಲವೆ ಕನ್ನಡ ಭಾಷೆಯಲ್ಲಿ ಪಾರಂಗತನಾಗಿ ಪ್ರಾಧ್ಯಾಪಕನಾಗಬೇಕೆಂದಿದ್ದ ನನ್ನ ಬಯಕೆ ಹೀಗೆ ತಾರಾತಿಗಡಿಯಾಗಿ ಕೇವಲ ಬೋಧಕ ವೃತ್ತಿಯಲ್ಲಿ ತೃಪ್ತನಾಗಿರಬೇಕಾಗಿದೆ.

---ಎಂ. ಸಿ. ಅಂಟಿನ
ಹುಬ್ಬಳ್ಳಿ

ಒಲ್ಲದ ಮಾಸ್ತರಕಿ!

ನಾನು ಚಿಕ್ಕವನಿರುವಾಗ ಮುಂದೆ ಏನಾಗಬೇಕು ಎಂದು ಯೋಚಿಸುತ್ತಿದ್ದೆ. ನಮ್ಮ ತಂದೆ ಜಾನಪದ ನಾಟಕವಾದ "ಶ್ರೀ ಕೃಷ್ಣ ಪಾರಿಜಾತ"ದಲ್ಲಿ ಕೊರವಂಜಿ ಪಾತ್ರ ಮಾಡುತ್ತಿದ್ದರು. ಅವರು ಸುತ್ತಲಿನ ಹಳ್ಳಿಗಳಲ್ಲೆಲ್ಲ ಪ್ರಸಿದ್ಧ ಕಲಾವಿದರೆಂದು ಹೆಸರಾಗಿದ್ದರಲ್ಲದೇ, ಶ್ರೇಷ್ಠ ಮಟ್ಟದ ಸಂಗೀತಗಾರರಾಗಿದ್ದರು. ಅದ್ದರಿಂದ ಸಹಜವಾಗಿ ನನಗೂ ಹಾಡುಗಾರಿಕೆಯತ್ತ ಒಲವು ಇತ್ತು. ಆದ್ದರಿಂದ ಚಲನಚಿತ್ರದಲ್ಲಿ ಹಿನ್ನೆಲೆ ಗಾಯಕನಾಗಿ ಕೀರ್ತಿ ಪಡೆಯಬೇಕೆಂದು ನನ್ನಾಶೆಯಾಗಿತ್ತು.

ಪಿ. ಯು. ಸಿ. ದ್ವಿತೀಯ ವರ್ಷದಲ್ಲಿ ಓದುತ್ತಿರುವಾಗ ಒಂದು ದಿನ "ಸಂಯುಕ್ತ ಕರ್ನಾಟಕ"ದಲ್ಲಿ ನಟ, ನಟಿ, ಹಿನ್ನೆಲೆ ಗಾಯಕರು ಬೇಕಾಗಿದ್ದಾರೆ ಎಂಬ ಪ್ರಕಟಣೆ ಓದಿದೆ.

ಅವರು ನಿರ್ದಿಷ್ಟಪಡಿಸಿದ ದಿನದಂದು ಓದುವದನ್ನು ಕೈಬಿಟ್ಟು, ಚಲನಚಿತ್ರದಲ್ಲಿಯ ಹಿನ್ನೆಲೆ ಗಾಯಕನಾಗಿ ಮೆರೆಯಬೇಕೆಂಬ ಮಹತ್ವಾಕಾಂಕ್ಷೆಯಿಂದ ಮನೆಯಲ್ಲಿ ಸ್ವಲ್ಪ ಹಣ ಕಳವು ಮಾಡಿ, ಹೇಳದೆ ಕೇಳದೆ ಹುಬ್ಬಳ್ಳಿಯ ಅಶೋಕ ಹೋಟೆಲ್ ತಲುಪಿದೆ.

ಅಶೋಕ ಹೋಟಲಿನಲ್ಲಿಯ ಚಲನಚಿತ್ರ ನಿರ್ದೇಶಕರನ್ನು ಕಾಣಲು ಎರಡು ದಿನಗಳೇ ಬೇಕಾದವು. ಕೊನೆಗೆ ನಿರ್ದೇಶಕರನ್ನು ಕಂಡಾಗ ಮನೆಯವರ ಒಪ್ಪಿಗೆ ಪತ್ರ ಮತ್ತು ಹತ್ತು ಸಾವಿರ ರೂಪಾಯಿ ಮುಂಗಡ ತರಬೇಕಾಗುತ್ತದೆ ಎಂದರು. ಇಷ್ಟು ಹಣ ನಮಗೆ ಮುಗಿಲ ಮಲ್ಲಿಗೆಯಾಗಿತ್ತು.

[illegible]

[illegible] ಕಾಡಿ ಶಕ್ತಿ. ಕಿಸೆಯಲ್ಲಿ ಹಣ ತೀರಿ ಹೋಗಿತ್ತು. ಟಿಕೇಟು ಕೊಳ್ಳದೇ ಅಂಜುತ್ತ ಅಡಗುತ್ತ ರೈಲಿನಲ್ಲಿ ಪ್ರಯಾಣ ಬೆಳಸಿದೆ. ಮನೆ ಸೇರಿದಾಗ ಎಲ್ಲರೂ ನನ್ನನ್ನೇ ಕುರಿತು ಮಾತನಾಡಿಕೊಳ್ಳು ತ್ತಿದ್ದರು. ನಾನು ಕಂಡ ಕೂಡಲೇ ಹಿರಿಯರು ಸಿಟ್ಟಿಗೆದ್ದರು. ಅವರಿಗೆಲ್ಲ ಏನೋ ಒಂದು ಸುಳ್ಳು ಹೇಳಿ, ನಿಜ ವಿಷಯ ಮರೆಮಾಚಿದೆ.

ನಂತರ ಹೇಗೋ ತೊಂದರೆಯಲ್ಲಿಯೇ ಪದವೀಧರನಾದೆ. ಬೆಳಗಾವಿಯಲ್ಲಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರೂ, ಸಿಸ್ಸ ಅಧಿಕಾರಿಗಳೂ ಆದ ಶ್ರೀ ವ್ಹಿ. ಬಿ. ಗಾಂವಕರರ ಕೃಪೆಯಿಂದ ಬಿ. ಈಡಿ.ಗೆ ಸೀಟು ಸಿಕ್ಕಿತು. ಪ್ರಥಮ ದರ್ಜೆಯಲ್ಲಿ ಬಿ. ಈಡಿ. ಪಾಸಾದೆ. ಬಾಹ್ಯ ವಿದ್ಯಾರ್ಥಿಯಾಗಿ ಕುಳಿತು ದ್ವಿತೀಯ ದರ್ಜೆಯಲ್ಲಿ ಎಂ. ಎ. ಪಾಸಾದೆ.

[illegible] ಕನಸಿನಲ್ಲಿ ಗಾಯಕನಾದಂತೆ ಕನಸುತ್ತಿದ್ದೆನು, ಎಚ್ಚರಾದಾಗ ಬದಿಗೆ ಕೊಟ್ಟಿಗೆಯಲ್ಲಿರುವ ಎಮ್ಮೆ ಒದರಿದ ಸಪ್ಪಳವದು ಎಂದು ಗೊತ್ತಾದಾಗ ಹೊತ್ತ ಹೊದಿಕೆಯನ್ನು ಮುಚ್ಚಿಕೊಂಡು ಯಾರಿಗೂ ಗೊತ್ತಾಗದಂತೆ ನಗುತ್ತಿದ್ದೆ.

ನೌಕರಿಗಾಗಿ ಕೆಲವು ದಿನ ಅಲ್ಲಲ್ಲಿ ಅಲೆದಾಡಿದ ಬಳಿಕ ಊರ ಹತ್ತಿರವೇ ಹೊಸ ಖಾಸಗಿ ಹೈಸ್ಕೂಲು ಒಂದು ಆರಂಭವಾಗಿತ್ತು. ಹತ್ತು ಸಾವಿರ ರೂ. ಸಾಲ ಮಾಡಿ ಅಲ್ಲಿ ಶಿಕ್ಷಕನಾಗಿದ್ದೇನೆ.

ಎ. ಎ. ಸನದಿ
- ಸಿಂದೊಳ್ಳಿ

ಆಸೆ ಮಣ್ಣುಗೂಡಿದಾಗ

ಕುಟುಂಬದಲ್ಲಿ ಒಬ್ಬನೇ ಮಗನಾಗಿ ಹುಟ್ಟಬಾರದು, ಅಥವಾ ಬೆಳೆಯಬಾರದು. ಆದರೆ ನಮ್ಮ ತಂದೆಗೆ ಮೂರು ಜನ ಮಕ್ಕ [illegible] ಮನೆಯಲ್ಲಿ ಅಪರಾಕುಮಾರನಾಗಿ ಬೆಳೆದೆ. ಎಲ್ಲ ಶಿಕ್ಷಣವೂ ಅಥಣಿಯಲ್ಲಿಯೇ ಆಯಿತು ಚಿಕ್ಕಂದಿನಿಂದಲೂ ನನಗೆ ಓದಿ ತಿಳಿಯುವದಕ್ಕಿಂತ ಸ್ವತಃ ಅನುಭವಿಸಿ ತಿಳಿದು ಕಲಿಯಬೇಕೆಂಬ ಹಂಬಲ ಬಹಳ. ಮನೆಯವರು ಒಬ್ಬನೇ ಎಂದುಕೊಂಡು ಪ್ರೀತಿಯಿಂದ ಸಾಕಿದರೂ ನನಗೆ ಏನಾದರೂ ಅಪಾಯವಾದರೆ ತಂದೆ ತಾಯಿಗಳಿಂದ ಕೆಟ್ಟ ಹೆಸರು ಬರಬಾರದು ಎಂದು ಅಷ್ಟೇ [illegible] ಬೆಳೆಸುತ್ತಿದ್ದರು. [illegible] ಸ್ವತಂತ್ರವಾದ ಬಯಕೆಗಳು ಮಣ್ಣುಪಾಲಾದವು. ಮನೆಯಲ್ಲಿ ಯಾರೂ ಶಿಕ್ಷಿತರಲ್ಲ. ಇದರಿಂದ ನನ್ನ ಸಮಸ್ಯೆ ಅರಿತುಕೊಳ್ಳುವವರಿಲ್ಲ. ಚಿತ್ರಕಲೆ ಕಲಿತು ಲೋವರ ಹೈಯರ ಗ್ರೇಡ್ ಪಾಸಾದೆ. ಅದರಂತೆ ಎಸ್.ಎಸ್.ಎಲ್.ಸಿ. ಪಾಸಾದಕೂಡಲೆ ನನಗೆ ಬೇರೆ ಊರಿಗೆ ಹೋಗಿ ಚಿತ್ರಕಲೆ ಜ.ಟಿ.ಜ. ಅಥವಾ ಡಿಪ್ಲೋಮಾ ಕಲಿಯ



ಬಯಸಿದ್ದೇನು ಆದದ್ದೇನು..

ೀಕೆಂದು. ನನ್ನ ಆಸೆಯನ್ನು ಮನೆಯವರ ುಂದೆ ಇಟ್ಟಾಗ ಅಥಣಿಯಲ್ಲಿ ಇರುವ ಕ್ಷಣವನ್ನಷ್ಟೇ ಕಲಿಯಬೇಕು ಬೇರೆಊರಿಗೆ ಳಿಸುವದಿಲ್ಲ ಎಂದು ಖಡಾಖಂಡಿತ ಾಗಿ ಹೇಳಿದಾಗ ನನಗೆ ಕಣ್ಣೀರೇ ಗತಿ ಾಯಿತು. ಯಂತ್ರಗಳ ಮಧ್ಯೆ ಕೆಲಸ ಮಾಡುವ ಆಸೆ ಸಾಕಷ್ಟು ಇದ್ದರೂ ನನ್ನ ಕುದುರಿಗೆ ಬೇಕಾದ ಆಹಾರ ಯಾರೂ ಕೊಡಲಿಲ್ಲ. ಅಸಮಾಧಾನದಿಂದಲೇ ಬಿ.ಎ. ಡಿಗ್ರಿ ಮುಗಿಸಿದೆ. ಕೊನೆಗೆ ಟೈಪಿಂಗ್ ಸಹ ಮುಗಿಸಬೇಕೆಂದು ಕಲಿಯತೊಡಗಿದಾಗ ವರಲ್ಲಿ ಆನಂದ ತೃಪ್ತಿಗಳು ದೊರಕಿದವು. ಕನ್ನಡ ಟೈಪಿಂಗ್‌ನಲ್ಲಿ ಎಲ್ಲರಿಗಿಂತ ಹೆಚ್ಚಿನ ಅಂಕ ಪಡೆದು ತೃಪ್ತನಾದೆ. . ಕನ್ನಡ–ಇಂಗ್ಲೀಷ್ ಸೀನಿಯರ್ ಟೈಪಿಂಗ್ ಪಾಸಾದೆ.

ಚಿಕ್ಕಂದಿನಲ್ಲಿ ನನ್ನ ಬಿಡುವಿನ ವೇಳೆಯನ್ನು ಆಟ ಪಾಠಗಳಲ್ಲಿ ಕಳೆಯದೆ ಪರಿಚಯದವರ ರೇಡಿಯೋ ಅಂಗಡಿಯಲ್ಲಿ ರಿಪೇರಿ ಮಾಡುವದನ್ನು ನೋಡಿ ನಾನೂ ಅವರಂತೆ ಆಗಬೇಕು ಎಂಬ ಆಸೆ ಮೂಡುತ್ತಿತ್ತು. ಡಿಗ್ರಿ ಮುಗಿಸಿದನಂತರ ನನ್ನ ಬಯಕೆಯ ಸ್ವಲ್ಪ ಭಾಗವನ್ನಾದರೂ ಅನುಭವಿಸೋಣ ಎಂದುಕೊಂಡು ಮನೆಯಲ್ಲಿ ಹಠಮಾಡಿ ಹುಬ್ಬಳ್ಳಿಯಲ್ಲಿ ರೇಡಿಯೋ ಇಂಜನೀಯರಿಂಗ್ ಮತ್ತು ಮೋಟಾರ್ ರೀವೈಂಡಿಂಗ್ ತರಬೇತಿ ಪಡೆದು ಊರಿಗೆ ಮರಳಿದೆ. ಊರಲ್ಲಿ ಮೋಟಾರ್ ರಿಪೇರಿ ಮಾಡಲು ಹಳ್ಳಿ ಹಳ್ಳಿಗೆ ಹೋಗಬೇಕಾದ ಪ್ರಸಂಗ ಬಂದಾಗ ಮನೆಯವರು ನಿನಗೆ ಏನಾದರೂ ಆದರೆ ಜವಾಬ್ದಾರಿ ಯಾರು ? ನೀನು ಮನೆಯಲ್ಲಿ ಇರು. ದುಡಿಯುವದು ಬೇಡ ಎಂದು ಆ ಕೆಲಸವನ್ನು ಸಹ ಬಿಡಿಸಿದರು.

ಕೊನೆಗೆ ನನಗೆ ನೌಕರಿ ಸಿಗುವದಂತೂ ಸಾಧ್ಯವಿಲ್ಲ. ಖಾಲಿ ಕುಳಿತು ಮಾಡುವದಾದರು ಏನು? ಎಂದುಕೊಂಡು ಅಥಣಿಯಲ್ಲಿ ಪ್ರಗತಿ ವಾಣಿಜ್ಯ ವಿದ್ಯಾಲಯ ಎಂಬ ಟೈಪಿಂಗ್ ಇನ್‌ಸ್ಟಿಟ್ಯೂಟ್ ತೆರೆದೆ. ನನ್ನ ಇಚ್ಛೆ ಪೂರೈಸವಿದ್ದರೂ ನಮ್ಮಲ್ಲಿ ಬರುವ ವಿದ್ಯಾರ್ಥಿಗಳ ಇಚ್ಛೆಯನ್ನಾದರೂ ಪೂರೈಸಬೇಕೆಂದು ಒಳ್ಳೆಯ ಆಸ್ಥೆಯಿಂದ ತರಬೇತಿ ಕೊಟ್ಟು ಅಥಣಿಯಲ್ಲಿ ಟೈಪಿಂಗ್ ಕ್ಷೇತ್ರದಲ್ಲಿ ಸಾಧಿಸಲಾಗದ್ದನ್ನು ಸಾಧಿಸಿದ್ದೇನೆ. ವೇಗ ಪತ್ರಿಕೆಯಲ್ಲಿ 100ಕ್ಕೆ 90 ರಿಂದ 99 ರವರೆಗೆ ಅಂಕಗಳನ್ನು ಪಡೆದವರಿದ್ದಾರೆ. ಎರಡನೆಯ ಪತ್ರಿಕೆಯಲ್ಲೂ ಹೆಚ್ಚಿನ ಅಂಕ ಪಡೆಯುವಂತೆ ಪ್ರಯತ್ನ ಮಾಡುತ್ತಿದ್ದೇನೆ.

ಚಿಕ್ಕಂದಿನಲ್ಲಿದ್ದಾಗ ನನ್ನ ಅಜ್ಜನವರು ನನ್ನ ಕೈಗಳನ್ನು ನೋಡಿ ಇವನಿಗೆ ತಬಲಾ ನುಡಿಸುವದನ್ನು ಕಲಿಸಿದರೆ ಚೆನ್ನಾಗಿ ನುಡಿಸುತ್ತಾನೆ ಎಂದಿದ್ದರು. ಆದರೆ ನಾನು ಟೈಪಿಂಗ್ ಯಂತ್ರದ ಮೇಲೆ ಬೆರಳಾಡಿಸುತ್ತ ದೈವವನ್ನು ಹಳಿಯುತ್ತ ವಿದ್ಯಾರ್ಥಿಗಳೊಂದಿಗೆ ವೇಳೆ ಕಳೆಯುತ್ತ ತೃಪ್ತಿ ಪಡೆಯಲು ಪ್ರಯತ್ನಿಸುತ್ತಿದ್ದೇನೆ.

ಡಿ.ಆರ್. ಮಾಚಕನೂರ

ಎಲ್ಲಿ ಮಾಣಿ !
ಎಲ್ಲಿ ಡಾಕ್ಟರ್

ಎಲ್ಲರಿಗೂ ಇರುವಂತೆ ಚಿಕ್ಕಂದಿನಲ್ಲಿರುವಾಗ ನನಗೂ ಕಂಡ–ಕಂಡದ್ದನ್ನೆಲ್ಲಾ ಬಯಸುವ ಬಣ್ಣದ ಕನಸುಗಳಿದ್ದವು. ಅವುಗಳಲ್ಲಿ ಪೊಟ್ಟ ಮೊದಲನೆಯದಾಗಿ ಹೊಟೆಲ್ 'ಮಾಣಿ' ಆಗಬೇಕೆಂದು. ಒಳ್ಳೆಯ ಉಡುಪಿ ಹೊಟೇಲುಗಳಲ್ಲಿ ಪೂರಿ ಮಸಾಲೆ ದೋಸೆ, ಕೋಡಬಳೆ, ರವೆ ಉಂಡಿ, ಗುಲಾಬ್-ಜಾಮೂನ್, ಇಡ್ಲಿ-ವಡೆ, ಉಪ್ಪಿಟ್ಟು ಮುಂತಾದವುಗಳೊಂದಿಗೆ ವ್ಯವಹರಿಸುವ "ಹೊಟೆಲ್ ಮಾಣಿ" (ಸರ್ವರ್)ಕೆಲಸ ನನಗೆ ಬಾಯಲ್ಲಿ ನೀರೂರಿಸುವಂಥದಾಗಿತ್ತು. ಹೀಗಾಗಿ ಏನೇ ಆಗಲಿ "ಹೋಟೆಲ್ ಮಾಣಿ" ಆಗಬೇಕೆಂದು ಬಯಸಿದ್ದೆ.

ಆದರೆ ನನ್ನ ದುರದೃಷ್ಟವೋ ಏನೋ,




ಓದುತ್ತಾ ಹೋದಂತೆ ಒಳ್ಳೆಯ ಮಾರ್ಕ್ಸ್‌ಗಳು ನನಗೆ ಬರತೊಡಗಿ ಅರ್ಜಿಗಳನ್ನು ಹಾಕುತ್ತಾ ಹೋದಂತೆ–ನನಗೆ ಮೆಡಿಕಲ್, ಎಂಜನೀರಿಂಗ್ ಎರಡೂ ಸೀಟುಗಳು ದೊರೆತು ಕೊನೆಗೆ ಯಾವುದಕ್ಕೆ ಸೇರಬೇಕೆಂದು ಡೋಲಾಯಮಾನ ಸ್ಥಿತಿಯಲ್ಲಿ ಹುಬ್ಬಳ್ಳಿಯ ಕೆ. ಎಂ. ಸಿ.ಯ ಭವ್ಯ ಬಿಲ್ಡಿಂಗಿಗೆ ಮನಸೋತು ಎಂ. ಬಿ. ಬಿ. ಎಸ್. ಸೇರಿದ್ದಾಯ್ತು. ಮತ್ತೆ ಅಲ್ಲಿಯೂ ಕೂಡ ಚೆನ್ನಾಗಿ ಮಾರ್ಕ್ಸ್ ಬಂದು ಡಿಗ್ರಿ ಮುಗಿಸುವಷ್ಟರಲ್ಲಿ ಸರಕಾರಿ ಆಸ್ಪತ್ರೆಯಲ್ಲಿ 'ಮೆಡಿಕಲ್ ಆಫೀಸರ್' ಎಂದು ರಾಜ್ಯ ಸರಕಾರದ ಮೊದಲನೆ ದರ್ಜೆಯ ಅಧಿಕಾರಿಯಾಗಿ ನೇಮಕಾತಿ ಹೊಂದಿ ಕೆಲಸ ನಿರ್ವಹಿಸುತ್ತಿರುವೆ.

ಇವತ್ತಿಗೂ ಕೂಡ ನನಗೆ ಕೀವು, ಕಫ, ಉಗುಳು, ಮಲ-ಮೂತ್ರ, ರೋಗಿಗಳ ಸಾವು-ನೋವು–ನರಳಾಟಗಳೊಡನೆ ವ್ಯವಹರಿಸುವದಕ್ಕಿಂತ, ಇಡ್ಲಿ-ವಡೆ, ಬೆಣ್ಣೆ ದೋಸೆ, ಪೂರಿ, ಉತ್ತಪ್ಪ ಇವುಗಳೊಡನೆ ವ್ಯವಹರಿಸುವ ಮಾಣಿಗಳ ಕೆಲಸ ಎಷ್ಟೋ ಪಾಲು ಆಕರ್ಷಕವಾಗಿ ಕಂಡಿದ್ದರೆ ಅಚ್ಚರಿಯೇನಲ್ಲ !

-ಡಾ|| ಯಲಗುರೇಶ ಸಂಕನಾಳ

ದೇವ ದಾನವರಿಬ್ಬರೂ ಎಲ್ಲ ಲೋಕಗಳಿಗೂ ಅಗತ್ಯ. ಇವರ್ಸ್ಪರ್ಧೆಯ ವಿನಾಶದ ಸ್ಪರ್ಧೆ ವಿಶ್ವಕ್ಕೆ ಮಾರಕ. ಪುರಾಣ ಕಾಲದಿಂದಲೂ ಈ ಮಾತು ಹೇಳುವವರಿದ್ದಾರೆ. ಮಾಡುವವರಿಲ್ಲ. ರಾಜಕೀಯದ ಕೈ ಮೇಲಾದಾಗ ಯಾವ ಮಾತೂ ನಡೆಯುವುದಿಲ್ಲ. ತಪ್ಪು ದೃಷ್ಟಿಕೋನದಿಂದ ವಿಜ್ಞಾನವನ್ನು ರಾಜಕೀಯಕ್ಕೆ ಅನೈಸರ್ಗಿಕವಾಗಿ ಬಳಸಿದ ದಾರುಣ ಇತಿಹಾಸ. ಪ್ರಾಚೀನ ಪ್ರತಿಭಾವಂತ ಎಂಜಿನಿಯರನೊಬ್ಬನ ರಾಜಕೀಯ ದುರಂತ. ಸತ್ಯಕಾಮರ ಹರಿತ ಶೈಲಿಯಲ್ಲಿ ರೂಪತಾಳಿದ ಕೃತಿ "ತನ್ಮಯ".

ತನ್ಮಯ



ಸತ್ಯಕಾಮ

ರಥದಿಂದ ಇಳಿದು ಹೊಸ್ತಿಲಲ್ಲಿ ಕಾಲಿಡುತ್ತೇನೆ.

ಬಾಗಿಲಿಗೆ ಮೈ ಆನಿಸಿ ನಿಂತ ಹೇಮಾ ಕಾಣುತ್ತಾಳೆ.

ಹಿಮಗಿರಿಗೆ ಹೊರಟು ನಿಂತಾಗ ತೊಯ್ದ ಕಣ್ಣುಗಳು ಇನ್ನೂ ನೆನೆದೇ ಇವೆ. ನಾನು ಬಂದುದನ್ನು ಕಂಡು ಮುಖದಲ್ಲಿ ಹೊಸ ಹೂನಗೆ. ನನ್ನ ತೋಳಿನಲ್ಲಿ ತನ್ನನ್ನು ತೊಡಕಿಸಿಕೊಂಡು ಆಸನದಲ್ಲಿ ನನ್ನ ಕೂರಿಸಿದಳು. ನಾನು ಬಂದ ಅವಸರದಲ್ಲಿ ಹೇಮಾ ಏನನ್ನೊ ಹುಡುಕಿಕೊಂಡು ಒಳಗೆ ಹೋಗುತ್ತಾಳೆ.

ಹಿಮಗಿರಿಯಲ್ಲಿ ದೇವಶಿಲ್ಪಿ. ವಿಶ್ವಕರ್ಮರೊಡನೆ ಎರಡು ದಿನಗಳನ್ನು ತುಂಬ ಸಂತೋಷದಿಂದ ಕಳೆದಿದ್ದೇನೆ. ದೇವತೆಗಳಲ್ಲಿ ಕೆಲವರಾದರೂ ಸುಮನಸರಿದ್ದಾರೆಂಬುದು ನನಗೆ ಖಚಿತವಾಯಿತು.

"ವಿಜ್ಞಾನಕ್ಕೆ ಜನಾಂಗ, ಜಾತಿಗಳ ಸೂತಕ ಬೇಡ ಒಳ್ಳೆಯದು ಎಲ್ಲರಿಗಾಗಿ. ಇಲ್ಲದಿದ್ದರೆ ಅದರ ಒಳ್ಳೆಯತನ ಅರ್ಥಹೀನ".

ಇದು ವಿಶ್ವಕರ್ಮನ ಸ್ಪಷ್ಟ ಅಭಿಪ್ರಾಯ. ನನಗೆ ಅವನ ಮಾತಿನ ಮೆಲುಕು. ಅವನೊಡನೆ ಕಳೆದ ಸಮಯ ಇನ್ನೂ ಹಸಿರಾಗಿಯೇ ಇತ್ತು. ಕ್ಷಣಹೊತ್ತು ಕಣ್ಣು ಮುಚ್ಚಿದ್ದೆ.

"ರಾಕ್ಷಸರು ಕಣ್ಣು ಮುಚ್ಚಿ ನಡೆದರೆ ಕೆಡಕು".

ನನ್ನ ಮಾತೇ ನನ್ನನ್ನು ಎಚ್ಚರಿಸಿತು. ಕಣ್ಣು ತೆರೆದೆ. ಹೇಮಾ ಪಾನಪಾತ್ರೆ ತುಂಬಿ ತುಟಿಯತ್ತ ತರುತ್ತಾಳೆ. ಒಂದು ಕೈಯಿಂದ ಚಷಕ ಎತ್ತಿ ಇನ್ನೊಂದು ಕೈಯಿಂದ ಅವಳನ್ನು ಪಕ್ಕಕ್ಕೆ ಸೆಳೆದುಕೊಂಡೆ.

ನನ್ನ ಎದೆಯಲ್ಲಿ ಒರಗಿಕೊಂಡ ಅವಳು ಯಾವಾಗಲೊ ಬೆನ್ನಹಿಂದೆ ಬಂದಿದ್ದಾಳೆ. ಪಾನಪಾತ್ರೆಯಲ್ಲಿ ಅವಳ ಪ್ರತಿಬಿಂಬ ನೋಡಿದೆ. ಬೆನ್ನ ಹಿಂದೆ ಕೈಚಾಚಿ ಅವಳನ್ನು ಬಾಚಿ ಮತ್ತೆ ಮಗ್ಗುಲಿಗೆ ಸೆಳೆದೆ.

ಹೇಮಾ, ಏಳು ಹೆಜ್ಜೆ ನಡೆದು ನನ್ನ ಮನೆ ತುಂಬಿದಳು. ಆದರೆ ಅವಳು ಬರಿ ಹೆಂಡತಿಯಲ್ಲ. ನನ್ನ ವೃತ್ತಿ–ಪ್ರವೃತ್ತಿಗಳಲ್ಲಿ ಅವಳು ವಹಿಸುತ್ತಿದ್ದ ಪಾತ್ರ ಹಿರಿಯದು. ಹೇಮಾ ಪಕ್ಕದಲ್ಲಿದ್ದರೂ ನಾನು ವಿಚಾರದ ಸೆಳವಿನಲ್ಲಿಯ ಕಡ್ಡಿ. ಅವಳು ನನ್ನನ್ನು ಅಲುಗಾಡಿಸಿ ಕೇಳಿದಳು.

"ವಿಶ್ವಕರ್ಮರ ಜತೆಯ ಸಂದರ್ಶನ ಹಿತಕರವಾಗಿತ್ತೇ ?"

"ಹೇಮಾ ನಿಜವಾಗಿಯೂ ಎರಡು ದಿನ ಕಳೆದದ್ದೇ ಗೊತ್ತಾಗಲಿಲ್ಲ. ವಿಶ್ವಕರ್ಮನ ಹೃದಯ ತೆರೆದ ಬಾಗಿಲು. ಹಲವು ವಿಷಯಗಳ ಬಗ್ಗೆ ನಾವು ಮುಕ್ತ ಮನಸ್ಸಿನಿಂದ ಮಾತನಾಡಿದೆವು. ಇಬ್ಬರೂ ಸಂತೋಷಪಟ್ಟುಕೊಂಡೇ ಭೇಟಿಯನ್ನು ಮುಕ್ತಾಯಗೊಳಿಸಿದೆವು".

"ಅವರು ನಿಮ್ಮನ್ನು ಕರೆದದ್ದೇಕೆ ?"

"ಸಲಹೆಗಾಗಿ........"

"ಯಾವ ಬಗ್ಗೆ ಕೇಳಿದರು ?"

"ಅದಕ್ಕೊಂದು ಪುಟ್ಟ ನೆವ ಇತ್ತು. ಅಮರಾವತಿ
ಉಪನಗರದಲ್ಲಿ ಒಂದು ಉದ್ಯಾನ, ಒಂದು ಈಜುಕೊಳ ನಿರ್ಮಿ
ಲಿದ್ದಾರೆ. ಅದಕ್ಕಾಗಿ ಅದು ಅನನ್ಯವಾಗುವ ರೀತಿಯಲ್ಲಿ ನ
ಸಲಹೆ ಬಯಸಿದ್ದರು".

"ನಿಮ್ಮ ಮಾತು ಅವರಿಗೆ ತೃಪ್ತಿ ತಂದಿತೆ ?"

ನಾನು ಪೂರ್ತಿ ಯೋಜನೆ ಹೇಗೆ ಹೇಳಬಹುದು
ನನಗಿರುವುದು ಅಲ್ಪ ಸಮಯ. ಆದರೂ ಉದ್ಯಾನದ ಬ
ನನ್ನ ತಲೆಯಲ್ಲಿ ಬಹುದಿನದಿಂದ ಇದ್ದ ಕಲ್ಪನೆಯನ್ನು ಅವ
ಗಮನಕ್ಕೆ ತಂದೆ. ತುಂಬ ಹಿಗ್ಗಿಹೋದ. "ಅಪೂರ್ವ
ಅಪೂರ್ವ" ಎಂದು ಉದ್ಗರಿಸಿದ ಈಜುಗೊಳದ ಬಗ್ಗೆ ನ
ಸಾಮಾನ್ಯ ನಕ್ಷೆಯನ್ನು ಅವರ ಮುಂದೆ ಬಿಡಿಸಿದಾಗ ಅವ
ಸಂತೋಷಪಟ್ಟರು. ಎದ್ದು ಕೈಕುಲುಕಿದರು.

"ಈ ಎರಡು ಜನಾಂಗ ಹೊಂದಿಕೊಂಡು ನಡೆದರೆ ವಿ
ಸುಂದರವಾಗುವುದರಲ್ಲಿ ಸಂದೇಹವಿಲ್ಲ. ಅಭಿವೃದ್ಧಿ
ಪೈಪೋಟಿ ಅಗತ್ಯ. ವಿನಾಶದ ಸ್ಪರ್ಧೆ ವಿಶ್ವಕ್ಕೇನೆ ಮಾರಕ".

ವಿಶ್ವಕರ್ಮ ಅಂತಃಕರಣ ತುಂಬಿ ನುಡಿದ.

"ಇದು ಇಬ್ಬರಿಗೂ ತಿಳಿಯಲೊಲ್ಲದು. ಲೋಕ
ರಾಕ್ಷಸರೂ ಅಗತ್ಯ ಎಂಬ ಮಾತು ದೇವತೆಗಳಿಗೆ ಇನ್ನೂ ಒಪ್ಪಿ
ಆಗಿಯೇ ಇಲ್ಲ. ದೇವತೆಗಳು ಎಲ್ಲ ಲೋಕಗಳಿಗೂ ಅನಿವಾ
ಎಂಬ ಮಾತು ರಾಕ್ಷಸರಿಗೂ ತಿಳಿಯಲೇ ಒಲ್ಲದು" ಎಂದರು.

ಹೇಮಾ ಮೈಯ ಹೊರಗೇ ಮನಸ್ಸು ತಂದು ಕೇ
ತ್ತಿದ್ದಳು.

ತೆರವಾದ ಪಾನಪಾತ್ರೆಯನ್ನು ತುಂಬುವುದನ್ನು ಅ
ನಿರ್ಲಕ್ಷಿಸಿದಾಗಲೂ ಅದನ್ನು ತುಟಿಗೆ ತಗಲಿಸಿದ್ದನ್ನು ಕಂಡ
ಹೇಮಾ ಕಿಲಕಿಲನೆ ನಕ್ಕಳು.

"ಇಲ್ಲ, ಹೇಮಾ ನಮ್ಮವರನ್ನು ದೇವತೆಗಳು, ದೇವ
ಗಳನ್ನು ನಮ್ಮವರು ಕಾರಣವಿಲ್ಲದೆ ಬಹಳ ಸಲ ದ್ವೇಷಿಸ
ತ್ತಾರೆ. ಇದು ನಿಲ್ಲುವುದು ಹೇಗೆ ?" ಗೃಹಿಣಿಯ ಮುಂ
ಈ ತೀಕ್ಷ್ಣ ರಾಜಕೀಯ ಏಕೆ ಎನ್ನಿಸಿದರೂ ಹೇಳಿ
ಹೇಮಾ ಬರಿ ಗೃಹಿಣಿಯಲ್ಲ. ನನ್ನ ಮಂತ್ರಿಯೂ.

ವಿಶ್ವಕರ್ಮನ ತಲೆಯನ್ನೂ ಇದೇ ತಿನ್ನುತ್ತದೆ. "
ದ್ವೇಷ, ಮತ್ಸರಗಳನ್ನು ಕಡಿಮೆ ಮಾಡುವಲ್ಲಿ ನಾವು ಅವರ
ಉಪಯುಕ್ತರಾಗಿಲ್ಲ. ಅವರಿಗೆ ನಾವು ಬೇಕಾದದ್ದು ದ್ವೇ

ಕ್ರಾಂತಿ ದರ್ಶನ

ಸೃಷ್ಟಿಯಾನಂದದನಾ ಅನಂತವಿಧಿಯನ್ನು
ಧ್ಯಾನಿಸುವ ಸಾಧಕರು ಶಾಂತಿಪಡೆಯೇ;
ಆ ಶಾಂತಿ ನನ್ನೊಳಗೆ ಸ್ಪಷ್ಟವಾಗಿ ಮೂಡಿಹುದು
ಅದರ ದರ್ಶನ ಮುಕ್ತಿ ಸಂಧಿಕಂದ
— ಜಿ. ಎಚ್. ಕೆ.

[illegible] ಹೇಗೆ [illegible] ಬಗ್ಗೆ."
[illegible] ನೋಂದು [illegible]

[illegible] ಮರೆತೇ [illegible]. ನಿನ್ನೆ ರಾಜಧಾನಿ [illegible] ಸಾಮ್ರಾಟರ ಅಮಾತ್ಯರು ಬಂದಿದ್ದರು. [illegible] ಅಗತ್ಯ [illegible] ಎಂದು [illegible] ಈ ಸಂದೇಶ ಕಳಿಸಿದ್ದಾರೆ."

ಹೇಮಾ ಒಳಗೆ ಹೋಗಿ ದುಕೂಲ [illegible] ತಂದು ಕೈಗೆ ಕೊಡುತ್ತಾಳೆ. ನನ್ನ ಕೈಗಳಿಗೆ ಕಣ್ಣುಗಳಿಗಿಂತ [illegible] ಚಾಪಲ್ಯವಿಲ್ಲ. ಅದನ್ನು ಬಿಚ್ಚಿ ಓದುತ್ತೇನೆ. ಸುತ್ತದೆ [illegible] ಎದುರಿಗಿನ ಮಣೆಯ ಮೇಲೆ ಅದನ್ನು ಎಸೆಯು [illegible].

ಹಣೆಯ ಮೇಲೆ ಮೂಡಿದ ಗೆರೆ, ಹುಬ್ಬಿನ ಗಂಟು ನೋಡಿ ಹೇಮಾ ಕೇಳುತ್ತಾಳೆ:

"ನೀವು ಬೇಜಾರು ಪಡುವ ಇಲ್ಲವೇ ನಿಮ್ಮನ್ನು ಉದ್ರೇಕಿಸುವ [illegible] ಏನು? ಸಾಮ್ರಾಟರ ಕಾಗದ ಆದೇಶವೇ ಅಲ್ಲವೆ?"

"ಈ ಗುಪ್ತ [illegible]

ಗುಣವಂತರನು ಬೇಡು

ಬೇಡುವೊಡೆ ಬೇಡು ನೀ, ಅಧಿಕ ಗುಣವಂತರನು ಸಿಗದಿರಲು
ಸಹಾಯ ನಷ್ಟವಿಲ್ಲ; ಎಂದೆಂದು ಬೇಡದಿರು
[illegible]ನಗುಣದಧಮರನು ಪಾಪಿಧನ ಮಾನಹನ ನಂದಕಂದ
—ಜಿ. ಎಚ್. ಕೆ.

[illegible] ದೇವತೆಗಳು ಅಮರಾವತಿಯ ಹೊರವಲಯದಲ್ಲಿ [illegible] ಉದ್ಯಾನ. ಈಜುಗೊಳ ನಿರ್ಮಾಣ ಮಾಡುವುದು ನಮ್ಮ [illegible] ಮೂಗಿಗೆ ತಾಗಿದೆ. ಅವರಿಗಿಂತ ನಮ್ಮ ಮೂಗು [illegible] ಎಂಬ ಜಂಭ ಇವರಿಗೆ. ಮೊನ್ನೆ ಅವರನ್ನು ಕಂಡಾಗಲೇ ಹೇಳಿದ್ದರು.

"ನಾವು ಅಂತರಿಕ್ಷದಲ್ಲಿ ಮೂರು ನಗರಗಳನ್ನು ನಿರ್ಮಿಸಬೇಕು. ಅದಕ್ಕೊಂದು ಸರಿಯಾದ ಯೋಜನೆ ನೀವು ಮಾಡಬೇಕು."

"ನಗರ ನಿರ್ಮಾಣ ರಾಷ್ಟ್ರದ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದೇ ಅಲ್ಲವೆ?" ಹೇಮಾ ನೇರ ಮನಸ್ಸಿನಿಂದ ಕೇಳಿದಳು.

"ಹೇಮಾ, ನಿನಗೊಂದು ಹುಚ್ಚು. ರಾಜಕೀಯದ ಗರ [illegible]ದವರ ಕಣ್ಣು ಕೆಳಗೆ ನೋಡುವುದೇ ಇಲ್ಲ. ಇವರ ಮನಸ್ಸು [illegible] ಮಲಿನವಾಗಿರುತ್ತದೆ. ತಾವು ಉಳಿಯಬೇಕೆನ್ನುವ [illegible] ಇತರರ ಅಳಿವನ್ನೇ [illegible]ಸುತ್ತಾರೆ. ಕೊನೆಗೆ ತಾವೂ [illegible]ಯುತ್ತಾರೆ.

"ನೋಡು, ಅಂತರಿಕ್ಷ ಇವರಿಗೆ ಸೇರಿದ ಜಾಗೆಯಲ್ಲ. [illegible]ದಿಂದ ಇವರು ಅದನ್ನು ಗೆದ್ದು ಸ್ವಾಧೀನಪಡಿಸಿ[illegible] ಇಲ್ಲ. ಇವರು ಹೇಳುವಂತೆ ಅದು ಯಾರ ಒಡೆತನಕ್ಕೂ ಸೇರ[illegible]. [illegible] ಅಧಿಕಾರಕ್ಕೆ ಒಳಪಟ್ಟ ಪ್ರದೇಶ. ಅದನ್ನಾಳುವ ದೇವತೆ[illegible] ಈಗ ಇದ್ದಾರೆ."

"ಹಾಗಾದರೆ ಇವರಿಗೇಕೆ ಅದರ ಮೇಲೆ ಆಸೆ?" ಹೇಮಾ [illegible] ಸಹಜವಾಗಿಯೇ ಕೇಳಿದಳು.

ದೇವತೆಗಳು ಆಗಾಗ ಭೂಮಿಗಿಳಿಯಲು ಅನುಕೂಲವಾಗಲೆಂದು ಅಂತರಿಕ್ಷದಲ್ಲಿ ಒಂದು ಪುಟ್ಟ ರಾಜ್ಯ ಸ್ಥಾಪಿಸಿದ್ದಾರೆ. ಭೂಮಿಯ ಜನರು ಸ್ವರ್ಗ ಹತ್ತುವಾಗ, ಸ್ವರ್ಗದ ದೇವತೆಗಳು ಭೂಮಿಗೆ ಇಳಿಯುವಾಗ ಇದೊಂದು ತಂಗುದಾಣವಾಗಬೇಕು ಎಂದು ಅವರ ಅಪೇಕ್ಷೆ ಇದೆ.

"ಈಗ ಇವರಿಗೇಕೆ ಅಂತರಿಕ್ಷದಲ್ಲಿ ನಗರ ನಿರ್ಮಾಣದ ಆಕಾಂಕ್ಷೆ?" ಹೇಮಾಳ ಮತ್ತೊಂದು ಪ್ರಶ್ನೆ.

"ಸ್ವರ್ಗದ ಮೇಲೆ ಆಕ್ರಮಣ ಮಾಡಲು [illegible] ಯತ್ನ ತುಂಬ ಕಷ್ಟದ್ದು. ಅದಕ್ಕೆಂದು ಅದು ವಿನಾಶಕರ ಅಸ್ತ್ರಗಳ ಸಂಗ್ರಹಕ್ಕಾಗಿ ಅಗತ್ಯವೆನ್ನಿಸಿದೆ. ಅಲ್ಲದೆ ಭೂಮಿಯಲ್ಲಿಯೂ ಅನೇಕ ಪ್ರಬಲ ರಾಜರು ಇವರನ್ನು ಎದುರಿಸುವ ಸಾಮರ್ಥ್ಯ [illegible]. ಅವರ ಮೇಲಿನ ದಾಳಿಗೆ ಇದು ಅನುಕೂಲವಾಗುತ್ತದೆ.

ಈ ಹೊಸ ನಗರ [illegible] ಕೇಂದ್ರವಾಗಿ [illegible] ವಿಶ್ವವನ್ನೆ ಹಾಳುಮಾಡುವ ಹೊಸ ಮಾರಕಾಸ್ತ್ರಗಳ, ಸಂಗ್ರ[illegible] ಪ್ರಯೋಗ ಇಲ್ಲಿ ನಡೆಯಬೇಕು. ದೇವತೆಗಳ [illegible]ಯಿಂದ ಸುರಕ್ಷಿತವಾಗಿ ಉಳಿಯಲು ಇದು ಸಹಾಯಕ[illegible]ತ್ತದೆ. ಇನ್ನೂ ಏನೇನೋ ಹಲವಾರು ವಿನಾಶಕರ ಯೋ[illegible]ಗಳು...."

"ಅದೇನೇ ಇರಲಿ ಸ್ನಾನ ಊಟಗಳನ್ನು ಮರೆತೇ ಕೂ[illegible]ತ್ತೀರಿ. ಏಳಿರಿ" ಸೇವಕಿ ಸ್ನಾನದ ಸಿದ್ಧತೆ ಸೂಚಿಸಿದಳು. [illegible] ಎದ್ದು ಹೊರಟೆ.

o o o o o o

ನನ್ನ ತಲೆಯಲ್ಲಿ ನೂರು ಚಿತ್ರಗಳ ಯಂತ್ರ ತಿರುಗುತ್ತಿತ್ತು. ಅಂತರಿಕ್ಷದಲ್ಲಿ ಮೂರು ನಗರಗಳ ನಿರ್ಮಾಣದ [illegible] ನಕ್ಷೆ ಸಿದ್ಧವಾಗುತ್ತಿದೆ. ನನ್ನ ಸಹಾಯಕರಿಗೆ [illegible] ಕೆಲಸ. ಸಾಮ್ರಾಟರು ಕೊಟ್ಟ ಗಡುವು ಮುಗಿಯುತ್ತ ಬಂದಿದೆ. ನಗರ ವಿನ್ಯಾಸದ ನಕ್ಷೆಯಲ್ಲಿ ಹಲವು ಸಲ ಬದಲಾವಣೆ. ನನ್ನ ಕೃತಿ ಪರಿಪೂರ್ಣವಾಗುವ ಬಗ್ಗೆ ಆತ್ಮವಿಶ್ವಾಸವಿತ್ತು.

ಆ ದಿನ ನಾನು ನನ್ನ ಸಹಕಾರಿಗ ... ಕೇಂದ್ರ ... ಗಾರಗಳ ಬಗ್ಗೆ ಕೆಲ ಹೊಸ ನಿರ್ದೇಶಗಳನ್ನು ನೀಡ ... ಕಾಗಿತ್ತು. ಹಾಗೆ ಮೊದಲಿನ ಸ್ಥಿತಿಯನ್ನು ಬದಲಿಸಿದರೆ ಕೆಲ ಹೊಸ ಸಮಸ್ಯೆಗಳು ಎದುರಾಗುತ್ತಿದ್ದವು. ಅವುಗಳ ನಿವಾರಣೆಗೆ ತಲೆ ಕೆರಮುಕೊಳ್ಳುತ್ತಿದ್ದೆ.

ಹೇಮಾ ಮೆಲ್ಲನೆ ಬಾಗಿಲು ಓರೆ ಮಾಡಿ ಪಾನ ಸಾಮುಗ್ರಿ ಗಳೊಂದಿಗೆ ಬಂದು ಮುಂದೆ ನಿಂತಿದ್ದಳು. ನಾನು ಚಕಿತನಾಗಿ ಕೇಳಿದೆ.

"ದೇವಿಯವರು ಬಂದು ಎಷ್ಟು ಹೊತ್ತಾಯಿತು ?"

"ಹೊತ್ತೇನು ಬಂತು ? ನೆನೆದವರ ಮನದಲ್ಲಿಯೇ ಅವಳು ಇರುತ್ತಾಳೆ...."

"ಈಗ ದೇವಿ ಮನಸ್ಸಿನಿಂದ ಹೊರಗೆ ಕಣ್ಣೆದಿರೇ ಇರು ವಳು."

"ಇರದೆ ಏನು ? ಮನಸ್ಸಿನ ಕದ ಮುಚ್ಚಿಕೊಂಡರೆ ದೇವಿಗೆ ಹೊರಗಿರದೆ ಇನ್ನೇನು ಗತಿ ?"

ಅವಳ ಕೊಂಕು ನುಡಿಗೆ ಕಾಲಿದ್ದಿಲ್ಲ. ನಾನು ಅವಳನ್ನು ಬರಸೆಳೆದೆ. ಅವಳು ಕೈಯೊಳಗಿನ ಪಾನ ಪಾತ್ರೆ, ಪೇಯ ಗಳನ್ನು ಆಸನದ ಮೇಲೆ ಇಟ್ಟು ನನ್ನ ಎದೆ ಸೇರಿಕೊಂಡಳು.

"ಹೇಮಾ ತಲೆಗೆ ತುಂಬ ಸಿಡಿತ ಬಗೆಹರಿಯದ ಸಮಸ್ಯೆ ಗಳು ನೋಡು."

ಅವಳು ಹಾಕಿಕೊಟ್ಟ ಪೈರೇಯವನ್ನು ಗಂಟಲಿಗಿಳಿಸಿದೆ. ಅವಳು ಅನುರಾಗದಲ್ಲಿ ಒಂದು ಹೊಸ ಪಲ್ಲವಿ ಹಾಡಿದಳು. ... ಏನು ಸಂಗೀತ,ಕೇಳುವ ಸಲಕ್ಕೊಮ್ಮೆ ಹೊಸತೇ ಅಲ್ಲವೆ? ... ರಾಗಾಭಿನಯ ಮುಗಿಸುತ್ತಲೇ ಕೇಳಿದಳು.

"ತಲೆ ಸಿಡಿತದ ಕಾರಣ ಕೇಳಬಹುದೆ ? ನೋವನ್ನು ಹೇಳಿಕೊಂಡರೆ ಅದು ಉಪಶಮನವಾದಂತೆಯೆ ?"

"ಒಮ್ಮೊಮ್ಮೆ ಉದ್ರೇಕಗೊಳ್ಳಲೂ ಸಾಧ್ಯ"

"ಶಾಂತಿಯಿಂದ ಪಿತ್ತ ಕಡಿಮೆಯಾಗುತ್ತದೆ."

"ನೋಡು, ಹೇಮಾ ಈ ರಾಕ್ಷಸ ಬಂಧುಗಳು ನನಗೆ ಶಿರಶೂಲ ಆಗಿದ್ದಾರೆ. ಅವರಿಗೆ ಹಗೆ ಹಗೆತನದ ಹೊರತು ಇನ್ನೊಂದು ಮಾತೇ ಗೊತ್ತಿಲ್ಲ. ಇನ್ನೊಬ್ಬನನ್ನು ಹಾಳು ಮಾಡುವ ಕನಸು ಹೆಣೆಯುವಾತನಿಗೆ ತಾನು ಹಾಳಾಗುತ್ತೇನೆ ಎನ್ನುವ ಎಚ್ಚರ ತಪ್ಪಿರುತ್ತದೆ."

"ನೋಡಿ ಹೆಣ್ಣು ಎಂದರೆ ಸರಳ ರೀತಿ. ಅವಳಿಗೆ ಇಷ್ಟು ಸಕ್ಕರಾರಿ ಗಾಸಿ ಮಾಡುತ್ತಿದೆ. ಈಗ ನಿಮ್ಮ ತಲೆ ತಿನ್ನುವು ದೇನು ... ಸಾಕು."

ಹೇಮಾಗೆ ಗಂಡನ ನೋವು ಕಡಿಮೆಮಾಡಬೇಕು ತಾನು ನೊಂದರೂ ಗಂಡನ ನೋವು ಕಡಿಮೆಯಾಗಬೇಕು ಅವನು ನಕ್ಕು ನಲಿದರೆ ಸಾಕು ಎಂಬ ಕುದಿ.

"ಅನೇಕ ನಮ್ಮ ಸಮ್ರಾಟ ಬಂಧುಗಳು. ನಮ್ಮ ... ಈಗ ಆಳುವ ಧಣಿಗಳು. ಅವರ ಜಗದ್ರೋಹ ತಲೆಗೆ ... ಟ್ಟಿದೆ."

"ಬುದ್ಧಿವಂತರಿಗೆ ಶಾಸ್ತ್ರಜ್ಞರಿಗೆ ನಿರ್ಭಯತೆ ಏಕೆ ಇರು ದಿಲ್ಲ. ನೀವು ಲೋಕವಿಖ್ಯಾತರಾದ ಆಚಾರ್ಯರು ಈ ಅರ ... ಜೋಳದ ಪಾಳಿಯ ಹಂಗು ಏಕೆ ? ಇದು ನಿಮ್ಮದೊಬ್ಬರದ್ದೇ ... ದೇವಗುರುವಾದ ಬೃಹಸ್ಪತಿಗಳು ನಮ್ಮ ಶುಕ್ರಾಚಾರ್ಯರು ... ಅಲ್ಲ, ಹಲವು ಜನ ಪ್ರಾಜ್ಞರಿಗೆ ಬದುಕಿನ ಬಗ್ಗೆ ಹೇಡಿಗಳು ಎ... ಸುವಷ್ಟು ಪರಾವಲಂಬನೆ ಇದೆ. ಯಾಕೆ ?"

ಹೇಮಾ ನನ್ನ ಮೂಲ ಹಿಡಿದು ಅಲ್ಲಾಡಿಸುವಳೆಂ... ತಿಳಿದಿದ್ದಿಲ್ಲ. ಇದನ್ನು ತಾನು ಹಲವು ಸಲ ಯೋಚಿಸಿ ನಿ... ತ್ತರನಾದ ಪ್ರಸಂಗಗಳೆಲ್ಲ ಮರುಳುಗಳಾಗಿ ತನ್ನನ್ನು ಕೆಂಗೆ... ಸಿದ್ದು ಪೂರ್ವಾನುಭವ.

"ಶಾಸ್ತ್ರ ಇರುವುದು ಜನಕ್ಕೆ. ಜನರಿಗೆ ರಾಜ ರಕ್ಷ... ಹೀಗಾಗಿ ವಿಜ್ಞಾನವು ರಾಜಕೀಯದ ರಕ್ಷೆ ಇಲ್ಲದೆ ಹೋದ... ಅನಾಥವಾಗುತ್ತದೆ. ವಿಜ್ಞಾನದ ಬೆಳವಣಿಗೆ ಬಯಸು... ಶಾಸ್ತ್ರಜ್ಞ ಅದನ್ನು ದುರಂತದ ಮೂಸೆಯಲ್ಲಿಯೆ ಬಗು... ತ್ತಾನೆ.

"ಏನಾದರೂ ನಿಮ್ಮ ಪರಾವಲಂಬನೆ....ಜನಕ್ಕೆ ಮಾ... ವಾಗುವ ವಿಜ್ಞಾನ ಬೆಳೆಯಬೇಕೆ?" ಹೇಮಾ ಕಾಂತ ಸಮ್ಮಿತದಲ್ಲಿ.

ಅಷ್ಟರಲ್ಲಿ ಬಾಗಿಲು ತಟ್ಟಿದ ಸದ್ದು. ಅದೇ ವಿದ್ಯುನ್ಮಾ... ಲಿಯ ಪ್ರಧಾನಿ ಬಾಗಿಲಲ್ಲಿ ಸೇವಕರೊಡನೆ ಉಪಹಾರ ಸಮೇ... ನಿಂತಿದ್ದಾನೆ. ಹೇಮಾ ಎದ್ದು ಒಳಗೆ ಹೋದಳು. ನಾನ... ಅವರನ್ನು ಸ್ವಾಗತಿಸಿ ಒಳಗೆ ಕರೆದೆ.

ಪ್ರಧಾನಿ ತಮ್ಮ ಜೀವಿತವನ್ನು ಅಸುರರ ಊಳಿಗದ... ಕಳೆದರೂ ವಿವೇಕಿ. ಜನ ಹಿತವಾದಿ ಎಂಬುದು ನನಗೆ ಗೊತ್ತು ಆದರೂ ಒಳ್ಳೆಯವರೇ ಹೆಚ್ಚು. ಪರಾಧೀನರಾಗಿರುತ್ತಾ... ಎಂಬುದು ನನಗೆ ಸ್ವಾನುಭವ.

ಪ್ರಧಾನಿ ಬಂದು ತಾವು ತಂದ ಉಪಹಾರ ಒಪ್ಪಿಸಿದರು ಅರಸರು ಹೇಳಿದ ಸಂದೇಶ ಹೇಳಲು ಅವರಿಗೆ ತುಂಬ ಆತು...

ಗೆಲುವು ಅಂಗೈನೆಲ್ಲಿ

ಗಂಡೆದೆಯು ನಿನಗಿರಲಿ ಕ್ಲೈಬ್ಯಬಾರದೆ ಇರಲಿ
ಧೈರ್ಯಸಿದ್ಧಿಗೆಲ್ಲಿಯದು ಸೋಲುಗೀಲು ;
ನುಗ್ಗು ನುಗ್ಗೆಲೊ ಜೀವನದ ಸಮರದಲಿ
ಗೆಲುವು ಅಂಗೈನೆಲ್ಲಿ ನಂದಕಂದ
—ಜಿ. ಎಚ್. ಕೆ.

ಅಂತರಂಗದ ಗುಹೆ

ವಿಜ್ಞಾನ ಓದಿದರು ಅಜ್ಞಾನ ಅಳಿದೀತೆ ?
ಅಂತರಂಗದ ಗುಹೆಯ ಹೊಕ್ಕು ನೋಡು ;
ನಾನಾರು ? ಇಲ್ಲೇಕೆ ? ಬಂಧಮೋಚನವೆಂದು ?
ಪ್ರಶ್ನೆಗುತ್ತರ ಹುಡುಕು, ನಂಪಕಂದ
—ಜಿ. ಎಚ್. ಕೆ.

ಣಾಯಿತು. ಅದರೂ ಬಿಸಿತುಪ್ಪ.

"ಶಿಲ್ಪಿಗಳು ಮನ್ನಿಸಬೇಕು. ಕರ್ತವ್ಯವು, ಪ್ರೇಮಕ್ಕಿಂತ ಹೆಚ್ಚು ಹರಿತವಿರುತ್ತವೆ. ನಿಮ್ಮ ಬಗ್ಗೆ ನನಗೆ ತುಂಬ ಗೌರವ ಇದೆ. ಆದರೆ ನನ್ನ ರಾಜಕೀಯ ಕರ್ತವ್ಯಗಳು ಸಾಕಷ್ಟು ನಿರ್ದಯವಾಗಿವೆ."

"ಪ್ರಧಾನಿಗಳ ಅಂತಃಕರಣ ನನಗೆ ಗೊತ್ತಿದೆ. ತಾವು ತಂದ ದೊರೆಗಳ ಸಂದೇಶ ಏನಿದ್ದರೂ ಹೇಳಬೇಕು."

ಆ ವಿಷಯದಲ್ಲಿ ನನಗೆ ನನ್ನದೆಂಬುದೇನೂ ಇಲ್ಲ. ನೀವು ಈಗಾಗಲೆ ದೊರೆಗಳು ಹೇಳಿದ ಪುರ ನಿರ್ಮಾಣ ಕಾರ್ಯದಲ್ಲಿ ಸಾಕಷ್ಟು ವಿಳಂಬ ಮಾಡಿದ್ದೀರಿ. ದೊರೆಗಳಿಗೆ ಇದರಿಂದ ತುಂಬ ಬೇಜಾರಾಗಿತ್ತು. ಆದರೆ ಇತ್ತೀಚೆ ನಮ್ಮ ಬೇಹುಗಾರರು ತಾವು ದೇವಶಿಲ್ಪಿಗಳ ಜತೆಗೆ ನಿಕಟ ಸಂಪರ್ಕ ಸಾಧಿಸುತ್ತಿದ್ದ ಸಮಾಚಾರವನ್ನು ದೊರೆಗಳ ಗಮನಕ್ಕೆ ತಂದಿದ್ದಾರೆ. ಅವರಿಂದ ಅವರ ಬೇಜಾರು ಕೋಪಕ್ಕೆ ತಿರುಗುತ್ತಲಿದೆ.

"ಪ್ರಧಾನಿಗಳು ಪರಾಂಬರಿಸಬೇಕು. ಸಮ್ರಾಟರ ಉದ್ದೇಶ ವಿಶ್ವದ್ರೋಹವಾಗಿದ್ದರೂ ನಾನು ಕಲಾವಿದ. ಶಿಲ್ಪಿ, ನನ್ನ ಕೃತಿ ಅಮರವಾಗಬೇಕೆಂಬ ಸಂಕಲ್ಪ. ನಾನು ಆ ಬಗ್ಗೆ ಸನ್ನಿದ್ಧತೆ ಮಾಡಬೇಕು. ಹಲವು ಸಲ ಹಲವು ಆಕೃತಿ ಪ್ರಕೃತಿಗಳನ್ನು ನನ್ನ ಕೃತಿಯ ವಿಷಯದಲ್ಲಿ ಯೋಚಿಸುವುದು ನನ್ನ ಸ್ವಭಾವ.

"ಸಮ್ರಾಟರ ಇಚ್ಛೆಯಂತೆ ನನ್ನ ಸೃಷ್ಟಿ ನಿರ್ಮಿತವಾಗುವುದೇನೋ ಸರಿ. ಆದರೆ ನಿರ್ಮಾಣದಲ್ಲಿ ನನ್ನ ನಿರ್ಣಯ ಕೊನೆಯದು. ರಾಜರಿಗೆ ಅವಸರವಿದ್ದರೆ ಕೃತಿಯಲ್ಲಿ ಊಣೆಯಿಟ್ಟು ನಿರ್ಮಿಸುವುದು ನನ್ನಿಂದ ಸಾಧ್ಯವಿಲ್ಲ" ಎಂದೆ.

"ಮಹಾಶಿಲ್ಪಿಗಳ ಅರ್ಹತೆ, ಹಾಗು ಸಂಕಲ್ಪಗಳು ನನಗೆ ಗೊತ್ತು. ಆದರೆ ಈ ರಾಜಕೀಯ ಜನರಿಗೆ ಇನ್ನೊಬ್ಬರಿಗಿಂತ ತಾನು ದುರ್ಬಲನಿದ್ದರೂ ಬಲಿಷ್ಠನೆಂದು ತೋರಿಸುವ ತವಕ. ನಮ್ಮ ಸಮ್ರಾಟರ ಸ್ವಭಾವ ನಿಮಗರಿಯದ್ದಲ್ಲ. ಅವರು ಆಗಬೇಕೆಂದುದು ಆಗಲೇಬೇಕು".

"ಹಟವು ಚಾಪಲ್ಯದ ಅಲ್ಪಾಯುಷಿಯಾದ ಸಂತಾನ. ಅದರಿಂದ ಯಾರಿಗೂ ಒಳಿತಿಲ್ಲ. ನಿಯಂತ್ರಣವಿಲ್ಲದ ವೇಗ ಆಕಸ್ಮಿಕದ ತಾಯಿ. ಸಮ್ರಾಟರ ಬಯಕೆಗಳು ಈ ಜಗತ್ತಿನ ದುರಂತ ಭವಿಷ್ಯವನ್ನು ವರ್ತಮಾನದಲ್ಲಿಯೆ ಅನುಭವಿಸುವ ಹವ್ಯಾಸವಾಗಿದೆ".

"ಆಳುವವರ ದುಡುಕನ್ನು ದೇಶವೇ ಅನುಭವಿಸಬೇಕು. ಈಗ ಸಮ್ರಾಟರ ಕೊನೆಯ ಸಂದೇಶ ತಲುಪಿಸಲು ನಾನು ಬಂದಿದ್ದೇನೆ. ಬರುವ ನಭಸ್‌ಗೆ ಮೊದಲು ಪುರನಿರ್ಮಾಣ ಕಾರ್ಯ ಮುಗಿಯಬೇಕು ಇಲ್ಲವೆ ಶಿಲ್ಪಿಗಳು ಮರಣದಂಡನೆಗೆ ಸಿದ್ಧರಾಗಬೇಕು".

"ಸಮರ್ಪಿತ ಜೀವದ ಮೇಲಿನ ಬಲಾತ್ಕಾರವು ಆತ್ಮನಾಶವನ್ನಲ್ಲದೆ......."

"ಆಗಲಿ ಪ್ರಧಾನಿಗಳೇ ಮಹಾರಾಜರಿಗೆ ಪುರನಿರ್ಮಾಣ ಅವರ ಗಡುವಿನೊಳಗೇ ಪೂರ್ತಿಗೊಳ್ಳುತ್ತದೆಂದು ಹೇಳಿಬಿಡಿರಿ".

ಆ ದಿನ ನಾನು ಹೇಮಾಳ ಜತೆಗೆ ತ್ರಿಪುರ ನಿರ್ಮಾಣದ ನಿರೀಕ್ಷಣೆಗೆ ಹೋಗಿದ್ದೆ. ನಿರ್ಮಾಣದ ಕಾರ್ಯ ಮುಗಿದು ಹೋಗಿತ್ತು. ಹೇಮಾ ಅದನ್ನು ತನ್ನ ಸ್ತ್ರೀ ಸಹಜವಾದ ಕುತೂಹಲದಿಂದ ನಿರೀಕ್ಷಿಸಿ ತುಂಬ ಚಕಿತಳಾದಳು.

ಹೇಮಾಳಿಗೆ ಈ ನಗರ ನಿರ್ಮಾಣದ ತಾಂತ್ರಿಕ ವೈಭವ ಅರ್ಥವಾಗಿಲ್ಲ. ಆದರೆ ಅವಳು ವಿಶ್ವದ ಹಲವು ದೊಡ್ಡ ನಗರಗಳನ್ನು ನೋಡಿದ್ದಾಳೆ. ಇದು ಮೊಟ್ಟ ಮೊದಲನೆಯ ಅದ್ಭುತ ನಗರವೆಂದರೆ ಆಶ್ಚರ್ಯವಲ್ಲ. ನಮ್ಮ ಭೂಮಂಡಲ ಸೂರ್ಯನ ಸುತ್ತ ತಿರುಗುತ್ತದೆಂದು ಅವಳು ಕೇಳಿ ಬಲ್ಲಳು. ಆದರೆ ಅವಳು ತಿರುಗುತ್ತಿರುವ ನಗರಗಳನ್ನು ನೋಡಿದ್ದು ಇದೇ ಮೊದಲು.

"ಈ ವೈಮಾನಿಕ ಸರ್ವೇಕ್ಷಣೆಯಲ್ಲಿ ನಾನು ನಗರಗಳನ್ನು ನೋಡಿದ್ದು ಅತ್ಯದ್ಭುತ. ಇಷ್ಟು ಅದ್ಭುತ ವೇಗದಲ್ಲಿ ಈ ನಗರ ತಿರುಗುತ್ತಿದ್ದರೂ ನಗರದಲ್ಲಿರುವಾಗ ಅದರ ಗತಿ ಗೊತ್ತಾಗುವುದಿಲ್ಲ.

"ಹೇಮಾ ಈ ನಗರಗಳ ನಿರ್ಮಾಣದಲ್ಲಿ ನನ್ನ ತಾಂತ್ರಿಕ ಕೌಶಲ್ಯವನ್ನು ಅಭಿವ್ಯಕ್ತಗೊಳಿಸಿದ್ದೇನೆ. ಇದನ್ನು ಮೀರಿ ಇನ್ನು ನನ್ನ ಬುದ್ಧಿ ಕೆಲಸ ಮಾಡಲಿಕ್ಕಿಲ್ಲ. ನನ್ನ ನಿರ್ಮಿತಿಯಲ್ಲಿ ಇದೇ ಮೊಟ್ಟ ಮೊದಲನೆಯನು ಹಾಗು ಕಟ್ಟಕಡೆಯದು."

"ಹಾಗೇಕೆ ಹೇಳುತ್ತೀರಿ ? ಇದರಿಂದ ದೊರೆತ ಮಹಾನುಭವ ಇದಕ್ಕಿಂತ ಇನ್ನೂ ಅದ್ಭುತವಾದ ಸೃಷ್ಟಿಗೆ ಕಾರಣವಾಗಬಹುದಲ್ಲವೆ ?"

"ಅನುಭವವೊಂದೇ ಸೃಷ್ಟಿಗೆ ಕಾರಣವಲ್ಲ. ಅನುಭವದ ಹಿಂದೆ ಪ್ರತಿಭೆಯ ಮಿಂಚಿನ ಅವಶ್ಯಕತೆಯೂ ಇದೆ."

ನಾನು ಎಲ್ಲೋ ಹೋಗುತ್ತಿರುವುದನ್ನು ಗಮನಿಸಿ ಹೇಮಾ ಮತ್ತೆ ಮನಸ್ಸಿನ ಸಮ ನೆಲಕ್ಕೆ ಬಂದಳು. ನಾವು ಈ

ಮೂರೂ ನಗರಗಳನ್ನು ಮೂರೇ ... ಸಂದರ್ಶಿಸಿದೆವು.

ಹೇಮಾ ಇವುಗಳಿಗೆ ಬರಿ ವೈಮಾನಿಕ ದಾರಿ ಅಲ್ಲದೆ ರಶ್ಮಿ ಮಾರ್ಗವನ್ನು ನೋಡಿದಳು. ಈ ರಶ್ಮಿ ಮಾರ್ಗವು ವಿಶ್ವದ ...ಮೆ ಮೊದಲಿನದು. ಪ್ರತಿಯೊಂದು ಊರಿನ ಉನ್ನತ ಪ್ರದೇಶದಲ್ಲಿರುವ ಚುಂಬಕ ಸ್ಥಾವರಗಳಲ್ಲಿ ಇದರ ನಿಯಂತ್ರಣ ಕೇಂದ್ರವಿದೆ. ಅಲ್ಲಿಂದ ನಿರಿಷ್ಟ ಸಾಮರ್ಥ್ಯದ ಹಸಿರು ಕಿರಣಗಳ ಮೂಲಕ ವ್ಯಕ್ತಿ ವಸ್ತುಗಳನ್ನು ನಗರಾಂತರಕ್ಕೆ ಸಲೀಸಾಗಿ ಸಾಗಿಸಬಹುದು.

ಹೇಮಾ ಈ ಅದ್ಭುತ ಕೆಲಸವನ್ನು ತುಂಬ ಮೆಚ್ಚಿಕೊಂಡಳು. ಒಂದು ನಗರದಿಂದ ಇನ್ನೊಂದು ನಗರಕ್ಕೆ ಹೋಗಿಬಂದಳು. ಅದೊಂದು ನಿರಾತಂಕವಾದ ಸಂತೋಷಕರ ಪ್ರವಾಸ. ಒಂದು ನಗರದಿಂದ ಇನ್ನೊಂದು ನಗರ ಒಂದು ಸಾವಿರ ಎಂಟು ನೂರು ಯೋಜನ ದೂರ ಇದೆ. ಮೂರನೆಯ ನಗರ ಮಾತ್ರ ಇವೆರಡರಿಂದ ಎರಡು ಸಾವಿರ ಯೋಜನ ದೂರದಲ್ಲಿದೆ.

ನಗರದ ಒಳಭಾಗದಲ್ಲಿಯೇ ವಿಮಾನದ ಇಳಿದಾಣವಿದೆ. ನಗರ ಪರ್ವತ ಪ್ರದೇಶದ ಶಿರೋಭಾಗದಲ್ಲಿ ಅಯಸ್ಕಾಂತ ನಿಲ್ದಾಣದಲ್ಲಿ ರಶ್ಮಿ ಮಾರ್ಗ ತಂಗುದಾಣ ಅಲ್ಲಿಯ ಪ್ರವಾಸೀಯ ...ರಾಮಧಾಮ ಅನನ್ಯವಾಗಿ ನಿರ್ಮಿತವಾಗಿದೆ.

ನನಗೆ ಕೃತಿಯ ಬಗ್ಗೆ ಅಭಿಮಾನವೆನ್ನಿಸಿತು. ಹೇಮಾ ಪಕ್ಕದಲ್ಲಿದ್ದಾಗ ನನ್ನ ಅಭಿಮಾನಕ್ಕೆ ಶಿಖರ. ಹೇಮಾ ಈ ...ತ್ರಿಣ ತಜ್ಞಳಲ್ಲ. ನಾನೂ ಸಾಮಾನ್ಯ ಗೃಹಸ್ಥನಲ್ಲ. ...ಹಿಣಿಯ ಮುಂದೆ ನನ್ನ ಒಳ್ಳೆಯ ಕೆಲಸ ಇನ್ನೂ ...ಯಿಸದು ಕಾಣುವ ಸಾಮಾನ್ಯರಿಗಿಂತ ನಾನು ...ಗಿಯೂ ಮೇಲಿನವನೇ ಇದ್ದೆ. ಅವರೂ ನನ್ನೇ ನೋಡಿ ...ಗ ನಾನೊಬ್ಬನೇ ಇದ್ದೆ. ಕೃತಿ ಇಷ್ಟು ದೊಡ್ಡದೆನಿಸಿಲ್ಲ ...ಮು ಅದು ಇನ್ನೂ ದೊಡ್ಡದು. ಹೆಂಡತಿ ಒಂದು ಅಯಸ್ಕಾಂತೀಯ ಜಂಗಮ ಸ್ಥಾವರ ಇರಬಹುದೇ ಎನ್ನಿಸಿತು.

ನಾನು ವಿಶ್ವಕರ್ಮನನ್ನು ಮೊನ್ನೆ ಕಂಡಾಗ ನಗರಗಳನ್ನು ಸಂದರ್ಶಿಸಲು ವಿನಂತಿಸಿದ್ದೆ.

ಆ ಮಹಾನುಭಾವ ನಿಜವಾಗಿಯೂ ಮಹಾಶಿಲ್ಪಿ. ಅವನು ತನ್ನ ಅಂತರಂಗದ ಕದ ತೆರೆದು ಹೇಳಿದ.

"ನೋಡು ಮಗು, ನಾವು ಪ್ರತಿಭೆಯ ತುತ್ತತುದಿಯಲ್ಲಿದ್ದರೂ ಶಾಸನದ ಕೋಳಿನ ಆಳುಗಳೇ. ನಾನೂ ಅಷ್ಟೇ: ಬೇರೆ ಏನೂ ಬೇಕಿಲ್ಲ. ನಾವು ದೊಡ್ಡವರೆಂದು ಲೋಕ ನಂಬಿದೆ. ನಮ್ಮಲ್ಲಿಯ ದುರ್ಬಲತೆ ಅದಕ್ಕೆ ಕಂಡಿಲ್ಲ. ಏಕೆಂದರೆ ಅದು ನಮಗಿಂತ ದುರ್ಬಲವಿದೆ. ನಿನ್ನ ನಗರಗಳನ್ನು ಹಾಳುಮಾಡುವ ವಿಧಾನವನ್ನು ನನ್ನ ತಲೆ ಈಗ ಯೋಚಿಸುತ್ತಿದೆ.

ಮಗು, ವಿಜ್ಞಾನ, ತಂತ್ರಜ್ಞಾನದ ಒಳಿತಿನ ವಿಷಯವಾಗಿ ಅಭಿಮಾನ ಪಡುವ ಅವಸ್ಥೆಯಲ್ಲಿ ನಾವಿಲ್ಲ. ನನಗೂ ಅಭಿಲಾಷೆಯುಂಟು. ತರುಣ ... ಕಣ್ಣುಂಬ ನೋಡಿ ನಿನ್ನನ್ನು ಅಪ್ಪುವ ತವಕ. ಆದರೆ ... ಕೈಗಳನ್ನು ಯಾರೋ ಕಸಿಯುತ್ತಾರೆ.

"ಮಗು ನಾನು ನಿನ್ನ ಸೃಷ್ಟಿಯ ನಕ್ಷೆ ನೋಡಿದ್ದೇನೆ. ಏನು ಅದ್ಭುತ! ಆದರೆ ಮಗು ಈ ವಿಶ್ವಕರ್ಮ ನಿನ್ನ ನಕ್ಷೆ ನೋಡಿ ಅದರ ವಿನಾಶ ಚಿಂತಿಸುವುದಿಲ್ಲ. ಯೋಚಿಸುವುದಿಲ್ಲ. ಆದರೆ ನನ್ನ ಕೈಯಿಂದಲೇ ನಿನ್ನ ನಗರ ವಿನಾಶ ಬರೆದಿದೆ ಸುಳ್ಳಲ್ಲ. ತರುಣ ಮಿತ್ರ ನನ್ನ ಅಪರಾಧ ಕ್ಷಮಿಸು."

ವಿಶ್ವಕರ್ಮನ ಆ ಮಾತು ನಾವೆಷ್ಟು ಅಸಹಾಯಕ ... ನನ್ನು ಹೇಳುತ್ತಿದೆ. ಆ ಜ್ಞಾನವೃದ್ಧನ ನೋವು ಅದೆಷ್ಟು ... ಜ್ಞಾನವನ್ನು, ವಿಜ್ಞಾನವನ್ನು ತಪ್ಪಿಗಾಗಿ ಬಳಸುವ ... ಈ ಲೋಕದಲ್ಲಿ ಉಳಿಯುವುದಿಲ್ಲ.

"ನಾನು ಅವರಲ್ಲಿ ಕೇಳಿದೆ. ಇದಕ್ಕೆ ದಾರಿ ಇಲ್ಲವೆ?"

"ಖಂಡಿತ ಇದೆ. ಆದರೆ ಅದು ವಿಜ್ಞಾನಿಯ ಕೈಯಲ್ಲಿ ಇಲ್ಲ. ನಿಸರ್ಗವನ್ನು ತುಳಿಯುವವರನ್ನು ನಿಸರ್ಗ ಒಂದು ದಿನ ಒರೆದು ಹಾಕುತ್ತದೆ."

ಈ ಮೂರು ನಗರಗಳನ್ನು ಸುತ್ತಿ ನಾನು ನನ್ನ ಪ್ರಕಾರ ಮಂದಿರಕ್ಕೆ ಬಂದೆ. ಹೇಮಾಗೆ–

"ಇದು ನೋಡು ಇದು ನಿನ್ನ ಪರಮಧಾಮ. ಅಲ್ಲ ಪ್ರಿಯೆ. ನಮಗೆ ಇಲ್ಲಿಂದಲೂ ಪತನ ಸಾಧ್ಯವಿದೆ. ಆದರೆ ಇಂತಹ ಅದ್ಭುತ ಕೃತಿ ಜಗತ್ತಿನಲ್ಲಿ ಇನ್ನು ಹಲವಾರು ಸಾವಿರ ವರುಷಗಳವರೆಗೆ ಆಗುವುದಿಲ್ಲ. ಆದರೆ ಇದೇ ಕಡೆಯದಲ್ಲ. ನಾಳೆ ಇನ್ನೊಬ್ಬ ಮಹಾ ತಂತ್ರಜ್ಞ ಬರುತ್ತಾನೆ. ಆದರೆ ಅವನೂ ಯಾರ ಸೂತ್ರದಂತೆಯೋ ಕುಣಿಯುವ ಬೊಂಬೆಯು."

ನಾನು ಹೇಮಾಳಿಗೆ ಈ ಮೂರು ನಗರಗಳ ಅಕ್ಷಮಾರ್ಗ ಅವುಗಳ ಕಕ್ಷೆ ಕುರಿತು ವಿವರಣೆ ನೀಡಿದೆ. ನಮ್ಮ ಮನೆತನ ನಗರಾಧಿಪತಿಗಳಿಗೆ ತಿಳಿಯದಂತೆ ಅವುಗಳ ನಿಯಂತ್ರಣ ... ಹೊಂದಿದ್ದನ್ನೂ ಹೇಳಿದೆ.

ಅಲ್ಲಿಯ ದೂರದರ್ಶನ, ಆಕಾಶವಾಣಿ, ದೂರವಾಣಿ ಹಾಗೂ ಚಿತ್ರಗ್ರಾಹಕ ಸ್ಥಾವರಗಳನ್ನು ತೋರಿಸಿ ಕ್ಷಣಾರ್ಧದಲ್ಲಿ ಅಲ್ಲಿಯ ಹಾಗೂ ಸಂಪರ್ಕ ಸಾಧಿಸಿದ ನಗರ ಚಿತ್ರಣ ವ್ಯವಸ್ಥೆಯನ್ನು ತೋರಿಸಿದೆ.

"ಇಷ್ಟು ಭದ್ರವಾದ ಈ ವ್ಯವಸ್ಥೆ ಕುರಿತು ನಿಮಗೆ ಮಹಾ ನಿರಾಶೆ ಏಕೆ ಇದೆ. ಇದರ ಬಗ್ಗೆ ಅಭಿಮಾನಪಡುವುದನ್ನು ಬಿಟ್ಟು ತಿರಸ್ಕಾರ ತಾಳುತ್ತೀರಲ್ಲ ಏಕೆ?"

ಹೇಮಾ ತುಂಬ ನೊಂದುಕೊಂಡು ಕೇಳಿದಳು. ನಾನು ಒಂದು ಕ್ಷಣ ಅವಳ ಮಾತಿಗೆ ನಕ್ಕೆ. ಆದರೆ ಏನಾದರೂ ಉತ್ತರ ಕೊಡಬೇಕಿತ್ತು.

ತನ್ನ ಕೈಹಿಡಿದವಳ ಪ್ರಧಾನ ಪ್ರಶ್ನೆಗೆ ನಿರುತ್ತರನಾದ ಗಂಡ ಶಾಂತಿಯನ್ನು ಬಹಳ ಹೊತ್ತು ಅನುಭವಿಸಲಾರ.

"ಹೇಮಾ ನಿನಗೆ ಈ ನಗರಗಳ, ಧಾಮದ ವರ್ತಮಾನ

ಈ ಪ್ರಜಾರಾಜ್ಯದಲಿ

ಒಂದು ಕಣ್ಣಿಗೆ ಬೆಣ್ಣೆ
ಇನ್ನೊಂದಕೆ ಸುಣ್ಣ
ಜಾತಿ ಜಾತಿಯ ಹೀಗೆ
ವಿಂಗಡಿಸಿ ಬಣ್ಣ!
ಹೀಗೇಕೆ ಹಾಗೇಕೆ
ಎನ್ನುವವ ಕೋಣ
ಕಂಡ ಕುಂಡಿಯ ಸುಡುವ
ಉಂಡವನೆ ಜಾಣ!

—ಜಿ. ಎಸ್. ಅನ್ನದಾನಿ



ಪ್ರತ್ಯಕ್ಷ ಮಾತ್ರವಿದೆ. ನನ್ನ ಮನಸ್ಸಿಗೆ ಅತಿಯಾದ ವೇಗವಿರುವುದರಿಂದ ನಾನು ಇದರ ಭವಿಷ್ಯವನ್ನು ನಿರ್ಮಿತಿಯ ಮೊದಲೇ ತಿಳಿದಿದ್ದೇನೆ.

ನೋಡು, ಈ ನಿರ್ಮಿತಿಯ ಅರ್ಹತೆಯನ್ನು ಈ ಲೋಕಗಳಲ್ಲಿ ಅರಿಯಬಲ್ಲ ವ್ಯಕ್ತಿ ದೇವಶಿಲ್ಪಿ ಮಾತ್ರ. ಅವನಿಂದ ಇವುಗಳ ಉದ್ಘಾಟನೆಯಾಗಬೇಕು ಎಂದು ನನ್ನ ಇಂಗಿತವಿತ್ತು. ಆದರೆ ಆತ "ಶತ್ರು ವಿಜ್ಞಾನಾಧಿಪತಿ" ಎಂಬ ಬಣ್ಣವಿದೆ. ನಾನು ನನ್ನ ಅಪೇಕ್ಷೆಯನ್ನು ಹೇಳಿದರೆ ನಮ್ಮವರು ನನ್ನನ್ನು ಸುಟ್ಟುಹಾಕಿದರೂ ಕಡಿಮೆ ಎಂದುಕೊಳ್ಳುತ್ತಾರೆ.

ಈ ನಿರ್ಮಾಣದ ಉಪಕೃತಿಯ ಇನ್ನೊಂದು ಮಗ್ಗುಲಲ್ಲಿಯೇ ಭೀಕರ ಕ್ರೌರ್ಯ ಬಲಾತ್ಕಾರಗಳಿವೆ. ಅಂತೆಯೆ ಇದರ ಬಗ್ಗೆ ನಿರಾಶೆಯಿಲ್ಲ; ಇದು ಮಾಡುವ ಕೆಡುಕಿನ ಬಗ್ಗೆ ಭೀತಿ ಇದೆ."

ಹೇಮಾ ಬೆವೆತುಹೋದಳು.

o o o o o

ನಾನು ಮನೆಯೊಳಗೆ ಏನೋ ಯೋಚಿಸುತ್ತ ಕುಳಿತಿದ್ದೆ. ಹೇಮಾ ಭೂಮಿಯ ನಗರದ ಸಮಾರಂಭವೊಂದರಲ್ಲಿ ಪಾಲುಗೊಳ್ಳಲು ಹೋಗಿದ್ದಳು. ನಿನ್ನೆಯೇ ಬರಬೇಕಿತ್ತು. ಇನ್ನೂ ಬರಲಿಲ್ಲ. ವಿಜ್ಞಾನಿಗೆ ತಪ್ಪು ಎಂಬುದು ವಿನಾಶಕ್ಕಿಂತ ದೊಡ್ಡದಿದೆ. ಅವನಿಗೆ ವಿನಾಶ ತಪ್ಪು ಎನ್ನಿಸುವುದಿಲ್ಲ. ಅದೊಂದು ಕ್ರಿಯೆ ಮಾತ್ರ.

ಇದ್ದಕ್ಕಿದ್ದಂತೆಯೆ ಏನೋ ಭೀಕರ ಸದ್ದು. ಬೆನ್ನಹಿಂದೆ ಕಟ್ಟಿದ ಕೈ ಹಾಗೆಯೇ ಇತ್ತು. ಕತ್ತನ್ನು ದೂರದರ್ಶನದ ಕಡೆಗೆ ಹೊರಳಿಸಿದೆ. ತ್ರಿಪುರಗಳಲ್ಲಿ ಒಂದಾದ ಸುವರ್ಣಪುರ ಹೊತ್ತಿ ಉರಿಯುತ್ತಿದೆ. ನಾನು ಕೈಗಳನ್ನು ಎತ್ತಿ ಚೀರಿದೆ ಅದು ನನಗೆ ಹಿಂದಿನಿಂದ ಗೊತ್ತು. ಏಕೆಂದರೆ ನನ್ನ ಹಳದಿ ಸಂಪುಟ ನನ್ನ ಚಿತ್ರದೊಂದಿಗೆ ಅದನ್ನು ಧ್ವನಿಮುದ್ರಿಸಿಕೊಂಡಿತ್ತು.

ನಾನು ಕಣ್ಣುಗಳನ್ನು ಅರಳಿಸಿ ನೋಡಿದೆ. ಉಳಿದೆರಡೂ ಪುರಗಳೂ ಅಗ್ನಿಗೆ ಆಹುತಿಯಾಗಿವೆ. ಸುವರ್ಣಪುರದ ಅಣುಕೇಂದ್ರದಿಂದ ಜೀವನಾಶಕ ರಸಾಯನ ಸೋರಿ ಹೋಗುತ್ತಿದೆ. ಅದರ ನೀಲಿಯುಕ್ತ ಹಳದಿ ಜ್ವಾಲೆಗಳು ಅಂತರಿಕ್ಷದಲ್ಲಿ ಹಬ್ಬಿಕೊಂಡಿವೆ. ರಜತಪುರದಿಂದ ಮಾರಕಾಸ್ತ್ರ ಸಂಗ್ರಹದಿಂದ ಆಸ್ಫೋಟನೆಗಳು ಇನ್ನೂ ಕೇಳಬರುತ್ತಿವೆ. ಲೋಹಪುರದಿಂದ ಯಾವ ಸಂಕೇತಗಳೂ ಇಲ್ಲ. ಅದು ಈಗಾಗಲೆ ಉರಿದು ಬರಿ ಕೆಂಡದ ಬಂಡೆಯಾಗಿ ನಿಗಿನಿಗಿಸುತ್ತಿದೆ.

ನನಗೆ ದಿಗ್ಭ್ರಾಂತಿಯಾಯಿತು. ನಾನು ತ್ರಿಪುರಗಳ ದುರಂತ ಭವಿಷ್ಯದ ಚಿತ್ರ ಚಿಂತಿಸಿದ್ದೆ. ಆದರೆ ಇಷ್ಟು ಬೇಗನೆ ಅದಕ್ಕೆ ವಿನಾಶ ಬಂದೀತೆಂದು ಭಾವಿಸಿದ್ದಿಲ್ಲ. ನನ್ನ ಚಿತ್ತ ಸ್ತಿಮಿತತೆಯನ್ನು ಕಳೆದುಕೊಂಡಿತ್ತು. ನಾನು ಕಂಬಕ್ಕೊರಗಿ ನಿಂತುಕೊಂಡಿದ್ದೆ- ನನ್ನ ಪ್ರಕಾಶ ಮಂದಿರದಿಂದ ವಿಜ್ಞಾನಿಗಳು ಓಡಿಬಂದರು. ದೂರವಾಣಿಯ ವಿಭಾಗ ಕಟ್ಟಾಗಿ ಹೋಗಿತ್ತು.

ಎಲ್ಲವೂ ಹೊಗೆಯಿಂದ ತುಂಬಿ ಹೋಗಿದೆ. ನಾನು ಸ್ಮೃತಿ ಕಳೆದುಕೊಂಡು ಎಷ್ಟು ಹೊತ್ತು ಹಾಗೆಯೆ ನಿಂತಿದ್ದೆನೊ ಗೊತ್ತಿಲ್ಲ. ಬಳಿಕ ನನ್ನ ಪ್ರಕಾಶಮಂದಿರದ ಮೇಲ್ವಿಚಾರಕ ನನಗೆ ಶೈತ್ಯೋಪಚಾರ ಮಾಡಿರಬೇಕು. ನಾನು ಕಣ್ಣು ತೆರೆದಾಗ ನನ್ನ ಮಂಚದ ಮೇಲೆ ಬಿದ್ದುಕೊಂಡಿದ್ದೆ.

ಉತ್ತೇಜಕ ಪಾನೀಯ ತೆಗೆದುಕೊಂಡ ಬಳಿಕ ಎಚ್ಚತ್ತು ಕೇಳಿದೆ.

"ಎಲ್ಲಿಂದ ಏನಾದರೂ ಸಂಪರ್ಕ ಇದೆಯೆ?" ನಿರ್ವಾಹಕ ಧಾವಿಸಿ ಬಂದು ಹೇಳಿದ ದೇವಶಿಲ್ಪಿಗಳು ತಮ್ಮ ಕ್ಷೇಮದ ಬಗ್ಗೆ ಎರಡು ಸಲ ಸಂಪರ್ಕ ಕೋರಿದ್ದರು. ಆದರೆ ತಾವು ಅದನ್ನು ಸಾಧಿಸುವ ಅವಸ್ಥೆಯಲ್ಲಿ ಇರಲಿಲ್ಲ. ಇದೀಗ ಅವರು ತಮ್ಮ ಸಂಪರ್ಕಕ್ಕಾಗಿ ಹಾತೊರೆಯುತ್ತಿದ್ದಾರೆ.

"ನಾನು ಸಂಪರ್ಕ ಸಾಧಿಸಿ ಅವರ ಕ್ಷಮೆ ಕೇಳಿದೆ."

"ಕ್ಷಮೆಯ ಮಾತಿರಲಿ ಶಿಲ್ಪಿ. ನಿರ್ಭೀತನಾಗಿರು. ಭಾವನೆಗಳ ಆವೇಗಕ್ಕೆ ನಿನ್ನನ್ನು ಈಡುಮಾಡಿಕೊಳ್ಳಬೇಡ. ನೀನು ವಿಜ್ಞಾನಿ ಮಹಾಶಿಲ್ಪಿ. ನಿನ್ನ ಕೃತಿ ಸಂಪೂರ್ಣ ನಾಶವಾಗಿ ಹೋದರೂ ನಿನ್ನ ಕೀರ್ತಿ, ಪರಿಶ್ರಮ ನಿರ್ಮಾಣ ಅಮರವಾದವು.

ನಾನು ನಿನಗಿಂತ ವಯೋವೃದ್ಧ. ಆದರೆ ನಿನ್ನ ನಿರ್ಮಾಣ ಸಾಮರ್ಥ್ಯಕ್ಕೆ ನಮಿಸುತ್ತೇನೆ. ಮಣಿಯುತ್ತೇನೆ........"

ಆ ವಿನಾಶದಲ್ಲಿ ದೇವಶಿಲ್ಪಿಯ ಮಾತು ನವ ನಿರ್ಮಿತಿಯಾಗಿತ್ತು. ನನ್ನ ದುಃಖದ ಬೆಟ್ಟ ಮಂಜಾಗಿ ಕರಗಿ ಹೋಯಿತು.

"ಮಹಾಶಿಲ್ಪಿ, ಈ ಮಾತುಗಳನ್ನೆಲ್ಲ ನೀನು ಹೇಳಿದ್ದಿ. ನಾನೂ ಎಣಿಸಿದ್ದೆ. ಇದರಲ್ಲಿ ಆಗಬಾರದ್ದು ಯಾವುದೂ ಇಲ್ಲ. ಇದೂ ಒಂದು ಮನೋವಿಜ್ಞಾನವೆ. ಆದರೆ ನಿನ್ನ ಪಾದದಡಿಯಲ್ಲಿ ನಾನು ಆಣೆ ಮಾಡಿ ಹೇಳುತ್ತೇನೆ. ನಾನು ಇಂದಿನಿಂದ ಈ ಖಳರ ಊಳಿಗ ಬಿಟ್ಟುಬಿಟ್ಟೆ. ಇದೋ ಇದು ಪ್ರತಿಜ್ಞೆ."

ನಾನು ಅಂತರಿಕ್ಷವನ್ನು ಇನ್ನೆಂದೂ ಏರಿಬರಲಿಕ್ಕಿಲ್ಲ. ಮಣ್ಣಿನಲ್ಲಿ ಕಲ್ಲಾಗಿ ಇರುವುದು ನನಗೆ ಹೆಚ್ಚು ಬೇಕಾಗಿದೆ. ಹೊರತು ಅಂತರಿಕ್ಷದಲ್ಲಿ ಬೆಳಕಾಗಿ ಜನರನ್ನು ಜಗತ್ತನ್ನು ಕಂಗೆಡಿಸುವುದು ಸಾಕು.

ಈ ಅಸುರತ್ರಯರು ನನಗೆ ನಗರ ನಿರ್ಮಾಣದ ಹೊಣೆ ಹೊರಿಸಿದರು. ಈ ನಗರಗಳು ಏತಕ್ಕಾಗಿ? ಅವರ ಸಾರ್ವಭೌಮ ಅಧಿಕಾರ ವಿಶ್ವದಲ್ಲಿ ಅಬಾಧಿತವಾಗಿ ಇರಲೆಂದೇ ಅಲ್ಲವೆ? ಇಡೀ ವಿಶ್ವವನ್ನು ತಮ್ಮ ಕಾಲ ಬುಡದಲ್ಲಿ ಇಡಲೆಂದೇ ಅವರು ಯೋಚಿಸಿದ್ದರು. ನಾನು ನನ್ನ ಶಿಲ್ಪ ಪರಾಕಾಷ್ಠೆಯನ್ನು ಮೆರೆದು ಎಂದೂ ಪರ್ತವಾಗದಿರುವ ಈ ತಿರುಗು ನಗರಗಳನ್ನು ನಿರ್ಮಿಸಿದೆ. ಆದರೆ ನಿಸರ್ಗಮಯನಿಗಿಂತ ದೊಡ್ಡದು. ಅದು ತನ್ನ ಕೆಲಸ ಮಾಡಿತು.

ನನ್ನ ನಗರಗಳು ಉರಿದುಹೋಗಿದ್ದು ನನಗಿಂದು ಸಮಾಧಾನವಾಗಿದೆ. ಈ ನಗರ ನಿರ್ಮಾಣದಲ್ಲಿಯ ಅನಂತ ವಸ್ತುಗಳನ್ನು ನಾನು ಭೂಮಂಡಲದ ಕಾನಿನಲ್ಲಿ ಬಿಸಾಕಿದ್ದೇನೆ. ಮಯ ಇಂದು ಈ ತಪ್ಪಿಗಾಗಿ ಎಚ್ಚತ್ತಿದ್ದಾನೆ. ಇನ್ನೆಂದೂ ತಪ್ಪು ಮಾಡದಿರುವ ಪಣ ತೊಟ್ಟಿದ್ದಾನೆ. ದೇವಶಿಲ್ಪಿ ಕ್ಷಮಿಸು. ನಾನು ತಪ್ಪುಮಾಡಿದೆ ನಿಜ. ನೀನಾದರೂ ತಪ್ಪಿನಿಂದ ನಿನ್ನನ್ನು ರಕ್ಷಿಸಿಕೊ. ನನ್ನ ನಗರ ವಿನಾಶದಲ್ಲಿ ನಿನ್ನ ಕೈಯಿದೆ ನಾನು ಬಲ್ಲೆ. ಆದರೆ ವಿನಾಶವೇ ವಿಜ್ಞಾನದ ಇತಿ ಕರ್ತವ್ಯವಲ್ಲ...."

"ಓ .. ಓ. ತ....ರು....ಣ" ಮುಂದೆ ಸಂಪರ್ಕ ಕಡಿದು ಹೋಯಿತು. ನನ್ನ ಕೈಯಿಂದಲೇ ನಾನು ನನ್ನ ಪ್ರಯೋಗ ಶಾಲೆಗೆ ಬೆಂಕಿಹಾಕಿದೆ. ನನ್ನ ಸಿಬ್ಬಂದಿಗೆಲ್ಲ ಉಳಿದ ಉಪಕರಣ ನಾಶಗೊಳಿಸಲು ಹೇಳಿದೆ. ಮೊದಲು ಅವರು ನನ್ನ ಆಜ್ಞೆಗೆ ಚಕಿತರಾದರು. ಬಳಿಕ ಅದರ ಅನಿವಾರ್ಯತೆಯನ್ನು ಮನಗಂಡು ತಮ್ಮ ಕೈಮುಟ್ಟಿ ಅದನ್ನೆಲ್ಲ ಧ್ವಂಸಗೊಳಿಸಿದರು.

ಸಿಬ್ಬಂದಿಗೆ ವಿದಾಯ ಹೇಳಿದೆ. ಅವರೆಲ್ಲ ಹೊರಟು ಹೋದರು. ಉರಿಯುತ್ತಿರುವ ಮನೆಯಲ್ಲಿ ನಾನೇ ಒಬ್ಬನಿದ್ದೆ. ಹೊರಗೆ ಉದ್ಯಾನದಲ್ಲಿ ನನ್ನ ವಿಮಾನ ಸಿದ್ಧವಿತ್ತು. ನಾನು ಹೋಗಿ ಅದರಲ್ಲಿ ಕುಳಿತೆ. ಎಲ್ಲಿಗೆ ಹೋಗುವುದು ಗೊತ್ತಿಲ್ಲ. ನಾನು ಧ್ಯಾನಸ್ಥನಾಗಿರಬೇಕು ಅದೇ ತನ್ಮಯ ಅವಸ್ಥೆಯಲ್ಲಿ ನಾನು ಯಾವುದೊ ಗುಂಡಿ ಒತ್ತಿರಬೇಕು. ನನ್ನ ವಿಮಾನ ಮೇಲೆ ಹೋಯಿತೇ, ಕೆಳಗೆ ಇಳಿಯಿತೇ ಒಂದೂ ಗೊತ್ತಿಲ್ಲ.


ಕೇವಲ ತನ್ಮಯನಾಗಿದ್ದೆ.

ಕಣ್ಣು ತೆರೆದಾಗ ಹಿಮಗಿರಿಯ ಅಂಚಿನಲ್ಲಿ ಅದು ಇಳಿದಿದೆ. ಅಷ್ಟೆ ಗೊತ್ತು. ಮತ್ತೆ ಅದೇ ತನ್ಮಯತೆ.

ನಾನು

ಮಯ.

ನನಗೆ 'ತನ್ಮಯ'







ಗುಂಡ ಕಾರಸೇವಾ ಮಾಡಿದ್ದು!



ಅನಂತ ಕಲ್ಲೋಳ

ವರ್ತಮಾನ ಪತ್ರಗಳಲ್ಲಿ 'ಕಾರಸೇವಾ' 'ಕಾರಸೇವಾ' ಎಂಬ ಪದ ಪ್ರಾಮುಖ್ಯ ಪಡೆದ ಸಂದರ್ಭದಲ್ಲಿ 'ಏನಿದು ಹೊಸ ಪದ ಪ್ರಯೋಗ?' ಎಂದು ಕುತೂಹಲಭರಿತನಾದೆ. ಹಾಗೆ ನೋಡಿದರೆ 'ಕಾರಸೇವಾ' ಎಂಬ ಶಬ್ದ ನನಗೆ ಹೊಚ್ಚ ಹೊಸದೇನಲ್ಲ. ನನ್ನ ಕಿವಿಗೆ ಮತ್ತು ನಾಲಗೆಗೆ ಅತ್ಯಂತ ಆಪ್ಯಾಯಮಾನವಾದ ಪದವಾಗಿತ್ತು. ನನ್ನ ಬಾಲ್ಯದ ದಿನಗಳಲ್ಲಿ ಈ ಪದ! ಅದು ಕೇವಲ ಒಂದು ಪದವಾಗಿರದೇ ಪದಾರ್ಥವಾಗಿತ್ತು !!

ನಾವು ಚಿಕ್ಕವರಿರುವಾಗ ಹಿರಿಯರ ಕಣ್ಣು ತಪ್ಪಿಸಿ ಉಪಾಹಾರ ಮಂದಿರಗಳನ್ನು ಪ್ರವೇಶಿಸುವುದು ಎಂದರೆ ಒಂದು ದೊಡ್ಡ ಸಾಹಸದ ವಿಷಯವಾಗಿತ್ತು. ಆಗ ಮಾಣಿ ಟೇಬಲಿಗೆ ಬರುತ್ತಲೇ ಒಳ್ಳೇ ಠೀವಿಯಿಂದ ಕೇಳುತ್ತಿದ್ದೆವು.

"ಏನಯ್ತೆ ತಿನ್ನಲಿಕ್ಕೆ?"

"ಇಡ್ಲಿ, ದೋಸೆ, ವಡಾ ಸಾಂಬಾರ್, [illegible], ಶಿರಾ, ಖಾರಾಸೇವ ..."

ಈ ಪದಾರ್ಥ ಪಟ್ಟಿಯಲ್ಲಿಯ 'ಖಾರಾ ಸೇವ' ಮಾಣಿಯ ಉಚ್ಚಾರದಲ್ಲಿ 'ಕಾರಾऽऽ ಸೇವಾऽऽ' ಎಂದೇ ಇರುತ್ತಿತ್ತು. 'ಕಾರಾ ಸೇವಾ' ನಮ್ಮ ಜೇಬಿನಲ್ಲಿರುತ್ತಿದ್ದ ಹಣದ ಅಳವಿನಲ್ಲಿರುತ್ತಿದ್ದುದರಿಂದ ನಾವು 'ಕಾರಾ ಸೇವಾ'ಕ್ಕೆ ಅಣಿಯಾಗುತ್ತಿದ್ದೆವು.

'ಚಹಾದ ಜೋಡಿ ಚೂಡಾಧಾಂಗ...' ಅಂತ ನಮ್ಮ ಕವಿವರ್ಯ ಬೇಂದ್ರೆಯವರು ಹಾಡಿಲ್ಲವೇ? ಚಹಾದ ಕೂಡ ಶೇವು ಚಿವಡಾ ಅಥವಾ ಉಪಾಹಾರ ಗೃಹದ ಪರಿಭಾಷೆಯಲ್ಲಿ 'ಕಾರಾಸೇವಾ' ಒಳ್ಳೇ ಜನಪ್ರಿಯ ಪದಾರ್ಥ! ಆದರೆ ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳಲ್ಲಿ ಬರುತ್ತಿರುವ 'ಕಾರಸೇವಾ'ದ ಉಲ್ಲೇಖ ಕಂಡಾಗ "ಏನಪ್ಪಾ, ಈ ಪದದ ಅರ್ಥ?" ಎಂದು ತಲೆಕೆಡಿಸಿಕೊಂಡದ್ದು ಮಾತ್ರ ಖರೆ!

ಸೈನಿಕ ಕಾರ್ಯಾಚರಣೆಯಲ್ಲಿ ಕ್ಷತಿಗೊಂಡ 'ಅಕಾಲ ತಖ್ತ', ಹರಮಂದಿರ ಸಾಹೇಬ್ ಮೊದಲಾದ ಪೂಜಾಸ್ಥಾನಗಳನ್ನು ಭಕ್ತರ ಶ್ರಮದಾನದಿಂದ ಜೀರ್ಣೋದ್ಧಾರ ಮಾಡಿದರಲ್ಲ ಆ ಧಾರ್ಮಿಕ ಕಾರ್ಯದ ಶ್ರಮದಾನಕ್ಕೆ 'ಕಾರಸೇವಾ' ಎಂದು ಹೆಸರು. ಬಿರುಕುಗೊಂಡ ಪೂಜಾಮಂದಿರಗಳಿಗೆ ಭಕ್ತಿ ಮತ್ತು ಶ್ರದ್ಧೆಯಿಂದ ಉಚಿತವಾಗಿ [illegible] ಬೆಸುಗೆ ಹಾಕುವ ಕಾಯಕ ಕಾರಸೇವಾ!

ಪ್ರಸ್ತುತ ಹೊಟೇಲಿನಲ್ಲಿಯ ಪದಾರ್ಥವಾದ 'ಕಾರಸೇವ'ಕ್ಕಾಗಲಿ ಅಥವಾ ಬಿರುಕುಗೊಂಡ ಮನ-ಮಂದಿರಗಳನ್ನು ಬೆಸುಗೆ ಹಾಕಲೆಂದು ಯೋಜಿಸಿದ 'ಕಾರಸೇವಾ'ದ ಕುರಿತಾಗಲಿ ತಲೆ [illegible] ಕೊಳ್ಳದೇ ನಮ್ಮ ಗುಂಡಣ್ಣ [illegible] ಕಾರಸೇವಾದ ಬಗ್ಗೆ ತಿಳಿದುಕೊಳ್ಳು[illegible].

ನಿಮಗೆ ಗೊತ್ತಲ್ಲ, ನಮ್ಮ ಗುಂಡ ಬಲು ಪ್ರಚಂಡ. ಆಡಬಾರದ್ದನ್ನು ಆಡುವುದರಲ್ಲಿ, ನೋಡಬಾರದ್ದನ್ನು ನೋಡುವುದರಲ್ಲಿ, ಮಾಡಬಾರದ್ದನ್ನು ಮಾಡುವುದರಲ್ಲಿ ಇತ್ಯಾದಿ ಇತ್ಯಾದಿಯಾಗಿ ಎಲ್ಲ ವಿಧಿ ನಿಷೇಧಗಳನ್ನು ಮೆಟ್ಟಿ ನಿಂತ ವ್ಯಕ್ತಿ ವಿಶೇಷ, ಈ ಪುರುಷ ಅಂಥ ಗುಂಡ[illegible] ತನ್ನನ್ನು ಕಾರಸೇವಾಕ್ಕೆ ಈಡುಮಾಡಿ ಕೊಂಡದ್ದೇ ಮಹಾ ವಿಶೇಷ!

ಅದು ಆದದ್ದು ಹೀಗೆ. ಚರಾಚರ ಜಗತ್ತಿನ ಸುಂದರ ವಸ್ತುಗಳೆಲ್ಲ ತನಗೇ ಮೀಸಲು ಎಂದು ನಮ್ಮ ಗುಂಡಣ್ಣನ ನಂಬುಗೆ. ಆತನ [illegible]

'ಚೀಸಲಾತಿ' ಧೋರಣೆ ಯಾವ್ಯಾಗ ಕೊಂದು ಹಗರಣಕ್ಕೆ ಕಾರಣವಾಗುತ್ತದೆ. ನಮ್ಮ ಮಹಾ ವಿದ್ಯಾಲಯದ ಸೌಂದರ್ಯ ರಾಣಿ ಇವಳ್ಳಾಗಿಲ್ಲ; ಅಂಥಾಂಗ ಏನೆಂದು ಸಂಬೋಧಿಸೋಣ ಅವಳನ್ನು? ಯಾವ ಹೆಸರಿನಿಂದ ಕರೆದರೂ ಆದೀತು. ಯಾಕೆಂದರೆ ಹೆಸರಿನಿಂದ ಅವಳಿಗೆ ಚೆಲುವು ಬರುವ ಪ್ರಮೇಯವೇ ಇಲ್ಲ; ಅವಳ ಸ್ವಯಂ ಚೆಲುವಿಕೆಯಿಂದ ಯಾವ ಹೆಸರೂ ಧನ್ಯತೆಯನ್ನು ಪಡೆದೀತು! ಹ್ಞಾಂ, ಮತ್ತೆ ನಮ್ಮ ಶೇಕ್ಸ್‌ಪಿಯರ್ ಮಹಾಶಯ ಹೇಳಿಯೇ ಇದ್ದಾನಲ್ಲ; ಗುಲಾಬಿಯನ್ನು ಮತ್ತಾವುದೇ ಹೆಸರಿನಿಂದ ಕರೆದರೂ ಅದರ ಚೆಲುವಿಕೆಗೆ ಕುಂದುಂಟೇ ಎಂದು. ಹೋಗಲಿ; ಸದ್ಯ ನಮ್ಮ ಈ ಚೆಲುವಿನ ಗಣಿಗೆ ಅಂದರೆ ಮಹಾ ವಿದ್ಯಾಲಯದ ಸೌಂದರ್ಯ ರಾಣಿಗೆ, ಮೋಹಕತೆಯ ಖಣಿಗೆ ಮನೋಹರ ಮಣಿಗೆ 'ಗುಲಾಬಿ' ಎಂದೇ ಅಂದುಕೊಳ್ಳುವಾ. ನಮ್ಮ ಮಹಾ ವಿದ್ಯಾಲಯದ ವಿದ್ಯಾರ್ಥಿಗಳ ಕನಸಿನ ರಾಣಿಯಾದ ಗುಲಾಬಿಯನ್ನು ಸಹ ಭಗವಂತನು ತನಗಾಗಿಯೇ ನಿರ್ಮಿಸಿದ್ದಾನೆ ಎಂಬ ಸಿತಾಂತ ನಿಷ್ಠೆಯ ನಂಬುಗೆ ಗುಂಡಣ್ಣನಲ್ಲಿ ನೆಲೆಗೊಂಡಿತ್ತು. ಈ ನಂಬುಗೆ, ನಿಷ್ಠೆಯನ್ನು ಆತನು ತನ್ನ ಮನದ ಮಡಕೆಯಲ್ಲಿ ಮಾತ್ರ ಮಡಗಿ ಕೊಂಡಿದ್ದರೆ ಅಂಥ ಮಹಾ ಪ್ರಮಾದ ವಾಗುತ್ತಿರಲಿಲ್ಲ.

ರಹದಾರಿಯ ನಿಯಮದಂತೆ ಒಮ್ಮುಖ ಸಂಚಾರವಿದ್ದಲ್ಲಿ ಅಪಘಾತ, ಅವಘಡಗಳಿಗೆ ಆಸ್ಪದವಿರದು. ಹಾಗೇ ಪ್ರೇಮ, ಪ್ರಣಯಗಳ ಕಲ್ಪನಾಲೋಕದಲ್ಲೂ ಎಲ್ಲಿಯವರೆಗೆ ಒಮ್ಮುಖ ಸಂಚಾರವಿರುತ್ತದೋ ಅಲ್ಲಿಯವರೆಗೆ ಅಂಥ ಪ್ರಮಾದಕ್ಕೆ ಆಸ್ಪದವಿರುವುದಿಲ್ಲ. ಪ್ರಮದೆಯರ ಜೊತೆ ಪ್ರಮೋದದ ಆಕಾಂಕ್ಷೆ ಒತ್ತರಿಸಿದಾಗ ಈ ಒಮ್ಮುಖ ಸಂಚಾರದ ನಿಯಮ ತತ್ತರಿಸಿದಾಗ ಅಪಘಾತ, ಅವಘಡಗಳ ಸಂಖ್ಯೆ ಎತ್ತರಿಸುತ್ತದೆ!

ಗುಂಡಣ್ಣ ಒಮ್ಮುಖ ಸಂಚಾರದ ನಿಯಮವನ್ನು ಮೀರಿದ, ಮುರಿದ. ನೇರವಾಗಿ ಗುಲಾಬಿಗೆ ತನ್ನ ಮನದ ಇಂಗಿತವನ್ನು ಅರುಹಿದ. ಕಿಲಕಿಲನೇ ನಕ್ಕಳು ಗುಲಾಬಿ. ತನ್ನ ಗುಲಾಬಿ ತುಟಿಗಳನ್ನು ಬಿರಿಯುತ್ತ. ಅವಳ ಗುಲಾಬಿ ಗಲ್ಲಗಳಲ್ಲಿ ಗುಳಿ ಬಿದ್ದವು. ಗುಂಡಣ್ಣನಿಗೆ ಸ್ವರ್ಗ ಮೂರೇ ಬೆರಳು; ಅಲ್ಲಲ್ಲ ಮೂರು ಅಡಿ ಅಂತರದಲ್ಲಿ ಉಳಿಯಿತು. ಮಹಾ ವಿದ್ಯಾಲಯದ ಮೈದಾನದಲ್ಲಿ ಗುಲಾಬಿ ಮತ್ತು ಗುಂಡಣ್ಣ ಎದುರು ಬದರಾಗಿ ನಿಂತಿದ್ದರು. ಕನಿಷ್ಠ ಪಕ್ಷ ಮೂರಡಿಯ ಅಂತರವನ್ನಾದರೂ ಇಡುವುದು ಅವಶ್ಯವಾಗಿತ್ತು.

"ಛೀ, ನಿಮಗೆ ಅಷ್ಟೊಂದು ಆಸೇನಾ ನನ್ಮೇಲೆ...." ಗುಲಾಬಿ ಗುಂಡಣ್ಣನನ್ನು ಕೆಣಕಿದಳು.

"ದೇವರ ಅತ್ಯುತ್ತಮ ಸೃಷ್ಟಿಯನ್ನೆಲ್ಲ ಮೆಚ್ಚುವವ ನಾನು...." ಗುಂಡ ಹೇಳಿಕೊಂಡ.

"ಹೌದಾ?" ಮೋಹಕವಾಗಿ ಕೊರಳು ಕೊಂಕಿಸಿದಳು ಗುಲಾಬಿ.

"ಐರಾವತ, ಉಚ್ಚೈಃಶ್ರವ, ಪಾರಿಜಾತ, ಮಂದಾರ ಇವುಗಳನ್ನೆಲ್ಲ ಸೃಷ್ಟಿಸಿದ ತರುವಾಯ ತನ್ನ ಪಳಗಿದ ಕರಗಳಿಂದ ಆ ಕರುಣಾಕರ ಅವುಗಳಿಗೂ ಮಿಗಿಲಾದ ವಸ್ತುವನ್ನು ನಿರ್ಮಿಸಬೇಕೆಂದು ಬಗೆದು ನಿಮ್ಮನ್ನು ಸೃಷ್ಟಿಸಿದ್ದಾನೆ ಎಂದರೆ ಸರಿ ಹೋದೀತು." ರಾತ್ರಿಯೆಲ್ಲ ಕಷ್ಟಪಟ್ಟು ಹೊಸೆದ ಈ ವಾಕ್ಯವನ್ನು ನಸುಕಿನಲ್ಲಿ ಘೋಕಂಪಟ್ಟಿ ಮಾಡಿ ಮಾಡಿ ಈಗ



ಇವತ್ತು ಕ್ಲಾಸಿನಲ್ಲಿ ಭಾರತದ ಮೂಲೆ ಮೂಲೆಯಲ್ಲಿಯೂ ಇರುವ ಯಾರಿಂದಲೂ ಅದರ ಬೆಳವಣಿಗೆಯನ್ನು ನಿಲ್ಲಿಸಲಾಗದಂತಹ ವಸ್ತು ಯಾವುದು ಅಂತಾ ಕೇಳಿದರು. ನಾನು 'ಭ್ರಷ್ಟಾಚಾರ' ಅಂತ ಹೇಳಿದೆ.

ಗುಂಡಣ್ಣ ಕಾರಿದ.

"ಶಿ ಶ್ಶಿ ಯೂ ಪೊಯಿಟ್...." ಗುಲಾಬಿ ಹೇಸಿಕೊಂಡಂತೆ ಮುಖ ಸಿಂಡರಿಸಿದಳು. ಗುಂಡ ಘೋಟಾಳೆ ಆಯ್ತೆಂದು ಗಾಬರಿಯಾದ.

"ಯಾಕೆ,ಯಾಕೆ ಏನ್ ಸಮಾಚಾರ?" ಕೇಳಿದ ಗುಂಡ.

"ಮಂದಾರ, ಪಾರಿಜಾತ ಎಲ್ಲಾ ಸರಿ; ಸುಡುಗಾಡು ಆ ಕುದುರೆ ಯಾಕೆ ನೆನಸ್ತೀರಿ?" ಗುಲಾಬಿ ಕೇಳಿದಳು.

"ಉಚ್ಚೈಃಶ್ರವ?" ಗುಂಡ ಕೇಳಿದ.

"ಹುಂ ಹೂಂ, ಮತ್ತೆ ಉಚ್ಚರಿಸಬೇಡಿ ಆ ಹೆಸರು. ನಮ್ಮ ಅಜ್ಜನ ವಿಕ್ಟೋರಿಯಾ ಕೋಚದ ಕುದುರೆಗಳ ಲಾಯದಲ್ಲಿ ಸದಾ ಗಬ್ಬು ನಾತು ಇರ್ತದ. ನಮ್ಮ ತಾತ ಕುದುರೆಗಳಿಗೆ 'ಉಚ್ಚೈಶ್ರವಾ' ಅಂತ ಕರೀತಾರ...." ಕಿಲಕಿಲ ನಗುತ್ತ ಗುಲಾಬಿ ವಿವರಿಸಿದಳು.

ಗುಂಡನ ತಲೆಗೆ ಕೂಡಲೇ ಜೋಕುಗಳು ಹೊಳೆಯುವುದಿಲ್ಲ. ಆದರೆ ಗುಲಾಬಿ ಹೇಳಿದಂತೆ. ನಕ್ಕಿದ್ದರಿಂದ ಈತ 'ಹೆ ಹೆ'

ರಾಜಕಾರಣ

ರಾಜಕಾರಣದಾಗ ಹೊರಳ್ಯಾಡಿ ಬಂದಾನ
ಮೈ ತುಂಬ ನೋಡ ರಮುರಾಡಿ : ತೊಳಿಯಾಕ
ಹೊಳಿಯನ್ನ ನೀರು ಸಾಲ್ಲದ ||

--ಶ್ಯಾಮ ಹುದ್ಧಾರ

ಅಂತ ಪೇಷಾರವ ಮಾಡಿದ. ಅಂತೂ ಉಚ್ಚೈಶ್ರವಾ, ಗಬ್ಬುವಾಸನೆ, ಜೋಕು, ಪೇಷಾರವ ಒಳ್ಳೇ ನ್ಯಾಚುರಲ್ ಸೀಕ್ವೆನ್ಸ್‌ದಂತೆ ಹೊಂದಿಕೊಳ್ಳುತ್ತ ಸಾಗಿತು ಗುಂಡ ಗುಲಾಬಿರ ವಾರ್ತಾಲಾಪ !

"ಗುಲಾಬಿ, ನನ್ನ ಮನಸ್ಸನ್ನು ಅರ್ಥ ಮಾಡಿಕೊಳ್ಳಿ, ನನ್ನ ಹೃದಯವನ್ನು ಕದ್ದ ಕಳ್ಳಿ ನೀವು...." ಗುಂಡಣ್ಣ ಗಟ್ಟಿಮಾಡಿಕೊಂಡ ಡೈಲಾಗ್ ಮುಂದುವರಿಸಿದ.

ಮತ್ತೆ ಕಿಲಕಿಲನೆ ನಕ್ಕಳು ಗುಲಾಬಿ.

"ನನ್ನನ್ನು ಪೋಲಿಸ್ ಸ್ಟೇಷನ್ನಿಗೆ ಒಯ್ತಿರಾ ಹಾಗಾದ್ರೆ...." ಕಣ್ಣುಗಳನ್ನು ಇಷ್ಟಗಲ ಅರಳಿಸಿ ಕೇಳಿದಳು ಗುಲಾಬಿ. ಗುಂಡನೇನು ಕಡಮೆಯೇ ಮಾತಿನ ಚಾತುರ್ಯದಲ್ಲಿ.

"ಇಲ್ಲಿಲ್ಲ, ಮದುವೆ ನೋಂದಣಿ ಕಚೇರಿಗೆ ಕರೆದೊಯ್ಯುತ್ತೇನೆ ..." ಒಮ್ಮೆಲೆ ಹನುಮಾನ್ ಜಿಗಿತ ಗುಂಡಣ್ಣನದು.

"ಮತ್ತೆ ಪ್ರೀತಿ ಗೀತಿ ಅಂದಿರಿ, ಈಗ ಒಮ್ಮೆಲೆ ಮದುವೆಯ ವಿಷಯಕ್ಕೆ ಬಂದಿರಿ...." ಗುಲಾಬಿ ಕೆಣಕಿದಳು ಕಿಲಿಕಿಲಿಸುತ್ತ.

ಕಿಲಿಕಿಲಿಸುತ್ತ ಗುಂಡ ಉಲಿದ,

"ಅಂ ಉಂ; ಅಂದರೆ ಅದೇ ತಾನೇ ಡೆಸ್ಟಿನೇಶನ್ನು...."

"ಬಟ್ ಆಲ್‌ವೇಸ್ ಜರ್ನಿ ಈಸ್ ಮೋರ್ ಎಂಜಾಯಬಲ್ ದ್ಯಾನ್ ಡೆಸ್ಟಿನೇಶನ್....ಪ್ರಯಾಣದಲ್ಲಿ ದೊರಕುವ ಸೊಗಸು ಗುರಿ ತಲುಪಿದಾಗ ಸಿಕ್ಕೀತೇ? ಯತ್ನದಲ್ಲಿಯ ಸ್ವಾರಸ್ಯ ಸಿದ್ಧಿಯಲ್ಲಿ ಕಂಡೀತೇ ?"

"ಅಂ ಅಹ್ಞಂ. ಅದೂ ನಿಜಾನೇ ಅನ್ನಿ ಗುಲಾಬಿ...." ಗುಂಡ ಗೋಣು ಹಾಕಿದ.

"ನಾ ಅನ್ನೋಲ್ಲಪ್ಪ; ಎಲ್ಲೋ ಬರೆದದ್ದು ನೆನಪಾಯ್ತು. ಅಷ್ಟೇ...."ಗುಲಾಬಿ ಅಮಾಯಕತೆ ಪ್ರದರ್ಶಿಸಿದಳು.

"ಗುಲಾಬಿ ಗುಲಾಬಿ, ನಿಮಗೆ ಬರೆದದ್ದು, ಓದಿದ್ದು ಎಲ್ಲಾ ಹೇಗೆ ನೆನಪಾಗ್ತದೆ? ನನಗೋ ನೀವು, ನೀವು ಮತ್ತು ನೀವೇ ನೀವು! ನಿಮ್ಮನ್ನುಳಿದು ಬೇರೆ ಏನೇನೂ ನೆನಪಾಗುವುದಿಲ್ಲ ..."

"ಹೌದಾ? ತುಂಬಾ ಸೀರಿಯಸ್ ಕೇಸ್ ! ಪ್ಚ....ಪ್ಚ...." ಗುಲಾಬಿ ನಾಟಕೀಯವಾಗಿ ಮರುಕ ತೋರಿದಳು. ಅವಳು ತುಟಿ ಚೂಪು ಮಾಡಿ 'ಪ್ಚ ಪ್ಚ' ಅಂದಾಕ್ಷಣಕ್ಕೆ ಗುಂಡನಿಗೆ ಏನೇನೋ ಕನವರಿಕೆ. ಗುಂಡ ಒಂದು ಅಡಿ ಮುಂದಿಟ್ಟ. ಸ್ವರ್ಗದ ಅಂತರ ಎರಡಡಿಗೆ ಇಳಿಯಿತು. ಗುಲಾಬಿ ಎರಡಡಿ ಹಿಂದೆ ಸರಿದಳು. ಮತ್ತೆ ಸ್ವರ್ಗವು ನಾಲ್ಕಡಿ ಅಂತರಕ್ಕೇರಿತು. ಗುಂಡನ ಕನವರಿಕೆಗಳ ಮನವರಿಕೆಯಾದ ಮೇಲೆ ಗುಲಾಬಿ ಅಂದಳು,

"ರೀ ಇದು ವಿದ್ಯಾಲಯ, ಅಲ್ಲಲ್ಲ ಮಹಾವಿದ್ಯಾಲಯದ ಆವರಣ. ಪ್ರೀತಿಗೆ ಸರಿಯಾದ ತಾಣವಲ್ಲ.ಹೀಗೆ ಮಾಡೋಣ; ಬರುವ ರವಿವಾರ ದೂರ ಮಲ್ಲಯ್ಯನ ಗುಡ್ಡದ ಕಡೆಗೆ ಹೋಗುವಾ ನಾನು ಮತ್ತು ನೀವು...."

ಗುಂಡ ಮೈ(ತನ್ನದೇ) ಚಿವುಟಿಕೊಂಡ. ಕನಸಲ್ಲ. ಅಗದೀ ಖರೇ ಖರೇ ತನ್ನ ಕನಸಿನ ರಾಣಿ ಗುಲಾಬಿ ಮಲ್ಲಯ್ಯನ ಗುಡ್ಡಕ್ಕೆ ವಿಹಾರಕ್ಕೆ ಏಕಾಂತ ಸಮ್ಮಿಳನಕ್ಕೆ ಆಹ್ವಾನಿಸಿದ್ದಳು. ರವಿವಾರಕ್ಕೆ ಇನ್ನೂ ನಲವತ್ತೆಂಟು ಗಂಟೆಗಳ ಅಂತರ. ನಲವತ್ತೆಂಟು ಯುಗಗಳ ಪರಮಾವಧಿ ಅಂತರವಿದ್ದಂತೆನಿಸಿತು ಗುಂಡನಿಗೆ. ಏನು ಹೇಳಬೇಕೆಂದು ತೋಚಲಿಲ್ಲ. ಆಶ್ಚರ್ಯ ಸಂತೋಷಗಳ ಆಘಾತವಾದಂತಿತ್ತು. ಕೃತಜ್ಞತೆಯನ್ನು ಸಲ್ಲಿಸಬೇಕೇ ಅಥವಾ ತನಗಾದ ಆನಂದವನ್ನು ಕುಣಿದಾಡಿ ಪ್ರದರ್ಶಿಸಬೇಕೆ ? ಈ ಸಂಭ್ರಮದಲ್ಲಿದ್ದಾಗ ಗುಲಾಬಿಯೇ ಬಾಯಿ ಬಿಟ್ಟಳು.

"ರವಿವಾರ ಕಿತ್ತೂರು ಚೆನ್ನಮ್ಮ ವೃತ್ತದ ಹತ್ತಿರ ಹತ್ತು ಗಂಟೆಗೆ ತಪ್ಪದೇ ಬನ್ನಿ. ನಾನೇ ಕಾರ್ ಡ್ರೈವ್ ಮಾಡಿಕೊಂಡು ಬರುವೆ. ನಾನೂ ನೀವು. ನೀವು ನಾನು ! ಮಲ್ಲಯ್ಯನ ಗುಡ್ಡ ಗೊತ್ತಲ್ಲ. ಕಾರ್ ಕ್ರಮಾಂಕ ಐ ಐ ಐ ಐದು ಐದು ಐದು. ಈಗ ನಾನು ನಡೀತೇನೆ ಬೈ ಬೈ."

ಈ ಐ ಐ ಮತ್ತು ಬೈ ಬೈಗಳ ಗೊಂದಲದಿಂದ ಗುಂಡ ವಾಸ್ತವ ಜಗತ್ತಿಗೆ ಬರಬೇಕಾದರೆ ಐದು ನಿಮಿಷಗಳೇ ಸರಿದವು. ರವಿವಾರದ ನಿಯೋಜಿತ ಕಾರ್ಯಕ್ರಮಕ್ಕೆ ನಲ್ವತ್ತೇಳು ಗಂಟೆ ಐವತ್ತೈದು ನಿಮಿಷ ಉಳಿದವು.

o o o

ರವಿವಾರ ಬಂದಿತು. ಕಿತ್ತೂರು ಚೆನ್ನಮ್ಮ ವೃತ್ತದ ಬಳಿಗೆ ಗುಂಡಣ್ಣ ಹಾಜರಾದ ಒಂಬತ್ತಕ್ಕೇ! ಆತ ಇನ್ನೂ ಒಂದೆರಡು ಗಂಟೆ ಮೊದಲೇ ಬಂದು ನಿಲ್ಲುವವ; ಆದರೆ ಆತನ ವೇಷಭೂಷೆಯ ತಾಕುತೀಕು, ಅಲಂಕರಣಕ್ಕೆ ಎರಡು ಮೂರು ಗಂಟೆಗಳು ಕಳೆದವಲ್ಲ !

ಸರಿಯಾಗಿ ಹತ್ತಕ್ಕೆ ಗುಲಾಬಿಯ ಕರಿ ಫಿಯೆಟ್ ಕೊಂಬು ಮೊಳಗಿಸುತ್ತ ನಿಂತಿತು. (ಅಂಥಾಂಗ ಯುದ್ಧಕ್ಕೆ ಮೊದಲು ಕೊಂಬು ಮೊಳಗಿಸ್ತಿದ್ದರಲ್ಲ ಹಿಂದಿನ ಕಾಲದಲ್ಲಿ !) ಗುಂಡನಂಥ ಬಹದ್ದೂರ್ ಗಂಡನ ಕಣ್ಣಲ್ಲಿ ಆನಂದಬಾಷ್ಪ ಒಸರಿದವು.

"ಹಾಯ್ ಗುನ್, ಕಮ್ ಇನ್" ಗುಲಾಬಿ ಕಾರಿನ ಬಾಗಿಲು ತೆರೆದಳು. ಗುಂಡ ಬಲಗಾಲು ಎತ್ತಿಟ್ಟು ಆರೋಹಣ ಮಾಡಿದ. ಕಾರು ಓಡತೊಡಗಿತು. ಗುಂಡ ಸ್ವರ್ಗ ಪರಿಸರದಲ್ಲಿ ತೇಲಾಡತೊಡಗಿದ.

ಗುಲಾಬಿ ಚಲನೆಯ ಚಕ್ರವನ್ನು ಚಲಾಕಿನಿಂದ ತಿರುಗಿಸುವಾಗ ಪಕ್ಕದಲ್ಲಿ ಕುಂಡಿಸಿದ್ದ ಗುಂಡನಿಗೆ ಅವಳ ತೋಳಸ್ಪರ್ಶವಾಗುತ್ತಿತ್ತು. ಅವಳು ಧರಿಸಿದ್ದು ತೋಳಿಲ್ಲದ ರವಿಕೆ ! ಗುಂಡ ಮನದಲ್ಲೇ ದರ್ಜಿಗಳನ್ನು ಮನಸಾರೆ ಶಪಿಸಿದ. ತೋಳಿಲ್ಲದ ರವಿಕೆಯಂತೇ ತೋಳಿರದ ಬುಶ್‌ಶರ್ಟಿನ ಫ್ಯಾಷನ್ ಸುರುಮಾಡಬಾರದಿತ್ತೇ ಈ ಅರ



"ನಿಮ್ಮ ಹುಟ್ಟಿದ ಹಬ್ಬಕ್ಕೆ ಪ್ರೆಜೆಂಟೇಶನ್ ಅಂತಾ ಟ್ರಾನ್ಸಿಸ್ಟರ್ ತಂದಿದ್ದೀನಿ ಮಾವಯ್ಯ ಅಂತ ಅಂದೆ. ಅಷ್ಟೇ..."



...ಕ ಶಿಖಾಮಣಿಗಳು! ತಾನು ... ...ರ್ಟ್ ಧರಿಸದೇ ಸ್ಯಾಂಡೋಬನಿಯನ್ ...ರಿಸಿಕೊಂಡು ಬಂದಿದ್ದಲ್ಲಿ ಬೇಂದ್ರೆಯವರ ...ಪನದಂತೆ "ತೋಳುಗಳಿಗೆ ತೋಳ ...ಪಿ"ಯಸುಖ ದೊರಕದಿದ್ದರೂ ತೋಳು ...ಗಳಿಗೆ ತೋಳಸ್ಪರ್ಶವಾದರೂ ದಕ್ಕುತ್ತಿ...ಲ್ಲ ಎಂದು ಹಳಹಳಿಸಿದ. ಆತನ ತಲೆ ...ಯಲ್ಲಿ ಈ ತೋಳಕೋಲಾಹಲ ನಡೆದಿ...ಲು ಗುಲಾಬಿ ನಡೆಸುತ್ತಿದ ಕಾರು 'ಗಕ್ಕ್ ...ಕ್ ಗಕಾಕ್ ಗಕ್' ಎಂದು ಧ್ವನಿ ಎಳೆ...ಯುತ್ತ ನಿಂತಿತು.

'ಏನ್ ಸಮಾಚಾರ?' ಗುಂಡ ...ಳಿದ.

'ಘೋಟಾಳ ಆತು, ಪೆಟ್ರೋಲ್ ...ಲಾಸ್. ಮನೆ ಬಿಡುವಾಗಲೇ ಕಾರಿನಲ್ಲಿ ...ಟ್ರೋಲ್ ರಿಸರ್ವ್‌ದಲ್ಲಿತ್ತು. ದಾರಿಯಲ್ಲಿ ...ಕಿಸಿಕೊಂಡು ಹೋಗೋಣು ಅಂತ ...ತ್ತು ಮಾಡಿಕೊಂಡಿದ್ದೆ. ಗುನ್ ...ನ್ನು ನೋಡುತ್ತಲೇ ಈ ವಿಷಯ ...ರೆತೇಹೋಯಿತು!

ಊರಿನಿಂದ ಐದಾರು ಮೈಲು ದೂರ ...ಂದಿದ್ದರು. ಏಕಾಂತಕ್ಕಾಗಿ ನಿರ್ಜನ ಪ್ರದೇ...ದ ದಾರಿ ಆಯ್ದುದ್ದರಿಂದ ರಸ್ತೆಯಲ್ಲಿ ...ರೆ ವಾಹನಗಳ ಸುಳಿವಿರಲಿಲ್ಲ. ಗುಲಾಬಿ ಮತ್ತು ಗುಂಡ ಕಿಂಕರ್ತವ್ಯ ...ಮೂಢರಾದರು. ನಿಂತ ಕಾರನ್ನು ನೋಡಿ ...ನಾ ಕಾಯುವ ಹುಡುಗ ಅವರ ಹತ್ತಿರ ...ಂದ. ಅವರ ಮಾತುಗಳನ್ನು ಕೇಳಿದ್ದ ...ತ ಅಂದ.

"ಇಲ್ಲೇ ಮುಂದ ಪೆಟ್ರೋಲ್ ಪಂಪ್ ...ತ್ರಿ."

"ಅಲ್ಲೀ ತನಕ ಗಾಡಿ ತಳ್ಳಿಕೊಂಡು ...ಗಬೇಕಲ್ಲ" ಗುಲಾಬಿ ಗುಂಡನನ್ನು ...ಡುತ್ತ ಅಂದಳು. ಗುಂಡ ಸಜ್ಜಾದ.

...ಲೀ ತವನ್ನಾ ಕೈ ಹ... ...ಕಾಯುವ ಹುಡುಗನಿಗೆ ಪ್ರಸ ...ಯಿಸಿದ.

"...ನ್ನ ಎಷ್ಟು ಬಿಟ್ಟ ...ಣ ಆಗಾಂಗಿಲ್ರಿ." ಪನಾಕಾಯುವ ಹುಡುಗ ಕೊಸರಿಕೊಂಡ.

ಚಾಲಕನ ಸ್ಥಾನದಲ್ಲಿ ಗುಲಾಬಿ ಇದ್ದಳು. ಗುಂಡ ತನ್ನ ಶಕ್ತಿಯನ್ನು ಪಣಕ್ಕಿಟ್ಟು ಕಾರನ್ನು ತಳ್ಳತೊಡಗಿದ. ಕಿಣಾಕಿ ಕಿಣಾಕಿ ಗುಂಡ ಕಾರು ತಳ್ಳುತ್ತಿದ್ದಂತೆ ಆ ಕರಿಯ ಫಿಯೆಟ್ ಆಮೆಗತಿಯಲ್ಲಿ ಉರುಳತೊಡಗಿತು. ಸ್ವಲ್ಪ ಹೊತ್ತಿನಲ್ಲಿಯೇ ಆತನ ತೋಳುಗಳು ತುಂಬಿ ಬಂದವು, ಕಾಲುಗಳು ಕಂಪಿಸತೊಡಗಿದವು. ಮೈಯೆಲ್ಲ ಬೆವರಿನಿಂದ ತೊಯ್ದು ತೊಪ್ಪಡಿಯಾಯ್ತು. ಗುಲಾಬಿ ಕಾರಿನ ಕಿಟಕಿಯಿಂದ ತನ್ನ ಮೋಹಕ ಮುಖವನ್ನು ಹೊರತೂರಿ.

"ಅಲ್ಲಿ ನೋಡಿ ಗುನ್, ಬಂಕ್ ಕಾಣ್ತಾ ಇದೆ. ಇನ್ನು ಐದು ಹತ್ತು ನಿಮಿಷದಲ್ಲೇ ತಲಪಬಹುದು. ಸ್ವಲ್ಪ ಜೋರಾಗಿ ತಳ್ಳಿ, ಬೇಗ ಹೋಗುವಾ"

ಗುಂಡ ತಳ್ಳಿದ, ತಳ್ಳಿದ, ತಳ್ಳಿದ! ಗುಂಡನಿಗೆ ತನ್ನೆಲ್ಲ ಶಕ್ತಿ ಸೋರಿ ಹೋದಂತೆ ಅನಿಸತೊಡಗಿತು. ಇನ್ನೇನು ಬವಳಿ ಬಂದು ಬೀಳುವಂತಾಯ್ತು. ಪೆಟ್ರೋಲ್ ಬಂಕ್ 50 ಯಾರ್ಡ್ ಅಂತರದಲ್ಲಿತ್ತು. ಗುಂಡ ಸುಸ್ತಾಗಿ ಕುಳಿತುಬಿಟ್ಟ. ಗುಲಾಬಿ ಕಾರಿನಿಂದ ಇಳಿದು ಬಂದಳು.

"ಪ್ಚ....ಪ್ಚ ಭಾಳ ಆಯಾಸಪಟ್ಟಿರಲ್ಲ ಗುನ್! ಪರವಾ ಇಲ್ಲ ಕಾರೊಳಗೆ ಕೂತುಕೊಳ್ಳಿ. ಕ್ಯಾನದಲ್ಲಿ ಪೆಟ್ರೋಲ್ ಹಾಕಿಸಿಕೊಂಡು ಬಂದರಾಯಿತು." ಎಂದೆನ್ನುತ್ತ ಬಂಕ್ ಕಡೆಗೆ ಸಾಗಿದಳು.

...ಲ್ಲಿ ...ತ್ತಿನಲ್ಲಿ ಗುಲಾಬಿ ವಾ... ...ಳು.

"ಗುನ್ ಪೆಟ್ರೋಲ್ ನೋ ಸ್ಟಾಕ್!"

ಗುಂಡ ಪಿಳಿಪಿಳಿ ಕಣ್ಣುಬಿಟ್ಟ. ಅಷ್ಟರಲ್ಲಿ ಎದುರು ಬದಿಯಿಂದ ಒಂದು ಕಾರು ಬಂದು ನಿಂತಿತು.

"ಹಾಯ್ ಗುಲಾಬಿ, ಇಲ್ಲೇನ್ಮಾಡ್ತಿದಿಯಾ?"

"ಹಾಯ್ ದೀಪು, ಒಳ್ಳೇ ಸಮಯಕ್ಕೆ ಬಂದಿ. ನನ್ನ ಗಾಡಿಯೊಳಗಿನ ಪೆಟ್ರೋಲ್ ತೀರೇದ. ನಿನ್ನ ಗಾಡಿಯೊಳಗಿನ ಪೆಟ್ರೋಲ್..."

"ನೋ ನೋ ಗುಲಾಬಿ ನನ್ನ ಕಾರಿನೊಳಗ ಪೆಟ್ರೋಲ್ ರಿಸರ್ವ್‌ಕ್ಕ ಬಂದದ. ಆ ಬಂಕಿನಾಗ ಪೆಟ್ರೋಲ್ ಶಿಲ್ಕಿಲ್ಲ ಅಂತ ಹೇಳಿದ, ಊರ ತನಕಾ ಹೋಗಬೇಕಲ್ಲ."

"ಅಯ್ಯೋ ದೇವರೆ ಹ್ಯಾಂಗ ಮಾಡೋದು?" ಗುಲಾಬಿ ಹಣೆಗೆ ಕೈ ತಟ್ಟಿಕೊಂಡಳು.

"ಹೀಂಗ ಮಾಡು ಗುಲಾಬಿ, ನೀ ನನ್ ಜೊತೆಗೆ ಬಾ. ಊರಿಗೆ ಹೋಗಿ ಪೆಟ್ರೋಲ್ ತೆಗೊಂಡು ಮರಳಿ ಬಂದು ಕಾರು ಒಯ್ದರಾಯಿತು."

ಗುಲಾಬಿ ಗುಂಡನ ಕಡೆಗೆ ನೋಡಿದಳು. ಗುಂಡ ಇನ್ನೂ ಏದುಸಿರು ಬಿಡುತ್ತಲೇ ಇದ್ದ.

"ಗುನ್ ನೀವು ಇಲ್ಲೇ ವಿಶ್ರಾಂತಿ ತೆಗೋತಾ ಇರ್ರಿ. ಈಗ ಬರ್ತೆವು ಅರ್ಧ ತಾಸಿನಾಗ."

ಗುಲಾಬಿ ದೀಪೂನ ಕಾರಿನ ಬಾಗಿಲು ತೆರೆದು ಆತನ ಪಕ್ಕದಲ್ಲಿ ಕುಂಡಿಸಿದಳು. ದೀಪು ಕಾರ್ ಚಲಿಸಿದ.

ಗುಂಡ ವಿಶ್ರಾಂತಿ ತೆಗೆದುಕೊಳ್ಳುತ್ತ

ನಂಬಿಗೆ

ನಂಬದಿರು ಯಾರನ್ನು ನಂಬಿಗೆಯು ಬರುವತನಕ,
ನಂಬು ತಪ್ಪದೆ ತಂದೆ ದೇವನನ್ನು;
ದೇವನನು ನಂಬದಲೆ ಕೆಟ್ಟು ಹೋದವರುಂಟು
ನಂಬಿಕೆಟ್ಟವರಿಲ್ಲ, ನಂದಕಂದ

—ಜಿ. ಎಚ್. ಕೆ.

...ಕೀ ಇದ್ದ. ನಿಂತ ಆ ಕರ್ನಿನಾಂ ತಾಂ ನಾಗ ಆರ್ಡಗಂಟೆ ಹೋಗಿ ನಾಲ್ಕು ತಾಸಾ ಪದೂ ಗುಲಾಬಿಯ ಪತ್ತೆ ಇಲ್ಲ. ದೀಪೂನ ಪತ್ತೆ ಇಲ್ಲ. ಆಯಾಸ ಬಾಯಾರಿಕೆ ಮತ್ತು ...ಸಿಂದ ಗುಂಡ ಆರಿಸತ್ತಂತೆ ಆದ.

ಗುಲಾಬಿಯ ತಮ್ಮ ರಾಜೇಶ ಸ್ಕೂಟರ್ ಹಿಂದುಗಡೆ ತಮ್ಮ ಕಾರಿನ ಡ್ರೈವರ್ ಬಸಸಿಂಗನನ್ನು ಕರೆದು ತಂದಿದ್ದ. ಬಸ ಸಿಂಗನ ಕೈಯ್ಯಲ್ಲಿ ಪೆಟ್ರೋಲ್ ಕ್ಯಾನಿತ್ತು. ...ತನನ್ನು ಸ್ಕೂಟರ್‌ನಿಂದ ಇಳಿಸಿ.

"ಬಸ ಸಿಂಗಾ ಗಾಡ್ಯಾಗ ಪೆಟ್ರೋಲ್ ...ಕಿಕೊಂಡು ಹೊರಳಿ ಊರಿಗೆತೆಗೊಂಡು ...ಾ. ಅವರನ್ನ ಕಿತ್ತೂರು ಚೆನ್ನಮ್ಮ ...ತ್ತದ ಪತ್ತಿರ ಬಿಡು" ರಾಜೇಶ ಆದೇಶ ನೀಡಿ ತನ್ನ ಸ್ಕೂಟರನ್ನು ಊರ ಕಡೆಗೆ ಮರಳಿ ಓಡಿಸಿದ.

ಬಸಸಿಂಗ ಪೆಟ್ರೋಲನ್ನು ಟ್ಯಾಂಕಿಗೆ ಸುರಿದು ಚಾಲಕನ ಸ್ಥಾನದಲ್ಲಿ ಕು...ತ. ಕಿಸೆಯಿಂದ ಸಿಗರೇಟು ತೆಗೆದು ಧುರುಕಿ ಎಳೆಯತೊಡಗಿದ. ಪೆಟ್ರೋಲ್ ವಾಸನೆ ಸಿಗರೇಟಿನ ವಾಸನೆ ... ... ವಾಸನೆಯಿಂದ್ರಿ

ಯವನ್ನು ಆಡರುತ್ತಿದ್ದಂತೆ ಗುಂಡ ಮೂಗು ಮುಚ್ಚಿಕೊಂಡ. ಕನ್ನಡಿಯಲ್ಲಿ ಅದನ್ನು ಕಂಡ ಬಸಸಿಂಗ ಸಿಗರೇಟ್ ಹೊರಗೆ ಎಸೆಯುತ್ತ.

"ವಾಸನೆ ಭಾಳ ಕೆಟ್ಟ ನೋಡ್ರಿ ಸಾಹೇಬ್ರ" ಎಂದೆನ್ನುತ್ತ ಕಾರ್ ಸುರು ಮಾಡಿದ. ಕಾರು ಮರಳಿ ಊರಿಗೆ ಬಂದಿತು. ಕಿತ್ತೂರು ಚೆನ್ನಮ್ಮ ವೃತ್ತದ ಬಳಿ ಬಸ್ ಸಿಂಗ್ ಕಾರು ನಿಲ್ಲಿಸಿ.

"ಇಲ್ಲೇ ಇಳೀಶೀರಲ್ಲ ಸಾಹೇಬ್ರ" ಎಂದ.

ಗುಂಡ ಇಳಿದ. ತನ್ನ ಕೋಣೆಯ ಕಡೆಗೆ ಕಾಲು ಎಳೆದ.

ಇತಿ ಗುಂಡ ಪುರಾಣೇ ಕಾರಸೇವಾ ಧ್ಯಾಯ. ಸಂಪೂರ್ಣ!

ಚೆಲ್ಲಿ ನಲಿವ ಚಂದ


ಸೌಂದರ್ಯ ಗರ್ಭದಿಂದೊಗೆದಿಹುದು ಬ್ರಹ್ಮಾಂಡ
ಚೆಲ್ಲಿನಲಿದಿದೆ ಚಂದ ಬಿಚ್ಚಿದೋಗೆ;
ಆ ಬೆಡಗನೋಡಲಿಕೆ ಪ್ರೇಮದೃಷ್ಟಿಯು ಬೇಕು,
ಪ್ರೇಮದಿಂದ ನೀನಾಗು ಸಂಪರ್ಕಂದ

— ಜಿ. ಎಚ್. ಕೆ.

ಕವಿತೆಗೆ

ಮೌನದಾಚೆ ನಿಂತು ನನ್ನ ಕೆಣಕಿ
ಸನ್ನೆಯಲ್ಲೆ ಆಶೆ ಕೆದಕಿ
ದಾಗ ನಿನ್ನ ಮೊಗದಿ ಹೊಸಗೆ
ಅದನೆ ಕವಿತೆ,
ಬರೆಯಬೇಕೆನಿಸಿದ್ದು –
ಬರೆಯಲಾಗದೆ ಹೋದ
ಚಣ ಚಣವೂ ಸಾವು ನನಗೆ

-ಸುರೇಶ ಪಾಟೀಲ



"ನಿನ್ನ ಅರ್ಜಿಯ ಮೇಲೆ 'ನೋಟ್' ಹಾಂ!... ಈಗಲೇ ಕಳುಹಿಸುತ್ತೇನೆ"

"ಈಗಲೇ ನೀನು....... ಇದರ ಮೇಲೆ 'ನೋಟ್' ಹಾಕು.....!"

'ಲೆಕ್ಕಾಚಾರ'

– ಎಚ್.ಬಿ. ಮಂಜುನಾಥ್.



"ಏನಯ್ಯಾ, ಮಗನಿಗೆ ಲಕ್ಷಾಂತರ ರೂಪಾಯಿ ವರದಕ್ಷಿಣೆ ಸಿಕ್ಕಿರಬೇಕು ಅಲ್ವಾ!.."




"ಓಹೋ... ಹೀಗಾದ್ರೆ ಒಂದು ಕಿಲೋಗೆ ಏಳುನೂರೇ ಗ್ರಾಂಗಳು!!"



"ಆ ಬಿಲ್ಡಿಂಗ್‌ನಲ್ಲಿ ಹದಿಮೂರು ಸಂಸಾರಗಳು ವಾಸವಾಗಿವೆ ಅಂತ ನಿಖರವಾಗಿ ಹೇಳಬಲ್ಲೆ!!"

ಪ್ರೇತ ಸಂಪರ್ಕ



• ಹ.ಶಿ.ಭೈರನಟ್ಟಿ

ಅಕ್ಕ ಅಂಜಲಿಯ ಪ್ರೇತದೊಡನೆ ಸಂಪರ್ಕ ಬೆಳೆಸುವ ಅಪೇಕ್ಷೆ ಪದ್ಮಳದು. ವಿಚಿತ್ರ ಅಪೇಕ್ಷೆಯನ್ನು ಸಾಧಿಸಿದ್ದು ಇನ್ನೂ ವಿಸ್ಮಯಕಾರಿ. ಅದರಲ್ಲಿ ಕಥೆಗಾರನ ಪಾತ್ರ ಪ್ರವೇಶಿಸಿದ್ದು ಮತ್ತೂ ಕುತೂಹಲಕರ.

ತೀವ್ರತರ ಭಾವನೆಗಳಿಗೊಳಗಾದವರು ವಾಸ್ತವಕ್ಕೆ ಅತಿರಿಕ್ತವೆನಿಸುವಂತೆ ವರ್ತಿಸ ತೊಡಗಿದಾಗ ಜನಸಾಮಾನ್ಯರಿಗೆ ಹುಚ್ಚ ರಾಗಿ ಕಾಣಿಸಬಹುದು. ಅಂಥವರ ಅಸ ಹಾಯಕತೆಗೆ ಮರುಗಿ ಮಾನವೀಯತೆಯ ದೃಷ್ಟಿ ತಾಳಿ ಕೈಲಾದಷ್ಟು ಸಹಾಯ ಮಾಡೋಣ ಅನ್ನಿಸಿ ಅವರ ಬೆನ್ನುಹತ್ತಿದ ನನ್ನಂಥವರೂ ಕೂಡ ಹುಚ್ಚರಾಗಿಯೇ ಕಾಣಿಸಬಹುದು. ಎಷ್ಟಾದರೂ ಈ ಹುಚ್ಚು ಸಾಪೇಕ್ಷವಾದುದು. ಸಾಪೇಕ್ಷ ಸಿದ್ಧಾಂತ ಮಂಡಿಸಿದ ಐನ್‌ಸ್ಟೈನ್ ಕೂಡ ಒಂದಷ್ಟು ದಿವಸ ಒಂದಷ್ಟು ಜನರಿಗೆ ಹುಚ್ಚನಂತೆ. ಕಂಡಿದ್ದರೂ ಆಶ್ಚರ್ಯವೇನಿಲ್ಲ! ಜೀವ ಮಾನದಲ್ಲಿಯೇ ಏಕಮೇವ ಆಕಾಂಕ್ಷೆಯನ್ನಿಟ್ಟುಕೊಂಡು ನನ್ನ ಸಾನಿಧ್ಯ ಪಡೆದು ಪ್ರೇತ ಸಂಪರ್ಕಕ್ಕಾಗಿ ಪದ್ಮಾ ನನ್ನ ಸಹಾಯವನ್ನಪೇಕ್ಷಿಸಿದಾಗ ಅವಳನ್ನು ನಿರಾಶೆಗೊಳಿಸಿ ಕಳಿಸುವದು ನನ್ನಿಂದ ಸಾಧ್ಯವಿತ್ತೇ? "ಅವಳೇ ನನ್ನಕ್ಕ ಅಂಜಲಿ. ನಾನವಳನ್ನು ನೋಡಬೇಕು, ನೋಡಲೇ ಬೇಕು ಸರ್. ಖಂಡಿತವಾಗಿಯೂ ನನ ಗವಳು ಕಾಣಿಸುತ್ತಾಳೆ. ನನ್ನನ್ನು ಕರೆದು ಕೊಂಡು ಹೋಗಿ. ದಯವಿಟ್ಟು ನನಗೆ ಉಪಕಾರ ಮಾಡಿ ಸಾರ್" -ಎಂದು ದುಂಬಾಲುಬಿದ್ದು ಆವೇಶಪೂರ್ವಕ ಅಂಗ

ಆಗ ನಾನು ಒಬ್ಬನೇ ಇರುವುದು ಬೇಕ್ಕೆ? "ನಿನ್ನನೆಲ್ಲಾ ಬಾಲಿಶ ವಿಚಾರಗಳು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದರೆ ನಿನ್ನ ತರ್ಕ ನಿರಾಧಾರವಾದುದು, ಪ್ರಯಾಸವೂ ವ್ಯರ್ಥವಾಗಿ ಸುಮ್ಮನೆ ಸಮಯ ಹಾಳು, ಹಣ ಹಾಳು" -ಎಂದೆಲ್ಲಾ ವಾದಿಸಿ, ವಾದವನ್ನು ಸಮರ್ಥಿಸುವ ಉದಾಹರಣೆಗಳನ್ನು ಜೋಡಿಸಿ ಅವಳ ಕಲ್ಪನೆಗಳನ್ನು ಹಾಳು ಮಾಡುವ ಅಧಿಕಾರವಾದರೂ ನನಗೆಲ್ಲಿತ್ತು ?.

ಕಣ್ಣು ಬಿಡಲಿಸಿದೆ. ಪದ್ಮಾ ಗಾಢ ನಿದ್ರೆಯಲ್ಲಿದ್ದಳು.

ಅಂಜಲಿಯೇ ಕೊಡಿಸಿದ ಸೀರೆ ಉಟ್ಟು ಅವಳೇ ಕೊಡಿಸಿದ ಬೆಂಡೋಲೆ ಹಾಕಿಕೊಂಡು, ತಲೆಗೆ ಕನಕಾಂಬರ ಮಾಲೆ ಹಾಕಿಕೊಂಡು, ಮುಖಕ್ಕೆ ಸ್ನೋ ಪೌಡರ್ ಹಚ್ಚಿಕೊಂಡು, ಹುಬ್ಬು ತೀಡಿಕೊಂಡು ರಾತ್ರಿ ನನ್ನೆದುರಿಗೆ ಬಂದು ನಿಂತು "ಹೇಗೆ ಕಾಣಿಸ್ತೀನಿ ಸರ್?" ಎಂದಾಗ ಬೆಚ್ಚಿಬಿದ್ದಿದ್ದೆ.

"ಅಂಜಲಿ ಸಲುವಾಗಿ ಅಲಂಕಾರ ಮಾಡಿಕೊಳ್ಳಲೇಬೇಕಲ್ಲ ಸರ್. ಹೇಗೆ ಕಾಣಿಸ್ತೀನಿ ಹೇಳಿ" ಎನ್ನುತ್ತ ಹತ್ತಿರ ಬಂದಾಗ "ನಿಲ್ಲು ತೋರಿಸ್ತೇನೆ" ಎನ್ನುತ್ತ ಕಾಡಿಗೆ ಕಡ್ಡಿಯಿಂದ ಅವಳ ಗಲ್ಲದ ಮೇಲೆ ಒಂದು ಕಪ್ಪು ಚುಕ್ಕೆ ಇಟ್ಟೆ. ನಾಚಿಕೆಯಿಂದ "ಅಷ್ಟು ಚೆನ್ನಾಗಿ ಕಾಣಿಸ್ತೀನಾ? ಅಂಜಲಿ ಈವತ್ತು ಬಂದೇ ಬರ್ತಾಳೆ ಸರ್. ನನ್ನೊಡನೆ ಮಾತಾಡಿಯೇ ಮಾತಾಡ್ತಾಳೆ" ಎಂದು ಹರ್ಷಪಟ್ಟು "ನಡೀರಿ ಹನ್ನೊಂದಾಯಿತು ಈಗಲೇ ಬೆಡ್ ರೂಮಿಗೆ ಹೋಗುವಾ" ಎಂದಳು. ಹಿಂಬಾಲಿಸಿದೆ.

ಅಕ್ಕನ ಪ್ರೇತ!

ನನಗೆ ನಗೆ ಬಂದಿತು. ನಾಲ್ಕು ವರ್ಷಗಳ ಹಿಂದೆ ಕೊಲೆಯಾದ ಚಿತ್ರನಟಿ ಅಂಜಲಿ! ಈಗ ತಂಗಿಗೆ ಕಾಣಿಸಿಕೊಳ್ಳುತ್ತಾಳೆ! ಮುಗ್ಧೆ ಮುಗ್ಧೆ ಪದ್ಮಾ! ನನ್ನ ಮೇಲೆ ವಿಶ್ವಾಸವಿರಿಸಿಕೊಂಡಿದ್ದಾಳೆ, ನನ್ನ ಕೂಡ ಬಂದು ಈ ದೊರೆದ ಬಂಗಲೆಯಲ್ಲಿ ಇದ್ದಾಳೆ!

ಪ್ರೈ ಯನ್ನು ಬಾಗಿಲ ಕಡೆ ಹರಿಸಿದೆ. ಬಾಗಿಲು ತೆರೆದಿತ್ತು! ನನ್ನ ಎದೆ ಬಡಿತ ಜೋರಾಯಿತು. "ತಂಪಾಗಿದೆ ಸರ್ ಗಾಳಿ. ಬಾಗಿಲು ಹಾಕೋಣಲ್ಲ?" ಎಂದಾಗ ಹೂಂಗುಟ್ಟಿದ್ದೆ. ಅವಳು ಬಾಗಿಲು ಹಾಕಿದ್ದನ್ನೂ ನೋಡಿದ್ದೆ. ಆದರೆ ಈಗ ತೆರೆದುಕೊಂಡಿದೆ! ತೆರೆದವರು ಯಾರು? ಅಂಜಲಿಯೇ ?!

ಅದ್ಹೇಗೆ ಸಾಧ್ಯ?

ಯಾಕೆ ಸಾಧ್ಯವಿಲ್ಲ?

ಎದ್ದು ಕುಳಿತು ರೂಮಿನ ಇತರ ವಸ್ತುಗಳನ್ನು ನೋಡಿದೆ. ಎಲ್ಲವೂ ಯಥಾಸ್ಥಾನದಲ್ಲಿಯೇ ಇದ್ದವು. ಮತ್ತೆ ಪ್ರೈ ಚಾಚಿದೆ.

"ಅಂಜೂ ಹೋಗಬೇಡ ಅಂಜೂ, ಹೋಗಬೇಡ, ಹೋಗಬೇಡ...."

–ಪದ್ಮಾ ಬಡಬಡಿಸತೊಡಗಿದಳು. ಎದ್ದು ಕುಳಿತೆ!

"ಅಂಜೂ ...ಅಂಜೂ...."

–ಪದ್ಮಾಳ ನರಳುವಿಕೆಯ ಧ್ವನಿ. !

ಹಾಗಾದರೆ ಅಂಜಲಿ ಬಂದಿರುವಳೇ? ಬಂದು ಈಗ ಹೊರಟಿರುವಳೇ? ಆದರೆ ಬಾಗಿಲು ತೆರೆಯುವ ಅವಶ್ಯಕತೆಯೇನಿತ್ತು. ದೇಹ ಭೌತಿಕವಾಗಿದ್ದರೆ ಮಾತ್ರ ಬಾಗಿಲು ತೆರೆಯಬೇಕು!

ಅಂಜಲಿಯೇ ಬಾಗಿಲು ತೆರೆದು ಒಳಗೆ ಬಂದಿದ್ದರೆ ತಿರುಗಿ ಹೋಗುವಾಗ ಮುಚ್ಚಿಕೊಂಡು ಹೋಗಬಹುದು. ಆದರೆ ಬಾಗಿಲು ಮುಚ್ಚಿಕೊಂಡೇ ಹೋಗಬೇಕೆಂದೇನೂ ಇಲ್ಲವಲ್ಲ. ಮರೆತುಹೋಗಬಹುದು. ಪ್ರೇತಗಳೂ ಮರೆಯಬಹುದೇ? ಬಾಗಿಲು ತಾನೇ ತಾನಾಗಿ ಮುಚ್ಚಿಕೊಂಡರೆ? ನನ್ನ ಕಣ್ಣೆದುರಿಗೇ ಈ ಘಟನೆ ನಡೆದುಬಿಟ್ಟರೆ?

ಹೇಗೆ ಸಾಧ್ಯ?

ಸಾಧ್ಯವಿಲ್ಲವೇ ಇಲ್ಲ ಎಂದು ಹೇಗೆ ಹೇಳುವಿರಿ?

"ಬಾಗಿಲು ಮುಚ್ಚಿಕೊಂಡಿದ್ದು ಸತ್ಯ. ಪ್ರೇತ ಬಂದು ಬಾಗಿಲು ತೆರೆದಿತ್ತು. ಹೋಗುವಾಗ ಮುಚ್ಚಿಕೊಂಡು ಹೋದದ್ದನ್ನು ನೀವೇ ಕಣ್ಣಾರೆ ಕಂಡಿರಿ ಸರ್. ಇದು ಸತ್ಯ. ನೀವು ನಂಬದಿದ್ದರೆ ಹೇಗೆ?" -ಎಂದು ಪದ್ಮಾ ಬಹುದು.

ಹೌದು, ಹುಚ್ಚು ಸಾಪೇಕ್ಷ ಆಗಬಹುದು, ಸತ್ಯವೂ ಸಾಪೇಕ್ಷವೇ?!

ಛೆ, ಒಂದು ಸಣ್ಣ ಘಟನೆ ಕುರಿತು ಎಂತೆಂತಹವಿಚಾರಗಳನ್ನು ಮಾಡುತ್ತಿರುವೆನಲ್ಲಾ! ತಲೆ ಝಾಡಿಸಿದೆ. ಪದ್ಮಾಳನ್ನು ನೋಡಿದೆ. ಸ್ವಲ್ಪ ಹೊತ್ತಿನ ನಂತರ ಕಣ್ಣು ತೆರೆದಳು.

"ಸರ್ ...." ಎನ್ನುತ್ತ ಎದ್ದು ಕುಳಿತು "ಅಂಜಲಿ ಬಂದಿದ್ದಳು ಸರ್. ನಿನ್ನೆಕ್ಕ ಅಂಜಲಿ ಬಂದಿದ್ದಳು" -ಎಂದು ಮುಖ ಅಗಲ ಮಾಡಿ ಹೇಳಿದಳು.

ಅವಳಿಗೆ ಅನುಭವ ಆಗಿರಬಹುದು. ಆದರೆ ನನಗೆ ಮಾತ್ರ ಏನೇನೂ ಅನ್ನಿಸಿರಲಿಲ್ಲ ಕೂಡ-ಬಾಗಿಲು ತೆರೆದಿರುವುದರ ಹೊರತಾಗಿ!

"ನೀವು ನಂಬಲಿಕ್ಕಿಲ್ಲ ಸರ್. ಆದರೆ ಅಂಜಲಿ ಬಂದುದು ನಿಜ. ಇದೀಗ ಹೊರಟುಹೋದಳು ಸರ್. ಯಾಕ್ಸಾರ್ ನೀವೇನೂ ಮಾತಾಡುತ್ತಲೇ ಇಲ್ಲವಲ್ಲ?" -ಆಕ್ಷೇಪಿಸಿ ನುಡಿದಳು. ನಾನು ಏನಾದರೂ ಮಾತಾಡುವದು ಅನಿವಾರ್ಯವಾಗಿತ್ತು.

"ನಿನ್ನ ಮಾತಿನ ಮೇಲೆ ನನಗೆ ವಿಶ್ವಾಸ ಇದೆ. ಅಂತೂ ಉದ್ದೇಶ ಈಡೇರಿತು" ಎಂದೆ.



ಭಾಗ್ಯದ ಬಾಗಿಲೇ ತೆರೆಯಿತು" -ಎಂದಳು !

ನಾನು ಬಾಗಿಲ ಕಡೆ ನೋಡಿದೆ. ...ಲೇ ಇತ್ತು !

"ನಮ್ಮ ಎಲ್ಲ ಸಮಸ್ಯೆಗಳಿಗೂ ಪರಿ...ರ ಸಿಕ್ಕ ಹಾಗಾಯ್ತು ಸರ್. ಅವಳಿಗೂ ...ನ್ನನ್ನು ಭೆಟ್ಟಿಯಾಗೋ ಆಸೆ ಬಹಳ ...ತ್ತಂತೆ. ಆದರೆ ಮನೆಗೆ ಬಂದರೆ, ಅಪ್ಪ...ಮ್ಮ ತಂದೆ ತಾಯಿಗೆ ಕಾಣಿಸಿದರೆ, ಸತ್ತು ...ಜಯಾಗಿ ಅಲೆದಾಡ್ತಿದಾಳೆ ಅಂತ ...ದೊಂದನ್ನು ಮನಸ್ಸಿಗೆ ಹಚ್ಚಿಕೊಂಡು ...ರಗಬಹುದೂಂತ ಬಿಟ್ಟಿದ್ದಳಂತೆ.ಅದಕ್ಕೆ ...ನ್ನಾರ್ ನಾನು ನಮ್ಮ ತಂದೆತಾಯಿಗೆ ...ತ್ತಾಗದಂತೆ ಇಲ್ಲಿಗೆ ಬಂದುದು"-ಎಂದು ...ಳು ಹುರಿದಂತೆ ಮಾತನಾಡತೊಡಗಿ...ಳು.

"ಸ್ನೇಹಿತೆ ನರ್ತಕಿಯ ಜೊತೆ ಅವಳ ...ರಿಗೆ ಹೋಗಿ ಬರ್ತೀನಿ. ಬಹಳ ದಿವಸ ...ಂದ ಕರೀತಿವಾಳೆ ಅಂತ ಮನೆಯಲ್ಲಿ ...ಳ್ಳು ಹೇಳಿ ನಿಮ್ಮೊಡನೆ ಬಂದದ್ದು ಸರ್. ...ಮ್ಮ ಸಹಾಯವನ್ನು ಈ ಜನ್ಮದಲ್ಲಿ ಮರೆ...ಯೋದೇ ಸಾಧ್ಯವಿಲ್ಲ ಸರ್. ನನ್ನನ್ನು ಇಲ್ಲಿ ...ಡುಕೊಂಡು ಬಂದು ಉಪಕಾರ ಮಾಡಿ...ರಿ" -ಮತ್ತೆ ಗುಣಗಾನ ಪ್ರಾರಂಭವಾ...ಗ ಆಕಳಿಸಿದೆ ! "ಯಾಕ್ಸಾರ್ ನೀವು ...ಮಾತೇ ಆಡ್ತಿಲ್ಲವಲ್ಲ ?" ಎಂದು ಕೇಳಿದಳು. ...ನ್ನ ಅನುಭವವನ್ನು ಕೇಳಿ ತಿಳಿಯು...ದೇ ಒಂದು ವಿಚಿತ್ರ ಅನುಭವ" ಎಂದೆ. ...ದು ಸರ್. ನಮ್ಮ ಸಮಸ್ಯೆಗಳೆಲ್ಲಾ ...ರಿಹಾರ ಆದವು" -ಎಂದಳು. ನನಗೆ ...ರ್ಥವಾಗಲಿಲ್ಲ. ಇವಳ ಸಮಸ್ಯೆಗಳು ...ಯಾವುವು ? ಎಂತಹವು ? ಭಾ ಗ್ಯ ದ ...ಬಾಗಿಲೇ ತೆರೆದ ಹಾಗಾಯ್ತು ಎಂದೂ ...ಹೇಳಿದ್ದಳು. ಬಾಗಿಲ ಕಡೆ ನೋಡಿದೆ. ಆ ...ಬಾಗಿಲನ್ನೇ ತದೇಕ ದೃಷ್ಟಿಯಿಂದ ನೋಡ...ತೊಡಗಿದಾಗ ಪದ್ಮಾ ನುಡಿದಳು. "ರಾತ್ರಿ ...ಮಲಗುವಾಗ ಮುಚ್ಚಿದ್ದೆ ಸರ್" ಎಂದಳು. ...ನ್ನ ಎದೆಯಲ್ಲಿ ಕೋಲ್ಮಿಂಚು ! ಹಾಗಾ...ದರೆ ಅಂಜಲಿಯೇ ತೆರೆದಳೇ ?! ಪದ್ಮಾ ತಡ...ರಿಸತೊಡಗಿದಳು...." ನನ್ನದು ತಪ್ಪಾ...ಯಿತು ಸರ್. ನಿಮಗೆ ನಿದ್ರೆ ಹತ್ತಿದ



ಮೇಲೆ ನಾನೇ ತೆರೆದಿದ್ದೆ. ಅಂಜಲಿಗೆ ಒಳಗೆ ಬರಲು ತೊಂದರೆಯಾಗದಿರಲಿ ಅಂತ" -ಎಂದಳು ! "ಯಾಕೆ ಸಿಟ್ಟು ಬಂತಾ ?" ಕೇಳಿದಳು. "ಸಿಟ್ಟಿಲ್ಲ, ಪ್ರೀತಿ" ಎಂದೆ. ಅವಳ ಕಣ್ಣು ಅಗಲವಾದವು. ವಿಚಿತ್ರವಾಗಿ ನನ್ನನ್ನು ನೋಡಿದಳು. ನನ್ನಲ್ಲಿ ಹುಟ್ಟಿದ್ದೇ ಒಂದು ಸಮಸ್ಯೆ - ಅದೇ ಬಾಗಿಲಿನ ಸಮಸ್ಯೆ. ಅದೊಂದು ಪರಿಹಾರವಾಗಿ ಸಮಾಧಾನವೆನಿಸಿತ್ತು. ಅಕ್ಕ ಒಳಗೆ ಬರಲು ತೊಂದರೆಯಾಗದಿರಲೆಂದು ತಂಪಾದ ಗಾಳಿ ಬರುತ್ತಿದ್ದರೂ ತಂಗಿ ಬಾಗಿಲು ತೆರೆದು ಬಂದು ಮಲಗಿದಳೇ ? ಅಕ್ಕನ ಮೇಲಿನ ಅವಳ ಪ್ರೀತಿಯೇ ! ಚಳಿಗಾಲದಲ್ಲಿ ಗಿಡಗಳಿಗೆ ಬಿಸಿನೀರು ಹಾಕಿದಂತೆ !

"ಯಾಕ್ಸಾರ್ ರಾತ್ರಿ ನಿಮಗೆ ಚಳಿಯಾಯಿತೇ ?" -ಎಂದಳು.

"ಇಲ್ವಲ್ಲ"-ಎಂದೆ. ಆದರೂ ಎದ್ದು ಹೋಗಿ ಬಾಗಿಲು ಹಾಕಿಬಂದಳು. ನನ್ನ ಉಸಿರಾಟ ಈಗ ಸರಳವಾಗಿತ್ತು. "ನಾವು ನಾಳೆ ಆದಷ್ಟು ಬೇಗ ಹೋಗೋಣ ಸರ್" ಎಂದಳು. ಅವಳು ಅವಸರಪಡುವದಕ್ಕೆ ಕಾರಣ ಮನೆಯಲ್ಲಿ ಸುಳ್ಳು ಹೇಳಿ ಬಂದುದೇ ಇರಬಹುದೇ ? "ಹೋಗೋಣ...ಲ್ಲ, ಸ್ವಾಮಿ ಬರಲಿ, ಕೀ ಕೊಟ್ಟು ಹೋಗೋಣ, ಇನ್ನೂ ರಾತ್ರಿಯಿದೆ. ಸ್ವಲ್ಪ ಮಲಗೋಣ" ಎಂದೆ. ಚಾದರನ್ನು ಎಳೆದುಕೊಂಡೆ.

ಅವಳು ಮ ಲ ಗ ಲಿ ಲ್ಲ. ಟೇಬಲ್ ಮೇಲಿನ ಡೈರಿ ಎಳೆದುಕೊಂಡು ಬರೆಯಲು ಪ್ರಾರಂಭಿಸಿದಳು. ಬಹುಶಃ ಅಕ್ಕ ಭೆಟ್ಟಿಯಾದ ಬಗ್ಗೆ ವಿವರವಾಗಿ ಬರೆಯಬಹುದು. ಅವಳು ಬರೆಯುವದನ್ನೇ ನೋಡುತ್ತ ಕುಳಿತೆ. ಅಕ್ಷರಗಳು ಮಾತ್ರ ಕಾಣಿಸುತ್ತಿರಲಿಲ್ಲ. ಅಂಜಲಿ ಇವಳ ಯಾವ ಸಮಸ್ಯೆಗಳನ್ನು ಪರಿಹಾರ ಮಾಡಿದ್ದಳು ? ಇವಳ ಭಾಗ್ಯದ ಬಾಗಿಲು ತೆರೆಯಿತಂತೆ ! ಪದ್ಮಾಳ ಮಾತುಗಳ ಔಚಿತ್ಯ ಗೊತ್ತಾದದ್ದು ಊರು ತಲುಪಿದ ಮೇಲೆಯೇ.

ಪಾರ್ಶ್ವವಾಯುವಿಗೆ ತುತ್ತಾದ ತಂದೆ. ಮಗಳ ಮದುವೆಯ ಚಿಂತೆ ಹೊತ್ತು ಹತಾಶಗೊಂಡ ತಾಯಿ. ಅಂಜಲಿ ಬ್ಯಾಂಕಿನಲ್ಲಿಟ್ಟ ಹಣದಿಂದಲೇ ಇದುವರೆಗೆ ಜೀವನ ಸಾಗಿಸಿ ಇನ್ನು ಮುಂದೇನು ಎಂದು ಚಿಂತಿಸುವ ಪದ್ಮಾ....ಪ್ರ ತಿ ಯೊ ಬ್ಬ ರಿ ಗೂ



'ಆಟಂ ಬಾಂಬ್'



'ಹೂಮತಾಪು'

ಜೀವಂತ ಪಟಾಕಿಗಳು..!...



'ಭೂಚಕ್ರ'

ಎಚ್.ಬಿ. ಮಂಜುನಾಥ.



'ಪಟಾಕಿ ಸರ'

...ನು ಸಮಸ್ಯೆ.

ತನ್ನ ತಂದೆ ತಾಯಿಗೆ ಪರಿಚಯ ...ಕೊಡತೊಡಗಿದಳು ಪದ್ಮ. "ಇವರು ...ಯ ಅಣ್ಣ. ಅಣ್ಣ ಅಂದರೆ ಖಾಸ ... ಅಲ್ಲ. ಅವಳ ದೊಡ್ಡಮ್ಮನ ಮಗ. ...ಂಕಿನಲ್ಲಿ ಕೆಲಸಕ್ಕಿದ್ದಾರೆ. ಈಹೊತ್ತು ...ರೂ ಬರುವವರಿದ್ದರು. ಇವರ ...ತೆಯೇ ಬಂದೆ" ಎಂದು ಸುಳ್ಳು ...ಣೆಸಿ ಸರ ಮಾಡುವಾಗ ಪದ್ಮಾ ನನ್ನ ನೋಡಿ ಕಣ್ಣು ಹೊಡೆದಳು.

ಕಾಫಿ ಕುಡಿದೆವು.

ಪದ್ಮಾ ತನ್ನ ರೂಮಿಗೆ ನನ್ನನ್ನೂ ...ದುಕೊಂಡು ಹೋದಳು. ಬೀಗದ ...ತೆಗೆದುಕೊಂಡು ಮತ್ತೊಂದು ರೂಮಿಗೆ ...ದುಕೊಂಡು ಹೋದಳು.

"ಅಂಜಲಿಯ ರೂಮು ಸರ್ ಇದು. ..." ಎಂದಳು.

"ನಮ್ಮ ಅಕ್ಕ ನಮಗೆ ಬಿಟ್ಟುಹೋದ ...ಯಲ್ಲಿ ಉಳಿದುದು ಅಂದರೆ ...ಂದೇ ಸರ್" ಎನ್ನುತ್ತ ತಿಜೋರಿಯನ್ನು ಮುಟ್ಟಿ ಹೇಳಿದಳು. ನನಗೆ ಅರ್ಥವಾಯಿತು.

ತಿಜೋರಿಯ ಬಿರಡೆಯನ್ನು ತಿರುಗಿಸ ತೊಡಗಿದಳು, ಒಂದೊಂದೇ ನಿರ್ದಿಷ್ಟ ನಂಬರಿಗೆ ಬಿರಡೆಯನ್ನು ತಿರುಗಿಸಿ, ಬಿರಡೆ ಒತ್ತುತ್ತ ಹೋದಳು.

ತಿಜೋರಿ ತೆರೆಯಿತು !

ಬಂಗಾರದ ಆಭರಣಗಳು !

ನೂರರ ನೋಟಿನ ಕಟ್ಟುಗಳು !

ಅಗಲ ಕಣ್ಣುಗಳಿಂದ ಪದ್ಮಾ ನನ್ನ ಕಡೆ ನೋಡಿದಳು.

"ಈ ತಿಜೋರಿ ತೆರೆಯಬೇಕಾದರೆ ಒಂದು ಗುಪ್ತ ನಂಬರು ಇದೆ. ಅದನ್ನೇ ಸರ್ ಅಂಜಲಿ ನಿನ್ನೆ ರಾತ್ರಿ ಹೇಳಿದ್ದು" ಎಂದಳು. ನನಗೆ ಆಶ್ಚರ್ಯ ಆಯಿತು. ಈ ಉದ್ದೇಶದಿಂದಲೇ ಇವಳು ನನ್ನ ಬೆನ್ನು ಹತ್ತಿ ಅಂಜಲಿಯ ಪ್ರೇತಕ್ಕೆ ಭೆಟ್ಟಿ ಮಾಡಿಸಿರಿ ಎಂದು ದುಂಬಾಲು ಬಿದ್ದುದೇ ?

ನೋಟಿನ ಕಟ್ಟುಗಳ ಮೇಲೆ ಬೆರಳು ಆಡಿಸಿ, ಪೇರಿಸಿಟ್ಟು, ಆಭರಣಗಳನ್ನು ಮುಟ್ಟಿ ಮುಟ್ಟಿ ನೋಡಿ ನನಗೂ ತೋರಿಸಿದಳು. ಮುತ್ತಿನ ಸರ ಒಂದನ್ನು ತೆಗೆದು ಕೊಂಡು ಕೊರಳಿಗೆ ಹಾಕಿಕೊಂಡು ಕನ್ನಡಿಯಲ್ಲಿ ನೋಡಿಕೊಂಡಳು. ಅವಳ ಆಗಿನ ಸಂತೋಷವನ್ನು ವರ್ಣಿಸಲು ಸಾಧ್ಯವಿಲ್ಲ. ಇದ್ದಕ್ಕಿದ್ದಂತೆಯೇ ಅವಳ ಕಣ್ಣು ತುಂಬಿದವು. ಕೆನ್ನೆಯ ಮೇಲೆ ಮುತ್ತಿನ ಹನಿ ಜಾರಿತು: ಬಹುಶಃ ಅಂಜಲಿಯ ನೆನಪಾಗಿರಬಹುದು. ಅವಳನ್ನು ವಾಸ್ತವಕ್ಕೆ ಎಳೆಯುವುದೇ ಸರಿಯೆನ್ನಿಸಿ "ನಿನಗೆ ನನ್ನ ಮೇಲೆ ಎಷ್ಟೊಂದು ವಿಶ್ವಾಸ ಇದೆಯಲ್ಲಾ" –ಎಂದೆ.

"ಯಾಕೆ ಸರ್. ಈ ತಿಜೋರಿಯನ್ನು ನಿಮ್ಮೆದುರಿಗೇ ತೆರೆದುದಕ್ಕೇ ?" ಎಂದು ಪ್ರಶ್ನಿಸಿದಳು. ಕಣ್ಣು ಒರೆಸಿಕೊಂಡಳು. ಈ ಪರಿಜ್ಞಾನವಾದರೂ ಇವಳಲ್ಲಿದೆಯಲ್ಲಾ !

"ಹೌದು ಅದಕ್ಕೆ" ಎಂದೆ. ನಕ್ಕಳು.

"ನೀವಿಲ್ಲದಿದ್ದರೆ ನನಗೆ ಅಂಜಲಿಯನ್ನು ಭೆಟ್ಟಿಯಾಗಲು ಆಗ್ತಿರಲಿಲ್ಲ. ಕಥೆ ಬರೆಯಲು ಪ್ರಶಾಂತ ಸ್ಥಳ ಬೇಕೆಂದು ಒಂದು ವಾರ ರಜ ಹಾಕಿ ಆ ಬಂಗಲೆಗೆ ಹೋ...

...ಸ್ವಾಮಿಯ ಮಾತುಗಳ ಆಧಾರದ ...ಲೆ ಕಥೆ ಬರೆದು ಪತ್ರಿಕೆಗೆ ಕಳಿಸಿದಿರಿ. ...ಟವಾದ ಅದನ್ನು ನಾನು ಓದಿ ಓದಿ ...ಸಿಕೊಂಡು ನಿಮ್ಮಿಂದಲೇ ನನಗೆ ...ರು ಆಗಬಹುದು ಅನ್ನಿಸಿ, ನಿಮ್ಮ ...ಸ ಪಡೆದು, ನಿಮ್ಮನ್ನು ಭೆಟ್ಟಿಯಾಗಿ ...ತಿಸಿಕೊಂಡದ್ದು. ನಿಮ್ಮಂಥವರ ...ಲೆ ವಿಶ್ವಾಸ ಇಡದಿದ್ದರೆ ಇನ್ನು ಯಾರ ...ಲೆ ವಿಶ್ವಾಸ ಇಡಲಿ ಸರ್ ?"– ...ಳು.

...ಥೆಗಾರರ ಮೇಲೆ ವಿಶ್ವಾಸ ! ನಾವು ...ಯುವ ಕಥೆಗಳ ಮೇಲೆಯೇ ...ಗರು ನಮ್ಮ ವ್ಯಕ್ತಿತ್ವ ...ಕಂಡುಕೊಳ್ಳುತ್ತಾರೆಯೇ ? ...ಮಾನ್ಯ ಮನುಷ್ಯರೇ ಅಲ್ಲವೇ ...? ಎಲ್ಲ ಕಥೆಗಾರರೂ ತಾವು ...ಯುವುದಕ್ಕೆ ಬದ್ಧರಾಗಿರುತ್ತಾರೆಯೇ? ...ನ ಯೋಚನೆಗಳಿಗೆ ಪದ್ಮಾ ನನಗೆ ...ದ ಮಾಡಿಕೊಟ್ಟಳು. ಅದರ ಅಂಜ... ಪ್ರೇತ ಬಂದು ಇವಳಿಗೆ ತಿಜೋ... ನಂಬರು ಹೇಳಿದ್ದು ಹೇಗೆಂಬುದರ ಬಗ್ಗೆ ವಿಶೇಷವಾಗಿ ನನ್ನ ಯೋಚನೆ ಹರಿದದ್ದು.

"ನಿನಗೆ ಈ ತಿಜೋರಿಯ ನಂಬರು ಮೊದಲು ಗೊತ್ತಿತ್ತೇ?"

–ನೇರವಾಗಿ ಪ್ರಶ್ನೆ ಹಾಕಿದೆ.

"ನಮ್ಮ ಅಕ್ಕ 'ತಿಜೋರಿ ತೆರೆಯು ತ್ತಿದ್ದಾಗ ನಾನು ನೋಡುತ್ತಲೇ ಇರು ತ್ತಿದ್ದೆ ಸರ್."

"ನಂತರ ಮರೆತು ಹೋಗಿತ್ತೇ ?"

"ಅಂಜಲಿ ತೀರಿಕೊಂಡ ನಂತರ ಮರೆತುಹೋಗಿತ್ತು."

"ಅಂಜಲಿ ಇದ್ದಾಗ ನೀನೊಬ್ಬಳೇ ಈ ತಿಜೋರಿಯನ್ನು ತೆಗೆದಿದ್ದೆಯಾ ?"

"ಬೇಕಾದಷ್ಟು ಸಲ."

ಅವಳು ಈ ವಿಷಯ ಮೊದಲೇ ಹೇಳಿದ್ದರೆ ಹಿಪ್ನೋಟೈಜ್ ಮಾಡಿ ಮರೆತು ಹೋದ ನಂಬರನ್ನು ಪುನಃ ಜ್ಞಾಪಿಸಿಕೊಳ್ಳಲು ಸೂಚನೆ ಕೊಟ್ಟು ನಂಬರು ದೊರಕಿಸಬಹುದಿತ್ತು. ಆ ಬಂಗಲೆಯಲ್ಲಿ ಆದುದೂ ಅದೇ. ಆಟೋಸಜೆಶನ್ ಮೂಲಕ ಸುಪ್ತಾವಸ್ಥೆ ಸೇರಿ ನಂಬರನ್ನು ...ಸಿಕೊಂಡು ಹೊರಗೆ ಬಂದವಳು ...ದ್ಮಾ. ಆದರೆ ತನ್ನ ಅಕ್ಕ ಅಂಜಲಿಯೇ ಬಂದು ನಂಬರು ತಿಳಿಸಿದ್ದಾಳೆನ್ನುವ ಭ್ರಾಂತಿಗೆ ಒಳಗಾಗಿದ್ದಾಳೆ ಅಷ್ಟೆ. ಅವ... ಸಂಪರ್ಕವನ್ನು ತಾನೇ ಕಲ್ಪಿಸಿಕೊಂಡಿ ದ್ದರೂ ಅವಳ ಪ್ರೇತವೇ ಬಂದು ತನ್ನನ್ನು ಸಂಪರ್ಕಿಸಿದೆ ಎಂಬ ಭ್ರಮೆಯಲ್ಲಿದ್ದಾಳೆ. ಆ ಭ್ರಮೆಯಲ್ಲಿಯೇ ಸಂತೋಷಭರಿತಳಾ ಗಿದ್ದಾಳೆ. ವೈಜ್ಞಾನಿಕ ಕಟು ಸತ್ಯವನ್ನು ತಿಳಿಸಿ ಅವಳ ಭ್ರಮೆಯನ್ನು ದೂರ ಮಾಡುವುದರಿಂದ ತನ್ನ ಅಕ್ಕ ತನ್ನನ್ನು ಸಂಪರ್ಕಿಸಿಯೇ ಇಲ್ಲವೆಂದು ತೀರ್ಮಾನಕ್ಕೆ ಬಂದರೆ ಅದಕ್ಕಿಂತ ಆಘಾತ ಬೇರೊಂದಿಲ್ಲ.

"ಏನ್ಸಾರ್ ಬಹಳೇ ಯೋಚಿಸುತ್ತಿರು ವಂತೆ ಕಾಣ್ತದೆ" ಎಂದಾಗಲೇ ನಾನು ವಾಸ್ತವಕ್ಕೆ ಬಂದುದು.

"ಎಂತಹ ಚಮತ್ಕಾರಿಕ ತಿಜೋರಿ !" ಎಂದು ಉದ್ಗರಿಸಿದ್ದೆ; ಈಗಲೂ ಹಾಗೆಯೇ ಉದ್ಗರಿಸುತ್ತಿರುತ್ತೇನೆ– ಪದ್ಮಳ ಕಣ್ಣುಗಳನ್ನೇ ನೋಡುತ್ತ– ಮಕ್ಕಳಿಬ್ಬರೂ ಮಲಗಿದ ಮೇಲೆ !







'ದೋಸೆ ತೂತು ಮಾತಾಡುವವರ ಕಾವಲಿ ತೂತು'

- ಎಚ್. ಬಿ. ಮಂಜುನಾಥ

ಕೆರೆಯಲೂ ಆಗದ ತಲುಪಲೂ ಆಗದ ಭಾಗ್ಯದ ಬಾಗಿಲು ಕಾರವಾರ



● ಕೆ.ಬಿ.ದೇಸಾಯಿ

ಕಾರವಾರ ಜಗತ್ತಿನಲ್ಲಿಯೇ ಸರ್ವೋತ್ತಮ ಬಂದರು ಆಗಬಲ್ಲಂತಹ ಗುಣಗಳನ್ನು ಹೊಂದಿದೆ. ಆದರೆ ನಮ್ಮ ದೇಶ ಅತ್ತ ಗಮನಹರಿಸಿಲ್ಲ. ಅತ್ಯಂತ ಮಿತವ್ಯಯದ ಸರ್ವ ಋತು ಬಂದರು ಆಗಬಲ್ಲ ಕಾರವಾರ ಎಳೆತ-ಸೆಳೆತ-ಪ್ರಭಾವಗಳಿಂದ ವಂಚಿತವಾಗಿ ಮೂಲೆಗುಂಪಾದುದಕ್ಕೆ ಪ್ರತ್ಯಕ್ಷ ಉದಾಹರಣೆ. ಇದರ ಜೊತೆಗೆ ಸುದೀರ್ಘ ಇತಿಹಾಸವಿರುವ ಹುಬ್ಬಳ್ಳಿ–ಕಾರವಾರ ರೈಲು ಮಾರ್ಗವೂ ನೆನಗುದಿಗೆ ಬಿದ್ದಿದೆ. ಕರ್ನಾಟಕದ ಜನಸ್ತೋಮದ ಕನಸು ನನಸಾದಾಗಲೇ ಅಭಿವೃದ್ಧಿಯ ಹೊಸಯುಗ ಆರಂಭವಾಗುವದು.

ಅರಬ್ಬಿ ಸಮುದ್ರದ ರಾಣಿ ಎಂದು, ಸಾಗರಯಾನ ಪರಿಣತರಿಂದಲೂ, ನಿಸರ್ಗ ರಮಣೀಯ- ಹೃದಯ ಸೂರೆಗೊಳ್ಳುವ ಸೌಂದರ್ಯವೆಂದು ಕವಿ ರವೀಂದ್ರನಾಥ ಟ್ಯಾಗೋರರಿಂದಲೂ ವರ್ಣಿಸಲ್ಪಟ್ಟಿರುವ ಕಾರವಾರ–14°-ಅಕ್ಷಾಂಶ ಹಾಗೂ 74°–07 ಪೂ. ರೇಖಾಂಶದ ಮೇಲೆ, ಸಮುದ್ರ ರಾಜನನ್ನು ಕೈಚಾಚಿ ಕರೆಯುವ, ವಿಶ್ವದಲ್ಲಿಯೇ ಶ್ರೇಷ್ಠವಾದ ನೈಸರ್ಗಿಕ ಸರ್ವ ಋತು ಬಂದರಾಗಿದೆ. ದೇವಗಢ,

[illegible] ಪಿಸ್ಟಿಗಢ, ಮೋರ್ಮಗೋವಾ, [illegible] ಬಣಗೆ [illegible] ನೈಸರ್ಗಿಕ ಪೃಷ್ಟ [illegible] ಹಾಗೂ ಸುಮಾರು 3 ಕಿ. ಮೀ. ನಷ್ಟು ಇರುವ ಬಲವಾದ ಕಲ್ಲು [illegible] ಕಾರವಾರ ಬಂದರಿಗೆ ನೈಸರ್ಗಿಕ [illegible] ರಕ್ಷಣೆಯನ್ನು ಕ್ರುದ್ಧ ಸಮುದ್ರದಿಂದ ನೀಡುತ್ತದೆ.

ವಿಶ್ವದಲ್ಲಿ ಮೂರು ನೈಸರ್ಗಿಕ ವರಪ್ರಸಾದ ಪಡೆದ ಬಂದರುಗಳಿವೆ. ಕ್ಯಾಲಿಫೋರ್ನಿಯಾ, ಸಿಡ್ನಿ ಮತ್ತು ಕಾರವಾರ. ಇವುಗಳಲ್ಲಿ ಅಭಿವೃದ್ಧಿ ಹೊಂದಿರುವ ಕ್ಯಾಲಿಫೋರ್ನಿಯಾ ಹಾಗೂ ಸಿಡ್ನಿ ಇಂದು ಜಗತ್ತಿನ ಪ್ರಮುಖ ಬಂದರುಗಳಾಗಿವೆಯಲ್ಲದೇ ಸಾಗರಯಾನ ಹಡಗುಗಳ ಸಿಬ್ಬಂದಿಯ ಅತ್ಯಂತ ಹರ್ಷದ ತಾಣಗಳಾಗಿವೆ. ಇವುಗಳಿಗಿಂತಲೂ ಒಂದು ದೃಷ್ಟಿಯಲ್ಲಿ ಸರ್ವೋತ್ತಮವಾದ ಕಾರವಾರದ ಬಗ್ಗೆ ನಮ್ಮ ದೇಶದಲ್ಲಿ ದೊರೆಯಬೇಕಾದ ಗಮನ ದೊರೆಯದೇ ಹೋಗಿರುವದು ದುರ್ದೈವದ ಸಂಗತಿಯಾಗಿದೆ.

ಕರ್ನಾಟಕ 287 ಕಿ. ಮೀ. ನಷ್ಟು ಸಾಗರ ತೀರವನ್ನು ಪಡೆದಿದ್ದು, ಅದರಲ್ಲಿ 144 ಕಿ. ಮೀ. ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಇದೆ. ಈ ಅಂತರದಲ್ಲಿ ಕಾರವಾರ ಮಧ್ಯವರ್ತಿಯಾಗಿದ್ದು, ವರ್ಷವಿಡೀ 20 ಸೆ. ನಿಂದ 34 ಸೆ.ವರೆಗೆ ಸಮಶೀತೋಷ್ಣ ಆಹ್ಲಾದಕರ ವಾತಾವರಣವಿರುತ್ತದೆ. ವರ್ಷದಲ್ಲಿ ಸುಮಾರು 3000 ಮಿ. ಮೀ. ಮಳೆ ಬೀಳುತ್ತದೆ. ಮೋಡರಹಿತ ಗಗನ–ಮಂಜು–ಇಬ್ಬನಿಯು ತೊಂದರೆಯೂ ಕಡಿಮೆ. ದಕ್ಷಿಣ–ಪಶ್ಚಿಮ ಮಾನ್ಸೂನ್ ಕಾಲದಲ್ಲಿ ಅಂದರೆ ಜೂನ್‌ದಿಂದ ಸೆಪ್ಟೆಂಬರ್‌ವರೆಗೆ ಸಾಗರದ ಅಲೆಗಳು ಪಶ್ಚಿಮಾಭಿಮುಖವಾಗಿಯೂ ಉತ್ತರ–ಪೂರ್ವ ಮಾನ್ಸೂನಿನಲ್ಲಿ ಅಂದು ಜನವರಿಯಿಂದ ಮೇ ವರೆಗೆ ಅಲೆಗಳು ಉತ್ತರ-ಪೂರ್ವ ಅಭಿಮುಖವಾಗಿಯೂ ಇರುತ್ತವೆ. ನಡುಗಡ್ಡೆಗಳು ಹಾಗೂ ಆಘಾತದಿಂದಾಗಿ ಅಲೆ [illegible] ಇರುವದೇ ಇಲ್ಲ. 1 ರಿಂದ [illegible] ಮೀಟರ್ ಎತ್ತರದ ಅಲೆಗಳು ಪ್ರತಿ [illegible] 6 ಸೆಕೆಂಡುಗಳ ಅಂತರದಲ್ಲಿ ತೀರಕ್ಕೆ ಬರುತ್ತವೆ. ವಿಷಮ ಹವಾಮಾನ ಹಾಗೂ ಬಿರುಗಾಳಿ ಸಮಯದಲ್ಲಿ 4.2 ಮೀಟರಿನಿಂದ 6 ಮೀಟರ್ ಎತ್ತರದ ಅಲೆಗಳು ಕಂಡು ಬರುವ ದಾಖಲೆಯಿದ್ದು ಸಾಗರಗಾಮೀ ಹಡಗುಗಳಿಗೆ ಅಥವಾ ಮಧ್ಯಮ ಸಣ್ಣ ಹಡಗುಗಳಿಗೂ ಇವುಗಳಿಂದ ತೊಂದರೆಯಾಗುವದಿಲ್ಲ.

ಕಾರವಾರ ಬಂದರಿನ ಇನ್ನೂ ಒಂದು ನಿಸರ್ಗದತ್ತ ವರವೆಂದರೆ, ಬಂದರುಮುಖ ಹಾಗೂ ಹಡಗು ಕಟ್ಟೆಯ ಬಳಿ ಹೂಳೆತ್ತುವ ತೊಂದರೆ ಕಡಿಮೆ. 1880 ರಲ್ಲಿ ಹೂಳಿಕೆ (ಡ್ರಿಫ್ಟ್) ಬಗ್ಗೆ ಸರ್ವೇಕ್ಷಣೆ ನಡೆಸಲಾಗಿತ್ತು. ಆಗಿನಿಂದ 1956ರಲ್ಲಿ ನಡೆಸಲಾದ ಇನ್ನೊಂದು ಸರ್ವೇಕ್ಷಣದಿಂದ ಈ ಬಂದರಿನಲ್ಲಿ 835.5 ಎಂ.ಸಿ.ಎಫ್.ಟಿ. ಹೂಳಿಕೆ ದಾಖಲೆಯಾಗಿದೆ. 76 ವರ್ಷಗಳ ಅವಧಿಯಲ್ಲಿ ಇದು ಹೆಚ್ಚೇನೂ ಅಲ್ಲ. ಕಲಕತ್ತಾ, ಮುಂಬಯಿಯಂತಹ ಬಂದರುಗಳೊಡನೆ ಹೋಲಿಸಿದರೆ ಇದು ತೀರ ಕಡಿಮೆ. ವರ್ಷಕ್ಕೆ ಸುಮಾರು 11 ಎಂ. ಸಿ. ಎಫ್. ಟಿ. ಶೇಖರಣೆಯಾಗುವ ಹೂಳನ್ನೆತ್ತಲು ಬಹಳ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ.

ಭರವಸೆಯ ಬಂದರು

ಕಾರವಾರಕ್ಕೆ ದೀರ್ಘ ಸಮುದ್ರಯಾನ ಇತಿಹಾಸವಿದೆ. ವಿಜಯನಗರ, ಪಾಂಡ್ಯ ಚೋಳ ಅರಸರ ಕಾಲದಲ್ಲಿ ಕಾರವಾರದ ಮೂಲಕ ಸಮುದ್ರಯಾನ, ಸಾಗರಾಂತರ ವ್ಯಾಪಾರ ನಡೆಯುತ್ತಿತ್ತು. ಆಗಿನ ಅಗತ್ಯಗಳಿಗೆ ಅನುಗುಣವಾಗಿದ್ದ ಕಾರವಾರ, ಕಾಲಾಂತರದಲ್ಲಿ ಕಡೆಗಣಿಸಲ್ಪಟ್ಟು ಇಂದಿನ ಸ್ಥಿತಿಗೆ ಬಂದಿದೆ. ದೂರ ಭವಿಷ್ಯದ ವಿವೇಚನೆಯೊಡನೆ ಇದನ್ನು ಅಭಿವೃದ್ಧಿಪಡಿಸಲು ಪ್ರಯತ್ನ ನಡೆಯಲೇ ಇಲ್ಲ. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ನವಸೇವಾದಂತಹ ಕೋಟ್ಯಾಂತರ ವೆಚ್ಚದ ಬಂದರುಗಳ ಅಭಿವೃದ್ಧಿಗೆ ಯೋಜಕರು ಗಮನ ನೀಡಿದರಾದರೂ ಅಂಥವುಗಳಿಗೆ

ಆಗುವ ವೆಚ್ಚದ ಕಾಲು ಭಾಗದಷ್ಟು
ಗಳಿಗಿಂತಲೂ ಹತ್ತು ಪಟ್ಟು ಹೆಚ್ಚು [illegible]
ವನ್ನೊದಗಿಸುವ ಇಂಥ ಬಂದರನ್ನು
ವೃದ್ಧಿಪಡಿಸಲು ಆಡಳಿತಗಾರರು ಗ[illegible]
ನೀಡಲಿಲ್ಲ.

ವಿವಿಧೋಪಯೋಗಿಯಾಗಬಲ್ಲ [illegible]
ವಾರ ಬಂದರಿಗೆ ಸುಮಾರು 2000 [illegible]
ಅಥವಾ 35 ಚದುರ ಮೈಲುಗಳ
ವಿಸ್ತೀರ್ಣವಿದೆ. ಪ್ರಯತ್ನಿಸಿದರೆ 60 [illegible]
65 ಚದುರಮೈಲು ಉಪಯೋಗಿ ಸ್ಥ[illegible]
ಕಾಶ ಕಾರವಾರ ಬಂದರಿಗೆ ದೊ[illegible]
ಬಹುದು. ಇದು ಮುಂಬಯಿ ಬಂ[illegible]
ಗಿರುವ ವಿಸ್ತೀರ್ಣಕ್ಕಿಂತಲೂ ಐದ[illegible]
ಆರು ಪಟ್ಟು ದೊಡ್ಡದಾಗುತ್ತದೆ.

ಇಂಡೋ–ಓಸಿಯಾನಿಕ್ ಕಂಪ[illegible]
ವ್ಯಾ. ಡೈರೆಕ್ಟರರಾಗಿದ್ದ ಕೆ. ಬಿ. [illegible]
ಅವರು, "ಕಾರವಾರ ಬಂದರನ್ನು [illegible]
ವೃದ್ಧಿಪಡಿಸಿದರೆ ಅದು ಹಾಂಕಾ[illegible]
ಹಾಗೂ ಸಿಂಗಾಪೂರಗಳಿಗಿಂತಲೂ ಶ್ರೆ[illegible]
ಬಂದರಾಗುತ್ತದೆ. ಎಲ್ಲ ಹವಾಮಾ[illegible]
ಲ್ಲಿಯೂ ಉಪಯೋಗಿಸಲ್ಪಡಬಹ[illegible]
ಎಂದು ಅಭಿಪ್ರಾಯಪಟ್ಟಿದ್ದರು. [illegible]
ದ್ರಕ್ಕೆ ಕೈಚಾಚಿ ನಿಂತ ಆಘಾತ, ಬ[illegible]
ನಲ್ಲಿ ಹಡಗುಗಳ ಲಂಗರಿಗೆ ಸುರ[illegible]
ಯನ್ನು ಒದಗಿಸುವವರ ಜೊತೆಗೆ [illegible]
ಇರುವ ನಡುಗಡ್ಡೆಗಳು ಕ್ರುದ್ಧ ಸಮು[illegible]
ಆಘಾತವನ್ನು ಉಪಶಮನಗೊಳಿಸು[illegible]
ಆಳ ಸಮುದ್ರದಿಂದ ಬಂದರಿಗೆ ಸರಳ [illegible]
ಹಡಗುಗಳು ಬರಲು ಆಳವಾದ [illegible]
ಸಹಾಯಕವಾಗಿದೆ. ನೈಸರ್ಗಿಕ [illegible]
ಅಲ್ಲಲ್ಲಿ 20 ರಿಂದ 35 ಫ್ಯಾದಮ್[illegible]
ವಿದ್ದು ಅವನ್ನು ಅಭಿವೃದ್ಧಿಪಡಿಸಿದ[illegible]
ಫ್ಯಾದಮ್‌ದವರೆಗೂ ಸಾಧ್ಯ[illegible]
ಭಾರೀ ಹಡಗುಗಳು ಕೂಡ [illegible]
ಸಾಗರದಲ್ಲಿ ಕಾಯದೇ ಬಂದರಿಗೆ [illegible]
ವಾಗಿ ಬರಬಹುದಲ್ಲದೇ ಬಂದರುಕಟ್ಟೆ[illegible]
ವೈಶಾಲ್ಯವೂ ಕನಿಷ್ಟ 100 ಸಾಗರ[illegible]
ಹಡಗುಗಳಿಗೂ ಲಂಗರಿನ ಅನುಕೂ[illegible]
ಒದಗಿಸುವಷ್ಟಿದೆ.

ಬಂದರಿನ ಹಿನ್ನಾಡು

ಕಾರವಾರ ಬಂದರಿಗೆ ಸುಮಾರು [illegible]

ಬಿ. ಪಿ. ಹಿನ್ನಾಡಿವೆ. (ಹಿಂಟರ್ ಲ್ಯಾಂಡ್) ಕರ್ನಾಟಕದ ಹನ್ನೊಂದು ಜಿಲ್ಲೆಗಳಾದ ಉತ್ತರ ಕನ್ನಡ, ಧಾರವಾಡ, ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ, ರಾಯಚೂರು, ಚಿಕ್ಕಮಗಳೂರು, ಬೆಳಗಾವಿ, ಬಿಜಾಪುರ, ತುಮಕೂರು, ಕಲ್ಬುರ್ಗಿಗಳೇ ಅಲ್ಲದೇ ಆಂಧ್ರ ಪ್ರದೇಶದ ಅನಂತಪುರ ಹಾಗೂ ಕರ್ನೂಲು ಜಿಲ್ಲೆಗಳೂ ಸಮರ್ಥ ಹಿನ್ನಾಡು ಪ್ರದೇಶವಾಗುತ್ತವೆ ಹಾಗೂ ಆಮದು-ರಫ್ತು ವ್ಯಾಪಾರಕ್ಕೆ ಪ್ರೋತ್ಸಾಹದಾಯಕವೂ, ಅಭಿವೃದ್ಧಿ ಪರವೂ ಆಗಿದೆ.


ಮುಖ್ಯವಾಗಿ ಹಿನ್ನಾಡಿನಿಂದ ಕಬ್ಬಿಣ-ಮ್ಯಾಂಗನೀಸ್ ಅದಿರು, ಉಪ್ಪು, ರಸಗೊಬ್ಬರ, ಹಿಂಡಿ, ಉರುವಲು ಕಟ್ಟಿಗೆ, ಸಿದ್ಧವಸ್ತುಗಳು, ಕಾಸ್ಟಿಕ್ ಸೋಡಾ, ಕಾಗದ, ಕಲ್ಲು, ಶೇಂಗಾ, ಸಕ್ಕರೆ, ಎಣ್ಣೆ ತೆಗೆದ ಹಿಂಡಿ, ಹೈಡ್ರೋಕ್ಲೋರಿಕ್ ಆ್ಯಸಿಡ್, ಕೊರೆದ ಕಟ್ಟಿಗೆ, ಪೆಟ್ರೋಲಿಯಂ, ಫಾಸ್ಪರಿಕ್ ಆ್ಯಸಿಡ್, ಸಮುದ್ರಜನ್ಯ ವಸ್ತುಗಳು, ಹತ್ತಿಕಾಳು ಎಣ್ಣೆ ಮೊದಲಾದವುಗಳ ಆಮದು-ರಫ್ತು ವ್ಯಾಪಾರಕ್ಕೆ ಹೊಸ ಆಯಾಮ ನೀಡಬಹುದಲ್ಲದೇ ಬಂದರು ಅತ್ಯಂತ ಲಾಭದಾಯಕವಾಗಿ ನಿರ್ವಹಿಸಲ್ಪಡಬಹುದು. ಇದೂ ಅಲ್ಲದೆ, ಪ್ರವಾಸಿ ಲೈನರ್‌ಗಳೂ ಸಹ ಇಲ್ಲಿ ಲಂಗರು ಹಾಕಬಹುದು. ಇದರಿಂದ ಸಾಗಾಟ ವೆಚ್ಚ ಕಡಿಮೆಯಾಗುವುದರ ಜೊತೆಗೆ ನಿರ್ವಹಣೆಯ ದೃಷ್ಟಿಯಿಂದ ಬಹುಒತ್ತಡಕ್ಕೆ ಒಳಗಾಗಿರುವ ಮುಂಬಯಿ ನವಸೇವಾ ಬಂದರುಗಳ ಮೇಲೆ ಒತ್ತಡವನ್ನೂ ಕಡಿಮೆ ಮಾಡಬಹುದು.

ಪ್ರಬಲ ಹಾಗೂ ವಾಣಿಜ್ಯೋದ್ಯಮ ದೃಷ್ಟಿಯಿಂದ ಪ್ರಗತಿಪರ ಹಿನ್ನಾಡಿರುವ ಈ ಬಂದರು ಅಭಿವೃದ್ಧಿ ಹೊಂದಿದರೆ ಹಿನ್ನಾಡಿನ ಆರ್ಥಿಕ ಅಭಿವೃದ್ಧಿಗೂ ಹೊಸ ಅವಕಾಶಗಳನ್ನು ಕಲ್ಪಿಸುತ್ತದೆ.

ಪ್ರಾರಂಭದ ಕಾರ್ಯ

ಕಾರವಾರ ಬಂದರಿನ ಅಭಿವೃದ್ಧಿಯಲ್ಲಿ ಎರಡು ದಶಕಗಳ ಹಿಂದೆ ಪ್ರಾರಂಭದ ಕಾರ್ಯಗಳು ಆರಂಭವಾಗಿ ನಂತರ 'ಅವ್ಯಕ್ತ ಕಾರಣ'ದಿಂದ ನಿಂತುಹೋಗಿವೆ. ವಿವರವಾದ ಮಣ್ಣು ಪರೀಕ್ಷೆ, ಬಂದರುಗಳ ನಮೂನೆಯ ಪರಿಶೀಲನೆ ಮೊದಲಾದವು ಪುಣೆಯ ಸೆಂಟ್ರಲ್ ವಾಟರ್ ಆ್ಯಂಡ್ ಪವರ್ ರೀಸರ್ಚ್ ಸ್ಟೇಶನ್‌ನವರ ಸಹಯೋಗದಿಂದ ನಡೆದವು. ಈ ಸಮೀಕ್ಷೆಗಳಿಂದ ಕಾರವಾರವನ್ನು ಅತ್ಯಂತ ಮಿತವ್ಯಯದಿಂದ ಸರ್ವಋತು ಬಂದರನ್ನಾಗಿ ಅಭಿವೃದ್ಧಿಪಡಿಸಬಹುದೆಂದೂ, ನಿರ್ವಹಿಸಬಹುದೆಂದೂ ಶಿಫಾರಸು ಮಾಡಲಾಗಿತ್ತು.

ಕೇಂದ್ರದ ಸಣ್ಣ ಬಂದರು ಅಭಿವೃದ್ಧಿ ಸಮಿತಿ ಹಾಗೂ ಕೇಂದ್ರೀಯ ಹಡಗು ನಿರ್ಮಾಣ ಸಮಿತಿಗಳಲ್ಲದೆ, ಜಪಾನಿನ ಮೆ॥ ಮಿತ್ಸುಯಿ ಆ್ಯಂಡ್ ಕಂ., ಮೆ॥ ಇಂಡೊಪೋಲ್ ಮೊದಲಾದ ವ್ಯವಸ್ಥೆಗಳು ಕೂಡ ಕಾರವಾರ ಸರ್ವಋತು ಬಂದರನ್ನು ಕಡಿಮೆ ವೆಚ್ಚದಲ್ಲಿ ಹಾಗೂ ಶ್ರೇಷ್ಠ ಮಟ್ಟದಲ್ಲಿ ಅಭಿವೃದ್ಧಿಪಡಿಸಬಹುದೆಂದೂ ಜೊತೆಗೇ ಹಡಗು ನಿರ್ಮಾಣ ಹಾಗೂ ದುರಸ್ತಿ ಕಾರ್ಖಾನೆಗಳನ್ನು ಸ್ಥಾಪಿಸಬಹುದೆಂದೂ ಅಭಿಪ್ರಾಯಪಟ್ಟಿವೆ. ಆದರೆ ಪರಿಣತರ ಈ ಎಲ್ಲ ಅಭಿಪ್ರಾಯಗಳನ್ನು ತ್ರಿಶಂಕು ಸ್ಥಿತಿಯಲ್ಲಿರಿಸಿ ನವಸೇವಾದಂತಹ ದುಬಾರಿ ನಿರ್ಮಾಣಗಳಿಗೆ ಹಣ ಹರಿಸಲಾಗಿದೆ. ಈ ದೇಶದಲ್ಲಿ ಎಳೆತ-ಸೆಳೆತ ಹಾಗೂ ಪ್ರಭಾವಗಳಿದ್ದರೆ ಏನನ್ನೂ ಸಾಧಿಸಬಹುದು. ಅವಿಲ್ಲದಿದ್ದರೆ, ಅರ್ಹ ಹಾಗೂ ಯೋಗ್ಯವಿರುವ ಅಭಿವೃದ್ಧಿ ಕಾರ್ಯಗಳನ್ನೂ ಮೂಲೆಗುಂಪು ಮಾಡಬಹುದು ಎಂಬುದಕ್ಕೆ ಕಾರವಾರ ಬಂದರು ಜ್ವಲಂತ ಉದಾಹರಣೆಯಾಗಿದೆ.



ಶ್ರೀಮಾನ್ ಶ್ರೀ ರಾಜಕಾರಿಣಿ

ಖೊಟ್ಟಿ ನೋಟನು ನಡಿಸಿ
ಆದ ಶ್ರೀಮಂತ
ಚುನಾವಣೆ ನಿಧಿಗಿತ್ತು
ಏರಿದನು ಹಂತ !
ಯಾವ ಪಕ್ಷವು ರಾಜ್ಯ
ಆಳಿದರೆ ಏನು ?
ರಾಜಕಾರಿಣಿಯಾಗಿ
ಸವಿಯುತಿಹ ಜೇನು !

---ಜಿ. ಎಸ್. ಅನ್ನದಾನಿ

1980ರ ಸಮಯದಲ್ಲಿ ಕಾರವಾರ ರಿನ ಮೊದಲ ಹಂತದ ನಿರ್ಮಾಣವನ್ನು 1979ರ ಜೂನ್‌ನಲ್ಲಿ ಕೇಂದ್ರೀಯ ಅನುಮತಿಯ ನಂತರ ಕೈಗೊಂಡು 1980-81ರಲ್ಲಿ 155.45 ಲಕ್ಷರೂಗಳ ವೆಚ್ಚವನ್ನೂ ನಿಗದಿಪಡಿಸಲಾಗಿತ್ತು. ಪ್ರಾರಂಭಿಕ ಸರ್ವೇಕ್ಷಣ, 113 ಎಕರೆ ಖಾಸಗಿ ಭೂಮಿ ವಶ ಹಾಗೂ 113 ಎಕರೆ ಸರಕಾರಿ ಭೂಮಿಯ ಹಸ್ತಾಂತರ ನಡೆದು 355 ಮೀಟರಿನ ಜನರಲ್ ಕಾರ್ಗೋ ಹಡಗು ಕಟ್ಟೆ ನಿರ್ಮಾಣವನ್ನು ಕೈಗೊಳ್ಳಲಾಗಿತ್ತು. ಕರ್ನಾಟಕ ಸರಕಾರ ಹಡಗುಕಟ್ಟೆ ನಿರ್ಮಾಣಕ್ಕೆ ಟೆಂಡರುಗಳನ್ನೂ ಕರೆದು ಅವನ್ನು ತಜ್ಞರ ಸಮಿತಿಯಿಂದ ಪರಿಶೀಲಿಸಲು ಹಚ್ಚಿ, ಮೆ. ಏಶ್ಯನ್ ಫೌಂಡೇಶನ್‌ನವರ ಟೆಂಡರನ್ನು ಅಂಗೀಕರಿಸಿ ಅವರ ನಕ್ಷೆಯನ್ನು ಒಪ್ಪಿತ್ತು. ಆದರೆ ನಿರ್ಮಾಣದ ಆಜ್ಞೆ ಮತ್ತೆ ಅದೇ 'ಅಗೋಚರ ಕಾರಣ'ದಿಂದ ಹೊರಡಲಿಲ್ಲ.

ಹೂಳೆತ್ತುವದಕ್ಕೂ ಟೆಂಡರು ಕರೆಯಲಾಗಿತ್ತು. ಬಂದರು ಕಛೇರಿ ಹಾಗೂ ಸಿಬ್ಬಂದಿ ನಿವಾಸಗಳ ನಿರ್ಮಾಣಕ್ಕೂ ಭೂಮಿ ವಶಪಡಿಸಿಕೊಳ್ಳಲಾಗಿತ್ತು. ಬಂದರು ಪ್ರದೇಶದಲ್ಲಿಯೇ ಹಾಯುವ ರಾಷ್ಟ್ರೀಯ ಹೆದ್ದಾರಿ ನಂ. 17 ಇದನ್ನು ತಿರುವು ನಿರ್ಮಿಸಿ ಬಂದರು ಪ್ರದೇಶದ ಹೊರಗಡೆ ಪುನರ್ ನಿರ್ಮಿಸಲು ಕೋರಲಾಗಿತ್ತು.



ಗೋವೆಯ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಓಸಿಯೋನೊಗ್ರಾಫಿ ಸಂಸ್ಥೆಯ ಸಹಯೋಗದಿಂದ ಸಿಸ್ಮೋಗ್ರಾಫಿಕ್ ಸರ್ವೆ ಕೂಡ ನಡೆಸಲು ಯೋಚಿಸಲಾಗಿತ್ತು.

ಇದೆಲ್ಲಕ್ಕೂ ಮುಖ್ಯವಾಗಿ ನೌಕಾ ಪಡೆಯು ಕಾರವಾರ ಬಂದರಿನ ಸದುಪಯೋಗದ ಉದ್ದೇಶದೊಡನೆ ಇಲ್ಲಿ ನ್ಯಾವಿಗೇಶನಲ್ ಹೈಡ್ರೋಗ್ರಾಫಿಕ್ ಸರ್ವೆಯನ್ನೂ ನಡೆಸಿತ್ತು.

ಇವೆಲ್ಲವೂ ಪ್ರಾರಂಭದಲ್ಲಿ ಒಳ್ಳೆಯ ಲಕ್ಷಣ ಹಾಗೂ ಉದ್ದೇಶದಿಂದ, ಉತ್ಸಾಹದಿಂದ ನಡೆದಿದ್ದ ಅಭಿವೃದ್ಧಿ ಕಾರ್ಯಗಳು "ಬಾಲಗ್ರಹ" ಪೀಡಿತವಾಗಿ ಕಮರಿಹೋಗಿವೆ. ಕೇಂದ್ರ ಸರಕಾರ ಈ ಬಗ್ಗೆ ಗಮನ ನೀಡುವುದಾದರೆ ಹಾಗೂ, ಕೇಂದ್ರದ ಮೇಲೆ ರಾಜ್ಯಸರಕಾರ ಪ್ರಭಾವ ಬೀರಲು ಸಮರ್ಥವಾದರೆ. ಕರ್ನಾಟಕದ ಕನಸಿನ 'ಕಾರವಾರ ಬಂದರು' ಅಭಿವೃದ್ಧಿ [illegible] ಈ ಪಂಚವಾರ್ಷಿಕ ಯೋಜನೆಯಲ್ಲಾದರೂ ಸಾಧ್ಯವಾಗಬಹುದು.

ಕಾರವಾರ ಬಂದರು ಅಭಿವೃದ್ಧಿಯ ಬಗ್ಗೆ ಉತ್ತರ ಕರ್ನಾಟಕದ ವಾಣಿಜ್ಯೋದ್ಯಮ ಕ್ಷೇತ್ರದ ಅಗ್ರ ಪ್ರಾತಿನಿಧಿಕ ಸಂಸ್ಥೆಯಾದ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಹುಬ್ಬಳ್ಳಿ ಹಾಗೂ ಇತರ ಸಂಘ–ಸಂಸ್ಥೆಗಳೂ, ಸಾರ್ವಜನಿಕ ಸಂಸ್ಥೆಗಳೂ, ಸಾಮಾಜಿಕ ಕಾರ್ಯಕರ್ತರೂ, ಗಣ್ಯರೂ, ಕಳೆದ ಮೂವತ್ತೈದು ವರ್ಷಗಳಿಂದ ಪ್ರತಿಪಾದಿಸುತ್ತ. ಒತ್ತಾಯಪಡಿಸುತ್ತ ಬಂದಿದ್ದರೂ ಇದು ಘೋರ್ಗಲ್ಲಿನ ಮೇಲೆ ಮಳೆ ಕರೆದಂತಾಗಿದೆ, ಕಾರವಾರ ಬಂದರಿನ ಮಹತ್ವ ಹಾಗೂ ಅಗತ್ಯತೆಗಳ ಬಗ್ಗೆ ಈಗ ಮೇಲಿಂದ ಮೇಲೆ ಪ್ರತಿಪಾದಿಸುತ್ತಿರುವ ಶ್ರೀ ಎಸ್. ನಿಜಲಿಂಗಪ್ಪನವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ 1960ರಲ್ಲಿ ಜರ್ಮನಿಯ ಕೆಲವು ಬೃಹತ್ ಸಂಸ್ಥೆಗಳು ಈ ಬಂದರು ನಿರ್ಮಾಣದ ಬಗ್ಗೆ ಆತ್ಮಾಸಕ್ತಿ ತಳೆದು, ಸಲಹೆ–ನಕ್ಷೆಗಳನ್ನು ನೀಡಿದ್ದವು. ಆಗ ಸರಕಾರ ಸ್ವಲ್ಪವಾದರೂ ಅನುಕೂಲಕರ ಪ್ರತಿಕ್ರಿ
ತೋರಿದ್ದರೆ, ಈಗಿನಕ್ಕಿಂತಲೂ ಅದೆಷ್ಟೋ
ಪಟ್ಟು ಕಡಿಮೆ ವೆಚ್ಚದಲ್ಲಿ ಕಾರವಾ
ಬಂದರು ನಿರ್ಮಾಣವಾಗಿ ಈಗ
ವರ್ಷಗಳಾಗುತ್ತಿದ್ದವು.

ಆದರೆ ಇಂತಹ ಸೌಭಾಗ್ಯವನ್ನು ಕಾ
ವಾರ ಬಂದರಾಗಲಿ, ಕರ್ನಾಟಕವಾಗ
ಪಡೆದಿಲ್ಲವೆಂದು ಕಾಣುತ್ತದೆ. ಇನ್
ಮೇಲಾದರೂ ಕನ್ನಡಿಗರು ಸಂಘಟಿತರ
ತಮ್ಮ ಆರ್ಥಿಕ ಅಭಿವೃದ್ಧಿಯ ಈ ಮಹ
ದ್ವಾರ ನಿರ್ಮಾಣಕ್ಕೆ ಆಗ್ರಹಿಸಲು ಪಕ್ಷ
ಭೇದ ಮರೆತು ಮುಂದಾಗಬೇಕು. ಈಚೆ
ಕೇಂದ್ರದಲ್ಲಿ ಹಿರಿಯ ಅಧಿಕಾರದ ಸ್ಥಾನ
ದಲ್ಲಿರುವ ಕನ್ನಡಿಗರ ಪ್ರತಿನಿಧಿ ಸಚಿವರ
ಬ್ಬರು, ಸಂಸ್ಥೆಯೊಂದರ ಮನವಿಗೆ ಉತ್ತ
ಸುತ್ತ, ಕಾರವಾರ ಬಂದರದ ಅಭಿವೃದ್ಧಿ
ನೀವೆಲ್ಲ ಒತ್ತಾಯಪಡಿಸುತ್ತಿರುವ
ಸ್ವಾಭಾವಿಕವಾಗಿದೆ. ಇಲ್ಲಿ ನೌಕಾ ಪಡೆ
ವರು ನೌಕಾ ನೆಲೆಯನ್ನು ಸ್ಥಾಪಿಸ
ಕೆಂದಿದ್ದಾರೆಂದು ಕೇಳಿದ್ದೇನೆ. ಈ ನೌ

ಸಿಲೆ ಆದರೆ ಕಾರವಾರ ಬಂದರೂ ಆಗುತ್ತದೆ, ಹುಬ್ಬಳ್ಳಿ–ಕಾರವಾರ ರೈಲ್ವೆ ಮಾರ್ಗವೂ ತನ್ನಿಂದ ತಾನೇ ಆಗುತ್ತದೆ. ಯಾರೂ ಹೆಚ್ಚು ಒತ್ತಾಯಿಸಬೇಕಾಗಿಲ್ಲ. ಶ್ರಮ ವಹಿಸಬೇಕಾಗಿಲ್ಲ ಎಂದರು. ಇಂತಹ ಪ್ರವೃತ್ತಿಯಿಂದ ಯಾರದೋ ಕೆಲಸ ಎಂಬ ಮನೋಭಾವನೆಯಿಂದ ಕಾರವಾರ ಬಂದರಾಗಲಿ, ಹುಬ್ಬಳ್ಳಿ–ಕಾರವಾರ ರೈಲ್ವೆ ಮಾರ್ಗವಾಗಲಿ, ಆಗುವುದಿಲ್ಲ. 'ಇದು ನಿಮ್ಮ ಕೆಲಸ, ಆಗಲೇಬೇಕು' ಎಂಬ ಪ್ರವೃತ್ತಿ, ಛಲ ಬೆಳೆದರೆ ಮಾತ್ರ ಈ ಕನಸಿನ ಸಾಕಾರ ಆದೀತು.

ಹುಬ್ಬಳ್ಳಿ–ಕಾರವಾರ ರೈಲು

ಹುಬ್ಬಳ್ಳಿ–ಕಾರವಾರದ ಮಧ್ಯ ರೈಲು ಮಾರ್ಗ ನಿರ್ಮಾಣದ ಬೇಡಿಕೆಯೂ ಸಹ ಶತಮಾನದಷ್ಟು ಹಳೆಯದೇ ಆಗಿದೆ. ರಾಜ್ಯದ ಅದರಲ್ಲೂ ವಿಶೇಷತಃ ಸಾಗರಾಂತರ ವ್ಯಾಪಾರಕ್ಕೆ ಪ್ರೋತ್ಸಾಹವನ್ನೂ ಪರಂಪರಾನುಗತವಾಗಿ ಹಿಂದುಳಿದಿರುವ ಈ ಪ್ರದೇಶದ ಅಭಿವೃದ್ಧಿಗೆ ಚೈತನ್ಯವನ್ನೂ ನೀಡಬಹುದಾದ ಈ ರೈಲು ಮಾರ್ಗದ ಬಗ್ಗೆ ಕೇಂದ್ರವು ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಕೂಡ ಲಕ್ಷ್ಯ ಕೊಡಲಿಲ್ಲ. ಹೀರಳ್ಳಿ ದಾಸಪ್ಪ, ಸಿ. ಎಂ. ಪೂಣಚ್ಚ, ಕೆಂಗಲ್ ಹನುಮಂತಯ್ಯ, ಸಿ. ಕೆ. ಜಾಫರ್ ಷರೀಫ್ ರೈಲು ಶಾಖೆಯ ಮಂತ್ರಿಗಳಾದರು. ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲವೋ, ಪ್ರಯತ್ನವೇ ಪರಿಣಾಮಕಾರಿಯಾಗಿರಲಿಲ್ಲವೋ, ಎಂಬುದನ್ನು ಯಾರಿಂದಲೂ ಹೇಳಲುಬಾರದಂತಾಗಿದೆ.

ಕಾರವಾರ ಬಂದರು ಅಭಿವೃದ್ಧಿ ಹಾಗೂ ಹುಬ್ಬಳ್ಳಿ–ಕಾರವಾರ ರೈಲು ಮಾರ್ಗ ನಿರ್ಮಾಣದ ಅಗತ್ಯತೆಯ ಬಗ್ಗೆ ಬಹಳಷ್ಟು ಕಳಕಳಿ ವ್ಯಕ್ತಪಡಿಸಿದ ಕೆಲವು ಪ್ರಥಮರಲ್ಲಿ ಲಾರ್ಡ್ ಕನ್ನೆಮಾರ್, ಲೆಫ್ಟನೆಂಟ್ ಎ. ಡಿ. ಟೇಲರ್ ಹಾಗೂ ಜಾರ್ಜ್ ಲ್ಯಾಥಮ್ ಅಲ್ಲದೇ ಈಚಿನ ಶತಕದಲ್ಲಿ ರೊದ್ದ ಶ್ರೀನಿವಾಸರಾಯರು ಕೃಷ್ಣಕುಮಾರ ಕಲ್ಲೂರ ಮೊದಲಾದವರು ಮುಖ್ಯರು. 1860ರ ವೇಳೆಗೆ ಮದ್ರಾಸಿನ ಗವರ್ನರ್ ಆಗಿದ್ದ ಲಾರ್ಡ್ ಕನ್ನೆಮಾರ್, ತನ್ನ ಆಡಳಿತ ಕಕ್ಷೆಯಲ್ಲಿದ್ದ ಕಾರವಾರಕ್ಕೆ (ಆಗ ಇದನ್ನು ಬೈತಕೋಲ್ ಎಂದು ಗುರುತಿಸಲಾಗುತ್ತಿತ್ತು) ಬಂದು ಅದರ ನಿಸರ್ಗ ವರದಾನ ಹಾಗೂ ಸಮರ್ಥ ಬಂದರಿನ ಸಾಧ್ಯತೆಯನ್ನು ಮನಗಂಡು, ಇದನ್ನು ಬಂದರಾಗಿ ಅಭಿವೃದ್ಧಿಪಡಿಸಲು ಶಿಫಾರಸು ಮಾಡಿದ್ದರು. ಆರ್. ಐ.ಎನ್.ನ ತಂತ್ರಜ್ಞ ಎ. ಡಿ. ಟೇಲರ್ ಈ ಬಗ್ಗೆ ಸಮೀಕ್ಷೆ ನಡೆಸಲೂ ನಿಯೋಜಿತರಾದ ದಾಖಲೆಗಳಿವೆ. ಅದರಂತೆ, ಹಿನ್ನಾಡಿನ ಅಭಿವೃದ್ಧಿಯ ದೃಷ್ಟಿಯಿಂದ ಕಾರವಾರ–ಹುಬ್ಬಳ್ಳಿ ರೈಲ್ವೆ ಮಾರ್ಗ ನಿರ್ಮಾಣದ ಸರ್ವೇಕ್ಷಣ ನಡೆಸಲು ರೈಲು ಹಾಗೂ ಸಾಗರಯಾನ ಎಂಜಿನಿಯರ್ ಜಾರ್ಜ್ ಲ್ಯಾಥಮ್ ನಿಯೋಜಿತರಾಗಿದ್ದರು.

ಜಾರ್ಜ್ ಲ್ಯಾಥಮ್ ಈ ರೈಲು ಮಾರ್ಗದ ಮೊದಲ ಸರ್ವೇಕ್ಷಣಾ ತಂಡದ ನೇತೃತ್ವ ವಹಿಸಿ, ಭಾರೀ ದಟ್ಟಡವಿಯಲ್ಲಿ ಪರ್ಷಗಟ್ಟಲೇ ಸರ್ವೇಕ್ಷಣ ನಡೆಸಿ ವರದಿ ನೀಡಿದರು. 1861 ರಲ್ಲಿ ಈ ವರದಿ ಬಂದಿತು. 93 ಮೈಲು ಉದ್ದದ ಈ ರೈಲು ಮಾರ್ಗವನ್ನು ಬ್ರಾಡಗೇಜ್‌ನಲ್ಲಿ ನಿರ್ಮಿಸಲು ಸಲಹೆ ನೀಡಲಾಗಿತ್ತು. ಅಪೂರ್ವ ತಾಂತ್ರಿಕ ಪರಿಣತಿಯ ಈ ಯೋಜನಾ ವರದಿಯಲ್ಲಿ 50 ಅಡಿಯ ಘಾಟ್ ವಿಭಾಗವನ್ನು ಸಂಸ್ಕರಿಸುವದು, ಒಂದೇ ಒಂದು ಸುರಂಗಮಾರ್ಗದೊಡನೆ ಈ ನಿರ್ಮಾಣ ಕಾರ್ಯಕ್ಕೆ ಒಂದು ಕೋಟಿ ರೂ. ವೆಚ್ಚದ ಅಂದಾಜು ಮಾಡಲಾಗಿತ್ತು.

ಎರಡನೆಯ ಸರ್ವೇಕ್ಷಣವನ್ನು 1872 ರಲ್ಲಿ ನಡೆಸಲಾಯಿತು. 110 ಮೈಲು ನೇರದ ಈ ಬ್ರಾಡಗೇಜ್ ದಾರಿಯಲ್ಲಿ 9 ಸುರಂಗಮಾರ್ಗಗಳು ನಮೂದಿತವಾಗಿದ್ದವಲ್ಲದೇ, ವೆಚ್ಚದ ಅಂದಾಜು 1 ಕೋಟಿ ರೂ.ಗಿಂತ ಸ್ವಲ್ಪ ಹೆಚ್ಚಾಗಿತ್ತು. 1962 ರಲ್ಲಿ ಮತ್ತೂ ಒಮ್ಮೆ ಸರ್ವೆ ನಡೆಸಲಾಯಿತು. ಸಾರಿಗೆ ಸಂಚಾರದ ದಟ್ಟಣೆಯ ಅಂದಾಜನ್ನೂ ರೇಲ್ವೆ ಮಂಡಳಿಯ ಆದೇಶದಂತೆ, ದಕ್ಷಿಣ ರೇಲ್ವೆ ನಡೆಸಿತು. ಮತ್ತೂ ಒಮ್ಮೆ 1971–72 ರಲ್ಲಿ ರೇಲ್ವೆ ಮಂಡಳಿಯ ಸೂಚನೆಯಂತೆ ದಕ್ಷಿಣ–ಮಧ್ಯ ರೇಲ್ವೆಯು ಸರ್ವೇಕ್ಷಣ ಹಾಗೂ ಸಾರಿಗೆ–ಸಂಚಾರದ ಅಂದಾಜು ಮಾಡಿತು.



"ಅಷ್ಟು ದಿನಸಿ ಸಾಮಾನಿನ ಪಟ್ಟಿ, ಅದನ್ನು ಕೃತಿ ಚೌರ್ಯ ಮಾಡುತ್ತಿದ್ದೀಯಲ್ಲಾ! ಬೇರೆ ಯಾವುದೂ ಸಿಗಲಿಲ್ಲವೇ...?"

ಈ ವರದಿಯಲ್ಲಿ ಹುಬ್ಬಳ್ಳಿಯಿಂದ ಕಾರವಾರದವರೆಗೆ 12 ರೈಲು ನಿಲ್ದಾಣಗಳ ಸಹಿತ ಮಾರ್ಗದ ರಚನೆಯ ಸಲಹೆ ಇತ್ತು. ಕಲಘಟಗಿ, ಯಲ್ಲಾಪೂರ, ಸುಣಕದಾಳ, ಅಂಕೋಲಾ ರೋಡ್ ನಿಲ್ದಾಣಗಳ ಮೂಲಕ 191 ಕಿ. ಮೀ. ಉದ್ದದ ಮಾರ್ಗ ರಚನೆಯನ್ನು ಸೂಚಿಸಲಾಗಿತ್ತು. ಇದರಲ್ಲಿ 75–76 ಕಿ. ಮೀ. ಗಳಷ್ಟು ಹುಬ್ಬಳ್ಳಿಯಿಂದ ಯಲ್ಲಾಪೂರದವರೆಗೆ ಸಮತಟ್ಟು ಪ್ರದೇಶ, ಯಲ್ಲಾಪೂರದಿಂದ ಸುಣಕದಾಳ್‌ವರೆಗಿನ 55.96 ಕಿ. ಮೀ. ಗುಡ್ಡ ಪ್ರದೇಶ ಹಾಗೂ ಸುಣಕ್‌ದಾಳದಿಂದ ಕಾರವಾರದವರೆಗೆ ಸಾಗರತೀರದೊಡನೆ 59.56 ಕಿ. ಮೀ. ಮಾರ್ಗ ನಿರ್ಮಾಣದ ಘಟ್ಟಗಳನ್ನು ಸೂಚಿಸಲಾಗಿತ್ತಲ್ಲದೇ 7 ವರ್ಷಗಳಲ್ಲಿ ನಿರ್ಮಿಸಬಹುದಾದ ಈ ಯೋಜನೆಗೆ 57.3 ಕೋಟಿ ರೂ. ವೆಚ್ಚದ ಅಂದಾಜು ಮಾಡಲಾಗಿತ್ತು. 1973 ರಲ್ಲಿ ದ. ಮ. ರೇಲ್ವೆಯು ಮೀಟರ್‌ಗೇಜನಲ್ಲಿ ಇದನ್ನು ನಿರ್ಮಿಸುವ ಸಲಹೆಯನ್ನು ನೀಡಿತು. 120 ಮೈಲಿಯ ಈ ದಾರಿಯಲ್ಲಿ 21 ಸುರಂಗ ಮಾರ್ಗಗಳನ್ನು ಮಾಡಬೇಕಾದ ಅಗತ್ಯವಿದ್ದಿತಲ್ಲದೇ, ಜಾರ್ಜ್ ಲ್ಯಾಥಮ್

[illegible] ಮಾರ್ಗ ಅನುಸರಿಸಿದರೆ [illegible] ಕೋ. ರೂ. ವೆಚ್ಚ ಕಡಿಮೆ ಬರಬಹುದೆಂದೂ ಸಹ ಸಲಹೆ ನೀಡಿತು.

ಈ ಸರ್ವೇಕ್ಷಣೆಯ ಮುಖ್ಯಾಧಿಕಾರಿ [illegible]. ರೆಡ್ಡಿ ಹಾಗೂ ದ. ಮ. ರೇಲ್ವೆ [illegible]ಕಾರಿ ವಿ. ರಾಜಗೋಪಾಲ್ ತಮ್ಮ ವರದಿಯಲ್ಲಿ ಈ ಮಾರ್ಗ ಆರ್ಥಿಕವಾಗಿ ಲಾಭದಾಯಕವಾಗುವದಿಲ್ಲವೆಂದೂ, [illegible]ಯುಳಿದ ಈ ಪ್ರದೇಶದ ಅಭಿವೃದ್ಧಿಯ ಬಗ್ಗೆ ಕಳಕಳಿ ಇದ್ದುದಾದರೆ ಇದನ್ನು [illegible]ಗೆತ್ತಿಕೊಳ್ಳಬಹುದೆಂದೂ ಸೂಚಿಸಿದರು. ಇದನ್ನೂ ಸಹ ರೇಲ್ವೆ ಮಂಡಳಿ ಹಾಗೂ [illegible]ಲ್ವೆ ಇಲಾಖೆ ಕಟ್ಟಿ ತೆಗೆದಿಟ್ಟಿತು.

1976 ರಲ್ಲಿ ರೇಲ್ವೆ ಮಂಡಳಿಯು ಹುಬ್ಬಳ್ಳಿ-ಕಾರವಾರ ರೈಲುಮಾರ್ಗ ನಿರ್ಮಾಣದ ಬಗ್ಗೆ ಹೊಸದಾಗಿ ಸರ್ವೇಕ್ಷಣ ನಡೆಸುವಂತೆ ಆದೇಶಿಸಿತು. ದ. ಮ. ರೇಲ್ವೆಯವರು 1978 ರಲ್ಲಿ ತಮ್ಮ ವರದಿಯನ್ನು ಸಲ್ಲಿಸಿದರು. 57.3 ಕೋಟಿ ರೂ. ವೆಚ್ಚ ಬರಬಹುದೆಂದೂ ಡಿ. ಸಿ. ಎಫ್. [illegible]ಧಾನ ಅನುಸರಿಸಿದರೆ, ರೈಲು ಮಾರ್ಗ ನಿರ್ಮಾಣಕ್ಕೆ ಅಗತ್ಯವಾದ ಭೂಮಿಯ ವೆಚ್ಚ ಸೇರಿ ಪ್ರತಿಫಲ ರೇ. 4.6 ರಷ್ಟು ಭೂಮಿ ವೆಚ್ಚ ಹೊರತುಪಡಿಸಿ ಪ್ರತಿಫಲ ರೇ. 4 8 ರಷ್ಟು, ಹಾಗೂ ಭೂಮಿ ಬೆಲೆ ಹಾಗೂ ಕಟ್ಟಿಗೆ ಸ್ಲೀಪರ್ ವೆಚ್ಚ ಬಿಟ್ಟು ಪ್ರತಿಫಲ ರೇ. 4.9ರಷ್ಟು ಬರಬಹುದೆಂದು ಸೂಚಿಸಲಾಗಿತ್ತು.

ಆದರೆ ಪಶ್ಚಿಮ ತೀರದೊಂದಿಗೆ ರೈಲು ಮಾರ್ಗ ನಿರ್ಮಾಣದ ಯೋಜನೆಯನ್ನು ಕೈಗೆತ್ತಿಕೊಂಡದ್ದೇ ಆದರೆ, ಹುಬ್ಬಳ್ಳಿ-ಕಾರವಾರ ಮಾರ್ಗದಲ್ಲಿ 27.6 ಕಿ. ಮೀ. ಮಾರ್ಗ ನಿರ್ಮಾಣ ಪ್ರತ್ಯೇಕವಾಗಿ ಅಗತ್ಯವಿಲ್ಲವೆಂದೂ, ಅಂಕೋಲಾ ರೋಡ್‌ನಿಂದ ಕಾರವಾರದ ವರೆಗೆ ಪಶ್ಚಿಮ ತೀರದ ರೈಲು ಮಾರ್ಗ ಬರುವದೆಂದೂ, ಅಷ್ಟರ ಮಟ್ಟಿಗೆ [illegible] ಕಡಿಮೆಯಾಗಬಹುದೆಂದೂ ಸಲಹೆ [illegible]ಲಾಗಿತ್ತು.

ಇಷ್ಟು ದೀರ್ಘ ಇತಿಹಾಸವಿರುವ ಹುಬ್ಬಳ್ಳಿ-ಕಾರವಾರ ರೈಲುಮಾರ್ಗ ನಿರ್ಮಾಣದ ಬಗ್ಗೆ ಕೇಂದ್ರದ ಅಥವಾ ರೈಲ್ವೆ ಮಂಡಳಿಯ, ಯೋಜನಾ ಘಟಕದ ಕಣ್ಣು ಬಿದ್ದಿಲ್ಲ. ಬಂದರು ನಿರ್ಮಾಣದ ಹಿನ್ನೆಲೆಯಲ್ಲಿ ಇದನ್ನು ಗಮನಿಸಲಾಗುತ್ತಿದೆಯೇ ಎಂಬುದು ಖಚಿತವಾಗಿಲ್ಲವಾದರೂ, ಅದೂ ಆಗಲಿಲ್ಲ, ಇದೂ ಆಗಲಿಲ್ಲ ಎನ್ನುವ ಪರಿಸ್ಥಿತಿ ಈಗಂತೂ ಇದೆ.

ಭವಿಷ್ಯದ ಅಗತ್ಯಗಳನ್ನು ಗಮನಿಸಿದರೆ 1861ರಷ್ಟು ಹಿಂದೆಯೇ ಜಾರ್ಜ್ ಲ್ಯಾಥಮ್ ಸಲಹೆ ನೀಡಿದಂತೆ 91 ಮೈಲಿಗಳ ಬ್ರಾಡ್‌ಗೇಜ್ ಮಾರ್ಗ ನಿರ್ಮಾಣವನ್ನು ಕೈಗೆತ್ತಿಕೊಳ್ಳುವದು ಸಮರ್ಪಕ. ಈಗ ಮೀಟರ್‌ಗೇಜ್ ನಿರ್ಮಿಸಿದರೆ ಮುಂದೆ ಬ್ರಾಡ್‌ಗೇಜಗೆ ಪರಿವರ್ತಿಸಲು ಅನವಶ್ಯಕ ವೆಚ್ಚ ಬರುತ್ತದೆ. ಪ್ರತಿಫಲ ಎಷ್ಟು ಬರುತ್ತದೆ, ಲಾಭವಾದೀತೇ ಇಲ್ಲವೇ? ಎಂಬ ವ್ಯಾಪಾರಿ ದೃಷ್ಟಿಯನ್ನು ಸರಕಾರವು ಅಭಿವೃದ್ಧಿ ಕಾರ್ಯಗಳ ಬಗ್ಗೆ ತಳೆಯುವದು ಅಪಾಯಕಾರಿಯಾಗಿದೆ. ಹಾಗೆ ನೋಡಿದರೆ, ಈಗ ಕೈಗೊಂಡ ಅಭಿವೃದ್ಧಿ ಕಾರ್ಯಗಳೆಲ್ಲವೂ ಲಾಭದಾಯಕವೇನೂ ಅಲ್ಲ. ಅನೇಕ ಜಲವಿದ್ಯುತ್, ಶಾಖೋತ್ಪನ್ನ ವಿದ್ಯುತ್ ಯೋಜನೆಗಳು ಸರಕಾರಿ ಸ್ವಾಮ್ಯದ ಕೈಗಾರಿಕೆಗಳು ಲಾಭದಲ್ಲೇನೂ ಇಲ್ಲ. ಕಲ್ಯಾಣ ರಾಜ್ಯ ನಿರ್ಮಿಸುವ ನೈತಿಕ ಹೊಣೆ ಇರುವ ಸರಕಾರ ವ್ಯಾಪಾರಿ ದೃಷ್ಟಿಕೋನವನ್ನು ಅಭಿವೃದ್ಧಿ ವಿಷಯದಲ್ಲಿ ಅನುಸರಿಸಬಾರದು.

ಉದ್ದೇಶಿತ ರೈಲು ಮಾರ್ಗವನ್ನು ಬ್ರಾಡ್‌ಗೇಜನಲ್ಲಿ, ಜಾರ್ಜ್ ಲ್ಯಾಥಮ್ ಸೂಚಿಸಿದಂತೆ, ಸ್ವಲ್ಪ ಮಾರ್ಪಾಡಿನೊಡನೆ, ಹುಬ್ಬಳ್ಳಿ-ನವಲೂರು, ಹುಬ್ಬಳ್ಳಿ-ಧಾರವಾಡ ಉದ್ದಿಮೆ ನಗರ, ಕಲಘಟಗಿ, ಯಲ್ಲಾಪೂರ, ಸುಣಕದಾಳ್, ಅಂಕೋಲಾ ರೋಡ್ ಮೂಲಕ ನಿರ್ಮಿಸಿದರೆ, ಹೆಚ್ಚೆಂದರೆ 3 ಸುರಂಗ ಮಾರ್ಗಗಳು ಬರಬಹುದು. ಇದರಿಂದ ಪಶ್ಚಿಮ ತೀರ ರೈಲ್ವೆ ಮಾರ್ಗದ ಮೂಲಕ ಹುಬ್ಬಳ್ಳಿ ಹಾಗೂ ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಯ ಪ್ರವಾಸಿಕರಿಗೆ, ಸರಕು-ಸಾಗಾಣಿಕೆಗೆ ಅನುಕೂಲವಾಗುವದಲ್ಲದೇ ವಿಶೇಷತಃ ಹಿಂದುಳಿದಿರುವ ಈ ಪ್ರದೇಶದ ಅಭಿವೃದ್ಧಿಗೆ ಹೊಸ ಅವಕಾಶ ಕಲ್ಪಿಸಿದಂತಾಗುತ್ತದೆ.

ಕರ್ನಾಟಕ ವಾಣಿಜ್ಯೋದ್ಯಮ



"[illegible] ಕಾರವಾರ [illegible] ಬಂತು. ನಿಮ್ಮ ಭವಿಷ್ಯವನ್ನು ಒಮ್ಮೆ ನಾನು ನೋಡ್ತೀನಿ..."

ಸಂಸ್ಥೆಯು ಕಳೆದ 40 ವರ್ಷಗಳಿಂದ ಕಾರವಾರ ಸರ್ವಋತು ಬಂದರು ಹಾಗೂ ಹುಬ್ಬಳ್ಳಿ ಕಾರವಾರ ರೈಲುಮಾರ್ಗ ನಿರ್ಮಾಣದ ಬಗ್ಗೆ ನಿರಂತರವಾಗಿ ವಿವಿಧ ಮಟ್ಟದಲ್ಲಿ ಒತ್ತಾಯಪಡಿಸುತ್ತ ಬಂದಿದೆ. ಪ್ರಧಾನಮಂತ್ರಿ, ರಾಜ್ಯಪಾಲರಿಂದ ಹಿಡಿದು, ರೈಲ್ವೆ ಮಂತ್ರಿಗಳು ಹಾಗೂ ರೈಲ್ವೆ ಮಂಡಳಿಗೆ ಎಡಬಿಡದೇ ಮನವಿಗಳನ್ನು ಅರ್ಪಿಸುತ್ತ ಬಂದಿದೆ. ಕರ್ನಾಟಕದ ಸಮಗ್ರ ಜನತೆಯು ಈ ಪ್ರಮುಖ ಬೇಡಿಕೆಯನ್ನು ಶತಮಾನದಿಂದಲೂ ಕಡೆಗಣಿಸುತ್ತ ಬರಲಾಗಿದೆ. ಇನ್ನು ಮೇಲಾದರೂ ಈ ಬಗ್ಗೆ ಕೇಂದ್ರ ಹಾಗೂ ರೇಲ್ವೆ ಮಂಡಳಿ ಗಮನ ನೀಡಬೇಕು.

ರೇಲ್ವೆ ಮಂಡಳಿ ಹಾಗೂ ರೇಲ್ವೆ ಖಾತೆ ಮನಸ್ಸು ಮಾಡಿದರೆ ರೈಲುಮಾರ್ಗವಾಗುತ್ತದೆ, ಇಲ್ಲವಾದರೆ ಬರೀ ಸರ್ವೆ ಆಗುತ್ತದೆ. (If Railways mind, there will be railway; Otherwise there will be Only Surveys) ಎಂಬ ಆಂಗ್ಲ ನಾಡಿಕೆಯ ಮಾತು ಹುಬ್ಬಳ್ಳಿ-ಕಾರವಾರ ರೈಲ್ವೆ ಮಾರ್ಗದ ಮಟ್ಟಿಗಾದರೂ ಅನ್ವಯವಾಗದೇ ಇದು ಆದಷ್ಟು ಬೇಗ ನಿರ್ಮಾಣವಾಗಬೇಕೆಂದು ಕರ್ನಾಟಕದ ಜನತೆ ಒತ್ತಾಯಪಡಿಸುತ್ತಿದೆ, ನಿರೀಕ್ಷಿಸುತ್ತಿದೆ.

ಅವ್ವ



ಶ್ರೀಮತಿ ಗೀತಾನಾಗಭೂಷಣ

ಜೋಗಿಸಿದ್ದ ಮಗುವನ್ನು ಕಂಕುಳಲ್ಲಿಟ್ಟು ಕೊಂಡೇ ಅವಳು ನೂಕುನುಗ್ಗಲಿನ ಬಸ್‌ನಲ್ಲಿ ನಿಂತುಕೊಂಡೇ ಪ್ರಯಾಣ ಮುಗಿಸಿದಳು. ಬಸ್ ಕಲಬುರ್ಗಿಯ ಸರ್ಕಾರಿ ದವಾಖಾನೆಯ ಮುಂದಿನ ಬಸ್ ಸ್ಟಾಪ್‌ನಲ್ಲಿ ನಿಂತಾಗ ಆ ಕಿಕ್ಕಿರಿದ ಜನ ಸಂದಣಿಯಲ್ಲಿ ಹೇಗೋ ದಾರಿಮಾಡಿ ಕೊಂಡು ಕೆಳಗಿಳಿದಳು. ಬಸ್ ಸರಿದು ಹೋಯಿತು. ಅವಳು ನಿಂತೇ ಇದ್ದಳು. ಬೆಳಗಿನ ಒಂಬತ್ತು ಗಂಟೆಯ ಬಿಸಿಲು ಮೈಯಿಗೆ ಹಿತವಾಗುವಂತಿತ್ತು. ಸೆರಗು ಸರಿಸಿ ಮಗುವಿನ ಮುಖ ನೋಡಿದಳು. ನಿದ್ದೆಯೋ, ಸುಸ್ತೋ, ಮಂಪರೋ, ಒಂದೂ ತಿಳಿಯದಂತೆ ನಿಶ್ಚಲವಾಗಿ ಕಣ್ಣು ಮುಚ್ಚಿಕೊಂಡು ಮಲಗಿದ್ದ ಹಸುಳೆ ಅವಳೆದೆಯ ಕಳವಳಕ್ಕೆ ಕಾವು ಕೊಟ್ಟಿತು. ಅದರ ಮೂಗಿನ ಬಳಿ ಬೆರಳಿಟ್ಟು ಪರೀಕ್ಷಿಸಿದಳು. ಅದರ ಕ್ಷೀಣ ಉಸಿರಾಟದ ಬಿಸಿ ಅವಳೆದೆಯಲ್ಲಿ ಕ್ಷಣಿಕ ಸಾಂತ್ವನ ತುಂಬಿತು. ಮತ್ತೆ ತನ್ನ ಸೆರಗನ್ನು ಮಗುವಿನ ಮುಖದ ಮೇಲೆ ಹೊದಿಸಿ ಅವಳು ದವಾಖಾನೆಯ ದೊಡ್ಡ ಗೇಟಿನೆಡೆಗೆ ತ್ವರಿತ ಹೆಜ್ಜೆಗಳನ್ನು ಎತ್ತಿಟ್ಟಳು.

ಮಗು ಇನ್ನೇನು ಸತ್ತೇ ಹೋಗುತ್ತದೆ ಎಂದು ಗಾಬರಿಯಾದವಳು ದೊಡ್ಡ ದನಿ ತೆಗೆದು ಅಳುತ್ತ, ಸಿಕ್ಕ ಸಿಕ್ಕ ಬಿಳಿಯುಡುಗೆಯ ಗಂಡು ಹೆಣ್ಣುಗಳ ಕಾಲುಗಳ ಹಿಡಿಯುತ್ತ ಗೋಗರೆಯತೊಡಗಿದ ಅವಳ ಮಗುವನ್ನು ದವಾಖಾನೆಯ ಸೇರಿಸಿಕೊಳ್ಳಲಾಯಿತು. ಮಗು ಮುಚ್ಚಿದ ಕಣ್ಣೆವೆ ತೆರೆದ ಡಾಕ್ಟ ಕಣ್ಣುಗಳು ಸಂಕುಚಿಸಿದುವು. ನಸು ದಿಗೆ ಮರುಗಿದ್ದ ಹಸುಳೆಯ ಕಣ್ಣುಗ ವೈದ್ಯನ ಸ್ಟೆತೋ ಮಗುವಿನ ಬರೀ ಚ ಹೊದಿಸಿದಂತಿದ್ದ ಎಲುಬಿನ ಗೂ ಎದೆಯ ಮೇಲಾಡಿತು ಅವನು ಯಲ್ಲಿ ಔಷಧಿ. ಇಂಜಕ್ಷನ್ ಬರೆದು ಳಿಗೆ ಕೊಟ್ಟು ನುಡಿದ.

"ಅದನ್ನು ಜಲ್ದಿ ಈ ಔಷಧಿ, ಇಂ

ದುರ್ಬಲರನ್ನು ಕುಕ್ಕಿತಿನ್ನುವ ರಣಹದ್ದುಗಳು ಹತ್ತು; ಅವುಗಳ ಬಗೆಯೂ ಹತ್ತು. ಹಳ್ಳಿಯೂ ಒಂದೇ ನಗರವೂ ಒಂದೇ. ಗಂಗಾ ಒಂದು ಅಮೂಲ್ಯ ವಸ್ತುವನ್ನು ಉಳಿಸಿಕೊಳ್ಳಲು ಇನ್ನೊಂದನ್ನು ಬಲಿಕೊಟ್ಟಳು. ಮಾನವತೆ ಇಲ್ಲದ ಪರಿಸರಕ್ಕೆ ಬಲಿಯಾದಳು. ಸಮಾಜದ ಶೋಷಣೆಗೆ ಗಂಗಾ ಜೀವಂತ ಸಾಕ್ಷಿ.

ತಗೊಂಡು ಬಾ...ನಿನ್ ಮಗುವಿಗೆ ಬೇಕು."

ಅವಳು ಕಕ್ಕಾಬಿಕ್ಕಿಯಾದಳು.

"ಯಪ್ಪಾ....ಹಾಗಾದರ ಸಾಬ್ರೆ....ಇದು ಸರ್ಕಾರಿ ದವಾಖಾನಿ ಅದಾ ಅಲ್ರೀ... ಬಡೂರಿಗೆಲ್ಲ ಪುಗಸಟ್ಟೆ ಆಗಸುದ್ಯಾ ಕುಡ್ತಾರಂತಲ್ರೀ....ನನ್ ಬಳ್ಳಿ ರೊಕ್ಕಾ ರುಪ್ಕೆ ಏನೂ ಇಲ್ರಿಯಪ್ಪಾ...."

ಡಾಕ್ಟರನ ಕಿವಿಗಳಿಗೆ ಅವಳ ಮಾತು ಬೀಳಲೇ ಇಲ್ಲ ಎಂಬಂತೆ ಅವನು ಮುಂದೆ ನಡೆದು ಹೋದ. ಅವಳು ಗರಬಡಿದವಳಂತೆ ನಿಂತುಬಿಟ್ಟಳು.

"ನಿನ್ ಹೆಸರೇನವ್ವಾ ತಂಗೀ....ಇದು ಸರ್ಕಾರಿ ದವಾಖಾನಿ ಖರೇ. ಇಲ್ಲಿ ಬಿಟ್ಟಿ ಆಗಸುದ್ಯಾ, ಇಂಜಕ್ಷನ ಎಲ್ಲಾ ಸಿಗ್ತಾವವ್ವಾ.... ಆದರ ಅದೆಲ್ಲಾ ಸಿಗೋದು ರೊಕ್ಕಾ ರುಪ್ಕೆ ಇದ್ದವರಿಗೇ. ಬಡವರಿಗೆ ಏನೇನೂ ಸಿಗಂಗಿಲ್ಲ...."

ಡಾಕ್ಟರ್, ನರ್ಸುಗಳ ಗುಂಪು ದೂರ ಸರಿದಾಗ ಪಕ್ಕದ ಮಂಚದ ಬಳಿಯ ವೃದ್ಧನೊಬ್ಬ ಹೇಳಿದ. ಅವಳು ಅವನೆಡೆಗೆ ಶೂನ್ಯ ನೋಟ ಚೆಲ್ಲಿದಳು.

"ಯಪ್ಪಾ.... ನನ್ ಹೆಸರ ಗಂಗಾ ಅದಾರಿ. ಇಲ್ಲಿಗೆ ಮೂರ ಹರದಾರಿ ದೂರದ ಚೆಂದ್ರಳ್ಳಿಲಿಂದ ಬಂದೀನ್ರೀ.... ನನ್ ಮಗನಿಗಿ ಕಾಮಣಿ ಆಗ್ಯಾದ್ರೀ...."

"ಗಂಡಸರು ಯಾರೂ ಇಲ್ಲೇನವ್ವ ಸಂಗಾಟ ?"

"ಇರಲಾರ್‍ದ ಗಂಡಸರಿಗೆ ಎಲ್ಲಿಂದತರ್ಲೀ ನನ್ನಪ್ಪಾ.... ಗೌಡ ಕುಕ್ಕಣ್ಣೋರ ಖೂನ್ ಖತಲಾ ಖಟ್ಲ್ಯಾತಾಗ ನನ್ ಗಂಡಗ ಸೇರ್‍ಸಿ ಜೇಲ ನ್ಯಾಗ ಹಾಕ್ಯಾರ...."

"ಶಿವ ಶಿವಾ.... ನೋಡು ತಂಗೀ.... ಪ್ಯಾಂಗಡಿ ಮಾಡಿ ಆ ಚೀಟಿದಾಗ ಬರ್‍ದ ಆಗಸುದ್ಯಾ ತಂದು ಕುಡು, ನಿನ್ ಮಗಗ ಜಲ್ದಿ ಆರಾಮ್ ಆಗ್ತದ. ಈ ವಾರ್ಡನ್ಯಾಗ ಭಾಳ ಪೋರ ಗೋಳಿಗೆ ಕಾಮಣಿ ಆಗೇದ. ನಿನ್ನೆ ಒಂದು ಪೋರಿ ಸತ್ತು ಹೋಯ್ತು. ಮನ್ನೆ ಒಂದು ಇದೇ ಹಾಸಿಗಿ ಮ್ಯಾಲ ಇದೇ ಬ್ಯಾನಿಲಿಂದ ಕಣ್ಣು ಮುಚ್ತು. ನೀ ಜಲ್ದಿ ಆಗಸುದ್ಯಾ ತಗೊಂಡು ಬಾ...."

ಗಂಗಾ ಧಡಕ್ಕನೆ ಎದ್ದು ನಿಂತಳು.

ಸುಮಾರು ತಿಂಗಳೊಂದರಿಂದ ನಗರದಲ್ಲಿ, ಅದರ ಸುತ್ತಮುತ್ತಲಿನ ತಾಲ್ಲೂಕು, ಹಳ್ಳಿಗಳಲ್ಲಿಯೂ 'ಕಾಮಾಲೆ' ರೋಗ ತೀವ್ರಗತಿಯಲ್ಲಿ ವ್ಯಾಪಿಸಿಕೊಳ್ಳುತ್ತ ಜನರ ಉಸಿರನ್ನು ಕಸಿದುಕೊಳ್ಳತೊಡಗಿತ್ತು.

"ನಗರದಲ್ಲಿ ಕಾಮಾಲೆ ಬೇನೆ ಕಂಡು ಬಂದಿದೆ. ನೀರನ್ನು ಕಾಯಿಸಿ ಸೋಸಿ ಕುಡಿಯಬೇಕು. ಕೊಳೆತ ಹಣ್ಣುಗಳನ್ನು, ಕರಿದ ತಿಂಡಿಗಳನ್ನು ತಿನ್ನಬಾರದು.

ಎಂದು ಹೆಲ್ತ ಸೆಂಟರಿನವರು ಮೈಕ್‌ನಲ್ಲಿ ಒದರಿಕೊಳ್ಳುತ್ತಿರುವುದನ್ನು ಕೇಳುತ್ತಲೇ, ರಸ್ತೆ ಬದಿಯ ಗಾಡಿಗಳಲ್ಲಿ ಮಾರುವ ಅರೆ ಕೊಳೆತ ಹಣ್ಣುಗಳನ್ನು ಕೊಂಡು ತಿನ್ನುವ ಜನರ ಸಂಖ್ಯೆ ಕಡಿಮೆಯಾಗಿರಲಿಲ್ಲ. ಕರಿದ ಬಿಸಿ ಬಿಸಿ ಮಿರಚಿ ಭಜಿ. ಆಲೂಬೊಂಡಾದ ಮಾರುವವರ ಮೇಲೆ ಇದ್ಯಾವುದರ ಪರಿಣಾಮ ಆಗಿರಲಿಲ್ಲ. ಆಗುವುದು ಸಾಧ್ಯವೂ ಇರಲಿಲ್ಲ. ಮಿಲ್ ಕಾರ್ಮಿಕರು, ರಿಕ್ಷಾವಾಲಾಗಳು, ಕೂಲಿಗಳು, ಹಮಾಲರೆಲ್ಲ. ದಿನದ ಒಂದು ಊಟವನ್ನು ಒಂದು ರೂಪಾಯಿ ಭಜಿಯಿಂದಲೇ ನಿವಾರಿಸುವವರು ಕಾಮಾಲೆಗೆ ಹೆದರುವುದು ಸಾಧ್ಯವಿರಲಿಲ್ಲ. ಐದು ರೂಪಾಯಿಗೆ ಒಂದು ಕೇ. ಜಿ. ಬೇಳೆ ದೊರೆಯುವ ಈ ದಿನಗಳಲ್ಲಿ ಮನೆಯಿಂದ ಬರೀ ರೊಟ್ಟಿ ಕಟ್ಟಿಕೊಂಡು ಬಂದ ಕೂಲಿ ಹೆಂಗಸರು ಎಂಟಾಣೆಯ ಭಜಿಯೊಂದಿಗೆಯೇ ಊಟ ಮುಗಿಸುವುದನ್ನು ಬಿಡಲು ಆಗಲಿಲ್ಲ. ಹಸಿವಿನ ಮುಂದೆ ಕಾಮಾಲೆ ಎಷ್ಟರದು ?

ಗುಲ್ಬರ್ಗಾ ನಗರಕ್ಕೆ ಈಗೀಗ ಹಿಗ್ಗುವ, ಅಗಲವಾಗುವ, ಉದ್ದುದ್ದ ಕೈಕಾಲು ಚಾಚುತ್ತ ಸುತ್ತಲೂ ಹಬ್ಬಿಕೊಳ್ಳುವ ವಿಚಿತ್ರ ಹುಮ್ಮಸ್ಸು. ಎಷ್ಟು ಬೆಳೆದರೂ ಸಾಲದು ಎನ್ನುವ ಹಪಾಹಪಿತನ ಇದಕ್ಕೆ. ಶಾಲೆ ಕಾಲೇಜುಗಳು, ವಿಶ್ವವಿದ್ಯಾಲಯ, ಅದೂ ಇದೂ ಮಣ್ಣುಮಸಿ ಅಂತ ಸುತ್ತಮುತ್ತಲಿಂದ ಹಿಂಡು ಹಿಂಡು ಜನ ಬಂದು ಮುತ್ತುತ್ತಲೇ ಇರುತ್ತಾರೆ. ನಗರ ಬೆಳೆಯುತ್ತಿದೆ. ಅದರೊಂದಿಗೆ ಎಲ್ಲ ಕೆಡಕುಗಳೂ ಸಹ. ಸುಳ್ಳು, ಮೋಸ, ವಂಚನೆ, ಕಳವು, ವ್ಯಭಿಚಾರ ಎಲ್ಲಕ್ಕೂ ಬೆಳೆಯುವ-ಜನಸಂಖ್ಯೆಯ ವೇಗದೊಂದಿಗೆಯೇ ಬೆಳೆಯುವ ತುರಿಕೆ.

ಈ ಜಿಲ್ಲೆಗೆ ಪ್ರತಿವರ್ಷವೂ ತಪ್ಪದ ಬರ. ಬರಕ್ಕೂ ಇದಕ್ಕೂ ಗಟ್ಟಿಯಾದ ನಂಟು ಬೆಳೆದುಬಿಟ್ಟದೆ. ವರ್ಷಕ್ಕೊಮ್ಮೆ ಬೀಳುವ ಬರ. ನೀರಿನ ಕೊರತೆ, ರೋಗ ರುಜಿನಗಳು. ಒಮ್ಮೆ ಕಾಲರಾ ಆದರೆ ಇನ್ನೊಮ್ಮೆ ಕಾಮಾಲೆ. ಇಷ್ಟೆಲ್ಲ ಸಾಲದೆಂಬಂತೆ ಈಗೀಗ ಅಲ್ಲಲ್ಲಿ ಚಾಲೂ ಆಗಿರುವ ಚಾಕು ಚೂರಿಗಳ ಚೆಲ್ಲಾಟ ಬೇರೆ.

ನಿದ್ದೆಯಲ್ಲಿದ್ದ ಮಗುವನ್ನು ಪಕ್ಕದ ಮಂಚದ ಮುದುಕಪ್ಪನಿಗೆ ಒಪ್ಪಿಸಿ ಗಂಗಾ ದವಾಖಾನೆಯ ಮೆಟ್ಟಿಲುಗಳನ್ನಿಳಿದು ಕೆಳ ಬಂದಳು. ಕೈಯಲ್ಲಿಯ ಔಷಧಿಯ ಚೀಟಿಯನ್ನು ಬಿಡಿಸಿದಳು. ಬಿಳಿ ಕಾಗದದಲ್ಲಿ ಕಾಗೆ ಕಾಲುಗಳಂತೆ ಹರಡಿಕೊಂಡ ಕರೀ ಗೆರೆಗಳು ಅವಳ ತೀಕ್ಷ್ಣ ದೃಷ್ಟಿಗೆ

ಬಿಸುಕಾಡಲಿಲ್ಲ. ಮತ್ತೆ ಅದನ್ನು ಮಡಿಸಿ ಹಿಡಿದುಕೊಂಡು ಮುಂದೆ ನಡೆದಳು.

ಗೇಟ ದಾಟಿ, ರಸ್ತೆಗಿಳಿದು, ಚೌಕ ಸಮೀಪಿಸಿ ಮೂಲೆಯಲ್ಲಿದ್ದ ದೊಡ್ಡದ್ದೊಂದು ಮೆಡಿಕಲ್ ಹಾಲ್ ಸಮೀಪಿಸಿದಾಗ ಅವಳ ತೊಡೆ ಸಂದಿಗಳಲ್ಲಿ ನಡುಕ ತೀವ್ರವಾಯಿತು. ಅದು ಮೈಯೆಲ್ಲ ಏರಿದಂತಾಗಿ ಚೀಟಿ ಹಿಡಿದ ಕೈಗಳೂ ಗಡಗಡನೆ ನಡುಗತೊಡಗಿದುವು. ಬಾಯಿ ಒಣಗಿಕೊಂಡು ಬಂದು ಕಣ್ಣುಗಳಿಂದ ಹೊಗೆ ಹೊರಬಂದಂತಾಗತೊಡಗಿದಾಗ ಕೌಂಟರ್ ಮೇಲೆ ಎರಡೂ ಕೈಯೂರಿ ಸಾವರಿಸಿಕೊಂಡಳು. ಬೇರೆ ಗಿರಾಕಿಗಳಿಗೆ ಔಷಧಿ ಕೊಡುವಲ್ಲಿ ನಿರತರಾಗಿದ್ದ ಅಂಗಡಿಯ ಹುಡುಗನೊಬ್ಬ ಇವಳೆಡೆಗೆ ಸರಿದು ಬಂದು ಕೇಳಿದ.

"ಚೀಟಿ ಕೊಡು...."

ಅವಳು ಕೈಯಲ್ಲಿ ಮುದ್ದೆಯಾಗಿದ್ದ ಚೀಟಿಯನ್ನು ಕೌಂಟರ್ ಮೇಲಿಟ್ಟಳು. ಅವಳ ಅಂಗೈಯ ಬೆವರಿನಿಂದ ಅದು ಮತ್ತಷ್ಟು ಮುದ್ದೆಯಾಗಿತ್ತು. ಹುಡುಗ ಅವನ್ನು ಬಿಡಿಸಿ ನೋಡಿ ಒಳಸರಿದ. ಐದು ನಿಮಿಷಗಳಲ್ಲಿ ಔಷಧಿ, ಇಂಜಕ್ಷನ್‌ಗಳನ್ನು ತಂದಿಟ್ಟು ನುಡಿದ.

"ನಾಲವತ್ತುನಾಲ್ಕು ರುಪೈ ಆಠಾಣೆ ಕುಡು."

ಅವಳು ತನ್ನ ಕಿವಿಗಳನ್ನೇ ನಂಬಲಿಲ್ಲ. ಕಣ್ಣರಳಿಸಿ ಬಾಯಿ ತೆರೆದಳು. ಪ್ಯಾ ಪ್ಯಾ ಮಾಡಿದಳು. ಬಾಯಿಯಿಂದ ಸದ್ದು ಹೊರಟಿತೇ ವಿನಃ ಮಾತು ಬರಲಿಲ್ಲ.

"ಜಲ್ದಿ ರುಪೈ ಕುಡವ್ವಾ....ಬ್ಯಾರೆ ಗಿರಾಕಿಗೋಳು ನಿಂತಾರ...."

ಅಂಗಡಿಯವನು ಅವಸರಿಸಿದ. ಅವಳ ಕಣ್ಣುಗಳು ಹಸಿಯಾದುವು.

"ಯ....ಯಪ್ಪಾ ... ನನ್ ಜಲ್ಲಿ ರುಪೈ ಇಲ್ರೀ....ಈಗ ಅಗಸುದ್ಯಾ ಕುಡ್ರಿ. ನಾಳಿಗೆ ನಾ ಎಲ್ಲಿಕಿ ದುಡದು ನಿಮಗ ರುಪೈ ತಂದು ಕುಡ್ತೀನ್ರಿ ಸಾಬ್ರೀ ..."

ಅವಳು ಅಳುವನ ಹಾಕಿ ಕಣ್ಣೊರೆಸಿಕೊಂಡಳು.



ಅಡವುಇಟ್ಟ ಅಕ್ಕಸಾಲಿ

ನನ್ನವ್ವ ಅದ್ಯಾವುದೊ
ಅಡವುಇಟ್ಟ ಅಕ್ಕಸಾಲಿ
ಕೈಗೆ ಮಾಡಲು ಕೊಟ್ಟ
ಮಂಕ್ತಿ ನೋಲೆ ;
ತಯಾರಾಗಿ ಸಿಗಬೇಕೆ
ಮೊನ್ನೆ ಮೈನೆರೆದಾಗ
ನನ್ನ ಎರಡನೆ ಮಗಳು ಸುಶೀಲೆ ?

—ಅಶೋಕ ಚೊಳಚಗುಡ್ಡ

"ಥತ್....ರೊಕ್ಕಾ ಇಲ್ದರ ಇಲ್ಲಿಗ್ಯಾಕ ಬಂದಿ ಅಂ? ಇದೇನು ಧರ್ಮಸಾಲಿ ಅಂತ ತಿಳ್ಕೊಂಡಿಯೇನು? ನಾಳಿಗೆ ದುಡ್ದು ರೊಕ್ಕಾ ತಂದು ಕುಡ್ತಾಳಂತ. ಈಗ ಇಕಿಗಿ ಉದ್ದರಿ ಔಷಧ ಕುಡ್ಬೇಕಂತ. ನಮಗೇ ಬುದ್ದು ಮಾಡ್ಲಿಕ ಹೊಂಟಾಳ. ಹೋಗ್ ....ಹೋಗು...."

ಅವನು ಅವಳ ಚೀಟಿ ಎಸೆದು ಔಷಧಿ ಬಾಟಲ್ ತೆಗೆದುಕೊಂಡು ಒಳನಡೆದ. ಅವಳ ಹೊಟ್ಟೆಯಲ್ಲಿ ಸಂಕಟ ಹುರಿಗಟ್ಟತೊಡಗಿತು. ದವಾಖಾನೆಯಲ್ಲಿ ಎಚ್ಚರ ತಪ್ಪಿ ಬಿದ್ದ ಮಗುವಿನ ನೆನಪಾಗಿ ವಿಚಿತ್ರ ವೇದನೆ ಅವಳ ಮೈಯ ನರನಾಡಿಗಳಲ್ಲಿ ಜೋರ್ರನೆ ಪ್ರವಹಿಸಿತು.

"ಯಪ್ಪಾ ಸಾಬ್ರೇ....ನಿಮ್ ಕಾಲಿಗಿ ಬೀಳ್ತೀನ್ರಿ ಧಣಿ. ನಿಮ್ ರಿಣಾ ಇಟಗೋಮಂಗಿಲ್ರೀ....ದುಡ್ದು ನಿಮ್ ರುಪೈ ಕೊಟ್ಟೇ ನಾ ನನ್ ಹಳ್ಳಿಗಿ ಹೋಗ್ತಿನ್ರೀ ಸಾಬ್ರೀ....ನನ್ ಮಗಾ ಕಾಮಣಿಲಿಂದ ಸಾಯ್ಲಿಕ್ಹತ್ತಾದ್ರಿ....ಒಂದೇ ಮಗಾರಿ ನನಗಿರಾದು....ಅಗಸುಂದ್ಯಾಕಿ ಕುಡ್ರಿ ಯಪ್ಪಾ....ನಿಮ್ಮಕ್ಕಳಿಗೆ ಪುಣ್ಯಾ ಬರ್ತದ್ರೀ ತಂದೀ...."

ಅಂತು ಗಂಗಾ ಅಳುತ್ತಲೇ ಕೈ ಜೋಡಿಸಿ ಅಂಗಲಾಚಿದಳು. ಜನ ನೆರೆದರು ದಪ್ಪ ಹೊಟ್ಟೆಯ, ರೇಷ್ಮೆ ಜುಬ್ಬ ಬಿಳಿ ಪಂಚೆಯುಟ್ಟ ಅಂಗಡಿಯ ಮಾಲಿಕ ಎದ್ದು ಬಂದು ಗದರಿದ.

"ಎಯ್ ಹೋಗು...ಹುಂ....ಕಳ್ಸು ಆಕಿಗೆ...."

ತನ್ನ ಕೆಲಸದವನಿಗೆ ಹುಕುಂ ಕೊಟ್ಟ

"ಹೋಗವ್ವಾ ಹೋಗು, ಏನ ಗಿರಾಕಿ ಟೇಮದಾಗ ಏನ್ ಕಿರಿಕಿರಿ ಹಚ್ಚೀದಿ.... ಪುಗಸಟ್ಟೆ ಔಷಧ ಯಾಹುಚ್ಚನೂ ಕುಡಂಗಿಲ್ಲ ಹೋಗು...."

ಹುಡುಗ ಅವಳನ್ನು ಗದರಿದ.

ಗಂಗಾ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತ ತನ್ನ ಚೀಟಿ ಹಿಡಿದುಕೊಂಡು ಅಂಗಡಿಯ ಮೆಟ್ಟಲಿಳಿದಳು. ದವಾಖಾನೆಯ ಮುಂದಿನ ಸಾಲು ಅಂಗಡಿಗಳ ಮಾಲಿಕರಲ್ಲಿ ರೂಪಾಯಿ ಸಾಲ ಕೇಳಿ ಛಿಮಾರಿ ಹಾಕಿಸಿಕೊಂಡು ಬರಿಗೈಯಿಂದ ರಸ್ತೆಯ ಮೇಲೆ ತಿರುಗಿದಳು. ಸೂಟು ಬೂಟುಧಾರಿಗಳ ಮುಂದೆಲ್ಲ ಕೈಯೊಡ್ಡಿ ತನ್ನ ಕೂಸಿನ ದಾರುಣ ಸ್ಥಿತಿಯನ್ನು ವಿವರಿಸಿ ಕಣ್ಣೀರು ಸುರಿಸಿದಳು. ಕೆಲವರು ನಕ್ಕು ಮುಂದೆ ಸರಿದರು. ಮತ್ತೆ ಕೆಲವರು ಕರುಣೆ ನೋಟ ಬೀರಿ ತ್ಚು....ತ್ಚು....ಗುಟ್ಟಿ ಕೈಚೆಲ್ಲಿದರು. ಮತ್ತೆ ಬಹಳಷ್ಟು ಗಂಡಸರು ಅವಳ ಇನ್ನೂ ಬಿಗಿಯಾಗಿದ್ದ ಬಿಳಿ ಬಣ್ಣದ ಮೈಯ ಉಬ್ಬು ತಗ್ಗುಗಳ ಮೇಲೆ ಹಸಿದ ಕಣ್ಣಾಡಿಸಿ ಮುಂದೆ ನಡೆದರು. ಯಾರೂ ಒಂದು ಪೈಸಾ ಸಹ ಅವಳಿಗೆ ಕೊಡಲಿಲ್ಲ.

ಗಂಗಾ ಹಳ್ಳಿಯಲ್ಲಿ ಕೇಳಿದ್ದೇನು? ಸರ್ಕಾರಿ ದವಾಖಾನೆ ಇರೋದು ಬಡವರಿಗಾಗೆ. ಅಲ್ಲಿಯ ಡಾಕ್ಟರರು ಬಡವರಿಗೆ ಪುಕ್ಕಟೆ ಔಷಧ, ಇಂಜಕ್ಷನ್, ಊಟ, ಹಾಲು, ಚಹಾ ಕುಡ್ತಾರೆ. ನೀ ಅಲ್ಲಿಗೆ ನಿನ್ ಮಗನಿಗೆ ಒಯ್ಯಿ. ಪೋರ ಬದಕತ್ತದ. ಅಂತ ದೊಡ್ಮನಿ ಶೀನಪ್ಪ ಹೇಳಿದ್ದ. ಗಿರೆಣ್ಣನೂ ಹೌದು ಅಂದಿದ್ದ. ತನ್ನಲ್ಲಿ

ಇದ್ದಬಿದ್ದ ರೊಕ್ಕ ಸೇರಿಸಿ ಬಸ್ ಚಾರ್ಜಿಗೆ ಕೊಟ್ಟು ಮಗುವನ್ನು ಇಲ್ಲಿಗೆ ತಂದಿದ್ದ ಗಂಗಾ ಇಲ್ಲಿಯ ನಿಜಸ್ಥಿತಿಯ ಅರಿವಾಗಿ ತತ್ತರಿಸಿದಳು, ದಿಗ್ಭ್ರಮೆಗೊಂಡಳು.

ನಿರಾಸೆಯಿಂದ ಮಗುವಿನ ಬಳಿ ಬಂದು ಬಂದು ಕುಳಿತಳು. ಅದಕ್ಕೆ ಎಚ್ಚರವೇ ಇದ್ದಂತಿರಲಿಲ್ಲ. ಬದಿಯ ವೃದ್ಧ ಕನಿಕರದಿಂದ ಅವಳನ್ನು ನೋಡಿ ಅವಳ ಖಾಲಿ ಕೈಯನ್ನು ನೋಡಿದ. ಮಗು ಉಸಿರಾಡುತ್ತಿತು. ಎನ್ನುವುದೊಂದೇ ಅದು ಜೀವಂತವಾಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿತ್ತು. ಗಂಗಾ ಅದರ ತಲೆ ಸವರಿದಳು, ಮುಖ ನೇವರಿಸಿದಳು. ಒಳಗಿನಿಂದ ದುಃಖ ಉಮ್ಮಳಿಸಿ ಬಂದಿತು. ಮುಖಕ್ಕೆ ಸೆರಗು ಹಾಕಿಕೊಂಡು ಭೋರ್ಗರೆದು ಅತ್ತಳು.

"ಬರೇ ಅತ್ತರ ಏನೂ ಆಗಂಗಿಲ್ಲ ತಂಗೀ ... ಹೋಗು. ಏನರೆ ಮಾಡಿ ಔಷಧ ತಗೊಂಡು ಬಾ... ನಿನ್ ಮಗಾ ಬದಕಬೇಕಾದ್ರ ಔಷಧ, ಇಂಜಕ್ಷನ್ ಬೇಕು. ನಿನ್ ಕಣ್ಣೀರಿನಿಂದ ಅದು ಬದಕಂಗಿಲ್ಲಾ ..."

ಮುಂದಿನ ಮಂಚದ ಹೆಂಗಸು ಕನಿಕರದಿಂದ ಹೇಳಿದಳು. ಗಂಗಾ ಮತ್ತೆ ಎದ್ದು ನಿಂತಳು.

"ಮುತ್ತ್ಯಾ ನನ್ ಕೂಸಿಗೆ ಜರಾ ನೋಡ್ರಿ....ನಾ ಹೊರಗೆ ಹೋಗಿ ಬರ್ತೀನಿ...."

ಅದೇ ವೃದ್ಧನಿಗೆ ಹೇಳಿ ಹೊರ ಬಂದಳು.

ಸೋತ ಹೆಜ್ಜೆಗಳನ್ನಿಡುತ್ತ ಗಂಗಾ ದವಾಖಾನೆಯ ಗೇಟು ಪ್ರವೇಶಿಸಿ ಬೇವಿನ ಮರದ ಕಟ್ಟೆಯ ಬಳಿ ಬಂದವಳೇ ಕಾಲುಗಳಲ್ಲಿಯ ಶಕ್ತಿ ಉಡುಗಿ ಕುಸಿದು ಕುಳಿತಳು. ದವಾಖಾನೆಯ ಆವರಣದಲ್ಲಿಯ, ದೂರದಲ್ಲಿ ನಿಂತು ಬೇವಿನ ಮರ, ಮೂಲೆಯಲ್ಲಿಯ ಆ ಮರದ ಹತ್ತಿರ ಜನರಿರಲಿಲ್ಲ. ಇದ್ದದ್ದು ಮಸಕು ಕತ್ತಲೆ ಮತ್ತು ನಿರ್ಜನತೆಗಳಷ್ಟೇ. ಮರದ ಸುತ್ತಲಿನ ಖಾಲಿ ಕಟ್ಟೆ.

ಹೊತ್ತು ಸಾಯುತ್ತಿತ್ತು. ಹಕ್ಕಿಪಕ್ಕಿಗಳು ಕಿರುಚುತ್ತ ಮರದೆಡೆಗೆ ಬಂದುವು. ಜೀರ್ಣವಾಗದ ನೊಸರನ್ನವನ್ನು ವಾಂತಿ ಮಾಡಿಕೊಂಡಂತೆ ರಸ್ತೆಯ ದೀಪಗಳು ಬೆಳಕು ಉಗುಳಿದವು. ಆದರೆ ಗಂಗಾ ಕುಳಿತ ಕಟ್ಟೆಯ ಕಡೆಗೆ ಬೆಳಕೂ ಸಹ ಬರಲು ಹೆದರಿತು. ರಸ್ತೆಯ ದೀಪಗಳ ಬೆಳಕಿಗೆ ಅಂಜಿದ ಕತ್ತಲೆಯೆಲ್ಲ ಓಡಿ ಬಂದು ಬೇವಿನ ಮರದಡಿಯಲ್ಲಿ ಕುಳಿತು ಹಾಯಾಗಿ ಉಸಿರೆಳೆಯಿತು. ಆಕಾಶ ಕೆಂಪಾಗಿ ಸೂರ್ಯನ ಕತ್ತೊತ್ತಿ ಕೊಂದು ತನ್ನ ಮುಖಕ್ಕೆ ಮಸಿ ಬಳಿದುಕೊಂಡಿತು. ಮುಗಿಲತುಂಬ ಮುದ್ದೆ ಮುದ್ದೆಯಾಗಿ ಬಿದ್ದ ಕತ್ತಲೆಯಲ್ಲಿ ಅಲ್ಲೊಂದು ಇಲ್ಲೊಂದು ತಲೆಮರೆಸಿಕೊಳ್ಳಲೆತ್ನಿಸುವ ಜೀವಗಳ ಚಿಕ್ಕಿಗಳು.

ಗಂಗಾ ಕುಳಿತಿದ್ದಳು. ಅವಳ ನೋಟ ಕತ್ತಲೆಯಲ್ಲಿ ಗಟ್ಟಿಯಾಯಿತು. ಅವಳ ಕಣ್ಣಿಗೆ ಏನೂ ಕಾಣಿಸದಂತಾಗಿ ಬರೀ ಕಡುಗತ್ತಲೆ ಮುತ್ತಿತು. ಆ ಕತ್ತಲೆಯನ್ನು ಸೀಳಿಕೊಂಡು ಅವಳ ಮೆದುಳು ಹಿಂದಿನ ನೆನಪನ್ನು ಕೆದಕಿತು....

ಗಂಗಾ ಹುಟ್ಟಿದ್ದು ಬಬಲಿಹಳ್ಳಿ, ಕುರುಬರ ಮಾಳವ್ವನ ಹೊಟ್ಟೆಯಲ್ಲಿ. ಹುಟ್ಟಿದಾಗಿನಿಂದ ತಂದೆಯ ಮುಖ ಕಂಡಿಲ್ಲ. ರಂಡಮುಂಡಿ ಮಾಳವ್ವನ ಹತ್ತಿರ ಎರಡು ಹೋತಗಳಿದ್ದವು. ಕೂಲಿನಾಲಿ ಅಂತ ಮೈ ಮುರಿದು ಕೆಲಸಮಾಡಿ ಮಗಳನ್ನು ಬೆಳೆಸಿದ ಮಾಳವ್ವ ಗಂಗಾನನ್ನು ಕುರುಬಗೇರಿಯ ಮೈಲಾರಿಯೊಂದಿಗೆ ಮದುವೆ ಮಾಡಿಕೊಟ್ಟು ಸತ್ತುಹೋಗಿದ್ದಳು. ಕಟೇ ಮೈ ಅಂತ ಗಂಗಾ ಹದಿನೈದು ವರ್ಷಕ್ಕೆ ಮೈ ನೆರೆದು, ಸೋಬಾನ ಮುಗಿದು, ಹದಿನೆಂಟನೆಯ ವರ್ಷಕ್ಕೆ ಚೊಚ್ಚಲು ಮಗನನ್ನು ಹಡೆದು ಹೊರಸಿನ ಮೇಲೆ ಮಲಗಿದ್ದಾಗಲೇ ಗಂಡ ಮೈಲಾರಿ ಜೇಲಿಗೆ ಹೋಗಿದ್ದ. ಹಳ್ಳಿಯ ಕುಕ್ಕಣ್ಣಿಯ ಮನೆಯಲ್ಲಿ ಜೀತದಾಳಾಗಿದ್ದ ಮೈಲಾರಿ, ಒಂದು ದಿನ ಹಾರುವ ಕುಕ್ಕಣ್ಣಿಯ ಮಾತಿನ ಮೋಡಿಗೆ ಮರುಳಾಗಿ, ಅವನು ಕುಡಿಸಿದ ಹೆಂಡದ ಅಮಲಿನಲ್ಲಿ,



ಬಂಧು ಬಳಗದ ದುಡ್ಡು
ಹಾಕೀವಿ ಎತ್ತಿ
ಚೊಟ್ಟ ನೋಟಿಗು ಕೂಡ
ಕೈಹಾಕಿ ಅತ್ತಿ !
ಹಣ ಗಳಿಸಲು ನೀನು
ಬಹಳ ಚಾಲಾಕಿ
ಹೆಂಗಸರ ಮಾರಾಟ
ಉಳಿಸಿರುವಿ ಬಾಕಿ !
–ಜಿ. ಎಸ್. ಅನ್ನದಾನಿ

ಕುಕ್ಕಣ್ಣಿಯ ಹೇಳಿಕೆಯಂತೆ ಅವನ ವೈರಿಯೊಬ್ಬನ ಕಾಲಿಗೆ ಕೊಡಲಿ ಹಾಕಿ ಕಾಲು ಮುರಿದು ಬಂದಿದ್ದ. ಅವನ ನಿಶಾ ಇಳಿದಾಗ ಅವನು ಪೊಲೀಸರ ವಶದಲ್ಲಿದ್ದ. ಕುಕ್ಕಣ್ಣಿ ಎಲೆತಿಂದ ಕೆಂಪು ರಕ್ತದ ಬಾಯುಗಲಿಸಿ ನಗುತ್ತ "ನೀ ಜೇಲಿನಿಂದ ಬರೂತನಕ ನಿನ್ ಮನಿ ಖರ್ಚಾ ಎಲ್ಲಾ ನಾ ನಡೆಸ್ತೀನೋ ಮೈಲಾರಿ... ನಿನ್ ಹೆಂಡ್ತಿ ಅಂದ್ರ ನನ್ ಮಗಳಿದ್ದಂಗ... ನೀ ಏನೂ ಚಿಂತಿ ಮಾಡಬ್ಯಾಡ ಹೋಗಿ ಬಾ...." ಎಂದಿದ್ದ. ಮೈಲಾರಿಯ ಅಮಲು ಈಗ ಪೂರ್ತಿ ಇಳಿದಿತ್ತು.

ಗಂಗಾ ಹತ್ತೇ ದಿವಸಗಳಲ್ಲಿ ಹೊರಸು ಬಿಟ್ಟದ್ದು ಹಸಿ ಮೈಯಲ್ಲಿಯೇ, ಕುಕ್ಕಣ್ಣಿಯ ಬಳಿ ಬಂದಿದ್ದಳು. ಅವನು ಹದ್ದಿನಂತೆ ಅವಳ ನುಣ್ಣನೆಯ ಮೈಮೇಲೆ ಕಣ್ಣಾಡಿಸುತ್ತ ನಕ್ಕಿದ್ದ.

"ಗಂಗಾ ಇನ್ನೊಂದು ಹದಿನೈದು ದಿನಾ ಹೋಗಲಿ. ನಿನ್ ಮೈ ಅಲ್ಲಿ. ಈಗ ಇನ್ನೂ ಹಸಿಹಸಿ ಬಾಣಂತಿ ನೀ.



ದೀಪಾವಳಿಯ ಶುಭಾಶಯಗಳು :

ಫೋನ : ೩೨೩

ಸ್ಥಾಪನೆ : ೧೯೨೬

ಪತ್ರಿಕಾ ವ್ಯವಸಾಯದಲ್ಲಿ ೬೦ ವರ್ಷಗಳನ್ನು ಪೂರ್ತಿಗೊಳಿಸಿರುವ ನ್ಯೂಜ ಏಜನ್ಸಿ :

ಮೆ॥ ಎಂ. ವ್ಹಿ. ಪರ್ವತೀಕರ ಆ್ಯಂಡ ಸನ್ಸ

ವೃತ್ತಪತ್ರಿಕಾ ಏಜಂಟರು ಹಾಗೂ ಪುಸ್ತಕ ವ್ಯಾಪಾರಿಗಳು

ವೆಂಕಟಪೇಟ, ಬಾಗಲಕೋಟ.

ನಮ್ಮಲ್ಲಿ

• ಸಂಯುಕ್ತ ಕರ್ನಾಟಕ • ಕರ್ಮವೀರ • ಕಸ್ತೂರಿ • ಪ್ರಜಾಮತ • ಟೈಮ್ಸ್ ಆಫ್ ಇಂಡಿಯಾ ಸಂಸ್ಥೆಯ ಪತ್ರಿಕೆಗಳು, ಚಂದಮಾಮಾ ಪ್ರಕಟಣೆಗಳು ಸ್ಟಾರ ಆ್ಯಂಡ ಸ್ಟೈಲ ಪ್ರಕಟಣೆಗಳು ಹಾಗೂ ಕಥೆ ಕಾದಂಬರಿ ಪುಸ್ತಕಗಳು ದೊರೆಯುತ್ತವೆ.

ಇವಲ್ಲದೆ ಬಾಗಲಕೋಟೆ ರೇಲ್ವೆ ಬುಕ್‌ಸ್ಟಾಲದ ಅಧಿಕೃತ ಗುತ್ತಿಗೆದಾರರು.

ಐವತ್ತು ರೂಪಾಯಿ ಬೇಕಾಗಿತ್ತು" ಎನ್ನುತ್ತ ನಾಲಿಗೆಯಿಂದ ತುಟಿ ಸವರಿಕೊಳ್ಳುತ್ತ ಗಂಗೆಯ ಮೈಮೇಲೆ ಆಸೆಗಣ್ಣು ಆಡಿಸಿದ್ದ. ಗಂಗಾ ತುಟಿಕಚ್ಚಿ ಅಲ್ಲಿಂದ ತಿರುಗಿ ಬಂದವಳು ಕೂಲಿನಾಲಿ ಮಾಡಿ ಮಗುವನ್ನು ಸಾಕಿದಳು. ತನ್ನ ತಂಟೆಗೆ ಬಂದಿದ್ದ ಅದೇ ಕುಕ್ಕಣ್ಣಿಗೆ ಮೆಟ್ಟು ತೋರಿಸಿ ಗರ್ಜಿಸಿದಾಗ ಅವನು ತೆಪ್ಪಗಾಗಿದ್ದ. ಮೈಲಾರಿಗೆ ಶಿಕ್ಷೆಯಾಗಿತ್ತು. ಮಗುವಿಗೆ ಈಗ ಎರಡು ವರ್ಷ. ಈಗ ನೋಡಿದ್ರೆ ಮಗು ಕಾಮಾಲೆ ರೋಗಕ್ಕೆ ಬಲಿ. ಅವಳಿಗೆ ಹೇಗಾದ್ರೂ ಮಾಡಿ ಮಗುವಿನ ಜೀವ ಉಳಿಸುವ ಚಿಂತೆ.

ಹತ್ತಿರದಿಂದಲೇ ಗಂಡಸಿನ ಕೆಮ್ಮಿನ ಸದ್ದು ಕೇಳಿ ಬೆಚ್ಚಿ ಬಿದ್ದ ಗಂಗಾ ಕತ್ತು ತಿರುಗಿಸಿದಳು. ಹತ್ತಿರದಲ್ಲಿಯೇ ಬಂದು ನಿಂತಿದ್ದ ಸೂಟುಧಾರಿಯೊಬ್ಬ ಸಿಗರೇಟಿನ ಹೊಗೆಯನ್ನು ಗಾಳಿಯಲ್ಲಿ ತೂರಿ ಮಾತು ಮುಗಿಸಿದ.

"ಯಾರದು ಅಲ್ಲಿ ?"

"ನಾನ್ರಿಯಪಾ.... ಗಂಗಾ.... ಹಳ್ಳಿಯಿಂದ ಬಂದೀನ್ರಿ ಬಾಬಾ.... ನನ್ ಕೂಸಿಗೆ ದವಾಖಾನ್ಯಾಗ ಸೇರ್ಸಿ ಮಾಡೀನ್ರಿ...ಇಂಜಕ್ಷನ ಅಸುಪಾದ್ರಿ ಬರಕೊಟಿದ್ರು ಡಾಕ್ಟರ ಸಾಬ್ರು....'

ಯಾವುದೋ ಆವೇಶದಿಂದೆಂಬಂತೆ ಪಟಪಟನೆ ನುಡಿದವಳು ತಟ್ಟನೆ ಮಾತು ನಿಲ್ಲಿಸಿದಳು. ಆ ಆಗಂತುಕ ಸಿರಿವಂತ ಮುಂದೆ ನಡೆದು ಬಂದ. ಅವಳು ಎದ್ದು ನಿಂತಳು. ಅವನು ಸುಟ್ಟು ಹೋದ ಸಿಗರೇಟೆಸೆದು ಮತ್ತೊಂದನ್ನು ತೆಗೆದು ತುಟಿಗಿಟ್ಟುಕೊಂಡು ಲೈಟರ್‌ನಿಂದ ಹೊತ್ತಿಸಿದ. ಅದೇ ಲೈಟರ್ ಅವಳ ಬಳಿ ಹಿಡಿದು ಬೇಟೆಗಣ್ಣು ಅರಳಿಸಿದ. ಗಂಗೆಯ ದುಂಡುಮೈ ತುಂಬಿ ಎದೆಯ ಮೇಲೆ ಲೈಟರ್‌ನ ಬೆಳಕು ಹರಿದಾಡಿ ಕಣ್ಣು ಮುಚ್ಚಿತು.

"ಹೂಂ.... ಏನಂದ್ರು ಡಾಕ್ಟರು ?"

ಅವನು ಕೇಳಿದ.

"ಇಂಜಕ್ಷನ ಬರ್ದು ಕೊಟಾರ್ರಿ.... ನನ್ ಬಳಿ ರೊಕ್ಕಾ ಇರಲಿಲ್ಲ. ಆ ದುಕಾನದವ್ರು ಕುಡಲಿಲ್ಲರಿ...."

"ಎಷ್ಟು ರೂಪಾಯಿ ಬೇಕಾಗಿತ್ತು ಅದಕ್ಕ ?"

"ಚಾಳಿಸರ ಮ್ಯಾಲ ಸಾಕು ರುಪೈ ಮತ್ತ ಆಗಾಣೆರಿ ಸಾಬ್ರೀ...."

"ಹೂಂ.... ರಾತ್ರಿ ಹತ್ತು ಗಂಟೆವರೆಗೆ ಆ ಔಷದ ಅಂಗಡಿ ತೆರದಿರ್ತಾರ. ನಾ ನಿನಗ ಪನ್ನಾಸು ರುಪೈ ಕುಡ್ತೀನೆಂತ. ನನ್ ಸಂಗಾಟ ಬಾ...."

"ಎಲ್ಲಿಗ್ರೀ ಸಾಬ್ರೆ ?"

ಅವಳು ಅಸೆಬೆರೆತ ದನಿಯಲ್ಲಿ ಕೇಳಿದಳು.

"ನಿನಗ ರುಪೈ ಬೇಕೋ ಇಲ್ಲೊ ? ನಿನ್ ಮಗಾ ಬದಕಬೇಕೋ ಇಲ್ಲೋ...?"

ಅವನು ಗತ್ತಿನಿಂದ ಕೇಳಿದ.

"ಬದಕಬೇಕ್ರಿಯಪ್ಪಾ.... ನನ್ನ ಮಗಾ ಜರೂರ, ಜರೂರ ಬದಕಬೇಕ್ರಿ ಸಾಬ್ರೇ...."

"ಹಾಗಿದ್ರ ಬಾ ನನ್ ಜೊತೆ."

ಅವಳು ಜೀವ ಗಟ್ಟಿ ಮಾಡಿಕೊಂಡಳು. ಆದದ್ದಾಗಲಿ ಅಂತ ಬಿರ ಬಿರನೆ ಅವನ ಹಿಂದೆ ಹೊರಟಳು. ಅವನು ಮುಂದೆ ಬಂದು ತನ್ನ ಕಾರಿನ ಬಾಗಿಲು ತೆರೆದ. 'ಕೂಡು' ಎಂದ. ಅವಳು ಹೆದರುತ್ತಲೇ ಕುಳಿತಳು. ಕಾರು ಕತ್ತಲೆಯಲ್ಲಿ ದೂರ ದೂರ ಸರಿಯಲಾರಂಭಿಸಿತು.

ತಾಸಿನ ನಂತರ ಆ ಕಪ್ಪು ಕಾರಿನ ಮಾಲೀಕ ಅವಳನ್ನು ದವಾಖಾನೆಯ ಬಳಿ ಇಳಿಸಿ ಹೋದ. ಗಂಗೆಯ ಕೈಯಲ್ಲಿ ಐವತ್ತು ರೂಪಾಯಿಯ ನೋಟಿತ್ತು. ಆದರೆ ಅವಳಲ್ಲಿದ್ದ ಅತ್ಯಮೂಲ್ಯವಾದದ್ದೇನೋ ಕಳೆದು ಹೋಗಿತ್ತು. ಇಲ್ಲ, ಅವನು ಖರೀದಿಸಿದ್ದ. ಅದರ ಬೆಲೆಯನ್ನು ಕೈಯಲ್ಲಿ ಹಿಡಿದುಕೊಂಡವಳು ಕ್ಷಣ ತಡೆದು ನಿಂತಳು. ಮರುಕ್ಷಣ ಸಿಟ್ಟು, ಸಂತಾಪ, ಆಸೆಗಳಿಂದ ಔಷಧದ ಅಂಗಡಿ ಹೊಕ್ಕಳು.

ಅವಳು ಔಷಧಿ, ಇಂಜಕ್ಷನ್ ತೆಗೆದುಕೊಂಡು ಓಡುತ್ತಲೇ ವಾರ್ಡಿಗೆ ಬಂದಳು. ಸಂಬಂಧಿಸಿದ ಡಾಕ್ಟರ್‌ರ ಡ್ಯೂಟಿ ಮುಗಿದಿತ್ತು. ಬೇರೆ ಡಾಕ್ಟರರ ಬಳಿ ನಿಂತು ಗೋಗರೆದಳು. ಬೇರೆ ಡಾಕ್ಟರ್‌ನ ರೋಗಿಗಳನ್ನು ತಾನು ನೋಡುವುದಿಲ್ಲವೆಂದು ಅವನು ಖಡಾಖಂಡಿತವಾಗಿ ಹೇಳಿಬಿಟ್ಟ. ಗಂಗಾ ಔಷಧ, ಇಂಜಕ್ಷನ್ ಬಾಟಲ್‌ಗಳನ್ನು ಹಿಡಿದುಕೊಂಡು ಬಂದು ಮಗುವಿನ ಬಳಿ ಕುಳಿತಳು. ಆಯಾಸದಿಂದ ಮಗು ಕಣ್ಣು ತೆರೆದು ಆಗಾಗ ತಾಯಿಯ ಮುಖವನ್ನು ಆರ್ತತೆಯಿಂದ ನೋಡಿತು. ಗಂಗಾ ಹೃದಯ ಕಿತ್ತಿ ಬರುವಂತೆ ಮಗುವನ್ನು ಎದೆಗವಚಿಕೊಂಡು ಬಿಕ್ಕಳಿಸಿದಳು. ದಲಿತ ಹೆಣ್ಣಿನ ತಾಯ್ತನ ಅಸಹಾಯಕತೆಯಲ್ಲಿ ಒದ್ದಾಡಿತು.

ಆಸ್ಪತ್ರೆಯ ಅಚ್ಚ ಬಿಳುಪಿನ ಗೋಡೆಗಳ ಮೇಲೆ ಆಗತಾನೆ ಹುಟ್ಟಿದ ಸೂರ್ಯನ ರಕ್ತಸಿಕ್ತ ಹಸಿ ಕಿರಣಗಳು ನೆತ್ತರ ಚೆಲ್ಲಿದುವು. ಕ್ರಮೇಣ ಬೆಳಕು ಬಾಗಿಲು ಕಿಟಕಿಗಳಿಂದ ವಾರ್ಡುಗಳಲ್ಲಿ ನುಗ್ಗಿ ಬಂದಿತು.

ಇಡೀ ರಾತ್ರಿ ಕಣ್ಣುರೆಪ್ಪೆ ಕೂಡಿಸದ ಗಂಗಾ ನಿಡಿದಾದ ಉಸಿರೆಳೆದಳು, ಮಗುವಿಗೆ ನಿದ್ದೆಯ ಮಂಪರು. ಅದರ ಮುಖದೆಡೆಗೆ ಅವಳ ಕಳವಳ ಬೆರೆತ ಮಮತೆಯ ನೋಟ.

ಒಂಬತ್ತು ಗಂಟೆಗೆ ಡಾಕ್ಟರ್ ಬಂದಾಗ ಗಂಗಾ ಓಡಿ ಬಂದು ಅವರ ಮುಂದೆ ಇಂಜಕ್ಷನ್, ಔಷಧಿ ಬಾಟಲಿಗಳನ್ನು



"ಸರಕಾರದ ಕೆಲಸ ದೇವರ ಕೆಲಸ ಅಂತ, ಆಫೀಸಿಗೆ ಹೋಗದೆ ಇಲ್ಲೇ ಇರ್ತಾರೆ ಇವರು."

ದೂರವಾಣಿ 65412

ದೀಪಾವಳಿಯು ಸಕಲರಿಗೂ ಶುಭದಾಯಕವಾಗಲಿ



ಶ್ರೀ ಗುರುಸಿದ್ಧೇಶ್ವರ ಕೋ-ಆಪರೇಟಿವ್ಹ ಬ್ಯಾಂಕ್ ಲಿಮಿಟೆಡ್

ಮೂರುಸಾವಿರಮಠ ಕಂಪೌಂಡ, ಹುಬ್ಬಳ್ಳಿ-೫೮೦ ೦೨೦

೧-೭-೧೯೮೪ ರಿಂದ ೩೦-೬-೧೯೮೫ ರ ಅಂತ್ಯಕ್ಕೆ ೪೦ ಕೋಟಿಗಳಿಗೂ ಮಿಕ್ಕಿ ಹಣಕಾಸಿನ ವ್ಯವಹಾರ ಮಾಡಿದ ಏಕಮೇವ ಸಹಕಾರಿ ಬ್ಯಾಂಕು :

ಬ್ಯಾಂಕಿನ ಠೇವಣಿ	೨,೬೪,೦೦,೦೦೦	ಸಾಲ ಕೊಟ್ಟದ್ದು	೧,೭೮,೦೦,೦೦೦
ದುಡಿಯುವ ಬಂಡವಾಳ	೩,೦೦,೦೦,೦೦೦	ನಿವ್ವಳ ಲಾಭ	೪,೭೦,೦೦೦

ಬುದ್ಧನ ದಯೆ, ಮಹಾವೀರನ ಸರಳತೆ, ಕ್ರೈಸ್ತನ ಅನುಕಂಪ ಮಹ್ಮದನ ಕೆಚ್ಚು ಗಾಂಧೀಜಿಯ ಸತ್ಯ ಅಹಿಂಸೆಗಳ ನಿಷ್ಠೆ ತನ್ನರಿವು, ದೇವನರಿವು ಸಕಲರಿಗೆ ತಿಳಿಯುವಂತೆ ಭೋದಿಸುವ ಜಗದ್ಗುರು ಬಸವಣ್ಣನವರ ತತ್ವಗಳನ್ನಾಧರಿಸಿ ನಿಷ್ಠೆಯಿಂದ ಜನಸೇವೆ ಮಾಡುತ್ತಿರುವ ಶ್ರೀ ಗುರುಸಿದ್ಧೇಶ್ವರ ಬ್ಯಾಂಕಿನಲ್ಲಿ ಠೇವಣಿಯನ್ನು ಇಟ್ಟು ದ್ವಿಗುಣಗೊಳಿಸಿ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಹೊಂದಲು ಶೀಘ್ರ ಸಂಪರ್ಕಿಸಿರಿ.

ಪ್ರತಿಯೊಬ್ಬ ಗ್ರಾಹಕನ ತೃಪ್ತಿ ನಮ್ಮ ಬ್ಯಾಂಕಿನ ಧ್ಯೇಯ:

ಠೇವಣಿಗಳ ಮೇಲೆ ಬಡ್ಡಿ ದರಗಳು

೧೫ ದಿನದಿಂದ ೪೫ ದಿನದ ಒಳಗೆ	ಶೇ. ೪.೦
೪೬ " ೯೦ " "	ಶೇ. ೫.೦
೯೧ " ೬ ತಿಂಗಳ ಒಳಗೆ	ಶೇ. ೭.೫
೬ ತಿಂಗಳ ಮೇಲ್ಪಟ್ಟು ೧ ವರ್ಷಕ್ಕೆ ಕಡಿಮೆ	ಶೇ. ೯.೦
೧ ವರ್ಷಕ್ಕೆ ಮೇಲ್ಪಟ್ಟು ಆದರೆ ೨ ವರ್ಷಕ್ಕೆ ಕಡಿಮೆ	ಶೇ. ೯.೫
೨ " ೩ " "	ಶೇ. ೧೦.೦
೩ ವರ್ಷ ಮತ್ತು ಹೆಚ್ಚಿಗೆ ೫ ವರ್ಷಕ್ಕೆ ಕಡಿಮೆ	ಶೇ. ೧೧.೦
೫ ವರ್ಷ ಹಾಗೂ ಹೆಚ್ಚಿನ ಅವಧಿಗೆ	ಶೇ. ೧೨.೦

ಶ್ರೀ ಗುರುಸಿದ್ಧೇಶ್ವರ ಕ್ಯಾಶ್ ಸರ್ಟಿಫಿಕೇಟದಲ್ಲಿ ನಿಮ್ಮ ಹಣ ರೂ. ೧೦೦-೦೦ ೬೨ ತಿಂಗಳುಗಳಲ್ಲಿ ರೂ. ೨೦೩-೫೦ ದ್ವಿಗುಣಗೊಳಿಸಿರಿ. ಅಥವಾ ನಿರಂತರ ಠೇವಣಿಯ ಯೋಜನೆಯಲ್ಲಿ ಪ್ರತಿ ತಿಂಗಳು ನೀವು ಕೊಟ್ಟಷ್ಟು ಹಣವನ್ನು ೬೧ ತಿಂಗಳ ನಂತರ ತಮಗೆ ಜೀವನ ಪರ್ಯಂತ ಕೊಡುತ್ತಾ ಹೋಗುತ್ತೇವೆ.

ಮಾಸಿಕ ಉಳಿತಾಯ ಮಾಡಲು ರಿಕರಿಂಗ ಠೇವಣಿ ಯೋಜನೆ.

ಅಲ್ಪಪ್ರಮಾಣದಲ್ಲಿ ಹಣ ತೊಡಗಿಸಿ ಪೂರ್ಣಾಂಕಗಳಲ್ಲಿ ಹಣವನ್ನು ಪಡೆಯಲು ಯೋಗಕ್ಷೇಮ ನಿಧಿಯಲ್ಲಿ ಠೇವಣಿ ಇಡಿ.

ಜನ ಸಾಮಾನ್ಯನ ಆಕಾಂಕ್ಷೆಗಳ, ಆಸೆ ಹೆಬ್ಬಯಕೆಗಳ ಪೂರೈಕೆಗೆ, ಕೊರತೆ ಕಷ್ಟಗಳ ನೀಗುವಿಕೆಗೆ ವಿವಿಧ ಉದ್ದೇಶಗಳಿಗೆ ಅನುಸಾರವಾಗಿ ಸಾಲದ ಬಡ್ಡಿದರವನ್ನು ಶೇ. ೧೦.೩೦ ರಿಂದ ಗರಿಷ್ಟ ಶೇ. ೧೭.೫ ಮಿಕ್ಕದಷ್ಟು ಬಡ್ಡೀದರವನ್ನು ರಿಝರ್ವ ಬ್ಯಾಂಕಿನ ಆದೇಶಕ್ಕೊಳಪಟ್ಟು ನಿಗದಿ ಪಡಿಸಿದೆ. ಈ ಯೋಜನೆಗಳ ಲಾಭ ಪಡೆಯಿರಿ.

ಸಂಸ್ಥಾಪಕರು : ಶ್ರೀಮನ್ ಮ. ನಿ. ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು

ಶ್ರೀ ಎಂ. ಎಸ್. ವೀರಕ್ತಮಠ
ವೈಸ್ ಚೇರಮನ್

ಶ್ರೀ ಗಂಗಣ್ಣಾ ಬತ್ತಿ
ಚೇರಮನ್

ವಿವರಗಳಿಗಾಗಿ ಮ್ಯಾನೇಜರ ಇವರನ್ನು ಸಂಪರ್ಕಿಸಿರಿ

ಶ್ರೀ ಸಂಗಮೇಶ ಜಿ ಟಂಗಿನಕಾಯಿ
ಮ್ಯಾನೇಜರ

ಬನ್ನಿ ತಮಗೆ ಹಾರ್ದಿಕ ಸ್ವಾಗತ. ಪರಸ್ಪರ ಅಭಿವೃದ್ಧಿ ಹೊಂದೋಣ

ಹಿಡಿದು ನಿಂತು ಅವಸರಿಸಿದಳು. ಡಾಕ್ಟರ್ ಮಗುವನ್ನು ಪರೀಕ್ಷಿಸಿದರು. ಮಗುವಿನ ಉಸಿರಗತಿ ತೀವ್ರವಾಗಿತ್ತು. ಎದೆ ರಭಸದಿಂದ ಏರಿಳಿಯುತ್ತಿತ್ತು.

ಸಿರಿಂಜ್‌ನಿಂದ ಹರಿದ ದ್ರವವನ್ನು ತನ್ನೊಳಗೆ ಹೀರಿಕೊಳ್ಳಲು ಮಗುವಿನ ರಟ್ಟೆ, ಸೊಂಟದ ಯಾವ ನರವೂ ಜೀವಂತವಾಗಿರಲಿಲ್ಲ. ಡಾಕ್ಟರ್ ಮೂರು ಮೂರು ಸಲ ಪ್ರಯತ್ನಿಸಿ ಸೋತು ಬಿಟ್ಟರು. ಎರಡೆ ಕ್ಷಣಗಳಲ್ಲಿ ಮಗು ಜೋರಾಗಿ ಬಿಕ್ಕಳಿಸಿ ಕೊನೆಯ ಉಸಿರನ್ನು ಎಳೆದುಕೊಂಡಿತು.

ಡಾಕ್ಟರ್ ತಲೆ ಅಲ್ಲಾಡಿಸಿ ಮುಂದೆ ನಡೆದರು. ಗಂಗಾ ಹುಚ್ಚಿಯಂತೆ ಮಗುವನ್ನೆತ್ತಿ ಎದೆಗೊತ್ತಿಕೊಂಡವಳೇ ದೊಡ್ಡ ದನಿ ತೆಗೆದು ಅಳತೊಡಗಿದಳು. ಸೆರೆಮನೆಯ ಸರಳುಗಳ ಹಿಂದಿರುವ ಗಂಡ. ತೊಡೆ ಮಡಿಲಲ್ಲಿ ಮಗುವಿನ ಹೆಣ. ಗಂಗಾ ಕರುಳ ಕಿತ್ತಿ ಬರುವ ಆರ್ತತೆ, ಅಸಹಾಯಕತೆ, ದುಃಖಗಳಿಂದ ರೋಧಿಸತೊಡಗಿದಳು.

ಸೂರ್ಯ ಸತ್ತು ಬೆಳಕಿನ ಮಾರಿಗೆ ಮಸಿ ಬಳಿದನು. ಆಕಾಶದಲ್ಲಿಯ ಬಂಜೆ ಮೋಡಗಳ ಗರ್ಭಕ್ಕೆ ಕತ್ತಲೆ ಧಾವಿಸಿತು. ಗಿಡ ಮರಗಳ ನೆತ್ತಿಯ ಮೇಲೆಲ್ಲ ಕತ್ತಲೆ ಸೆಗಣಿಯಿಟ್ಟಿತು.

ಗಂಗಾ ಖಾಲಿ ಮಡಿಲಿನಿಂದ ವಾರ್ಡಿನ ಒಂದೊಂದೇ ಮೆಟ್ಟಿಲುಗಳನ್ನು ಸೋತ ಕಾಲುಗಳಿಂದ ಇಳಿಯುತ್ತ ನಿಟ್ಟುಸಿರಿಟ್ಟಳು ಆಸ್ಪತ್ರೆಯ ಆವರಣದಲ್ಲಿ ನಿಂತ ಮಿನುಗುವ ಕಾರುಗಳು, ಸ್ಕೂಟರ್‌ಗಳು, ಪ್ಯಾಂಟು ಶರ್ಟು ತೊಟ್ಟು ಠೀವಿಯಿಂದ ನಡೆದಾಡುವ ಸಿರಿವಂತರನ್ನು ನೋಡುತ್ತ ಒಂದು ಕ್ಷಣ ನಿಂತುಬಿಟ್ಟಳು. ಎಲ್ಲವನ್ನೂ ಎಲ್ಲರನ್ನೂ ಪೆಟ್ರೋಲ್ ಹಾಕಿ ಸುಟ್ಟು ಬಿಡಬೇಕೆನ್ನುವ ರೋಷ ಒಮ್ಮಿಂದೊಮ್ಮೆಲೇ ಅವಳೆದೆಯಿಂದ ಭುಗಿಲ್ಲನೆ ಮೇಲೆದ್ದು ಬಂದು ಹಲ್ಲುಗಳನ್ನು ಕಟಕಟಿಸಿತು. ಮುಷ್ಟಿ ಬಿಗಿಯಿತು. ಥೂ ಥೂ ಎಂದು ಎಲ್ಲ ವಾಹನಗಳ ಮೇಲೆ ಉಗಿಯುತ್ತ ಓಡಿ ಬಂದು ನಿನ್ನೆ ಕುಳಿತುಕೊಂಡಿದ್ದ ಬೇವಿನ ಮರದ ಬುಡದ ವರ್ತುಳಾಕಾರದ ಕಟ್ಟೆಯ ಮೇಲೆ ಕುಳಿತು ಮೊಳಕಾಲುಗಳಿಗೆ ತಲೆ ಸೇರಿಸಿ ಕಣ್ಣು ಮುಚ್ಚಿದಳು.

ಎಷ್ಟೋ ಹೊತ್ತು ಗಂಗಾ ಅದೇ ಸ್ಥಿತಿಯಲ್ಲಿ ಕುಳಿತಿದ್ದಳು. ಕಣ್ಣುಗಳ ನಡುವೆ ಕೆನೆಗಟ್ಟಿದ ಕತ್ತಲೆಯಲ್ಲಿ ಕೆಂಪು ಕಪ್ಪು ಚುಕ್ಕೆಗಳು ಮೂಡಿದಂತಾಗಿ ಸತ್ತ ಮಗುವಿನ ಆಟಪಾಟದ ಅನೇಕ ಭಂಗಿಗಳು ಮೂಡತೊಡಗಿ ಅವಳನ್ನು ಹೊರಗಿನ ಪ್ರಪಂಚದಿಂದ ಸಂಪೂರ್ಣವಾಗಿ ಸರಿಸುವಲ್ಲಿ ಸಫಲವಾದುವು.



ಹುಡುಕುತ್ತಿದ್ದೇನೆ

ರಾತ್ರಿ ಹನ್ನೆರಡರ ಗಂಟೆ
ಬಾರಿಸುತ್ತಿದೆ
ಹುಣ್ಣಿಮೆಯ ರಾತ್ರಿಯಲ್ಲಿ
ಏಕಾಂಗಿಯಾಗಿ ಕುಳಿತಿದ್ದೇನೆ
ದಿನಚರಿಯಿಂದ ಒಂದು ದಿನ
ಸರಿಯುತ್ತಿದೆ
ಹೀಗೆಷ್ಟೋ ದಿನಗಳು- ಎಷ್ಟೋ
ಹುಣ್ಣಿಮೆಗಳು ಸರಿದಿವೆ
ಆದರೆ ಆ ದಿನ ಆ ಹುಣ್ಣಿಮೆಯ
ರಾತ್ರಿ ಅವಿಸ್ಮರಣೀಯ
ಬರಿದಾಗಿದ್ದ-ಬರಡಾಗಿದ್ದ ನನ್ನ
ಜೀವಕೆ ಚೆಲುವು ತುಂಬಿಹೋದ
ನಿನ್ನನು ಹುಡುಕುತ್ತಿದ್ದೇನೆ
ಕೋಟಿ-ಕೋಟಿ ಮಿನುಗುವ
ನಕ್ಷತ್ರಗಳಲಿ

—ಗವೀಶ ಹಿರೇಮಠ

ಅವಳ ಬಳಿ ಹರಿದು ಬಂದು ನಿಂತ ಕಾರಿನ ಸದ್ದು ಅವಳ ಕಿವಿ ಸೇರಲಿಲ್ಲ. ಕಾರಿನಿಂದಿಳಿದ ನಿನ್ನೆಯ ಸಾಹುಕಾರ ಅವಳೆಡೆಗೆ ನಡೆದು ಬಂದ.

"ಏಯ್.... ಗಂಗಾ...."


ಅವನು ಕರೆದಾಗಲೇ ಅವಳು ಗಡಬಡಿಸಿ ತಲೆ ಎತ್ತಿದಳು ಕಣ್ಣೊರಸಿಕೊಂಡು ಅವನೆಡೆಗೆ ದಿಟ್ಟಿಸಿದಳು ಮನಸ್ಸು ನಿಶ್ಚಲವಾಯ್ತು. ನಿನ್ನೆ ತನ್ನನ್ನು ಕಾರಿನಲ್ಲೊಯ್ದು ಭೋಗಿಸಿ ಐವತ್ತು ರೂಪಾಯಿ ಕೊಟ್ಟ ಸಾವುಕಾರ.

"ಹಿಂಗ್ಯಾಕ ನೋಡ್ತಿ ಗಂಗಾ? ನಾನೇ.... ಇವತ್ತೂ ನಿನಗ ರೂಪಾಯಿ ಬೇಕೇನೋ ಅಂತ ಬಂದೆ."

ಅವಳು ಎದ್ದು ನಿಂತಳು. ಅವನು "ಬಾ...." ಎಂದವನೇ ಮುಂದೆ ನಡೆದ. ಅವಳು ಮೌನವಾಗಿ ಹಿಂಬಾಲಿಸಿದಳು. ಅವನು ಕಾರಿನ ಬಾಗಿಲು ತೆರೆಯಲು ಹಿಡಿಗೆ ಕೈಯಿಟ್ಟ. ಗಂಗೆಯ ಮುಖ ತೀವ್ರ ರೋಷದಿಂದ ಕಠೋರವಾಯಿತು. ಕಣ್ಣುಗಳಲ್ಲಿ ರಕ್ತ ನುಗ್ಗಿತು ನೆಲದ ಮೇಲೆ ಬಿದ್ದಿದ್ದ ಕಲ್ಲನ್ನೆತ್ತಿಕೊಂಡು ಅವನ ತಲೆಗೆ ಬಲವಾಗಿ ಬೀಸಿ ಹೊಡೆದಳು. ಹರಿಯದ ಹೆಂಗಸಿನ ಆಕ್ರೋಶದ ಹೊಡೆತ ಅದು.

"ನನಗ ಏನಂತ ತಿಳ್ಕೊಂಡಿದೀ ನನ್ ಪಾಟ್ಯಾ ರುಪೈ ಆಶಾ ತೋರಸ್ತಾನ ಘಾತಕಾ...."

ಎಂದವಳೇ ಮತ್ತೆ ಕಲ್ಲೆತ್ತಿದಳು. ಒಂದು ಕ್ಷಣ ಅಪ್ರತಿಭನಾದ ಸೂಟುದಾರಿ ತಲೆಗೆ ಕೈ ಒತ್ತಿಕೊಂಡೇ ಬಾಗಿಲೆಳೆದು ಕಾರು ಹತ್ತಿದ. ಕಾರು ಸ್ಟಾರ್ಟ್ ಮಾಡಿದಾಗ ಅವಳ ಕೈಯಲ್ಲಿಯ ದೊಡ್ಡ ಕಲ್ಲು ಬೀಸಿ ಬಂದು ಹೆಡ್‌ಲೈಟಿಗೆ ಅಪ್ಪಳಿಸಿತು. ಲೈಟಿನ ಗಾಜು ಚೂರುಚೂರಾಗಿ ದೀಪ ಆರಿತು. ಅವಳು ಥೂ ಎಂದು ಉಗಿಯುತ್ತಿರುವಂತೆಯೇ ಕಾರು ವೇಗ ಹೆಚ್ಚಿಸಿ ಸರಿದು ಹೋಯಿತು. ಗಂಗಾ ನಿಂತಲ್ಲಿಯೇ ಕುಸಿದು ಬಿದ್ದು ಭೋರೆಂದು ಅಳತೊಡಗಿದಳು.



ಬಿಪೇರಿ ಸಂಸಾರ

* ಎಸ್.ಎನ್.ಕಸ್ತೂರ್

ಪಾತ್ರಗಳು: (೧) ರಾಯರು (೨) ರಂಗ (೩) ಯುವತಿ (೪) ಯುವಕ (೫) ವ್ಯಕ್ತಿ (೬) ವೃದ್ಧ

ತೆರೆ ಸರಿದಾಗ ರಂಗದ ಮಧ್ಯೆ ಒಂದು ಪಾರ್ಟಿಷನ್ ಇರಿಸಿ ಎರಡು ರೂಮುಗಳಂತೆ ಮಾಡಿದ್ದಾರೆ. ರಂಗದ ಬಲ ರೂಮಿನಲ್ಲಿ ಒಂದು ಮಂಚ. ಕುರ್ಚಿ, ಎಡರೂಮಿನಲ್ಲಿ ಒಂದು ಟೇಬಲ್ಲು. ಒಂದು ಕುರ್ಚಿ. ಟೇಬಲ್ಲಿನ ಮೇಲೆ ಪುಸ್ತಕಗಳು, ಕಾಗದ ಇತ್ಯಾದಿ.

ಬಲ ರೂಮಿನ ಮೇಲ್ಭಾಗದಲ್ಲಿ "ಬಿಪೇರಿ ಸಂಸಾರ" ಎಂದು [illegible] ನೇತು ಹಾಕಿದೆ ರಂಗ ಆ ರೂಮಿನಲ್ಲಿ ಪೇಪರನ್ನು ಕಣ್ಣಿಗೆ ಹತ್ತಿಸಿ ಓದುತ್ತಿದ್ದಾನೆ.... ವಯಸ್ಸು ೩೦-೩೫ರ ಹರೆಯ.

ಎಡ ರೂಮಿನಲ್ಲಿ 'ರಾಯರು' [illegible] ಎದುರಾಗಿ [illegible] ನಿಂತು ಪುಸ್ತಕ ಓದುತ್ತಿದ್ದಾರೆ. ಕಣ್ಣಿಗೆ ಕನ್ನಡಕ.... ವಯಸ್ಸು ೫೦ ಮೀರಿ [illegible] ನಿಧಾನವಾಗಿ ಕಾಲು ಕೆಳಗೆ ಬಿಟ್ಟು, ಪುಸ್ತಕ ಮುಚ್ಚಿ ಪಕ್ಕದ [illegible].

ರಾಯರು: (ಸ್ವಗತ) ಒಬ್ಬನ್ನ ಇದ್ದಾಗ ಹಿಂಗs ಒಂಟಿಗಾಲಿನ ವ್ಯಾಲಿ ನಿಂದ್ರೂದು ನನ್ನ ಪದ್ಧತಿ....ಕಾಲು ಸೋಯತಾವ,ಆಫ್ ಕೋರ್ಸ ಖರೆ.... ಆದ್ರ, ಎಚ್ಚರ ಇರತದ...."ಬಿದ್ದಿಗಿದ್ದೇನು''ಅಂಬೂ ಭಯ ಇರತದ.... ಭಯ ಬೇಕು ಜೀವನಕ್ಕ....ಇರದಿದ್ರ ಲಗಾಮು ಇಲ್ಲದ ಕುದರಿ ಹಾಂಗ ಓಡತದ–ಕೆಡುವತದ.

[ಅದೇ ಸಮಯಕ್ಕೆ ರಂಗ ಲಗುಬಗೆಯಲ್ಲಿ ಪೇಪರನ್ನು ಮತ್ತೆ ಮತ್ತೆ ಓದುತ್ತ ಎಡ ರೂಮಿನಲ್ಲಿ ಪ್ರವೇಶಿಸುತ್ತಾನೆ.]

ರಂಗ: (ಅವಸರದ ಸ್ವರದಿಂದ) ರಾಯ್ರ, ರಾಯರ (ಪೇಪರು ಬಗಲಲ್ಲಿ ಇರಿಸುತ್ತಾನೆ. ಹತ್ತು ಕೈ ಬೆರಳು ಎತ್ತಿ ತೋರಿಸುತ್ತಾನೆ) ಇಷ್ಟು ಮಂದಿ ಡೋಣಿ ಮುಣಗಿ ಸತ್ರಂತ ನೋಡ್ರಿ ಪಾಪ!

ರಾಯರು: ಪರ್ಲಾ ಹರ್ರಿತು ಬದುಕಿಂದು ಒನ್ಸ್ ಫಾರ್ ಆಲ್ ಏನಂತೀದಿ?

(ರಂಗ ಆವಾಕ್ಕಾಗಿ ರಾಯರ ಮುಖ ನೋಡುತ್ತಾನೆ....ರಾಯರು ಮೆಲ್ಲನೆ ನಗುತ್ತ ಅವನ ಬಳಿ ಬಂದು ಭುಜದ ಮೇಲೆ ಕೈಯಿಂದ ತಟ್ಟುತ್ತಾರೆ)



ಸಾಯಲಿಕ್ಕೆ ಹುಟ್ಟಿದವರು ಸತ್ರ, ಬದುಕಿ ಇದ್ದವರು ಉಸುರು ಹಾಕ ತಾರೇನೋ ?

ರಂಗ: (ಏನೂ ತಿಳಿಯದಾಗಿ)-ಸತ್ರಂತ್ರಿs

ರಾಯರು: ಎರಡು ವರ್ಷದ ಹಿಂದಿನ ಪೇಪರು ರಂಗಣ್ಣ ಅದು ನೀನು ಓದಿದ್ದು.

(ರಂಗ ಲಗುಬಗೆಯಲ್ಲಿ ಪೇಪರನ್ನು ಅತ್ತಿತ್ತ ಹೊರಳಿಸಿ ನೋಡುವನು)

ರಂಗ: (ಹುಚ್ಚು ನಗು)ಅಂದ್ಹಾಂಗ ಹೌದ್ರಿ.

ರಾಯರು: ಮತ್ತ ಸಾಯಲಿಕ್ಕೆ ಹುಟ್ಟಿನೂ ಎರಡು ವರ್ಷ ಆಗಿರಬೇಕು ಅವರು.

(ರಂಗ ಏನೂ ತಿಳಿಯದಾಗಿ ರಾಯರ ಮುಖ ನೋಡತೊಡಗುತ್ತಾನೆ)

ತಿಳ್ಯಲಿಲ್ಲ ರಂಗಣ್ಣಗೆ....ಹೊ ರ ಗೆ ಕೂತು ವಿಚಾರ ಮಾಡ ಹೋಗು ರಂಗ.

(ರಂಗ ತಲೆ ಕೆದರಿಕೊಳ್ಳುತ್ತ ರಾಯರನ್ನು ಹೊರಳಿ ಹೊರಳಿ ನೋಡುತ್ತ ಹೋಗುತ್ತಾನೆ)

ಗೋಡಿಗೆ ಹಾಯ್ದೀಯೊ....

(ರಂಗನ ನಿಷ್ಕ್ರಮಣ)

ರಾಯರು: (ಸ್ವಗತ)-ಅವನs ರಂಗ.... ನನ್ಹಾಂಗ ಆಲೋನು !....ಮೂರು ಲಗ್ನ ಆಗಿ, ಮೂರುs ಮಂದಿ ಹೆಂಡಂದ್ರಿಗೆ ಪಾಳ್ಯೆ ಮ್ಯಾಲೆ ಫೇರವೆಲ್ ಕೊಟ್ಟು, ವಿರಕ್ತ ಆಗಿ, ಈಗ-ನನ್ನ ಅಸಿಸ್ಟಂಟು! ಇನ್ನ ನಾನು ಯಾರು ?... ಊರಾಗೆಲ್ಲ 'ರಾಯರು' ಅಂತ ನನ್ನ ಕರಿಯೂದು. ನನ್ನ ಧಂಧೆ ಅಂದ್ರ, ಛೀ! ಛೀ! ಅಲ್ಲಲ್ಲ, ಧಂಧೆ ಅಂದ ಮಾಗಸ್ತ್ಯ ಸಬ್ಬ....(ಯೋಚಿಸಿ)

ಹಾಂ ಪ್ರೊಫೆಶನ್ನ ನನ್ನ ಪ್ರೊಫೆಶನ್ನ ಅಂದ್ರ ಸೋಶಿಯಲ್ ವರ್ಕ್....ಯಾಕೊ ಅಷ್ಟು ಸರಿಯಾಗಿ ಹೇಳ್ಲಿಕ್ಕೆs ಬರವಲ್ಲದು. ....ಮೊದಲ್ನಿಂದ ಪರೋಪಕಾರ ಅಂದ್ರ ನನ್ನ ಸ್ವಭಾವ ಆಗೇದ. ಓಣ್ಯಾಗ ಏನs ಪ್ರಸಂಗ ಬರ್ಲಿ, ಮನಿಮನಿ ಒಳಗ ಕುರು ಕ್ಷೇತ್ರ ಸುರುವು ಆಗ್ಲಿ, ರಾಮಾಯಣ ಆಗ್ಲಿ ಮುಂದಾಗಿ ಅವನ್ನ ಬಗಿಹರಸತಿದ್ದೆ....ಈ ಜಗಳ ಬಗಿ ಹರಿಸಿ ಹರಿಸಿ, ಜಗಳ ಹಚ್ಚೂದು ನನ್ನ ಎಡಗೈ ಬಲಗೈ ಆತು.... ಅದರಿಂದ ಪ್ರಾಪ್ತಿ ಸುರುವು ಆದಾಗ ನನಗs ಆಶ್ಚರ್ಯ ಆತು....ಆದ್ರ ಇದ ರೊಳಗ ಡಿಸ್ ಅಡ್ವಾಂಟೇಜ್ ಅದ.... ಸಾಮಾಜಿಕ ಸೇವಾ ಮಾಡೂ ಪ್ರಾಣಿಗೆ, ನೌಕರಿ ಅಂದ್ರ ಆಗಿ ಬರೂದುಲ್ಲ-ಹಾಂಗ ನನಗೂ ಆಗಿ, ಅದನ್ನs ಪ್ರೊಫೆಶನ್ ಮಾಡಿ ಕೊಂಡೆ....ಒಂದು ಆಫೀಸು ಭಾಡಿಗಿ ತೊಗೊಂಡೆ....ಬೋರ್ಡ್ ಬರಸಿ-ಅದರೊಳಗ ಕೂತೆ...ಜನ ಬರತಾರ....ನನ್ನ ಫೀ ಕೊಡ ತಾರ....ಮಸ್ತ ನಡದದ ಧಂಧೆ, ಅಲ್ಲಲ್ಲ, ಸೋಸಿಯಲ್ ವರ್ಕ್ !

...ಮನಶ ಏನs ಮಾಡ್ಲಿ, ಒಂದು ಮನಿ ಕಟ್ಟಲಿ. bridge ಕಟ್ಟಲಿ, ಮಶಿನ್ ಮಾಡ್ಲಿ, ಅವಕ್ಕ ರಿಪೇರಿ ಬೇಕs ಬೇಕು ... ಈ ದೇಶದಾಗ ಅಂತೂ ಕಟ್ಟೂದು, ಮಾಡೂದಕಿಂತ ರಿಪೇರಿ ಆಗ ತ್ಯದs ಹೆಚ್ಚು ..ಸಿಮೆಂಟು, ಕಲ್ಲಿನಿಂದ ಕಟ್ಟಿದ ಮನಿ-ಮಠ, bridge ಸವದು crack ಆಗಿ ಬೀಳೂವಾಗ, ಎರಡು ವಿಚಿತ್ರ ಜೀವಗಳಿಂದ ಕಟ್ಟಿ ಕೊಂಡ ಈ ಸಂಸಾರ ಅಂಬೂ ಮನಿಗೆ ಪ್ರತಿನಿತ್ಯ ರಿಪೇರಿ ಬೇಕು ಅಂಬೂದು ನಾನು practical ಆಗಿ ವಿಚಾರ ಮಾಡಿ, ಈ 'ರಿಪೇರಿ ಸಂಸಾರ'ಅಂಬೂ ಲಿಮಿಟೆಡ್ ಸಂಸ್ಥೆ ತಗದೆ.

(ರಂಗನ ಪ್ರವೇಶ- ಮುಖದಲ್ಲಿ ನಿರಾಶೆ)

ರಂಗ : ಆಫೀಸ್ ಬಾಗ್ಲ ತಗದು ಎರಡು ತಾಸು ಆದವ್ರಿ, ಒಬ್ಬ ಗಿರಾಕಿ...

ರಾಯರು : (ನ ಡು ವೆ ಯೆ ೇ) ರಂಗ, ರಂಗಣ್ಣ...

ರಂಗ : ಒಂದು ಗಿರಾಕಿ ಬರಬಾರದೇ ನಸೀಬಕ್ಕ ?

ರಾಯರು : ಇದೇನು ಹೋಟೆಲೂ ಗುಡಿ ಅಂತ ತಿಳಕೊಂಡೇನೊ ಬಾಗಲ ತಗದ ಕೂಡ್ಲೆ ಗಿರಾಕಿ ಬರ್ಲಿಕ್ಕೆ ?

ರಂಗ : ನಾಲ್ಕು ತಿಂಗಳ ಬಾಡಿಗಿರಿs... ಮಾಲಕ ಒದರಾಡತಾನ್ರಿs....

ರಾಯರು : ಮಾಲಕನ ಪರಿಸ್ಥಿತಿ ಆ್ಯನಾಲಾಯಿಜ್ ಮಾಡೊs... "ಎನೆಲಿಸಿ" ಅಂಬದರ ಕೇಳಿs ಇಲ್ಲೊ, ಸಾಲ್ಯಾಗ ಇದ್ದಾಗ ?... (ಮೆಲ್ಲನೆ ನಕ್ಕು)ಸಾಲಿಗೆ ಹೋದ್ರ ಗೊತ್ತು... ಬಿಡು ಇರ್ಲಿ... ಮಾಲಕಗ ಎಷ್ಟು ?

(ರಂಗ ಏನೂ ತಿಳಿಯದಾಗಿ ರಾಯರ ಮುಖ ನೋಡ ತೊಡಗುವನು)

ಎಷ್ಟು ಹೆಂಡ್ರೋ ಮಾಲಕಗs ?

ರಂಗ : ಆವರ್ದರಿ ? !... ಇಬ್... ಇಬ್ ...ಇಬ್ರು... ಟೂ ಅಂತ್ರಿ.

ರಾಯರು : ಈಗ ಹಾಕು... ಒಬ್ಬ ಹೆಂಡತಿ ಇದ್ರ ಸಂಸಾರ ಹ್ಯಾಂಗ ಇರತದ ಅಂಬೂದು ಗೊತ್ತದ ನಿನಗ.

ರಂಗ : ಛಿಃ. ಭಯಂಕರ.... ಹಾರಿಬಲ್ ಬಿಡ್ರಿ.

ರಾಯರು : ಒಪ್ಪಿದ್ಯ... ಒಬ್ಬಾಕಿ ಇದ್ರ ಹಾರಿಬಲ್ !... ಇಬ್ರು ಹೆಂಡಂದ್ರು ಆದು ಒಂದs ಮನ್ಯಾಗ ಇದ್ರ ?...

ರಂಗ : ಹೌದಲ್ರಿs... ಮಾಲೀಕನ್ನ ಹರಕೊಂಡು ತಿನ್ನತಿರಬೇಕು ಬಿಡ್ರಿ.

ರಾಯರು : ಒಪ್ಪಿದ್ಯಾs... ಅಂದ್ರ ಏನಾತು ಮರಿs, ಹೆಂಡಂದ್ರ ಮ್ಯಾಲಿನ ಸಿಟ್ಟು...

ರಂಗ : (ನಡುವೆಯೇ) ಬಾಡಿಗಿದಾರರ ಮ್ಯಾಲೆ ಹಾಕತಾನ ಮಾಲಕ...ಖರೆs ರಿ. ಬಾಡಿಗಿ ಒಗದಬಿಟ್ರ ಒದರಾಡಿಸಿ ಕೊಳ್ಳೂದು ತಪ್ಪತದಿಲ್ರಿ ?

ರಾಯರು : ಒದರಾಡಿಸಿಕೊಳ್ಳೂದರಾಗ ಸಮಾಧಾನ ಹುಡಿಕಿಕೊಳ್ಳೂದs ಸಂಸಾರದ ರಹಸ್ಯ ರಂಗಣ್ಣ.

(ರಂಗ ಏನೂ ತಿಳಿಯದಾಗಿ ರಾಯರ ಮುಖ ನೋಡುತ್ತಾನೆ)

ನಾಟ್ಯಮಂದಿರ

ನಾನಿರುವ ಜಗವೊಂದು ನಾಟ್ಯಮಂದಿರ ಭವ್ಯ
ಜೀವನವು ನಾಟಕವು; ಜನರು ನಟರು;
ವಿಕಟ ನಾಟ್ಯವ ನಟಿಸಿ ಕರೆಬರಲು ತೆರಳುವರು
ಎಲ್ಲಿಗೋ ಮಾನವರು ನಂದಕಂದ

—ಜಿ. ಎಚ್. ಕೆ.

ಹೊರಗ ಕೂತು ವಿಚಾರ ಮಾಡ ಹೋಗು....

(ರಂಗನ ನಿಷ್ಕ್ರಮಣ)

ರಾಯರು: (ಸ್ವಗತ)....ಈ ರಂಗಂದು-ನಂದು ಭೆಟ್ಟಿ ಆದದ್ದು, ಆಗತ್ಸ ಇದ್ದದ್ದು ಒಂದು ವಿಚಿತ್ರ ಕೊ–ಇನ್ನಿದನ್ನ ನೋಡ್ರಿ...ನನ್ನ ಅವನ ಮೊದಲ ಭೆಟ್ಟಿ ಆದದ್ದು....? (ವಿಚಾರಿಸಿ).... ಅಲ್ಲೆ! ಡೇಕ್....ಇಂವ ತನ್ನ ಹೆಂಡತಿನ್ನ ಸುಡಲಿಕ್ಕೆ ಬಂದಿದ್ದ, ಐ ಮೀನ್ ಸತ್ತ ಹೆಂಡತಿನ್ನ... ನಾನು?....ನನ್ನ ಹೆಂಡತಿನ್ನ! –2 ವರ್ಷ ಆದಮ್ಯಾಲೆ ಮತ್ತ ಇಬ್ಬರ ಭೆಟ್ಟಿ ಅಲ್ಲೇ ಆಗಬೇಕs!?....ಆಗ ರಂಗ ಫ್ಲೋವರ್ ಫೆಲೊ, ತನ್ನ ಸೆಕೆಂಡ ಉರಿ ಹಚ್ಚಿಗೊಂಡು ಸತ್ತ ಹೆಂಡತಿನ್ನ, ಮತ್ತ ಸುಡಲಿಕ್ಕೆ ಬಂದಿದ್ದ....“ಸ್ಪಾಯ್ಲ್ಡ ಮಡ್ಡಿ” ಅಂತೊ ಏನೊ!....ರಂಗ ಮೂರಕ್ಕ ಮುಕ್ತಿ ಮಾಡಿ-ವಿರಕ್ತ ಆದನಂದು ನಂದು ಕಂಟಿನ್ಯು ಆಗಿ ಸಿಕ್ಕ ನಿಂತ್ಯು–ಅದೂ, “ಮ್ಯಾರೇಜಿಗೆ ಅಲರ್ಜಿ ನಾನು ಏನೊ” ಅಂಬೂ ಸಂಶಯ ಫ್ಲ್ಯಾಶ್ ಆದಾಗ–7 ತರಹದ ಹೆಂಡದಿರ ಸಂಸಾರದ ಅನುಭವ, ನನ್ನ ಸೋಶಿಯಲ್ ವರ್ಕುವು, ಎರಡೂ ಕೂಡಿಸಿಗೊಂಡು, ಈ “ರಿಪೇರಿ ಸಂಸಾರ” ಸಂಸ್ಥಾಪನೆ ಆತು.

(ಲಗು ಬಗೆಯಲ್ಲಿ ರಂಗನ ಪ್ರವೇಶ)

ರಾಯರು: ಒಂದು ಕಡೆ ಕೂಡ್ಲಿಕ್ಕೆ ಆಗೂದುಲ್ಲೇನೊ....

ರಂಗ: ಕೂತ್ರ ಎದ್ದು ಅಡ್ಡಾಡೂ ಹಾಂಗ ಆಗ್ತದರಿ....ಎದ್ರ, ಕೂಡೂಹಾಂಗ ಆಗ್ತದರಿ. (ಒಮ್ಮೆಲೇ ಹೊರಗಡೆ ದೃಷ್ಟಿ ಹಾಯಿಸಿ) ಯಾರೊ ಬಂದ್ಹಾಂಗ ಆತ್ರಿ–(ಹೊರಗೆ ಹಣಿಕೆ ಹಾಕಿ) ಇಲ್ರಿ–ಯಾರಿಲ್ಲ....ರಾಯ್ರು, ಸುಬ್ಬಲಕ್ಷ್ಮಿ ಅಂತ ಕರಕೊಂತಾರಲ್ರಿ, ಏನ್ರಿ ಗಪ್ಪ ಆದದ್ದು?

ರಾಯರು: ಐದು ವರ್ಷ ಕಂಟಿನ್ಯುಯಸ್ ಲೌವ್ ಮಾಡಿ, ಲೌವ್ ಮಾಡಿದವನ್ನs ಲಗ್ನ ಆಗಿ, ಲಗ್ನ ಆಗಿ ಎರಡು ವರ್ಷ ಆಗಿಲ್ಲ, ಸಂಸಾರದಾಗ ಲೀಕು ಕ್ರ್ಯಾಕು ಎರಡೂ ಸೇರಿ ಕ್ರಾನಿಕು

ರಂಗ: ಎಲ ಎಲ....ಕೆಟ್ಟ ನಸೀಬರಿ.

ರಾಯರು: ಯಾರಿಗೊ?–ನಮಗೆ ಗುಡ್ ಲಕ್ ಅಲ್ಲೇನು ರಂಗನಾಥ?

ರಂಗ: ಹ್ಯಾಂಗ್ರಿ ರಾಯ್ರು.... [ಒಮ್ಮೆಲೇ ಮುಖ ಅರಳಿ] ಅಂದ್ಹಾಂಗ ಹೌದ್ರಿ–ಬಂದ ಸರ್ತಿಗೊಮ್ಮೆ 20-25 ಕೊಟ್ಟs ಹೋಗತಾರ.

ರಾಯರು: ಆರು ವರ್ಷ ಅಷ್ಟು ನನ ಅಸಿಸ್ಟೆಂಟ್ ಆಗಿs, ಇನ್ನೂ ಅವೆ ಚೂರ ಆಗೆs ಉಳದಿ....ಪ್ರೊಫೆಶನಲ್ ಆsಗೊ–ಕಮರ್ಶಿಯಲ್ ಆಗೊ ಒಂದಿಷ್ಟು.

ರಂಗ: ಈ ಧಂಧೆದಾಗ ಸುಳ್ಳು ಬಹಳ ಹೇಳಬೇಕಾಗ್ತದರಿ-ನನ್ನ ಕೈಯಿಂದ ಆಗೂದುಲ್ರಿ....ಏನು ಇದ್ರೂ ಖರೆ ಹೇಳೂವಂವರಿ ನಾನು.

ರಾಯರು: ಸುಳ್ಳು ಹೇಳೂದಂದ್ರ ಅಷ್ಟು ಸರಳ ಅನಕೊಂಡೇನೊ?

ರಂಗ: ಸುಳ್ಳು ಹೇಳೂದು ಏನು ಮಹಾsರಿ....

ರಾಯರು: ಎಂಥ ಮೂರ್ಖ ಇದ್ದಿಯೊ ರಂಗ....ಸುಳ್ಳು ಹೇಳೂದು ಒಂದು 'ಸಾಧನೆ'!....ದೊಡ್ಡ ಕಲೆ!....ಖರೆ ಹೇಳೂದರಾಗ ಏನಿರತದ....? ಹಿಂದಿನ ಸ್ವಾಮಿಗಳ ಊಟ ಇದ್ಹಾಂಗ ಅದು ಉಪ್ಪಿಲ್ಲ ಖಾರಿಲ್ಲ....ಖರೆ ಜೀವಮಾನ ಹೇಳಬಹುದು....

ರಂಗ: ಸುಳ್ಳು ಹೇಳಿ ಬದುಕಬಹುದೇನ್ರಿ, ಹೇಳ್ರಿ ನೀವು.

ರಾಯರು: “ಉಪವಾಸ–ವನವಾಸ ಅನುಭವಿಸಿದ್ರೂ ಅಡ್ಡಿ ಇಲ್ಲ. ಸುಳ್ಳು ಹೇಳೂದುಲ್ಲ” ಅನ್ನೂs ತತ್ವ ಔಟ್‌ಡೇಟೆಡ್ ರಂಗಪ್ಪ.

ರಂಗ: ಎಷ್ಟು ದಿನ ಸುಳ್ಳು ಹೇಳ್ಲಿಕ್ಕೆ ಆಗ್ತದ....ಒಂದು ದಿನ ಬಕಬರ್ಲೆ ಆದ್ರ ಸೊಂಟ ಮುರಿಸಿಕೋಬೇಕಾಗತದರಿ

ರಾಯರು: ಒಂದು ರಹಸ್ಯ ಹೇಳತಿನಿ ಕೇಳು ಅಸಿಸ್ಟೆಂಟ್ ಇದ್ದವರಿಗೆ ಕೆಲವು ಮುಂದಿ ಇದನ್ನ ಕಲಸೂದುಲ್ಲ–ಕೇಳು....ಈ ಖರೆ ಹೇಳೂ ಜನ ಇರೂತನಕ, ಖರೆ ಹೇಳಬೇಕು ಅನ್ನೂ ಭಯ ಇರೂತನಕ, ಸುಳ್ಳು ಹೇಳೂವವರ ಜೀವನಕ್ಕೂ ಏನು ಕೊರತೆ ಇಲ್ಲ ನೋಡು.

[ರಂಗ ಏನೂ ತಿಳಿಯದಾಗಿ ರಾಯರ ಮುಖ ನೋಡತೊಡಗುತ್ತಾನೆ....ಹೊರಗೆ ಯಾರೊ ಬಂದಂತೆ ಅನಿಸಿ ಕಿವಿ ಅತ್ತ ಹೊರಳಿಸುವನು–-ಹೊರಗೆ ಹೋಗತೊಡಗುವನು....ರಾಯರು “ಬಾ ಇತ್ತ” ಎಂದು ಕೈಸನ್ನೆಯಿಂದ ಸೂಚಿಸುವರು....ಲಗು ಬಗೆಯಲ್ಲಿ ರಂಗ ರಾಯರ ಸನಿಹಕ್ಕೆ ಬರುತ್ತಾನೆ]

ಮಾಲಿಕ ಬಾಡಿಗಿ ಕೇಳ್ಲಿಕ್ಕೆ ಬಂದ್ರ....

ರಂಗ: (ನಡುವೆಯೇ) “ರಾಯರು ಇಲ್ಲ” ಅಂತ ಹೇಳಿ ಹೊತ್ತು ಹಾಕತೇನ್ರಿ

ರಾಯರು: ಹೀಂಗ ಸುಳ್ಳು ಹೇಳೂದು

ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ,

ಶ್ರೀ ಜಗದ್ಗುರು ಮೂರುಸಾವಿರ ಮಠ, ಹುಬ್ಬಳ್ಳಿ-೫೮೦೦೨೮

ಫೋನ್ : 63981, 62782, 62356

ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ ಟ್ರಸ್ಟಿನಿಂದ ಈಗಾಗಲೇ 250 ಅತ್ಯುತ್ತಮ ಧಾರ್ಮಿಕ ಗ್ರಂಥಗಳು ಪ್ರಕಟವಾಗಿವೆ

ಚಿಕ್ಕ ಮಕ್ಕಳ ಮನೋ ವಿಕಾಸಕ್ಕಾಗಿ ಭಾರತದ ಜೀವನದಲ್ಲಿ ಬೆಳಗಿದ ವೀರಶೈವ ಮಹಾ ಚೇತನಗಳ ಪರಿಚಯದೊಂದಿಗೆ **"ವೀರಶೈವ ಭಾರತಿ"** ಶಿರೋನಾಮದಿಂದ, ವರ್ಣರಂಜಿತ ಸಚಿತ್ರ ಕಿರು ಹೊತ್ತಿಗೆಗಳು ಪ್ರಕಟವಾಗುತ್ತಲಿವೆ. ಈ ಕಿರು ಹೊತ್ತಿಗೆಗಳಿಗಾಗಿ ೨೫೧ (ಎರಡು ನೂರಾ ಐವತ್ತೊಂದು) ರೂಪಾಯಿಗಳನ್ನು ನೀಡಿ ಆಜೀವ ಸದಸ್ಯರಾದವರಿಗೆ ಪ್ರತಿ ವರ್ಷವೂ ಅವರವರ ಹೆಸರಿನಲ್ಲಿ ೧೦ ಕಿರುಹೊತ್ತಿಗೆಗಳನ್ನು ಉಚಿತವಾಗಿ ಕಳಿಸಲಾಗುವುದು

ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳದ ವತಿಯಿಂದ ಪ್ರತಿ ತಿಂಗಳವೂ ಸಾಹಿತ್ಯ ಸಂಸ್ಕೃತಿ ಸೌರಭ ಸೂಸುವ **"ಪರಂಜ್ಯೋತಿ"** ಮಾಸಿಕ ಪತ್ರಿಕೆ ಪ್ರಕಟವಾಗುತ್ತಿದೆ. ಇದರ ವಾರ್ಷಿಕ ಚಂದಾ ಹಣ ೨೦-೦೦ (ಇಪ್ಪತ್ತು) ರೂಪಾಯಿಗಳು. ಆಜೀವ ಸದಸ್ಯತ್ವ ೨೦೧-೦೦ (ಎರಡು ನೂರಾ ಒಂದು) ರೂಪಾಯಿಗಳು ಹಾಗೂ ೨೫೦೧-೦೦ (ಎರಡು ಸಾವಿರದ ಐದುನೂರಾ ಒಂದು) ರೂಪಾಯಿಗಳನ್ನು ನೀಡಿದವರಿಗೆ "ಪರಂಜ್ಯೋತಿ"ಯನ್ನು ಉಚಿತವಾಗಿ ಕಳಿಸುವುದಲ್ಲದೇ, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳದಿಂದ ಪ್ರಕಟವಾಗಿ ಲಭ್ಯವಿದ್ದ ಎಲ್ಲ ಗ್ರಂಥಗಳನ್ನೂ ನೀಡಿ, ಮುಂದೆ ಪ್ರಕಟವಾಗುವ ಗ್ರಂಥಗಳನ್ನು ಪ್ರತಿ ವರ್ಷ ಅವರವರ ಹೆಸರಿಗೆ ಕಳಿಸಲಾಗುವುದು.

ಮೂರು ವರ್ಷಕ್ಕೊಮ್ಮೆ ಉತ್ತಮ ವೀರಶೈವ ಗ್ರಂಥಗಳಿಗೆ ಏಕೈಕ ಬಹುಮಾನ ೫೦೦೦-೦೦ (ಐದು ಸಾವಿರ) ರೂಪಾಯಿಗಳು ಮತ್ತು ಪ್ರತಿ ವರ್ಷವೂ ಕನ್ನಡ ಸಾಹಿತ್ಯ ಗ್ರಂಥಗಳಿಗೆ ಮೂರು ಬಹುಮಾನಗಳು, ಒಂದು ಸಾವಿರ ರೂಪಾಯಿಗಳಂತೆ ಸಮಾನಾಗಿ ಹಂಚಲಾಗುತ್ತಿದೆ. ಹಾಗೂ ವರ್ಷಕ್ಕೊಮ್ಮೆ ಶ್ರೇಷ್ಠ ಪತ್ರಿಕಾ ಪ್ರತಿನಿಧಿಗಳಿಗೆ (ಪತ್ರಕರ್ತರಿಗೆ) ಒಂದು ಸಾವಿರ ರೂಪಾಯಿಗಳ ಬಹುಮಾನವೂ ಇದೆ.

ಪ್ರತಿ ವರ್ಷವೂ ೨೫ ಗ್ರಂಥಗಳನ್ನು ಪ್ರಕಟಿಸುವ ಯೋಜನೆ ಮಾಡಲಾಗಿದೆ

ವಿವರಗಳಿಗಾಗಿ ಕೆಳಗೆ ಬರೆದ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಿರಿ

ಕಾರ್ಯದರ್ಶಿ

ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ,

ಮೂರು ಸಾವಿರ ಮಠ, ಹುಬ್ಬಳ್ಳಿ



ರೂಪ ಮಾಡಿಕೊಂಡವಕೆ ...

(ರಂಗನ ನಿಷ್ಕ್ರಮಣ... ಬಲರೂಮಿಗೆ ಬರುತ್ತಾನೆ....ರಾಯರು ಹೊರಗಿನ ರೂಮಿನೆಡೆಗೆ ಕಿವಿ ಹೊರಳಿಸಿ ನಿಲ್ಲುತ್ತಾರೆ....ಬಲ ರೂಮಿನಲ್ಲಿ ಒಬ್ಬ ಯುವತಿಯ ಪ್ರವೇಶ–ವಯಸ್ಸು 25ರ ಸುಮಾರು–ಕಣ್ಣಿಗೆ ಚಾಳೀಸು–ಹೆಗಲಿಗೆ ವ್ಯಾನಿಟಿ ಬ್ಯಾಗು. ರಂಗ ಅವಳನ್ನೇ ನೆಟ್ಟ ದೃಷ್ಟಿಯಿಂದ ನೋಡ ತೊಡಗುತ್ತಾನೆ–ರಂಗನ ಮುಖ ಅರಳ ತೊಡಗುವದು)

ಯುವತಿ : (ರಂಗನಿಗೆ) ಮುಗೀತಿಲ್ಲೊ ನೊಡೂದು ?

ರಂಗ : (ಪೆಚ್ಚಾಗಿ ನಕ್ಕು) ನನ್ನ ಇಕಿ.... ಆ....ನನ್ನ ಇಕಿ....ಫರ್ಸ್ಟ್ ಹೆಂಡತಿ ಇ....ಇಂಥ ಚಾಳೀಸು ಹಾಕ್ಕೊತಿದ್ಲರಿ....ಆಕಿ ನೆನಪಾಗಿ....

ಯುವತಿ : (ತಲೆಯ ಕಡೆಗೆ ಸನ್ನೆಮಾಡಿ) ಬರೋಬ್ಬರಿ ಇಲ್ಲ ಕಾಣತದೆ.

ರಂಗ: ಏನಂದ್ರಿ ?-ಏನೊ ಅಂದ್ರೆಲ್ಲ....

ಯುವತಿ: ತಲಿ ನಿಮ್ಮದು ಬರೊ....

ರಂಗ : (ಒಮ್ಮೆಲೇ)ತಿಳೀತ್ರಿ–ನನ್ನ ಮೂರನೆಯ ಹೆಂಡತಿ ಮಾತಿಗೊಮ್ಮೆ ಹೀಂಗs ಅಂತಿದ್ಲು ನೋಡ್ರಿ ಯಾಕೊ.

ರಾಯರು: (ಒಳಗಿನಿಂದ) ರಂಗs, ಯ್ಯಾರೊ ?

ಯುವತಿ: ಯಾರು ಅವರು ?.

ರಂಗ: "ನೀವು ಯಾರು" ಅಂತ ಕೇಳತಾರ –ಯಾರರಿ ನೀವು ?

ಯುವತಿ: (ಸಿಡುಕಿ) ಹ್ಯಾಗೆ ನೋಡತದ ಪ್ರಾಣಿ.

ರಂಗ: ನನ್ನ ಹೆಂಡತಿ ನೆನಪಾಗಬಾರದೇನ್ರಿ....

(ಅದೇ ಸಮಯಕ್ಕೆ ರಾಯರು ಬಲ ರೂಮಿನಲ್ಲಿ ಪ್ರವೇಶಿಸುತ್ತಾರೆ.)

ರಾಯರು: (ರಂಗನಿಗೆ) ಬೆಂಚಿನ ಮ್ಯಾಲೆ ಕೂಡು ರಂಗಣ್ಣ.

ಯುವತಿ: ಯಾರರಿ ಇವ?....

ರಾಯರು : ಇವೊ ಒಂದು ಕ್ರ್ಯಾಕ್ ಆದ ಸಂಸಾರದ ಅವಶೇಷ....

ರಂಗ: (ನಡುವೆಯೇ)ಇವರ ಅಸಿಸ್ಟೆಂಟ್ರಿ ನಾನು.

ರಾಯರು : ಈಗ ಇನ್ನೂ ಬೆಟರು. ಮೊದಲ ಕಂಡವರಿಗೆ ಕಲ್ಲು ಒಗೀತಿದ್ದ.

(ಯುವತಿ ಗಾಬರಿಯಾಗಿ ಎರಡು ಹೆಜ್ಜೆ ಹಿಂದೆ ಸರಿಯುವಳು–ರಂಗ ಎರಡು ಹೆಜ್ಜೆ ರಾಯರ ಬಳಿಗೆ ಹಾಕುವನು)

ರಾಯರು: ಮೈ ಕೈ ಪರಚೋತಿದ್ದ–ತನ್ನ ಮೈ ತನ್ನ ಕೈಲೆ....

(ಯುವತಿ ಮತ್ತೆ ಎರಡು ಹೆಜ್ಜೆ ಹಿಂದೆ ಸರಿಯುವಳು–ರಂಗ ರಾಯರ ಸನಿಹಕ್ಕೆ ಬರುತ್ತಾನೆ)

ರಂಗ: ಹಾಂಗ ನಾನು ಮೈಕೈ....

ರಾಯರು: ಲೀಟೊ ನೀನುs....ಹೋಗಿ ಕೂಡು ಹೋಗು....(ಯುವತಿಗೆ) ಬರ್ರಿ ನೀವು.

(ರಾಯರು ಎಡ ರೂಮಿನಲ್ಲಿ ಪ್ರವೇಶಿಸುವರು–ಆಕೆ ರಂಗನನ್ನು ಹೊರಳಿ ನೋಡುತ್ತ ರಾಯರನ್ನು ಹಿಂಬಾಲಿಸುತ್ತಾಳೆ....ಸುತ್ತಲೂ ನೋಡತೊಡಗುವಳು. ರಾಯರು ಇದನ್ನು ಗಮನಿಸುವರು)

ರಾಯರು : ನನ್ನ ಆಫೀಸು ಇದು.

ಯುವತಿ: (ಬೆಚ್ಚಿ) ಏನಂದ್ರಿs ?

ರಾಯರು: ಇದುs, ನನ್ನ ಆಫೀಸು.

ಯುವತಿ: (ಪೆಚ್ಚಾಗಿ) ಸ–ಸಹsಜ–ಸಹ್ಜಜ ನೋಡ್ದೆ–(ಕುರ್ಚಿಯ ಕಡೆಗೆ ಸನ್ನೆ ಮಾಡಿ) ಕೂಡ್ಲೇನ್ರಿ.

ರಾಯರು: ಕೂತ್ರ ಬೀಳತೀರಿ....

(ಯುವತಿ ಏನೂ ತಿಳಿಯದಾಗಿ ರಾಯರನ್ನು ನೋಡುತ್ತಾಳೆ) ತಿಳೀಲಿಲ್ಲ–ಸಂಸಾರದಾಗ ಬಿದ್ದು ಹಣ್ಣಾಗಿ ಇಲ್ಲಿಗೆ ಬಂದವರಿಗೆ, ಆ ಕುರ್ಚಿ ಮ್ಯಾಲೆ ಕೂಡ್ರಿಸಿ ಬೀಳಸೂದಂದ್ರ....

(ಯುವತಿ ಕುರ್ಚಿಯನ್ನೊಮ್ಮೆ–ರಾಯರನ್ನೊಮ್ಮೆ ನೋಡುತ್ತಾಳೆ) ಇನ್ನೂ ತಿಳಿದಿಲ್ಲ–ಆ ಕುರ್ಚಿ ಕೈ–ಕಾಲು ಎಟ್ಸೆಟ್ರಾ, ಎಟ್ಸೆಟ್ರಾ ಒಂದು ಆಳತಿ ಝೋಲಿ ಮ್ಯಾಲೆ

ನಿಂತಾವ-ಮುಟ್ಟಿದ್ರ ಬೀಳತಾವ-ಸಿಂತs ಮಾತಾಡ್ರಿ-

ಯುವತಿ: (ಕುರ್ಚಿಯನ್ನೊಮ್ಮೆ-ರಾಯರ ನ್ನೊಮ್ಮೆ ನೋಡುತ್ತಾಳೆ) ನನ್ನ ಹೆಸರು ಕುಸುಮ್ಮಾರಿ.

ರಾಯರು: ಅಡ್ಡಿಯಿಲ್ಲ-ಮುಂದೆ.

ಯುವತಿ: ನೌಕರಿ ಮಾಡತೇನ್ರಿ, 1200 ರೂಪಾಯಿ ಪಗಾರ ಬರ್ತsದರಿ-

ರಾಯರು: ಬರ್ಲಿ-ಮುಂದೆ.

ಯುವತಿ: ನನ್ನ ಯಜಮಾನರಿಗೆ ನನ ಕ್ಕಿಂತ 50 ರೂಪಾಯಿ ಕಡಿಮೆ ಪಗಾರರಿ.

ರಾಯರು: ಇವನ್ನೆಲ್ಲ ನನಗ್ಯಾಕ ಹೇಳ ತೀರಿ?....ದವಾಖಾನಿಗೆ ಹೋದಾಗ ಡಾಕ್ಟರ ಮುಂದೆ ಜಡ್ಡು ಏನಾಗೇದ ಹೇಳಬೇಕೊ....

ಯುವತಿ: ನಂದು ಒಂದಿಷ್ಟು ವಿರಳ ವಿರಳsರಿ ಹೇಳೂದು....ನನ್ನ ಗಂಡಗ ಸಿಟ್ಟು ಹಿಂಗ....

ರಾಯರು: ಸ್ವಾಭಾವಿಕ ಸಿಟ್ಟು ಬರೂದು ಯಾಕ ಬಂದ್ರಿ ಇಲ್ಲಿಗೆs ?

ಯುವತಿ: ನನ್ನ ಲಗ್ನ ಆಗಿ 5 ವರ್ಷ, 8 ತಿಂಗಳ, 3 ದಿನ....

ರಾಯರು: 2 ತಾಸು, ಒಂದು ಮಿನಿಟು ಆಗೇದ. ಇಾವಲ್ಲೊ ?

ಯುವತಿ: ಹೌದ್ರಿ-ಹ್ಯಾಂಗ ತಿಳಕೊಂಡ್ರಿ ಸರ ನೀವು ?

ರಾಯರು: ಆ ಮಾತಿಗೆ ಮುಂದ ಬರೂಣಂತೆ-ಯಾಕ ಬಂದ್ರಿ, ಝಟಾಪಟ್ ಹೇಳ್ರಿ.

ಯುವತಿ: ಸಂಸಾರ ತಲಿಶೂಲಿ ಆಗೇದ ಸರ.

ರಾಯರು: ತಲಿಶೂಲಿಯ ಇನ್ನೊಂದು ಹೆಸರು ಅಂದ್ರs ಸಂಸಾರ....ನನ್ನ ಕೇಳಿದ್ರ,ಅದಕ್ಕೆ ಸರಿಯಾದ ಡೆಫಿನಿಶನ್ ಯಾರಿಗೂ ಸಿಕ್ಕಿಲ್ಲ-ಸಿಗೂದುsಇಲ್ಲ.... ಕಮಿಂಗ ಟು ದಿ ಪಾಯಿಂಟ ನಿಮ್ಮ ಸಂಸಾರದ ಲಕ್ಷಣಹೇಳ್ರಿ ಒಂದೊಂದಾಗಿ ನಂಬರ್ ಒನ್

ಯುವತಿ: ಇತ್ಲಿತ್ಲಾಗಿ ಬರೇ ಸಿಟ್ಟು ಮಾಡತಾರರಿ. ಇಲ್ಲಾಂದ್ರ ಮುದ್ದಿ....



ನೇತ್ರದಾನ

'ದಾನಗಳಲ್ಲಿ ಶ್ರೇಷ್ಠ
ಯಾವ ದಾನ ?
ಪ್ರಶ್ನಿಸಿದಳು ಮೀನ ;
"ಪತ್ನಿ ಪತಿಗರ್ಪಿಸುವ
ನೇತ್ರ-ದಾನ" ಎಂದಾಗ
ಮತ್ತೊಂದಾಡದೆ ಆಕೆ
ಆಗಬೇಕೆ ಮೌನ ?'

—ಅಶೋಕ ಚೊಳಚಗುಡ್ಡ

ಬಸಪ್ಪನ್ಹಾಂಗ ಕೂತು ಬಿಡತಾರರಿ....

ರಾಯರು: ಹ್ಯಾಂಗ ಕೂಡತಾರ ಅಂದ್ರಿs ?

ಯುವತಿ: ಮುದ್ದಿ ಬಸಪ್ಪ ಇರತಾನಲ್ರಿ ಮಾತಿಲ್ಲ-ಕತಿ ಇಲ್ಲ.

ರಾಯರು: ಇರತಾವ ಅಂತ ಕೇಳಿಸಿ.... ಎಷ್ಟು ದಿನ ಆದ್ವು ಈ ಬಸಪ್ಪನ ಟೈಪ ಕೂಡ್ಲಿಕ್ಕೆ ಹತ್ತಿ ?

ಯುವತಿ: ಹೆಚ್ಚು ಕಡಿಮಿ ಮೂರು ವರ್ಷ ಆಗಿರಬೇಕ್ರಿ.

ರಾಯರು: ಫೈವ್ ಪೈಸ್ ಥ್ರೀಹೂಂs- ಮುಂದ ಹೇಳ್ರಿ.

ಯುವತಿ: ಮೊನ್ನೆ ಕಾರಣ ಇಲ್ದ ನನ್ನ .ಸೀರಿ ಸುಟ್ಟಬಿಟ್ರು.

ರಾಯರು: ಪುಣ್ಯs - ನಿಮ್ಮನ್ನs ಸುಟ್ಟಿಲ್ಲs....

ಯುವತಿ: ಸಣ್ ಆಗಿ ಸುಡಲಿಕ್ಕೆs ಹತ್ಯಾರಲ್ರಿ ಮೂರು ವರ್ಷದಿಂದ.

ರಾಯರು: ಮನ್ಯಾಗ ಅತ್ತಿ-ಮಾವ ಎಕ್ಸೆಟ್ರಾ ಯಾವರ ಹಳೆ ಇಸಮು ?

ಯುವತಿ: ಯಾರಿಲ್ರಿ.

ರಾಯರು: ಅಂದ್ರ ಬಡವಾಡ್ಲಿಕ್ಕೆ ಕ್ಲಿಯರ ಸ್ಟೇಜ್ ಆದsನ್ರಿ ಮನ್ಯಾಗ...ಹೂಂss ...ನಿಮ್ಮ ಲಗ್ನ ಆದದ್ದು ಹ್ಯಾಂಗ, ಐ ಮೀನ್ ಜಾತಕದ ಮ್ಯಾಚ್ ಪ್ರಕಾರೊ ಅಥವಾ ನೀವs ನೋಡಿ ಇವೊತ್ತಾಳಿನ ಫ್ಲಾಶ್ ಮ್ಯಾರೇಜ್ ಪ್ರಕಾರೊ ?

ಯುವತಿ: ಫ್ಲಾಶ್ ಮಾರೇಜ್ ಹ್ಯಾಂಗ ಇರತsದ್ರಿ ?

ರಾಯರು: ಅ ದೊ ೦ ದು ಗಡ್ಲದ ಫಾರ್ಮುಲಾ ಹ್ಯಾಂಗ ಆಗತದಹ್ಯಾಂಗ ಮುರದು ಹೋಗ್ತದ ಅಂಬೂದು ತಿಳಿ ಯೂದುಲ್ಲ.

ಯುವತಿ: ನಮ್ಮದೇನು ಹಾಂಗ ಆಗಿಲ್ರಿ ...ಬಂದು ಬಿಟ್ಟು ಹತ್ತು ಸಾರೆ ಬಂದು ನನ್ನ ನೋಡಿ, ಮಾತಾಡ್ಸಿ, ದಾಡ್ಸಿ, ಅಡ್ಯಾಡಸಿ ಓದ್ಸಿ,20,000ರೂಪಾಯಿ ನಮ್ಮಪ್ಪಂಗ ಸಾಲಾ ಮಾಡ್ಲಿಕ್ಕೆ ಹಚ್ಚಿಸಿ ಲಗ್ನ ಆದ್ರ ಈ ಹಣೆಯಬರಹ.

ರಾಯರು: ನಿಮ್ಮ ಗಂಡ ಲಗ್ನ ಆಗೂ ಮೊದಲ ಅಥವಾ ಹಿಂದಾಗಡೆ, ಇವೊತ್ತಾಳಿನ ಚಾಲತಿ ಹವಾ ಅದ ಅಲ್ಲ, ಪ್ರೀತಿ-ಪ್ರೇಮ ಅಂತ, ಅದರಾಗ ಏನರ ಸಿಕ್ಯ...?

ಯುವತಿ: ಅವರು ಅಂಥವರ್ಹಾಂಗ ಕಾಣೂದುಲ್ರಿ

ರಾಯರು: "ಅಂಥವರ್ಹಾಂಗ" ಅಂದ್ರೇನು ಅಂಥವರಿಗೆ ಸ್ಪೇಶಲ್ ಪರ್ಸನ್ಯಾಲಿಟಿ ಇರತದೇನು.

ಯುವತಿ: ಹಾಂಗಲ್ರಿ, ನನ್ನ ಫ್ರೆಂಡ ಮನಿಗೆ ಬಂದಾಗ- ಇವರು ಮುಖ ಸಹ ಎತ್ತಿ ಅವರ್ನ ನೋಡೂದುಲ್ಲ.

ರಾಯರು: ಹೆಚ್ಚಾಗಿ ನಿಮ್ಮ ಅವರ ದುಸುಮುಸು ಯಾವ ವಿಷಯಕ್ಕ ಪ್ರಾರಂಭ ಆಗ್ತದ, ವಿಚಾರ ಏನರ ಮಾಡೀರೇನು ?

ಯುವತಿ: ದುಸುಮುಸು ಗುಡಿ ಬಗ್ಗೆsರಿ.

ರಾಯರು: ಗುಡಿಗೆ ಹೋಗು ಅಂತಾ ರೇನು ನಿಮಗೆ ?

ಯುವತಿ : ಇಲ್ರಿ- ತಮ್ಮ ಜತೀಗೆ ಬಾ ಅಂತಾರ.

ರಾಯರು : ಡೀಸೆಂಟ್ ಆಗಿ ಹೇಳ್ರಿ.

ಯುವತಿ : [illegible] ಮುಂದ ಅವರು ಪಂಚಾ ಉಟಗೋತಾರರಿ, ತಮ್ಮ ಜತಿಗೆ ಬಾ ಅಂತಾರ–ನನಗ ಅದು ಸೇರೂದುಲ್ರಿ– ಪ್ಯಾಂಟು ಹಾಕ್ಕೊಳ್ರಿ ಅಂತ ನಾನು ಸುರುS ಮಾಡತೀನಿ ನಾನು ಒಂದು ಅನ್ನ ಅವರೊಂದು ಅನ್ನ.

ರಾಯರು : ಹ್ಯಾಂಗ್ ಎಂಡ್ -ಆಗ್ತದ ಅದುS ?

ಯುವತಿ : ಕಪ್ಪುಬಸಿ ನೆಲಕ್ಕ ಅಪ್ಪಳಸತಾರರಿ... ಇಲ್ಲಾಂದ್ರ....

ರಾಯರು : ಫಾರ್ಮುಲಾ ಮರತಾಗ ಮುಂದೇನು ಮಾಡಬಹುದು ಗೊತ್ತಾತು ಬಿಡ್ರಿ.

ಯುವತಿ: ಲಗ್ನ ಅಂತ ಯಾಕರ ಮಾಡಿಕೊಂಡ್ನ್ಯೋ ಅಂತ ಆಗೇದ ನೋಡ್ರಿ

ರಾಯರು : ಇದು ನಿಮ್ಮ ಒಬ್ಬರ ಪ್ರಶ್ನಿ ಅಲ್ಲ....ಈಗಿನ ಕಾಲದ ಮುಸಿಮುಸಿ ಒಳಗ ಈ ಪ್ರಶ್ನಿ ಅದ. ಇದಕ್ಕ ಬಹಳ ಕಾರಣ ಅದ...ಓದೂ ಮನುಷ್ಯಾಗ [illegible] ನಿಮ್ಮಂಥ ಪ್ರಶ್ನಿ [illegible] ಸ್ವಾಭಾವಿಕ. ಓದೂದು [illegible], ಅಂತಿಗಾಲು ಹಾಕೂದು [illegible]–ಇವ್ರಗಳ ಮಂಥನ ನಡದದ. ಆಧುನಿಕ ವಿಚಾರ, ಪುರಾತನ ಬಾಟ್ಲಿ ಒಳಗ ಹಾಕಿ ಇಟ್ರಿ, ಬಾಟ್ಲಿ ಒಡದು ಹೋಗೂ ಹಾಂಗ ಆಗೂದು ಸಹಜ. ತ್ರಿಶಂಕು ಕಾಲ ಇದು.

ಯುವತಿ : (ಭಾವುಕಳಾಗಿ) "ನಿನ್ನ ಮಾತು ಮಲ್ಲಿಗೆ! ನಿನ್ನ ಅಧರ ಅಮೃತ (ಎರಡು ಬಾರಿ ಅದೇ ನುಡಿ ಅನ್ನುತ್ತಾಳೆ) ಈ ಕವನ ಓದಿ....

ರಾಯರು: "ನನ್ನ ಗಂಡ ಹೀಂಗ ಅನಬೇಕು, ಅನ್ನತಾರ" ಅಂತ ತಿಳದಿದ್ರಿ ಲಗ್ನ ಆಗೂ ಮೊದಲ.

ಯುವತಿ: ಹೌದ್ರಿ,

ರಾಯರು : ಇಲ್ನೋಡ್ರಿ....ಈ ಬರಿಯೂ ಜನ್ಮದ ಹಣೇಬರಹ ಅದು....ಅಮೃತ ಅಂದ್ರ ಏನು, ಮಲ್ಲಿಗೆ ಅಂದ್ರ ಏನು ಅಪ್ಪಗ್ಗ [illegible] ಗೊತ್ತಿಲ್ಲದುಲ್ಲ....ವಿ[illegible] ಕುಡಕೋತ ಅಮೃತದ ಕನಸ[illegible] ಕಾಣೂ ಜನ ಇದು–ಇದನ್ನ ಬರೀಲಿ[illegible] ....ಓದಿ ಮರೀಲಿಕ್ಕ ನೀವು ನೆನ[illegible] ಇಟಗೊಂಡ ತಪ್ಪು ಮಾಡೀರಿ.

ಯುವತಿ : ಏನರ ಮಾಡಿ ನಮ್ಮ ಸಂಸಾರಿಪೇರಿ ಮಾಡ್ರಿ ಸರ.

ರಾಯರು : ಆತು ಆತು.

ಯುವತಿ : ಏನರ ಮಂತ್ರ–ತಂತ್ರ ಮಾ[illegible]ತೀರೇನ್ರಿ ?

ರಾಯರು : ಏ ನಿ ಲ್ಲ... ರಿಕನ್‌ಸ್ಟ್ರ[illegible]ಕ್ಷನ್ !...ಯಾವ ಶಬ್ದ ಯಾ[illegible] ಹೊತ್ತಿನಾಗ ಉಪಯೋಗಿಸಬೇಕ[illegible] ಅಂಬೂದು ಹೇಳಿಕೊಡತೀನಿ....ನಿಮ್[illegible] ಯಜಮಾನ್ರು ಪಂಚಾ ಉಟಗೊಂಡ[illegible] ಗುಡಿಗೆ ನಡಿ ಅಂತ ನಿಮಗ ಅಂದಾ[illegible] ಹ್ಯಾಂಗ ತಪ್ಪಿಸಬೇಕು ಆ ಸಂದರ್ಭ[illegible] ಅಂಬೂದು ಹೇಳಿಕೊಡತೀನಿ....ಅ[illegible]ರೊಂದು ಅನ್ನ...ನೀವೊಂದು ಅನ್ನ[illegible] ಏನು ನಡೀತದಲ್ಲ....ಅದನ್ನ ಹ್ಯಾಂ[illegible] ಹೊಂದಾಣಿಕೆ ಒಳಗ ಬದಲಿಸಬೇಕ[illegible]

ಒಂಬೂ ಫಾರ್ಮುಲಾ ಹೇಳಿಕೊಡ ತೀನಿ.... ನಾನು ಹೇಳಿದ್ಹಾಂಗ ಮನ್ಯಾಗ ನೀವು ನಡಕೋಬೇಕು. ಅಂದ್ರ ನಿಮ್ಮ ಸಂಸಾರ ರಿಪೇರಿ ಆಗ್ತದ.

(ಯುವತಿ ಬ್ಯಾಗ್‌ನಿಂದ ನೂರು ರೂಪಾ ಯಿಯ 2 ನೋಟು ತೆಗೆದು ರಾಯರಿಗೆ ಕೊಡುತ್ತಾಳೆ.)

ತೊಗೊಳ್ರಿ.... ಇನ್ನೊಮ್ಮೆ ಬಂದಾಗ ಉಳದದ್ದು ಕೊಡತೀನ್ರಿ.

ರಾಯರು: ಆತು ಆತು (ಟೇಬಲ್ ಬಳಿ ಹೋಗಿ 5-6 ಕಾಗದ ಎತ್ತಿಕೊಂಡು ನೋಡಿ, ಜೋಡಿಸಿ ಯುವತಿಗೆ ಕೊಡು ವರು)

ಇದು ಪ್ರಶ್ನಾವಳಿ ಮ್ಯಾಡಮ್.... ಇದ ರೊಳಗಿನ ಪ್ರಶ್ನೆಗೆ ನಿಮ್ಮ ಪ್ರತಿಕ್ರಿಯೆ ಬರದು ತಂದುಕೊಡ್ರಿ.... ಪ್ರಶ್ನೆ ಎಂಥದ್ದs ಇರ್ಲಿ, ನಾಚದ, ಮುಚ್ಚುಮರಿ ಇಲ್ದ, ನಿಮ್ಮ ಪ್ರತಿಕ್ರಿಯೆ ಬರೀರಿ.... ಇದು ಬಹಳ ಮಹತ್ವದ್ದು-ಇದರ ಮ್ಯಾಲೆ ನಿಮ್ಮ ಸಂಸಾರದ ರಿಪೇರಿ ಅವಲಂಬಿಸಿರತದ. ನನ್ನೊಬ್ರ ಈ ಕಾಗದ ನೋಡೂದುಲ್ಲ ನಿಮ್ಹೊರತು ಏನು ಅಳುಕು ಇಲ್ಲ....

(ಯುವತಿ ಕಾಗದ ತೆಗೆದುಕೊಂಡು ವಿಚಿತ್ರ ದೃಷ್ಟಿ ಹಾಯಿಸುವಳು. ಒಂದು ನಿಮಿಷದ ನಂತರ ನಗುಬಂದು, ತಡೆ ಯಲು ಯತ್ನಿಸುತ್ತಾಳೆ.)

ಯುವತಿ: ಬರದು ತಂದುಕೊಡತೀನ್ರಿ.

ರಾಯರು: ಒಳ್ಳೇದು, ನಡೀರಿ ಇನ್ನ.

(ಯುವತಿ ನಮಸ್ಕರಿಸಿ ರಂಗದ ಬಲ ಸೈಡ್‌ವಿನ್ನೆಡೆಗೆ ಹೋಗುವಳು. ರಾಯರು ತಡೆಯುವರು)

ರಾಯರು: (ಎಡ ದಿಕ್ಕಿಗೆ ಸನ್ನೆ ಮಾಡಿ) ಇತ್ಲಾಗಿಂದ ಮ್ಯಾಡಮ್ ಅಲ್ಲೆ ಒಂದು ಬಾಗಲ ಅದ ಹೊರಗೆ ಹೋಗ್ಲಿಕ್ಕೆ.... ನೀವು ಬಂದದ್ದು ಮತ್ತೊಬ್ಬರಿಗೆ ತಿಳೀs ಬಾರ್ದು s ಅಂತ ಈ ಅರೇಂಜ ಮೆಂಟು... ಹೋಗ್ರಿ.

(ಯುವತಿಯ ನಿಷ್ಕ್ರಮಣ.... ರಂಗದ ಬಲ ರೂಮಿನಲ್ಲಿ ಒಬ್ಬ ಯುವಕನ ಪ್ರವೇಶ... ರಂಗ ಹಲ್ಲು ಕಿರಿಯುತ್ತ ಅವನ ಹಿಂದೆಗೆ ಬರುತ್ತಾನೆ.... ಯುವಕ 5 ರೂಪಾ ಯಿಯ ನೋಟು ಅವನಿಗೆ ಕೊಡು ತ್ತಾನೆ.)

ರಂಗ: ಏನು ತರಬೇಕ್ರಿ?

ಯುವಕ: ನಿನಗ ಬಕ್ಷೀಸು.

ರಂಗ: ಲಂಚ ತೊಗೋಬಾರದಂತ್ರಿ.

ಯುವಕ: ಲಂಚ ಅಲ್ಲ ಇದು....

ರಂಗ: ಅಲ್ಲ ಹೌದಲ್ರಿ ಮತ್ತ .... ತೊಗೊಂಡ್ರ ಬಿಡು ಅಂತೀರಾ?

ಯುವಕ: ತೊಗೊ.... ಚೈನಿ ಹೊಡಿ. ಇದ ಗೊಂದು ರೂಢ ಇಲ್ಲ ಕಾಣತದ.... ಲಂಚ ಅಲ್ಲ ತೊಗೊ....

ರಂಗ: ಮಾಮೂಲು ಅಂತೇನೊ ಅಂತಿರ. ತಾರಲ್ರಿ, ಅದೇನ್ರಿ ಮತ್ತ.

ಯುವಕ: ಲಂಚ ತೊಗೊಂಡ್ರೂ, ಲಂಚ ಅಲ್ಲ ಅಂತ ಅನಕೋತ ತೊಗೊಂಡು ಬಿಟ್ರ ಆತದ.

ರಂಗ: ನಿಮಗೂ ಇದರ ಬಗ್ಗೆ ಬಹಳ ಮಾಹಿತಿ ಅದ ಬಿಡ್ರಿ.

ಯುವಕ: ಮಾಹಿತಿ-ಅನುಭವ ಎರಡೂ ಬೇಕು ಬದುಕಲಿಕ್ಕೆ ಇವೊತ್ನಾಳೆ.... ಹೌದಲ್ಲೊ....

(ಮೆಲ್ಲನೆ ನಕ್ಕು) ತೊಗೊ ಹಿಡಿ....

(ರಂಗ ತೆಗೆದುಕೊಂಡು ಕಣ್ಣಿಗೆ ಒತ್ತಿ ಕೊಂಡು ಕಿಸೆಯಲ್ಲಿ ಹಾಕಿಕೊಳ್ಳುತ್ತಾನೆ.)

ರಂಗ: (ಏರುಸ್ವರದಲ್ಲಿ) ಸುಬ್ಬಣ್ಣಾ ಬಂದಾರs....

ರಾಯರು: ಕಳಸು ಒಳಗ.

(ಯುವಕ ರಂಗದ ಎಡ ರೂಮಿನಲ್ಲಿ ಪ್ರವೇಶಿಸುತ್ತಾನೆ)

ಯುವಕ: (ಒಮ್ಮೆಲೇ) ಚಮತ್ಕಾರ ಆಗೇದ್ರಿ ಮನ್ಯಾಗ.... ನನ್ನ ಹೆಂಡತಿ ಮ್ಯಾಲೆ ಚಮತ್ಕಾರ ಆಗೇದ.

ರಾಯರು: ಆಗಲಿಕ್ಕೆs ಬೇಕು... ನನ್ನ ಫಾರ್ಮುಲಾ ಹಾಂಗ ಇರತಾವ.... ಸುಬ್ರಾಯ.... ಏs ಸುಬ್ರಾಯ.

ಯುವಕ: ಮರತಿದ್ನೆರಿ- (ಕಿಸೆಯಿಂದ 20 ರೂಪಾಯಿ ತೆಗೆದು ರಾಯರಿಗೆ ಕೊಡು ತ್ತಾನೆ)

ರಾಯರು: ನೆನಪು ಮಾಡಿಕೊಡೂದs ನನ್ನ ದಂಧೆ.... ಈಗ ಹೇಳು.

ಯುವಕ: ನೀವು ಹೇಳಿದ ಪ್ರಕಾರ-ನೋಡ ಚೀಟಿ ಕೊಟ್ಟು ಬಿಡತೀನಿ; ಆರಾಮ ಇರು" ಅಂತ ಹೆಂಡತಿಗೆ ಹೇಳ್ದೆ ನೋಡಿ 'ಹೋ' ಅಂತ ಅಳ್ಲಿಕ್ಕೆ ಹತ್ತಿ ಬಿಟ್ಲು....

ರಾಯರು: ಅಳ್ಲಿಕ್ಕೆs ಬೇಕು.... ನನ್ನ ಕ್ಯಾಲ್‌ಕ್ಯುಲೇಶನ್ ಹಾಂಗs ಇತ್ತು.

ಯುವಕ: ಲಗ್ನ ಆಗಿ ಬಂದ ಮ್ಯಾಲೆ ಆಕಿ ಕಣ್ಣಾಗ ನೀರು ನೋಡಿದ್ದು ಅಂದ್ರ ನಿನ್ನೆs ನೋಡ್ರಿ.... ರಾತ್ರಿ ಶಿರಾ ಏನು ಮಾಡೂದು, ಕಾಲು ಒತ್ತೂದು ಏನು....

ರಾಯರು: (ತಲೆ ಚಚ್ಚಿಕೊಂಡಂತೆ ನಟಿಸಿ) ಶಿರಾ ತಿಂದs ಬಿಡಬಾರ್ದಿತ್ತs....

ಯುವಕ: ಇಲ್ರೀ- ತಿನ್ನಲಿಲ್ಲ.... ಎಷ್ಟು



ಪ್ರೇಮ ನಕಾಶ

ನೀನೇನೊ ನನಗೆ ಅಪರಿಚಿತಳಂತೆ
ವರ್ತಿಸುತ್ತಿರುವಿ
ಆದರೆ ನೀ ಕಂಡಾಗಲೆಲ್ಲ
ನಿನ್ನ ತುಟಿಗಳ ಮೇಲಿನ
ನನ್ನ ಗುರುತಿನ್ನೂ
ನಿಚ್ಚಳವಾಗೇ ಕಾಣುತ್ತಿದೆ
ನಿನ್ನ ಕಣ್ಣುಗಳಲಿ ನಾ ಬರೆದ
ಪ್ರೇಮ ನಕಾಶದ
ರೇಖೆಗಳಿನ್ನೂ ಸ್ಪಷ್ಟವಾಗಿ
ಗೋಚರಿಸುತ್ತಿವೆ
ಅಂದಾಗ ನೀ ಅಪರಿಚಿತಳೆಂದು ನಾ
ಹೇಗೆ ಭಾವಿಸಲಿ ನಾ ಹೇಗೆ
ವರ್ತಿಸಲಿ

—ಗವೀಶ ಹಿರೇಮಠ

ತಂಗಲಾಚಿದ್ರೊ, ಕಲ್ಲು ಕಲ್ಲು ಕೂತ್ಹಂಗ ಕೂತಿದ್ದೆ ಬಿಡ್ರಿ.

ರಾಯರು: ಬಿಗಿ ಇರು ಹಿಂಗs....

ಯುವಕ: ಇಷ್ಟು ಲಗು ಹಾದಿಗೆ ಬರತಾಳ ಅಂತ ತಿಳಿದಿದ್ದಿಲ್ಲ. ಬಿಡ್ರಿ ರಾಯರ.

ರಾಯರು: ಪೂರ್ಣ ಹಾದಿಗೆ ಬಂದ ಲಕ್ಷಣ ಅಲ್ಲ ಏನಪ ಇದು....ಒಮ್ಮೊಮ್ಮೆ ನಮ್ಮ ಫಾರ್ಮುಲಾ ನಮಗs ಕೈಕೊಡತದ....ಅವಾಗ ಬ್ಯಾರೆ ಫಾರ್ಮುಲಾ ಹಚ್ಚಬೇಕಾಗ್ತದ.... ಅದೂ ಒಂದು ದೊಡ್ಡ ಸೈನ್ಸ್ ಏನಪ....ಆದ್ರ ಒಂದು ಹೇಳತೀನಿ, 15-20 ದಿನ ಏನು ಜುಲಿಮಿ ಮಾಡಿ ತಿನಸಲಿಕ್ಕೆ ಬಂದ್ರೂ, ಬಿಗಿ ಇರು.... ಕರಗಬ್ಯಾಡ.... ನಿನ್ನ ಸಂಸಾರ ರಿಪೇರಿ ಆಗ್ತದ.

ಯುವಕ: ಕಾಯಂ ರಿಪೇರಿ ಆಗ್ತದ ಹೌದಲ್ರಿ ?

ರಾಯರು: ಸಂಸಾರ ಅಂದ್ರ 'ಕಾಯಂ' ಅಂಬೂ ಮಾತಿಲ್ಲ ಏನಪ....ಇಲಿ ಪೊಕ್ಕ ಮನಿ ಇದ್ಹಂಗ ಅದು....ಒಂದು ಆಳತಿs ಮ್ಯಾಲೆ ನಿಮ್ಮ ಗಾಡಿ ಸಾಗತದ.

ಯುವಕ: ಮೊದ್ಲ ಅಷ್ಟು ಆದ್ರ ಸಾಕ್ರಿ.... ಮನಿ ಅಂದ್ರ ನರಕ ಆಗಿ ಹೋಗೇದ. "ಡೈವರ್ಸ್ ಕೊಡತೀನಿ" ಅಂತ ನಾನು ಅಂದಾಗ ಅಯ್ಯ ಗಂಡ್ಸs, ಡೈವರ್ಸ್ ಕೊಡ್ತs ಮಸಡಿ ನೋಡು....ಕೊಟ್ಟರ ಕೊಡೊ ಗಂಡ್ಸ ಅಂತ ಎಲ್ಲಿ ಆಕಿ ಅಂತಾಳೊ ಅಂತ ಮಾಡಿದ್ದೆ ಬಿಡ್ರಿ.

ರಾಯರು: ಇಂಪಾಸಿಬಲ್...."ಈ ಮಾತು ಅಂದ್ರ ಏನು ರಿಯಾಕ್ಷನ್ ಬರತದ" ಅಂಬೂದು ವಿಚಾರ ಮಾಡಿ ಹೇಳಿ ಕೊಟ್ಟಿರತೀನಿ ನಾನು.

ಯುವಕ: ಇನ್ನ ಮುಂದ ಏನ್ರಿ ?

ರಾಯರು : 15 ದಿನ ಬಿಗಿ ಇರು ಏನಪ..

ಯುವಕ: ಆಕಿ ಅತ್ರ ನನಗೂ ಒಂದು ಥರs ಆಗ್ತದರಿ....ನನಗೂ ಕಣ್ಣಾಗ ನೀರು....

ರಾಯರು : ಹೆಣಮಕ್ಕಳ ಕಣ್ಣಾಗ ನೀರs ಇರತಾವೊ...ಹಿಂಗೆಲ್ಲ ಮಾಡಿs ಈ ಸ್ಥಿತಿಗೆ ಬಂದಿದೀ.... ನಾನು ಹೇಳಿದಷ್ಟು ಕೇಳಿಕೋತ ಹೋಗು ... 15 ದಿನದಾಗ ಮತ್ತೀನರ ಗದ್ಲ ಆ... ಬಂದು ಹೇಳಿ ಹೊಸ ಫಾರ್ಮುಲ... ಕೇಳಿಕೊಂಡು ಹೋಗು....

ಯುವಕ: ಹೂಂನ್ರಿ .... ನಮಸ್ಕಾರ... ಬರತೀನಿ.

[ರಂಗದ ಎಡದಿಕ್ಕಿನಿಂದ ಯುವಕ... ನಿಷ್ಕ್ರಮಣ--ರಂಗನ ಪ್ರವೇಶ--ರಾಯರಿ... 5 ರೂಪಾಯಿ ನೋಟು ತೋರಿಸುತ್ತಾನೆ...

ರಾಯರು : ಏನೊ ಇದು ?....ಎಲ್ಲಿಂ... ಬಂತು ನಿನಗ ?

ರಂಗ : ಬಕ್ಷೀಸು ಅಂತ ಕೊಟ್ಟು ಹೋದ್ನ... ಆ ಹುಡುಗ.

ರಾಯರು : ಒಳ್ಳೆ ಅನ್ನದs ಕಿಸೆಕ್ಕ ಸೇ... ಸಿದಿ ಅನ್ನು.

ರಂಗ : ಕೊಟ್ರೆ ಒಲ್ಲೆಯಾಕ ಅನಬೇಕ್ರಿ...

ರಾಯರು : ಅಡ್ಡಿಯಿಲ್ಲ ...ಹೀಗೆ ಇ... ಗೊಳ್ಳೂದು ಕಲಕೊ....ನೀನು ನಮ... ಸ್ಕಾರ ಮಾಡಿದ ಕೂಡ್ಲೆ, ಇಲ್ಲಿಗೆ ಬರು... ವವರು ಶಕ್ತ್ಯಾನುಸಾರ ದಕ್ಷಿ... ನಿನ್ನ ಕಿಸೆಕ್ಕ ಹಾಕೊಹಾಂಗ ಶಿ...



ನಾನು ಮೌನಿ

ನಾ ನಿನ್ನ ನೋಡಬಂದಾಗಲೆಲ್ಲ
ನೀ ಮುಖ ತಿರುಗಿಸಿ ಸಾಗಿದಿ
ನಾ ನಿನ್ನ ಅರಿಕೆ ಮಾಡಿಕೊಳ್ಳಲು
ಬಂದಾಗಲೆಲ್ಲ
ನೀ ಮೌನಿಯಾಗಿ ನಡೆದಿ
ನಿನಗಾಗೇ ನಾ ಕೊನೆಯುಸಿರೆಳೆದೆ
ನೀನೀಗ ನನ್ನ ಶವದ ಮೇಲಿನ
ಬಟ್ಟೆ ಸರಿಸಿ
ಮುಖನೋಡ ಬಂದಿರುವಿ
ನನ್ನಲಿ ಅರಿಕೆ ಮಾಡಿಕೊಳ್ಳ
ಬಂದಿರುವಿ
ಆದರೇನು? ನಾನು ಮೌನಿಯೀಗ

—ಗವೀಶ ಹಿರೇಮಠ

ರಾಗು ಏನಪ—

[ರಾಯರು ತಮ್ಮ ನೋಟು ರಂಗನಿಗೆ ಕೊಡುವರು]

ನಿನ್ನದು-ನನ್ನದು ಕೂಡ್ಸಿ ನಾಳೆ ಬ್ಯಾಂಕ್‌ಗೆ ಜಮಾ ಮಾಡುರಂಗ.

ರಂಗ:—ಎರಡು ತಿಂಗಳ ಬಾಡಿಗಿ ಕೊಟ್ಟ ಬಿಡೂಣಲ್ರಿ.

ರಾಯರು : ಬಾಡಿಗಿ ಬಾಡಿಗಿ ಅಂತ ಮಾಲ ಕನಕಿಂತ ನೀನs ಜಪ ಮಾಡಶೀ ಯಲ್ಲೊ ?—ಬಾಡಿಗಿ ಕೊಡೂದು ಜೀವನ ಪರ್ಯಂತ ಅದ ಏನಪ.

(ರಂಗ ಏನೂ ತಿಳಿಯದಾಗಿ ರಾಯರ ಮುಖ ನೋಡುತ್ತಾನೆ)

ತಿಳೀಲಿಲ್ಲs ರಂಗಣ್ಣ—ಇಷ್ಟು ಸರಳ ಮುದುಳನಾಗ ಹೊಗತಾವs ಎಂದರ?....

ನ. ಜೀವನದ ಒಂದು ಕ್ಲಾ ನೇ ಕೊಡ ಪ ತೀ ನಿ, ಕೇಳು....ಕೊಡೂದು ಪೋಸ್ಟ್‌ಪೋನ್ ಮಾಡು....ಬರೂದುಕ್ಕ ಜಿನ್ನ ಹತ್ತು ....ಇಸಕೊಳ್ಳೂವಾಗ— "ಬ್ಯಾಡ ಇರ್ಲಿ ಬಿಡ್ರಿ, ಹಿಂದಾಗಡೆ ಕೊಡೀ ರಂತ" ಅಂತ ಬಾಯಿಲೆ ಅಂದ್ರೂ, ಚಾಚಿದ ಕೈ ಹಿಂದ್ಕ ತೊಗೊಬಾರ್ದು.

[ರಂಗ ತನ್ನ ಕೈ ಚಾಚುವದು—ಹಿಂದೆ ತೆಗೆದುಕೊಳ್ಳುವಂತೆ ನಟಿಸುತ್ತಾನೆ]

ಒಬ್ನs ಕೂತಾಗ ಪ್ರಾಕ್ಟೀಸ್ ಮಾಡು ಮರಿ....ಹಸಿವಿ ಆಗೇದಿಲ್ಲೊ ?

ರಂಗ : ನಾನಂತೂ ಅದರ ಮ್ಯಾಲೆs ಕೂತಿರಶೀನ್ರಿ....ನನ್ನದೂ ಒಂದು ಮನಿ, ಒಂದು ಸಂಸಾರ ಅಂತ ಇದ್ದಾಗ, ಹಸಿವಿನ್ಯ ಆಗತಿದ್ದಿಲ್ಲ ನೋಡ್ರಿ.

ರಾಯರು : ಆಗs ಸನ್ಯಾಸ ತೊಗೊಂಡಿದ್ರ ನೀನೂ ಒಬ್ಬ ಕುಳ ಆಗತಿದ್ದಿ.

ರಂಗ : ಸಾದಾ ಸನ್ಯಾಸಿ ಆದ್ರ ಜೋಳಿಗಿ ಹಿಡೀಯೂದsರಿ....ಮಠದ ಸನ್ಯಾಸಿ ಆದ್ರ....ಆಹಹಹ....ಏನು ವೈಭವ... ಏನು ಮರ್ಯಾದಿ....ಅದಕೂ ಬೇಕ್ರಿ ನಸೀಬ. ಅಗ್ಗೆ ಬಂದ ಹುಡುಗ ಹ್ಯಾಂಗ ಇದ್ದ ಲಗ್ನ ಆದಾಗ, ಈಗ ಅಗದಿs ಸಪ್ಪಗ ಆಗ್ಯಾನ್ರಿ... ಲಗ್ನ ಲಗ್ನ ಅಂತ ಬಾಯಿ ಬಿಡ ತಾವ... ಲಗ್ನ ಮಾಡಿಕೊಂಡ ಮ್ಯಾಲೆ ಮೋತಿ ಒಣಗಿಸಿಕೊಂಡು ಅಡ್ಡಾಡ ತಾವ.... ದೇಶದಾಗ ರಾಯ್ರ, ಒಂದು 30-40 ವರ್ಷ ಲಗ್ನಅಂಬೂದು ನಡೀ ಲಾರದ್ಹಾಂಗ ಸುಗ್ರೀವಾಜ್ಞೆ ಹೊರಡಸ ಬೇಕು ನೋಡ್ರಿ.

ರಾಯರು : (ಆಶ್ಚರ್ಯದಿಂದ) ರಂsಗs!.. ಏನು ಬ್ರಿಲಿಯಂಟ್ ಐಡಿಯಾನೋ ನಿನ್ನದು !?...

ರಂಗ : ಹೌದು ಬಿಡ್ರಿs.... ತಿನ್ನಲಿಕೆ ಕೂಳಿಲ್ಲ...ಮಾಡ್ಲಿಕ್ಕೆ ನೌಕರಿ ಇಲ್ಲ.... ನೋಡ್ಲಿಕ್ಕೆ ಕಣ್ಣುತುಂಬ ಬೆಳಿ ಇಲ್ಲ.... ಜನಸಂಖ್ಯೆ ನೋಡಿದ್ರ ಬೆಳವs ಬೆಳೆs ತದ, ಬೆಳದs ಬೆಳೀತದ...ಲಗ್ನ ನಡೀ ಲಾರದ್ಹಾಂಗ ಸುಗ್ರೀವಾಜ್ಞೆ ಯಾಕ ಹೊರಡಿಸಬಾರ್ದು ಹೇಳ್ರಿ... ನಮ್ಮ

ಕಾಲದಾಗ ಇಂಥ ಸ್ಥಿತಿ ಇದ್ದಿದ್ದಿಲ್ಲ ಬಿಡ್ರಿ.

ರಾಯರು : ಈಗ ಚಿಂತಿ.... ಬರೆs ಚಿಂತಿ ಏನಪ.... ನಳ ಇಲ್ಲ ಅಂತ ಚಿಂತಿ—ನಳ ಬಂದ್ರ, ನೀರು ಬರತಾವೊ ಇಲ್ಲೊ ಅಂತ ಚಿಂತಿ....ನೀರು ಬಂದ್ರ ಜೋರು ಯಾಕ ಬರವಲ್ಲು ಅಂತ ಚಿಂತಿ.

ರಂಗ : ನೌಕರಿ ಚಿಂತಿ.... ನೌಕರಿ ಸಿಕ್ರ ಲಗ್ನದ ಚಿಂತಿ.... ಲಗ್ನ ಆದ್ರ ಮಕ್ಕಳ ಚಿಂತಿ.... ಮಕ್ಕಳಾದ್ರ ಸಾಲಿ ಚಿಂತಿ.... ಸಾಲಿಗೆ ಹೋದ್ರ ಅ್ಯಡ್ಮಿಶನ್ ಸಿಗತ್ರದೊ ಇಲ್ಲೊ ಅಂತ ಚಿಂತಿ.... ಅ್ಯಡ್ಮಿಶನ್ ಸಿಕ್ರ ಡೊನೇಶನ್ ಹ್ಯಾಂಗ ಕೊಡೂದು ಅಂತ ಚಿಂತಿ.

ರಾಯರು : ಮುಗೀತಪ ಎಲ್ಲಾ ಆನ್ಮೇದ ರಾಗ, ಘೋಲೊ ಕಲಸ್ತಾರೊ ಇಲ್ಲೊ ಸಾಲ್ಯಾಗ ಅಂತ ಚಿಂತಿ.... ಪಾಸಾಗ ತಾನೊ ಇಲ್ಲೊ ಅಂತ ಚಿಂತಿ.

ರಂಗ : ನಿಮ್ಮದು ಘೋಲೊ ನೋಡ್ರಿ, ಚಿಂತಿ ಇಲ್ಲ, ವಿಚಾರ ಇಲ್ಲ.

ರಾಯರು : ಮುಂದಿ ಸಂಸಾರದ ಚಿಂತಿ ಇರತsದಲ್ಲೊs....

ರಂಗ : ಅದನ್ನ ಮಾಡಿದ್ರ (ಕೈಯಿಂದ ಸನ್ನೆಮಾಡಿ ತೋರಿಸುತ್ತ) ಹಾರ್ಡ್ ಕ್ಯಾಶ್ ಬರತsದಲ್ರಿ.

ರಾಯರು : ರಂಗs, ಏನೊ ಆಗೇದ ಬಿಡು ನಿನಗ.... ಏನು ಲಾಜಿಕ್ ಆಗಿ ಮಾತಾಡ್ತಿ, ಮಾತಿನ್ಯಾಗ ತೀರ್ಪಿಕೆ ಏನದ.... ಅಡ್ಡಿಯಿಲ್ಲ, ಸ್ವಲ್ಪ ಕನ್‌ವಿನ್ಸಿಂಗ್ ಆಗಿ ಸುಳ್ಳು ಹೊಡಿ ಯೂದೊಂದು ರೂಢ ಮಾಡಿಕೊ, ನಿನ್ನ ಕೈ ಹಿಡಿದವರs ಇಲ್ಲ... ಅವಕ್ಕಿಂತ ಎರಡ ಪಟ್ಟ ದೊಡ್ಡ ಸುಳ್ಳು ಈಜಿಆಗಿ ಹೇಳೂದು ಬಂದ್ರಂತೂ, ಎಂ.ಎಲ್. ಎ.ಆಗಬಹುದು....ಅದರಮುಂದಿಂದೂ ಆಗಬಹುದು.

ರಂಗ : ನನ್ನಂಥವರು ಏನು ಆರಿಸಿ ಬರೂದ್ರಿs....

ರಾಯರು : ನಮ್ಮ ದೇಶದಂಥ ಜನ ಇರೂ ವಾಗ, ಇಲೆಕ್ಶನ್‌ಗೆ ನಿಂದ್ರೂ ಜನಕ. ಇನ್ನೂ 30–40ವರ್ಷ ಏನು ಅಡ್ಡಿ ಇಲ್ಲ ಏನಪ.... ಅವರೆs ನಿಂದಿರತಾರ,

…ಸಿಬರತಾ-ನಾವ್ರ ನಾವ್ರ ಕೈ…ಗಿ …(ಉಸಿರು ಹಾಕಿ) ಹಾಕಿನ್ನ ನಾಕು. ಬಹಳ ಮಾತಾಡಿದ್ರ, ಬಹಳ ಕಸಿವಿ ಆಗ್ತದೆ- ಸಂಸಾರದಾಗ ನೆನಪು ಇಮ್ಮ ಕಲ್ತ್ಯ ಏನಸ ಇದು.

ರಂಗ: ನಿನುಗ ಬಹ್ಳ ಕಲ್ತ್ಯ ಗೊತ್ತಸ ಹಿತ್ತಿ – ರಾಯ್ರು, ಇಲ್ಲಿಗೆ ಸಂಸಾರದ ಸಮಸ್ಯೆ ತೊಗೊಂಡು ಬರೂವವರಿಗೆ, ಏನೇನೊ ಫಾರ್ಮುಲಾ ಹೇಳಿಕೊಡ ತೀರೆಲ್ಲ, ಎಲ್ಲಿಂದ ಪಾಠಾ ಮಾಡೀರಿ?.... ಅದಕೂ ಏನರ ಒಂದು ಡಿಪ್ಲೊಮಾ ಕೋರ್ಸ್ ಅದ ಏನ್ರಿ?

ರಾಯರು: (ನಕ್ಕು) ರಂಗs....

ರಂಗ: (ಪೆಚ್ಚನಾಗಿ) ರಾಯ್ರು....

ರಾಯರು: 7 ಹೆಂಡಂದ್ರ ಸಂಸಾರದ ಆನು ಭವ ಅಂದ್ರ ಸಣ್ಣ ಮಾತೇನೋ....ಆ ಅನುಭವ ಬರದು ತಗದ್ರ ಥೀಸಿಸ್ ಆಗ್ತದ....ಡಾಕ್ಟರೇಟ್ ಸಿಗತದ....ಆ ಅನುಭವದ ಸಂಪತ್ತಿನಿಂದ ಸಂಸಾರ ಗಳ ರಿಪೇರಿ ದಂಧೆ ನಡಿಸೀನಿ ಏನಪ....

ರಂಗ: ನನ್ನವೂ 3 ಆಗ್ಯಾವಲ್ರಿ....ಸ್ವಲ್ಪರೆ ಅನುಭವ ನಿನ್ನಾಂಗ ಬರಬೇಕಲ್ರಿ- ಕೇಳಬ್ಯಾಡ್ರಿ,

ರಾಯರು: ಅದಕ್ಕ, ಜೀವನ, ಅನುಭವ ತಿಳಿದುಕೊಳ್ಳುs ದೃಷ್ಟಿ ಇರಬೇಕಾ ಗ್ತದೆ-ನಿನಗ ಕಣ್ಣುs ಇಲ್ಲ-ದೃಷ್ಟಿ ಹ್ಯಾಂಗ ಬರಬೇಕು?

ರಂಗ: ನಾನು ಸೀದಾ ಮನಶ್ಯರಿ....ಇಂಥ ಗದ್ಲ ತಿಳಿಯೂದುಲ್ಲ.

ರಾಯರು: ಅದಕs ಅವ್ರ್ಯಾs ಅವ್ರ ಗಂಡ ಆಗಿದ್ದಿ-ತಿಳ್ಸತ?....ಹೋಗು ಇನ್ನ ಹೊರಗಿನ ರೂಮಿಗೆ ಯಾರರ ಬಂದ ಗಿಂದಾರು.

(ರಂಗನ ನಿಷ್ಕ್ರಮಣ....ರಾಯರು ಶತಪಥ ಹಾಕತೊಡಗುತ್ತಾರೆ ರಂಗ ಬಲ ರೂಮಿಗೆ ಬಂದು ಮೇಲೆ ನೋಡುತ್ತ, ಹಾಗೆಯೇ ಕಲ್ಲಿನಂತೆ ನೋಡುತ್ತ ನಿಲ್ಲು ತ್ತಾನೆ. ಒಬ್ಬ ಮಧ್ಯವಯಸ್ಸಿನ ವ್ಯಕ್ತಿಯ ಪ್ರವೇಶ....ರಂಗ ನೋಡಿದತ್ತ ಆತನೂ ನೋಡುವನು....ಏನೂ ತಿಳಿಯದಾಗಿ ರಂಗನ ಮುಖ ನೋಡುವನು....ಚಪ್ಪಾಳೆ ಬಾರಿಸಿ ರಂಗನನ್ನು ವಿಮುಖನನ್ನಾಗಿ ಮಾಡುವನು.)

ವ್ಯಕ್ತಿ: ಮ್ಯಾಲೆ ಏನು ನೋಡತಿದ್ರಿ?

(ರಂಗ ವ್ಯಕ್ತಿಯನ್ನು ಸ…ಮ… ನೋಡುತ್ತಾನೆ.)

ವ್ಯಕ್ತಿ: (ಪೆಚ್ಚನಾಗಿ ನಕ್ಕು) "ಅಂಥ… ಏನು ಮ್ಯಾಲೆ ಅದ" ಅಂತ ಕೇಳ್ದೆ.

ರಂಗ: ನಿಮಗೆ ಯಾಕ ಹೇಳಬೇಕ… . ನಾನು?

(ವ್ಯಕ್ತಿ ಏನೂ ತೋಚದೇ ರಂಗ… ಮುಖ ನೋಡುತ್ತಾನೆ.)

ರಂಗ: ಮ್ಯಾಲೆs ನೋಡತಿದ್ದೆ ಅಂ… ಹ್ಯಾಂಗ ಅಂದ್ರಿ ನೀವು?

ವ್ಯಕ್ತಿ: ಮುಖ....ಮುಖ ನಿಮ್ಮದ… ಮ್ಯಾಲೆ ತಿರುಗಿತ್ತು-ಕಣ್ಣು ಮ್ಯಾಲ… ಹೊರಳಿದ್ವು....

ರಂಗ: ಹೊರಳಿದ್ರ, ಮ್ಯಾಲೆ ನೋ… ದ್ಹಾಂಗ ಹ್ಯಾಂಗ ಆಗತದ?

ವ್ಯಕ್ತಿ: (ಪೆಚ್ಚನಾಗಿ) ಆಗಲಿಕ್ಕಿಲ್ಲ.

ರಂಗ: ಆಗಲಿಕ್ಕಿಲ್ಲ ಅಲ್ಲ....ಆಗೂದುಲ್ಲ…

ವ್ಯಕ್ತಿ: (ಹಾಗೆಯೇ) ಹೌದು ಆಗೂ… ದುಲ್ರಿ....

ರಂಗ: ನಾನು ನನ್ನ ಮನಸ್ಸಿನ್ಯಾಗ ನೋಡತಿದ್ದೆ.

(ವ್ಯಕ್ತಿ ತುಸು ಅಂಜಿದಂತೆ ನಟಿಸಿ, ರಂಗನ ಎಡರೂಮಿನೆಡೆಗೆ ಹೆಜ್ಜೆ ಹಾಕುತ್ತಾನೆ)

ರಂಗ: (ಏರುಸ್ವರದಲ್ಲಿ) ನಿಂದರ್ರಿ....ರೀ....

ವ್ಯಕ್ತಿ: (ಒಳಗೆ ಸನ್ನೆ ಮಾಡಿ) ಇದ್ದಾರೇನು ಒಳಗ.

ರಂಗ: ಇರಬೇಕು.

ವ್ಯಕ್ತಿ: ಮತ್ತ್ಯಾರರ ಇದ್ದಾರೇನ್ರಿ ?

ರಂಗ: ಒಬ್ರs ಇದ್ದಾರ.

ವ್ಯಕ್ತಿ: ಏನು ಮಾಡ್ಲಿಕ್ಕೆ ಹತ್ತ್ಯಾರ?

ರಂಗ: (ವಿ ಚಾ ರಿ ಸಿ ದ ಂ ತೆ) ನನ್ಹಾಂಗ ಮ್ಯಾಲೋ–ಕೆಳಗೊ ನೋಡತಿರಬೇಕು ....ಇಲ್ಲ....ವಿ ಚಾ ರ ಮಾ ಡ್ಲಿ ಕ್ಕೆ ಹತ್ತ್ಯಾರ....ಅ ಂ ದ್ಹಾ ಂ ಗ ಏನು ಕೇಳಿದ್ರಿ ನನಗ ?

ವ್ಯಕ್ತಿ: ಏನಿಲ್ಲ....ಏನೂ ಕೇಳಿಲ್ರಿ–ಬೀತು

(ವ್ಯಕ್ತಿ ಲಗು ಬಗೆಯಲ್ಲಿ ರಂಗನ ಎಡ ರೂಮಿನೆಡೆಗೆ ಮುಂದೆ ಸಾಗುವನು, ರಂಗ ಧಾವಿಸಿ ಅವನನ್ನು ಹಿಡಿದು ನಿಲ್ಲಿಸುತ್ತಾನೆ)

ರಂಗ: ಲಗ್ನಆಗೇದೇನು ನಿಮ್ದು ?

ವ್ಯಕ್ತಿ: ಒಂದು ಆಗೇದ.

ರಂಗ: (ಏರುಸ್ವರದಲ್ಲಿ ನಗುತ್ತಾನೆ)ಒಂದು ....ನಾನು ಮೂರು....ಮೂರು ಆಗಿದ್ದೆ ....ಒಳಗಿನ ರಾಯರು 7 ಲಗ್ನ ಆಗಿ ಮುಗಿಸಿ ಕೂತಾರ.

ವ್ಯಕ್ತಿ: ಗಾಬರಿಗೊಂಡು ಏ....ಳು.... ಲ....ಗ್ನ.... !?

ರಂಗ: ಒ ಳ ಗಿ ನ ವ ರು ...ಎಲ್ಲಾರೂ ಖಲಾಸ್ ಆಗ್ಯಾರ....ಈಗ ಬಟಾ ಬಯಲು.

ವ್ಯಕ್ತಿ: ಒಂದು ಲಗ್ನ ಮಾಡಿಕೊಂಡs ಒದ್ದಾಡ್ಲಿಕ್ಕೆ ಹತ್ತೇನಿs....7 ಲಗ್ನ ಆಗಿ ....7 ಸಂಸಾರ....

ರಂಗ: ಅದೂ ಒಂದು ನ್ಯಾಕೇsಳ್ರಿ.... ಎಲ್ಲಾರಿಗೂ ಬರೂದುಲ್ಲ. (ರಂಗ ಹಲ್ಲು ಕಿರಿದು ದೇಶಾವರಿ ನಗುನಗುತ್ತ ಕೈ ಮುಂದೆ ಚಾಚುತ್ತಾನೆ.)

ವ್ಯಕ್ತಿ: ಏನು ?

(ರಂಗ ಕೈ ಚಾಚಿಯೇ ನಿಂತು ಹಲ್ಲು ಕಿರಿಯುತ್ತಾನೆ...ವ್ಯಕ್ತಿ ಕಿಸೆಯಲ್ಲಿ ಹುಡುಕಾಡಿ ೧೦ ಆಣೆ ಅವನ ಕೈಯಲ್ಲಿ ಇಡುತ್ತಾನೆ. ....ರಂಗ ಸಿಡುಕಿ ವ್ಯಕ್ತಿಗೆ ೧೦ ಆಣೆ ತಿರುಗಿ ಕೊಡುತ್ತಾನೆ.)

ರಂಗ: ನನ್ನ ಫೀಸು (ಐದು ಎಂದು ಕೈ ಬೆರಳಿನಿಂದ ತೋರಿಸುತ್ತಾನೆ.)

ವ್ಯಕ್ತಿ: ಐದು ರೂಪಾಯಿನs ?!

ರಂಗ: ಕೊಡಬೇಕು....ಇಲ್ಲಾಂದ್ರ ಒಳಗಿನವರು ಭೆಟ್ಟಿ ಆಗೂದುಲ್ಲ.

ವ್ಯಕ್ತಿ: (ಸಿಡಿಮಿಡಿಗೊಂಡು, ಕಿಸೆಯಿಂದ 5 ರೂಪಾಯಿ ತೆಗೆದುಕೊಡುತ್ತಾನೆ) ಎಲ್ಲs ಕಡೆ ಸುಲಿಗಿ....

ರಂಗ: ಛೆ.... ಛೆ ....ಐದು ರೂಪಾಯಿ ಒಳಗ ಸುಲಿಗಿ ಏ ನಿ ರ ತ ದ....... ಇದೊಂದು ಸಾಂಪ್ರದಾಯ..ಪೂಜಾರಿಗೆ ಕೊಟ್ಟದ್ದು ದೇವರಿಗೆ ಮುಟ್ಟೊಹಾಂಗ ಇದೂ ಒಳಗಿನವರಿಗೆs ಮುಟ್ಟೊದು.. ನಿಂತಿರ್ರಿ, ಕೇಳಿ ಬರತೇನಿ.

(ರಂಗ ಎಡರೂಮಿಗೆ ಬರುವನು.... ರಾಯರು ತಲೆ ಚ ಚ್ಚಿ ಕೊ ಂ ಡ ಂ ತೆ ನಟಿಸುವರು....ರಂಗ 5 ರೂಪಾಯಿ ರಾಯರಿಗೆ ತೋರಿಸಿ ನಗುತ್ತಾನೆ-)

ರಂಗ: ಯಾರೊ ಬಂದಾರರಿ....ಕಳಸಲೇನ್ರಿ ?

ರಾಯರು: ಏನು ಹೆಸರು ?

ರಂಗ: (ಅಲ್ಲಿಂದಲೇ ಏರು ಸ್ವರದಲ್ಲಿ)ಏನ್ರಿ ನಿಮ್ಮ ಹೆಸರುs ?

ವ್ಯಕ್ತಿ: (ಏರು ಸ್ವರದಲ್ಲಿ) ವೆಂಕಟರಮಣ.

(ರಂಗ ಅಲ್ಲಿಂದಲೇ ಮೇಲೆ ಕೈಜೋಡಿಸಿ ನಮಸ್ಕರಿಸುತ್ತಾನೆ)

ರಾಯರು: ಒಳಗ ಕಳಸು ಹೋಗು.

("ವೆಂಕಟರಮಣ ಗೋ ವಿ ಂ ದs ಗೋ–ವಿಂ–ದ" ಎಂದು ಅನ್ನುತ್ತ ರಂಗನ ಬಲ ರೂಮಿಗೆ ಬರುತ್ತಾನೆ)

ರಂಗ: ವೆಂಕಟರಮಣ... ವೆಂಕಣ್ಣ.... ವೆಂಕಾಟಿ....(ವ್ಯಕ್ತಿ ಏನೂ ತಿಳಿಯದಾಗಿ ರಂಗನನ್ನು ನೋಡುತ್ತಾನೆ)....ಸಂಸಾರದ ಸಮಸ್ಯೆ(ಹಣ ಎಂದು ಸನ್ನೆಯಿಂದ ಸೂಚಿಸಿ) ಇದರಿಂದ ಪರಿಹಾರ ಮಾಡಿಕೊ ಳ್ಳಿ ಕ್ಕೆ ಬಂದೀರೆಲ್ರಿs....ನಿಮ್ಮ ನಿಮ್ಮೊಳಗ ಹೊಂದಿಸಿಗೋಬೇಕ್ರಿs ಹೋಗ್ರಿ ಒಳಗ....



ಸೋಟ್ಟೆ ಚಟ

ಕೊಟ್ಟ ಸಿಗರೇಟ ಚಟ
ಬಿಟ್ಟು ಬಿಡಬೇಕೆಂಬ
ಹಿಡಿದ ಹಟ;
ಸಿಪ್ರೆ ಬಂದಿ ಹೋಂಟಾಡಿ
ರಾತ್ರಿ ಬಂದವು ಎಳೆದು
ಕೊನೆಗೆ ಕೊಟ್ಟ
ಹಟ ಸುಟ್ಟು ಬಿಟ್ಟ !

—ಅಶೋಕ ಚೊಳಚಗುಡ್ಡ

(ವ್ಯಕ್ತಿ ಪೆಚ್ಚನಾಗಿ ನಗುತ್ತ ರಂಗನ ಎಡ ರೂಮಿನಲ್ಲಿ ಪ್ರವೇಶಿಸುತ್ತಾನೆ. ಆದರೂ ಹೊರಳಿ ಹೊರಗೆ ನೋಡುತ್ತಾನೆ- ರಾಯರು ಅದನ್ನು ಗಮನಿಸುವರು)

ರಾಯರು: ಹೊರಗಿನವಂಗ ಹೆಂಡಂದ್ರು ನೆನಪಾಗಿ ಒಮ್ಮೊಮ್ಮೆ ಅಟ್ಯಾಕ್ ಬರತಾವ ಬರ್ರಿ ಇರ್ಲಿ.

ವ್ಯಕ್ತಿ: (ದೇಶಾವರಿ ನಗೆಯಿಂದ) ನಮಸ್ಕಾರ ಸರ....ಎಲ್ಲಾ ತಮ್ಮ ಕೈಯಾಗ ಆದರಿ (ರಾಯರು ತಮ್ಮ ಕೈ ನೋಡಿಕೊಳ್ಳುವರು)

ಹೇಳತೇನ್ರಿ ಸುದ್ದಿ....ನಂದು ಸ್ವಲ್ಪ ತಡs ಆಗಿ ಲಗ್ನ ಆಗೇದ್ರಿ.

(ರಾಯರು ವ್ಯಕ್ತಿಯನ್ನು ಅಪಾದ ಮಸ್ತಕ ನೋಡುವರು)

ರಾಯರು: ಲಗ್ನ ಆಗಿ ಬಹಳ ವರ್ಷ ಆದವರ್ಹಾಂಗ ಕಾಣತೀರೆಲ್ಲ.

ವ್ಯಕ್ತಿ: ನನ್ನ ಕುಟುಂಬ ಹಾಂಗ ಮಾಡ್ಯಾಳ್ರಿ..ನನ್ನ ಲಗ್ನ ಆಗಿ 4 ವರ್ಷ

ತ್ತಿ.

ನಾಯುದು: ಕನ್ನ...ಹೇಳ್ರಿ ಸಾಕ್ ಸಾರ.

ವ್ಯಕ್ತಿ: [illegible] ನನ್ನ ನೋಡಿದ್ರ ನನ್ನ ಕುಟುಂಬ ಬಡವಾತ ತಾನ್ರಿ.

ನಾಯುದು: ಬಡನಾದವ ಸಾದ ಇರಬೇಕು [illegible].

ವ್ಯಕ್ತಿ: ಬಡವಾದೂ [illegible] ?!

ನಾಯುದು: ಆಶ್ಚರ್ಯ ಏನಿಲ್ಲ ಇದರಾಗ.... "ನನ ಗಂಡನ ಕೂಡ ದಿನಕ್ಕ ಒಮ್ಮೆ [illegible] ಜಗಳಾಡಿದ್ರs ನನಗ [illegible] ಇಡೀ ದಿನ ಅಂಬೂ ಹೆಂಡಂದ್ರ ಕೇಸ್ ನನ್ನ ಹತ್ಲೆ ಸಾಕಷ್ಟು ಬಂದಾವ ಏನ್ರಪ... ಮುಂದ ಹೇಳ್ರಿ.

ವ್ಯಕ್ತಿ: ಅಂದವ್ದಕ್ಕ ತಿರಿಗಿ ಅನ್ನತಾಳ್ರಿ.

ನಾಯುರು: ಅಂ.... ದ.... ವ್ದ.... ಕ್ಕ.... ತಿ...ರಿ...ಗಿ.... ಅಂ.. ತಾ....ರ!.... ನೋ. ನೋ. ಕ್ಲೀಯರ್ ಹೇಳ್ರಿ.... ಅಂದ್ರ ಕೇಸ್‌ನ ಆಳ ಗೊತ್ತಾಗತದ.... ನಾನು ಹೇಳತೀನಿ ನೋಡ್ರಿ..."ನೀವು ಬೇಗು ಆಕು ಅಂತ ಅಂದ್ರಿ" ಅಂತ ತಿಳಕೊಳ್ರಿ...ನಿಮ್ಮ ಹೆಂಡತಿ (1) "ನ್ಯಾಕ್ರಿ [illegible] ಅಂತಾರೇನ ?" (2) "ಹ್ಯಾಗ ಗೊತ್ತಾತೀನು ಬೇಗು ಆದಷ್ಟು" ಅಂತ ಅಂತಾರೊ ?... (3) "ಹ್ಯಾಗತಿ [illegible] ಬೇಗು ಆದಷ್ಟು" ಅಂತ ಅಂತಾರೊ ?... ನಾನಾ ಪ್ರಕಾರ ತಿರಿಗಿ ಅನ್ನಬಹುದು ನೋಡ್ರಿ.... ನಿಮ್ಮ ಯಜಮಾನಿ ಯಾವ ಸ್ಟಾಯಿಲಿನ್ಯಾಗ ಅಂತಾರ ?

ವ್ಯಕ್ತಿ: ಒಂದು ಅದ ಮ್ಯಾಲಿ ಒಂದು ರೀತಿಯಿಂದ 5–6 ಸಮೂನಿ ಅನ್ನ ತಾಳ್ರಿ.

ನಾಯುದು: ಕಾನಿಕ್ [illegible]!...ಆಗ ನೀವು ಏನು ಮಾಡತೀರಿ ?

ವ್ಯಕ್ತಿ: ನಾನೂ ಏನೂ ಅನ್ಲಿಕ್ಕೆ ಬಾಯಿ ತಗೀತಿನ್ರಿ ...ಅದ್ರ ...

ನಾಯುರು: ಅsನ್ರsss ... ಇದರಾಗs ಇರೂದು....ಅವರ ಬಾಯಿ ಜೋರಾಗಿ, ನಿಮ್ಮ ಬಾಯಾಗೂ ಅವರ ಮಾತು ಹೊಕ್ಕು ನಿಮಗ ಮಾತಾಡ್ಲಿಗುದೂ ದುಲ್ಲ.

ವ್ಯಕ್ತಿ: ಆಗದಿs ಹೀಂಗs ಆಗ್ತದರಿ.... ಮೊನ್ನೆ ಹುಣ್ಣಿವಿ ನೋಡ್ರಿ [illegible] ಬೆಳದಿಂಗಳಾಗ ಅಡ್ಡಾಡಿ ಬರೂ[illegible]ಣ" ಅಂತ ಅಂದ್ನೆರಿ..."[illegible] ಮೋಡ ಕವಿಗೊಂಡ [illegible] ಸುನೆ ಕೇಳೂದಿಲ್ಲ" ಅಂತ ಹ್ಯಾ[illegible] ಮಾಡಿದ್ಲು...."ಹೋಳಿಗಿ ಮಾ[illegible] ಕೂಡೋಣ" ಅಂದ್ನೆರಿ..."ಬೆಳದಿಂ[illegible] ನೋಡ್ಲಿಕ್ಕೆ ಹೋಳಿಗಿ ಯಾಕ ಹ[illegible] ಬೇಕು ?" ಅಂದ್ಲು...ಇದs ರಸ[illegible] ಒಳಗ ಬೆಳದಿಂಗಳ ಹೋದ್ವೊ. [illegible] ವಾದಸೂದು ನಿಂದರಲಿಲ್ಲ.

ನಾಯುರು: ಹುಡುಗ್ರು–ಪಡಗ್ರು [illegible] ಗಿದ ಮ್ಯಾಲೆ ನಿಮ್ಮ ಕೋಲ್ಡ್ ವಾ[illegible] ಸುರುವು ಆಗ್ತದೊ...?

ವ್ಯಕ್ತಿ: [ನಾಚಿದಂತೆ ನಟಿಸಿ] ನ[illegible] ಆಕಿನs ಹುಡಿಗಿ.... ಆಕಿಗೆ ನಾ[illegible] ಹುಡುಗರಿ!.... ಹುಡುಗ್ರು ಪಡ[illegible] ಝುಂಝೂಟ ಇಲ್ಲ.

ನಾಯುರು: ಬಹಳ ರಸಿಕರು ಕಾಣತೀ[illegible] ರಸಿಕರಿಗೆ ಇಂಥ ಅಪ್ರೋಜಿಟ್ ಸ್ವ[illegible] ವದ ಹೆಂಡತಿ ಸಿಗೂದs ಹೆಚ್ಚು[illegible]

ಆದರೆ ರಸಿಕ ಇದ್ದಂಗ ನಿಂದಕಿ ಮುಸು ಮುಸು ಎಂಜಾಯ್ ಮಾಡಬೇಕು.. ಇದರಂಥ ಬೆಸ್ಟ್ ಹಾದಿ ಯಾವುದೂ ಇಲ್ಲ. ಮಾಡಿ ನೋಡ್ರಿ ನಾನು ಹೇಳಿದ್ಹಾಂಗ.... ಒಂದು ತಿಂಗಳದಾಗ ಆಕಿ ಮುಸುಮುಸು, ಮುಸುಮುಸು ಬಕಬಕ್ಲಿ ಆಗತದ.... ಆದ್ರ ಆಗೂದುಲ್ಲ ನಿಮ್ಮ ಕೈಯಿಂದ... ಹೂಂss.... ನೌಕರಿ ಮಾಡತೀರಿ ಹೌದಲ್ಲೊ?

ವ್ಯಕ್ತಿ: ಮಾಡತೀನ್ರಿ.

ರಾಯರು: ಆಫೀಸಿನಿಂದ ತಡ ಆಗಿ ಬಂದ್ರ ನಿಮ್ಮ ಹೆಂಡತಿ ದುಸುಮುಸು ಮಾಡತಿರಬೇಕು.

ವ್ಯಕ್ತಿ: ತಡ ಆಗಿ ಬಂದ್ರೂ ಸಿಟ್ಟು.... ಲಗೂ ಬಂದ್ರೂ ಸಿಟ್ಟು....ಸಿಟ್ಟು ಸಿಟ್ಟು ಕನೆಂಡ.

ರಾಯರು: ಇದಕ್ಕ ಎರಡು ಘೋರೊ ಫೈಕಿ ಫಾರ್ಮುಲಾ ಅದ ನಿನ್ಸ್ರೀಸ.... ನನ್ನ ಥರ್ಡ್ ಹೆಂಡತಿ ನಿಮ್ಮಾಕಿ ಹಾಂಗ ಇದ್ಲು... ಭಾರಿ ಸಿಟ್ಟು ಆಕಿಗೂ.... (1) ಎಷ್ಟು ಗಂಟ್ಲೆ ಹರಕೊಂಡು ಒದರಾಡಿದ್ರೂ 'ಗಪ್' ಕೂತು ಬಿಡೂದು ಒಂದು ಫಾರ್ಮುಲಾ.... ಇನ್ನೊಂದಂದ್ರ ಒದರಾಟ ಎಂಜಾಯ್ ಮಾಡೂದು. ಥರ್ಡ್ ಬಂದದ.... ಒದರಾಟ ರೂಢ ಮಾಡಿಕೊಂಡು ಬಿಡೂದು...ದಿನ ಒದರಾಡುವವರು ಒಂದು ದಿನ ಒದರಾಡದಿದ್ರ ಏನೊ ಕಳಕೊಂಡ್ಹಾಂಗ ಆಗತದ ಇದರಿಂದ.. ಎರಡು ಫಾರ್ಮುಲಾ ಕೊಟ್ನಿ, ಹೊಸ ಫಾರ್ಮುಲಾ ನಿಮಗ ಹೇಳಕೊಡತೀನಿ ....ಕಾಳಜಿ ಬಿಡ್ರಿ....ಒಂದು ಪ್ರಶ್ನಿ.

ವ್ಯಕ್ತಿ: ಹೇಳ್ರಿ,

ರಾಯರು: ನಿಮ್ಮ ಮನಸ್ಸಿನ ರೆಕಾರ್ಡ್ ಟರ್ನ್ ಹ್ಯಾಂಗದ....? ಸದ್ಯದ ಹೆಂಡತಿನ್ನ ಬಿಟ್ಟು, ಬ್ಯಾರೆ ಏನರ ಗೆರಿ ಎಳದದ್ದು ಎಕ್ಸ್‌ಟ್ರಾ?

ವ್ಯಕ್ತಿ: ಅಂಥದ್ದೇನೂ ಮಾಡಿಲ್ರಿ.

ರಾಯರು: ಪ್ರೀತಿ ಒಳಗ ವಿಶ್ವಾಸ ಇಲ್ಲೋ ಅಥವಾ....

ವ್ಯಕ್ತಿ: ಇಲ್ಲ ಅಂತೇನಿಲ್ರಿ....ರಗಡ ಅದ ...ಆದ್ರ ಪ್ರೀತಿ ಅಂದ್ರ ಸುಡಗಾಡು ಆಯುರ್ವೇದದ ಗುಳಿಗಿ ಹಾಂಗರಿ.... ಪರಿಣಾಮ ಮಾಡ್ಲಿಕ್ಕೆ ಬಹಳ ತಡ.... ಇನ್ನೊಂದು ಅಂದ್ರ ಪ್ಯಾಕ್ಯಾ ಬಹಳ ಹಾಳು ಆದರಿಂದ ನಿರುದ್ಯೋಗಿಗಳಿಗೆ ಫೋಟೋದು ನೋಡ್ರಿ. ಅದು..

ರಾಯರು: ಹೂಂss...ಸಿನಿಮಾ..ನಾಟಕ ಇಂಥದ್ದು ಸೇರತಾವೇನು ನಿಮ್ಮ ಹೆಂಡತಿಗೆ.

ವ್ಯಕ್ತಿ: ಸೇರತಾವ್ರಿ....ಆದ್ರ ಅದಕ್ಕs ಸ್ವಲ್ಪ ಬಡದಾಟ ಆಗ್ತದರಿ...."ಮೊದಲನೆ ಆಟಕ್ಕ ಹೋಗೂಣಂತ" ಆಕಿ... "ಕಡೀ ಆಟಕ್ಕ ಹೋಗೂಣ" ಅಂತ ನಾನು.

ರಾಯರು: ಫ್ರಾಂಕ್ ಆಗಿ ಹೇಳಿ.

ವ್ಯಕ್ತಿ: ಕಡೀ ಆಟಕ್ಕ ಹೋದ್ರ.... ಅದು....ಆಗ ಹೋದ್ರ....ಆಕಿ, ಹೇಳಬೇಕಂದ್ರ ನನಕಿಂತ ನನ್ನಾಕಿ ಎತ್ತರ ಇದ್ದಾಳ್ರಿ.

ರಾಯರು: ಹಾಂss....ಪಾಯಿಂಟ್ ಇಲ್ಲೆ ಅದ....ಗಿಡ್ಡ-ಎತ್ತರದ ಪ್ರಾಬ್ಲೆಮ್ಮು.

ವ್ಯಕ್ತಿ: ಒಮ್ಮೆ ಮ್ಯಾಟ್ನಿಗೆ ಇಬ್ರೂ ಜತಿಯಾಗಿ ಹೋಗೂ ಮುಂದ ಓಣಿ ಹುಡುಗ್ರು "ಗಿಡ್ಡ ಭ್ರಟಾಣಿ" ಅಂತ ಒದರಿದ್ರು ನಂತರ....ಅಂದ್ನಿಂದ....

ರಾಯರು: ಲಗ್ನದಾಗ ನಿಮಗ ಮಾಲಿ ಹಾಕೂಮುಂದ....?

ವ್ಯಕ್ತಿ: ಮುಂದಿ ನಕ್ಕಂತ್ರಿ....

ರಾಯರು: ಎರಡು ನೂರು ಕಾಂಪ್ಲೆಕ್ಸ್ ನೋಡ್ಯಾನ ನಿಮ್ಮ ಸಂಸಾರದಾಗ.... ನಿಮ್ಮ ಮನಸ್ಸಿನ್ಯಾಗ ಏನದ?.... ಇದ್ದ ಸಂಸಾರದ ಬದುಕು [illegible] ಅಲ್ಲಲ್ಲಿ ತ್ಯಾಪಿ ಹಚಗೊಂಡು, [illegible] ಬಾರದ್ಹಾಂಗ ಇರಬೇಕು [illegible] ಅಥವಾ....

ವ್ಯಕ್ತಿ: ನೀವು ಹೇಳಿದ್ಹಾಂಗ [illegible] ಬಡದಾಟ ಮನಸ್ಯಾಗ [illegible]

ರಾಯರು: ರಿಪೇರಿ [illegible] ಮ್ಯಾಲೆ ಬರ್[illegible] ಆಗ್ತದ....[illegible]

ವ್ಯಕ್ತಿ: ಬಡದ[illegible] ಸಂಸಾರದಾಗ ಮಜ ಬರೂದು[illegible] ಗೊತ್ತದ....ಬಡದಾಡದಿದ್ರೂ, [illegible] ಕ್ಷಣ ನಕ್ಕೋತ ಇದ್ರಾತ್ರಿ....[ತಡೆದು] ನಿಮಗ ಎಷ್ಟು ಮುಟ್ಟಿಸಬೇಕಾದೀತ್ರಿs?

ರಾಯರು: ನಿಮ್ಮ ಸಂಸಾರ ಸೆಟ್ಲ್ ಆಗಿ, ಕ್ಲಾಸಿಕ್‌ದ ಎರಡನೆಯ ಸ್ಟೇಜ್‌ನ್ಯಾಗ ಅದ ನೋಡ್ರಿ....ನಿಮ್ಮ ಸಲುವಾಗಿ ಹೊಸ ಫಾರ್ಮುಲಾ ತಯಾರ [illegible]

ಜೀರು ಸಾರು

[illegible]

— ಅಶೋಕ ಜೋಳದಗುಡ್ಡ

ಬೇಕಾಗತದ....[illegible]


ವ್ಯಕ್ತಿ: 800 [illegible]

ರಾಯರು: [illegible]

ಪುಟ 101 ನೋಡಿ

ಪಾಂಡುರಂಗನತ್ತ ಪಲ್ಲಕ್ಕಿ ಪ್ರವಾಹ





ಆದ್ಯ ರಾಮಾಚಾರ್ಯ

ಆಷಾಢ–ಕಾರ್ತಿಕ. ಮಾಸಗಳಲ್ಲಿ ಪಂಢರಪುರಕ್ಕೆ ದಿಂಡಿ ಹೊರಡುವುದು ನೂರಾರು ವರ್ಷಗಳಿಂದ ಬೆಳೆದುಬಂದ ಸಂಪ್ರದಾಯ. ಪಾಂಡುರಂಗ ವಿಠ್ಠಲ ನಾಮಸ್ಮರಣೆ, ತಾಳ, ಮೃದಂಗಗಳ ನಾದ ಭಕ್ತರು ಪ್ರವಾಹವೇ ಸರಿ ದಿಂಡಿ ಸಮೂಹದ ಸಂಖ್ಯೆಯೂ ಬಹಳ. ಒಂದೊಂದೂ ಒಂದೊಂದು ವಿಧ.

ಶ್ರೀ ಕ್ಷೇತ್ರ ಪಂಢರಪುರಕ್ಕೆ ನಾಡಿನ ಅದರಲ್ಲಿಯೂ ವಿಶೇಷವಾಗಿ ಮಹಾರಾಷ್ಟ್ರದ ಅನೇಕ ಭಾಗಗಳಿಂದ ಆಷಾಢ ಮತ್ತು ಕಾರ್ತೀಕ, ಏಕಾದಶಿಯ ದಿನಗಳಲ್ಲಿ ಭಕ್ತರು ದೇವನ ಪಲ್ಲಕ್ಕಿಯನ್ನು ಹೊತ್ತುಕೊಂಡು, ಹಣೆಗೆ ಬುಕ್ಕಿಟ್ಟನ್ನು ಧರಿಸಿ, ಕೊರಳಲ್ಲಿ ತುಳಸೀ ಮಾಲೆಯನ್ನು ಹಾಕಿಕೊಂಡು, ಕಂಕುಳಲ್ಲಿ ಭಗವಾಧ್ವಜವನ್ನು ಹಿಡಿದು ತಲೆಗೆ ಮುಂಡಾಸನ್ನು ಧರಿಸಿ ಎರಡೂ ಕೈಗಳಲ್ಲಿ ತಾಳ ಹಿಡಿದು ಅಭಂಗಗಳನ್ನು ಹೇಳಿಕೊಳ್ಳುತ್ತ ಕಾಲು ನಡಿಗೆಯಿಂದ ನೂರಾರು ಮೈಲಿಗಳ ಪ್ರವಾಸ ಮಾಡಿ, ಪಂಢರಪುರ ಕ್ಷೇತ್ರಕ್ಕೆ ತಲುಪುತ್ತಾರೆ. ಹೀಗೆ ಸಾಮೂಹಿಕವಾಗಿ ಭಜನೆ ಮಾಡುತ್ತ ಬರುವವರನ್ನು "ದಿಂಡಿ ಸಮೂಹ" ಎಂದು ಗುರುತಿಸುವ ಸಂಪ್ರ



ದಾಯವಿದೆ. ಇಂಥ ಸಮೂಹಗಳ ಸಂಖ್ಯೆ ಸುಮಾರು 58 ರಷ್ಟಾಗುತ್ತದೆ. ಸುಮಾರು 150 ವರ್ಷಗಳ ಹಿಂದೆ ಸತಾರ ಜಿಲ್ಲೆಯ ದೇಶಮುಖ ಹೈಬತ್‌ರಾವ್ ಬಾಬಾ ಎಂಬ ಮಹನೀಯರು ಪಂಢರಪುರದ ಯಾತ್ರೆಗೆಂದು ಬರುವ ಈ ಪಲ್ಲಕ್ಕಿಗಳನ್ನು ಹೊತ್ತ ವಾರಕರಿ ಸಂಪ್ರದಾಯದ ಗುಂಪಿನವರಿಗೆ ವಿಶಿಷ್ಟವಾದ ಸ್ವರೂಪವನ್ನಿತ್ತರೆಂದು ಹೇಳುತ್ತಾರೆ.

ಮೊದಮೊದಲು ಭಕ್ತರು ಜ್ಞಾನದೇವನ ಪಾದುಕೆಗಳನ್ನು ಕೊರಳಲ್ಲಿ ಧರಿಸಿಕೊಂಡು ಪಂಢರಪುರದ ಯಾತ್ರೆಗೆ ಹೊರಡುವ ಸಂಪ್ರದಾಯವಿತ್ತು. ಮುಂದೆ ಹೈಬತರಾಯರು ಈ ಪದ್ಧತಿಯನ್ನು ತೆಗೆದು ಹಾಕಿ ಆ ಪಾದುಕೆಗಳನ್ನು ಪಲ್ಲಕ್ಕಿಯಲ್ಲಿ ಇಟ್ಟುಕೊಂಡು ಸಾಮೂಹಿಕ ಭಜನೆ ಮಾಡುತ್ತಾ ಯಾತ್ರೆ ಹೊರಡುವ ಸಂಪ್ರದಾಯವನ್ನು ಆರಂಭಿಸಿದರು.

ಜ್ಞಾನೇಶ್ವರ ಮಹಾರಾಜರ ಪಾಲಕಿ

ಜ್ಯೇಷ್ಠ ವದ್ಯ ಅಷ್ಟಮಿಯ ದಿನ ಜ್ಞಾನದೇವನ ಈ ಪಲ್ಲಕ್ಕಿಯ ಪ್ರಸ್ಥಾನ ಕಾರ್ಯಕ್ರಮವು ಮಧ್ಯಾಹ್ನದ ನಾಲ್ಕು ಗಂಟೆಯ ಸುಮಾರಿನಲ್ಲಿ ಪ್ರಾರಂಭವಾಗುವದು. ಜ್ಞಾನದೇವನ ಸಮಾಧಿಯ ಮುಂದಿಡಲಾಗಿದ್ದ ಬೆಳ್ಳಿಯ ಪಾದುಕೆಗಳನ್ನು ತೆಗೆದುಕೊಂಡು ಬಂದು ಪ್ರಯಾಣಕ್ಕಾಗಿ ಸಿದ್ಧಪಡಿಸಿದ ಅಲಂಕೃತ ಪಲ್ಲಕ್ಕಿಯಲ್ಲಿ ಆ ಪಾದುಕೆಗಳನ್ನು ಇಡುತ್ತಾರೆ. ದೇವಸ್ಥಾನದ ವತಿಯಿಂದ ಮೊದಲು ಆ ಪಾದುಕೆಗಳಿಗೆ ಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡುತ್ತಾರೆ. ಅನಂತರದಲ್ಲಿ ಆ ಪಾದುಕೆಗಳೊಂದಿಗೆ ದಿಂಡಿಯಾತ್ರೆಯಲ್ಲಿ ಭಾಗಿಗಳಾಗುವ ಭಕ್ತರನ್ನು ಪೂಜಿಸಲಾಗುತ್ತದೆ. ಪಲ್ಲಕ್ಕಿಯ ಎಡಬಲದಲ್ಲಿ ಸಾಲುಸಾಲಾಗಿ ತಾಳ ಹಿಡಿದುಕೊಂಡು ಭಕ್ತರು ನಿಲ್ಲುತ್ತಾರೆ. ಅವರ ಮಧ್ಯದಲ್ಲಿ ತಂಬೂರಿಯನ್ನು ಧರಿಸಿದವರೊಬ್ಬರು ಇರುತ್ತಾರೆ. ಪ್ರಥಮ ಮರ್ಯಾದೆ ಯಾರು ತಂಬೂರಿಯನ್ನು ಹಿಡಿದುಕೊಂಡಿರುತ್ತಾರೆಯೋ ಅವರಿಗೆ ಸಲ್ಲುತ್ತದೆ. ಆಗಾಗ ತಮ್ಮ ತಮ್ಮಲ್ಲಿ ತಂಬೂರಿ ಧರಿಸುವ ಈ ಪದ್ಧತಿಯನ್ನು ಬದಲಿಸುವ ಸಂಪ್ರದಾಯವಿದೆ. ಹೀಗೆ ಎಲ್ಲರೂ ಸಿದ್ಧರಾಗಿ ನಿಂತಮೇಲೆ "ಜ್ಞಾನದೇವ ತುಕಾರಾಮ್" ಎಂಬ ಸಾಮೂಹಿಕ ಧ್ವನಿಯೊಂದಿಗೆ ತಾಳವಾದ್ಯಗಳ ನಿನಾದವು ಪ್ರಾರಂಭವಾಗುತ್ತದೆ. ಮೆಲ್ಲಮೆಲ್ಲನೆ ಯಾತ್ರಿಕರು ಹೆಜ್ಜೆಗಳನ್ನು ಹಾಕತೊಡಗುತ್ತಾರೆ. ದಿಂಡಿಯಾತ್ರೆ ಆರಂಭವಾದಾಗ ಹಗಲಿರುಳೆನ್ನದೆ ಇಪ್ಪತ್ತಾಲ್ಕು ಗಂಟೆಗಳ ಕಾಲ ಅವ್ಯಾಹತವಾಗಿ ಈ ಭಜನಾ ಕಾರ್ಯಕ್ರಮವು ನಡೆಯುತ್ತಿರುತ್ತದೆ. ಯಾತ್ರಿಕರು ತಮ್ಮ ದಿನನಿತ್ಯದ ಉಪಯೋಗಕ್ಕಾಗಿ ಮಕ್ಕಳುಮರಿಗಳಿಗಾಗಿ ಎತ್ತಿನ ಬಂಡಿಯಲ್ಲಿ ಸಾಮಾನುಗಳನ್ನು ಹಾಕಿಕೊಂಡು ಅಲ್ಲಲ್ಲಿ ಬಿಡಾರ ಮಾಡುತ್ತ ಭೋಜನಾದಿಗಳನ್ನು ತೀರಿಸಿಕೊಂಡು ಮುಂದಿನ ಪ್ರಯಾಣವನ್ನು ಆರಂಭಿಸುತ್ತಾರೆ. ಈ ಜ್ಞಾನದೇವನ ಪಾಲಕಿಯು ಪುಣೆ, ಸಾಸವಡ, ಜೇಜೂರಿ, ವಾಲೆ, ಲೋಣಂದರ್, ತಾರಣಗಾವ್, ಫಲ್ಟಣ ಮಾಳಶಿರಸ್, ವೇಳಾಪುರ್, ಶೇಂಗಾಂ, ವಾರಸಿ, ಇತ್ಯಾದಿ ಊರುಗಳ ಮೇಲೆ ಹಾದು ಪಂಢರಪುರಕ್ಕೆ ಆಗಮಿಸುತ್ತದೆ. ಈ ಗುಂಪಿನವರು ಜ್ಞಾನೇಶ್ವರ ಮಂದಿರದಲ್ಲಿ ತಮ್ಮ ಬಿಡಾರವನ್ನು ಮಾಡುತ್ತಾರೆ.

ತುಕಾರಾಂ ಮಹಾರಾಜರ ಪಾಲಕಿ

ಈ ಪಾಲಕಿಯು ಜ್ಯೇಷ್ಠ ವದ್ಯ ಅಷ್ಟಮಿ "ದೇಹೂ" ಎಂಬ ಸ್ಥಳದಿಂದ ಹೊರಡುತ್ತದೆ. ಮುಂದೆ ಅದು ಭೀಡ್ ತಾಲ್ಲೂಕಿನಲ್ಲಿಯ ಗಂಗಾ ಮಾಸಲೆ ಎಂಬ ಗ್ರಾಮಕ್ಕೆ ಬಂದು ಆ ಸ್ಥಳದಲ್ಲಿಯ ಸೋಳಂಕಿಯವರ ಪಾದುಕೆಗಳನ್ನು ತೆಗೆದುಕೊಂಡು ನಾಲ್ಕು ಗಂಟೆಗೆ ಆ ಊರಿನಿಂದ ಮುಂದಿನ ಪ್ರಯಾಣವನ್ನು ಪ್ರಾರಂಭಿಸುತ್ತದೆ. ಈ ಪಾಲಕಿಯು ನವಮಿಯ ದಿನ ಪೂನಾ ನಗರಕ್ಕೆ ತಲುಪುತ್ತದೆ. ಏಕಾದಶಿಯ ದಿನ ಸಾಸವಡ ಎಂಬಲ್ಲಿಗೆ ಬರುವುದುಂಟು. ಮುಂದೆ ಅದು ಆಷಾಢಶುದ್ಧ ನವಮಿಯ ದಿನ ವಾಖರೀಸ್ ಎಂಬ ಸ್ಥಳಕ್ಕೆ ಬರುತ್ತದೆ. ನಂತರ ಏಕತಪೂರ್, ಬೋತಸ್ ಅಂಬೆ, ಜಳಗಾಂ, ಬಾರಾಮತಿ, ಅಕಲೂಸ್ ಮೊದಲಾದ ಗ್ರಾಮಗಳ ಮುಖಾಂತರ ಪಂಢರಪುರಕ್ಕೆ ಆಗಮಿಸುವದು. ನಂತರ ಈ ಗುಂಪಿನವರು ತಮ್ಮ ಬಿಡಾರವನ್ನು ತುಕಾರಾಮ ಮಹಾರಾಜರ ಮಂದಿರದಲ್ಲಿ ಮಾಡುತ್ತಾರೆ.

With best compliments

BPL . SANYO

RADIO & T. V.

Always the best





BPL-TV COLOUR TELEVISION

Always the best!



Distrubutors for : **Dharwad, Belgaum, Bellary, Chitradurga & North Kanara Districts**

Dealership Enquires Solicited.

Shree Enterprises

"Shriji Krupa" Hosur IInd Cross
HUBLI-580021.

Phone : 64981

Show Room :

Shree Electronics

Koppikar Road,
HUBLI-580020.

Phone : 65454

ಪೈಠಣದ ನಾಥರ ಪಾಲಕಿ

ಈ ಪಲ್ಲಕ್ಕಿಯು ಜ್ಯೇಷ್ಠ ವದ್ಯ ಸಪ್ತಮಿಯ ದಿನ ಪೈಠಣದಿಂದ ಹೊರಡುತ್ತದೆ. ಚರಕವಾಡಿ, ಮುಂಗಿ, ಪಾರ್‌ಗಾವ್, ರಾಕ್ಷಸಭವನ, ರಾಯಮೋಹ, ಪಾಟೋದ, ನಿಘುಳ, ಪರಾಂಡ, ವಿರಾಟಗಾವ್, ಶಿರಾಡೋಣ ಮಾರ್ಗವಾಗಿ ಪುಂಢರಪುರಕ್ಕೆ ಆಗಮಿಸುತ್ತದೆ. ಇವರು ನಾಥ ಚೌಕದಲ್ಲಿರುವ ಏಕನಾಥ ಮಹಾರಾಜನ ಮಂದಿರದಲ್ಲಿ ತಮ್ಮ ಬಿಡಾರವನ್ನು ಮಾಡುತ್ತಾರೆ.

ನಿವೃತ್ತನಾಥ ಪಾಲಕಿ

ಈ ಪಲ್ಲಕ್ಕಿಯು ತ್ರ್ಯಂಬಕೇಶ್ವರದಿಂದ ಹೊರಡುತ್ತದೆ. ಸಾತಪುರ, ನಾಸಿಕ್, ಪಳಸ್, ರೋಣಾರ್‌ವಾಡಿ, ಬೇಲಾಪುರ್, ನಗರ್, ಮಿರಜ್‌ಗಾವ್ ಕಾಕಳಿ, ಕರಕಂಬ ಚಿಂಚೋಳಿ ಮಾರ್ಗವಾಗಿ ಪಂಡರಾಪುರವನ್ನು ತಲುಪುತ್ತದೆ. ಇವರು ನಿವೃತ್ತನಾಥ ಮಂದಿರದಲ್ಲಿ ತಮ್ಮ ಬಿಡಾರವನ್ನು ಮಾಡುತ್ತಾರೆ.

ಶ್ರೀ ಸೋಪಾನ್ ಕಾಕಾ ಪಾಲಕಿ

ಈ ಪಲ್ಲಕ್ಕಿಯು ಜ್ಯೇಷ್ಠ ವದ್ಯ ದ್ವಾದಶಿಯ ದಿನ ಸಾಸವಡ ಎಂಬ ಸ್ಥಳದಿಂದ ಹೊರಡುತ್ತದೆ. ಶಿರವಡ್, ಅಂದೋರಿ, ಗೋಖಳೆ, ದಹಿಗಾವ್, ಖಂಡಾಳಿ, ರೇಗಾವ್ ವಾಖರಿ, ಈ ಮಾರ್ಗವಾಗಿ ಈ ಪಾಲಕಿಯು ಪಂಢರಾಪುರವನ್ನು ತಲುಪುತ್ತದೆ.

ಶ್ರೀ ಮುಕ್ತಾಬಾಯಿ ಪಾಲಕಿ

ಈ ಪಲ್ಲಕ್ಕಿಯು ಜ್ಯೇಷ್ಠ ಶುದ್ಧ ಷಷ್ಠಿಯ ದಿನ ಐದಲಾಬಾದ್ ಎಂಬ ಸ್ಥಳದಿಂದ ಹೊರಡುತ್ತದೆ. ಮುಂದೆ ಅದು ಆಷಾಢ ಶುದ್ಧ ಪಂಚಮಿಯ ದಿನ ಪಂಡರಾಪುರಕ್ಕೆ ಬಂದು ತಲುಪುತ್ತದೆ. ಈ ಗುಂಪಿನವರು ದತ್ತ ಘಾಟ್ ಸಮೀಪದಲ್ಲಿರುವ ಮುಕ್ತಾಬಾಯಿ ಮಠದಲ್ಲಿ ಬಿಡಾರ ಮಾಡುತ್ತಾರೆ.

ರಾಜಕೀಯ ಚಾಣಕ್ಯನಿಗೆ

ಹಣಕಾಗಿ ಎಲ್ಲವನು
ಮಾರುತಿಹೆ ಸತ್ಯ
ಈ ಬಗೆ ಶ್ರೀನಿಂಗು
ಸೀಕೊಡಲು ಸಾಧ್ಯ !
ಯಾಕಂದ್ರೆ ಜನಗಳಿಗೆ
ಗಲಿಗಾರು ಘಂಟೆ
"ಥೂ" ಎಂದು ಉಗಿದರೂ
ನೀ ಮಾತ್ರ ಮುಂದೆ !

—ಜಿ. ಎಸ್. ಅನ್ನದಾನಿ



ಶ್ರೀ ಮುಕ್ತಾಬಾಯಿ ರಾಂ ಪಾಲಕಿ

ಜ್ಯೇಷ್ಠ ಶುದ್ಧ ಹುಣ್ಣಿಮೆಯ ದಿನ ಜಳಗಾಂ ಎಂಬ ಸ್ಥಳದಿಂದ ಈ ಪಲ್ಲಕ್ಕಿಯು ಹೊರಡುತ್ತದೆ. ವಾರಘೆ, ದುಶಖೇಡ್, ಅಂಥುರಲಿ, 'ಬೋರ್‌ಗಾವ್, ಖುಲ್ತಾಬಾದ್, ಪ್ರವರ ಸಂಗಮ, ಸೋವಾಸೆ, ಗುರುಸಾಳೆ, ಶಿರಾಡೋಣೆ ಮಾರ್ಗವಾಗಿ ಪಂಢಪುರಕ್ಕೆ ಬಂದು ತಲುಪುತ್ತದೆ. ಇವರು ಕಾಸಾರ ಘಾಟದ ಸಮೀಪದಲ್ಲಿರುವ ಜಳಗಾಂವ್‌ಕರ್ ಮಠದಲ್ಲಿ ಬಿಡಾರ ಮಾಡುತ್ತಾರೆ.

ಜನಾರ್ದನಸ್ವಾಮಿ ಪಾಲಕಿ

ಈ ಪಲ್ಲಕ್ಕಿಯು ಜ್ಯೇಷ್ಠ ವದ್ಯ ದ್ವಿತೀಯ ದೌಲತಾಬಾದಿನಿಂದ ಹೊರಡುತ್ತದೆ. 1818 ರಲ್ಲಿ ಬಾಬೂರಾವ್ ಆನಂದೆ ಎಂಬ ಮಹನೀಯರು ಈ ಪಾಲಕಿಯನ್ನು ತರುವ ಸಂಪ್ರದಾಯವನ್ನು ಆರಂಭಿಸಿದರು. ಇವರು ಔರಂಗಾಬಾದ್, ಅಂಬಗಾವ್, ವಾಂಜೂರಿ, ಮಿರಜ್‌ಗಾವ್. ತರಜೆಗಾವ್ ದೇವಡೆ ಈ ಮಾರ್ಗವಾಗಿ ಪ್ರಯಾಣ ಮಾಡುತ್ತಾ ಪಂಢರಪುರಕ್ಕೆ ಆಗಮಿಸಿ ದೇಶಮುಖರ ವಾಡೆಯಲ್ಲಿ ತಮ್ಮ ಬಿಡಾರವನ್ನು ಮಾಡುತ್ತಾರೆ.

ಬಾಬಾಜಿ ಚೈತನ್ಯರ ಪಾಲಕಿ

ಈ ಪಲ್ಲಕ್ಕಿಯು ಜ್ಯೇಷ್ಠ ಸಪ್ತಮಿಯ ದಿನ ಚೈತನ್ಯರ ಸಮಾಧಿಯ ಸ್ಥಳದಿಂದ ಹೊರಡುತ್ತದೆ. ಧವಳಗಾವ್, ಬೇಲ್‌ವಂಡಿ, ಶ್ರೀ ಗೋಂದೆ, ಜಲಾಲ್‌ಪೂರ್, ಕೇಲಾಗಾಂವ್ ಆರಣಿ ಈ ಮಾರ್ಗವಾಗಿ ಪಂಢರಪುರವನ್ನು ತಲುಪುತ್ತದೆ. ಇವರು ಚೈತನ್ಯ ಮಠದಲ್ಲಿ ತಮ್ಮ ಬಿಡಾರವನ್ನು ಮಾಡುತ್ತಾರೆ.

ಶ್ರೀ ಜಯರಾಮಸ್ವಾಮಿ ವಡಗಾವ ಕರ್ ಪಾಲಕಿ

ಈ ಪಲ್ಲಕ್ಕಿಯು ಆಷಾಢ ಶುದ್ಧ ತ್ರಯೋದಶಿಯ ವಡಗಾವ್ ಎಂಬ ಸ್ಥಳದಿಂದ ಹೊರಟು ದಶಮಿಯ ದಿನ ಪಂಢರಪುರಕ್ಕೆ ಬಂದು ತಲುಪುತ್ತದೆ.

ಶ್ರೀ ಬಲಭೀಮ ಮಹಾರಾಜ ಪಾಲಕಿ

ಆಷಾಢ ಶುದ್ಧ ಚತುರ್ಥಿಯ ದಿನ ಈ ಪಾಲಕಿ ಸೋಲಾಪೂರ್ ಜಿಲ್ಲೆಯ ಸಾಡ್ಯ ಎಂಬ ಸ್ಥಳದಿಂದ ಹೊರಡುತ್ತದೆ. ಮಾಲವಾಡಿ, ಭೋಸೆ, ಈ ಮಾರ್ಗದಿಂದ ಪ್ರಯಾಣ ಮಾಡುತ್ತ ಪಂಢರಪುರವನ್ನು ತಲುಪುತ್ತದೆ.

ಭೂತೇಶ್ವರ ಮಹಾರಾಜರ ಪಾಲಕಿ

ಜ್ಯೇಷ್ಠ ಶುದ್ಧ ಷಷ್ಠಿಯ ದಿನ ಈ ಪಾಲಕಿಯು ನಾಗಪೂರ್ ಶಹರ್‌ನಿಂದ ಹೊರಡು

... ರ್ಣಾಸ್ಪೂರಿ ಆಗೇನಾಳಿ. ಉಸು ...ಗಿ, ಕಾರಂಜಾಮಹತ್ಪೂರ್, ಪಡಗಾಂ, ...ಬೇ ...ಗಾಯಿ ಪೈಠಣ್ ಬಾರ್ಸಿ, ಈ ಮಾರ್ಗವಾಗಿ ಪ್ರಯಾಣ ಮಾಡುತ್ತ ಆಷಾಢಶುದ್ಧ ಚತುರ್ಥಿಯ ದಿನ ಪಂಢರಪುರಕ್ಕೆ ಬಂದು ತಲುಪುತ್ತದೆ. ಇವರು ವಿಪ್ರ ...ರ ಮಂದಿರದ ಸಮೀಪದಲ್ಲಿ ಇಳಿಯುತ್ತಾರೆ.

ವೀರೇಶ್ವರ ಮಹಾರಾಜರ ಪಾಲಕಿ

ಈ ಪಲ್ಲಕ್ಕಿಯು ಜ್ಯೇಷ್ಠ ವದ್ಯ ದ್ವಾದಶಿಯ ದಿನ ಸಾಸವಡೆ ಎಂಬ ಸ್ಥಳದಿಂದ ಹೊರಟು ಪಾರಗಾಂವ್, ಭೋರಿ ಯವತ್, ಇಂದಾಪೂರ್, ವಾಖರೀಸ್ ಈ ಮಾರ್ಗವಾಗಿ ಆಷಾಢ ಶುದ್ಧ ದಶಮಿಯ ದಿನ ಇನ್ನುಳಿದ ಪಲ್ಲಕ್ಕಿಗಳೊಂದಿಗೆ ಪಂಢರಪೂರವನ್ನು ಪ್ರವೇಶ ಮಾಡುತ್ತದೆ. ಇವರು ದತ್ತ ಘಾಟ್ ಸಮೀಪದಲ್ಲಿಯೇ ತಮ್ಮ ಬಿಡಾರವನ್ನು ಮಾಡುತ್ತಾರೆ.

ಗೋರಖನಾಥಪಾಲಕಿ

ಈ ಪಲ್ಲಕ್ಕಿಯು ಆಷಾಢ ಶುದ್ಧ ತೃತೀಯ ಬತ್ತೀಸ್ ಶಿರಾಳೆ ಎಂಬ ಸ್ಥಳದಿಂದ ಹೊರಟು ದಶಮಿಯದಿನ ಪಂಢರಪುರಕ್ಕೆ ಆಗಮಿಸುತ್ತದೆ. ಈ ಗುಂಪಿನವರು ಕಾನ್‌ಪಾಟಿ ಎಂಬ ಮಠದಲ್ಲಿ ತಮ್ಮ ಬಿಡಾರವನ್ನು ಮಾಡುತ್ತಾರೆ.

ಮಚ್ಛೇಂದ್ರನಾಥ್ ಮಹಾರಾಜರ ಪಾಲಕಿ

ಈ ಪಲ್ಲಕ್ಕಿಯು ಮಚ್ಛೇಂದ್ರಗಡ ಎಂಬ ಸ್ಥಳದಿಂದ ಹೊರಟು ಕುಂಡಲ ಆಳಸುಂದೆ, ರೇವಣಗಾಂವ್, ಶೇಜಪುರ, ಕರಗಣಿ, ಮುಹುದ ಈ ಮಾರ್ಗವಾಗಿ ವಾಖರೀಸ್ ಎಂಬಲ್ಲಿಗೆ ಬಂದು ಮುಂದೆ ಪಂಢರಪುರವನ್ನು ತಲುಪುತ್ತದೆ. ಈ ಗುಂಪಿನವರು ಕೈಕಾಡಗಲ್ಲಿ ಸಮೀಪದಲ್ಲಿರುವ ಝುಂಡಾ ನಾಕಾ ಎಂಬ ಸ್ಥಳದಲ್ಲಿ ಇಳಿಯುತ್ತಾರೆ.

ಶ್ರೀ ದಾದಾಮಹಾರಾಜ್ ಸಾತಾರಾಕರ್ ಪಾಲಕಿ

ಸಾತಾರಾದಿಂದ ಈ ಪಾಲಕಿಯು ಹೊರಟು ತುಕಾರಾಮ್ ಮಹಾರಾಜರ ಪಾದುಕೆಗಳನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಗೋಂದಾವಲಿ, ಮಸವಡ್, ಭಾಳವಡಿ, ಮಾರ್ಗವಾಗಿ ವಾಖರೀಸ್ ಎಂಬ ಸ್ಥಳಕ್ಕೆ ಬಂದು ದಶಮಿಯದಿನ ಪಂಢರಪುರ ಪ್ರವೇಶವನ್ನು ಮಾಡುತ್ತದೆ.

ಶಂಕರ ಮಹಾರಾಜ್ ಪಾಲಕಿ

ಈ ಪಲ್ಲಕ್ಕಿಯು ಜ್ಯೇಷ್ಠ ಶುದ್ಧ ಅಷ್ಟಮಿಯ ದಿನ ಜಿಲ್ಲಾ ಅಮರಾವತಿ, ಈ ಸ್ಥಳದಿಂದ ಹೊರಟು ಶಿಂಗಣಾಪುರ, ಉಮರಾವತಿ, ಜೋಸಿ, ಧನರ್, ಕರಂಜಾ. ಮಂಗಳೂರ ಕಾನೇರ ಗಾಂವ್, ಇಂಗೋಲಿ, ಪೈಠಣಿ, ಪರಳಿ, ವೈದ್ಯನಾಥ್ ಅಂಬೇ ಜೋಗಾಯಿ ಬಾರ್ಸಿ ಮಾರ್ಗವಾಗಿ ಪ್ರಯಾಣ ಮಾಡುತ್ತಾ ಆಷಾಢಶುದ್ಧ ಚತುರ್ಥಿಯ ದಿನ ಪಂಢರಪುರವನ್ನು ಬಂದು ಸೇರುತ್ತದೆ.

ಶ್ರೀ ಜ್ಞಾನೋಬಾ ಮಹಾರಾಜರ ಪಾಲಕಿ

ಆಷಾಢ ಶುದ್ಧ ಸಪ್ತಮಿಯ ದಿನ ಭುವನೇಶ್ವರದಿಂದ ಹೊರಟ ಪಾಲಕಿಯು ಶಿರಾಪೂರ್ ಮಾರ್ಗವಾಗಿ ದಶಮಿಯ ದಿನ ಪಂಢರಪುರವನ್ನು ತಲುಪುತ್ತದೆ.

ಶ್ರೀ ನೇಕೋಜೀಬುವಾ ಪಾಲಕಿ

ಇದು ಶಿರಸವಾಡಿ ಪಳನಿ, ಧೂಳಾದೇವ್, ತಾಂಡೋಶಾವಾಡಿ, ವಾಖರಿ ಮಾರ್ಗವಾಗಿ ಪ್ರಯಾಣ ಮಾಡುತ್ತ ಶುದ್ಧ ದಶಮಿಯ ದಿನ ಪಂಢರಪುರವನ್ನು ಪ್ರವೇಶ ಮಾಡುತ್ತದೆ.

ಶ್ರೀ ಗಾಡಗೆ ಬುವಾ ಪಾಲಕಿ

ಈ ಗುಂಪಿನವರು ಕರಹಾಡ್ ತಾಲ್ಲೂಕಿನಲ್ಲಿರುವ ಕುಶೆಗಾಂವ್ ಎಂಬ ಸ್ಥಳದಿಂದ ಜ್ಯೇಷ್ಠ ವದ್ಯ ತ್ರಯೋದಶಿಯ ದಿನ ಹೊರಟು ಶಿಂಗಣವಾಡಿ, ಕರಹಾಡ್, ಪಾಂಜೋಳಿ ಮಸವಡ್, ತಾಂಡೋಳವಾಡಿ ಮಾರ್ಗದಿಂದ ಪ್ರಯಾಣ ಮಾಡುತ್ತಾ ಆಷಾಢ ಶುದ್ಧ ದಶಮಿಯ ದಿನ ಪಂಢರಪೂರವನ್ನು ತಲುಪುತ್ತಾರೆ.





ರುಕ್ಮಿಣಿ ಪಾಲಕಿ


ಈ ಪಾಲಕಿಯು ವಿದರ್ಭದಲ್ಲಿರುವ ಕುಂಡಣಪುರ ಅಥವಾ ಕೌಂಡಿಣ್ಯಪುರ ಎಂಬ ಸ್ಥಳದಿಂದ ಜ್ಯೇಷ್ಠ ಶುದ್ಧ ಸಪ್ತಮಿಯ ದಿನ ಹೊರಡುತ್ತದೆ. ಉಮರಾವತಿ ಚಾಂದೂರ್ ಮಾಸರಬೇಡ್, ಕವಡ ನಾಂದಗಾವ್ ಲೋಹಗಾವ್, ಕಾಳೇಗಾವ್, ಇಂಗೋರಿ, ಪರಳಿ ಅಂಬೇಜೋಗಾಯಿ, ಒಣಗಾವ್, ಮಾತಾ ಈ ಮಾರ್ಗವಾಗಿ ಪ್ರಯಾಣ ಮಾಡುತ್ತ ಪಂಢರಪುರವನ್ನು ತಲುಪುತ್ತದೆ. ಈ ಗುಂಪಿನವರು ಪಂಚಮುಖಿ ಮಾರುತಿ ದೇವ ಮಂದಿರದ ಸಮೀಪದಲ್ಲಿರುವ ರುಕ್ಮಿಣಿ ಮಂದಿರದಲ್ಲಿ ತಮ್ಮ ಬಿಡಾರವನ್ನು ಮಾಡುತ್ತಾರೆ.

ಶ್ರೀ ಶೇಷನಾರಾಯಣ ಪಾಲಕಿ

ಇದು ಅಮರಾವತಿ ಜಿಲ್ಲೆಯಲ್ಲಿರುವ ಚಾಂದೂರ್ ತಾಲ್ಲೂಕಿನ ವಾಘವಣೆ ಎಂಬ ಗ್ರಾಮದಿಂದ ಜ್ಯೇಷ್ಠ ಶುದ್ಧ ಅಷ್ಟಮಿಯ ದಿನ ಹೊರಡುತ್ತದೆ. ಕಾರಂಜಿ, ಇಂಗೋರಿ ಪರಳಿಯಾಂದೆ, ಮಮದಾಪೂರ್, ಮಾತಾ ಈ ಮಾರ್ಗವಾಗಿ ಪಂಢರಪುರವನ್ನು ತಲುಪುತ್ತದೆ. ಈ ಪಾಲಕಿಗಳ ಗುಂಪಿನ ಹೊರತಾಗಿ ಪಂಢರಪುರಕ್ಕೆ ಆಗಮಿಸುವ ಇನ್ನೂ ಅನೇಕ ಗುಂಪುಗಳಿವೆ. ಅವುಗಳಲ್ಲಿ ಕೆಲವುಗಳ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ. (1) ನೀಳೋಬರಾಮ್ ಪಿಂಪಳಣಿ. (2) ರಾಮದಾಸ ಸ್ವಾಮಿ ಸಜ್ಜನಗಡ (3) ವೆಂಕಟಸ್ವಾಮಿ ನಿನಗೂರ್ (4) ತಪಕೀರೆ ಬಾಬಾ ಬೆಂಚಗಾಂವ್ (5) ದಾಮಾಜಿ ಪಂತ ಮಂಗಳವೇಡೆ (6) ಗೋಮಾತೇಜ ಅಮರಾವತಿ (7) ಸಂತ ನಾಮದೇವ ಮಹಾರಾಜ್ ಪಂಢರಪುರ (8) ನರಹರಿ ಸೋನಾರ್ ಪಂಢರಪುರ (9) ರೋಹಿದಾಸ್ ಪಂಢರಪುರ (10) ಚೋಖಾಮೇಳ ಪಂಢರಪುರ (11) ಜಂಕಾ ಮೋಹುಣಪುರ

(12)ಚೌರಂಗಿನಾಥ್ ಶೇಗಾಂವ್(13) ಜೀಣೆರಾವ್ ಮಹಾರಾಜ್ ನಾಗಪೂರ್ (14) ಕಾಶಿನಂದ ಬ್ರಹ್ಮಚಾರಿ ನಾಗಪೂರ್ (15) ಸಾವತಾಮಾಳಿ ಹರಣೆ (16) ರಾವ್‌ಬೆಡ್‌ದಹಿಜವಾಡಿ (17) ಸಂತಾಬಾಯಿ ಪಂಢರಪುರ್ ಮೊದಲಾದ ಪಲ್ಲಕ್ಕಿಗಳ ಗುಂಪನ್ನು ನೋಡುವುದೇ ಯಾತ್ರಾರ್ಥಿಗಳ ಕಣ್ಣಿಗೆ ಹಬ್ಬವಾಗುತ್ತದೆ. ಚಂದ್ರಭಾಗಾ ತೀರದಲ್ಲಿರುವ ಮರಳು ಹಾಸಿಗೆಯ ಮೇಲೆಲ್ಲ ಈ ವಾರ್‌ಕರಿ ಸಂಘದ ಯಾತ್ರಿಕರ ಧ್ವಜ ಪತಾಕೆಗಳೇ ಕಾಣಿಸುತ್ತವೆ. ಎತ್ತ ನೋಡಿದತ್ತ ತಾಳ, ತಂಬೂರಿ ಮೃದಂಗಗಳ ನಿನಾದವು ಜಯಘೋಷದೊಂದಿಗೆ ನೂರ್ಮಡಿಯಾಗಿ ಮಾರ್ದನಿಗೊಳ್ಳುತ್ತಿರುವುದನ್ನು ಕೇಳಿದಾಗ ಮೈಮನಗಳು ಭಕ್ತಿಯಿಂದ ರೋಮಾಂಚನಗೊಳ್ಳುತ್ತವೆ. ಪಂಢರಪುರದಲ್ಲಿ ಈ ಪಾಲಕಿಗಳನ್ನು ತಂದ ಪ್ರಮುಖರಿಗೆಲ್ಲ ಮರ್ಯಾದೆ ಮಾಡಲಾಗುತ್ತದೆ. ಆಷಾಢ ಏಕಾದಶಿ ಹಾಗೂ ಕಾರ್ತೀಕ ಏಕಾದಶಿ ಈ ಎರಡು ಸಂದರ್ಭಗಳಲ್ಲಿ ಗಾಳಿ-ಮಳೆ ಬಿಸಿಲುಗಳನ್ನು ಲೆಕ್ಕಿಸದೆ ಅನ್ನಾಹಾರಗಳ ಪರಿವೆಯಿಲ್ಲದೆ ನೂರಾರು ಮೈಲು ನಡೆದುಕೊಂಡು ಬಂದು ಭಕ್ತಿ ಪರವಶರಾಗಿ ಭಗವನ್ನಾಮ ಸಂಕೀರ್ತನೆಯಲ್ಲಿ ತಲ್ಲೀನರಾಗಿ ನರ್ತಿಸುತ್ತಿರುವ ಆ ಗುಂಪುಗಳನ್ನು ಕಂಡಾಗ ಯಾತ್ರಿಕರ ಮನದಲ್ಲಿ ಭಕ್ತಿಯ ಬುಗ್ಗೆಯು ಚಿಮ್ಮಿ ಕೃತಾರ್ಥ ಭಾವನೆಯಿಂದ ಈ ಭಾಗವತ ಧರ್ಮಕ್ಕೆ ತಲೆಬಾಗಬೇಕೆನ್ನಿಸುತ್ತದೆ. ಇದು ಮಹಾರಾಷ್ಟ್ರದ ಜ್ಞಾನಿಗಳ ಸಂತಶ್ರೇಷ್ಠರ ಒಂದು ಮಹಾ ಜಾತ್ರೆಯಾಗಿ ಪರಿಣಮಿಸುತ್ತದೆ. ಭಾರತ ಭೂಮಿಯಲ್ಲಿ ಹುಟ್ಟಿದ ಎಲ್ಲಾ ನದಿಗಳು ಒಂದಿಲ್ಲೊಂದು ದಿನ ಸಮುದ್ರ ರಾಜನನ್ನು ಕೂಡುವಂತೆ ನಾಡಿನ ನಾನಾ ಭಾಗಗಳಿಂದ ಹರಿದು ಬರುತ್ತಿರುವ ಈ ಭಕ್ತರ ಸಮೂಹವು ವಿಠ್ಠಲನೆಂಬ ಹೆಸರಿನ ಸಮುದ್ರನಾಥನನ್ನು ಕೂಡಿಕೊಳ್ಳುವ ದೃಶ್ಯವನ್ನು ಕುರಿತು ಬರೆಯುವುದು ಸಾವಿರ ನಾಲಿಗೆಯುಳ್ಳ ಶೇಷನಿಗೂ ಸಹ ಅಸಾಧ್ಯವೆಂದೆನಿಸುತ್ತದೆ.







ವರ್ಗಾವಣೆ...?

ವಿ.ಆರ್.ಸಿ. ಶೇಖರ್.





ಸರಸಮ್ಮ ಭಾರತೋತ್ಸವದಲ್ಲಿ



ಟಿ. ಸುನಂದಮ್ಮ

"ಸಧ್ಯ! ನಿಮಗೆ ಪೆನ್ಷನ್ ಆಗಿವೆಯಲ್ಲ?"

ದಿನಪತ್ರಿಕೆ ಓದುತ್ತಿದ್ದ ಸರಸಮ್ಮನ ಈ ಸಂತೋಷೋದ್ಗಾರ ಕಿವಿಗೆ ಬಿದ್ದಾಗ, ಪತಿರಾಯ ಪೈಲಾರಯ್ಯನಿಗೆ ಅನುಮಾನ ಬಂತು–ತನ್ನ ಕಿವಿಯೂ ಸಿಂಚಣಿ ಹಾದಿ ಹಿಡಿಯಿತೋ ಎಂದು.

"ಕೇಂದ್ರ ಸರಕಾರದ ನೌಕರರು ಐವತ್ತೆಂಟು ತುಂಬುವವರೆಗೆ ತುಂಬುಸಂಬಳ ತೆಗೆದ್ಕೊಳ್ತಾರೆ; ವಿಜ್ಞಾನಿಗಳು ನ್ಯಾಯಾಧೀಶರು ಮತ್ತೂ ಎರಡು ವರ್ಷ ಹೆಚ್ಚಾಗಿ ಬ್ಯಾಂಕ್ ಬ್ಯಾಲೆನ್ಸ್ ಭರ್ತಿಮಾಡಿ ಕೊಳ್ತಾರೆ; ನೀವು....ಜುಜುಬಿ ಐವತ್ತೈದಕ್ಕೇ ಮನೇಲಿ ಕೂತಿರಿ!"–ಮೂವತ್ಮೂರು ಸಂವತ್ಸರಗಳು ಕೆಳಗೆ ರಾಜ್ಯ ಸರಕಾರದ ನೌಕರಿ ಹಿಡಿದದ್ದೇ ಮಹಾಪರಾಧವಾಯಿತೆಂದು ಪೈಲಾರಯ್ಯನಿಗೆ ನಿತ್ಯ ಕ್ಕೊಮ್ಮೆಯಾದರೂ ನೆನಪು ಮಾಡಿ ಕೊಡುತ್ತಿದ್ದಳು, ಮಡದಿ ಸರಸಮ್ಮ.

ಈಗ, 'ಆದದ್ದೆಲ್ಲ ಒಳಿತೇ ಆಯಿತು' ಎಂದು ದಾಸರ ಧ್ವನಿಗೂಡಿಸುತ್ತಿದ್ದಾಳಲ್ಲ? ಸಿಂಚಣಿಯೇ ಪರಮಭಾಗ್ಯ ಎನ್ನುತ್ತಿದ್ದಾಳಲ್ಲ?

"ಕೆಲಸಕ್ಕೆ ಬಾರದೋರ್ನ....ಓಹೊ.... ಅಂದ್ರೆ, ಕೆಲ್ಸದಲ್ಲಿ ದಕ್ಷತೆ ಇಲ್ಲದೋರಿಗೆ ಒತ್ತಾಯದ ನಿವೃತ್ತಿ ಕೊಟ್ಟು ಮನೇಗೆ ಕಳಿಸಬೇಕು ಅಂತ, ಇವತ್ತು ಮಂತ್ರಿ ಮಂಡಲ ಸಭೆ ಸೇರಿದಾಗ ನಿರ್ಧಾರ ತೆಗೆದ್ಕೊಂಡರಂತೆ–ಇಲ್ನೋಡಿ!" ಎನ್ನುತ್ತ ಪತ್ರಿಕೆಯಲ್ಲಿನ ಸದರಿ ಕಲಮನ್ನು ಪೈಲಾರಯ್ಯನ ಮುಖಕ್ಕೆ ಚಾಚಿ ಮತ್ತೊಮ್ಮೆ ಮುಸಿಮುಸಿ ನಕ್ಕಳು.

ಕೆಳಗಿದ್ದ ಇಬ್ಬರು ಮಹನೀಯರು ಈತನನ್ನು ದಾಟಿ ಮೇಲೇರಿ ಸೆಕ್ರೆಟರಿಗಳಾದದ್ದುಂಟು; ತಾನು ಸೂಪರಿಂಟೆಂಡೆಂಟ್ ಕುರ್ಚಿಗೆ ಸ್ಥಿರಸ್ವತ್ತಾಗಿ ಉಳಿದೇ ರಿಟೈರಾದದ್ದುಂಟು. ಆದರೂ....ಹೆಂಡತಿಯಾದವಳು ಹೀಗೆ ಹಂಗಿಸುವುದೇ? ಕಾಲ ತುಂಬಾ ಕೆಟ್ಟುಹೋಯ್ತು ಎಂದು ಕೊಂಡ!

ಆರುಮಕ್ಕಳು ಮನೆತುಂಬಿದ್ದಾಗಲೇ ಕ್ಷೇಮವಾಗಿತ್ತು: ಬಿಡುವಿಲ್ಲದ ಕೆಲಸದ ಮಧ್ಯೆ ಮನೆಯಾಕೆಗೆ ಪೇಪರಿನ ಹೆಡ್ ಲೈನ್ಸ್ ಓದುವುದಕ್ಕೂ ಸಾಧ್ಯವಿತ್ತು; ಈಗ ಅವರೆಲ್ಲ ರೆಕ್ಕೆಬಲಿತು ಹಾರಿಹೋಗಿದ್ದಾರೆ. ಈಕೆ ಪತ್ರಿಕೆಯ ದಪ್ಪಕ್ಷರದ ಹೆಸರಿನಿಂದ ಹಿಡಿದು ಮುದ್ರಣಕಾರನ ಪ್ರವರದವರೆಗೆ ಓದಿ ತನ್ನ ತಲೆ ತಿನ್ನುತ್ತಾಳೆ!

ಸರಸಮ್ಮನ ಪತ್ರಿಕಾ ಪಠಣ ಪುಟದಿಂದ ಪುಟಕ್ಕೆ ಸಾಗಿತ್ತು.

"ರೀ!!"

ಮತ್ತಿನ್ನೇನು ಮುಳ್ಳು ಕುಟುಕೋ? ಪತಿ ಪ್ರಾಣ ಮೊದಲೇ ಮೈ ಸವರಿಕೊಂಡ.

"ಒಳ್ಳೇ ಛಾನ್ಸು ಕಣ್ರೀ!"

ತನ್ನನ್ನೇನಾದರೂ ಪುನಃ ಉದ್ಯೋಗಕ್ಕೆ ಹಚ್ಚುತ್ತಾಳೋ ಎಂದು ಒಳಗೊಳಗೇ ಆತಂಕ.

"ನನಗೂ ಹಾಡುಹಸೆ ಬರುತ್ತೆ, ಸಂಗೀತಾನೂ ಕಲ್ತಿದೀನಿ. ರಂಗೋಲಿ ಸೊಗಸಾಗಿ ಇಡ್ತೀನಿ...."

"ಹಂ... ಆಯ್ತು, ಅದರೆ.... ಈಗ...?"

"ನಡೀತಿಲ್ವಾ ಭಾರತೋತ್ಸವ (ಫೆಸ್ಟಿವಲ್ ಆಫ್ ಇಂಡಿಯಾ)– ಫ್ರಾನ್ಸ್‌ನಲ್ಲಿ,

ಕಾರ್ಯಕ್ರಮದಲ್ಲಿ ? ನಮ್ಮ ಕಲೆ. ಜನಪದ. ಹಿಂದಿನ ಸಂಸ್ಕೃತಿದರ್ಶನ– ಇದಕ್ಕೆ ತುಂಬ ಸ್ವಾಗತವಂತೆ. ನೋಡಿ ಓದಿ ! ವಿವರವಾಗಿ ಬರೆದಿದ್ದಾರೆ ಪೇಪರ್ನಲ್ಲಿ."

'ಹಾ ರಾ ಹಾ ಕೋ ೞ ವ ರಿ ಗೆ ಹಾಡು ಕಲೀನಮ್ಮ' ಅನ್ನುತ್ತ ಸರಸು–ಸರಸು ಅವಳ ಜವಳಿಗೆ ಹಾಡಿನ ಮೇಸ್ಟ್ರನ್ನಿಟ್ಟಿದ್ದರು. ಅಪ್ಪನಮ್ಮ : ಮೈಲಾರಯ್ಯ ಅವಳ ಕೊರಳಿಗೆ. ಹಾರಹಾಕುವವರೆಗೆ ಅಪಸ್ವರ ಕಿರಲಿದ್ದಳು ಸರಸೂನೂ. ನಂತರ, ಎರಡುಮಕ್ಕಳಾದ ಮೇಲೆ, ನರಸೂ ಮೇಲೆ ಪೈಪೋಟಿ ಹೂಡಿ ಅವಳ ಪಿಟೀಲು ಮಾಸ್ತರನ ಮುಂದೆ ತಾನೂ ಕೂತು ಕನಾನು ಕುಯ್ದು ತಂತಿಗಳನ್ನು ಕತ್ತಿದಳು, ಪಿಟೀಲನ್ನು ಅಳಿಸಿದ್ದಳು. ಆ ಸಂಗೀತ....?"

ಹೆಹೆ... ಆದರೆ.... ಭಾರತೋತ್ಸವದಲ್ಲಿ ಭಾಗವಹಿಸಬೇಕಾದರೆ, ಚೆನ್ನಾಗಿ ಸಂಗೀತ ಬಂದಿರಬೇಡ್ವೇ ಸರಸ್ಸಾ ?"



ಪ್ರೇಮಯುದ್ಧದ ಕಲೆಯ
ಕಲಿಯ ಬಾ ಕಲಿಯೆ!
ತೀಕ್ಷ್ಣ ತಂಗಾಳಿಯದು
ಬಂದಿರನೆ ಗುರುವು.....
'ಮನುಜ'

"ಯಾಕೆ ? ಉತ್ತರ ಭಾರತದ್ದೆಲ್ಲ ಹೋಗಿದ್ದಾರಲ್ಲ. ಟಿ.ವೀ.ಲಿ. ಅವರು ಹಾಡಿದ್ದನ್ನ ಕೇಳಿದ್ರಲ್ಲ, ಅದಕ್ಕಿಂತ ಚೆನ್ನಾಗೇ ಹಾಡ್ತೀನಿ. ಹಸೇಗೆ ಕರೆದ ಹಾಡು ಆರತಿ ಹಾಡು ಆಶೀರ್ವಾದದ ಸೋಭಾನೆ ಬರಲ್ವೆ ನನಗೆ ? ಆಕಾಶವಾಣೀಲಿ 'ಸಂಪ್ರದಾಯದ ಹಾಡಿ'ನ ಕಾರ್ಯಕ್ರಮದಲ್ಲಿ ಹಾಡಿಲ್ವೇ ?....ಹುಂ! ಇವತ್ತೇ ನನ್ನ ಪರವಾಗಿ ಪ್ರ್ಯಾಪಿಲ್‌ಗೊಂದು ಪತ್ರ ಬರೆದು ಹಾಕಿ."

ಮೈಲಾರಯ್ಯ ಗೊಂದಲಕ್ಕೆ ಸಿಕ್ಕಿಕೊಂಡ. ತಾನು ಗುಮಾಸ್ತೆಯಾಗಿದ್ದವನೇ ಹೊರತಾಗಿಟೀಚರಾಗಿದ್ದವನಲ್ಲ. ತನಗ್ಯಾವ ಪ್ರ್ಯಾಪಿಲ್ ಬರಬೇಕು ?

"ಸರ್ಸೂ ? ಯಾವ ಪ್ರ್ಯಾಪಿಲ್ಲೇ ? ನನಗ್ಯಾರೂ ಶಿಷ್ಯರೇ ಇಲ್ಲವಲ್ಲ ?

"ಅವಳೇ ಕಣ್ರೀ–– ಈ ಉತ್ಸವಗಳಿಗೊಬ್ಬಳು ಮುಖ್ಯಸ್ಥಳಿದಾಳಲ್ಲ...."

ಮೈಲಾರಯ್ಯನ ಮಾಮೂಲು ಗಾಂಭೀರ್ಯವು ಒಡೆಯಿತು; ಹೊಟ್ಟೆ ಹಿಡಿದು ನಕ್ಕ, ಪಕಪಕ ನಕ್ಕ.


"ಪ್ರ್ಯಾಪಿಲ್ ಅಲ್ಲ! ಪುಪುಲ್ ಜಯಕರ್ ಅಂತ ಆಕೆಯ ಹೆಸರು !"

"ಏನೋ ಒಂದು; ಅಂತೂ ಕಾಗದ ಬರೆಯೋದು ಮರೀಬೇಡಿ;....ಹಾಂ ! ಅಡ್ರೆಸ್ ಸರಿಯಾಗಿ ಕೊಡಿ, ಉತ್ತರ ಬರದೇ ಹೋದೀತು !"

ೊ ೊ ೊ

ಬಂದೇ ಬಂದಿತ್ತು, ಪುಪುಲ್ ಜಯಕರಳ ಪತ್ರ-ಫ್ರಾನ್ಸಿಗೆ ರಿಟರ್ನ್ ಟಿಕೆಟ್ ಸಹಿತ. ಹಳೇ ಹಾಡಿನ ಪುಸ್ತಕದ ಧೂಳು ಕೊಡವಿ ಓದಿಕೊಂಡು ರಾಗ ಅಭ್ಯಾಸ ಮಾಡಿದ್ದಾಯಿತು; ಚುಕ್ಕೆ ಹಸೆಗಳನ್ನು ಮನೆ ತುಂಬ ಬರೆದು ಪ್ರಾಕ್ಟೀಸ್ ಮಾಡಿಕೊಂಡದ್ದೂ ಆಯಿತು. ತನ್ನ ಮದುವೆ ಬನಾರಸ್ ಸೀರೆ, ಬಂಗಾರದ ಕೆನ್ನೆಸರಪಳಿ, ದೇವರ ಕಲಶಕ್ಕೆ ಕಟ್ಟಿದ್ದ ರಾಗಟೆ, ಪ್ರಯಾಣ ಪೆಟ್ಟಿಗೆ ಸೇರಿದುವು. ಹೊಸದಾಗಿ ಕೊಂಡು ತಂದ ಬೆಳ್ಳಿ ಕಾಲುಂಗುರಗಳು ಕಾಲ್ಬೆರಳಲ್ಲಿ ಕೂತವು !

ವಿಮಾನದಲ್ಲಿ ಕೂತಿಟ್ಟಷ್ಟು ಕಾಲವೂ



ಡಯಟಿಂಗ್ ಎಫೆಕ್ಟ್ ಆಗಿದೆ ನೋಡಿ- ನನ್ನ ತೂಕ ಈಗ ಕೇವಲ 20 ಕೆ. ಜಿ. !!!

ನಿದ್ದೆಯೆ; ತಿಂದದ್ದು ಕುಡಿದದ್ದು ನೋಡಿದ್ದು ಒಂದೂ ನೆನಪಿಲ್ಲ. ವಿಮಾನ ದಿಂದ ಕರೆದೊಯ್ದ ಕೆಂಪು ಮನುಷ್ಯನ ಮುಖ ಮಾತ್ರ ಜ್ಞಾಪಕ !

ಐಫಿಲ್ ಟವರಿನ ರತ್ನಗಂಬಳಿಯ ಮೇಲೆ ಕೂತಿದ್ದಾಳೆ; ಅಧ್ಯಕ್ಷ ಮಿತ್ತೆರಾರು ಪ್ರಧಾನಿ ರಾಜೀವ್ ಗಾಂಧಿಯವರು ಅವರ ಹೆಂಡತಿಯರ ಎದುರು ಗಾಜಿನ ಕೋಣೆಯಲ್ಲಿ ಕಾಣುತ್ತಿದ್ದಾರೆ. ಸೊಗಸಾದ ಓಲಗ (ನಾದಸ್ವರ) ನಾದ ಪ್ರತಿಧ್ವನಿಸುತ್ತಿದೆ....

ಚುಕ್ಕೆ ಹಸೆ ಬರೆದದ್ದಾಯಿತು; ಅದರ ಸುತ್ತ ಅಲಂಕಾರ ಮಾಡಲು ಕೈಚೀಲದಿಂದ ಹೊರಕ್ಕೆ ತೆಗೆದಳು....

ಬಾಂಬ್ !....ಬಾಂಬ್ ! ಹಿಡಿಯಿರಿ ! ಹೊಡೆಯಿರಿ !...." -ನೂರಾರು ಧ್ವನಿಗಳು ಅರಚಿದವು.

"ಇದು ಬಾಂಬಲ್ಲ. ಕೆಮ್ಮಣ್ಣುಂಡೆ ! ಕೆಮ್ಮಣ್ಣು ! ಕೆಮ್ಮಣ್ಣುಂಡೆ !" -ಸರಸುವಿನ ಕೂಗು ಯಾರ ಕಿವಿಗೂ ಬೀಳಲೇ ಇಲ್ಲ; ಬಲಿಷ್ಠ ಹಸ್ತಗಳು ತೋಳಿಗೆ ಕೈ ಹಾಕಿದವು....!

"ಬಿಡಿ ! ಬಿಡಿ !!...."

"ಸರ್ಸೂ! ಸರ್ಸೂ! ಎಚ್ಚರಮಾಡಿಕೋ!" ಮೈಲಾರಯ್ಯ ತೋಳು ಹಿಡಿದು ಅಡಿಸುತ್ತಿದ್ದ. ಕಣ್ಣು ತೆರೆದ ಸರಸು.

"ನೀವೇಂದ್ರೇ ? ಪೊಲೀಸ್ನೋರಲ್ವೇ ?"– ದೊಡ್ಡದಾಗಿ ಉಸಿರು ಬಿಟ್ಟಳು."

—೦—

With best compliments from :



Grams : SRI AYODHYA

Phone : P.B.X. 66251 : 5 Lines

ONE OF THE FINEST RESIDENTIAL HOTELS OF THE CITY



Opposite K. S. R. T. C. BUS Stand,

Dharwad Road, HUBLI-580 020

- With 103 Well Appointed Rooms
- A. C. Rooms and Family Suites
- Spacious Car Parking Facility

Also Visit our Air Conditioned Resturent for



...ಇದು...ನನಗ ಎಷ್ಟು ಕೊಟ್ರೀ ಕಡಿಮಿ....ಒಂದು ಸಂಸಾರ ಉಳಿಸಿದವರಿಗೆ....

ವ್ಯಕ್ತಿ: ಹೌದ್ರಿ....ಎಷ್ಟು ಕೊಟ್ರೂ ಕಡಿಮಿ.

ರಾಯರು: 500ಮೊದಲ ಕೊಡಬೇಕು.... ಉಳಿದ 300 ಸಂಸಾರ ರಿಪೇರಿ ಆದ ಮ್ಯಾಲೆ....'ಹೆಚ್ಚಾತು' ಅಂತ ಅನ್ನs ಬ್ಯಾಡ್ರಿ....ಸೆಗಣಿ, ಬೇವಿನ ಎಲಿ ಒಂದು ರೂಪಾಯಿಗೆ ಮಾರೂ ಕಾಲ ಇದು.

ವ್ಯಕ್ತಿ: ಹೌದ್ರಿ....ಚೆಕ್ ಕೊಟ್ರ ನಡೀತದ ಹೌದಲ್ರಿ?

ರಾಯರು: ಬ್ಯಾಂಕಿನ್ಯಾಗ ಕ್ರೆಡಿಟ್ ಇದ್ರ ಅವಶ್ಯ ಕೊಡ್ರಿ.

(ವ್ಯಕ್ತಿ ಕಿಸೆಯಿಂದ ಚೆಕ್ ಬುಕ್ ತೆಗೆದು, ಟೇಬಲ್ಲಿನ ಮೇಲೆ ಇರಿಸಿ ಬರೆದು ರಾಯರಿಗೆ ಕೊಡುತ್ತಾನೆ)

ಫೈವ್ ಹಂಡ್ರೆಡ್ ಓನ್ಲಿ....

ಆತು.... [ಟೇಬಲ್ಲಿನ ಮೇಲೆ ಇರಿಸಿದ 5–6 ಕಾಗದ ಎತ್ತಿ ಕೊಡುತ್ತಾರೆ]

ಇದರೊಳಗಿನ ಪ್ರಶ್ನೆಗೆ ನಿಮ್ಮ ನಿಜವಾದ ಪ್ರತಿಕ್ರಿಯೆ ಬರದು ನನಗೆ ತಂದು ಕೊಡ್ರಿ....ಅದನ್ನ ಸ್ಟಡಿ ಮಾಡಿ, ನಿಮ್ಮ ಸಂಸಾರದ ರಿಪೇರಿ ಪ್ರಾರಂಭಮಾಡತೀನಿ.

[ವ್ಯಕ್ತಿ ಕಾಗದಗಳನ್ನು ಓದತೊಡಗುತ್ತಾನೆ]

ಏಕಾಂತ ಸ್ಥಳದಾಗ ಒಬ್ರs ಕೂತು. ಓದಿ, ಬರಕೊಂಡು ಬರ್ರಿ...

ವ್ಯಕ್ತಿ: ಒಳ್ಳೇದು ಸರ್........ಇನ್ನೊಂದು ಅಂದ್ರ, ವಿಷಯ ಗೌಪ್ಯ ಇರ್ಲಿ ಸರ್....

ರಾಯರು: ಇಲ್ಲೆ ನಿಮ್ಮ ಹೆಂಡತಿ ಬಂದ್ರೂ ಅವರಿಗೆ ನೀವು ಬಂದದ್ದು ಗೊತ್ತಾಗೂದುಲ್ಲ.

ವ್ಯಕ್ತಿ: ಥ್ಯಾಂಕ್ಸ

ರಾಯರು: ಅತ್ಲಾಗಿಂದ ಹೋಗ್ರಿ [ರಂಗದ ಎಡದಿಕ್ಕಿಗೆ ಸನ್ನೆಮಾಡುವರು]

[ವ್ಯಕ್ತಿಯ ನಿಷ್ಕ್ರಮಣ]

ರಂಗನಾಥs...

[ರಂಗನ ಪ್ರವೇಶ--ರಾಯರು ಚೆಕ್ ತೋರಿಸುವರು]

500 ರೂಪಾಯಿ ರಂಗ!

ರಂಗ: [ತನ್ನ ನೋಟು ತೋರಿಸಿ] ಇದೊಂದು 5–505 ಆತ್ರಿ....ಇವೊತ್ತ ಸುರವುಳ್ಳಿರೊಕ್ಕದ್ದು....[ಒಮ್ಮೆಲೇ] ಯಾರೊ ಬಂದ್ರು–ನೋಡತೀನಿ.

(ರಂಗ ಬಲರೂಮಿಗೆ ಬರುತ್ತಾನೆ–ಒಬ್ಬ ವೃದ್ಧನ ಪ್ರವೇಶ– ಚಾಳೀಸು-ಕೈಯಲ್ಲಿ ಕೊಡೆ- ವಯಸ್ಸು 60-65-ಬೆನ್ನು ಬಾಗಿದೆ.... ರಂಗ ಬಾಯಿಯ ಮೇಲೆ ಕೈಇರಿಸಿ ವೃದ್ಧನನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಾನೆ)

ವೃದ್ಧ: (ಸಿಡುಕಿ) ನೀನು ಏನೊ ಇವರ ಮಾಲಕ?

ರಂಗ: ಮಾಲಕರು ಹೊರಗೆ ಇರತಾರೇನು ನಾನು ಅವರ ಅಸಿಸ್ಟಂಟು.

ವೃದ್ಧ: ಏನು ನಡಿಸ್ಯಾನ?

ರಂಗ: ಹೊರಗ ಇದ್ದವರಿಗೆ, ಒಳಗ ಇದ್ದವರ್ದು ಹ್ಯಾಂಗ ತಿಳಿsತದ್ರಿs?.... ಈ ವಯಸ್ಸಿಗೆ, ನಿಮ್ಮ ಸಂಸಾರ ಸವದು ನೆಲಸವು ಆಗಿರಬೇಕು.... ನೀವು ಇಲ್ಲಿಗೆ ಬಂದೀರೆಲ್ರಿs....

ವೃದ್ಧ: (ಏರುಸ್ವರದಲ್ಲಿ) ಏs ಕತ್ತೆ....

ರಂಗ: ನನ್ನ ಥರ್ಡ್ ವೈಫ್ ಹೀಂಗ ಎರಡು ಸಾರಿ ಅಂದಿದ್ಲರಿ....

[ವೃದ್ಧ ಎಡರೂಮಿಗೆ ಹೊರಡುತ್ತಾನೆ....ರಂಗ "ರೀ....ಅಜ್ಜಂದ್ರs..." ಎಂದು ತಡೆಯಲು ಹೋಗುವನು.. ವೃದ್ಧ ಕೊಡೆ ಎತ್ತಿ ಹೊಡೆಯುವಂತೆ ನಟಿಸುತ್ತಾನೆ....ರಂಗ ಅಂಜಿ ಹಿಂದೆ ಸರಿಯುತ್ತಾನೆ....ವೃದ್ಧ ಸಿಟ್ಟಿನಿಂದ ರಂಗದ ಎಡ ರೂಮಿನಲ್ಲಿ ಪ್ರವೇಶಿಸುತ್ತಾನೆ.... ರಾಯರು ಪೇಪರು ಓದುತ್ತಿದ್ದಾರೆ. ವೃದ್ಧ ಕೊಡೆಯಿಂದ ಪೇಪರನ್ನು ಸರಿಸುತ್ತಾನೆ. ರಾಯರು–ವೃದ್ಧನ ದೃಷ್ಟಿ ಸಂಧಿಸುವವು ... ವೃದ್ಧ ತುಸು ಆಶ್ಚರ್ಯಗೊಳ್ಳುತ್ತಾನೆ.]

ರಾಯರು: ಸುಮ್ಮನೆ ನಿಂದರ್ರಿ ಒಂದು ನಿಮಿಷ–ಮಹತ್ವದ ಸುದ್ದಿ ಅದ ಇಲ್ಲೆ....

[ವೃದ್ಧ ಪೇಪರಿನ ಮೇಲೆ ದೃಷ್ಟಿ ಹಾಯಿಸುವನು.]

ವೃದ್ಧ: ಪೇಪರು ಇವೊತ್ತಿಂದು ಅಲ್ರs ಅಂದೆ.



[ಪೇಪರು ಸರಿಸಿ ರಾಯರು ವೃದ್ಧನನ್ನು ನೋಡುವರು]

ವೃದ್ಧ: ಇವೊತ್ತಿಂದು ಅಲ್ಲ ನೀವು ಓದೂ ಪೇಪರು.

ರಾಯರು: ಇವೊತ್ತಿಂದು ಅಂತ ಯಾರು ಓದ್ಲಿಕ್ಕೆ ಹತ್ಯಾರ.... ನನಗೆ ಗೊತ್ತದ ಇವೊತ್ತಿಂದು ಅಲ್ಲ ಅಂಬೂದು.... ನಿನ್ನೆ..ಮೊನ್ನಿಯದು ಓದಬಾರ್ದೇನು?

ವೃದ್ಧ: ಎರಡು ವರ್ಷ ಹಿಂದಿಂದು ಅದು. ಸುದ್ದಿ ಹಳೇವು ಇರತಾವೆ.

ರಾಯರು: ಆದಿರ್ಲಿs, ಏನು ಬಂದ್ರಿ ಹೇಳ್ರಿ ಮೊದಲ.

ವೃದ್ಧ: ಹಾಂಗ ಕೇಳಿದ್ರ ಬಡದಾಡಲಿಕ್ಕs ಅಂತ ಬಂದೀನಿ.

ರಾಯರು: ಯಾರ ಕೂಡ?

ವೃದ್ಧ: ಇವರ ಮಾಲಕನ ಕೂಡ.

ರಾಯರು: ನಾನs ಮಾಲಕ....ನನ್ನ ಕೂಡ ಬಡಿದಾಡ್ಲಿಕ್ಕೆ ಬಂದ್ರ್ಯಾ? [ಸ್ವಗತ] ಕ್ಲಾಸಿಕ್ ಸೆಪ್ಸಿಕ್ ಸೇರಿ ಲಾಸ್ಟ್ ಸ್ಟೇಜಿನ್ಯಾಗ ಇರಬೇಕುs ಸಂಸಾರ....[ವೃದ್ಧನಿಗೆ] ಬಡದಾಡಲಿಕ್ಕೆ ಅಂತ ಇಲ್ಲೆ ಬರೂದು ನಿಮ್ಮುದ. ಮೊದಲನೆಯ ಉದಾಹರಣೆ.... ಮನ್ಯಾಗ ಬಡದಾಡೂವವರು ಇಲ್ಲೆ ಬರತಾರ, ಪರಿಹಾರಕ್ಕ.

ವೃದ್ಧ: ಎಷ್ಟು ದಿನ ಆದ್ವು ಇವನ್ನ ಸುರುವುಮಾಡಿ?.... [ರಾಯರನ್ನ ಸನಿಹಕ್ಕೆ ಹೋಗಿ ನೋಡುತ್ತಾನೆ] ಈಗ ಆಗದಿs ಸ್ಪಷ್ಟಾತು.

ರಾಯರು: ಸ್ಪಷ್ಟಾಗಿ ಹೇಳಬಿಡ್ರಿ.

ವೃದ್ಧ : ನಾನು ಯಾರು ಅಂಬೂದು ಗೊತ್ತಾಗಲಿಲ್ಲೇನೊ ?

ರಾಯರು : ಏಕವಚನಕ್ಕ ಬಂದ್ರೆಲ್ಲ.

ವೃದ್ಧ : ನಾನು ನಿನ್ನ ಮಾವ....ಖರೆ ಮಾವನೊ ತಮ್ಮ.

ರಾಯರು : [ಏನೂ ತಿಳಿಯದಾಗಿ–ಏರು ಸ್ವರದಲ್ಲಿ] ರ ಂ ಗ ನಾ ಥs–ರಂಗss–

[ರಂಗ ಧಾವಿಸಿ ಪ್ರವೇಶಿಸುತ್ತಾನೆ]

ರಂಗ : ಬಂದೀನ್ರಿ.

ರಾಯರು : ನಿನ್ನ ಯಾರು ಕರದ್ರೊs ?

ವೃದ್ಧ : ರಂಗs ಅಂತ ಕರದಿ ತಮ್ಮ.

ರಾಯರು : ಮಾತಿಗೊಮ್ಮೆ ರಂಗ ರಂಗ ಅಂತಿರತೀನಿ, ಗೊತ್ತದ ಅವಂಗ–ಯಾಕೊ ರಂಗ ?

ರಂಗ : ಹೌದ್ರಿ–ತಿಳೀತು.

[ರಂಗ ನಿಷ್ಕ್ರಮಣ]

ರಾಯರು : ನೋಡಿದ್ರ್ಯಾ ?– ಹೊಂದಾಣಿಕೆ ಅಂದ್ರ ಇದು–ಮಾವ ಮಾವ ಏನೊ ಅಂದ್ರೆಲ್ಲ.

ವೃದ್ಧ : ಕಮಲಾನ ತಂದಿ ನಾನು....ನನ್ನ ಅಳಿಯಾಪ ನೀನುs....

ರಾಯರು : ಯಾವ ಕಮಲಾ? [ವೃದ್ಧ ನನ್ನು ದಿಟ್ಟಿಸಿ ನೋಡಿ] ಓ....ಹ್ !... ನಪ್ಲ ತಿಳೀತು....ನನ್ನ ಎರಡನೆಯ ಹೆಂಡ್ತೀ ಕಮಲಾ !–ಕನೆಕ್ಟ್ ಮಾಡ್ಲಿಕ್ಕೆ ಸ್ವಲ್ಪ ಗೊಂದಲ ಆತು–ಸ್ವಾಭಾವಿಕ ಅದ–ಯಾ ಕಂದ್ರ ನನ್ನ ಎಲ್ಲಾ ಹೆಂಡಂದ್ರಿಗೆ 'ಕಮಲಾ' ಅಂತ ಹೆಸರು ಇಟಗೋತಾ ಬಂದಿದ್ದೆ.

ವೃದ್ಧ : ನನ್ನ ಮಗಳು ಕಣ್ಣುಮುಚ್ಚಿದ ಮ್ಯಾಲೆ, ಮೂರನೇದ್ದುs....?

ರಾಯರು : ಮೂರು ಮುಗಮು, ನಿಕ್ಕ ನಿಂತ್ಯ.


[ವೃದ್ಧ ತಲೆ ಚಚ್ಚಿಕೊಳ್ಳುತ್ತಾನೆ]

ರಾಯರು : ಇಷ್ಟು ವರ್ಷ ಆದಮ್ಯಾಲೆ ಎಲ್ಲ ಅಳಿಯನ್ನ ಹುಡಿಕಿಕೊಂಡು ಬಂದ್ರಿs ?

ವೃದ್ಧ : ಅಳಿಯ ಅಂತ ತಿಳದs ಬರೆ ಬಾಯಿಲೆ ಮಾತು ಹೇಳ್ಲಿಕ್ಕೆ ಹತ್ತೀನಿ.. ಇಲ್ಲಾಂದ್ರ ಬಿಗೀತಿದ್ದೆ... ಕುಸುಮಾ ಅಂತ ಒಂದು ಹುಡಿಗಿ ಇಲ್ಲಿಗೆ ಬಂದಿದ್ಲ ಹೌದಲ್ಲೊ ?

ರಾಯರು : [ಧ್ಯಾನಿಸಿ] ಕು..ಸು..ಮಾ ? ಹಾಂ ಹಾಂ.... ಬಂದಿದ್ಲು.... ಬರತಿರತಾಳ.... ಆಕಿ ಗಂಡ ಸುಬ್ರಾಯನೂ ಬರತಿರತಾನ... ಆಕಿ ಬರೂದು ಅವಂಗೆ ಗೊತ್ತಿಲ್ಲ. ಅವ ಬರೂದು ಆಕಿಗೆ...

ವೃದ್ಧ : ಇಬ್ಬರ ಕೈಲೆ ರೊಕ್ಕ ಹೊಡೀತಿದಿ ಅನ್ನು.... "ಸಂಪತಿಗೆ ಸೋಡಚೀಟಿ ಕೊಡು" ಅಂತ ಸುಬ್ಬಗ ಉಪದೇಶ ಮಾಡಬೇಕs ನೀನು ?.... ಕುಸುಮಾ ನನ್ನ ಕಡಿ ಮಗಳು.... ಸುಬ್ಬ ನನ್ನ ಅಳಿಯ.



ರಾಯರು : ಹೀಂಗ ಅದ ಏನು ಲಿಂಕು !.. ಇಬ್ಬರಿಗೂ ಬ್ಯಾರೆ ಬ್ಯಾರೆ ಫಾರ್ಮುಲಾ ಹೇಳಕೊಟ್ಟೇನಿ....

ವೃದ್ಧ : ಬೆಂಕಿ ಹಚ್ಚಿತು ನಿನ್ನ ಫಾರ್ಮುಲಾಕ್ಕ.... ಇವೊತ್ತ ಸುಬ್ಬಗ ರುಬಬ ರಿಸಿದೆ. ಎಲ್ಲಾ ಹೇಳಿದ ಇಲ್ಲಿಗೆ ಬಂದದ್ದು ಮಾಡಿದ್ದು.

ರಾಯರು : ಇಳ್ಕೊಂಡ್ರಿ ಮುದುಕ್ರ....

ವೃದ್ಧ : ಮಾವ ಅನ್ನೋ ನಿನ್ನ ಮಾವ ನಾನು....

ರಾಯರು : ಅಚ್ಛಾ ಅಚ್ಛಾ.... ಮಾವ ಅನಿಸಿಕೊಳ್ಳಾ ಹುಚ್ಚು ನಿಮ್ಮದು.... ಇಳ್ಕೊಂಡ್ರಿ ಮಾವಂದ್ರ, ನಾನು ಇಲ್ಲಿಗೆ ಬರೂವವರ ಸಂಸಾರದ ಕ್ರಾಕ್ ಮುಚ್ಚತೀನಿ ಅಗಲಸೂದಿಲ್ಲ.

ವೃದ್ಧ : [ಕಿಸೆಯಿಂದ ಕೆಲ ನೋಟು ತೆಗೆದು ರಾಯರಿಗೆ ಕೊಡುತ್ತಾನೆ] ಇಕ ಇಟಗೊ.... ಸುಬ್ಬಗ ಇಲ್ಲೆ ಬರ ಬ್ಯಾಡ ಅಂತ ಹೇಳು....

ರಾಯರು : ಹಾಂಗ ಮಾಡೂದು ಗೈರಿ....

ವೃದ್ಧ : ನನ್ನ ಮುಖ ನೋಡು....

ರಾಯರು : ಪ್ಯಾಂಗ್ರಿs.... ಧರ್ಮಸಂಕಟ ದಾಗ ಹಾಕತೀರಿ....

[ರಾಯರು – ವೃದ್ಧ ಪರಸ್ಪರ ವಾಗ್ವಾದ ದಲ್ಲಿ ಇದ್ದಾಗ್ಗೆ ಕುಸುಮಾ ಅಳುತ್ತ "ನನ್ನ ಗಂಡ ಹ್ಯಾಂಗ್ಹಾಂಗೊ ಮಾತು ಸುರುವು ಮಾಡ್ಯಾರ ರಾಯ್ರುs" ಎಂದು ಚೀರುತ್ತ ರಂಗ ಪ್ರವೇಶಿಸುತ್ತಾಳೆ.... "ನಿಮ್ಮ ಫಾರ್ಮುಲಾ ಬುಡಮೇಲು ಆದ್ವು ರಾಯ್ರುs" ಎಂದು ಸುಬ್ರಾಯ ಚೀರುತ್ತ ರಂಗ ಪ್ರವೇಶಿಸುತ್ತಾನೆ.... "ರಿಪೇರಿ ಸಂಸಾರದ ಬೋರ್ಡು ಕಿತ್ತಿ ಒಗೀರಿ" ಎಂದು ಕುಸುಮಾ ಚೀರುವಳು.... ಧಾವಿಸಿ ಬೋರ್ಡು ಕಿತ್ತಿ ಎಸೆಯುವಳು–- ಅದೇ ಸಮಯಕ್ಕೆ ವ್ಯಕ್ತಿಯ ಪ್ರವೇಶ.... ಆತ ಹೌಹಾರಿ ನಿಲ್ಲುವನು.... ರಂಗ "ರಾಯ್ರು ರಾಯ್ರುs ಎಂದು ಕೂಗಿಕೊಳ್ಳುವನು... ವೃದ್ಧ ಹೊರಗೆ ಇಣಿಕಿ ಹಾಕಿ. ಒಳಗಿನ ಟೇಬಲ್ಲು, ಕುರ್ಚಿ.... ಮನಸನ್ನ ಹೊರಗೆ ದಬ್ರಿ" ಎಂದು ಕೂಗುವನು ರಾಯರು ಕೈ ಹೊತ್ತುಕೊಂಡು "ರಂಗs....ರಂಗಣ್ಣೀs ... ರಂಗನಾಥs ಎಂದು ಕೆಳಗೆ ಕುಸಿಯುವಂತೆ ಕೂಡ್ರುವಾಗ್ಲೆ....ತೆರೆ]

* ಸೂಚನೆ— ರಂ ಗ ಭೂ ಮಿ ಯ ಮೇಲೆ ಪ್ರಯೋಗಿಸುವ ಮುನ್ನ ಲೇಖಕರ ಅನುಮತಿ ಪಡೆಯಬೇಕು.

ವರ್ಷ ಭವಿಷ್ಯ

1985 ದೀಪಾವಳಿಯಿಂದ 1986 ದೀಪಾವಳಿ ವರೆಗೆ

ಶ್ರೀ ಕ್ರೋಧನ ಸಂವತ್ಸರದ ಆಶ್ವಯುಜ ಕೃಷ್ಣ ಚತುರ್ದಶಿಯಿಂದ ಆರಂಭವಾಗುವ "ಈ ವರ್ಷ ಭವಿಷ್ಯ"ವು ಮುಂದಿನ ಶ್ರೀ ಅಕ್ಷಯ ಸಂವತ್ಸರದ ಆಶ್ವಯುಜ ಕೃಷ್ಣ ಚತುರ್ದಶಿಯವರೆಗೆ ಫಲಗಳನ್ನು ನಿರೂಪಿಸಿರುತ್ತದೆ. ಈ ಭವಿಷ್ಯವನ್ನು ರಾಶಿಗಳ ಆಧಾರದ ಮೇಲೆ ಗ್ರಹಗಳ ಸೂಕ್ಷ್ಮ ಚಲನವಲನಗಳನ್ನೂ ಗಮನದಲ್ಲಿಟ್ಟುಕೊಂಡು ಬರೆಯಲಾಗಿದೆ. ಓದುಗರ ಅನುಕೂಲಕ್ಕಾಗಿ ಭವಿಷ್ಯ ನಿರೂಪಣೆಯಲ್ಲಿ ವಿಭಾಗಗಳನ್ನಿರಿಸಿಕೊಂಡು ಆಯಾ ಭಾಗಕ್ಕೆ ಹೆಚ್ಚು ಗಮನ ಕೊಡಲಾಗಿದೆ.

ಈ ರಾಶಿ ಫಲಗಳು ಒಟ್ಟಾರೆ ಸ್ಥೂಲ ಮತ್ತು ಸೂಕ್ಷ್ಮ ಫಲಗಳನ್ನು ತಿಳಿಸುವುದಾದರೂ ಜಾತಕದ ಫಲಗಳೊಂದಿಗೆ ಹೊಂದಿಸಿಕೊಂಡು ಫಲಗ್ರಾಹ್ಯವು ಸೂಕ್ತವಾದ ಮಾರ್ಗ. ಮತ್ತು ಶಾಸ್ತ್ರಾಧಾರಿತವೆನಿಸುತ್ತದೆ. ಶುಭಾಶುಭ ಫಲಗಳನ್ನು ಸಮನಾಗಿ ತೆಗೆದುಕೊಳ್ಳುವ ನೂತನ ಭಾವದೊಂದಿಗೆ ದೀಪಾವಳಿಯು ಹೊಸತನ್ನು ಮತ್ತು ಶುಭವನ್ನು ತರಲೆಂದು ಹಾರೈಸುತ್ತೇವೆ.

ಜ್ಯೋತಿರ್ವಿದ್ವಾನ್
ಪಂಡಿತ್ ಎ.ಆರ್. ಬದರೀನಾರಾಯಣ, ಅರಳಿಕಟ್ಟೆ,
ಗಾಯತ್ರಿ ಜ್ಯೋತಿಷ್ಯ ಮಂದಿರ
ಗುಡ್ಡೆತೋಟ ಅಂಚೆ, ಜಿ: ಚಿಕ್ಕಮಗಳೂರು. ಪಿನ್: 577152

ಮೇಷ

(ಅಶ್ವಿನಿ 1, 2, 3, 4 ಭರಣಿ 1, 2, 3, 4 ಕೃತ್ತಿಕಾ 1ನೇ ಪಾದ)

ಆದಾಯಕ್ಕಿಂತ ಅಧಿಕ ಖರ್ಚು. ಉದ್ಯೋಗದಲ್ಲಿ ಅನೇಕ ಅತಂಕಗಳು. ಉತ್ತಮ ಆರೋಗ್ಯ. ಸುಖೀ ದಾಂಪತ್ಯ ಜೀವನ-ಇದು ಈ ವರ್ಷ ನಿಮಗೆ ಕಟ್ಟಿಟ್ಟ ಬುತ್ತಿ.

ಈ ದೀಪಾವಳಿಯ ಆರಂಭದ ಎಂಟು ತಿಂಗಳು ಉದ್ಯೋಗಸ್ಥರಿಗೆ ಗೌರವ ಮತ್ತು ಬಡ್ತಿಯನ್ನು ನವಗ್ರಹಗಳು ಸೂಚಿಸಿದರೂ ಅನೇಕ ಆತಂಕಗಳಿಂದ ಹೊರತಲ್ಲ. ನೂತನ ಉದ್ಯೋಗ ಅವಲಂಬಿಗಳಿಗೆ ಸಲಹೆ, ಸಹಕಾರ ದೊರೆಯುತ್ತದೆ. ನಿರುದ್ಯೋಗಿಗಳಿಗೆ ವರ್ಷಾಂತ್ಯ ಉತ್ತಮ ಫಲಗಳಿವೆ. ಯಾವುದೇ ಕಾರಣದಿಂದ ವ್ಯಾಪಾರದಲ್ಲಿ ಅಥವಾ ನಿಮ್ಮ ವೈಯಕ್ತಿಕ ಧನಾಗಮನ ಚಟುವಟಿಕೆಗಳಲ್ಲಿ ಪಾಲುದಾರಿಕೆಯ ವ್ಯವಹಾರಗಳನ್ನು ನಿಲ್ಲಿಸುವುದು ಸೂಕ್ತ. ಮಿತ್ರ ವರ್ಗಗಳಿಂದಲೂ, ರಾಜಕೀಯ ವಲಯಗಳಿಂದಲೂ ಉದ್ಯೋಗ ಪಡೆಯಲು ಅಧಿಕ ಸಹಾಯ ಸಿಗುತ್ತದೆ. ಉದ್ಯೋಗಸ್ಥ ಮಹಿಳೆಯರಿಗೆ ಈ ದೀಪಾವಳಿಯ ನಂತರ ಕೀರ್ತಿ, ಗೌರವಗಳೂ ಬಡ್ತಿಯೂ ಸಿಗುತ್ತದೆ. ಸರ್ಕಾರಿ ಅಧಿಕಾರಿಗಳಿಗೆ ವಿಶೇಷ ಮಾನ್ಯತೆ.

ಆರ್ಥಿಕ ಸ್ಥಿತಿ

ಈ ವರ್ಷ ನಾಲ್ಕರಷ್ಟು ಖರ್ಚು ಮತ್ತು ಮೂರರಷ್ಟು ಆದಾಯ. ಹಲವಾರು ಯೋಜನೆಗಳ ಕೆಲಸವು ಆರಂಭವಾಗುವದರಿಂದ ಮತ್ತು ಹಳೆಯ ಸಾಲಗಳ ಮರು ಪಾವತಿಗಾಗಿ ಆರಂಭದ ಆರು ತಿಂಗಳು ನೀವು ಹಣ ಖರ್ಚು ಮಾಡಬೇಕಾಗುತ್ತದೆ. ಹೊಸ ಆದಾಯದ ಯೋಜನೆಯತ್ತ ಸಾಗುವಿರಿ. ವರ್ಷಾಂತ್ಯದಲ್ಲಿ ಖರ್ಚು ಕಡಿಮೆಯಾಗುತ್ತದೆ. ಹೀಗಾಗಿ ಆದಾಯ-ವೆಚ್ಚಗಳ ಸಮತೋಲನವಾಗಿ ನಿಮಗೆ ಶ್ರಮ ಎನಿಸುವದಿಲ್ಲ. ಸ್ವಯಂ ಉದ್ಯೋಗಸ್ಥರಿಗೆ ಹೆಚ್ಚಿನ ಲಾಭ ಕಂಡು ಬಂದರೂ ಅದಕ್ಕೆ ತಕ್ಕಂತೆ ಖರ್ಚು ಕೂಡ ಹೆಚ್ಚಾಗುತ್ತದೆ. ಆದರೆ ಭರಿಸಲಾರದ ತೊಂದರೆಗೇನೂ ನೀವು ಒಳಗಾಗುವುದಿಲ್ಲ.

ಆರೋಗ್ಯ

ಉತ್ತಮ ಆರೋಗ್ಯದಿಂದ ಆರಂಭದಿಂದಲೂ ಸಂತಸ ಮತ್ತು ನೆಮ್ಮದಿ. ಆದರೆ ದೂರ ಪ್ರಯಾಣ ಕಾಲಕ್ಕೆ ಬಹು ಎಚ್ಚರಿಕೆ ಅಗತ್ಯ. ಶೀತ ಪ್ರಕೋಪದಿಂದ ವರ್ಷಾಂತ್ಯ ಆರೋಗ್ಯ ಕೆಡುವ ಸಂಭವ. ಸ್ತ್ರೀಯರಿಗೆ ಮತ್ತು ದೀರ್ಘ ರೋಗಿಗಳಿಗೆ ಈ ದೀಪಾವಳಿಯ ನಂತರ ಉತ್ತಮ ಆರೋಗ್ಯ.



ನೀ ಬಿಡಿಸದ ಪ್ರಶ್ನೆ

ಅದೇ ಎಳೆ ಬಿಸಿಲಿನ ಸೂರ್ಯ
ಕಿರಣಗಳಿಗೆ
ನೀ ತಲೆಯ ಕೂದಲು ಹರವಿಕೊಂಡು
ಮೈ ಕಾಸುವಾಗಲೆಲ್ಲ
ನನ್ನ ಮೈ ಬಿಸಿಯಾಗುತ್ತದೆ
ಅರಿತಿರದ ತುಟಿಗಳಲಿ ನೀ
ಮುಗುಳು ನಕ್ಕಾಗಲೆಲ್ಲ
ನನ್ನೆದೆಯ ಬಡಿತ ಜೋರಾಗುತ್ತದೆ
ನಾನಾಗ ಕಣ್ಣು ಮುಚ್ಚಿ
ಕನಸು ಕಾಣುತ್ತೇನೆ ನೀನಾಗ
ಒಡೆಯದ ಒಗಟಾಗುತ್ತಿ -
ಬಿಡಿಸದ ಪ್ರಶ್ನೆಯಾಗುತ್ತಿ,

—ಗವೀಶ ಹಿರೇಮಠ

ಮಕ್ಕಳಿಗೆ ಮುಂಬರುವ ದಿನಗಳು ಉತ್ತಮ ಭವಿಷ್ಯ ಹೇಳುತ್ತವೆ. ಒಟ್ಟಾರೆ ಈ ನಿಮ್ಮ ರಾಶಿಯವರಿಗೆ ಉತ್ತಮ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನೂ ಸೂಚಿಸುತ್ತದೆ. ಧ್ಯಾನ ಮತ್ತು ಯೋಗಾಸನಗಳಿಂದ ನಿಮ್ಮ ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಳ್ಳುವ ಅವಕಾಶ ಕಲ್ಪಿತವಾಗುತ್ತದೆ.

ವಿವಾಹ-ದಾಂಪತ್ಯ


ಅವಿವಾಹಿತರ ವಿವಾಹ ಪ್ರಯತ್ನಗಳಲ್ಲಿ ಆರಂಭದಲ್ಲಿ ಹಲವಾರು ಸಮಸ್ಯೆಗಳು ಕಂಡುಬಂದರೂ ಚಿಂತಿಸುವ ಕಾರಣವಿಲ್ಲ. ಮಂದಗತಿಯಲ್ಲಿ ಸಾಗುವ ಆರಂಭದ ಕ್ರಮಗಳು ವರ್ಷಾರ್ಧದ ನಂತರ ಶುಭ ಫಲಗಳನ್ನು ನೀಡುತ್ತವೆ. ಪ್ರೇಮ ವಿವಾಹಗಳು ಮುಂಬರುವ ಜನವರಿಯ ನಂತರ ಸಾಧ್ಯವಾಗುತ್ತವೆ. ವರ್ಷಾಂತ್ಯ ದಿನಗಳು ವಿವಾಹ ಕಾರ್ಯಗಳಿಗೆ ಮತ್ತು ಪ್ರಯತ್ನಗಳಿಗೆ ಉತ್ತಮ. ಈ ದೀಪಾವಳಿಯ ನಂತರ ದ್ವಿರಾಶಿಗಳಲ್ಲಿ ಸಂಚರಿಸುವ ಗುರುವು ಉತ್ತಮ ದಾಂಪತ್ಯ ಸುಖವನ್ನೂ ತನ್ಮೂಲಕ ಸಂತೃಪ್ತಿ ನೆಮ್ಮದಿಯನ್ನೂ ನಿಮಗೆ ನೀಡುತ್ತಾನೆ.

ಪ್ರಯಾಣ


ಆಕಸ್ಮಿಕ ಮತ್ತು ಅನಿವಾರ್ಯ ಕಾರಣಗಳಿಂದ ಈ ದೀಪಾವಳಿಯ ನಂತರದ ಮೂರು ತಿಂಗಳು ವಿಶೇಷವಾಗಿ ದೂರ ಪ್ರಯಾಣಗಳನ್ನು ಸೂಚಿಸುತ್ತದೆ. ನಿಮ್ಮ ವೈಯಕ್ತಿಕ ಕಾರ್ಯಗಳಿಗಾಗಿ ಹಾಗೂ ನೀವು ಹೊತ್ತಿರುವ ಹಲವಾರು ಜವಾಬ್ದಾರಿಗಳಿಂದಾಗಿ ದೂರ ಪ್ರಯಾಣ ಮಾಡಬೇಕಾಗುತ್ತದೆ. ಈ ಪ್ರಯಾಣಗಳಿಂದ ವಿಪರೀತ ಖರ್ಚು ಸಹ ಉಂಟು. ಉದ್ಯೋಗಕ್ಕಾಗಿ ಬಹು ದೂರ ಪ್ರಯಾಣ ಮಾಡಬೇಕಾದ ಸಾಧ್ಯತೆಯಿದೆ. ಹೆಚ್ಚಿನ ಶ್ರಮವಿಲ್ಲದೆ ಕಡಿಮೆ ವೆಚ್ಚದಲ್ಲಿ ತೀರ್ಥ ಕ್ಷೇತ್ರ ಸಂದರ್ಶನಗಳೂ ಲಭ್ಯವಾಗಲಿವೆ. ಪ್ರಯಾಣದಲ್ಲಿ ಯಾವ ಅಪಾಯಗಳೂ ನಿಮಗೆ ಒದಗುವದಿಲ್ಲ.

ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿಯ ಹಾರ್ದಿಕ ಶುಭಾಶಯಗಳು !

ಮಲಪ್ರಭಾ ಗ್ರಾಮೀಣ ಬ್ಯಾಂಕ್



(ಸಂಪೂರ್ಣ ಸರಕಾರಿ ಸ್ವಾಮಿತ್ವದ ಶೆಡ್ಯೂಲ್ಡ್ ಬ್ಯಾಂಕ್)



ಪ್ರವರ್ತಕರು : ಸಿಂಡಿಕೇಟ್ ಬ್ಯಾಂಕ್ ಪ್ರಧಾನ ಕಚೇರಿ : ಧಾರವಾಡ

ನಮ್ಮ ಸಂಸ್ಥೆಯು ಆಗಸ್ಟ್ ೩೧, ೧೯೭೬ ರಂದು ಉತ್ತರ ಕರ್ನಾಟಕದ ಧಾರವಾಡ ಹಾಗೂ ಬೆಳಗಾಂವ ಜಿಲ್ಲೆಗಳಲ್ಲಿ ಕಾರ್ಯೋನ್ಮುಖವಾಯಿತು.

- ಒಂಭತ್ತು ವರ್ಷಗಳ ಸಫಲತೆಯ ಸೇವೆಯಲ್ಲಿ ಗ್ರಾಮೀಣ ಅಭಿವೃದ್ಧಿ ಹಾಗೂ ಉನ್ನತಿಯ ಹರಿಕಾರರೆಂದು ಗುರುತಿಸಲ್ಪಟ್ಟಿದ್ದೇವೆ.
- ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಚಿಕ್ಕ ಹಾಗೂ ಅತಿ ಚಿಕ್ಕ ರೈತರ, ಕೃಷಿ ಕಾರ್ಮಿಕರ, ಕುಶಲ ಕರ್ಮಿಗಳ ಮತ್ತು ಇತರ ಆರ್ಥಿಕವಾಗಿ ಹಿಂದುಳಿದ ಜನರ ಸರ್ವಾಂಗೀಣ ಅಭಿವೃದ್ಧಿಯ ಆಶಾಕಿರಣವಾಗಿದ್ದೇವೆ.
- 4.95 ಲಕ್ಷ ಫಲಾನುಭವಿಗಳಿಗೆ 94.00 ಕೋಟಿ ರೂ.ಗಳಿಗೂ ಮಿಗಿಲಾಗಿ ವಿವಿಧೋದ್ದೇಶ ಯೋಜನೆಗಳಿಗೆ ಸಾಲದ ನೆರವು ನೀಡಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಜನಾಂಗದ ಏಳಿಗೆಯನ್ನು ಧ್ಯೇಯವಾಗಿರಿಸಿಕೊಂಡು ಅನೇಕ ಯೋಜನೆಗಳನ್ನು ರೂಪಿಸಿ ಈಗಾಗಲೇ 16 ಸಾವಿರ ಜನರಿಗೆ 4 ಕೋಟಿ ರೂ.ಗಳಿಗೂ ಮಿಗಿಲಾಗಿ ಸಾಲ ಸೌಲಭ್ಯ ಕಲ್ಪಿಸಲಾಗಿದೆ.
- 43.5 ಸಾವಿರ ಫಲಾನುಭವಿಗಳಿಗೆ 14.53 ಕೋಟಿ ರೂ.ಗಳಿಗೂ ಮಿಗಿಲಾಗಿ ರಾಜ್ಯ ಹಾಗೂ ಕೇಂದ್ರ ಸರಕಾರ ನಿರೂಪಿಸಿದ ವಿವಿಧ ಆರ್ಥಿಕ ನೆರವಿನ ಯೋಜನೆಗಳಿಗೆ ಸಾಲ ಸೌಲಭ್ಯ ಕಲ್ಪಿಸಿದ್ದೇವೆ. 1984-85 ನೇ ಸಾಲಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ನಮ್ಮ ಬ್ಯಾಂಕು ಬೆಳಗಾಂವ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ.
- ಉಳಿತಾಯ ಖಾತೆ ಹಾಗೂ ಉಳಿದೆಲ್ಲಾ 36 ತಿಂಗಳೊಳಗಿನ ಮುದ್ದತ್ತು ಠೇವಣಿಗಳ ಮೇಲೆ ಪ್ರತಿಶತ ಅರ್ಧದಷ್ಟು ಹೆಚ್ಚಿನ ಬಡ್ಡಿಯನ್ನು ಇತರ ವಾಣಿಜ್ಯ ಬ್ಯಾಂಕುಗಳಿಗಿಂತ ನೀಡುತ್ತೇವೆ.

ದೇಶದಲ್ಲಿಯ ಎಲ್ಲ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ ನಮ್ಮ ಬ್ಯಾಂಕ್ ಎಲ್ಲ ಕ್ಷೇತ್ರಗಳಲ್ಲಿಯೂ ಗಣನೀಯ ಪ್ರಗತಿ ಸಾಧಿಸಿ ಒಟ್ಟಾರೆ ಪ್ರಥಮ ಸ್ಥಾನದಲ್ಲಿದೆ.

ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ನಮ್ಮ ಶಾಖೆಯನ್ನು ಸಂಪರ್ಕಿಸಿರಿ

ಪಿ. ಬಿ. ಆರ್. ಹೆಗ್ಡೆ
ಚೇರ್‌ಮನ್

ದೇವತಾರಾಧನೆ

ನವಗ್ರಹ ಆರಾಧನೆ ವಿಶೇಷವಾಗಿ ವಿಷ್ಣು ಸಹಸ್ರನಾಮ ಪಠಣ ಮತ್ತು ಸ್ತೋತ್ರ ಈ ವರ್ಷ ನಿಮಗೆ ಉತ್ತಮ ಫಲ ನೀಡುತ್ತದೆ. ವಿದ್ಯಾರ್ಥಿಗಳಿಗೆ ದುರ್ಗಾ ಮತ್ತು ಶ್ರೀ ಗಣೇಶ ಆರಾಧನೆಯು ಶೀಘ್ರ ಫಲದಾಯಕವೆನಿಸುವುದು. ಆರೋಗ್ಯಕ್ಕಾಗಿ ಆದಿತ್ಯ ಸೇವೆಯು ಅರ್ಥಾತ್ ಆದಿತ್ಯ ಸ್ತೋತ್ರ ಪಠನವು ಜನವರಿಯ ನಂತರ ಅಗತ್ಯ ಅನಿವಾರ್ಯ. ಕಾರ್ಯ ಸಾಫಲ್ಯಕ್ಕಾಗಿ ನೀವು ಆರಾಧಿಸುವ ಗುರುವಿನ ಸೇವೆಯು ಫಲ ನೀಡಲಿದೆ. ಸ್ತ್ರೀಯರಿಗೆ ದುರ್ಗಾ ಮತ್ತು ಲಲಿತಾ ಸೇವೆಗಳಿಂದ ಇಷ್ಟಾರ್ಥ ಸಿದ್ಧಿ.

ಮಹಿಳೆಯರಿಗೆ

ಸ್ತ್ರೀಯರಿಗೆ ಈ ದೀಪಾವಳಿಯಿಂದ ಮುಂದಿನ ದೀಪಾವಳಿಯವರೆಗೂ ಉತ್ತಮ ಶುಭಫಲ ಉದ್ಯೋಗದಲ್ಲಿ ಪ್ರಗತಿಗೆ ಅವಕಾಶ ಮತ್ತು ಕೀರ್ತಿಯನ್ನೂ ಅವಿವಾಹಿತರಿಗೆ ಸೂಕ್ತ ಕಾಲದಲ್ಲಿ ವಿವಾಹವಾಗುವ ಯೋಗವನ್ನೂ ನವಗ್ರಹಗಳು ಸೂಚಿಸುತ್ತವೆ. ಏನೇ ಬಂದರೂ ನೀವು ಧೈರ್ಯದಿಂದ ಕಾರ್ಯ ಸಾಧಿಸಬಲ್ಲಿರಿ. ಆದರೆ ನಿಮ್ಮ ಮಾತಿನಿಂದ ನೀವೇ ಸಿಕ್ಕಿಹಾಕಿಕೊಳ್ಳುವ ಪ್ರಸಂಗಗಳುಂಟು. ಕೆಲಸದಲ್ಲಿ ಶ್ರದ್ಧೆಯಿರುವ ಮತ್ತು ಪ್ರಮಾಣಿಕರಾದ ಅಧಿಕಾರಿಗಳಿಗೆ ಅತಿ ಶೀಘ್ರ ಪ್ರಗತಿ. ಉನ್ನತ ವ್ಯಾಸಂಗದಲ್ಲಿ ನಿರತರಾದವರಿಗೆ ಉತ್ತಮ ಫಲಿತಾಂಶ.



ಒಂದು ಕಥೆ-ಒಂದು ಚಿತ್ರ

ರಾಧೆ ಹರೆಯದಿ
ವಿಧವೆಯಾದದ್ದು ಕಟ್ಟ
ರಾಜಕಾರಣಿ ಕೇಳಿ
ಅನುತಾಪ ಪಟ್ಟ !
ವಿಧವೆ ವೇತನ ಕೊಡಿಸೆ
ಕರಕೊಂಡು ಅಲೆದ
ಅವಳ ಕೈ ಬಳೆ ಹಿಡಿಸಿ
ಸಂತಸದಿ ನಲಿದ !

—ಜಿ. ಎಸ್. ಅನ್ನದಾನಿ

ವಿದ್ಯಾರ್ಥಿಗಳಿಗೆ

ಆರಂಭದ ಆರು ತಿಂಗಳು ವಿದ್ಯಾಭ್ಯಾಸಕ್ಕೆ ಅನುಕೂಲಕರ ಸನ್ನಿವೇಶಗಳು. ಆಗ ಉಲ್ಲಸಿತರಾಗಿ ವಿದ್ಯಾರ್ಥಿಗಳು ಅಭ್ಯಾಸದ ಬಗ್ಗೆ ಹೆಚ್ಚಿನ ಶ್ರದ್ಧೆ ವಹಿಸುವರು. ಆದರೆ ಉತ್ತರಾರ್ಧದಲ್ಲಿ ಇನ್ನೂ ಹೆಚ್ಚಿನ ಪರಿಶ್ರಮ ಅಗತ್ಯ. ಆಕಸ್ಮಿಕ ಮತ್ತು ಅನಗತ್ಯ ತೊಂದರೆಗಳಿಂದಾಗಿ ನಿಮಗೆ ತೊಂದರೆ ಕಂಡು ಬರಬಹುದು. ಈ ಬಾರಿ ನಿಮ್ಮ ವೈಯಕ್ತಿಕ ಪ್ರಗತಿಗೆ ಒಳ್ಳೆಯ ಅವಕಾಶ ಮತ್ತು ಸ್ವಯಂ ಪ್ರತಿಭೆಯನ್ನು ಹೊಂದುವಿರಿ. ಜನವರಿ ಇಪ್ಪತ್ತನಾಲ್ಕನೇ ದಿನಾಂಕದಿಂದ ವಿದ್ಯಾಭ್ಯಾಸದಲ್ಲಿ ತೊಡಕುಗಳು ಕಂಡು ಬರಬಹುದಾದರೂ ಯಾವುದೇ ಆತಂಕಕ್ಕೆ ಕಾರಣವಿಲ್ಲ.

(ಕೃತ್ತಿಕಾ 2, 3, 4 ರೋಹಿಣಿ 1, 2, 3, 4 ಹಾಗೂ ಮೃಗಶಿರಾ 1, 2ನೇ ಪಾದ)

ಬದುಕಿಗೊಂದು ಭದ್ರನೆಲೆ,-ಉದ್ಯೋಗದಲ್ಲಿ ಪ್ರಗತಿ, ಆರ್ಥಿಕ ಅಭಿವೃದ್ಧಿ, ಉತ್ತಮ ಆರೋಗ್ಯ ಸುಖ ಪ್ರಯಾಣ ಯೋಗದಿಂದಾಗಿ ನಿಮಗೆ ವರ್ಷವಿಡೀ ಶುಭಫಲಗಳು ಕಾದಿವೆ.

ನವವರ್ಷಾರಂಭ ಔದ್ಯೋಗಿಕವಾಗಿ ನಿಮಗೆ ಉತ್ತಮವಾಗಲಿದೆ. ನಿಮ್ಮ ಪ್ರಯತ್ನದಿಂದ ಉದ್ಯೋಗ ಅಪೇಕ್ಷಿತರಿಗೆ ಜನವರಿಯ ನಂತರ ಉದ್ಯೋಗ ಲಭ್ಯ. ಸ್ತ್ರೀಯರಿಗೂ ಮತ್ತು ವ್ಯಾಪಾರಸ್ಥರಿಗೂ ವರ್ಷ ಪೂರ್ತಿ ಶುಭ ಫಲಗಳನ್ನು ನಿರೀಕ್ಷಿಸಬಹುದಾಗಿದೆ. ಸರ್ಕಾರದಿಂದ ವ್ಯಾಪಾರದಲ್ಲಿ ಸೌಲಭ್ಯ ಮತ್ತು ಸಹಾಯ ಲಭ್ಯ. ಹೊಸ ವೃತ್ತಿಗಳಲ್ಲಿ ಪ್ರಶಂಸೆ ಮತ್ತು ಕೀರ್ತಿ ದೊರೆಯಲಿದೆ. ನಿಮ್ಮ ವೈಯಕ್ತಿಕ ಅಭಿವೃದ್ಧಿಯತ್ತ ಹೊಸ ದೀಪಾವಳಿ ನಿಮ್ಮನ್ನು ಸಾಗಿಸುವುದಲ್ಲದೇ, ಧೈರ್ಯವನ್ನೂ ಭದ್ರತೆಯನ್ನೂ ಸೂಚಿಸುತ್ತದೆ. ಒಟ್ಟಾರೆ ಫಲಗಳಲ್ಲಿ ಮುಂದಿನ ಅಕ್ಷಯ ಸಂವತ್ಸರದ ದೀಪಾವಳಿಯವರೆಗೆ ಉತ್ತಮ ಭವಿಷ್ಯವಿದೆ.

ಆರ್ಥಿಕ ಸ್ಥಿತಿ

ಈ ದೀಪಾವಳಿಯ ನಂತರ ಆರ್ಥಿಕ ಸ್ಥಿತಿಯಲ್ಲಿ ಹಲವಾರು ತೊಂದರೆಗಳನ್ನು ಅನುಭವಿಸಿದರೂ ಸಹ ಅಂತಿಮದಲ್ಲಿ ಸೂಕ್ತ ಸಹಾಯವನ್ನು ನವಗ್ರಹಗಳು ಸೂಚಿಸುವುದಲ್ಲದೇ, ಸಕಾಲಿಕ ಧೈರ್ಯವನ್ನು ಕೊಡುತ್ತವೆ. ವ್ಯಾಪಾರೋದ್ಯಮಿಗಳಿಗೆ ದೀಪಾವಳಿಯ ಆರಂಭ ದಿನಗಳೇ ಹೆಚ್ಚು ಶುಭ ಫಲದಾಯಕವಾಗಲಿವೆ. ಅತೀ ಹೆಚ್ಚಿನ ಆರ್ಥಿಕ ವ್ಯವಹಾರಗಳಲ್ಲಿ ತೊಡಗದಿರುವುದು ಸೂಕ್ತ. ಹೊಸ ಯೋಜನೆಗಳಲ್ಲಿ ಗೃಹ ನಿರ್ಮಾಣದ ಹೊರತಾದ ಮಿಕ್ಕ ಯೋಜನೆಗಳನ್ನು ಮುಂದೂಡುವುದು ಉತ್ತಮ. ಔದ್ಯೋಗಿಕ ಬಡ್ತಿಯಿಂದ ಆರ್ಥಿಕ ಪ್ರಗತಿಯೂ ಉಂಟಾಗುತ್ತದೆ.

ಆರೋಗ್ಯ

ಆರಂಭದಲ್ಲಿ ಗುರುವು ಅಷ್ಟಮಾಧಿಪತಿಯಾಗಿ ನೀಚನಾಗಿದ್ದರೂ ನಂತರದ ದಿನಗಳಲ್ಲಿ ಶುಭಫಲದಾಯಕನಾಗುವುದರಿಂದ ದೀಪಾವಳಿಯ ನಂತರ ಉತ್ತಮ ಆರೋಗ್ಯ ಮತ್ತು ಮಾನಸಿಕ ನೆಮ್ಮದಿಯು ದೊರೆಯಲಿದೆ. ಸ್ತ್ರೀಯರಿಗೂ ಮತ್ತು ಮಕ್ಕಳಿಗೂ ಮಾರ್ಚಿಯ ನಂತರ ಉತ್ತಮ ಆರೋಗ್ಯ ಲಭ್ಯ. ದೀರ್ಘ ರೋಗಿಗಳು ಜೂನ್ ನಂತರ ಉತ್ತಮ ಆರೋಗ್ಯ ಪಡೆಯುವರು. ಮಕ್ಕಳಿಗೆ ಮತ್ತು ವಯೋವೃದ್ಧರಿಗೆ ಫೆಬ್ರವರಿ ಹಾಗೂ ಅಕ್ಟೋಬರ್



ತಿಂಗಳಲ್ಲಿ ಹೆಚ್ಚಿನ [illegible] ತ್ತ. ಒಟ್ಟಾರೆ ಫಲಗಳಲ್ಲಿ ಆರಂಭದ ಆರು ತಿಂಗಳುಗಳಿಗಿಂತ ನಂತರದ ಆರು ತಿಂಗಳು ಅತಿ ಉತ್ತಮ. ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಹೊಂದುವಿರಿ. ಯಾವುದೇ ರೀತಿಯ ದೀರ್ಘ ರೋಗಗಳಾಗಲೀ ಮತ್ತು ವಿಶಿಷ್ಟ ಕಾಯಿಲೆಗಳಿಂದಾಗಲೀ ನೀವು ವಿಮುಕ್ತರಾಗುವಿರಿ.

ವಿವಾಹ-ದಾಂಪತ್ಯ

ಸಪ್ತಮದಲ್ಲಿನ ಶನಿಯು ವಿವಾಹದಲ್ಲಿ ಮಂದಗತಿಯನ್ನು ಸೂಚಿಸಿದರೂ ಗುರು ಉತ್ತಮ ಫಲದಾಯಕನೆನಿಸುವನು. ಪ್ರಾಪ್ತ ವಯಸ್ಕರಿಗೆ ಆರಂಭದ ಆರು ತಿಂಗಳು ಈ ದೀಪಾವಳಿಯಿಂದ ವಿವಾಹ ಕಾರ್ಯಗಳಲ್ಲಿ ಅನುಕೂಲವೆನಿಸುವುದು. ಯಾವುದೇ ರೀತಿಯ ಪ್ರೇಮ ವಿವಾಹಗಳಲ್ಲಿ ಅನ್ಯರ ಸಹಾಯದಿಂದ ಶುಭಪ್ರದವಾಗುವುದು. ಉತ್ತಮ ದಾಂಪತ್ಯ ಸುಖ ಲಭ್ಯವಾಗಲಿದೆ. ಸ್ತ್ರೀಯರಿಗೆ ಫೆಬ್ರವರಿಯಲ್ಲೂ ಮತ್ತು ಪುರುಷರಿಗೆ ಮಾರ್ಚಿಯಲ್ಲೂ ಸೂಕ್ತ ಸಂಬಂಧಗಳು ದೊರೆಯುತ್ತವೆ. ವಿವಾಹ ಕಾರ್ಯ ಶೀಘ್ರ ಫಲಪ್ರಾಪ್ತಿಗೆ ಶ್ರೀ ಗುರುದೇವತಾ ಸೇವೆ ಮತ್ತು ಸ್ತೋತ್ರ ಪಠಿಸಿರಿ. ದೂರ ಬಂಧುಗಳಲ್ಲೂ ಮತ್ತು ಮಿತ್ರ ವಲಯಗಳಲ್ಲಿಯೂ ಪ್ರಯತ್ನ ಸೂಕ್ತವೆನಿಸುವುದು.

ಪ್ರಯಾಣ

ದೂರದ ಊರುಗಳಿಗೆ ಪ್ರಯಾಣಿಸುವ ನಿಮಗೆ ಈ ವರ್ಷಾಂತ್ಯವು ಹೆಚ್ಚು ಸೂಕ್ತ ಕಾಲವಾಗುತ್ತದೆ. ನವಗ್ರಹಗಳು ಈ ದೀಪಾವಳಿಯ ನಂತರ ಹೆಚ್ಚಿನ ಪ್ರಯಾಣವನ್ನಾಗಲೀ ಅಥವಾ ಅದರಿಂದಾಗಿ ಹೆಚ್ಚಿನ ಆರ್ಥಿಕ ತೊಂದರೆಯನ್ನಾಗಲೀ ಸೂಚಿಸುವುದಿಲ್ಲ. ಸ್ತ್ರೀಯರಿಗೆ ಮಾತ್ರ ದೂರ ಪ್ರಯಾಣ ಯೋಗವು ಕಂಡು ಬರುತ್ತದೆ. ಪ್ರಯಾಣವು ಸುಖಕರವಾಗಿರುವದಲ್ಲದೆ ನೀವು ಯಾವುದೇ ನಷ್ಟಕ್ಕೆ ಗುರಿಯಾಗುವದಿಲ್ಲ. ದೂರ ದೇಶಗಮನವು ಜೂನ್ ಮತ್ತು ಆಗಸ್ಟ್ ತಿಂಗಳಲ್ಲಿ ಕಂಡು ಬರುವುದು.

ದೇವತಾರಾಧನೆ

ಈ ರಾಶಿಯವರು ದೀಪಾವಳಿಯ ನಂತರ ಹೆಚ್ಚಿನ ದೇವತಾ ಶ್ರದ್ಧೆಯನ್ನೂ [illegible] ಸೇವೆಗಳಲ್ಲಿ ಆಸಕ್ತಿಯನ್ನೂ ಹೊಂದುವರು. ನಿಮ್ಮ ಸರ್ವ ಅಭೀಷ್ಟ ಪ್ರಾಪ್ತಿಗೆ ಶ್ರೀ ವಿಷ್ಣು ದೇವತಾ ಸೇವೆ ಮತ್ತು ವಿಷ್ಣು ಸಹಸ್ರನಾಮ ಸೂಕ್ತ ಸಲಹೆ. ಆರೋಗ್ಯದಲ್ಲಿನ ನ್ಯೂನತೆಯು ಮೃತ್ಯುಂಜಯ ಜಪದಿಂದ ಪರಿಹಾರವಾಗಲಿದೆ. ವಿವಾಹ ಕಾರ್ಯದ ವಿಳಂಬಕ್ಕೆ ಶ್ರೀ ದೇವತಾರಾಧನೆಯನ್ನು ಮಾನಸಿಕ ನೆಮ್ಮದಿಗೆ ಕುಲದೇವತಾ ಸೇವೆಯನ್ನು ನವಗ್ರಹಗಳು ಸೂಚಿಸುತ್ತವೆ. ನಿಮ್ಮ ದೈನಂದಿನ ವ್ಯವಹಾರಗಳು ಫಲಪ್ರದವಾಗಲು ಶ್ರೀ ನವಗ್ರಹ ಸ್ತೋತ್ರ ಪಠಿಸಿರಿ.

ಮಹಿಳೆಯರಿಗೆ

ದೀಪಾವಳಿಯು ಸ್ತ್ರೀಯರಿಗೆ ಈ ಬಾರಿ ಹೆಚ್ಚಿನ ಶುಭಫಲಗಳನ್ನು ಸೂಚಿಸುತ್ತಾ, ಔದ್ಯೋಗಿಕ ಪ್ರಗತಿಯನ್ನೂ ಪ್ರಾಪ್ತ ವಯಸ್ಕರಿಗೆ ವಿವಾಹವನ್ನೂ ಖಚಿತವಾಗಿ ಸೂಚಿಸುತ್ತದೆ. ಒಟ್ಟಾರೆ ಫಲಗಳಲ್ಲಿ ಹೆಚ್ಚಿನ ಶುಭ ಫಲಗಳನ್ನು ಸರ್ವತೋಮುಖನಾಗಿ ಹೊಂದುವರು. ಆದರೆ

ಮಾನಸಿಕ ಶಾಂತಿಗಾಗಿ ಪ್ರಯತ್ನಿಸಬೇಕಾಗುತ್ತದೆ. ಕೀರ್ತಿ ಮತ್ತು ರಾಜಕೀಯ ಭವಿಷ್ಯಕ್ಕಾಗಿ ಪ್ರಯತ್ನಿಸುವವರಿಗೆ ಫೆಬ್ರವರಿಯ ನಂತರ ಸೂಕ್ತ ಕಾಲವೆನಿಸುವುದು. ವಿದ್ಯಾರ್ಥಿಗಳಿಗೆ ಗಣನೀಯ ಕಾಲವು ದೀಪಾವಳಿಯ ನಂತರ ಆರಂಭವಾಗುತ್ತದೆ.

ವಿದ್ಯಾರ್ಥಿಗಳಿಗೆ

ಆರಂಭದ ದಿನಗಳಲ್ಲಿ ನಿಮ್ಮ ವಿದ್ಯಾಭ್ಯಾಸಕ್ಕೆ ಪೂರಕವಾದ ಅವಕಾಶಗಳು ಒದಗಲಾರವು. ಜನವರಿಯ ನಂತರ ಉತ್ತಮ ಸೌಲಭ್ಯಗಳು ದೊರೆಯಲಿವೆ. ಉನ್ನತ ವ್ಯಾಸಂಗ ಮಾಡುತ್ತಿರುವವರಿಗೆ ಈ ವರ್ಷಾಂತ್ಯ ಹೆಚ್ಚಿನ ಪ್ರಗತಿ ಕಂಡುಬರುವುದು. ಮಕ್ಕಳಿಗೆ ಮತ್ತು ಸ್ತ್ರೀಯರಿಗೆ ಜನವರಿಯ ನಂತರದ ದಿನಗಳು ವಿದ್ಯಾಸಕ್ತಿಯನ್ನೂ ಶ್ರದ್ಧೆಯನ್ನೂ ಕೊಡುತ್ತವೆ. ತಾಂತ್ರಿಕ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ಈ ದೀಪಾವಳಿಯು ಉತ್ತಮ ಬೆಳವಣಿಗೆಯನ್ನು ಸೂಚಿಸುತ್ತದೆ. ದೀಪಾವಳಿಯ ನಂತರ ವಿದ್ಯಾರ್ಥಿಗಳು ಹೆಚ್ಚಿನ ಶ್ರದ್ಧೆಯನ್ನೂ ಮತ್ತು ಪರಸ್ಪರ ಸಹಕಾರವನ್ನೂ ಪಡೆದು ಉತ್ತಮ ಫಲಿತಾಂಶಕ್ಕೆ ಪಾತ್ರರಾಗುತ್ತಾರೆ. ಆದರೆ ಮಾರ್ಚಿಯಲ್ಲಿ ಅನಾರೋಗ್ಯದಿಂದ ವಿದ್ಯಾಭ್ಯಾಸಕ್ಕೆ ಅಡಚಣೆಯಾಗದಂತೆ ನೋಡಿಕೊಳ್ಳುವುದು ಅಗತ್ಯ.



(ಮೃಗಶಿರಾ 3, 4, ಆರ್ದ್ರಾ 1, 2, 3, 4 ಪುನರ್ವಸು 1, 2, 3ನೇ ಪಾದ)

ಆರ್ಥಿಕ ಸ್ವಾವಲಂಬನೆ. ಹೊಸ ಉದ್ಯಮದಲ್ಲಿ ಹೆಚ್ಚಿನ ಅಭ್ಯುದಯ. ಸ್ನೇಹಿತರಿಂದ ಸಹಕಾರ, ಉತ್ತಮ ಆರೋಗ್ಯ ಜೊತೆಗೆ ಈ ವರ್ಷ ನಿಮಗೆ ಶುಭ ಫಲಗಳೇ ಅಧಿಕ.

ಉದ್ಯೋಗದತ್ತ ಹೊಸ ಬೆಳವಣಿಗೆಯು ಆರು ತಿಂಗಳ ನಂತರ ಮಾತ್ರ ಸಾಧ್ಯ. ಹೊಸ ವೃತ್ತಿಯಲ್ಲಿ ಸಂತಸ ಹಾಗೂ ಸ್ವತಂತ್ರ ಉದ್ಯೋಗಸ್ಥರಿಗೆ ಈ ದೀಪಾವಳಿಯ ನಂತರದ ದಿನಗಳು ಕ್ರಮೇಣ ಆರ್ಥಿಕ ಸ್ವಾವಲಂಬನೆಯತ್ತ ಒಯ್ಯುತ್ತವೆ. "ಆರ್ಥಾರ್ಜನೆ ಬಹುಪ್ರಾಣ" ಎಂಬಂತೆ ನೀವು ಕೂಡ ಹೊಸ ಚೈತನ್ಯ ಭರಿತವಾದ ಆರ್ಥಿಕ ಸ್ವಾವಲಂಬನೆ ಸಾಧಿಸುವಿರಿ. ಮಹಿಳಾ ಉದ್ಯೋಗಸ್ಥರಿಗೆ ಈ ವರ್ಷಾಂತ್ಯವು ಅತಿ ಉತ್ತಮ ಫಲ ನೀಡುತ್ತವೆ. ಅನೇಕ ಆಕಸ್ಮಿಕ ಬೆಳವಣಿಗೆಗಳು ನಿಮ್ಮ ಉದ್ಯೋಗಕ್ಕೆ ಹೊಸ ತಿರುವು ನೀಡುತ್ತದೆ. ರಾಜಕೀಯ ವ್ಯಕ್ತಿಗಳಿಂದಲೂ ಸಹಾಯ ಲಭ್ಯ. ನಿರುದ್ಯೋಗಿಗಳಿಗೆ ಬಹುತೇಕ ಉದ್ಯೋಗ ಲಭ್ಯತೆಯಿಂದ ಸಂತಸ, ನೆಮ್ಮದಿ ದೊರೆಯುತ್ತದೆ. ಕೃಷಿಕರಿಗೆ ಹೆಚ್ಚಿನ ಪ್ರಗತಿ ವರ್ಷಾಂತ್ಯ ಮಾತ್ರ ಸಾಧ್ಯ.

ಆರ್ಥಿಕ ಸ್ಥಿತಿ

ದೀಪಾವಳಿಯ ನಂತರದ ದಿನಗಳಲ್ಲಿ ಈ ನಿಮ್ಮ ರಾಶಿಯವರ ಆರ್ಥಿಕ ಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಗಳಿಲ್ಲದಿದ್ದರೂ ಅನುಕೂಲ ಯೋಗ ಕಂಡುಬರುತ್ತದೆ. ಹೊಸ ಉದ್ಯಮದಲ್ಲಿ ನಿಮಗೆ ಹೆಚ್ಚಿನ ಅಭ್ಯುದಯ ಯೋಗ ಕಂಡುಬರುವುದು. ಉದ್ಯೋಗಸ್ಥರಿಗೆ ಈ ದೀಪಾವಳಿಯ ನಂತರ ಆರ್ಥಿಕ ಸ್ಥಿತಿಯಲ್ಲಿ ಅನುಕೂಲ ಯೋಗವು ಕಂಡುಬರುವುದು. ವ್ಯಾಪಾರಸ್ಥರಿಗೆ ಅನಿರೀಕ್ಷಿತ ಲಾಭ ಯೋಗ ಕಂಡುಬರುವುದು. ಯಾವುದೇ ರೀತಿಯ ಆಕಸ್ಮಿಕ ಧನಲಾಭಕ್ಕಿಂತ ಸುಸಂದರ್ಭದಲ್ಲಿ ಸ್ನೇಹಿತರ ಸಹಾಯ ಒದಗುತ್ತದೆ. ಸ್ವತಂತ್ರ ಉದ್ಯೋಗಸ್ಥರಿಗೆ ವರ್ಷಾಂತ್ಯದ ಆರು ತಿಂಗಳು ಉತ್ತಮವಾಗಿ ಕಂಡುಬರುತ್ತದೆ. ಒಟ್ಟಾರೆ ಮುಂಬರುವ ದೀಪಾವಳಿಯೊಳಗೆ ನೀವು ಆರ್ಥಿಕ ಸ್ವಾತಂತ್ರ್ಯ ಪಡೆಯುವಿರಿ.

ಆರೋಗ್ಯ

ಅಷ್ಟಮ ಮತ್ತು ನವಮ ಸ್ಥಾನಗಳಲ್ಲಿ ಗುರುವಿನ ಸಂಚಾರ ಮತ್ತು ಶನಿಯ ತೃತೀಯ ದೃಷ್ಟಿಯಿಂದ ಮಕರ ಸ್ಥಾನದ ವೀಕ್ಷಣೆ ಇತ್ಯಾದಿ ಫಲಗಳು ಆರೋಗ್ಯ ವೃದ್ಧಿಯನ್ನು ಸೂಚಿಸಿದರೂ, ಶೀತ ಪ್ರಕೋಪಗಳು ಮತ್ತು ರಕ್ತ ದೌರ್ಬಲ್ಯಗಳು ಕಂಡುಬರುತ್ತವೆ. ವೃದ್ಧರಿಗೆ ಮಾತ್ರ ವರ್ಷ ಪೂರ್ತಿ ಈ ದೀಪಾವಳಿಯಿಂದ ಉತ್ತಮ ಆರೋಗ್ಯ ಲಭ್ಯವಾಗಲಿದೆ. ಮಕ್ಕಳ ಆರೋಗ್ಯ ಮತ್ತು ಬೆಳವಣಿಗೆಯತ್ತ ಆರಂಭದ ನಾಲ್ಕು ತಿಂಗಳು ಹೆಚ್ಚಿನ ಗಮನ ಅಗತ್ಯ. ದೀರ್ಘ ರೋಗಿಗಳಿಗೆ ವರ್ಷಾಂತ್ಯದ ಆರು ತಿಂಗಳು ಹೆಚ್ಚು ಶುಭಫಲದಾಯಕವೆನಿಸುತ್ತದೆ. ಮಹಿಳೆಯರಿಗೆ ವರ್ಷ ಪೂರ್ಣ ಉತ್ತಮ ಆರೋಗ್ಯವನ್ನು ನಿರೀಕ್ಷಿಸಬಹುದು. ಶನೀಶ್ವರನ ಆರಾಧನೆಯಿಂದ ಮತ್ತು ಗುರುಕ್ಷೇತ್ರಗಳಲ್ಲಿನ ತೀರ್ಥ ಸ್ನಾನದಿಂದ ಉತ್ತಮ ಆರೋಗ್ಯ ಹೊಂದಬಹುದು.

ವಿವಾಹ-ದಾಂಪತ್ಯ

ಋಣಾನುಬಂಧ ರೂಪವಾದ ಪತಿ ಅಥವಾ ಪತ್ನಿಯನ್ನು ಪಡೆಯಲು ಜನವರಿಯ ನಂತರ ಅವಿವಾಹಿತರಿಗೆ ಉತ್ತಮ



ಪ್ರತಿಭಾವಂತ ಉಪಾಚ

ಬೆಳಕು ಹರಿದರೆ ಹಲವು
ಹನ್ನೆರಡು ಚಿಂತೆ.
ಹೆಗಲೇರಿ ತಲೆಯಲ್ಲಿ
ನೆರೆಸುವವು ಸಂತೆ !
ಮೊದಲ ವರ್ಗದಿ
ಎಂ ಎ ಪಾಸಾದರೇನು
ಟ್ಯೂಶನ್ ಹಣಕಾಗಿ
ಪರದಾಡುತಿಹೆನು !

—ಜಿ. ಎಸ್. ಅನ್ನದಾನಿ

[illegible]ವಾಗಿರುತ್ತದೆ. ಪ್ರೇಮ ಪ್ರಕರಣ[illegible] [illegible] ನಂತರ ವೈವಾಹಿಕ ಜೀವನದಲ್ಲಿ ನಿರ್ಮಾಣವಾಗುತ್ತದೆ. ಮಹಿಳೆಯ[illegible]ರಿಗೆ ಆರಂಭದ ಆರು ತಿಂಗಳು ಮತ್ತು ಕೊನೆಯ ಮೂರು ತಿಂಗಳು ಉತ್ತಮವಾಗಿ ಕಂಡುಬರುತ್ತದೆ. ಸ್ನೇಹಿತರಿಂದಲೂ ಮತ್ತು ದೂರ ಬಂಧುಗಳಿಂದಲೂ ನಿಮ್ಮ [illegible] ಅಥವಾ ವಧುವಿನ ಆಯ್ಕೆಯಾಗುತ್ತದೆ. ಫೆಬ್ರವರಿಯ ನಂತರದ ಪ್ರಯತ್ನವು ಅನಾವಶ್ಯಕ ಖರ್ಚನ್ನು ಮತ್ತು ವೃಥಾ ಶ್ರಮವನ್ನು ತಪ್ಪಿಸುತ್ತದೆ. ಈ ದೀಪಾವಳಿಯ ನಂತರ ಪ್ರಾಪ್ತ ವಯಸ್ಕರಾದ ವಧು ಮತ್ತು ವರರ ಬಹುತೇಕ ವಿವಾಹ ಕಾರ್ಯ ನಡೆಯುವದು.

ಪ್ರಯಾಣ

ಈ ರಾಶಿಯವರಿಗೆ ಈ ದೀಪಾವಳಿಯ ನಂತರದ ದಿನಗಳಲ್ಲಿ ಪ್ರಯಾಣಕ್ಕಾಗಿ ಖರ್ಚು ಕಡಿಮೆಯಾಗಲಿದೆ, ದೂರ ಪ್ರಯಾಣಗಳು ಮತ್ತು ವಿದೇಶಯಾತ್ರೆ ಯೋಗವು ಮುಂದಿನ ಆಗಸ್ಟ್ ತಿಂಗಳಲ್ಲಿ ಸಾಧ್ಯವಾಗಲಿದೆ. ತೀರ್ಥಕ್ಷೇತ್ರ ಸಂದರ್ಶನ ಮತ್ತು ಕುಟುಂಬ ಯಾತ್ರೆಗಳು ಜನವರಿ ಹಾಗೂ ಜೂನ್‌ನಲ್ಲಿ ಕಂಡುಬರುತ್ತದೆ. ಯಾವುದೇ ರೀತಿಯ ಆಕಸ್ಮಿಕ ತೊಂದರೆಗಳು ಉಂಟಾಗುವುದಿಲ್ಲ. ಬಂಧುಗಳಲ್ಲಿಗೆ ಮತ್ತು ಹಿತೈಷಿಗಳಲ್ಲಿಗೆ ಪ್ರಯಾಣವನ್ನು ಜುಲೈ ಮತ್ತು ಆಗಸ್ಟ್‌ನಲ್ಲಿ ಬೆಳೆಸುವಿರಿ. ಒಟ್ಟಾರೆ ಈ ದೀಪಾವಳಿಯ ನಂತರ ಬಹು ಕಮ್ಮಿ ಪ್ರಯಾಣ ಯೋಗವು ಕಂಡು ಬರುತ್ತದೆ. ಮಹಿಳೆಯರಿಗೆ ಮಾತ್ರ ಉದ್ಯೋಗ ನಿಮಿತ್ತವಾದ ಪ್ರಯಾಣಗಳು ವರ್ಷ ಪೂರ್ತಿ ಕಂಡುಬರುತ್ತವೆ.

ದೇವತಾರಾಧನೆ

ವಿದ್ಯಾಭ್ಯಾಸಕ್ಕಾಗಿ ಗಣೇಶನ ಅರ್ಚನೆ ಮತ್ತು ಸೇವೆಯು ನಿಮಗೆ ಫಲಪ್ರದ. ಇಷ್ಟಾರ್ಥ ಸಿದ್ಧಿಗಾಗಿ ಮತ್ತು ನಿಮ್ಮ ಸಕಲ ಸಂಕಷ್ಟ ಪರಿಹಾರಕ್ಕಾಗಿ ಕುಲದೇವತಾ ಸೇವೆ ಮುಂದುವರಿಸಿರಿ. ಯಾವುದೇ ನೂತನ ಕಾರ್ಯ ಆರಂಭಕ್ಕೂ ಗುರು ದೇವತಾ ಸೇವೆ ಅತೀ ಅಗತ್ಯ. ನಿಮ್ಮ ಸಂಕಲ್ಪ ಸಿದ್ಧಿಗೆ ಶ್ರೀಲಲಿತಾ ಮತ್ತು ದುರ್ಗಾ ಸ್ತೋತ್ರ ಪಠಿಸಿರಿ. ಮನಶ್ಶಾಂತಿಯನ್ನು ವಿಷ್ಣು ಆರಾಧನೆ ಅಥವಾ ವಿಷ್ಣು ಸಹಸ್ರನಾಮದಿಂದ ಪಡೆಯಬಹುದಾಗಿದೆ. ನಿಮ್ಮ ಆರೋಗ್ಯ ಅಭಿವೃದ್ಧಿಗಾಗಿ ನವಗ್ರಹ ಜಪ ಪಠಿಸಿರಿ.

ಮಹಿಳೆಯರಿಗೆ

ದೀಪಾವಳಿಯ ನಂತರ ಮುಂದಿನ ಅಕ್ಷಯ ಸಂವತ್ಸರದ ದೀಪಾವಳಿಯವರೆಗೆ ಈ ರಾಶಿಯ ಸ್ತ್ರೀಯರಿಗೆ ಮಧ್ಯಮ ಫಲಗಳು ಉಂಟಾಗುತ್ತವೆ. ಯಾವುದೇ ರೀತಿಯ ಆಕಸ್ಮಿಕ ಏರುಪೇರುಗಳು ಉಂಟಾಗುವುದಿಲ್ಲ. ಸಾಧಾರಣ ಆರ್ಥಿಕ ಸ್ಥಿತಿಯಿಂದ ವರ್ಷಾಂತ್ಯದೊಳಗೆ ಆರ್ಥಿಕ ಸ್ವಾವಲಂಬನೆಯನ್ನು ಪಡೆಯುವಿರಿ. ಸಮಾಜದಲ್ಲಿ ಗಣ್ಯಸ್ಥಾನ ಪಡೆಯುವಿರಿ. ರಾಜಕೀಯ ಪ್ರಭಾವ ಮತ್ತು ವೈಯಕ್ತಿಕ ಪ್ರತಿಷ್ಠೆ ಹೆಚ್ಚುತ್ತದೆ. ಹಲವಾರು ಶುಭ ಯತ್ನಗಳು ನಿಮಗೆ ಶೀಘ್ರ ಶುಭ ಫಲ ನೀಡುವವೆಂದು ಕಂಡುಬರುತ್ತದೆ. ಆರೋಗ್ಯದತ್ತ ಗಮನವು ಮಧ್ಯ ವಯಸ್ಕರಿಗೆ ಅಗತ್ಯ. ನಿಮ್ಮ ಎಲ್ಲ ಯತ್ನಗಳಿಗೆ ಹಿತೈಷಿಗಳ ಮತ್ತು ಸ್ನೇಹಿತರ ಸಹಕಾರ

...ದೊರೆಯುವುದಿಲ್ಲವೇ. ಸರ್ಕಾರೀ ಅಧಿಕಾರಿಗಳಿಂದಲೂ ಸಹಾಯ ದೊರೆಯುತ್ತದೆ.

ವಿದ್ಯಾರ್ಥಿಗಳಿಗೆ


ಆರಂಭದಲ್ಲಿನ ತೊಡಕುಗಳು ಕ್ರಮೇಣ ಕಡಿಮೆಯಾಗುತ್ತವೆ. ವಿದ್ಯಾಭ್ಯಾಸದಲ್ಲಿ ಜನವರಿಯ ನಂತರ ಹೆಚ್ಚಿನ ಪ್ರೋತ್ಸಾಹ ಲಭ್ಯ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದೇಶ ಪ್ರಯಾಣ ಯೋಗವು ಆಗಸ್ಟ್ ತಿಂಗಳಲ್ಲಿ ಕಂಡುಬರುತ್ತದೆ. ಕೆಲವೊಮ್ಮೆ ಅನಿರೀಕ್ಷಿತ ತೊಡಕುಗಳು ಕಂಡು ಬಂದರೂ ಸಹಾ ನೀವು ಗಣನೀಯ ತೊಂದರೆಗೆ ಒಳಗಾಗದೆ ವಿದ್ಯಾ ಮುನ್ನಡೆ ನಡೆಯುತ್ತದೆ. ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಈ ವರ್ಷ ಮಂದಗತಿಯ ವಿದ್ಯಾ ಮುನ್ನಡೆ ಕಂಡುಬರುತ್ತದೆ. ವೈದ್ಯಕೀಯ ಮತ್ತು ತಾಂತ್ರಿಕ ವಿದ್ಯಾರ್ಥಿಗಳಿಗೆ ಈ ದೀಪಾವಳಿಯ ನಂತರದ ನಾಲ್ಕು ತಿಂಗಳು ಸಾಧಾರಣ ಫಲ ಮತ್ತು ಮಧ್ಯದ ನಾಲ್ಕು ತಿಂಗಳು ಉತ್ತಮ ಫಲ ಹಾಗೂ ಅಂತಿಮದ ದಿನಗಳು ಪ್ರೋತ್ಸಾಹದಾಯಕ ವಾಗಿವೆ. ಈ ವರ್ಷ ಉತ್ತಮ ಅವಕಾಶಗಳು ಸಿಗುವದರಿಂದ ಮುಂದಿನ ದೀಪಾವಳಿಯ ವರೆಗೆ ಹೆಚ್ಚಿನ ಶುಭ ಫಲಗಳೇ ವಿಘ್ನ ರಹಿತವಾಗಿ ಕಂಡು ಬರುತ್ತವೆ.



ಒಂದು ಪ್ರಾಮಾಣಿಕ ಚಿಂತನ

ಗರ್ಭಿಣಿ ಸ್ತ್ರೀಯರಿಗೆ
ಮೂನ್ನೂರು ಭತ್ಯ
ವಿಧವೆ ವೃದ್ಧರಿಗೆಲ್ಲ
ವೇತನವು ನಿತ್ಯ !
ಉದ್ಧರಿಸ ಬಲ್ಲೆಯದು
ಹಿಡಿಸಿಹುದು ಮತಿಗೆ.
ನಿರ್ಲಜ್ಜ ಆಲಸ್ಯ
ಬೆಳೆಯುತಿದೆ ಜೊತೆಗೆ !

—ಜಿ. ಎಸ್. ಅನ್ನದಾನಿ



(ಪುನರ್ವಸು 1, ಪುಷ್ಯ 1, 2, 3, 4, ಆಶ್ಲೇಷಾ 1, 2, 3, 4ನೇ ಪಾದ)

ಧೈರ್ಯ, ದಕ್ಷತೆಗಳಿಂದ ಹೆಚ್ಚಿನ ಮುನ್ನಡೆ, ಬಂಧು, ಮಿತ್ರರ ಸಹಕಾರ, ನೂತನ ಗೃಹ ನಿರ್ಮಾಣ. ಸುಖ ದಾಂಪತ್ಯ ಜೀವನದಿಂದ ನೀವು ವರ್ಷವಿಡೀ ಸಂತೋಷವಿಂದಿರುವಿರಿ.

ಪ್ರಯತ್ನವಿಲ್ಲದೆ ನಿರುದ್ಯೋಗಿಗಳಿಗೆ ಅನಿರೀಕ್ಷಿತವಾಗಿ ಉದ್ಯೋಗ ಸಿಗುತ್ತದೆ. ಉದ್ಯೋಗಸ್ಥರಿಗೆ ಜನವರಿಯವರೆಗೆ ಉತ್ತಮ ಯೋಗ. ಔದ್ಯೋಗಿಕ ಸಮಸ್ಯೆಗಳಿಂದ ಈ ಬಾರಿ ನೀವು ದೂರ ಉಳಿಯುವಿರಿ. ಧೈರ್ಯದಿಂದಲೂ ಮತ್ತು ದಕ್ಷತೆಯಿಂದಲೂ ಹೆಚ್ಚಿನ ಯಶಸ್ಸು ಗಳಿಸುವಿರಲ್ಲದೇ ವೈಯಕ್ತಿಕ ಜವಾಬ್ದಾರಿಯನ್ನು ಸಕಾಲದಲ್ಲಿಪೂರೈಸುವಿರಿ. ಸ್ವಯಂ ಉದ್ಯೋಗಸ್ಥರಿಗೆ ವರ್ಷ ಪೂರ್ತಿ ಅನುಕೂಲ. ಆದರೆ ಯಾವುದೇ ನೂತನ ವ್ಯವಹಾರಗಳಿಗೆ ತೊಡಗದಿರುವುದೇ ಸೂಕ್ತ. ನಿಮ್ಮ ನೆಚ್ಚಿನ ಸ್ನೇಹಿತರಿಂದಲೂ ಸಹಕಾರವೂ ಔದ್ಯೋಗಿಕವಾಗಿ ಲಭ್ಯವಾಗಲಿದೆ.

ಆರ್ಥಿಕ ಸ್ಥಿತಿ

ವರ್ಷಾಂತ್ಯದ ಆರು ತಿಂಗಳು ನಿಮಗೆ ಆರ್ಥಿಕ ಉನ್ನತಿಯನ್ನು ಸೂಚಿಸುತ್ತದೆ. ಹಲವಾರು ವೈಯಕ್ತಿಕ ಸಮಸ್ಯೆಗಳಿಂದ ನೀವು ಮುಕ್ತರು. ವಿವಾಹ ಮತ್ತು ಗೃಹ ನಿರ್ಮಾಣಕ್ಕಾಗಿ ಹೆಚ್ಚಿನ ವೆಚ್ಚ ಉಂಟಾಗುತ್ತದೆ. ಅಗತ್ಯ ಸಂದರ್ಭಗಳಲ್ಲಿ ಬಂಧುಗಳಿಂದಲೂ, ಸ್ನೇಹಿತರಿಂದಲೂ, ಸಹಕಾರ ಸಂಘಗಳಿಂದಲೂ ಸಹಾಯ ದೊರೆಯುತ್ತದೆ. ವ್ಯಾಪಾರಸ್ಥರಿಗೆ ಮತ್ತು ಕೃಷಿಕರಿಗೆ ಈ ವರ್ಷವು ಹೆಚ್ಚಿನ ಅಭಿವೃದ್ಧಿ ಯೋಗವನ್ನು ಸೂಚಿಸುತ್ತದೆ. ಸಾಲಗಳಿಂದ ಋಣ ಮುಕ್ತರಾಗುವ ಯೋಗವೂ ನಿಮಗೆ ಕಂಡುಬರುತ್ತದೆ.

ಆರೋಗ್ಯ

ನಿಮ್ಮ ಆರೋಗ್ಯದಲ್ಲಿ ತೃಪ್ತಿ ಮತ್ತು ಸಮಾಧಾನ ದೊರೆಯುತ್ತದೆ. ದೀರ್ಘ ರೋಗಸ್ತರಿಗೂ ಈ ಸಂವತ್ಸರದಲ್ಲಿ ಹೆಚ್ಚಿನ ಅನುಕೂಲಗಳು ಕಂಡುಬರುವುದು. ಮಕ್ಕಳಿಗೆ ಮಾತ್ರ ಆರಂಭದ ನಾಲ್ಕು ತಿಂಗಳು ಎಚ್ಚರಿಕೆ ಅನಿವಾರ್ಯವೆನಿಸುವುದು. ವರ್ಷ ಪೂರ್ತಿ ಉತ್ತಮ ಆರೋಗ್ಯವು ಸ್ತ್ರೀಯರಿಗೆ ಲಭ್ಯವಾಗಲಿದೆ. ನಿಮ್ಮ ಆಪ್ತರಿಗೆ ಮತ್ತು ಬಂಧುಗಳಿಗೆ ಅನಾರೋಗ್ಯ ಪರಿಸ್ಥಿತಿಯಲ್ಲಿ ನಿಮ್ಮಿಂದ ಸಹಾಯ ಸಿಗುತ್ತದೆ. ವರ್ಷಾಂತ್ಯ ಎರಡು ತಿಂಗಳು ಶೀತ ಪ್ರಕೋಪ ಮತ್ತು ಉಷ್ಣ ಸಂಬಂಧವಾದ ಕಾಯಿಲೆಗಳಿಂದ ಎಚ್ಚರಿಕೆ ಅವಶ್ಯಕವೆನಿಸುವುದು

ವಿವಾಹ-ದಾಂಪತ್ಯ

ಜನವರಿಯವರೆಗೆ ಉತ್ತಮ ಗುರುಬಲವಿದೆ. ಎಲ್ಲ ಪ್ರಯತ್ನ ಕಾರ್ಯಗಳು ಸುಖವಾಗಿಯೂ ಶೀಘ್ರವಾಗಿಯೂ ಕೈಗೂಡಲಿವೆ. ಆರಂಭದ ನಾಲ್ಕು ತಿಂಗಳು ಪ್ರೇಮ ವಿವಾಹಗಳೂ ಅನುಕೂಲ ಫಲ ನೀಡುತ್ತದೆ. ಈ ರಾಶಿಯ ಬಹುಪಾಲು ಪ್ರಾಪ್ತ ವಯಸ್ಕರಿಗೆ ಈ ದೀಪಾವಳಿಯು ವಿವಾಹ ಯೋಗವನ್ನು ಉಡುಗೊರೆಯಾಗಿ ತಂದಿದೆ. ಸುಖ ದಾಂಪತ್ಯ ಜೀವನದಿಂದ ನೆಮ್ಮದಿಯನ್ನೂ ಸುಖವನ್ನೂ ಹೊಂದುವಿರಿ. ಗುರುವಿನ ಚಲನೆಯ ನಂತರವೂ ಅರ್ಥಾತ್ ಕುಂಭ ರಾಶಿಯ ಪ್ರವೇಶದ ನಂತರವೂ ವೈವಾಹಿಕ ಕಾರ್ಯಕ್ಕೆ ಪೂರ್ಣ ಶುಭ ಫಲವಿರುತ್ತದೆ.

ಪ್ರಯಾಣ

ಕರ್ಮ ಸ್ಥಾನದಲ್ಲಿನ ರಾಹುವು ನಿಮ್ಮ ಔದ್ಯೋಗಿಕ ನಿಮಿತ್ತವಾದ ದೂರ ಪ್ರಯಾಣಗಳನ್ನು ಸೂಚಿಸುತ್ತಾನೆ. ಈ ವರ್ಷ ಪುಣ್ಯಕ್ಷೇತ್ರ ಸಂದರ್ಶನಗಳು ಮತ್ತು ಬಂಧು ಮಿತ್ರರ ಊರುಗಳಿಗೆ ಪ್ರಯಾಣಗಳು ಅಧಿಕವಾಗುತ್ತವೆ. ಸದಾ ತಿರುಗುವ ಉದ್ಯೋಗಸ್ಥರಿಗೆ ಈ ದೀಪಾವಳಿಯಿಂದ

ಮುಂದಿನ ದೀಪಾವಳಿಯವರೆಗೆ ದೂರ ಪ್ರಯಾಣವು ಆತಂಕವಿಲ್ಲದೇ ನಡೆಯುತ್ತದೆ. ಈ ವರ್ಷದಲ್ಲಿ ಪ್ರಯಾಣಗಳು ಅಧಿಕವೆನಿಸಿದರೂ ಅದಕ್ಕಾಗಿ ವೆಚ್ಚ ಕಡಿಮೆಯಾಗಲಿದೆ. ಯಾವುದೇ ರೀತಿಯ ಅಪಾಯಗಳೂ ನಿಮಗೆ ಉಂಟಾಗುವುದಿಲ್ಲ. ವರ್ಷಾಂತ್ಯ ವಿದೇಶಪ್ರಯಾಣವೂ ಲಭ್ಯವಾಗಲಿದೆ

ದೇವತಾರಾಧನೆ

ಈ ದೀಪಾವಳಿಯು ಆಸ್ತಿಕರಿಗೆ ಹೆಚ್ಚು ಧಾರ್ಮಿಕ ಪ್ರೋತ್ಸಾಹ ನೀಡುವುದರೊಂದಿಗೆ ನೆಮ್ಮದಿಯನ್ನೂ ಸೂಚಿಸುತ್ತದೆ. ನವಗ್ರಹಗಳು ನಿಮಗೆ ಶುಭ ಫಲ ಸೂಚಿಸಿದರೂ ಆಗಾಗ್ಗೆ ಕುಲದೇವತಾ ಸೇವೆಯೊಂದಿಗೆ ಇಷ್ಟಾರ್ಥ ಸಿದ್ಧಿಗೆ ಸುಬ್ರಹ್ಮಣ್ಯ ಆರಾಧನೆ ಸೂಕ್ತ ಸಹ. ಗೃಹದಲ್ಲಿನ ಸಮಸ್ಯೆ ನಿವೃತ್ತಿಗೆ ಖಡ್ಗ ಮಾಲಾ ದೇವಿ ಸ್ತೋತ್ರ ಪಠಿಸಿರಿ. ಶ್ರೀ ಗಣೇಶ ಆರಾಧನೆಯೂ ಸದಾಕಾಲ ಯಶಸ್ಸು ನೀಡುತ್ತದೆ. ನವಗ್ರಹ ಸ್ತೋತ್ರ ಮತ್ತು ಆದಿತ್ಯ ಹೃದಯ ಪಠಿಸುವುದೂ ಒಳ್ಳೆಯದು.

ನೆನಪು ಕನಸು

ಮನೋಗಗನದಲ್ಲಿ
ಮೂಡಿ ಮುಳುಗುತಿರುವ
ನಕ್ಷತ್ರ ನೂರು ನೆನಪು
ಚಿತ್ತ ಭಿತ್ತಿಯ ಮೇಲೆ
ನೊಂದಗಳ ವರ್ಣಮಯ
ಚಿತ್ರ ಸಾವಿರ ಕನಸು


-ಸುರೇಶ ಪಾಟೀಲ

ಮಹಿಳೆಯರಿಗೆ

ಆರಂಭದ ಆರು ತಿಂಗಳಲ್ಲಿ ಸ್ತ್ರೀಯರಿಗೆ ಅಧಿಕ ಯಶಸ್ಸು ಮತ್ತು ಕೀರ್ತಿಯು ಉಂಟಾಗುತ್ತದೆ. ಔದ್ಯೋಗಿಕ ಸಮಸ್ಯೆಗಳು ಬಹುಪಾಲು ಪರಿಹಾರಗೊಳ್ಳುತ್ತವೆ. ಪ್ರಾಪ್ತ ವಯಸ್ಕರಿಗೆ ವಿವಾಹ ಕಾರ್ಯವೂ ನಡೆಯುತ್ತದೆ. ನಿಮ್ಮ ಸಕಲ ಅಭೀಷ್ಟಗಳೂ ನೆರವೇರುವುದರಲ್ಲಿ ಸಂಶಯವಿಲ್ಲ. ಮುಂಬರುವ ದಿನಗಳು ಹೆಚ್ಚಾಗಿ ಸ್ತ್ರೀಯರಿಗೆ ಸರ್ವತೋಮುಖ ಬೆಳವಣಿಗೆಯನ್ನು ಸೂಚಿಸುವುದಲ್ಲದೇ ಇಷ್ಟಾರ್ಥ ಸಿದ್ಧಿಯನ್ನೂ ಸೂಚಿಸುತ್ತವೆ.

ವಿದ್ಯಾರ್ಥಿಗಳಿಗೆ

ವಿದ್ಯಾರ್ಥಿಗಳಿಗೆ ದೀಪಾವಳಿಯ ನಂತರದ ಎಂಟು ತಿಂಗಳು ಶುಭ ಫಲದಾಯಕ. ಆರ್ಥಿಕ ತೊಂದರೆಯ ನಿವೃತ್ತಿ ಮತ್ತು ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ಖಂಡಿತಾ ದೊರೆಯುತ್ತದೆ. ಉನ್ನತ ವ್ಯಾಸಂಗಕ್ಕಾಗಿ ವಿದೇಶ ಯೋಗವೂ ಆಗಸ್ಟ್ ತಿಂಗಳಲ್ಲಿ ಕಂಡುಬರುವುದು. ಮಹಿಳೆಯರಿಗೂ ಮತ್ತು ಚಿಕ್ಕ ಮಕ್ಕಳಿಗೂ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ತೊಡಕುಗಳೇನೂ ಕಂಡುಬರುವುದಿಲ್ಲ. ವಿದ್ಯಾಶ್ರದ್ಧೆ ಮತ್ತು ಅನಗತ್ಯ ವ್ಯವಹಾರಗಳಿಂದ ದೂರವಿರುವ ಪ್ರವೃತ್ತಿಯು ವಿದ್ಯಾರ್ಥಿಗಳಲ್ಲಿ ಕಂಡುಬರುತ್ತದೆ. ಒಟ್ಟಾರೆ ಈ ದೀಪಾವಳಿಯ ನಂತರ ಉತ್ತಮ ಶುಭ ಫಲಗಳು ವಿದ್ಯಾರ್ಥಿಗಳಿಗೆ ಲಭ್ಯವಾಗಲಿವೆ.



(ಮಘಾ 1, 2, 3, 4 ಪುಬ್ಬ 1, 2, 3, 4 ಉತ್ತರಾ 1)

ವಿಪರೀತ ಖರ್ಚು. ವೃತ್ತಿಪರರಿಗೆ ತಾಪತ್ರಯಗಳು, ಉತ್ತಮ ಆರೋಗ್ಯ. ದಾಂಪತ್ಯ ಜೀವನದಲ್ಲಿ ಸುಖ ಸಾಹಾರ್ದ ಹೀಗೆ ಮಿಶ್ರ ಫಲಗಳನ್ನು ಈ ಸಂವತ್ಸರವು ನಿಮಗೆ ನೀಡಲಿದೆ.

ಉದ್ಯೋಗ

ಉದ್ಯೋಗಿಕ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಹೆಚ್ಚು ಉಚಿತ ಫಲಗಳನ್ನು ನಿರೀಕ್ಷಿಸಬಹುದು. ಸ್ಥಾನ ಭದ್ರತೆಯು ಕಂಡು ಬರುವುದು. ನಿರುದ್ಯೋಗಿಗಳಿಗೆ ಮೊದಲ ನಾಲ್ಕು ತಿಂಗಳುಗಳಲ್ಲಿ ಉದ್ಯೋಗ ಭರವಸೆ ಕಂಡು ಬರುತ್ತದೆ. ಕೃಷಿಕರಿಗೆ ಮತ್ತು ಔಷಧಿ ವ್ಯಾಪಾರಸ್ಥರಿಗೆ ಹೆಚ್ಚು ಲಾಭದಾಯಕವಾಗಿರುತ್ತದೆ. ವ್ಯಾಪಾರೀ ವಲಯಗಳಲ್ಲಿ ಬಂಡವಾಳಗಳು ಸಕಾಲದಲ್ಲಿ ದೊರೆತರೂ ಈ ಜನವರಿಯ ನಂತರ ಪ್ರೋತ್ಸಾಹದಾಯಕವಾಗಿರುವುದಿಲ್ಲ. ಸರ್ಕಾರೀ ಉನ್ನತ ಅಧಿಕಾರಿಗಳಿಗೆ ಬಡ್ತಿ ಯೋಗ ಕಂಡುಬರುತ್ತದೆ.

ಆರ್ಥಿಕ ಸ್ಥಿತಿ

ವೃತ್ತಿಪರರಿಗೆ ಕಷ್ಟದಾಯಕವೆನಿಸುವ ಈ ವರ್ಷವು ಕೃಷಿಕರಿಗೆ ಮತ್ತು ಅಧಿಕಾರಿ ವರ್ಗದವರಿಗೆ ಹೆಚ್ಚು ಲಾಭದಾಯಕವಾಗಿರುತ್ತದೆ. ನಿಮಗೆ ಆಗಾಗ್ಗೆ ಉಂಟಾಗುವ ವಿಪರೀತ ಖರ್ಚುಗಳೂ ಕೂಡ ಆಕಸ್ಮಿಕವಾಗಿ ದೊರೆಯುವ ಸಹಾಯದಿಂದ ಕಷ್ಟವೆನಿಸಲಾರವು. ಯಾವುದೇ ರೀತಿಯ ಹೊಸ ಉದ್ಯಮದ ಆರಂಭಕ್ಕಿಂತಲೂ ಇರುವುದರಲ್ಲೇ ಆರ್ಥಿಕ ಅಭಿವೃದ್ಧಿಯು ಕಂಡುಬರುತ್ತದೆ. ಅಲಂಕಾರ ಸಾಮಗ್ರಿಗಳ ಮತ್ತು ಔಷಧಿ ವ್ಯಾಪಾರಗಳಿಂದ ಅಧಿಕ ಲಾಭಗಳಿಸುವಿರಿ.

ಆರೋಗ್ಯ

ಅಷ್ಟಮ ಸ್ಥಾನಾಧಿಪತಿಯಾದ ಗುರುವಿನ ದೃಷ್ಟಿಯು ರಾಶಿಯ ಮೇಲೆ ಜನವರಿ ತಿಂಗಳ ಇಪ್ಪತ್ತನಾಲ್ಕರಿಂದ ಪೂರ್ಣವಾಗಿ ಕಂಡು ಬರುವುದು. ನಿಮ್ಮ ರಾಶಿಯವರಿಗೆ ಉತ್ತಮ ಆರೋಗ್ಯ ಕಂಡುಬರುತ್ತದೆ. ಮಕ್ಕಳಿಗೆ ಆರಂಭದ ನಾಲ್ಕು ತಿಂಗಳು ಎಚ್ಚರಿಕೆ ಅಗತ್ಯ. ವೃದ್ಧರಿಗೂ ಮತ್ತು ಮಹಿಳೆಯರಿಗೂ ಉತ್ತಮ ಆರೋಗ್ಯ ಲಭ್ಯತೆಯು ವರ್ಷ ಪೂರ್ಣ ಕಂಡುಬರುವುದು. ಗ್ರಹ ಬದಲಾವಣೆ ಕಾಲದಲ್ಲಿ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಉಷ್ಣ ಪ್ರಕೋಪದ ಕಾಯಿಲೆಗಳು ಕಂಡುಬಂದರೂ ಹೆಚ್ಚಿನ ತೊಂದರೆದಾಯಕವಾಗಿರುವುದಿಲ್ಲ. ಅನಾರೋಗ್ಯ ಪೀಡಿತರೂ ಸಹ ಸೂಕ್ತ ಉಪಚಾರಗಳಿಂದ ಶೀಘ್ರ ಗುಣಮುಖರಾಗುತ್ತಾರೆ.

ವಿವಾಹ-ದಾಂಪತ್ಯ.

ಜನವರಿಯ ನಂತರ ಪ್ರಾಪ್ತ ವಯಸ್ಕರಿಗೆ ವಿವಾಹ ಯೋಗವು ಖಚಿತವಾಗಿ ಕಂಡುಬರುತ್ತದೆ. ವಿವಾಹಿತರಿಗೆ ದಾಂಪತ್ಯ ಜೀವನದಲ್ಲಿ ಸುಖ, ತೃಪ್ತಿ, ಸೌಹಾರ್ದ ಕಂಡುಬರುತ್ತದೆ. ದೂರ ಬಂಧುಗಳಿಗಿಂತಲೂ ಸ್ನೇಹಿತರ ವಲಯಗಳಲ್ಲಿ ನಿಮಗೆ ವಿವಾಹ ಯೋಗವು ಕಂಡುಬರುತ್ತದೆ. ಅವಿವಾಹಿತರಿಗೆ ವಿವಾಹಾನಂತರದ ದಿನಗಳು ಸಕಲ ದೃಷ್ಟಿಯಲ್ಲೂ ಅಭಿವೃದ್ಧಿಯನ್ನು ತರುತ್ತವೆ. ಮಾರ್ಚಿ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ವಿವಾಹ ಯತ್ನಗಳಿಗೆ ಸೂಕ್ತ ದಿನಗಳು, ಪ್ರೇಮ ವಿವಾಹಗಳು ಈ ವರ್ಷ ನಿಮ್ಮ ರಾಶಿಯವರಲ್ಲಿ ಅಧಿಕ.

ಪ್ರಯಾಣ

ದೂರದ ಊರಿಗೆ ಪ್ರಯಾಣವು ನಿಮಗೆ ಲಭ್ಯವಿದ್ದರೂ ಕೊನೇ ಘಳಿಗೆಯಲ್ಲಿ ರದ್ದಾಗುವ ಸಾಧ್ಯತೆಗಳೇ ಅಧಿಕ ಈ ವರ್ಷಾಂತ್ಯದೊಳಗೆ ವಯೋವೃದ್ಧರಿಗೂ ತೀರ್ಥಕ್ಷೇತ್ರ ಸಂದರ್ಶನಗಳು ಕಂಡು ಬರುವುದು. ಔದ್ಯೋಗಿಕ ಪ್ರಯಾಣಗಳೂ ಮಾರ್ಚಿಯಲ್ಲಿ ಅಧಿಕವಾಗಿರುತ್ತವೆ. ವಿದೇಶ ಯೋಗಗಳು ನವೆಂಬರ್ ಹಾಗೂ ಜನವರಿಯಲ್ಲಿ ಕಂಡುಬರುತ್ತದೆ. ಸಕಲ ಯತ್ನಗಳಿಂದಲೂ ಸಹ ಕುಟುಂಬ ಯಾತ್ರೆ ಮತ್ತು ಮನರಂಜನಾ ಭೇಟಿಗಳು ಕಂಡುಬಂದರೂ ಆತಂಕಗಳ ಜಾಸ್ತಿ. ಒಟ್ಟಾರೆ ಮಿಶ್ರಫಲದಾಯಕವಾಗಿರುತ್ತದೆ.

ದೇವತಾರಾಧನೆ

ನಿಮ್ಮ ಕುಲದೇವತೆಯ ಆರಾಧನೆಯಿಂದ ಸಕಲ ಇಷ್ಟಾರ್ಥಸಿದ್ಧಿ ಹೊಂದುವಿರಿ. ಮೃತ್ಯುಂಜಯ ಜಪ ಮತ್ತು ನವಗ್ರಹ ಆರಾಧನೆಯು ಜನವರಿಯಲ್ಲಿ ಅಗತ್ಯ. ಆಗಾಗ ಆದಿತ್ಯ ಹೃದಯ ಮತ್ತು ಸೂರ್ಯ ಸ್ತೋತ್ರ ಪಠನೆಯು ನಿಮ್ಮ ಎಲ್ಲ ಇಷ್ಟಾರ್ಥ ನಡೆಸುವುದು. ವಿಷ್ಣು ದೇವತಾರಾಧನೆ ಮತ್ತು ಲಕ್ಷ್ಮಿ ಸ್ತೋತ್ರ ನಿಮಗೆ ಆರ್ಥಿಕ ಅಭಿವೃದ್ಧಿಯನ್ನು ತರುತ್ತದೆ. ಕ್ಷೇತ್ರ ಸಂದರ್ಶನಗಳಿಂದ ಮನೋ ನೆಮ್ಮದಿಯನ್ನು ಪಡೆಯುವಿರಿ.

ಮಹಿಳೆಯರಿಗೆ

ಈ ದೀಪಾವಳಿಯು ಸ್ತ್ರೀಯರಿಗೆ ಹರ್ಷದಾಯಕವಾಗಿರುತ್ತದೆ. ಆರಂಭದಲ್ಲೇ ಹಲವಾರು ಸಮಸ್ಯೆಗಳು ಪರಿಹಾರವಾಗು



ಆಗ - ಈಗ


ಆಗ...ತುಡುಗ ಹುಡುಗಿಗೆ
ಮುತ್ತಿಟ್ಟ...
ಕೆನ್ನೆ ಕೆಂಪಿಟ್ಟಿತು.
ಹೃದಯ ಹೃದಯ
ಕಲೆತು...
ಪ್ರೀತಿ ಹುಟ್ಟಿತು...
ಈಗ...ಹುಡುಗ ಕೇಳಿದ
'ಏನೋ!......
ನನಗೇನು ಹುಟ್ಟಿತು ?'
'ಕಳ್ಳ ಕೃಷ್ಣನಲ್ಲದೆ
ಇನ್ನಾರು......?'
ಹುಡುಗಿ ತುಟಿ ಬಿಚ್ಚಿತು !

—ಅಶೋಕ ಚೊಳಚ ಗುಡ್ಡ

ತ್ತವೆ. ನಿಮ್ಮ ಇಷ್ಟಾರ್ಥಸಿದ್ಧಿಗಳು ಬಹು ಬೇಗ ಉಂಟಾಗುತ್ತವೆ. ವಿವಾಹದಲ್ಲಿ ಜನವರಿಯ ನಂತರ ಅತಿ ಶೀಘ್ರ ಫಲವು ಕಂಡು ಬರುವುದು. ಉತ್ತಮ ಆರೋಗ್ಯದಿಂದ ಉತ್ಸಾಹಭರಿತರಾಗುವಿರಿ. ಸ್ವಯಂ ಉದ್ಯೋಗಸ್ಥರು ಪ್ರತಿಭೆ ಮತ್ತು ಸಹಕಾರದಿಂದ ಆರ್ಥಿಕ ಪ್ರಗತಿಯನ್ನು ಸಾಧಿಸುವರು. ಒಟ್ಟಾರೆ ಅತಿಹೆಚ್ಚು ಶುಭ ಫಲಗಳು ಕಂಡುಬರುತ್ತದೆ.

ವಿದ್ಯಾರ್ಥಿಗಳಿಗೆ

ಈ ದೀಪಾವಳಿಯಿಂದ ಎಲ್ಲ ನಿಮ್ಮ ಪ್ರಯತ್ನಗಳು ವಿದ್ಯಾಭ್ಯಾಸದಲ್ಲಿ ಯಶಸ್ವಿಯಾಗುತ್ತವೆ. ಆದರೆ ಆರಂಭದ ನಾಲ್ಕು ತಿಂಗಳಿಗಿಂತ ಉಳಿದ ಎಂಟು ತಿಂಗಳು ಉತ್ತಮ ಫಲ ನೀಡುತ್ತವೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದೇಶ ಯಾತ್ರೆಯು ಸ್ತ್ರೀಯರಿಗೆ ಹೆಚ್ಚಾಗಿ ಕಂಡು ಬರುವುದು. ಪ್ರೋತ್ಸಾಹ ಮತ್ತು ಸಲಹೆಗಳಿಂದ ವಿದ್ಯಾಸಕ್ತಿ ಹೆಚ್ಚಿಸಿಕೊಳ್ಳುವಿರಿ. ತಾಂತ್ರಿಕ ಶಿಕ್ಷಣಾರ್ಥಿಗಳು ಉತ್ತೀರ್ಣತೆಯನ್ನು ಹೊಂದುವರಾದರೂ ಸಹಾ ಪರಿಶ್ರಮವು ತುಂಬಾ ಅಗತ್ಯವೆನಿಸುವುದು. ಈ ದೀಪಾವಳಿಯಿಂದ ಮುಂದಿನ ದೀಪಾವಳಿಯವರೆಗೆ ವಿಳಂಬಗಳು ಕಂಡು ಬಂದರೂ ಒಟ್ಟಾರೆ ಶ್ರಮಕ್ಕೆ ತಕ್ಕ ಫಲವನ್ನು ನವಗ್ರಹಗಳು ಸೂಚಿಸುತ್ತವೆ.



(ಉತ್ತರಾ 2.3.4 ಹಸ್ತ 1,2,3, 4, ಚಿತ್ತಾ 1,2ನೇ ಪಾದ)

ಉದ್ಯೋಗದಲ್ಲಿ ಹೊಸ ಬೆಳವಣಿಗೆಗಳು, ಆಸ್ತಿ ಹಾಗೂ ವಾಹನ ಖರೀದಿ. ಪ್ರಯಾಣದಿಂದ ವಿದ್ಯಾರ್ಜನೆ ಹಾಗೂ ದ್ರವ್ಯಾರ್ಜನೆ- ನಿಮಗೆ ಈ ವರ್ಷ ಖಂಡಿತ.

ಜನವರಿಯ ನಂತರ ನಿಮ್ಮ ಉದ್ಯೋಗದಲ್ಲಿ ಅನಿರೀಕ್ಷಿತ ತಿರುವು ಉಂಟಾಗುತ್ತದೆ. ನಿಮ್ಮ ಎಲ್ಲ ಪ್ರಯತ್ನ ಕಾರ್ಯಸಿದ್ಧಿಯೂ ಜನವರಿಯಲ್ಲಿ ಉಂಟಾಗುತ್ತದೆ. ನಿರುದ್ಯೋಗಿಗಳಿಗೆ ಆರಂಭದ ಆರು ತಿಂಗಳು ಉತ್ತಮ ಉದ್ಯೋಗ ದೊರೆಯುವ ಅವಕಾಶ. ಸ್ನೇಹಿತರ ಸಹಕಾರದಿಂದ ಸ್ವಯಂ ಉದ್ಯೋಗಸ್ಥರಿಗೆ ಉತ್ತಮ ರೀತಿಯಲ್ಲಿ ಆರ್ಥಿಕ ಸುಧಾರಣೆಯು ಉಂಟಾಗಿ ಸ್ಥಿರತೆ ಉಂಟಾಗುವದು. ವ್ಯಾಪಾರೀ ವಲಯಗಳಿಗಿಂತ ಅಧಿಕಾರಿ ವರ್ಗದವರಿಗೆ ಹೆಚ್ಚಿನ ಅನುಕೂಲ ಯೋಗ ಉಂಟಾಗುತ್ತದೆ. ಈ ದೀಪಾವಳಿಯಿಂದ ಮುಂದಿನ ಎಂಟು ತಿಂಗಳು ಮಹಿಳೆಯರಿಗೆ ಉತ್ತಮ ಅವಕಾಶ ಮತ್ತು ಯಶಸ್ಸು ಲಭ್ಯವಾಗುತ್ತದೆ. ಸರ್ಕಾರೀ ಉನ್ನತ ಅಧಿಕಾರಿಗಳಿಗೆ ಬಡ್ತಿ ಯೋಗವಿದೆ.

ಆರ್ಥಿಕ ಸ್ಥಿತಿ

ಆರ್ಥಿಕ ತೊಂದರೆಗಳನ್ನು ಅನುಭವಿಸದವರೇ ವಿರಳ. ಇದರಿಂದ ನೀವು ಹೊರತಲ್ಲ. ಆದರೂ ನಿಮ್ಮ ಜೀವನದಲ್ಲಿ ಈ ದೀಪಾವಳಿಯ ಮೊದಲಿನ ನಾಲ್ಕು ತಿಂಗಳ ನಂತರ ಕೊನೆಯ ಎಂಟು ತಿಂಗಳ ಕಾಲ ಆರ್ಥಿಕ ಸ್ವಾತಂತ್ರ್ಯವನ್ನೂ ತನ್ಮೂಲಕ ಮಾನಸಿಕ ನೆಮ್ಮದಿಯನ್ನೂ ಪಡೆಯುವಿರಿ. ಖರ್ಚುಗಳೂ ಕೂಡ ಅನಿವಾರ್ಯವಾಗಿ ಅಧಿಕವೆನಿಸುತ್ತದೆ. ನೀವು ವೈಯಕ್ತಿಕವಾಗಿ ಆಸ್ತಿ ಮತ್ತು ವಾಹನಗಳನ್ನು ಖರೀದಿಸುವಿರೆಂದು ನವಗ್ರಹಗಳು ಸೂಚಿಸುತ್ತವೆ. ವ್ಯಾಪಾರಸ್ಥರಿಗೆ ಏರಿಳಿತಗಳು ಕಂಡುಬಂದರೂ ಒಟ್ಟಾರೆ ಫಲಗಳಲ್ಲಿ ಉತ್ತಮವಾಗಿರುತ್ತದೆ.

ಆರೋಗ್ಯ

ನಿಮ್ಮ ರಾಶಿಯವರಿಗೆ ಅಷ್ಟಮಸ್ಥಾನದಲ್ಲಿರುವ ರಾಹುವು ಉತ್ತಮ ಫಲವನ್ನೇ ಸೂಚಿಸುತ್ತಾನೆ. ಯಾವುದೇ ರೀತಿಯ ವಿಶೇಷ ತೊಂದರೆಗೆ ನೀವು ಒಳಗಾಗುವುದಿಲ್ಲ. ರಕ್ತ ಒತ್ತಡ ಮತ್ತು ದೀರ್ಘ ರೋಗಿಗಳಿಗೆ ವರ್ಷಾಂತ್ಯ ಎಂಟು ತಿಂಗಳು ಉತ್ತಮ ಫಲವು ಕಂಡು ಬರುತ್ತದೆ. ಬಹುತೇಕ ಎಂಟು ವರ್ಷದ ಒಳಗಿನ ಮಕ್ಕಳಿಗೆ ಮಾರ್ಚಿವರೆಗೆ ಆರೋಗ್ಯ ನೋಡಿಕೊಳ್ಳಬೇಕಾಗುವುದು. ವೃದ್ಧರಿಗೂ ಮತ್ತು ಸ್ತ್ರೀಯರಿಗೂ ಈ ದೀಪಾವಳಿಯ ನಂತರ ಉತ್ತಮ ಆರೋಗ್ಯವೇ ಕಂಡುಬರುವುದು. "ಆರೋಗ್ಯವೇ ಮನುಷ್ಯನ ಮುಖ್ಯ ಸಂಪತ್ತು" ಕಾರಣ ನೀವು ಈ ವರ್ಷ ಅದೃಷ್ಟಶಾಲಿಗಳು.

ವಿವಾಹ-ದಾಂಪತ್ಯ


ಸಪ್ತಮಾಧಿಪತಿಯಾದ ಗುರುವು ದ್ವಿರಾಶಿಗಳಲ್ಲೂ ಸಂಚರಿಸುತ್ತಾನೆ. ಮಕರದಲ್ಲಿ ನೀಚಸ್ಥಾನದಲ್ಲಿದ್ದರೂ ಈ ನಿಮ್ಮ ರಾಶಿಯವರಿಗೆ ವೈವಾಹಿಕ ಜೀವನದತ್ತ ಉತ್ತಮ ಫಲವನ್ನೇ ಕೊಡುತ್ತಾನೆ. ಅಲ್ಲದೇ ಜನವರಿಯ ನಂತರ ಅರ್ಥಾತ್ ಕುಂಭ ರಾಶಿಗೆ ಗುರುವಿನ ಪ್ರವೇಶವಾದ ನಂತರವೂ ಕೂಡ ವಿವಾಹ ಕಾರ್ಯಕ್ಕೂ ದಾಂಪತ್ಯ ಸುಖಕ್ಕೂ ಶುಭ ಫಲಗಳನ್ನೇ ಸೂಚಿಸುವುದರಿಂದ ಈ ದೀಪಾವಳಿಯಿಂದ ಮುಂದಿನ ದೀಪಾವಳಿಯವರೆಗೂ ಉತ್ತಮ ಶುಭ ಫಲಗಳನ್ನೆ ಕಾಣುವಿರಿ. ನಿಮಗೆ ಪ್ರೇಮ ಪ್ರಕರಣಗಳಲ್ಲೂ ಪ್ರೋತ್ಸಾಹ ದೊರೆಯುತ್ತದೆ.

ಪ್ರಯಾಣ

ಯಾವನು ದೇಶ ಸಂಚರಿಸುವುದಿಲ್ಲವೋ ಅವನ ಬುದ್ಧಿಯು ನೀರಿನಲ್ಲಿ ಬಿದ್ದ ತುಪ್ಪದಂತೆ ಸಂಕುಚಿತವಾಗುತ್ತದೆ ಎಂದು ಹೇಳುತ್ತಾರೆ. ಪ್ರಯಾಣದಿಂದ ವಿದ್ಯಾರ್ಜನೆಯೂ ಮತ್ತು ದ್ರವ್ಯಾರ್ಜನೆಯೂ ನಿಮಗೆ ಈ ದೀಪಾವಳಿಯಿಂದ ಮುಂದಿನ ದೀಪಾವಳಿಯವರೆಗೂ ಉಂಟಾಗುತ್ತದೆ. ವೈಯಕ್ತಿಕ ಜವಾಬ್ದಾರಿ ಮತ್ತು ಉದ್ಯೋಗದ ಜವಾಬ್ದಾರಿಯೂ ಸೇರಿ ಈ ಬಾರಿ ಬಹಳಷ್ಟು ಪ್ರಯಾಣ ಯೋಗವು ಕಂಡು ಬರುತ್ತದೆ. ಬಹುತೇಕ ಗುರುದೇವತಾ ಸಾನ್ನಿಧ್ಯ ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ನೋಡುವಿರಿ.

ದೇವತಾರಾಧನೆ

ಆಗಾಗ ನವಗ್ರಹ ಸ್ತೋತ್ರ ಪಠನೆಯೂ ನಿಮಗೆ ಅಗತ್ಯವಾಗಿರುವುದು. ಸೂಕ್ತ ಪರಿಹಾರಕ್ಕಾಗಿ ಕುಲದೇವತಾ ಪ್ರಾರ್ಥನೆಗಳು ಅಗತ್ಯ. ಶ್ರೀ ಗಣೇಶನ ಆರಾಧನೆಯೂ ನಿಮಗೆ ಶ್ರೇಯಸ್ಸು ನೀಡುತ್ತದೆ. ಮಹಿಳೆಯರು ಸ್ತ್ರೀ ದೇವತಾ ಆರಾಧನೆಯಿಂದ ಸುಖವನ್ನೂ ನೆಮ್ಮದಿಯನ್ನೂ ಹೊಂದುವರು. ನಿಮ್ಮ ಮಾನಸಿಕ ನೆಮ್ಮದಿಗಾಗಿ




[illegible]

ಮಹಿಳೆಯರಿಗೆ

ದೈನಂದಿನ ವ್ಯವಹಾರಗಳು ನಿಮಗೆ ಸುಗಮವಾಗಿ ನಡೆಯುವುದು ಈ ದೀಪಾವಳಿಯ ವಿಶೇಷ. ಈ ದೀಪಾವಳಿಯ ನಂತರ ನಿಮ್ಮ ಯಶಸ್ಸು ಮತ್ತು ಕೀರ್ತಿ ಹೆಚ್ಚುವುದು ನಿಮ್ಮ ವೈಶಿಷ್ಟ್ಯ. ಆಕಸ್ಮಿಕ ಜೀವನದ ಘಟನೆಗಳೂ ನಿಮ್ಮ ಉನ್ನತಿಗೆ ಹಾದಿಯಾಗುತ್ತದೆ. ಪ್ರಯತ್ನ ಕಾರ್ಯ ಸಫಲತೆಯೂ, ವಿದ್ಯಾಭ್ಯಾಸದಲ್ಲಿ ಪೂರ್ಣ ಫಲವೂ ಕಂಡು ಬಂದರೂ ಹಲವಾರು ಪ್ರಯತ್ನಗಳು ತಪ್ಪಲಾರವು. ನಿಮ್ಮ ವೈಯಕ್ತಿಕ ಜವಾಬ್ದಾರಿಗಳನ್ನು ಪೂರೈಸುವುದರಿಂದ ಒಟ್ಟಿನಲ್ಲಿ ನೆಮ್ಮದಿ ಹೊಂದುವಿರಿ. ನಿಮಗೆ ಈ ದೀಪಾವಳಿಯು ಶುಭ ತರಲಿದೆ.

ವಿದ್ಯಾರ್ಥಿಗಳಿಗೆ


ಈ ರಾಶಿಯ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಕಾಲದಲ್ಲಿ ಮುಂಬರುವ ದೀಪಾವಳಿಯವರೆಗೆ ಸೂಕ್ತ ಅವಕಾಶವೂ, ತಕ್ಕ ಪ್ರೋತ್ಸಾಹವು ದೊರೆಯುವುದಲ್ಲದೇ, ಆರ್ಥಿಕ ಸಹಾಯವೂ ಲಭ್ಯವಾಗುವುದು. ವಿದೇಶದಲ್ಲಿನ ವಿದ್ಯಾಭ್ಯಾಸಕ್ಕೆ ಪ್ರಯತ್ನಿಸುವವರಿಗೆ ಮಾರ್ಚ ತಿಂಗಳ ನಂತರ ಸೂಕ್ತ ಅವಕಾಶ ಸಿಗುವದು. ಚಿಕ್ಕಮಕ್ಕಳ ವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯತ್ತ ಯಾವ ತೊಂದರೆಯಿಲ್ಲದೇ ಸಾಗುವುದು. ಸ್ತ್ರೀಯರಿಗೆ ವರ್ಷ ಪೂರ್ತಿ ಉತ್ತಮ ವಿದ್ಯಾಭ್ಯಾಸವು ನಡೆಯುತ್ತದೆ. ಸರ್ಕಾರದ ಸಹಾಯವೂ ಅಗತ್ಯ ವಿದ್ಯಾರ್ಥಿಗಳಿಗೆ ಲಭ್ಯವಾಗುತ್ತದೆ. ಏಪ್ರಿಲ್ ಮತ್ತು ಜೂನ್ ತಿಂಗಳಲ್ಲಿ ಪರೀಕ್ಷೆ ನಡೆಯುವ ವಿದ್ಯಾರ್ಥಿಗಳು ಉತ್ತಮ ವರ್ಗದಲ್ಲಿ ಉತ್ತೀರ್ಣ ಹೊಂದುವರು.



(ಚಿತ್ತಾ 3, 4. ಸ್ವಾತಿ 1, 2, 3, 4 ವಿಶಾಖಾ 1, 2, 3ನೇ ಪಾದ)

ಖರ್ಚಿನಲ್ಲಿ ಹಿಡಿತ. ಯಾವುದೇ ಹೊಸ ಉದ್ಯಮದಲ್ಲೂ ಯಶಸ್ಸು. ಉದ್ಯೋಗದಲ್ಲಿ ಆಕಸ್ಮಿಕ ತೊಂದರೆಗಳು. ದೂರ ಪ್ರಯಾಣದ ಹಲವಾರು ಅವಕಾಶಗಳು ಈ ವರ್ಷ ನಿಮಗೆ ಕಾದಿವೆ.

ಉದ್ಯೋಗದಲ್ಲಿನ ಆಕಸ್ಮಿಕ ತೊಂದರೆಗಳಿಗೆ ಜನವರಿಯ ನಂತರ ಪರಿಹಾರ ಸಾಧ್ಯ. ನಿಮ್ಮ ರಾಶಿಗೆ ಏಳರಾಟ ಶನಿಯು ಪ್ರಭಾವವಿದ್ದರೂ ನಿಮ್ಮ ವೈಯಕ್ತಿಕ ಜೀವನ[illegible]ಗೆಯು ಮಾರ್ಚ ನಂತರದಲ್ಲಿ ಗಮನಾರ್ಹ ರೀತಿಯಲ್ಲಿ ಉಂಟಾಗುತ್ತದೆ. ಅಧಿಕಾರಿಗಳಿಗೆ ಪ್ರಶಂಸೆ ಮತ್ತು ಔದ್ಯೋಗಿಕ ತೃಪ್ತಿ ಉಂಟಾಗುತ್ತದೆ. ನಿಮ್ಮ ರಾಶಿಯವ ನಿರುದ್ಯೋಗಿಗಳಿಗೆ ಜನವರಿಯ ನಂತ



ಉದ್ಯೋಗ ಅವಕಾಶ ಮತ್ತು ಸ್ಥಾನಮಾನಗಳನ್ನು ನವಗ್ರಹಗಳು ಸೂಚಿಸುತ್ತವೆ. ನೌಕರರಿಗೆ ಈ ಬಾರಿ ಪ್ರತಿಭೆಗೆ ಪುರಸ್ಕಾರ ಲಭ್ಯ ಮತ್ತು ಯಶಸ್ಸು ಖಚಿತ. ಸ್ವಯಂ ಉದ್ಯೋಗಸ್ಥರಿಗೆ ಆರ್ಥಿಕ ಪ್ರಗತಿಯಿದೆ ವ್ಯಾಪಾರಸ್ಥರಿಗೆ ಮಧ್ಯಮವೆನಿಸಿದರೂ ಒಟ್ಟಾರೆ ಫಲಗಳಲ್ಲಿ ಆರ್ಥಿಕ ಪ್ರಗತಿಯು ಕಂಡು ಬರುತ್ತದೆ.

ಆರ್ಥಿಕ ಸ್ಥಿತಿ

ಆರಂಭ ದಿನಗಳಿಂದಲೂ ನಿಮ್ಮ ರಾಶಿಯವರಿಗೆ ಉತ್ತಮ ಆರ್ಥಿಕ ಸ್ಥಿತಿಯು ಕಂಡುಬರುವುದು. ಜನವರಿಯಲ್ಲಿ ಸ್ವಯ ತ್ರಿಕ ಅಭಿವೃದ್ಧಿಯಾಗಿ ಆಸ್ತಿ, ಮನೆ ಹೊಂದುವ ಯೋಗವೂ ಕಂಡು ಬರುತ್ತದೆ. ಆಕಸ್ಮಿಕ ಧನಲಾಭ. ಅನಾಯಾಸ ಧನಲಾಭವೂ ಉಂಟು. ವ್ಯಾಪಾರೀ ವೃತ್ತಿಯವರಿಗೆ ಹೆಚ್ಚಿನ ಪ್ರಗತಿಯು ಕಂಡು ಬರುತ್ತದೆ. ಖರ್ಚುಗಳಲ್ಲಿ ಬಹಳ ಹಿಡಿತ ಸಾಧಿಸುವಿರಿ. ಯಾವುದೇ ಹೊಸ ಉದ್ಯಮವು ನಿಮಗೆ ಈ ವರ್ಷ ಲಾಭದಾಯಕವಾಗಿರುವುದು.

ಆರೋಗ್ಯ

ಮೊದಲ ಮೂರು ತಿಂಗಳು ಉತ್ತಮ ಆರೋಗ್ಯವೂ ನೆಮ್ಮದಿಯು ಕಂಡು ಬರುವುದು. ನಂತರದ ದಿನಗಳಲ್ಲಿ ಮಧ್ಯಮವಾಗಿ ಕಂಡು ಬಂದರೂ ಆತಂಕಕಾರಿಯಲ್ಲ. ಯಾವುದೇ ಹೊಸ ಮತ್ತು ದೀರ್ಘ ರೋಗಗಳಿಗೆ ಗುರಿಯಾಗಲಾರಿರಿ. ಆದರೆ ದೈನಂದಿನ ಕಾರ್ಯಗತಿಯಲ್ಲಿನ ಬದಲಾವಣೆ ಮತ್ತು ಆಹಾರ ನಿಯಮೋಲ್ಲಂಘನೆಯಿಂದಾಗಿ ಸಣ್ಣ ಪುಟ್ಟ ಅಸ್ವಸ್ಥತೆಗಳು ಕಂಡು ಬಂದರೂ, ನಿಮ್ಮ ಆರೋಗ್ಯವು ಗಣನೀಯ ಪ್ರಮಾಣದಲ್ಲಿ ಬದಲಾವಣೆಯನ್ನೇನೂ ಹೊಂದುವದಿಲ್ಲ. ಮಕ್ಕಳ ಆರೋಗ್ಯವೂ ಉತ್ತಮವಾಗಿರುತ್ತದೆ. ವೃದ್ಧರಿಗೂ ಮತ್ತು ಸ್ತ್ರೀಯರಿಗೂ ಹೆಚ್ಚಿನ ಬದಲಾವಣೆಗಳು ಕಂಡು ಬರುವುದಿಲ್ಲ. ಒಟ್ಟಾರೆ ಮುಂದಿನ ದೀಪಾವಳಿಯವರೆಗೂ ಉತ್ತಮ ಆರೋಗ್ಯ.

ವಿವಾಹ-ದಾಂಪತ್ಯ

ಜನವರಿಯಲ್ಲಿ ಉಂಟಾಗುವ ಗುರು ಗ್ರಹದ ಬದಲಾವಣೆಯು ನಿಮ್ಮ ರಾಶಿಯ ವಧು ಮತ್ತು ವರರಿಗೆ ಸೂಕ್ತ ಸಂಬಂಧಗಳನ್ನು ಕೂಡಿಸುತ್ತದೆ. ವಿವಾಹಿತರಿಗೆ ದಾಂಪತ್ಯ ಸುಖವನ್ನೂ ಈ ಬದಲಾವಣೆಯು ಸೂಚಿಸುತ್ತದೆ. ನಿಮ್ಮ ಹಲವಾರು ವಿವಾಹ ಯತ್ನಗಳು ಆರಂಭದಲ್ಲಿ ವಿಫಲಗೊಂಡರೂ ಮಾರ್ಚಿಯ ನಂತರದ ಆಕಸ್ಮಿಕ ಘಟನೆಗಳೂ ಶುಭ ಫಲವನ್ನೂ ಮತ್ತು ಹರ್ಷವನ್ನೂ ನೀಡುತ್ತವೆ. ಮಹಿಳೆಯರಿಗೆ ಅಧಿಕವಾಗಿ ವಿವಾಹ ಯೋಗವು ಕಂಡು ಬರುವುದು. ಒಟ್ಟಾರೆ ಫಲಗಳಲ್ಲಿ ದೀಪಾವಳಿಯ ನಂತರದ ದಿನಗಳು ವಿವಾಹದಲ್ಲೂ ಮತ್ತು ದಾಂಪತ್ಯದಲ್ಲೂ ಸುಖ, ನೆಮ್ಮದಿಯನ್ನು ಕೊಡುತ್ತದೆ.

> **ಹುಟ್ಟು - ಸ್ವಭಾವ**
>
> ಗಂಧದ ಗಿಡದಾಗ ಗೂಡು ಕಟ್ಟಿದ ಕಾಗೆ
> ಸದ್ಗುಣ ಒಂದೂ ಕಲಿಲಿಲ್ಲ! ಮರದಾಗ
> ಹೊಲಸು ಮಾಡೋದು ಬಿಡಲಿಲ್ಲ!!
>
> —ಶ್ಯಾಮು ಹುದ್ದಾರ

ಪ್ರಯಾಣ

ಈ ನಿಮ್ಮ ರಾಶಿಯವರಿಗೆ ಪ್ರಯಾಣ ಯೋಗವು ವರ್ಷ ಪೂರ್ತಿ ಕಂಡು ಬರುವುದು. ದೂರದ ಊರುಗಳಿಗೆ ಮತ್ತು ಕುಟುಂಬ ಯಾತ್ರೆಯಿಂದ ಬಂಧುಗಳಲ್ಲಿಗೆ ಹಾಗೂ ತೀರ್ಥಕ್ಷೇತ್ರಗಳಿಗೆ ಪಯಣಿಸುವಿರಿ. ಯಾವುದೇ ರೀತಿಯ ತೊಂದರೆಗಳಿಲ್ಲದೇ ಸುಖ ಪ್ರಯಾಣವನ್ನು ಹಾಗೂ ಸಂತೋಷವನ್ನೂ ಈ ದೀಪಾಳಿಯು ಸೂಚಿಸುತ್ತದೆ. ಅಧಿಕಾರಿಗಳಿಗೆ ಔದ್ಯೋಗಿಕ ಜವಾಬ್ದಾರಿಯಿಂದಾಗಿ ಹಲವಾರು ಸಲ ದೂರ ಪ್ರಯಾಣಗಳೂ ಹಾಗೂ ವಿದೇಶ ಯಾನಗಳೂ ಕಂಡುಬರುತ್ತವೆ.

ದೇವತಾರಾಧನೆ


ನಿಮ್ಮ ಯಾವುದೇ ಸಂಕಷ್ಟಗಳಿಗೆ ಕುಲದೇವತಾ ಸೇವೆ ಮತ್ತು ಯಾತ್ರೆಯಿಂದ ಶುಭ ಫಲ ದೊರೆಯುತ್ತದೆ. ಆರೋಗ್ಯಕ್ಕಾಗಿ ಆದಿತ್ಯ ಹೃದಯ ಮತ್ತು ಸೂರ್ಯ ಕವಚ ಸ್ತೋತ್ರ ಪಠನೆ ಸೂಕ್ತ. ಲಕ್ಷ್ಮೀ ಸ್ತೋತ್ರದಿಂದ ಆರ್ಥಿಕ ತೊಂದರೆಗಳಿಗೆ ಪರಿಹಾರ ದೊರೆಯುತ್ತದೆ. ನವಗ್ರಹ ಸ್ತೋತ್ರ ಮತ್ತು ಈಶ್ವರ ಸೇವೆಯಿಂದ ನಿಮ್ಮ ಅಭೀಷ್ಟಗಳು ನೆರವೇರುವುವು. ನೆಮ್ಮದಿಗಾಗಿ ದಿನನಿತ್ಯ ಇಷ್ಟದೇವತಾ ಸೇವೆ ಮತ್ತು ಗುರುಸೇವೆ ಅಗತ್ಯ.

ಮಹಿಳೆಯರಿಗೆ

ಈ ವರ್ಷಪೂರ್ತಿ ಮಹಿಳೆಯರಿಗೆ ಸುಖ ಪ್ರವಾಸ ಮತ್ತು ನೆಮ್ಮದಿಯನ್ನೂ ನವಗ್ರಹಗಳು ಸೂಚಿಸುತ್ತವೆ. ತಮ್ಮ ವೃತ್ತಿಯಲ್ಲಿ ಕೀರ್ತಿಯನ್ನೂ ಯಶಸ್ಸನ್ನೂ ಸಾಧಿಸುವರು. ಮಹಿಳೆಯರಿಗೆ ರಾಜಕೀಯ ಅಭ್ಯುದಯವೂ ಉಂಟಾಗುವುದು. ನಿಮ್ಮ ಹಿತೈಷಿಗಳಿಗೆ ಮತ್ತು ಬಂಧುಗಳಿಗೆ ನಿಮ್ಮಿಂದ ಸಹಾಯ ದೊರೆಯುವದುಂಟು. ಅನವಶ್ಯಕ ವ್ಯವಹಾರಗಳಿಂದ ದೂರವಿರುವುದರಿಂದ ಹಲವಾರು ಸಮಸ್ಯೆಗಳು ಉಂಟಾಗುವದು ತಪ್ಪುತ್ತದೆ. ಈ ವರ್ಷ ಪೂರ್ತಿ ಸ್ತ್ರೀಯರಿಗೆ ಶುಭ ಫಲಗಳೇ ಅಧಿಕ.

ವಿದ್ಯಾರ್ಥಿಗಳಿಗೆ

ವಿದ್ಯಾಭ್ಯಾಸದಲ್ಲಿ ಉಂಟಾಗುತ್ತಿದ್ದ ಅನೇಕ ತೊಡಕುಗಳಿಂದ ನೀವು ಪಾರಾಗುವಿರಿ. ಈ ದೀಪಾವಳಿಯ ನಂತರದ ನಿಮ್ಮ ಶ್ರದ್ಧೆಯು ಉತ್ತಮ ಉತ್ತೀರ್ಣತೆಯನ್ನೂ ಸಾಮಾಜಿಕ ಗೌರವವನ್ನೂ ತರಲಿದೆ. ಹಲವಾರು ನಿಮ್ಮ ಯತ್ನಗಳು ಈ ಹಿಂದೆ ವೈಫಲ್ಯಗೊಂಡಿದ್ದರೂ ಈ ದೀಪಾವಳಿಯ ನಂತರ ಉತ್ತಮ ಫಲಗಳೇ ದೊರಕುತ್ತವೆ. ವಿದೇಶ ವ್ಯಾಸಂಗ ಬಯಸುವವರಿಗೆ ಆಗಸ್ಟ್‌ನಲ್ಲಿ ಅವಕಾಶ ಲಭ್ಯ. ವೈದ್ಯ ಮತ್ತು ತಾಂತ್ರಿಕ ಶಿಕ್ಷಣಾರ್ಥಿಗಳಿಗೆ ಈ ಮುಂಬರುವ ದಿನಗಳು ಹೆಚ್ಚಿನ ವಿದ್ಯಾಪ್ರೋತ್ಸಾಹವನ್ನೂ, ಗಮನಾರ್ಹ ಬೆಳವಣಿಗೆಯನ್ನೂ ಸೂಚಿಸುತ್ತದೆ. ಒಟ್ಟಾರೆ ಎಲ್ಲ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ ವ್ಯಾಸಂಗ ಅಪೇಕ್ಷಿತರಿಗೂ ಉತ್ತಮ ಯಶಸ್ಸನ್ನು ದೀಪಾವಳಿ ನೀಡುತ್ತದೆ.



(ವಿಶಾಖಾ 4, ಅನುರಾಧಾ 1, 2, 3, 4, ಜ್ಯೇಷ್ಠ 1, 2, 3, 4ನೇ ಪಾದ)

ಉದ್ಯೋಗದಲ್ಲಿ ಅನಿರೀಕ್ಷಿತ ಬೆಳವಣಿಗೆಗಳು. ಹೆಚ್ಚಿನ ರಾಜಕೀಯ ಪ್ರತಿಷ್ಠೆ. ನಿರಂತರ ಆರ್ಥಿಕ ಲಾಭ- ವರ್ಷವಿಡೀ ನಿಮಗಾಗಿ ಕಾದಿದೆ.

ನಿಮ್ಮ ಔದ್ಯೋಗಿಕ ಜೀವನದಲ್ಲಿ ಅನಿರೀಕ್ಷಿತ ಘಟನೆಗಳಿಂದ ವೈಯಕ್ತಿಕ ಅಭಿವೃದ್ಧಿಯು ಈ ದೀಪಾವಳಿಯ ನಂತರ ಉಂಟಾಗುತ್ತದೆ. ವ್ಯಾಪಾರಸ್ಥರಿಗೆ ವರ್ಷಪೂರ್ತಿ ಉತ್ತಮ ಔದ್ಯೋಗಿಕ ಲಾಭ ಮತ್ತು ಆರ್ಥಿಕ ಪ್ರಗತಿ ಉಂಟಾಗುತ್ತದೆ. ನಿರುದ್ಯೋಗಿಗಳಿಗೆ ಮೇ ನಂತರ ಖಚಿತವಾಗಿ ಉದ್ಯೋಗ ಲಭ್ಯವಾಗುತ್ತದೆ. ಸರ್ಕಾರೀ ಅಧಿಕಾರಿಗಳಿಗೆ ಬಡ್ತಿಯೋಗ ಇದೆ. ರಾಜಕೀಯ ವ್ಯಕ್ತಿಗಳಿಗೆ ಸಮಾಜದಲ್ಲಿ ಪ್ರತಿಷ್ಠೆ ಮತ್ತು ಗೌರವ ಲಭ್ಯ. ಸ್ತ್ರೀಯರಿಗೆ ಈ ದೀಪಾವಳಿಯ ನಂತರದ ದಿನಗಳು ಔದ್ಯೋಗಿಕವಾಗಿ ಉತ್ತಮ ಫಲ ನೀಡುತ್ತದೆ. ಕೃಷಿ ಅವಲಂಬಿಗಳಿಗೆ ಈ ವರ್ಷ ಪೂರ್ಣ ನಿರಂತರ ಉದ್ಯೋಗ ಹಾಗೂ ಆರ್ಥಿಕ ಲಾಭ ದೊರೆಯುತ್ತದೆ.

ಆರ್ಥಿಕ ಸ್ಥಿತಿ


ಆರಂಭದ ಆರು ತಿಂಗಳುಗಳಿಗಿಂತ ಕೊನೆಯ ಆರು ತಿಂಗಳು ಧನಾರ್ಜನೆಯ ದೃಷ್ಟಿಯಿಂದ ತೃಪ್ತಿದಾಯಕವಾಗಿರುತ್ತದೆ. ವ್ಯಾಪಾರೋದ್ಯಮಗಳಿಂದ ಅಧಿಕ ಆದಾಯವಿದೆ. ಕೃಷಿ ಮತ್ತು ಅಲಂಕಾರ ಸಾಮಗ್ರಿಗಳ ಮಾರಾಟದವರಿಗೆ ವರ್ಷಪೂರ್ಣ ಮಧ್ಯಮ ಫಲವಾದರೂ ಹೆಚ್ಚಿನ ತೊಂದರೆಗಳು ಕಂಡುಬರುವುದಿಲ್ಲ. ಗೃಹ ಮತ್ತು ಆಸ್ತಿಗಳ ಕೊಳ್ಳುವಿಕೆಯೂ ಈ ವರ್ಷ ಬಹಳ ಕಡಿಮೆಯಾಗಿರುತ್ತದೆ. ಈ ದೀಪಾವಳಿಯ ನಂತರ ಅಧಿಕ ಖರ್ಚು ನಿಲ್ಲುವುದು.

ಆರೋಗ್ಯ

ವರ್ಷಾರಂಭದ ಆರು ತಿಂಗ... ಉತ್ತಮ ಆರೋಗ್ಯ ಕಂಡುಬರುತ್ತದೆ. ನಿಮ್ಮ ಮಾನಸಿಕ ಹಾಗೂ ದೈಹಿ... ಆರೋಗ್ಯದತ್ತ ವರ್ಷಾಂತ್ಯದ ಎರಡು ತಿಂಗಳಲ್ಲಿ ಗಮನ ಅಗತ್ಯ. ಚಿಕ್ಕ ಮಕ್ಕಳಿಗೂ ಮತ್ತು ವೃದ್ಧರಿಗೂ ಮುಂಬರುವ ದೀಪಾವಳಿಯವರೆಗೂ ಉತ್ತಮ ಆರೋಗ್ಯ ಕಂಡುಬರುತ್ತದೆ. ಸ್ತ್ರೀಯರಿಗೆ ಮತ್ತು ದೀರ್ಘ ರೋಗಿಗಳಿಗೂ ಉತ್ತಮ ಆರೋಗ್ಯ ಕಂಡುಬರುತ್ತದೆಯಾದರೂ ಆಗಾಗ ಏರಿಳಿತಗಳು ಕಂಡುಬರುತ್ತವೆ. ಇನ್ನು ಯಾವುದೇ ರೀತಿಯ ಆತಂಕಗಳಿಗೆ ನೀವು ಒಳಗಾಗುವುದಿಲ್ಲ. ಔಷಧೋಪಚಾರಗಳಿಂದ ನೀವು ಮಾನಸಿಕ, ದೈಹಿಕ ಆರೋಗ್ಯ ಹೊಂದುವಿರಿ.

ವಿವಾಹ-ದಾಂಪತ್ಯ

ಶನಿಯು ರಾಶಿಯಲ್ಲೇ ಸ್ಥಿತನಾಗಿರುವುದರಿಂದಲೂ ಮತ್ತು ಗುರುವು ಸ್ವ... ಸ್ಥಾನ ಪ್ರವೇಶಿಸುವುದರಿಂದಲೂ ಈ ...



ವಿಳಂಬವಾದರೂ ವಿವಾಹ ಕಾರ್ಯಗಳು ಕೈಗೂಡುತ್ತವೆ. ಕಾರ್ಯಗಳಲ್ಲಿ ನಿಧಾನ ಗತಿಯು ಜನವರಿಯವರೆಗೆ ಮಾತ್ರ. ನಿಮ್ಮ ವೈಯಕ್ತಿಕ ಅಪೇಕ್ಷೆಯಂತೆ ಸೂಕ್ತ ವರ ಮತ್ತು ವಧುಗಳ ಸಮಾಗಮವು ಉಂಟಾಗುವುದು. ವಿವಾಹಿತರಿಗೆ ದಾಂಪತ್ಯ ಸುಖವು ಮಾರ್ಚಿಯ ನಂತರ ಚೆನ್ನಾಗಿ ಕಂಡುಬರುತ್ತದೆ. ದೂರ ಬಂಧು ಗಳಿಂದಲೂ ಮತ್ತು ಸಹೋದ್ಯೋಗಿ ಗಳಿಂದಲೂ ನಿಮ್ಮ ವೈವಾಹಿಕ ಜೀವನ ಸುಖಕರವಾಗಲು ಸಹಕಾರ ಸಿಗುತ್ತದೆ. ಒಟ್ಟಾರೆ ವರ್ಷವಿಡೀ ಜೀವನದಲ್ಲಿ ಸುಖ ಮಯ ದಿನಗಳೇ ಹೆಚ್ಚು.

ಪ್ರಯಾಣ

ದೂರದ ಊರುಗಳಿಗೆ ಈ ಬಾರಿ ಪ್ರಯಾಣಗಳು ಕಮ್ಮಿ. ಅಗತ್ಯ ಮತ್ತು ಅನಿವಾರ್ಯ ಕಾರಣಗಳಿಂದಾಗಿ ನವೆಂಬರ್, ಜನವರಿ, ಮಾರ್ಚಿ ಮತ್ತು ಜೂನ್ ತಿಂಗಳುಗಳಲ್ಲಿ ಪ್ರಯಾಣ ಸೂಚನೆಯು ಕಂಡುಬರುತ್ತದೆ. ಆಗ ನೀವು ಯಾವುದೇ ರೀತಿಯ ತೊಂದರೆಗಳಿಗೆ ಗುರಿಯಾಗುವು ದಿಲ್ಲ. ನಿಮ್ಮ ಕುಟುಂಬ ಮತ್ತು ಮಿತ್ರ ರೊಂದಿಗೆ ಗುರುಸಾನ್ನಿಧ್ಯ ಮತ್ತು ಪ್ರೇಕ್ಷ ಣೀಯ ಸ್ಥಳಗಳ ಭೇಟಿ ಕಂಡುಬರುತ್ತದೆ. ಅಧಿಕಾರಿಗಳಿಗೆ ಮತ್ತು ರಾಜಕೀಯ ವ್ಯಕ್ತಿಗಳಿಗೆ ಪ್ರಯಾಣ ಹಾಗೂ ಭೇಟಿ ಮಹತ್ವ ಪೂರ್ಣದ್ದಾಗಿರುತ್ತದೆ.

ದೇವತಾರಾಧನೆ

ಈ ರಾಶಿಯವರಿಗೆ ದೀಪಾವಳಿಯ ನಂತರ ಸಕಲ ಅಭ್ಯುದಯಕ್ಕೆ ನವಗ್ರಹ ಸೇವೆ ಮತ್ತು ಇಷ್ಟ ದೇವತಾರಾಧನೆಯು ಅಗತ್ಯವಾಗಿರುತ್ತದೆ. ಆರೋಗ್ಯವೃದ್ಧಿಗೆ ಈಶ್ವರನ ಸೇವೆಯು ಮನೋ ನೆಮ್ಮದಿಗೆ ವಿಷ್ಣು ದೇವತಾರಾಧನೆಯು ಅಗತ್ಯ ವಾಗಿರುತ್ತದೆ. ವೈಯಕ್ತಿಕ ಅಭೀಷ್ಟಗಳ ಶೀಘ್ರ ಫಲಪ್ರಾಪ್ತಿಗೆ ಶ್ರೀ ಗಣೇಶ ಆರಾ ಧನೆಯು ಅವಶ್ಯವಾಗಿರುತ್ತದೆ. ಮನೋ ನೆಮ್ಮದಿಗಾಗಿ ದಿನನಿತ್ಯ ಕುಲದೇವತಾ ಸೇವೆಯನ್ನೂ ಮುಂದುವರೆಸುವುದು ಉಕ್ತ.

ಮಹಿಳೆಯರಿಗೆ

ಈ ಬಾರಿ ಮಹಿಳೆಯರಿಗೆ ಮಧ್ಯಮ ಫಲ ಕಂಡುಬರುತ್ತದೆಯಾದರೂ ಯಾವುದೇ ರೀತಿಯ ಗಣನೀಯ ತೊಂದರೆ ಗಳು ಉಂಟಾಗುವುದಿಲ್ಲ. ಬಹುತೇಕ ಪ್ರಾಪ್ತ ವಯಸ್ಕರಿಗೆ ವಿವಾಹ ಯೋಗವು ಕಂಡುಬರುವುದು. ವೈಯಕ್ತಿಕ ಘನತೆ ಮತ್ತು ಗೌರವಗಳು ಹೆಚ್ಚುತ್ತವೆ. ಸಾಮಾ ಜಿಕ ಸ್ಥಾನಮಾನ ಗಳಿಸಿದವರು ತಮ್ಮ ಸ್ಥಾನಗಳನ್ನು ಕಾಯ್ದುಕೊಳ್ಳುವರು. ಆರ್ಥಿಕ ಸ್ಥಿತಿಯು ವ್ಯಾಪಾರೋದ್ಯಮ ಗಳಿಗಿಂತ ಅಧಿಕಾರಸ್ಥ ಮಹಿಳೆಯರಿಗೆ ಅಧಿಕ ಅನುಕೂಲವಾಗಿರುತ್ತದೆ.

ವಿದ್ಯಾಭ್ಯಾಸ :

ಸುಖಸ್ಥಾನಕ್ಕೆ ಗುರುವಿನ ಪ್ರವೇಶವು ನಿಮಗೆ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಅನು ಕೂಲ ನೀಡುತ್ತದೆ. ಆರಂಭದಲ್ಲಿ ಉಂಟಾಗಬಹುದಾದ ಎಲ್ಲ ಸಮಸ್ಯೆಗಳಿಗೂ ಮಾರ್ಚಿಯ ನಂತರ ಪರಿಹಾರ ಲಭ್ಯ ವಾಗುತ್ತದೆ. ಹೆಚ್ಚಿನ ವ್ಯಾಸಂಗಕ್ಕಾಗಿ ದೂರ ದೇಶಕ್ಕೆ ಹೋಗಬಯಸುವವರಿಗೆ ಜೂನ್ ನಂತರ ಅನುಕೂಲವಿದೆ. ಮಕ್ಕ ಳಿಗೂ ಮತ್ತು ಸ್ತ್ರೀಯರಿಗೂ ವರ್ಷ ಪೂರ್ತಿ ಅರ್ಥಾತ್ ಮುಂದಿನ ದೀಪಾವಳಿ ಯವರೆಗೂ ಉತ್ತಮ ಫಲಿತಾಂಶ ದೊರಿ ಯುತ್ತದೆ. ವಿದ್ಯಾ ಪ್ರೋತ್ಸಾಹ ಹಾಗೂ ಆರ್ಥಿಕ ಸಹಾಯಗಳೂ ಮಾರ್ಚಿ ನಂತರ ಲಭ್ಯವಾಗಲಿವೆ.



(ಮೂಲ 1,2,3,4 ಪೂರ್ವಾಷಾಢ 1, 2, 3, 4 ಉತ್ತರಾಷಾಢ 1.)

ದಿನೇ ದಿನೇ ಆರ್ಥಿಕ ಅಭಿವೃದ್ಧಿ. ಹಲ ವಾರು ಶುಭ ಕಾರ್ಯಗಳು. ಪ್ರಯಾಣ ಕ್ಕಾಗಿ ಅಧಿಕ ವೆಚ್ಚ. ಬಡ್ತಿಯಿಂದ ಧನ ಲಾಭ ಇವು ಈ ವರ್ಷ ಈ ರಾಶಿಯ ಶುಭ ಯೋಗಗಳು.

ನಿಮ್ಮ ಔದ್ಯೋಗಿಕ ಜೀವನವು ಆರಂಭ ದಿಂದಲೂ ನೆಮ್ಮದಿ ನೀಡುತ್ತದೆ. ನಿಮ್ಮ ಮಿತ್ರರಿಂದಲೂ ಮತ್ತು ಸಹೋದ್ಯೋಗಿ ಗಳಿಂದಲೂ ನಿರುದ್ಯೋಗ ನಿವೃತ್ತಿಗೆ ಸಹಾಯವಾಗುತ್ತದೆ. ಕೃಷಿ, ಕಾರ್ಮಿಕ ರಿಗೆ ಅನುಕೂಲವುಂಟಾಗಿ ಅಗತ್ಯ ಸಮಯ ದಲ್ಲಿ ಸಹಾಯ ದೊರಕುತ್ತದೆ. ವ್ಯಾಪಾ ರೋದ್ಯಮಿಗಳಿಗೆ ಮಧ್ಯಮ ಫಲವು ದೊರೆ ಯುವುದು. ಅಧಿಕಾರಸ್ಥ ಮಹಿಳೆಯರಿಗೂ ಮತ್ತು ಕಲಾ ಪ್ರತಿಭೆಯುಳ್ಳವರಿಗೂ ಈ ಬಾರಿ ಉತ್ತೇಜಕ ಉದ್ಯೋಗ ಅವಕಾಶ ಕೀರ್ತಿ ಮತ್ತು ಧನಯೋಗ ಲಭ್ಯವಾಗು ತ್ತದೆ.

ಆರ್ಥಿಕ ಸ್ಥಿತಿ

ಧನಸ್ಥಾನದಿಂದ ಗುರುವಿನ ಕುಂಭ ರಾಶಿಯ ಪ್ರವೇಶವು ಮತ್ತು ಧನಾಧಿಪತಿ ಯಾದ ಶನಿಯು ವ್ಯಯಸ್ಥಾನದಲ್ಲಿ ಸ್ಥಿತ ನಾಗಿರುವುದರಿಂದಲೂ ಕೂಡ ನಿಮ್ಮ ವೈಯಕ್ತಿಕ ಆರ್ಥಿಕ ಅಭಿವೃದ್ಧಿಯು ದಿನೇ ದಿನೇ ಅಭಿವೃದ್ಧಿ ಹೊಂದುವುದೆಂದು ಗ್ರಹ ಗಳು ಸೂಚಿಸುತ್ತವೆ. ವ್ಯಾಪಾರ ಮತ್ತು ಕೃಷಿಗಳಿಂದ ಅಧಿಕ ಆದಾಯ ಕಂಡು ಬರುವುದು. ಅಧಿಕಾರಿವರ್ಗದವರಿಗೆ ಜೂನ್ ನಂತರದ ದಿನಗಳಲ್ಲಿ ಬಡ್ತಿ



ಫಿಲ್ಮಿಸ್ಟಾರ್ ಸುವಾಸಿನಿ


ನಗೆ ಲೇಖನ



ಸ್ಪ್ರೆಶೀಕ್ಸ್ ನಳಿನಿ, ಸಿಲ್ಕ್ ಸ್ಮಿತಾ, ಚಾರ್ಲೆಟ್ ಸಂಪಿಸ, ಜಯಮಾಲಿನಿ, ಅನುರಾಧಾ, ಹೆಲ್‌ಆದ ಹೆಲೆನ್–ಮೊದಲಾದವರುಗಳು ಗಾಂಧಿ ತರಗತಿಯಲ್ಲಿ ಕೂತು ಸಿಳ್ಳೆ ಹೊಡೆಯುವ ವರ್ಣಚಿತ್ರಪ್ರೇಮಿಗಳೊ, ರಸಿಕರೊ, ಲಸಿಕೆಯೊ–ಅವರಿಗೆಲ್ಲ ಚಿರ ಅಪರಿಚಿತ. ಕಣ್ಣಲ್ಲಿ ಕಂಡು ಬಾಯಲ್ಲಿ ನೀರು ತರಿಸಿಕೊಳ್ಳುವ ಚಪಲ ಪ್ರಯೋಜನವಷ್ಟೆ ಅಲ್ಲಿನ ಡೊಂಕು ದಾರಿ. ತೊಂಡೆ ತುಟಿ, ಸಂಪಿಗೆ ಮೂಗು, ಮಾವಿನ ಹಣ್ಣಿನ ಹೋಳಿನ ಕೆನ್ನೆ, ಹಾಲಿನ ಕೆನೆಯ ಹಣೆ, ಬಾಳೆದಿಂಡಿನ ತೊಡೆ, ಹಲಸಿನ ತೊಳೆಯಂತೆ ಮಿರಮಿರ ಮಿರುಗುವ ತೋಳುಗಳ ಅಂಗಾಂಗ ಸೂಚಿಯನ್ನು ಜೋರು–ಜೋರಾಗಿ ಬಲ್ಲರು, ಕಾವ್ಯ ಪ್ರೇಮಿಗಳು. ಕವಿತೆಗಳ ಮುಖಾಂತರ. ಕವಿಗಳ ಶಿಫಾರಸಿನ ಆದೇಶದಂತೆ.

ಈ ಕಾವ್ಯ ಪ್ರೇಮಿ, ಚಿತ್ರಪ್ರೇಮಿಗಳ ಸಾಲಿಗೆ ನಾನೂ ಸೇರೋಣವೆಂದರೆ ಚಿತ್ರರಸಿಕರು ದಬ್ಬಿಬಿಡುತಾರೆ. ಟಿಕೇಟು ಸಿಗದಂತೆ ಕ್ಯೂವನ್ನು ಸಂತೆಯಲ್ಲಿ ಮಾರುವ ಕೊಳೆತ ಮಾಲುಗಳಂತೆ ಗಿಜಿಗಿಜಿಯಾಗಿ ಬೂತಿನಬಳಿ ಬಿದ್ದಿರುತ್ತಾರೆ. ಇನ್ನು ಕಾವ್ಯದ ರಸದಲ್ಲಿ ಮೀಯುವುದೊ, ಪದ್ದಿಮಾಡಿಕೊಂಡು ಮೂರ್ಛೆ ಬೀಳುವುದೋ ಏನಾದರೊಂದು ಆಗೋಣವೆಂದರೆ ವಿಮರ್ಶಕವರೇಣ್ಯರು ಅಂಗಿಯ ಕಾಲರ್‌ನ ಹಿಡಿದು ಎಳದಾಡುವಂತೆ ನಿನಗಿದು ಗೊತ್ತಾಗಲ್ಲ, ನಿನಗದು ಗೊತ್ತಾಗಲ್ಲ, ನಿನಗೆ ಓದಕ್ಕೇ ಬರಲ್ಲ, ಅರ್ಥವಾಗಿದೆಯಾ





-ಅಂತೆಲ್ಲ ದಿಕ್ಕುಕೆಡಿಸಿ ಆಸ್ಪತ್ರೆಗೊ, ಪೊಲೀಸ್ ಸ್ಟೇಷನ್‌ಗೊ ದರದರ ಎಳ ಕೊಂಡು ಹೋಗೋತರ ಕೂಗಾಡ್ತಾರೆ. ಕಾವ್ಯಮೀಸೆ, ಕಾವ್ಯಮಾಂಸ, ಕ್ಷೌರಿಸಿ ರಯ್ಯಾ, ಕಾವ್ಯಮೀಮಾಂಸೆಯ ತೋಲ ನಿಕ ಆಚಾರ ವಿಕಿರಣ ಮೊನ್ನೆ ಮೊನ್ನೆ ಕಸಾಪರಿಷೆಯಲ್ಲಿ ಹರಡಿದ್ದು ನಿಮಗೆ ಗೊತ್ತಿಲ್ಲದಿದ್ದರೇ ಪರಮ ಸುಖಿಗಳು

ಸರಿ ,ಕಾವ್ಯಬೇಡ, ಚಲನಚಿತ್ರ ಬೇಡ, ಮನೆಯಲ್ಲೇ ಹಾಯಾಗಿರೋಣ ಅಂದ್ರೆ, ಪದ್ಮಿನಿ ಕೊಡೊ ಕಾಟ ಎಷ್ಟು ? ಶ್ರೀಲಂಕದಲ್ಲಿ ತಮಿಳಿಗನಾಗಿದ್ದಿದ್ದರೆ ಇಷ್ಟೊತ್ತಿಗೆ ಸತ್ತು ಸುಖವಾಗಿರಬಹುದಿಲ್ಲಾ ಅನ್ನು ವಷ್ಟು.

ಸೀಮೆಎಣ್ಣೆ, ಹಾಲು, ನೀರು–ಇಲ್ಲ, ತನ್ನಿ, ತನ್ನಿ, ಇಲ್ಲ ಅಂತ ಗೋಗರೆಯು ತ್ತಾಳೆ. ಜಿಟಜಿಟಿ ಮಳೆಯಂತೆ.


ಹೋ ಗ ಲಿ, ತಾತ್ಕಾಲಿಕವಾಗಿರುವ ಜುಜುಬಿ ಕಚೇರಿಗಾದರೂ ಹಾಳಾಗಿ ಹೋಗಲಿ ಅಂದ್ರೆ, ಅಲ್ಲೊ ಮುಖ್ಯ ಅಧಿಕಾರಿ ಅಲ್ಲಿ ತರಕಾರಿನೇ ಇಲ್ಲ. ಜವಾನ ನಿಂದ ಹಿಡಿದು ಎಲ್ಲಾ ಸೀನಿಯರ್‌ಗಳೇ. ಸಿಹಿನೀರಿನ ಆಫೀಸರ್‌ಗಳೆ. ಬುಡಬುಡಿಕೆ ಶಬ್ದವನ್ನೂ ಮಾಡಲಾಗದ ಜೆಪ್ಪತಕ್ಕಡಿಗಳೇ. ಅಲ್ಲೇ ನನಗೆ ಸಿಕ್ಕವಳು ಸ್ವಾಗತಕಾರಿಣಿ ಪಾಲಿಯಸ್ಟರ್ ಸುವಾಸಿನಿ. ಬಂಧನದ ಸುಹಾಸಿನಿ ಅಲ್ಲ. ಅವಳ ನಿಜ ವಾದ ಹೆಸರು ಮಂಜುಳಾ. ಚಿತ್ರನಟಿಯೊಬ್ಬಳಿಗೆ ಆ ಹೆಸರಿದ್ದದ್ದರಿಂದ ಪಾಲಿಯಸ್ಟರ್ ಸುವಾಸಿನಿಯಾದಳು. ಅವಳು ಚಲನಚಿತ್ರಗಳಲ್ಲಿ ಇರುವಂತೆ ಇಲ್ಲ. ಕಾವ್ಯ ವರ್ಣನೆಯಂತೆಯೂ ಇಲ್ಲ.

ಹೇಗಿದ್ದಾಳು ? ಸೊಂಟದಿಂದ ಕೆಳಕ್ಕೆ ಸೀರೆ ಉಟ್ಟಿದ್ದಾಳಲ್ಲ ಅದನ್ನೂ ಕುಂಬಳಕಾಯಿಗೆ ಸೀರೆ ಉಡಿಸಿದಂತೆ ಇದೆ. ಎಳನೀರಿನ ಎರಡು ಭಾಗಗಳಿಗೆ ಹೊಂದಿಸಿದಂತೆ ಅವಳ ಕುಪ್ಪಸಗಳು. ಕೈಗಳೋ ಮರದ ರಿಪೀಸುಗಳು. ಬೆರಳೋ ದನದ ಜೆರಣಿಯ ಚೂರುಗಳಂತೆ. ಪಾದಗಳು, ಕಮಲಪಾದಗಳಲ್ಲ, ಮರಿಯಾನೆಯ ಕಾಲಿನಂತಹ ಒರಟು. ಇನ್ನು ಮುಖ ನೋಡಬೇಡಿ. ಮನೆ ಕಟ್ಟೋರು ದೃಷ್ಟಿಗಾಗಿ ಇಡುವರಲ್ಲ ಅಂತಹ ಬೆದರೊ ಗೊಂಬೆ ಥರ. ಹಲ್ಲು ಕಾಯಿತುರಿಯೋ ಮಣೆಯಂತೆ. ಬರಿಯ ಕೈಗಿಂತ ಕಬ್ಬಿಣದ ಕಡಗ ಲೇಸೆಂದು ವಾಚಕರಾದ ದೊಡ್ಡವರು ನೀವೇ ತಿಳಿಸಿಲ್ಲವೇ? ಅದರಂತೆ ನಾಯಿ ಬುದ್ಧಿಯೊ, ನರಿತಂತ್ರವೋ ಆ ನಾರಿ ವ್ಯಾಮೋಹಕ್ಕೆ ಬಿದ್ದೆ.

ನಾಚುತ್ತ ಸಡ್ಡೆ ಹುಡುಗರ ಹಾಗೆ ಚೀಟಿ ಬರೆದು ರಾಕೆಟ್ ಬಿಟ್ಟೆ. ಕಿಲಕಿಲ ನಕ್ಕು ಚಟಾರನೆ ದೊಡ್ಡ ಪೆಲಿಕ್ಯಾಪ್ಟರ್ ನಂತಹ ಪುಸ್ತಕದ ಗಾತ್ರದಲ್ಲಿ ಉತ್ತರದ ಚೀಟಿ ಬರೆದು ಕಳಿಸಿದಳು. ಓದುತ್ತೀನೆಯೆ? ಸಾರಾಂಶ ಗ್ರಹಿಸುತ್ತೀನೆಯೆ ? ಮೊಟ್ಟ ಮೊದಲಿಗೆ ಓದುವುದಕ್ಕೆ ಬರುತ್ತದೆಯ ? ಪರರನ್ನು ಆಶ್ರಯಿಸಿದೆ. ಅವರು ಓದಿ ಹೇಳಲಿಲ್ಲ. ತಮ್ಮ ಹೆಸರಿನಲ್ಲಿ ಮುದ್ರಿಸಿಕೊಂಡು ಅಚ್ಚಾದ ಪ್ರತಿಯನ್ನು ನನಗೆ ಕೊಟ್ಟರು. ಅಲ್ಲಿಯವರೆಗೂ ನಾನು ಕಾಯಲಿಲ್ಲವೆನ್ನಿ.

ಬಳುಕಿದ ಅವಳು ತುಳುಕುತ್ತ ಬಂದಳು. ನಾಯಿಮರಿಯೊಂದು ಕಣ್ಣಮುಂದೆಯೇ ದೊಡ್ಡದಾಗಿ ಕ್ರಾಸ್ ಮಾಡಿಸಿಕೊಂಡ ಮೇಲೆ ತುಪತುಪನೆ ಐದಾರು ಮರಿಗಳನ್ನು ಹೆತ್ತ ಹಾಗೆ ಕಾಫಿಗೆ ಹೋದ ನಾವು ಅಂದರೆ ನಾನು ಮತ್ತು ಪಾಲಿಯಸ್ಟರ್ (ಕೆಲವರು ಇಂಗ್ಲಿಷ್ ಬಾರದ ಕಮಂಗಿಗಳು ಪೋಲಿಸೆಂಟರ್ ಎಂದು ಉಚ್ಚರಿಸುವರು) ಸುವಾಸಿನಿ ತಿಂ ಡಿ ಗೋ ದೆ ವು. ಪಾರ್ಕಿನ ಮರೆಯಲ್ಲೆ ಕುಳಿತೆವು.

ತಕ್ಷಣವೇ ಆರೋಪಗಳು ಮನೆಗೆ ತಲುಪಿದವು. ತತ್‌ಕ್ಷಣ ಮನೆಯೇ ಸೆರೆಮನೆಯಾಯಿತು. ಸಾರಿಗೆ ಉಪ್ಪು ಜಾಸ್ತಿಯಾಯಿತು. ಕಾಫಿಗೆ ಕಾರದಪುಡಿ ಹಾಕಿದಳು ಸಕ್ಕರೆಗೆ ಬದಲಾಗಿ. ಬಿಟ್ಟೇನೇ ಸುವಾಸಿನಿಯನ್ನು. ಅವಳ ಜೊತೆ ಜೊ ತೆ ಗೆ ಮೈಸೂರು ಜೂ ನೋಡಿದೆ. ಬಿತ್ತಿದ ತಿಪ್ಪೆಗೊಂಡನ ಹಲ್ಲಿಯ ಬಂಜೆ ದೇವಾಲಯದ ಸುತ್ತಿ ಬಂ ದೆ. ಶ್ರೀ ಲಂ ಕಾ, ಪಂಜಾಬ್‌ಗಿಂತಲೂ ದೊಡ್ಡ ಗಲಾಟೆ ನಾಸಿರುವ ಮನೆಯಲ್ಲಿ ಶುರುವಾಯಿತು.



ಹಾಲು ಹಳ್ಳ


ಕಪ್ಪು ಹುಡುಗಿ
ನೀನು ನಕ್ಕಾಗ
ಒಲುಮೆ ಚಿಮ್ಮಿ
ಎಸ್ಸೆದೆಯೋ
ಹಾಲು ಹಳ್ಳವಾಯಿತು
ನಿನ್ನ ಮಾಯಿಸಿ ಮಾಯಿಸಿ
ಬೆಳ್ಳಗಾಗಿಸಿತು.

—ವನರಾಗಶರ್ಮಾ ವಜ್ರಳ್ಳಿ

ರಾಜಸೇವಾಸಕ್ತನಂತೆ ನನ್ನ ವಿಕ್ಟೋರಿಯಾ ರಾಣಿಯವರಲ್ಲಿ ಬಿನ್ನ ವ ತ್ತ ಳೆ ಕೊಟ್ಟೆ. ಹಾರ–ತುರಾಯಿ ಕೊಟ್ಟೆ. ಮನೆ ಬೆಂಕಿಯ ಬಲೆಯಾಗಿದ್ದದ್ದು ಸು ಖ ಸಂ ಸಾ ರ ಕ್ಕೆ ಹದಿಮೂರನೆ ಸೂತ್ರಕ್ಕೆ ಅಂಟಿಕೊಂಡಿತು.

ಸುವಾಸಿನಿಯ ಬಳಿ ಓಡೋಡಿ ಬಂದೆ. ಅನ್ನ ಹಾಕುವ ತಾಯಿ ಭಿಕ್ಷುಕನನ್ನು ನೋಡುವಂತೆ ನೋಡಿದಳು. ಲ (ನ) ಗ್ನ ಪತ್ರಿಕೆ ಕೊಟ್ಟಳು ಅವಳ ಮೈಯಿಂದ ಒಂದು ಥರಾ ವಾಸನೆ ಹೊರ ಹೊಮ್ಮಿತು. ಯಾವ ವಿಷದ ವಾಯುವೂ ಅದರ ಮುಂದೆ ನಡುಗಬೇಕು ಅಷ್ಟು ಕೆಟ್ಟ ಸುವಾಸನೆ. ಅದಕ್ಕೆ ಅವಳು ಪಾಲಿಯೆಸ್ಟರ ಸುವಾಸಿನಿಯಾದಳು.

ಅವಳ ಸನ್ನಿಧಿಯಲ್ಲಿರುವ ಗಂಡನನ್ನು ಕಾಪಾಡ ಬಲ್ಲವರಾರು ? ನೀವಾದರೂ ಹೋಗಿ ಕಾಪಾಡುವ ಧೈರ್ಯ ವಹಿಸದಿರಿ ಮತ್ತೆ.



...ಗಳಿಂದ ಧನಲಾಭವು ಉಂಟು. ಈ ... ಖರ್ಚು ನಾಲ್ಕು ಆದಾಯ ಐದು ಆಗುತ್ತದೆ.

ಆರೋಗ್ಯ

ನಿಮ್ಮ ನೆಮ್ಮದಿಗೆ ಕಾರಣವಾದ ಮಹತ್ವದ ವಿಷಯವೇ ನಿಮ್ಮ ಆರೋಗ್ಯವಾಗಿರುತ್ತದೆ. ಮಕ್ಕಳಿಗೂ ಮತ್ತು ವೃದ್ಧರಿಗೂ ವರ್ಷಪೂರ್ತಿ ಉತ್ತಮ ಆರೋಗ್ಯ ಕಂಡು ಬರುತ್ತದೆ. ವರ್ಷಾಂತ್ಯದ ಎರಡು ತಿಂಗಳಲ್ಲಿ ಆರೋಗ್ಯದತ್ತ ಹೆಚ್ಚಿನ ಗಮನ ಅಗತ್ಯವಾಗಿರುತ್ತದೆ. ದೀರ್ಘ ರೋಗಿಗಳೂ ಈ ಬಾರಿ ಗುಣಹೊಂದುತ್ತಾರೆ. ಯಾವುದೇ ರೀತಿಯ ಹೊಸ ಕಾಯಿಲೆಗಳಿಗೆ ನೀವು ಗುರಿಯಾಗುವುದಿಲ್ಲ. ಮಾನಸಿಕ ಹಾಗೂ ದೈಹಿಕ ಆರೋಗ್ಯದಲ್ಲಿ ಈ ದೀಪಾವಳಿಯ ನಂತರ ನೀವು ತೃಪ್ತರು.

ವಿವಾಹ-ದಾಂಪತ್ಯ

ಜನವರಿಯ ನಂತರ ಈ ನಿಮ್ಮ ರಾಶಿಯಲ್ಲಿನ ಪ್ರಾಪ್ತ ವಯಸ್ಕರಾದ ಯುವಕ, ಯುವತಿಯರಿಗೆ ಶೀಘ್ರ ವಿವಾಹ ನಿಶ್ಚಯ ಯೋಗವು ಕಂಡು ಬರುವುದು. ದಾಂಪತ್ಯ ಜೀವನದಲ್ಲಿ ಮಧ್ಯಮ ಸುಖವಿದೆ. ನಿಮ್ಮ ಆತ್ಮೀಯರಿಂದ ವಿವಾಹ ಕಾರ್ಯಕ್ಕೆ ನೆರವು ದೊರಕುತ್ತದೆ. ಈ ದೀಪಾವಳಿಯ ನಂತರ ನಿಮ್ಮ ಹಲವಾರು ಶುಭ ಕಾರ್ಯಗಳು ಯಶಸ್ವಿಯಾಗಿ ಕೈಗೂಡುತ್ತವೆ. ಮಹಿಳೆಯರಿಗೆ ಹೆಚ್ಚಿನ ಆದ್ಯತೆಯು ಶುಭಫಲದಲ್ಲಿ ನವಗ್ರಹಗಳು ಸೂಚಿಸುತ್ತವೆ.

ಪ್ರಯಾಣ

ಆಕಸ್ಮಿಕವಾದ ಮಹತ್ವಪೂರ್ಣ ಪ್ರಯಾಣಗಳು ಈ ವರ್ಷ ನಿಮಗೆ ಲಭ್ಯವಾಗುತ್ತವೆ. ನಿಮ್ಮ ನೆಚ್ಚಿನ ಸ್ನೇಹಿತರಿಂದಲೂ ಬಹುದೂರ ಪ್ರಯಾಣದ ಅವಕಾಶಗಳು ನಿಮಗೆ ಲಭ್ಯ. ಸುಖಪ್ರಯಾಣಗಳು ಬಹುತೇಕ ಮಾರ್ಚ್ ಮತ್ತು ಆಗಸ್ಟ್‌ನಲ್ಲಿ ಲಭ್ಯವಾಗುತ್ತವೆ. ತೀರ್ಥಕ್ಷೇತ್ರ ಸಂದರ್ಶನಗಳು ಜುಲೈ ತಿಂಗಳಲ್ಲಿ ಲಭ್ಯ. ಒಟ್ಟಾರೆ ಈ ದೀಪಾವಳಿಯ ನಂತರದ ದಿನಗಳಲ್ಲಿ ಅತಿಹೆಚ್ಚಿನ ವೆಚ್ಚವು ಪ್ರಯಾಣಕ್ಕಾಗಿ ಕಂಡು ಬರುತ್ತದೆ. ನೀವು ಯಾವುದೇ ಆಕಸ್ಮಿಕ ತೊಂದರೆಗಳಿಗೆ ಗುರಿಯಾಗುವುದಿಲ್ಲ.

ದೇವತಾರಾಧನೆ

ಸದಾಕಾಲ ಗುರು, ದೇವತಾರಾಧನೆ ಮತ್ತು ಕುಲದೇವತಾ ಸೇವೆಯಿಂದ ಎಲ್ಲ ಸಂಕಷ್ಟ ಪರಿಹಾರ ಮಾಡಿಕೊಳ್ಳಲು ನಿಮಗೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳಿಗೆ ಗಣೇಶ ಮತ್ತು ದುರ್ಗಾ ಆರಾಧನೆಯು ಸೂಕ್ತ. ಸೂರ್ಯ ನಮಸ್ಕಾರಗಳಿಂದ ಆರೋಗ್ಯ ಮತ್ತು ನೆಮ್ಮದಿಯು ನಿಮಗೆ ದೊರೆಯುತ್ತದೆ. ಲಕ್ಷ್ಮೀ ಅಷ್ಟೋತ್ತರ ಹಾಗೂ ನವಗ್ರಹ ಸ್ತೋತ್ರ ಮತ್ತು ಸೇವೆಯು ನಿಮಗೆ ಅಗತ್ಯವಾಗಿರುತ್ತದೆ.

ಮಹಿಳೆಯರಿಗೆ

ಮಹಿಳಾ ಉದ್ಯಮಿಗಳಿಗೆ ಈ ಬಾರಿ ವಿಶೇಷ ಪ್ರಗತಿ ಮತ್ತು ಸಾಮಾಜಿಕ ಸ್ಥಾನಮಾನ ದೊರೆಯುವುದು. ಕುಟುಂಬ ಸೌಖ್ಯ ಹಾಗೂ ನೆಮ್ಮದಿಯ ಬದುಕು ನಿಮ್ಮದಾಗುತ್ತದೆ. ಯಾವುದೇ ತೊಂದರೆಗಳೂ ತಮ್ಮಷ್ಟಕ್ಕೆ ತಾವೇ ನಿವೃತ್ತಿಯಾಗಿ ನೆಮ್ಮದಿ ದೊರಕುವುದು. ಮಹಿಳಾ ರಾಜಕೀಯ ವ್ಯಕ್ತಿಗಳಿಗೂ ಮತ್ತು ಅಧಿ

ಕಾರಿಗಳಿಗೂ ಸೂಕ್ತ ಗೌರವ ದೊರೆಯು ತ್ತವೆ. ಕಲಾ ಪುರಸ್ಕಾರದಿಂದ ಸಂತಸ. ಸ್ವರ್ಣಾಭರಣಗಳಿಗಾಗಿ ಅಧಿಕ ಖರ್ಚು ಉಂಟಾಗುತ್ತದೆ.

ವಿದ್ಯಾರ್ಥಿಗಳಿಗೆ

ಈ ಬಾರಿಯ ವಿದ್ಯಾಭ್ಯಾಸವು ಗಣನೀಯ ರೀತಿಯಲ್ಲಿ ತೃಪ್ತಿಕರವಾಗಿ ಸಾಗುತ್ತದೆ. ನಿಮ್ಮ ಹೆಚ್ಚಿನ ವಿದ್ಯಾಭ್ಯಾಸ ಅವಕಾಶಗಳು ಈ ವರ್ಷ ಮಧ್ಯ ಕಾಲದಲ್ಲಿ ಲಭ್ಯವಾಗುತ್ತವೆ. ಈ ರಾಶಿಯ ಮಕ್ಕಳಲ್ಲಿ ಅಭ್ಯಾಸದ ಬಗ್ಗೆ ಹೆಚ್ಚಿನ ಶ್ರದ್ಧೆಯು ಕಂಡು ಬರುವುದು. ಹುಡುಗಿಯರು ಉನ್ನತ ಸ್ಥಾನ ಗಳಿಸುವರು. ವಿದ್ಯಾರ್ಥಿಗಳ ಎಲ್ಲ ಪ್ರಯತ್ನಗಳಿಗೆ ತಕ್ಕ ಫಲವು ದೊರೆಯುತ್ತದೆ. ಮಾರ್ಚಿಯಲ್ಲಿ ಅನೇಕ ತಾತ್ಕಾಲಿಕ ತೊಂದರೆಗಳು ಕಂಡು ಬರುವವು. ಶಾಸ್ತ್ರಾಧ್ಯಯನ ಮಾಡುವವರಿಗೆ ತೃಪ್ತಿದಾಯಕ ಫಲ ದೊರೆಯುವವು.

ಮಕರ

(ಉತ್ತರಾಷಾಢ 2, 3, 4, ಶ್ರವಣ 1, 2, 3, 4 ಧನಿಷ್ಠ 1, 2ನೇ ಪಾದ)

ಆದಾಯದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ. ವೈವಾಹಿಕ ಜೀವನದಲ್ಲಿ ನೆಮ್ಮದಿ ನೆಚ್ಚಿನ ಮಿತ್ರರೊಂದಿಗೆ ಮಂಗಳ ಕಾರ್ಯಗಳು- ಇದು ಈ ರಾಶಿಯ ಸಂವತ್ಸರ ಫಲ.

ಕರ್ಮಸ್ಥಾನದಲ್ಲಿನ ಕೇತು ಮತ್ತು ಗುರುವಿನ ಕುಂಭ ಪ್ರವೇಶದ ನಂತರದ ದೃಷ್ಟಿ ಹಾಗೂ ಶನಿಯು ಲಾಭ ಸ್ಥಾನದಲ್ಲಿರುವುದರಿಂದಲೂ ನಿಮಗೆ ಉದ್ಯೋಗದಲ್ಲಿ ಪ್ರಗತಿಯನ್ನು ಮತ್ತು ಶ್ರದ್ಧೆಯನ್ನೂ ಸೂಚಿಸುತ್ತದೆ. ನೀವು ನಿರುದ್ಯೋಗಿಯಾಗಿದ್ದರೂ ನಿಮ್ಮ ಸ್ನೇಹಿತರ ನೆರವಿನಿಂದ ಉದ್ಯೋಗ ಪಡೆಯುವಿರಿ. ಕೃಷಿಕರಿಗೆ ಮತ್ತು ಕಾರ್ಮಿಕ ವರ್ಗದವರಿಗೆ ವಿಶೇಷ ಪ್ರೋತ್ಸಾಹ ದೊರೆಯುತ್ತದೆ. ಉನ್ನತ ಅಧಿಕಾರಿಗಳಿಗೆ ಬಡ್ತಿ ಯೋಗ. ಅವರು ವಿಶೇಷ ಪ್ರಶಂಸೆಗೂ ಪಾತ್ರರಾಗುವರು.



ಹೂ-ವನ

ನಿನ್ನ ಒಂದೊಂದು ಅಂಗ
ಒಂದೊಂದು ಬಗೆ ಹೂವಿನ್ಹಾಂಗ
ನೀನೇ ಇಡಿಯಾಗಿ
ಒಂದು ಹೂ-ವನದ್ಹಾಂಗ
ನಾನೋ ಈ ವನದಾಗ
ಬರೀ ಒಂದು ಪತಂಗ

—ರಾಜೀವ

ವ್ಯಾಪಾರಸ್ಥರಿಗೆ ಈ ವರ್ಷ ಪೂರ್ತಿ ಲಾಭದಾಯಕ. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ವಿಶೇಷ ಪ್ರಗತಿ.

ಆರ್ಥಿಕ ಸ್ಥಿತಿ

ಈ ದೀಪಾವಳಿಯು ನಿಮಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೊಡುವುದಲ್ಲದೇ ನಿಮ್ಮ ಆದಾಯವನ್ನು ಹೆಚ್ಚಿಸುತ್ತದೆ. ವ್ಯಾಪಾರಿಗಳಿಗೆ ಮತ್ತು ಕೃಷಿಕರಿಗೆ ಹೆಚ್ಚಿನ ಆದಾಯ ಲಭ್ಯ. ಅಧಿಕಾರಿಗಳಿಗೆ ಹಾಗೂ ಬುದ್ಧಿ ಜೀವಿಗಳಿಗೆ ಈ ಬಾರಿ ವಿಶೇಷ ಲಾಭ ಯೋಗ ಕಂಡು ಬರುತ್ತದೆ. ವರ್ಷ ಪೂರ್ತಿ ನಿಮಗೆ ಆಗತ್ಯ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಧನ ಸಹಾಯ ಲಭ್ಯವಿರುವುದರಿಂದ ಈ ವರ್ಷವು ನಿಮಗೆ ಅಧಿಕ ನೆಮ್ಮದಿ ದೊರಕುವುದು.

ಆರೋಗ್ಯ

ಈ ವರ್ಷ ಅಷ್ಟಮಾಧಿಪತಿಯಾದ ರವಿಯ ವರ್ತುಲದಲ್ಲಿ ಈ ವರ್ಷದ ದೀಪಾವಳಿಯ ನಂತರದ ದಿನಗಳಲ್ಲಿ ಬಹುತೇಕ ತೃಪ್ತಿಕರ ಆರೋಗ್ಯವನ್ನೂ ಮತ್ತು ನೆಮ್ಮದಿಯನ್ನೂ ಸೂಚಿಸುತ್ತಾನೆ. ಮಕ್ಕಳಿಗೆ ವರ್ಷ ಪೂರ್ಣ ಸುಖ ಆರೋಗ್ಯ ಲಭ್ಯ. ಹಿರಿಯರ ಮತ್ತು ಮಹಿಳೆಯರ ಆರೋಗ್ಯದತ್ತ ವಿಶೇಷ ಗಮನ ಅಗತ್ಯ. ಮಾನಸಿಕ ಆರೋಗ್ಯಕ್ಕಾಗಿ ಸೂರ್ಯ ನಮಸ್ಕಾರವನ್ನು ಮಾಡುವುದು ಸೂಕ್ತ. ಯಾವುದೇ ಹೊಸ ಕಾಯಿಲೆಗಳಿಂದ ನೀವು ಹೊರತು. ಮಾರ್ಚಿಯಲ್ಲಿ ಎಚ್ಚರಿಕೆ ಅನಿವಾರ್ಯ.

ವಿವಾಹ-ದಾಂಪತ್ಯ

ಪ್ರಾಪ್ತ ವಯಸ್ಕರಿಗೆ ವಿವಾಹ ಕಾರ್ಯದಲ್ಲಿನ ತೊಡಕುಗಳು ಜನವರಿಯ ನಂತರ ದೂರವಾಗುತ್ತವೆ. ಬಂಧುಗಳಲ್ಲೂ ಮತ್ತು ಸ್ನೇಹಿತರ ವರ್ಗದಲ್ಲೂ ಈ ರಾಶಿಯ ಮಹಿಳೆಯರಿಗೆ ವಿವಾಹ ಕಾರ್ಯ ಸಿದ್ಧಿಯಾಗುತ್ತದೆ.ಎಲ್ಲಾ ಪ್ರೇಮ ಪ್ರಕರಣಗಳು ಕೂಡ ಶುಭ ವಿವಾಹದಲ್ಲಿ ಪರ್ಯವಸಾನವಾಗುತ್ತವೆ. ದಾಂಪತ್ಯ ಜೀವನದಲ್ಲಿ ನೆಮ್ಮದಿಯನ್ನೂ ತೃಪ್ತಿಯನ್ನೂ ಹೊಂದುವಿರಿ. ನೂತನ ದಂಪತಿಗಳಿಗೆ ಮಾರ್ಚಿಯ ನಂತರ ದಿನಗಳು ವರ್ಷ ಪೂರ್ಣ ಸುಖದಾಯಕವಾಗಿರುತ್ತದೆ. ಒಟ್ಟಾರೆ ದೀಪಾವಳಿಯ ನಂತರ ಬಹುತೇಕ ಪ್ರಾಪ್ತ ವಯಸ್ಕರಿಗೆ ವಿವಾಹ ಯೋಗವಿದೆ.

ಪ್ರಯಾಣ

ದೇಶ ಪರ್ಯಟನ ಮತ್ತು ಸುದೀರ್ಘ ಪ್ರಯಾಣಗಳು ಈ ಬಾರಿಯ ವಿಶೇಷ. ನಿಮ್ಮ ನೆಚ್ಚಿನ ಮಿತ್ರರೊಂದಿಗೆ ಶುಭ ಕಾರ್ಯಗಳು ಮತ್ತು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡುವಿರಿ. ಹೆಚ್ಚಿನ ವೆಚ್ಚಗಳು ಬಹುತೇಕ ಪ್ರಯಾಣಗಳು ಈ ವರ್ಷ ನೇರಿ ಬರುತ್ತದೆ. ಯಾವುದೇ ಭೀತಿಯಿಲ್ಲದಿದ್ದರೂ ಜೂನ್ ಮತ್ತು ನವೆಂಬರ್‌ಗಳಲ್ಲಿ ವಿಶೇಷ ಜಾಗರೂಕತೆಯು ಅನಿವಾರ್ಯವಾಗುತ್ತದೆ. ಪ್ರಯಾಣಗಳಿಂದ ಧನ ಲಾಭವೂ ಸಾಧ್ಯ.

ದೇವತಾರಾಧನೆ

ಸದಾ ಕಾಲ ನಿಮ್ಮ ಕುಲದೇವತಾ ಸೇವೆಯಿಂದ ನಿಮಗೆ ಒಳಿತಾಗುವುದು ನಿಮ್ಮ ಇಷ್ಟ ದೇವತಾ ಸೇವೆ ಮತ್ತು ಶ್ರೀ ಸುಬ್ರಹ್ಮಣ್ಯ ಆರಾಧನೆಯಿಂದ ನಿಮ್ಮ ಸರ್ವ ಸಂಕಷ್ಟ ಪರಿಹಾರವಿದೆ. ಶೀಘ್ರ



ನೀ ಸಕ್ಕರೆ

ನೀ ಪ್ರತಿಸಲ ನಕ್ಕಾಗ
ಮನದ ಮೂಲೆಣದಾಗ
ಮೂಡ್ತಾನ ಹೊಸಾ ರವಿ
ಅದ್ಕ ನನ್ನ ಈಗೀಗ
ಸಂಜೀನ ಆಗವಲ್ದು
ರೆಪ್ಪೀನ ಮುಚ್ಚವಲ್ದು

—ರಾಜೀವ


ಕ್ಷೇತ್ರಗಳಲ್ಲಿನ ಸ್ನಾನ ಮತ್ತು ಕ್ಷೇತ್ರ ವಾಸದಿಂದ ಉತ್ತಮ ಆರೋಗ್ಯ ಮತ್ತು ನೆಮ್ಮದಿ ಲಭ್ಯ ವಿವಾಹ ಕಾರ್ಯಕ್ಕೆ ನವಗ್ರಹ ಸೇವೆಯಿಂದ ಶೀಘ್ರ ಫಲ ಸಿದ್ಧಿಯಾಗುತ್ತದೆ. ರಾಮನಾಮ ಸ್ಮರಣೆಯಿಂದ ಮನೋ ನೆಮ್ಮದಿಯು ಉಂಟಾಗುವುದು. ನಿಮ್ಮಲ್ಲಿ ಈ ವರ್ಷ ಪೂರ್ಣ ಧಾರ್ಮಿಕ ಶ್ರದ್ಧೆ ಹೆಚ್ಚುತ್ತದೆ.

ಮಹಿಳೆಯರಿಗೆ

ಈ ದೀಪಾವಳಿಯ ನಂತರ ಮಹಿಳೆಯರಿಗೆ ಔದ್ಯೋಗಿಕ ಪ್ರಗತಿಯು ಹೆಚ್ಚಾಗಿ ಕಂಡುಬರುತ್ತದೆ. ಉತ್ತಮ ಆರೋಗ್ಯವು ಮಾರ್ಚಿನಂತರ ಲಭ್ಯ. ಧನಾಗಮದಿಂದ ವರ್ಷಪೂರ್ತಿ ಸಂತಸ. ವೈಯಕ್ತಿಕ ಪ್ರಗತಿಗೆ ಪೂರ್ಣ ಅವಕಾಶ ಲಭ್ಯವಿದೆ. ನಿಮ್ಮ ಆತ್ಮೀಯರ ಸಹಾಯದಿಂದ ಆಸ್ತಿ ಹೊಂದುವ ಯೋಗವಿದೆ. ಗೌರವ ಮತ್ತು ಕೀರ್ತಿಯು ಅಧಿಕಾರಸ್ಥ ಮಹಿಳೆಯರಿಗೆ ಲಭ್ಯ. ರಾಜಕೀಯದಿಂದ ದೂರವಿರುವುದು ಉತ್ತಮ. ಬಂಧುಗಳಿಂದ ಅಪಕೀರ್ತಿ ಸಂಭವ. ನಿಮ್ಮ ಮಿತ್ರರಿಂದ ಸಕಾಲದಲ್ಲಿ ಸಹಾಯ ಲಭ್ಯ.

ವಿದ್ಯಾರ್ಥಿಗಳಿಗೆ

ನಿಮ್ಮ ವಿದ್ಯಾಭ್ಯಾಸದಲ್ಲಿ ಅನೇಕ ತೊಂದರೆಗಳು ಕಂಡು ಬಂದರೂ ನಿಶ್ಚಿತ ಗುರಿಯನ್ನು ತಲುಪುವಿರಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಹಿರಿಯರ ಗಮನ ಅಗತ್ಯ. ಮಹಿಳೆಯರ ಗಮನ ಅಗತ್ಯ. ಮಹಿಳೆಯರು ಶ್ರದ್ಧೆಯಿಂದಲೂ ಮತ್ತು ಅತೀ ಶ್ರಮದಿಂದಲೂ ಉತ್ತೀರ್ಣತೆಯನ್ನು ಸಾಧಿಸುವರು. ನಿಮ್ಮ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸದವಕಾಶವು ಪೂರ್ಣವಾಗಿ ಆಗಸ್ಟ್ ತಿಂಗಳಲ್ಲಿ ಮತ್ತು ನಂತರದ ದಿನಗಳಲ್ಲಿ ದೊರೆಯುವುದು. ಯಾವುದೇ ರೀತಿಯ ತೊಂದರೆಯಿಂದಲೂ ವಿದ್ಯಾಪ್ರಗತಿ ಕುಂಠಿತವಾಗುವುದಿಲ್ಲ. ಜನವರಿಯ ನಂತರ ದಿನೇ ದಿನೇ ಶುಭಫಲಗಳೇ ಜಾಸ್ತಿ.



(ಧನಿಷ್ಠಾ 3, 4 ಶತಭಿಷಾ 1,2,3,4 ಪೂರ್ವ ಭಾದ್ರ 1, 2, 3ನೇ ಪಾದ)

ಗುರು ಬಲದಿಂದಾಗಿ ಉದ್ಯೋಗದಲ್ಲಿ ಮುನ್ನಡೆ. ಭಾರೀ ಆರ್ಥಿಕ ಪ್ರಗತಿ, ಮಾನಸಿಕ ಹಾಗೂ ದೈಹಿಕ ಆರೋಗ್ಯ, ಸುಖೀ ದಾಂಪತ್ಯ ಜೀವನದಿಂದ ಸದಾ ಹರ್ಷದ ಹೊನಲು ಹರಿಯುವುದು.

ರಾಶ್ಯಾಧಿಪತಿಯಾದ ಶನಿಯು ಕರ್ಮಸ್ಥಾನದಲ್ಲಿರುವುದು ನಿಮ್ಮ ಔದ್ಯೋಗಿಕ ದೃಷ್ಟಿಯಿಂದ ಅನುಕೂಲ. ನಿಮ್ಮ ರಾಶಿಯಲ್ಲಿ ಬಹುತೇಕ ದಿನಗಳಿರುವ ಗುರುಗ್ರಹದಿಂದ ನಿಮ್ಮ ಗೌರವ, ಘನತೆಯು ಹೆಚ್ಚಲಿದೆ. ಯಾವುದೇ ಹೊಸ ವ್ಯವಹಾರದಲ್ಲೂ ಸಫಲತೆ ಹೊಂದುವಿರಿ. ನಿರುದ್ಯೋಗಿಗಳಿಗೆ ಉದ್ಯೋಗವು ಖಚಿತವಾಗಿ ದೊರಕುವ ನಿರೀಕ್ಷೆಯಿದೆ. ನಿಮ್ಮ ಸ್ನೇಹಿತರ ನೆರವು ಮತ್ತು ಸರ್ಕಾರದ ಸಹಾಯದಿಂದಲೂ ಹೆಚ್ಚಿನ ಪ್ರಗತಿಯು ಕಂಡುಬರುವುದು. ಕೃಷಿಕರಿಗೆ ಮತ್ತು ಸರ್ಕಾರದ ಉನ್ನತ ಅಧಿಕಾರಿಗಳಿಗೆ ಮುನ್ನಡೆ ಸಿಗುವುದು. ನಿರಂತರ ಚಟುವಟಿಕೆ ಹಾಗೂ ಧನಲಾಭ ಯೋಗ ಈ ವರ್ಷದ ವಿಶೇಷ.

ಆರ್ಥಿಕಸ್ಥಿತಿ

ಎಂದಿಗಿಂತಲೂ ಈ ವರ್ಷ ನಿ... ಆರ್ಥಿಕ ಸ್ಥಿತಿಯು ಉತ್ತಮವಾಗಿರುತ್ತದೆ. ಯಾವುದೇ ರೀತಿಯ ಹೊಸ ಕಾರ್ಯಕ್ರಮಗಳು ಹೆಚ್ಚಿನ ಧನಾಗಮನವನ್ನು ನಿಮಗೆ ಕೊಡುತ್ತದೆ. ವ್ಯಾಪಾರಸ್ಥರಿಗೂ ಅಧಿಕಾರಿ ವರ್ಗದವರಿಗೂ ಕೂಡ ವರ್ಷಪೂರ್ತಿ ಅಂಥ ದೊಡ್ಡ ಆರ್ಥಿಕ ಸಮಸ್ಯೆಗಳು ಕಂಡು ಬರುವುದಿಲ್ಲ. ಸರ್ಕಾರಿ ಧನ ಸಹಾಯವೂ ಕೂಡ ಅಪೇಕ್ಷಿತ... ದೊರಕುತ್ತದೆ. ನಿಮ್ಮ ವೈಯಕ್ತಿಕ ವ್ಯಾಪಾರಗಳು ಈ ಸಲ ಉತ್ತಮವಾಗಿರುವುದಾಗಿ ನವಗ್ರಹಗಳೂ ಸೂಚಿಸುತ್ತವೆ. ಆಕಸ್ಮಿಕ ಧನ ಲಾಭದ ಯೋಗವು ಉಂಟು.

ಆರೋಗ್ಯ

ಆರೋಗ್ಯ ಭಾಗ್ಯದಿಂದ ನೀವು ಇನ್ನ... ಸಂತಸ ಪಡಬಹುದು. ನಿಮ್ಮ ವೈಯಕ್ತಿಕ ಬೆಳ-ವಣಿಗೆಯಲ್ಲಿ ಪ್ರಮುಖ ಪಾತ್ರ ವ...ಸುವ ಮಾನಸಿಕ ಹಾಗೂ ದೈಹಿಕ ಆರೋಗ್ಯವು ಈ ದೀಪಾವಳಿಯಿಂದ ಮುಂದಿನ ದೀಪಾವಳಿಯವರೆಗೆ ಚೆನ್ನಾಗಿರುತ್ತದೆ. ಮಕ್ಕಳಿಗೂ ಮತ್ತು ವಯೋವೃದ್ಧರಿಗೂ ಸಹ ಮಾರ್ಚಿ ತಿಂಗಳ ನಂತರ ಆರೋಗ್ಯದಲ್ಲಿ ನೆಮ್ಮದಿ ದೊರಕುವುದು. ಮಹಿಳೆಯರಿಗೂ ಉತ್ತಮ ಆರೋಗ್ಯವು ಜನವರಿಯ ನಂತರ ಕಂಡು ಬರುತ್ತದೆ. ಸೂರ್ಯ ನಮಸ್ಕಾರಗಳೂ ಮತ್ತು ಪ್ರಾಣಾಯಾಮದಿಂದಲೂ ನಿಮ್ಮ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದಾಗಿದೆ.

ವಿವಾಹ-ದಾಂಪತ್ಯ

ನೀವು ಮದುವೆ ಮಾಡಿಕೊಳ್ಳಲು ನಿರ್ಧರಿಸಿದ್ದರೆ ವಿವಾಹ ಜೀವನ ಆರಂಭವು ಮುಂಬರುವ ಫೆಬ್ರವರಿಯಿಂ... ಸಾಧ್ಯವಾಗುತ್ತದೆ. ಯಾವುದೇ ... ತೊಂದರೆಗಳಿಲ್ಲದೇ ನಿಮ್ಮ ಶುಭಕಾರ್ಯ ನೆರವೇರುವುದು. ಗುರುವಿನ ... ಬಲವು ಮುಂದಿನ ಜನವರಿ ... ಬಳಿಕ ಉಂಟಾಗುತ್ತದೆ. ಸುಖದಾಂಪತ್ಯ ಜೀವನದಿಂದ ... ಹಲವಾ...



ಸಮಸ್ಯೆಗಳು ತಂತಾನೇ ಪರಿಹಾರ ಪಡೆಯುತ್ತವೆ. ನಿಮ್ಮ ಮಿತ್ರರು ಹಾಗೂ ಬಂಧು ವಲಯಗಳಲ್ಲೇ ನಿಮ್ಮ ಭಾವೀಪತಿ ಅಥವಾ ಪತ್ನಿಯರ ಬಗ್ಗೆ ಸೂಚನೆ ಬರುತ್ತದೆ. ಪ್ರೇಮಿಗಳಿಗೂ ವಿವಾಹ ಯೋಗ.

ಪ್ರಯಾಣ

ಈ ವರ್ಷ ಪ್ರಯಾಣಕ್ಕಾಗಿ ಬಹುಪಾಲು ಹಣ ಖರ್ಚಾಗುತ್ತದೆ. ವಿಮಾನಯಾನವೂ ಕಂಡುಬರುವುದು ನಿಮ್ಮ ಕುಟುಂಬ ಅಥವಾ ಮಿತ್ರರೊಡನೆ ದೇಶಪರ್ಯಟನೆಯೂ ಸಾಕಷ್ಟು ಕಂಡುಬರುತ್ತದೆ. ಮಹಿಳೆಯರು ಕೂಡ ತಮ್ಮ ಸಾಧನೆಗಾಗಿ ಮತ್ತು ಔದ್ಯೋಗಿಕ ಹಿನ್ನೆಲೆಯಲ್ಲಿ ಬಹುಪ್ರಯಾಣ ಯೋಗವನ್ನು ಹೊಂದುವರು. ವರ್ಷಾಂತ್ಯ ತೀರ್ಥಕ್ಷೇತ್ರ ಸಂದರ್ಶನ ಹಾಗೂ ಕುಲದೇವತಾ ದರ್ಶನಕ್ಕಾಗಿ ಕುಟುಂಬ ಯಾತ್ರೆಯು ಕಂಡುಬರುತ್ತದೆ. ಪ್ರಯಾಣದಲ್ಲಿ ನೀವು ಯಾವ ತೊಂದರೆಗೂ ಗುರಿಯಾಗುವುದಿಲ್ಲ.

ದೇವತಾರಾಧನೆ


ಆಕಸ್ಮಿಕ ಅನಾನುಕೂಲಗಳು ಮನುಷ್ಯನಿಗೆ ಬರದಿರಲಾರದು. ಆದರೆ ಅದಕ್ಕಾಗಿ ಚಿಂತಿಗೆಡುವುದು ವಿವೇಕದ ಲಕ್ಷಣವಲ್ಲ. ನಿಮ್ಮ ಸಂಕಷ್ಟ ಪರಿಹಾರಗಳಿಗೆ ಗಣೇಶ ಆರಾಧನೆಯು ಸೂಕ್ತ. ಕುಲದೇವತಾ ಸೇವೆಯು ಅಗತ್ಯ. ಆಂಜನೇಯ ಸ್ತೋತ್ರ ಪಠಣೆಯಿಂದಲೂ ಕಷ್ಟಗಳು ದೂರಾಗುವವು. ವೈಯಕ್ತಿಕ ಜೀವನದಲ್ಲಿ ಯಶಸ್ಸು ಗಳಿಸಲು ದೇವೀ ಆರಾಧನೆಯು ಅನುಕೂಲ ಕೊಡುವುದು. ನಿಮ್ಮ ಸ್ವಾರ್ಥ ಸಿದ್ಧಿ ಸೂರ್ಯೋಪಾಸನೆಯು ಮತ್ತು ನವಗ್ರಹ ಸ್ತುತಿಯು ಅನುಕೂಲ ಕೊಡುವುದು. ಕ್ಷೇತ್ರವಾಸ ಹಾಗೂ ತೀರ್ಥಸ್ನಾನವು ನಿಮಗೆ ಶ್ರೇಯಸ್ಸು ತರುವುದು.

ಮಹಿಳೆಯರಿಗೆ

ಬಹುತೇಕ ಅದೃಷ್ಟಶಾಲಿಗಳು ಈ ರಾಶಿಯ ಮಹಿಳೆಯರು. ಈ ವರ್ಷ ಅವರು ವೈಯಕ್ತಿಕ ವೃತ್ತಿ ಜೀವನದಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವರು. ಅಲ್ಲದೇ ರಾಜಕೀಯ ಪ್ರಗತಿಯು ಕಂಡುಬರುತ್ತದೆ. ಕಲಾಪ್ರದರ್ಶನ ಅವಕಾಶ ಹಾಗೂ ಹಳೇ ವಿವಾದಗಳ ಇತ್ಯರ್ಥ ಈ ವರ್ಷದ ವಿಶೇಷ. ನಿಮ್ಮ ಹಿತೈಷಿಗಳಿಂದಲೇ ನಿಮಗೆ ತೊಂದರೆಯಾಗುವ ಸಂಭವ ಜಾಸ್ತಿ. ಕಾರಣ ಎಚ್ಚರದಿಂದಿರಿ. ಸ್ತ್ರೀಯರಿಗೆ ಎಲ್ಲಿಲ್ಲದ ಗೌರವ ಸಿಗುವುದು. ಬಹುಪಾಲು ತಾಪತ್ರಯಗಳಿಂದ ಈ ದೀಪಾವಳಿಯ ನಂತರ ನೀವು ವಿಮುಕ್ತರಾಗುವಿರಿ.

ವಿದ್ಯಾರ್ಥಿಗಳಿಗೆ

ಜನವರಿಯ ನಂತರ ರಾಶಿಯಲ್ಲಿ ಗುರುವು ಇರುವುದರಿಂದಲೂ ಮತ್ತು ಚತುರ್ಥ ಸ್ಥಾನಕ್ಕೆ ಶನಿಯ ದೃಷ್ಟಿಯಿರುವುದರಿಂದಲೂ ಈ ವರ್ಷ ತಾಂತ್ರಿಕ ವಿದ್ಯಾರ್ಥಿಗಳಿಗೆ ಉತ್ತಮ ಫಲ ಕಂಡುಬರುತ್ತದೆ. ಮಕ್ಕಳಿಗೆ ಮತ್ತು ಉನ್ನತ ವ್ಯಾಸಂಗದ ಅಪೇಕ್ಷೆಯುಳ್ಳವರಿಗೆ ವರ್ಷಪೂರ್ತಿ ಉತ್ತಮ ಫಲ ದೊರಕುತ್ತದೆ. ವಿದ್ಯಾಭ್ಯಾಸದಲ್ಲಿನ ತೊಡಕುಗಳ ನಿವಾರಣೆಯು ಮಾರ್ಚಿಯ ನಂತರ ಉಂಟಾಗುತ್ತದೆ. ಶ್ರದ್ಧೆ ಮತ್ತು ಆಸಕ್ತಿಯಿಂದ ಪೂರ್ಣ ಫಲ ಪಡೆಯುತ್ತೀರಿ. ವಿದ್ಯೆಯಿಂದ ವಿನಯ, ವಿನಯದಿಂದ ಸ್ಥಾನಮಾನ, ಸ್ಥಾನಮಾನದಿಂದ ಧನಾರ್ಜನೆ ಮತ್ತು ತನ್ಮೂಲಕ ಸುಖ ಪಡೆಯುವುದರಲ್ಲಿ ಸಫಲರಾಗುವಿರಿ.



(ಪೂರ್ವಭಾದ್ರ 1, ಉತ್ತರಭಾದ್ರ 1, 2, 3. 4, ರೇವತಿ 1,2,3.4ನೇ ಪಾದ)

ಉದ್ಯೋಗದಲ್ಲಿ ಉನ್ನತಿ, ಖರ್ಚಿಗಿಂತ ಹೆಚ್ಚಿನ ಆದಾಯ. ದೂರ ಪ್ರಯಾಣದ ಯೋಗ. ದಾಂಪತ್ಯ ಜೀವನದಲ್ಲಿ ಸಂಪೂರ್ಣ ಸುಖಗಳಿಂದಾಗಿ ವರ್ಷವಿಡೀ ಸುಖ ಸಂತೃಪ್ತಿಯ ಅನುಭವವಾಗುವದು.

ಆರಂಭಕಾಲದಲ್ಲಿ ಕರ್ಮಾಧಿಪತಿಯಾದ ಗುರುವು ಲಾಭದಲ್ಲಿರುವುದು ಮತ್ತು ಶನಿಯ ಪ್ರಭಾವವು ನಿಮ್ಮ ಉದ್ಯೋಗ ಜೀವನದಲ್ಲಿ ಹೊಸ ತಿರುವು ನೀಡುತ್ತದೆ. ಯಾವುದೇ ಹೊಸ ವ್ಯವಹಾರವು ಮಾರ್ಚ ನಂತರ ಸೂಕ್ತವಲ್ಲ. ನಿರುದ್ಯೋಗಿಗಳಿಗೆ ಈ ವರ್ಷದ ಆರಂಭದ ನಾಲ್ಕು ತಿಂಗಳಲ್ಲಿ ಉದ್ಯೋಗ ಅವಕಾಶ ಕಂಡು ಬರುತ್ತದೆ. ಸರ್ಕಾರೀ ಅಧಿಕಾರಿಗಳಿಗೆ ಕೀರ್ತಿಯೋಗ. ನಿಮ್ಮ ಯಾವುದೇ ಔದ್ಯೋಗಿಕ ಸಮಸ್ಯೆಗಳು ಮಾರ್ಚಿಯಲ್ಲಿ ಪರಿಹಾರವಾಗುತ್ತವೆ. ಆಕಸ್ಮಿಕ ಘಟನೆಗಳು ನಿಮ್ಮ ಉದ್ಯೋಗದ ಉನ್ನತಿಗೆ ಕಾರಣವಾಗುತ್ತವೆ.

ಆರ್ಥಿಕ ಸ್ಥಿತಿ

ಈ ವರ್ಷ ನಿಮ್ಮ ಆರ್ಥಿಕ ಸ್ಥಿತಿಯು ಆಕಸ್ಮಿಕ ರೀತಿಯಲ್ಲಿ ಉತ್ತಮಗೊಂಡು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸುವಿರಿ. ಯಾವುದೇ ಹೊಸ ವ್ಯವಹಾರಗಳಿಗಿಂತಲೂ ತಮ್ಮ ಉದ್ಯೋಗದಲ್ಲೇ ಧನಾಗಮವು




ದೀಪಾವಳಿಯ ಹಾರ್ದಿಕ ಶುಭಾಶಯಗಳು !

ಶ್ರೀ ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ ನಿ, ಲಕ್ಷ್ಮೇಶ್ವರ-582116

ಜಿಲ್ಲಾ : ಧಾರವಾಡ.

ರ. ನಂ. ಜೆ.ಆರ್.ಬಿ.ಜಿ. : 7612 : 80-81
ದಿ. 13-3-1981.

ಫೋನ್ ನಂ. 96.



ಯೋಜನಾ ರೂಪರೇಷೆಗಳು :

	(ರೂ. ಕೋಟಿ)
ಯೋಜನೆಯ ಒಟ್ಟು ವೆಚ್ಚ	**9.34**
ಅಧಿಕೃತ ಪಾಲುಹಣ	**5.00**
ಕದರುಗಳ ಸಂಖ್ಯೆ	**25,000**

: **ಪ್ರಗತಿಯ ಪಕ್ಷಿನೋಟ** :

1) 31-8-85 ಕ್ಕೆ 31.86 ಲಕ್ಷ ರೂ. ಶೇರ್ ಸಂಗ್ರಹಿಸಲಾಗಿದೆ.
2) ರಾಜ್ಯ ಹಾಗೂ ಕೇಂದ್ರ ಸರಕಾರದವರು ಈ ಯೋಜನೆಗೆ 3,37,80,000 ಲಕ್ಷ ರೂ. ಮಂಜೂರು ಮಾಡಿರುವರು.
3) ಅವಶ್ಯ ಯಂತ್ರೋಪಕರಣಗಳ ಖರೀದಿಗಾಗಿ ಬೇಡಿಕೆ ಸಲ್ಲಿಸಿದ್ದು 75.77 ಲಕ್ಷ ರೂ. ಮುಂಗಡ ಕೊಡಲಾಗಿದೆ.
4) ಮಿಲ್ಲಿನ ಸ್ಥಾಪನೆಗಾಗಿ 102.35 ಎಕರೆ ಜಮೀನನ್ನು ಖರೀದಿಸಲಾಗಿದೆ.
5) 6 ಲಕ್ಷ ರೂ. ವೆಚ್ಚದ ಕಾಟನ್ ಗೋಡೌನ್ ಕಟ್ಟಿಸಲು ಈಗಾಗಲೇ ಟೆಂಡರ್ ಕರೆದಿದ್ದು, ಕಟ್ಟಡ ನಿರ್ಮಾಣ ಕೆಲಸ ಪ್ರಾರಂಭಿಸಲಾಗುತ್ತಿದೆ. ಉಳಿದ ಕಟ್ಟಡಗಳ ಶೀಘ್ರ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
6) ಕಾರ್ಯಕ್ಷೇತ್ರ ಧಾರವಾಡ ಜಿಲ್ಲೆಯಾದ್ಯಂತ ಇದ್ದು ಈಗಾಗಲೇ 2627 ಹತ್ತಿಯ ಬೆಳೆಗಾರರು ಮಿಲ್ಲಿನ ಸದಸ್ಯತ್ವ ಹೊಂದಿದ್ದಾರೆ.
7) 160 ಲಕ್ಷ ರೂ. ವೆಚ್ಚದ ಜಿನ್ನಿಂಗ್ ಹಾಗೂ ಪ್ರೆಸ್ಸಿಂಗ್ ಘಟಕವನ್ನು ಸ್ಥಾಪಿಸಲು ನಿರ್ಣಯಿಸಿ ಮಂಜೂರಿಗಾಗಿ ಕಳಿಸಲಾಗಿದೆ.
8) ಪ್ರಾರಂಭದಿಂದಲೂ ಆಡಿಟ್ ವರ್ಗೀಕರಣ "ಅ" ವರ್ಗದಲ್ಲಿದೆ.

ಹತ್ತಿ ಬೆಳೆಗಾರರ ಸರ್ವತೋಮುಖ ಅಭಿವೃದ್ಧಿಯು ಪ್ರಮುಖ ಗುರಿಯಾಗಿರುವ ಈ ಮಿಲ್ಲಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಶೇರ್ ರೂಪದಲ್ಲಿ ತೊಡಗಿಸಲು ರೈತ ಬಾಂಧವರಿಗೆ ಈ ಮೂಲಕ ವಿನಂತಿಸಲಾಗಿದೆ.

ಎ. ಪ್ರಸನ್ನಕುಮಾರ ಸ್ವಾಮಿ,
ವ್ಯವಸ್ಥಾಪಕ ನಿರ್ದೇಶಕರು.

ಪಿ. ಟಿ. ಹಬೀಬ,
ವಾಯಿಸ್ ಚೇರಮನ್.

ಗೂ. ಫ. ಉಪನಾಳ,
ಚೇರಮನ್.



...ಪು ಬರುವುದು. ವ್ಯಾಪಾರಸ್ಥರಿಗೆ ...ತ್ತು ವೈದ್ಯಕೀಯ ವೃತ್ತಿಯವರಿಗೆ ...ರ್ಷ ಪೂರ್ತಿ ಪೂರ್ಣ ಧನಾಗಮ ...ೋಗವಿದೆ. ಕೃಷಿ ಕಾರ್ಮಿಕರಿಗೆ ಮತ್ತು ...ರ್ಕಾರೀ ಉನ್ನತ ಅಧಿಕಾರಿಗಳಿಗೆ ಜೂನ್ ...ಂತರದ ದಿನಗಳು ಅಧಿಕ ಆದಾಯ ...ಡುತ್ತವೆ. ಒಟ್ಟಾರೆ ಫಲಗಳಲ್ಲಿ ...ದಾಯ ನಾಲ್ಕು. ಖರ್ಚು ಮೂರು.

...ರೋಗ್ಯ

ಅಷ್ಟಮ ಸ್ಥಾನದಲ್ಲಿರುವ ಕೇತುವು ...ಮಗೆ ಕ್ಷಣಿಕ ಅನಾರೋಗ್ಯವನ್ನು ಸೂಚಿ...ದರೂ ಆತಂಕಕಾರಿಯಲ್ಲ. ಆದರೂ ...ಾರ್ಚಿ ನಂತರ ನಿಮಗೆ ಉತ್ತಮ ಪರಿ...ತಿಯು ಉಂಟಾಗುವುದು. ಮಕ್ಕಳಿಗೆ ...ತ್ತು ಸ್ತ್ರೀಯರಿಗೆ ಈ ವರ್ಷ ಪೂರ್ತಿ ...ಖ, ಆರೋಗ್ಯ ಲಭ್ಯವಿದೆ. ದೀರ್ಘ ...ೋಗಿಗಳೂ ಕೂಡ ಮಾರ್ಚಿ ತಿಂಗಳ ...ಂತರ ಪೂರ್ಣ ಗುಣ ಹೊಂದುತ್ತಾರೆ. ...ಾಗ್ಗೆ ನಿಮಗೆ ಕಂಡು ಬರಬಹುದಾದ ...ಷ್ಣ ಪ್ರಕೋಪಗಳಿಗೆ ಸೂಕ್ತ ಔಷ...ೋಪಚಾರಗಳಿಂದ ಗುಣ ಹೊಂದುವಿರಿ. ...ಮ್ಮ ಮಾನಸಿಕ ಹಾಗೂ ದೈಹಿಕ ...ರೋಗ್ಯಕ್ಕಾಗಿ ಸೂರ್ಯೋಪಾಸನೆಯು ...ಗತ್ಯ. ಈ ದೀಪಾವಳಿಯ ನಂತರ ಶೀತ ...ಪ್ರಕೋಪ ಕಡಿಮೆಯಾಗುತ್ತದೆ.

...ವಾಹ-ದಾಂಪತ್ಯ

ಈ ರಾಶಿಯ ಅವಿವಾಹಿತರಿಗೆ ದೀಪಾ...ಳಿಯ ಆರಂಭದಿಂದಲೂ ಗುರು ಬಲವು ...ತ್ತಮವಾಗಿರುತ್ತದೆ. ಆರಂಭದ ನಾಲ್ಕು ...ತಿಂಗಳು ಅತ್ಯುತ್ತಮ ಫಲ ನೀಡುತ್ತದೆ. ...ಪ್ರಾಪ್ತ ವಯಸ್ಕರಾದ ವಧೂ, ವರರು ...ಈ ದೀಪಾವಳಿಯ ನಂತರ ಶೀಘ್ರದಲ್ಲೇ ...ನಿಮ್ಮ ಮನಸ್ಸಿಗೆ ಒಪ್ಪುವ ಪತಿ ಇಲ್ಲವೇ ...ಪತ್ನಿಯರನ್ನು ಹೊಂದುತ್ತಾರೆ. ದಾಂಪತ್ಯ ...ಜೀವನದಲ್ಲಿ ಪೂರ್ಣ ಸುಖ ಮತ್ತು ...ಸೌಖ್ಯ ವೃದ್ಧಿಯಾಗುತ್ತದೆ. ಕನ್ಯೆಯರಿಗೆ ...ತಮ್ಮ ಉದ್ಯೋಗ ಸ್ಥಾನದಲ್ಲೇ ಪ್ರೇಮ ...ವಿವಾಹವು ಲಭ್ಯವಾಗುತ್ತದೆ. ಪ್ರೇಮ ...ವಿವಾಹಗಳೂ ಕೂಡ ಶುಭ ಕಾರ್ಯದಲ್ಲಿ ...ಸರ್ವರ ಪ್ರೋತ್ಸಾಹದೊಂದಿಗೆ ಪರ್ಯವ...ಸಾನವಾಗುತ್ತವೆ.

ಪ್ರಯಾಣ

ಈ ವರ್ಷ ವಿಶೇಷವಾಗಿ ಪ್ರಯಾಣಗಳಿಗಾಗಿ ಬಹುತೇಕ ಹಣ ಖರ್ಚು ಮಾಡುವಿರಿ. ದೂರ ಪ್ರಯಾಣಗಳು ಜನವರಿ ಮತ್ತು ಜೂನ್‌ನಲ್ಲಿ ಉಂಟಾಗುವುವು. ಯಾವುದೇ ರೀತಿಯ ತೊಂದರೆಗೆ ನೀವು ಗುರಿಯಾಗದಿದ್ದರೂ ಸಾಕಷ್ಟು ಎಚ್ಚರಿಕೆ ಅಗತ್ಯವೆನಿಸುತ್ತದೆ. ತೀರ್ಥ ಕ್ಷೇತ್ರ ಸಂದರ್ಶನ ಮತ್ತು ಗುರುದೇವತಾ ಸಾನ್ನಿಧ್ಯ ಸೇವೆಯು ಲಭ್ಯವಾಗುವುದು. ಅಧಿಕಾರಿ ವರ್ಗದವರು ತಮ್ಮ ವೈಯಕ್ತಿಕ ಜವಾಬ್ದಾರಿಯಿಂದ ದೇಶಪರ್ಯಟನ ಮಾಡಲೇಬೇಕಾದ ಅವಕಾಶ ಲಭ್ಯವಾಗುವುದು.

ದೇವತಾರಾಧನೆ

ನಿಮ್ಮ ಕುಲ ದೇವತಾ ಸೇವೆಯನ್ನು ಮತ್ತು ನವಗ್ರಹ ಸ್ತೋತ್ರವನ್ನು ಪಠಿಸುವುದು ಸೂಕ್ತ. ಶ್ರೀ ದತ್ತಾತ್ರೇಯ ಸೇವೆಯಿಂದ ನಿಮ್ಮ ಸಕಲ ಅಭೀಷ್ಟಗಳೂ ನೆರವೇರುವುವು. ಶ್ರೀ ಗಣೇಶನ ಆರಾಧನೆ ಮತ್ತು ದುರ್ಗಾ ಸ್ತೋತ್ರವು ಸಕಲ ಸಂಕಷ್ಟಗಳನ್ನು ಪರಿಹರಿಸಿ ಮನೋ ನೆಮ್ಮದಿಯನ್ನು ನೀಡುವದು. ಸೂರ್ಯ ಕವಚ ಮತ್ತು ಸೂರ್ಯ ನಮಸ್ಕಾರದಿಂದ ಉತ್ತಮ ಆರೋಗ್ಯ ಲಭ್ಯವಾಗುತ್ತದೆ. ಆಗಾಗ್ಗೆ ಈ ವರ್ಷ ಶ್ರೀ ಸುಬ್ರಮಣ್ಯ ಆರಾಧನೆ ಮತ್ತು ಸುಬ್ರಮಣ್ಯ ಕ್ಷೇತ್ರ ಯಾತ್ರೆಯನ್ನು ಮಾಡುವುದು ಸೂಕ್ತ. ಸದಾ ನೆಮ್ಮದಿಗೆ ಶ್ರೀ ರಾಮನಾಮ ಜಪ ಮಾಡುವುದು ಒಳ್ಳೆಯದು.

ಮಹಿಳೆಯರಿಗೆ

ಈ ದೀಪಾವಳಿಯ ನಂತರ ಸ್ತ್ರೀಯರಿಗೆ ಮಹತ್ವದ ಬದಲಾವಣೆಯು ಉತ್ತಮ ರೀತಿಯಲ್ಲಿ ಕಂಡು ಬರುತ್ತದೆ. ಉದ್ಯೋಗಿಕವಾಗಿ ಸ್ತ್ರೀಯರಿಗೆ ಈ ವರ್ಷ ವಿಶೇಷ ಪ್ರಗತಿಯು ಕಂಡು ಬರುವುದು. ಪುತ್ರರಿಂದ ನೆಮ್ಮದಿ ಲಭ್ಯ. ಪ್ರಾಪ್ತ ವಯಸ್ಕರಿಗೆ ಸುಗಮವಾಗಿ ವಿವಾಹ ಕಾರ್ಯ ನಡೆಯುವುದು. ಉತ್ತಮ ಆರೋಗ್ಯದಿಂದ ಸಂತಸ ಉಂಟಾದರೂ, ಮನಸ್ಸಿಗೆ ಆಗಾಗ ಕಿರಿಕಿರಿ ಕಂಡು ಬರುವುದು. ದೂರ ಪ್ರಯಾಣಗಳು ಮತ್ತು ಕುಟುಂಬ ಸೌಖ್ಯವು ಈ ವರ್ಷದ ವಿಶೇಷ. ಗೃಹಿಣಿಯರಿಗೆ ಸುಖ, ತೃಪ್ತಿಯನ್ನು ಈ ದೀಪಾವಳಿಯು ನೀಡುತ್ತದೆ. ಮಹಿಳೆಯರು ಹೆಚ್ಚಿನ ಗೌರವಕ್ಕೆ ಪಾತ್ರರಾಗುವರು.

ವಿದ್ಯಾರ್ಥಿಗಳಿಗೆ

ಆಕಸ್ಮಿಕ ತೊಂದರೆಗಳು ಉಂಟಾದರೂ ವಿದ್ಯಾಭ್ಯಾಸವು ಈ ವರ್ಷ ಪೂರ್ಣಗೊಳ್ಳುವುದು. ನಿಮ್ಮ ವೈಯಕ್ತಿಕ ತೊಂದರೆಗಳು ನಿಮ್ಮ ವಿದ್ಯಾಪ್ರಗತಿಗೆ ಅಡ್ಡಿಯಾಗಲಾರವು. ಹಿರಿಯರ ಸಲಹೆ ಮತ್ತು ಸಹಕಾರ ದೊರೆಯುವುದು. ಉನ್ನತ ವ್ಯಾಸಂಗ ಪರರಿಗೆ ಈ ಜನವರಿಯಲ್ಲಿ ಉಂಟಾಗುವ ಗುರುವಿನ ಬದಲಾವಣೆಯು ಹೆಚ್ಚು ಅನುಕೂಲ ಮಾಡಿಕೊಡುತ್ತದೆ. ಮಕ್ಕಳ ಶ್ರದ್ಧೆ ಮತ್ತು ಆಸಕ್ತಿಯಿಂದಾಗಿ ಈ ವರ್ಷ ವಿದ್ಯಾಭ್ಯಾಸವು ಪೂರ್ಣಗೊಳ್ಳಲಿದೆ. ಗ್ರಹಗಳ ಸ್ಥಿತಿಗಳು ವಿದ್ಯಾಪ್ರಗತಿಗೆ ನಿಮ್ಮ ರಾಶಿಗೆ ಪೂರಕವಾಗಿರುತ್ತದೆ.

ಸೂತ್ರಧಾರ

ದೇವನಾಜ್ಞೆಯ ವಿನಾ, ತೃಣಕೂಡ ಚಲಿಸದೈ
ಗೊಂಬೆಯಾಟಕೆ ಅವನೆ ಸೂತ್ರಧಾರ ;
ನಾನೈದೆನೆಂಬಹಂಕಾರದಲಿ ಮೆರೆವನಿವನು
ಮಾಯೆ ಮುಸುಕಿದ ಮನುಜ ನಂದಕಂದ

—ಜಿ. ಎಚ್. ಕೆ.


ಅಲೌಕಿಕ ಸುಂದರಿ ಬೇಗಂ ಜಹನಾರಾ ಗಂಡಸಾಗಿದ್ದರೆ ಹಿಂದೂಸ್ತಾನದ ಸಾಮ್ರಾಟನೆನಿಸಬಹುದಿತ್ತು. ಆದರೆ ಮೊಗಲ ಮನೆತನದಲ್ಲಿ ಅಧಿಕಾರದ ಆಸೆಗಾಗಿ ನಡೆದು ಹೋದ ಲೆಕ್ಕವಿಲ್ಲದ ಅನ್ಯಾಯದ ಸುಳಿಗೆ ಸಿಕ್ಕವರಲ್ಲಿ ಅವಳೂ ಒಬ್ಬಳು. ಮದುವೆಗಾಗಿ ಹಂಬಲಿಸಿ, ತಂದೆಯ ಸೇವೆಯಲ್ಲಿಯೇ ಆಯುಷ್ಯವನ್ನು ಸವೆಸಿದ ಸುಕುಮಾರಿಯ ಮನಕಲಕುವ ಕಥೆ ಇದು.

ಬೇಗಂ ಜಹನಾರಾ

ಗೋವಿಂದಮೂರ್ತಿ ದೇಸಾಯಿ











ದೀಪಾವಳಿಯ ಸಂತಸದ ಶುಭಾಶಯಗಳು !

ವಿದ್ಯಾರ್ಥಿ, ಪಾಲಕ ಹಾಗೂ ಶಿಕ್ಷಕ ವೃಂದಕ್ಕೆ

ಶ್ರೀ ಪ್ರಕಾಶನ, ಚಂದ್ರಸದನ,

ಸ್ಟೇಷನ್ ರೋಡ, ಧಾರವಾಡ-೫೮೦೦೦೧

ಫೋನ್ : 80545

ಕಲಿಯುವಿಕೆಯ ಮಟ್ಟವನ್ನೇರಿಸುವ ಏಕಮೇವ ದೃಷ್ಟಿಯಿಂದ ಕರ್ನಾಟಕ ಸರಕಾರ ನಿಗದಿಗೊಳಿಸಿದ ಶಾಲಾ ಅಭ್ಯಾಸ ಪತ್ರಿಕೆಗಳಿಗನುಗುಣವಾಗಿ ಪರಿಣಿತ ಶಿಕ್ಷಕರಿಂದ ಸಿದ್ಧಗೊಳಿಸಲ್ಪಟ್ಟ ಇಂಗ್ಲೀಷ್ ಹಾಗೂ ಕನ್ನಡ ಮಾಧ್ಯಮಗಳಲ್ಲಿ ಲಭ್ಯವಿರುವ ಅತ್ಯುಪಯುಕ್ತ ಪ್ರಕಟನೆಗಳು.

1. ಪೂರ್ವ ಪ್ರಾಥಮಿಕ ಹಾಗೂ ಶಿಶು ವಿಹಾರ ವರ್ಗಗಳಿಗಾಗಿ ಚಿತ್ರಮಯ ಪುಸ್ತಕಗಳು : ಬಾಲಬೋಧ, ಸಂಖ್ಯಾ ಪುಸ್ತಕ, ಅಕ್ಷರ ಅಭ್ಯಾಸ, ಕಾಗುಣಿತ ಅಭ್ಯಾಸ, ಕನ್ನಡ ಪ್ರಾರಂಭಿಕ-ಭಾಗ 1 ಹಾಗೂ 2.
2. 1 ಹಾಗೂ 2ನೇ ವರ್ಗಗಳಿಗಾಗಿ :- ಸಮಾಜ ಪರಿಚಯ, ವಿಜ್ಞಾನ ಹಾಗೂ ಗಣಿತ ಪಠ್ಯ ಪುಸ್ತಕಗಳು.
3. 1, 2 ಹಾಗೂ 3ನೇ ವರ್ಗಗಳಿಗಾಗಿ : ಭಾರತ ಬಾಲವಾಚನ, 2 ಹಾಗೂ 3ನೇ ಕಥಾರೂಪ ಇತಿಹಾಸ-ಪಠ್ಯ ಪೂರಕ ಪುಸ್ತಕಗಳು.
4. 3, 4, 5, 6, ಹಾಗೂ 7ನೇ ವರ್ಗಗಳಿಗಾಗಿ: ಕನ್ನಡ, ಇಂಗ್ಲೀಷ್, ಸಮಾಜ ವಿಜ್ಞಾನ ಹಾಗೂ ಗಣಿತ ಅಭ್ಯಾಸ ಪುಸ್ತಕಗಳು (work books)
5. 8, 9 ಹಾಗೂ 10ನೇ ವರ್ಗಗಳಿಗಾಗಿ : ಕನ್ನಡ, ಇಂಗ್ಲೀಷ್, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ, ಅಂಕ ಗಣಿತ, ಭೂಮಿತಿ, ಇತಿಹಾಸ ಹಾಗೂ ಭೂಗೋಲ ಅಭ್ಯಾಸ ಪುಸ್ತಕಗಳು (work books)
6. T.C.H. ಹಾಗೂ B.Ed. ತರಬೇತಿ ವರ್ಗಗಳ ಪಠ್ಯ ಪುಸ್ತಕಗಳು.
7. ತರಗತಿಗಳಿಗನುಗುಣವಾಗಿರುವ ಕನ್ನಡ, ಇಂಗ್ಲೀಷ್ ಹಾಗೂ ಹಿಂದೀ ಕಾಪಿ ಪುಸ್ತಕಗಳು.
8. 4 ರಿಂದ 10ನೇ ವರ್ಗಗಳಿಗಾಗಿ ನಕಾಶ ಪುಸ್ತಕಗಳು.
9. ಕನ್ನಡ ಹಾಗೂ ಇಂಗ್ಲೀಷ್ ಅಕ್ಷರ ಪಟಗಳು.
10. ಕರ್ನಾಟಕ ಭಾರತ ಹಾಗೂ ಪ್ರಪಂಚ ನಕಾಶಗಳು.

ಹೆಚ್ಚಿನ ವಿವರಗಳಿಗಾಗಿ ಮೇಲೆ ಕಾಣಿಸಿದ ವಿಳಾಸಕ್ಕೆ ವ್ಯವಹರಿಸಿರಿ.

ಜಹನಾರಾ ಬೇಗಂ.

ಮೊಗಲ ರಾಜಕುಮಾರಿ.

ಹಿಂದೂಸ್ಥಾನದ ಸಾಮ್ರಾಟ ಶಹಾಜಹಾನರ ಜ್ಯೇಷ್ಠ ಪುತ್ರಿ.

ವಿಶ್ವಮೋಹಕ ತಾಜಮಹಲ ಗೋರಿಯಲ್ಲಿ ಚಿರನಿದ್ರೆಯನ್ನು ಮಾಡುತ್ತಿರುವ ಅಲೌಕಿಕ ಸುಂದರಿ ನೂರಜಹನಳ ಮಗಳು.

ಹೂವಿಗಿಂತಲೂ ಚೆಲುವು. ಮುತ್ತಿನಲ್ಲಿ ಸಂಪಿಗೆಯನ್ನು ಸಿಂಪಡಿಸಿದಂತಹ ದೇಹ ವರ್ಣ. ಮಿಂಚುವ ಕಣ್ಣುಗಳು. ಕರಿ ಮೋಡಿಸಿನ ವಿಪುಲ ಕೇಶರಾಶಿ. ಯೌವನದ ಹೊಂಗನಸುಗಳನ್ನು ಕಾಣುತ್ತಿದ್ದ ತುಂಬು ಜವ್ವನೆ. ಹಸಿರು ಲತೆಯ ತೋಳಿನಲ್ಲಿ ಆಶ್ರಯವಿರದಿದ್ದರೆ, ಮಲ್ಲಿಗೆಗೆಲ್ಲಿಯ ನೆಲೆ? ಅದನ್ನು ಆಘ್ರಾಣಿಸದಿದ್ದರೆ ಅದರ ಸುಗಂಧಕ್ಕೆಲ್ಲಿಯ ಬೆಲೆ?


ಜಹನಾರಾಳದು ಬೆಳದಿಂಗಳನ್ನು ನಾಚಿಸುವಂತಹ ಸೌಂದರ್ಯ! ಆದರೆ ಕಣ್ಣಲ್ಲಿ ಕಣ್ಣಿಟ್ಟು, ಎದೆಗೆ ಎದೆಯನ್ನು ತಾಗಿಸಿ, ಮಧುಘಟವನ್ನು ಹೀರುವ ಗಂಡು ತುಟಿಗಳು ಇರದಿದ್ದರೆ ಹೆಣ್ಣಿನ ಸೌಂದರ್ಯಕ್ಕೆಲ್ಲಿಯ ಸಾರ್ಥಕತೆ!

ಜಹನಾರಳಿಗೆ ಕೇವಲ ತಾಂಬೂಲ ವೆಚ್ಚಕ್ಕೆಂದು ಸುರತ ಕೋಟೆಯ ಉತ್ಪನ್ನವನ್ನೇ ಬಿಟ್ಟುಕೊಟ್ಟಿದ್ದರು ತಂದೆ ಶಹಾಜಹಾನರು. ಬಂಗಾರದ ತೊಟ್ಟಿಲಲ್ಲಿ ಅವಳು ಬೆಳೆದವಳು. ಬೆಳ್ಳಿಯ ನೆಲೆಗಟ್ಟಿನ ಮೇಲೆ ಅಂಬೆಗಾಲಿಟ್ಟು ಅಡಿದವಳು. ದಿವಾನೇ-ಖಾಸನ ಹಿಂದಿದ್ದ ಅಂತಃಪುರದಲ್ಲಿ ಮದಿರೆ-ಮದಿರಾಕ್ಷಿಯರ ಸುಖದಲ್ಲಿ ಲೌಕಿಕವನ್ನೇ ಮರೆಯುತ್ತಿದ್ದ ತಂದೆ ಶಹಾಜಹಾನರು ದಿವಾನೇ-ಆಮ್‌ಕ್ಕೆ ಬಂದು ಕೂಡುವಲ್ಲಿ ವಿಲಂಬವಾಗುತ್ತಿತ್ತು. ದಿವಾನೇಆಮದಲ್ಲಿ ಸರದಾರರು. ಸಚಿವರು ಸಾಮ್ರಾಟರಿಗಾಗಿ ಕಾಯುತ್ತಿದ್ದರು. ಸಾಮ್ರಾಟರನ್ನು ಕೇಳಿ ಹಲವಾರು ರಾಜಕೀಯ ನಿರ್ಣಯಗಳನು ತೆಗೆದುಕೊಳ್ಳಬೇಕಾಗುತ್ತಿತ್ತು. ಆಗ ಬಾದಶಹ ಜಹನಾರಳೇ ಬಂದು ತಂದೆಯಸ್ಥಾನದಲ್ಲಿ ಕುಳಿತು ದೇಶದ ರಾಜಕೀಯ ಆಗುಹೋಗುಗಳನ್ನು ಚರ್ಚಿಸುತ್ತಿದ್ದಳು. ಸಾಮ್ರಾಟರ ಪರವಾಗಿ ಅವಳೇ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಳು. ಅವೇ ಮುಂದೆ ದೇಶದ ಕಾನೂನುಗಳೂ ಆಗುತ್ತಿದ್ದವು. ತಂದೆ ಶಹಾಜಹಾನರು ಮಗಳಿತ್ತ ನಿರ್ಣಯಗಳನ್ನೆಲ್ಲಾ ಅನುಮೋದಿಸುತ್ತಿದ್ದರು. ಅವಳ ನಿಶಿತ ಬುದ್ಧಿಗೆ ತಂದೆಯದೆ ಬೆಂಬಲ. ಮಗಳಿಗೆ ತಮ್ಮ ಉತ್ತರಾಧಿಕಾರಿಯಾದ ಯುವರಾಜ ದಾರಾ ಸಿಕೋಹನಿಗಿಂತಲೂ ಹೆಚ್ಚಿನ ಭಾರವನ್ನು ಶಹಾಜಹಾನರು ಒಪ್ಪಿಸಿಕೊಟ್ಟಿದ್ದರು. ದಾರಾ ಸಿಕೋಹ ಧರ್ಮಭೀರು, ತಾನಾಯಿತು ತನ್ನ ಕುರಾಣ ಪಠನವಾಯಿತು. ಸಜ್ಜನ-ಶಾಂತ-ಸುಸ್ವಭಾವಿ ದಾರಾ! ಜಹನಾರಾ ಮಗಳಾಗದೇ ಮಗನಾಗಿದ್ದರೆ ಔರಂಗಜೇಬನ ಸ್ಥಾನದಲ್ಲಿ ಅವಳೆ ಸಾಮ್ರಾಟಳಾಗಿ ಹಿಂದೂಸ್ಥಾನದ ಇತಿಹಾಸವನ್ನೇ ಪರಿವರ್ತಿಸುತ್ತಿದ್ದಳೇನೋ!. ಹಿಂದೂಸ್ಥಾನದ ಮೇಲೆ ಅವಳಿಗಿದ್ದಷ್ಟು ಅಭಿಮಾನ ಬೇರಾರಿಗೂ ಇರಲಿಲ್ಲ.

ಜಹನಾರಾ ಸೂರ್ಯಚಂದ್ರರನ್ನು ಬಯಸಿದ್ದರೂ ಆ ಅರಮನೆ ಕೊಡುವಂತಿತ್ತು. ಆದರೆ ಅವಳ ದೇಹಕ್ಕೆ ಬೇಕಿದ್ದ ಅಂತಃಪುರದ ರಾತ್ರಿಯ ಸುಖವನ್ನು ಕೊಡುವ ಸಾಮರ್ಥ್ಯ ಮಾತ್ರ ಅದಕ್ಕಿರಲಿಲ್ಲ. ಅಸಂಖ್ಯ ರಾಜಕುಮಾರಿಯರು, ಅವಿವಾಹಿತರಾಗಿ ರತಿಸುಖದಿಂದ ವಂಚಿತರಾಗಿ ಬಿಟ್ಟ ನಿಟ್ಟುಸಿರುಗಳನ್ನು ಕೇಳಿ ಕೇಳಿ ಆ ಅಂತಃಪುರದ ಭಿತ್ತಿಗಳೆಲ್ಲಾ ಕಿವುಡಾಗಿದ್ದವು. ಅದು ಅಕಬರನ ಕಾಲದಿಂದಲೂ ರಾಜಕುಮಾರಿಯರ ಗೋಳನ್ನು ನೋಡುತ್ತ ಬಂದಿದೆ.

ಆಗ್ರಾ ಕೋಟೆಯ ಝನಾನಾದ ಅಂಗುರಿಬಾಗದಲ್ಲಿ ಜಹನಾರಾ ಹೂವುಗಳ ಚೆಲುವನ್ನು ನೋಡುತ್ತ ಅಲೆಯುತ್ತಿದ್ದಳು. ಅವಳ ಎದೆಯ ಮೇಲಿನ ದುಕೂಲವು ಗಾಳಿಗೆ ಹಾರಿ ಗುಲಾಬಿ ಟೊಂಗೆಯೊಂದಕ್ಕೆ ಸಿಕ್ಕಿಕೊಂಡಿತು. ಅದನ್ನು ಬಿಡಿಸಿಕೊಳ್ಳಬೇಕೆಂದರೆ ದುಕೂಲವೇ ಹರಿಯಿತು. ಆ ಪುಷ್ಪೋದ್ಯಾನದ ಹೂವುಗಳ ಮೇಲೆ ಹಾಸಿ ಬೀಸುತ್ತಿದ್ದ ಸುಗಂಧದ ಗಾಳಿ ಅವುಲನ್ನು ತರಿಸುವಂತಿತ್ತು. ಆ ಜನಾನಿನಲ್ಲಿ ಜಹನಾರಾ ಉರುಳುತ್ತಿರುವ ಕ್ಷಣಗಳನ್ನು ಹಿಡಿದಿಟ್ಟುಕೊಳ್ಳಬೇಕೆಂದು ಬಯಸುತ್ತಿದ್ದಳು. ಕಾಲವು ಉರುಳುವದು ಅವಳಿಗೆ ಬೇಕಿರಲಿಲ್ಲ. ಕಳೆದುಹೋಗುತ್ತಿರುವ ಕ್ಷಣಗಳು ತರುತ್ತಿರುವದಾದರೂ ಏನನ್ನು? ಸಂಜೆಯನ್ನಲ್ಲವೇ? ಸಂಜೆಗೆ ಹತ್ತಿ ಬರುವದೇ ಅಂಧಃಕಾರ. ಅಂಧಃಕಾರದಲ್ಲಿ ತುಂಬಿರುವದೆಲ್ಲಾ ನಿರ್ಜೀವತೆ, ನಿಶ್ಚೇಷ್ಟತೆ. ಅದೇ ಅವಳಿಗೆ ಬೇಕಿರಲಿಲ್ಲ.

ಅದೊಂದು ದಿವಸ ಜಹನಾರಾ ನೂರ ಮಹಲಿನ ಮಲ್ಲಿಗೆಯ ಮಂಟಪದಲ್ಲಿ ಕುಳಿತಿದ್ದಳು. ಎದುರಿಗೆ ಯಮುನೆ ಹರಿಯುತ್ತಿದ್ದಳು. ಹೊರಗೆ ಮಳೆ ಬರುತ್ತಿತ್ತು. ಜಹನಾರಳಿಗೆ ಅಂತಃಪುರದಲ್ಲಿ ಏನೋ ಸುಳಿದಂತಾಯಿತು. ಅದು ಅವಳದೇ ನಿಟ್ಟುಸಿರೋ ಅಥವಾ ಗಾಳಿಯೋ ಅವಳಿಗೆ ತಿಳಿಯಲಿಲ್ಲ. ಎದುರಿಗಿದ್ದ ಯಮುನೆ ಆರ್ಭಟವನ್ನು ಮಾಡುತ್ತಲೇ ಇದ್ದಳು. ಜಹನಾರಳಿಗೆ ಎದೆಯ ಮೇಲಿದ್ದ ದುಕೂಲವು ಮೆಲ್ಲನೆ ಜಾರಿ ಬಿದ್ದದ್ದೇ ತಿಳಿಯಲಿಲ್ಲ. ಯಾರಾದರೂ ಬಂದರೇನೋ ಎಂದು ಅಂಜಿ ದುಕೂಲವನ್ನು ಎದೆಯ ಮೇಲೆ ಸರಿಸಿಕೊಂಡಳು. ಆಗಲೇ ಅವಳಿಗೆ ಅವಳ ಪುಷ್ಟವಾದ ಎದೆಗಳ ಅರಿವಾಯಿತು. ಅದನ್ನು ಪ್ರೀತಿಯಿಂದ ಸವರುವ ಕೈಗಳು ಅವಳಿಗೆ ಬೇಕೆನಿಸಿತು ಈಗವಳ ಮನಸ್ಸಿನಲ್ಲಿ ಬಲಾರಾಜಮನೆತನದ ಸರದಾರ ನಜಾಬತಖಾನನ ನೆನಪಾಯಿತು. ಅವಳ ಕುಚಗಳನ್ನು ಸ್ಪರ್ಶಿಸುವ ಕೈಗಳು ಯಾವದಾದರೂ



"ನಿಮ್ಮ ಮನೆಯವರು ಹೆರಿಗೆಗೆ ಮುಂಚೆ ಥ್ರೀ-ಡಿ ಸಿನೆಮಾ ನೋಡಿದ್ದು ಎಫೆಕ್ಟಾಗಿದೆ, 'ತ್ರಿವಳಿ' ಕಾಂಗ್ರ್ಯಾಜ್ಯುಲೇಶನ್."

ದ್ದರೆ ಅವು ಅವನವೇ ಎಂದು ಅವಳಿಗೆ ನಿಸಿತು. ತನ್ನ ಗುಲಾಬಿ ಗಲ್ಲಗಳ ಮೇಲೆ ಯಾಡಿಸಿಕೊಂಡಳು.

ತಂದೆ ದಿವಾನೆ-ಆಮ್‌ಗೆ ಬರವಾಗ ಜಹ ನಳೇ ಬಂದು ಪರದೆಯ ಹಿಂದೆ ಕುಳಿತು ತ್ತಾರು ಸಲ ನಜಾಬತಖಾನನೊಡನೆ ಾತನಾಡಿದ್ದಳು. ನಜಾಬತಖಾನ ಈಗ ಾಮ್ರಾಟ ಶಹಾಜಹಾನರ ಸೇವೆಯಲ್ಲಿ ದ್ದನು. ಕಳೆದುಹೋಗಿದ್ದ ಅವನ ರಾಜ್ಯವು ಮರಳಿ ಬರಬೇಕಿತ್ತು. ಈಗವನು ಮೊದಲ ೇನೆಯ ಸೇನಾಪತಿ. ಶಹಾಜಹಾನರ ಶ್ವಾಸಿ.



ಜಹನಾರಾ ಅದೊಂದು ದಿವಸ ದಿಲ್ಲಿಯ ಾಮಾ ಮಸೀದೆಗೆ ಹೋಗಿ ಬಂದಳು. ಲ್ಲಿ ಪ್ರಾರ್ಥನೆ ಮಾಡುತ್ತಿರುವಾಗ ಅವ ಗೆ ನಜಾಬತಖಾನನ ನೆನಪೇ ಆಯಿತು. ನಸ್ಸಿನ ಏಕಾಗ್ರತೆ ಹೊಯ್ದಾಡಿತು. ಾರ್ಥನೆಯನ್ನು ಮಧ್ಯದಲ್ಲಿ ನಿಲ್ಲಿಸಿ ಅಂತಃಪುರಕ್ಕೆ ಧಾವಿಸಿ ಬಂದಳು. ಬರು ಾಗ ಅವಸರದಲ್ಲಿ ಫಕೀರರಿಗೆ ಬಂಗಾರದ ನಾಣ್ಯಗಳನ್ನು ಹಾಕಿದಳು. ನಡುಗುವ ಹಸ್ತಗಳಿಂದ ಬೀಳುತ್ತಿದ್ದ ಅವು ಭಿಕ್ಷಾ ಪಾತ್ರೆಯಲ್ಲಿ ಬೀಳದೇ ನೆಲದ ಮೇಲಿನ ಹುಡಿಯಲ್ಲಿ ಬಿದ್ದವು. "ಇದೇನು ಅಲ್ಲಾ ನಿಗೆ ನನ್ನ ದಾನದ ಪುಣ್ಯವನ್ನು ಕೊಡುವ ಮನಸ್ಸಿಲ್ಲವೇ ?" ಎಂದೆನ್ನುತ್ತ ಮೇಲೆದ್ದು ನೋಡಿದಳು. ಮನಸ್ಸೆಲ್ಲವೂ ಈಗ ನಜಾಬತ ಖಾನನತ್ತೇ ಹರಿಯುತ್ತಿತ್ತು. ಅರಮನೆಗೆ ಬಂದವಳೇ ತಲೆದಿಂಬುಗಳನ್ನು ಅಪ್ಪಿ ಕೊಂಡು ಮಂಚದ ತುಂಬಾ ಹೊರಳಾಡಿ ದಳು. ಅಂತಃಪುರದ ತುಂಬಾ ದೀಪಗಳಿ ದ್ದರೂ ಅವಳಿಗೆ ಆಗ ಅಂಧಃಕಾರವೇ ಕಾಣ ಹತ್ತಿತು.

....ಇದೇ ನೆನಪನ್ನು ಮಾಡಿಕೊಳ್ಳುತ್ತ ಅಂತಃಪುರದ ಮುಂದಿದ್ದ ಯಮುನೆ ಯನ್ನು ನೋಡಿಯೇ ನೋಡಿದಳು. ಅಷ್ಟ ರಲ್ಲಿ ಹೊರಗೆ ಅಶ್ವದ ಖುರಪುಟಗಳ ಧ್ವನಿ ಕೇಳಿಬಂದಿತು. ಮುಂದೆ ಯಾರೋ ನಡೆದು ತನ್ನ ಅಂತಃಪುರದತ್ತ ಬರುವಂತೆ ಕೇಳಿಸ ಹತ್ತಿತು. ಖಂಡಿತವಾಗಿ ಅವು ಗಂಡಸಿನ ಹೆಜ್ಜೆಗಳೇ ಎಂದು ಲೆಕ್ಕ ಹಾಕಿದಳು. ನಜಾಬತಖಾನನೇ ಬರುತ್ತಿರುವನೇನೋ ಎಂದು ಮನಸ್ಸಿನಲ್ಲಿ ಅಂದುಕೊಂಡಳು. ಮೊಗಲ ಅಂತಃಪುರಕ್ಕೆ ಅವನಿಗೆಲ್ಲಿಯ ಪ್ರವೇಶ ಎಂದು ಮತ್ತೆ ತಾನೇ ಮನಸ್ಸನ್ನು ಶಾಂತಗೊಳಿಸಿಕೊಂಡಳು.


ಬಂದವನು ಸಿಂಹಾಸನದ ಉತ್ತರಾಧಿ ಕಾರಿ ದಾರಾ ಶಿಕೋವ ಆಗಿದ್ದನು. ಮಳೆ ಯಲ್ಲಿ ತೊಯ್ಸಿಕೊಂಡು ಬಂದಿದ್ದನು. ಅವ ನನ್ನು ನೋಡಿ ಅವಳಿಗೆ ಏನನಿಸಿತೋ ಏನೋ! "ದಾರಾ, ನಾನು ನಜಾಬತ ಖಾನರ ಕೈ ಹಿಡಿಯಬಹುದೇ ? ಹೆಣ್ಣಿನ ಸುಖದಲ್ಲಿಯೇ ಲೋಲುಪರಾಗಿರುವ ಸಾಮ್ರಾಟರಿಗೆ ಅವರ ಮಗಳೇ ಆ ಸುಖ ವನ್ನು ಬಯಸಿದರೆ, ಅವರು ಈ ವಿವಾಹಕ್ಕೆ ಅನುಮತಿಯನ್ನು ಕೊಡಬಹುದಲ್ಲ....?" ಎಂದಳು. ಈಗವಳ ಎದುರಿನಲ್ಲಿ ಬಲಾಢ್ಯ ನಾದ ಸರದಾರ ನಜಾಬತಖಾನನೇ ಬಂದು ನಿಂತಂತೆ ಅನಿಸಿತು. ಅವನ ಎದೆಯ ಮೇಲೆ ಜಿರಳನ್ನಾಡಿಸಿ ಅವನ ಎದೆಗೆ ತನ್ನ ತಲೆ ಯನ್ನು ಹಚ್ಚುವ ಆಶೆಯಾಯಿತು. "ನನ್ನ ಮನಸ್ಸಿಗೆ ಬಂದ, ರಾಜಕುಲಕ್ಕೆ ಯೋಗ್ಯ ನಾದ, ಸರದಾರನೊಬ್ಬನನ್ನು ವಿವಾಹ ವಾದರೆ ಬೇಗಂ ಜಹನಾರಾಳ ಸುತ್ತಲೂ ಹಬ್ಬಿರುವ ಅವಳ ಕೀರ್ತಿಗೆ ಕಲಂಕವು ಬರಲಾರದಲ್ಲವೇ.." ಎಂದೆನ್ನುತ್ತ, ದಾರಾನ ಮುಖವನ್ನೇ ನೋಡಿದಳು.

ಜಹನಾರಳ ಮಾತನ್ನು ಕೇಳಿ ದಾರಾ ನಕ್ಕನು. "ಹಾಗಿದ್ದರೆ ...ಇಂದೇ ಸಂಜೆಗೆ ನಾನು ಶಹಾಜಹಾನರೊಂದಿಗೆ ಮಾತ ನಾಡಿ ಖಾನನಿಗೆ ನಿನ್ನನ್ನು ಮದುವೆ ಮಾಡಿ ಕೊಡುವ ಬಗ್ಗೆ ಹೇಳುತ್ತೇನೆ...." ಎಂದನು.

ರಾಜಕುಮಾರಿಯ ಬಯಕೆಗಳ ಅರ್ಥ ದಾರಾನಿಗೆ ಆಗುತ್ತಿತ್ತು. ಇಷ್ಟರಲ್ಲಿಯೇ ಅವನು ಮೂರು ಮದುವೆಗಳನ್ನು ಮಾಡಿ ಕೊಂಡಿದ್ದನು. ಹೆಣ್ಣಿನ ಬಯಕೆಯ ಅರ್ಥ ಅವನಿಗಾಗಿತ್ತು.

ಜಹನಾರಾ ಅದೆಂದೂ ತನ್ನ ಮನಸ್ಸಿ ನಲ್ಲಿ ನಡೆದ ತುಮುಲವನ್ನು ಇಷ್ಟು ಕಾಲ ಹೊರಗೆ ಬಿಟ್ಟುಕೊಟ್ಟಿರಲಿಲ್ಲ. ಇಂದೇಕೋ ಅವಳಿಗದನ್ನು ಅದುಮಿ ಇಟ್ಟುಕೊಳ್ಳುವ ದಾಗಲಿಲ್ಲ. ಇಲ್ಲಿಯವರೆಗೆ ತನ್ನ ಹೃದಯ ದಲ್ಲಿಯೇ ಪೋಷಿಸಿಕೊಂಡು ಬಂದಿದ್ದ ಆ ಗಿಳಿಯನ್ನು ಅವಳೀಗ ಹಾರಿಸಿಬಿಟ್ಟಿದ್ದಳು. ಮೊಗಲ ಮನೆತನದ ಗೌರವವು ಇದರಿಂದ ಎಳ್ಳಷ್ಟೂ ತಗ್ಗಲಿಕ್ಕಿಲ್ಲವೆಂದು ಒಂದೊಂದು ಸಲ ಅನಿಸಿದರೂ, ಅವಳ ಮನಸ್ಸು ಮತ್ತೆ ಗಾಳಿಗೆ ಸಿಲುಕಿದ ದುಕೂಲದಂತಾಯಿತು. ಇಂದು ಮಾತ್ರ ಸಂಜೆ ಬರುವದನ್ನೇ ಕಾಯಹತ್ತಿದ್ದಳು. ಸಂಜೆಗೆ ಹತ್ತಿ ಅಂಧಃಕಾರವು ಬರುವುದರಿಂದ ಸಂಜೆ ಅವ ಳಿಗೆ ಪ್ರಿಯವಾಗಿತ್ತು. ಆದರೆ ಅವಳಿಗೆ ಈಗ ಅದು ಯಾವಾಗ ಬಂದೀತು ಅನ್ನುವ ತವಕ. ಆ ಬರಲಿರುವ ಸಂಜೆಯ ಕ್ಷಣ ತನಗೆ ಆನಂದವನ್ನೀಯುವದೋ ಅಥವಾ ದುಃಖವನ್ನು ತರುವದೋ ಎಂಬುದೇ ಅವಳಿಗೆ ಉಳಿಯಲಿಲ್ಲ.

ಜಹನಾರಾ ತನ್ನ ಕೋಮಲ ಕೈಗಳೆರ ಡನ್ನೂ ಸ್ವರ್ಗದತ್ತ ಎತ್ತಿದಳು. "ಓ....!



ನನಗೂ ಮತ್ತು ಸ್ವರ್ಗಕ್ಕೂ ಅದೆಷ್ಟು ಅಂತರವಿದೆ! ಮಧ್ಯದಲ್ಲಿ ಇರುವದೆಲ್ಲಾ ಶೂನ್ಯ...ನನಗೆ ಸಂತೋಷವನ್ನು ತರುವಂತಹ ವಸ್ತುವನ್ನು ಎದೆಗೆ ಅವಚಿಕೊಳ್ಳಬೇಕೆಂದರೆ ಏನೂ ಇಲ್ಲವಲ್ಲ...ಅದು ಸ್ವರ್ಗದಷ್ಟೇ ದೂರವಿದೆ! ಗಂಡಿಲ್ಲದ ಹೆಣ್ಣಿನ ಬಾಳು ಸೂರ್ಯನಿಲ್ಲದ ಹಗಲಿನಂತೆ....!" ಎಂದು ಸಂಜೆಗಾಗಿ ಮಿಡುಕಿದಳು. ಸಂಜೆ ಅಷ್ಟೇಕೆ ವಿಲಂಬ ಮಾಡುತ್ತಲೆಂದು ಕುಪಿತಳಾದಳು.

ದಿವಾನೆ ಆಮದಲ್ಲಿಯ ಸಂಗೀತ ಜಹನಾರಾಳಿಗೆ ಯಾವಾಗಲೂ ಆಪ್ಯಾಯಮಾನವೆನಿಸುತ್ತಿತ್ತು! ಆದರೆ ಇಂದೇಕೋ ಅದು ಕುಪಿತಳಾದ ಯಮುನೆಯ ಶಬ್ದದಂತೆ ಕೇಳಿಬರಹತ್ತಿತ್ತು. ಸಂಜೆಯ ಮುಂದೆ ದಾರಾನನ್ನು ದಿವಾನೆ-ಖಾಸದ ಹತ್ತಿರ ಸಂಧಿಸಬೇಕೆಂದು ನಿರ್ಧರಿಸಿದಳು. ಅಂತಃಪುರದ ರಾಜಮನೆತನದವರಿಗೆ ಹೊರಗಿನವರು ಕಾಣುತ್ತಿದ್ದರು. ಆದರೆ ಅಂತಃಪುರದಲ್ಲಿ ಇರುವ ಅವರನ್ನು ಹೊರಗಿನವರು ನೋಡುವಂತಿರಲಿಲ್ಲ. ಅಂತಃಪುರದ ರಚನೆಯೇ ಹಾಗಿತ್ತು.

ಜಹನಾರಾ ಕಳ್ಳ ಹೆಜ್ಜೆಗಳನ್ನಿಡುತ್ತ ದಿವಾನೆ-ಆಮ್‌ನ ಉದ್ಯಾನಕ್ಕೆ ಬಂದಳು. ಉದ್ಯಾನದ ಆಚೆ ಇರುವವರು ಅವಳಿಗೆ ಕಾಣುತ್ತಿದ್ದರು. ಅವರ ಶಬ್ದಗಳು ಸ್ಪಷ್ಟವಾಗಿ ಇವಳಿಗೆ ಕೇಳುತ್ತಿದ್ದವು. ಇಬ್ಬರು ಪುರುಷರು ಮಾತನಾಡುವದನ್ನು ಕೇಳಹತ್ತಿದಳು. ಆ ಮಾತುಗಳಲ್ಲಿ ಅವಳಿಗೆ ಆಸೆ ಮೂಡಿತು.

ಅವರಲ್ಲಿ ಒಬ್ಬರು "ಶಹಾ ಬುಲಂದ ಇಕ್ಬಾಲ ತಾನೇ ಬಲ್ಖಾದ ಸಿಂಹಾಸನದ ಮೇಲೆ ಕುಳಿತಂತೆ ವರ್ತಿಸುತ್ತಿರುವನು. ಈ ನಜಾಬತಖಾನನ ಒರೆಯಲ್ಲಿ ಖಡ್ಗವು ಇರುವಷ್ಟು ಕಾಲವೂ ಅವನು ಆದರ ಆಶೆಯನ್ನು ಬಿಡಬೇಕು" ಎಂದು, ಹಾವಿನ ಹೆಡೆಯಂತೆ. ಆರ್ಭಟಿಸುತ್ತ ಹೇಳುತ್ತಿದ್ದರು. ಅವರು ಯಾರೆಂದು ಜಹನಾರಾಳಿಗೆ ತಿಳಿಯಿತು. ಜಹನಾರಾ ಅವರ ಆ ಅಧರಗಳನ್ನೇ ನೋಡುತ್ತಿದ್ದಳು. ಖಾನನ ಜೊತೆ ಮಾತನಾಡುವವರು ಅಮೀರರೆಂದೂ ತಿಳಿಯಿತು.

ಇಬ್ಬರೂ ಹುಲ್ಲಿನ ಹಾಸಿಗೆಯ ಮೇಲೆ ಕುಳಿತರು. ಜಹನಾರಾ ಉಸಿರು ಬಿಡದಂತೆ ಕದ್ದು ಕದ್ದು ನಜಾಬತಖಾನನನ್ನೇ ನೋಡುತ್ತಿದ್ದಳು. ಖಾನನ ಬಲಿಷ್ಠ ದೇಹವು ಅವಳನ್ನು ಆಕರ್ಷಿಸಹತ್ತಿತು. ತಾನೆಲ್ಲಿ ಉಸಿರು ಬಿಟ್ಟರೆ ಅವರಿಗೆ ಕೇಳಿಸಿತೋ ಎಂದು ಉಸಿರನ್ನು ಬಿಗಿಹಿಡಿದು ಗವಾಕ್ಷದ ರಂಧ್ರದಿಂದ ಖಾನನನ್ನು ತದೇಕ ದೃಷ್ಟಿಯಿಂದ ನೋಡಹತ್ತಿದಳು. ತನ್ನ ದೈವವನ್ನೇ ಬರೆಯುವ ಖಾನರೇ ಎದುರಿಗಿರುವಾಗ ಅವಳು ಈಗ ದಾರಾನ ಹತ್ತಿರ ಹೋಗ ಬಯಸಲಿಲ್ಲ.

"ಅಮೀರ ಸಾಹೇಬ, ನಾನಾಗಿ ಮೊಗಲ ರಾಜಕುಮಾರಿ ಜಹನಾರಾ ಬೇಗಂಳ ಕೈಹಿಡಿಯಬೇಕೆಂದು ಬಯಸಲಿಲ್ಲ. ಮೊಗಲ ಸಾಮ್ರಾಜ್ಯದ ಉತ್ತರಾಧಿಕಾರಿ ದಾರಾಶಿಕೋವ ನನಗೆ ಅವಳನ್ನು ವಿವಾಹವಾಗುವ ಮನಸ್ಸಿದೆಯೇ ಎಂದು ಕೇಳಿದರು. ಅವಳನ್ನು ನೋಡಿದವರು ಅವಳು ಅಪೂರ್ವ ಸುಂದರಿ ಎಂದು ಹೇಳಿದ್ದಾರೆ. ನಾನೂ ಅವಳೊಡನೆ ಹಲವಾರು ಸಲ ಮಾತನಾಡಿದ್ದೇನೆ. ಆದರೆ ಆಗೆಲ್ಲ ಅವಳು ಬುರಖಾದಲ್ಲಿಯೇ ಇರುತ್ತಿದ್ದಳು. ಆದರೆ ಚಕ್ರವರ್ತಿ ಷಹಾಜಹಾನರು ಇದಕ್ಕೆ ಒಪ್ಪಲಿಲ್ಲ! ನಾನೆಂದೂ ಜಹನಾರಾ ಬೇಗಂಳ ಕೀರ್ತಿಗೆ ಕಲಂಕ ಹತ್ತುವಂತೆ ವರ್ತಿಸಲಾರದಿಲ್ಲ. ಪರಿಶುದ್ಧಳಾದ ಜಹನಾರಾ ಬೇಗಂ ಪರಿಶುದ್ಧಳಾಗಿಯೇ ಇರಲಿ. ನನ್ನ ಮಾನ ಹೋದರೂ ಅವಳ ಮಾನರಕ್ಷಣೆ ಮಾಡುತ್ತೇನೆ...." ಎಂದು, ಕೈಯಿಂದ ಹುಲ್ಲನ್ನು ಕಿತ್ತಿ ಚಿವುಟಿ ಚಿವುಟಿ ಆಚೆ ಚಲ್ಲುತ್ತಿದ್ದನು.



ಜಹನಾರಾ ನಿಂತಲ್ಲಿಯೇ ಹಿಮದಂತೆ ಕರಗಹತ್ತಿದಳು. ತಾನೇಕಾದರೂ ತನ್ನ ಹೃದಯದಲ್ಲಿ ಬಚ್ಚಿಟ್ಟುಕೊಂಡು ಬಂದ ಆ ಹಕ್ಕಿಯನ್ನು ಹೊರಗೆ ಬಿಟ್ಟೆನೋ ಎನಿಸಿತು. "ನಜಾಬತಖಾನ, ಸಾಮ್ರಾಟರು ಮನಸ್ಸನ್ನು ಬದಲಿಸಬಹುದು. ನಿನ್ನಂತಹ ಶೂರರ ನೆರವು ಅವರಿಗೆ ಬೇಕಿದೆ. ನೀನು ನಿರಾಶನಾಗುವ ಕಾರಣವಿಲ್ಲ...." ಎಂದು ಸಮಾಧಾನ ಮಾಡುತ್ತ ಅಮೀರರು ಎದ್ದರು.

"ಅಮೀರ ಸಾಹೇಬ. ಜಹನಾರಾ ಬೇಗುಳಂತಹ ಅಲೌಕಿಕ ಸುಂದರಿ, ಸುಗುಣೆ, ಸಚ್ಚರಿತೆ, ಬುದ್ಧಿವಂತೆ ನನ್ನ ಅಂತಃಪುರಕ್ಕೆ ಬೇಕಿತ್ತು. ಆದರೆ...ಮೊಗಲ ಮನೆತನದಲ್ಲಿ ಸಿಂಹಾಸನಾಧಿಕಾರಿಯು ಯಾವ ರಾಜಕುಮಾರಿಯೂ ವಿವಾಹವಾಗುವಂತಿಲ್ಲವಲ್ಲ! ಚಕ್ರವರ್ತಿ ಅಕಬರ ಎಳೆದು ಹೋದ ಅಲಂಘ್ಯ ರೇಖೆಯಿದು. 'ರಾಜಕುಮಾರಿಯರು ವಿವಾಹವಾದರೆ ಅಳಿಯಂದಿರು ತೈಮೂರನ ಮನೆತನವನ್ನೇ ಹಾಳು ಮಾಡುವರೆಂಬ ಭೀತಿ ಅವರಿಗಿತ್ತು. ಮೊಗಲ ರಾಜಕುಮಾರಿಯರು ವಿವಾಹವಾದದ್ದೇ ಅಪರೂಪ. ಇದನ್ನು ತಿಳಿದೂ ನಾನೇಕೆ ರಾಜಕುಮಾರ ದಾರಾ ಕೇಳಿದಾಗ ಒಪ್ಪಿಗೆಯನ್ನಿತ್ತೆನೋ....!" ಎಂದು ನಿಡಿದಾದ ಉಸಿರನ್ನು ಬಿಡುತ್ತ ನಜಾಬತಖಾನ ಅಲ್ಲಿಂದ ಎದ್ದೇ ಬಿಟ್ಟನು. ಜಹನಾರಾ ನಿಂತಲ್ಲೇ ಕುಸಿದು ಬಿದ್ದಳು. ಅಂತಃಪುರದಲ್ಲಿ ಆಗ ಅವಳ ಬಳಿ ಯಾರೂ ಇರಲಿಲ್ಲ.

ಜಹನಾರಾಳ ಕಾಲುಗಳೇ ಮುಂದೆ ಹೋಗದಂತಾದವು. ಪಕ್ಷಪಾತ ಬಂದವರಂತೆ ಮೆಲ್ಲನೆ ಕಾಲನ್ನೆಳೆಯುತ್ತ ಅಂತಃಪುರಕ್ಕೆ ಹೋದಳು. ಕಣ್ಣುಗಳಿಂದ ಉದುರುತ್ತಿದ್ದ ಅಶ್ರುಗಳನ್ನು ಅವಳಿಗೆ ತಡೆದು

ಕೊಳ್ಳುವನಾಗಲಿಲ್ಲ. ಹೆಣ್ಣಿಗೆ ಅಳುವದೊಂದೇ ಮಾರ್ಗವಲ್ಲವೇ! ಆದರೆ ಅವಳ ಅಳುವನ್ನು ಯಾರು ಕೇಳಬೇಕು. "ಗಂಡಸಿನ ಹೃದಯದಲ್ಲಿ ಅಲ್ಲಾ ಸಿಂಹದ ಕಠೋರತೆಯನ್ನೇನಾದರೂ ತುಂಬಿದ್ದಾನೇನೋ" ಎಂದು ವಿಹ್ವಲಳಾದಳು.

ಜಹನಾರಾ ಬೇಗಂ ತಾನು ಕಟ್ಟಿದ ತನ್ನ ಹೊಂಗನಸುಗಳ ಕೋಟೆಯನ್ನು ತಾನೇ ಭಗ್ನಗೊಳಿಸಿದಳು. ಮೊಗಲ ಮನೆತನದ ಗೌರವವು ಧುತ್ತೆಂದು ಈಗ ಅವಳ ಮುಂದೆ ನಿಂತಿತು. ಆದರೂ ತಂದೆಗೊಮ್ಮೆ ಈ ಮಾತನ್ನು ಹೇಳಬೇಕೇನೋ ಎಂದುಕೊಳ್ಳುತ್ತಿರುವಾಗ, ಚಕ್ರವರ್ತಿ ಷಹಾಜಹಾನ ಅಸ್ವಸ್ಥರಾದರು. ಚಿಕಿತ್ಸೆ ಮಾಡುವ ಹಕೀಮರು ಆಶಾಭಾವನೆಯನ್ನು ವ್ಯಕ್ತಪಡಿಸಲಿಲ್ಲ. ಬಾದಶಹರ ಅಸ್ವಾಸ್ಥ್ಯದ ವಾರ್ತೆ ಹಿಂದೂಸ್ಥಾನದ ತುಂಬಾ ಹರಡಿತು.

ತಂದೆ ಸಾಯುವದನ್ನೇ ಸ್ವಾಗತಿಸುತ್ತಿದ್ದವರು ಅವರ ಮೂರು ಗಂಡು ಮಕ್ಕಳಾದ ಶಹಾಸೂಜಾ, ಔರಂಗಜೇಬ ಮತ್ತು ಮುರಾದಬಕ್ಷ! ಮೂವರು ದಿಲ್ಲಿಯ ಹೊರಗೆ ಸುಬೇದಾರರಾಗಿದ್ದರು. ಮರಣೋನ್ಮುಖನಾದ ತಂದೆಯನ್ನು ಬಂದು ನೋಡುವ ಬದಲು, ಶಹಾಸೂಜಾ ಸೈನ್ಯದೊಂದಿಗೆ ಸಿಂಹಾಸನವನ್ನೇರುವ ಆಶೆಯನ್ನಿಟ್ಟುಕೊಂಡು ದಾಳಿಯನ್ನು ಮಾಡಿದಾಗ ಮುಖಭಂಗಿತನಾಗಿ ತಲೆ ಮರೆಸಿಕೊಂಡನು. ಅದನ್ನೇ ಕಾಯುತ್ತಿದ್ದ ಔರಂಗಜೇಬನು ಮುರಾದನಿಗೆ "ದಾರಾ ತಂದೆಯನ್ನು ವಿಷಕೊಟ್ಟು ಈಗಾಗಲೇ ಕೊಂದಿದ್ದಾನೆಂದು ನಾನು ಕೇಳಿದ್ದೇನೆ; ದಾರಾ ಕಾಫೀರ್, ಮೂರ್ತಿಪೂಜಕ. ಅವನಲ್ಲಿ ನನಗೆ ವಿಶ್ವಾಸವಿಲ್ಲ. ಮೊಗಲರ ಮರ್ಯಾದೆಯನ್ನು ಕಾಯುವ ವೀರನೆಂದರೆ ನೀನೊಬ್ಬನೇ! ನಾನಂತೂ ಮಕ್ಕಾಕ್ಕೆ ಹೋಗಿ ನನ್ನ ಕೊನೆಯ ದಿನಗಳನ್ನೆಲ್ಲಾ ಅಲ್ಲಿಯೇ ಕಳೆಯಬೇಕೆಂದಿದ್ದೇನೆ. ನೀನು ಕುರಾಣವನ್ನೆ ಹಿಡಿದು ಆಣೆ ಮಾಡಿ ನನ್ನನ್ನು ಬೆಂಬಲಿಸುತ್ತೇನೆಂದು ಹೇಳಿದರೆ ನಾವಿಬ್ಬರೂ ದಿಲ್ಲಿಯ ಮೇಲೆ ಹೋಗೋಣ. ನೀನು ಸಿಂಹಾಸನವನ್ನು ಏರಿದೊಡನೆ, ನಾನು ಮೆಕ್ಕಾಕ್ಕೆ ಹೋಗುತ್ತೇನೆ...." ಎಂದು, ಮುರಾದಭಕ್ಷನನ್ನು ಮೋಸಗೊಳಿಸುವ ಪತ್ರವನ್ನು ಬರೆದು ಅವನನ್ನು ತನ್ನೆಡೆ ಸೆಳೆದುಕೊಂಡನು. ಜಹನಾರಳ ತಂಗಿ ರೋಶನಾರಾ ಔರಂಗಜೇಬನಿಗೆ ಅಂತಃಪುರದಲ್ಲಿ ನಡೆದದ್ದನ್ನೆಲ್ಲಾ ರಹಸ್ಯವಾಗಿ ತಿಳಿಸುತ್ತಿದ್ದಳು. ಜಹನಾರಾ ಮಾತ್ರ ದಾರಾ ಸಿಕೋವನೇ ಉತ್ತರಾಧಿಕಾರಿಯಾಗಬೇಕೆಂದು ಹೇಳಿದಳು. ರಾಜ್ಯದ ಸೂತ್ರಗಳನ್ನು ತಾನೇ ವಹಿಸಿಕೊಳ್ಳಲು ಔರಂಗಜೇಬ ಏರಿಬರುವದನ್ನು ತಪ್ಪಿಸಲು ಸತತ ಪ್ರಯತ್ನಿಸಿದಳು. ತಂದೆಯ ಬದಿಗೆ ಆರೈಕೆಗೆ ಈಗ ಇರುತ್ತಿದ್ದವಳೇ ಜಹನಾರಾ!

ತಂದೆಯ ಅಸ್ವಾಸ್ಥ್ಯದ ದುರ್ಲಾಭ ಪಡೆಯುವ ಹವಣಿಕೆಯಲ್ಲಿ ಇದ್ದವರಿಗೆಲ್ಲಾ ತಂದೆಗೆ ಏನೂ ಆಗಿಲ್ಲವೆಂದು ತೋರಿಸಲು ಜಹನಾರಾ ಬೇಗಂ ತಂದೆಯೊಂದಿಗೆ ಆಗ್ರಾಕ್ಕೆ ಪ್ರಯಾಣವನ್ನು ಬೆಳೆಸಿದಳು. ಹಾದಿಯಲ್ಲಿ ಎಲ್ಲರೂ ಸಾಮ್ರಾಟರನ್ನು ಕಾಣುವಂತೆ ವ್ಯವಸ್ಥೆ ಮಾಡಿದಳು. ಆಗ್ರಾಕ್ಕೆ ಬಂದಮೇಲೆ ಶಹಾಜಹಾನರು ನಿತ್ಯವೂ ಝರೋಖಾದಲ್ಲಿ ನಿಂತು ಪ್ರಜೆಗಳಿಗೆ ದರ್ಶನವನ್ನು ಕೊಡಹತ್ತಿದರು. ಝರೋಖಾ ಕಿಟಕಿಯಲ್ಲಿಯೇ ಸಾಮಾನ್ಯರಿಗೆ ಸಾಮ್ರಾಟರ ದರ್ಶನವು ದೊರೆಯುತ್ತಿತ್ತು. ವಿಶ್ವಕ್ಕೆಲ್ಲಾ ಶಹಾಜಹಾನರು ಇನ್ನೂ ಜೀವಿಸಿದ್ದಾರೆಂದು ಹೇಳುವದೇ ಜಹನಾರಳ ಉದ್ದೇಶವಾಗಿತ್ತು.

ಇದೇ ಸಂಧಿಯನ್ನು ಸಾಧಿಸಿ ಔರಂಗಜೇಬ ಮತ್ತು ಮುರಾದ ದಿಲ್ಲಿಯ ಮೇಲೆ ಏರಿಬಂದು ರಾಜಧಾನಿಯನ್ನು ಗೆದ್ದು ದಾರಾನನ್ನು ಬಂಧಿಸಿದರು.

ಸಾಮ್ರಾಟನಾಗಬೇಕಿದ್ದ ದಾರಾ ಈಗ ಮುರಾದ ಮತ್ತು ಔರಂಗಜೇಬರ ಬಂದಿ. ಅವನನ್ನು ಅಂಬಾರಿಯಿಲ್ಲದ ಆನೆಯ ಮೇಲೆ ಕೂಡಿಸಿ ದಿಲ್ಲಿಯ ತುಂಬಾ ಮೆರೆಸಿದರು. ಅವನಿಗೆ ಭಿಕ್ಷುಕರು ಹಾಕಿಕೊಳ್ಳುವ ವಸ್ತ್ರಗಳನ್ನು ತೊಡಿಸಿದ್ದರು. ಅವನ


"ಹುಡುಗಿ ಭಂಬಾ ಕೆಂಪಗೆ ಇದ್ದಾಳೆ ಅಂದ. ಸ್ವಲ್ಪ ನೀಲಿ ಬಣ್ಣ ಕಾಣ್ತಿಲ್ಲಯ."

ಮೆರವಣಿಗೆ ನಡೆದಾಗ ಪುರುಷರು ನಾಚಿ ತಲೆ ಬಾಗಿಸಿದರು. ಹೆಂಗಸರು ಅತ್ತರು. ದಾರಾ ಸಿಕೋವ ಸಾಧು ಸ್ವಭಾವದವನೆಂದು ಎಲ್ಲರಿಗೂ ಸಂವೇದ್ಯವಾಗಿತ್ತು. ಆದರೆ ಸಾಧುವೆಂದು ಹೇಳಿಕೊಳ್ಳುತ್ತಿದ್ದ ಔರಂಗಜೇಬನ ಈ ಕ್ರೂರ ಕೃತ್ಯವನ್ನು ಪ್ರತಿಭಟಿಸುವ ಶಕ್ತಿ ಅವರಲ್ಲಿ ಯಾರಿಗೂ ಇರಲಿಲ್ಲ!

ಹಾದಿಯಲ್ಲಿ ಫಕೀರನೊಬ್ಬನು "ಜಹಾಪನಾ, ನೀವು ನನಗೆ ನಿತ್ಯವೂ ಬಂಗಾರದ ನಾಣ್ಯಗಳನ್ನು ದಾನವನ್ನಾಗಿ ಕೊಡುತ್ತಿದ್ದಿರಿ. ಇಂದೇನಾದರೂ ಇದ್ದರೆ ಕೊಡಿರಿ" ಎಂದು ಅಲ್ಪರಿದನು. ರಾಜಕುಮಾರ ದಾರಾ ತನ್ನಲ್ಲಿ ಏನಾದರೂ ಇದೆಯೋ ಎಂದು ತಡಬಡಿಸಿದನು. ತನ್ನಲ್ಲಿ ಏನೂ ಇಲ್ಲವೆಂದು ಹೇಳಲು ಅವನಿಗೆ ಮನಸ್ಸಾಗಲಿಲ್ಲ. ಕೂಡಲೇ ಮೈಮೇಲಿದ್ದ ಒಂದು ಹೊಲಸು ಶಾಲನ್ನು ತೆಗೆದು ಆ ಫಕೀರನ ಮೇಲೆ ಒಗೆದನು. ಮೆರವಣಿಗೆ ಅಂತಃಪುರದ ಬದಲು ಸೆರೆಮನೆಯತ್ತ ನಡೆಯಿತು.

ಚಕ್ರವರ್ತಿ ಶಹಾಜಹಾನರು ಮತ್ತು ಜಹನಾರಾ ಬೇಗಂ ಆಗ್ರಾ ಕೋಟೆಯ ಅಂತಃಪುರದಲ್ಲಿ ಸೆರೆಯಾದರು. ಜಹನಾರಾ ಅತ್ತಳು. ತಮ್ಮ ದಾರಾನಿಗೆ ಒದಗಿದ ದುಸ್ಥಿತಿಯನ್ನು ಕೇಳಿ ವಿವಂಚಿತಳಾದಳು.

ದೀಪಾವಳಿಯ ಹಾರ್ದಿಕ ಶುಭಾಶಯಗಳು !



ಸಂಸ್ಥಾಪಕರು : ಶ್ರೀ ಪಿ. ಕೆ. ಜನಾರ್ದನ ನೆಲ್ಲಿ

ರಜತ ಮಹೋತ್ಸವವನ್ನು ಆಚರಿಸುತ್ತಿರುವ ಏಕೈಕ ಸಂಸ್ಥೆ

ಮನೋಹರ ಕೆಫೆ
ಊಟ ಮತ್ತು ಉಪಹಾರ ಗೃಹ
ನೆಹರೂ ರಸ್ತೆ, ಶಿವಮೊಗ್ಗ
ಫೋನ್ : 2309, 2230
ಮಾಲೀಕರು ; ಜೆ. ಗೋಪಾಲಕೃಷ್ಣ ನೆಲ್ಲಿ

ನೆಲ್ಲಿ ಪ್ರಕಾಶ್ ಲಾಡ್ಜ್
ವಸತಿ ಗೃಹ
ನೆಹರೂ ರಸ್ತೆ, ಶಿವಮೊಗ್ಗ
ಪಾಲುದಾರರು : ಜೆ. ಗೋಪಾಲಕೃಷ್ಣ ನೆಲ್ಲಿ ಹಾಗೂ
ಜೆ. ವಿಠಲನೆಲ್ಲಿ

ದೀಪಾವಳಿ ಬರಲಿ ! ನಾಡಿಗೆ ಹರುಷವ ತರಲಿ !!

ದೀಪಾವಳಿಯ ಹಾರ್ದಿಕ ಶುಭಾಶಯಗಳು



ಕೇಶವ ಬಿ.

ನಂ. 71-ಬಿ, 2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560 010,



ಆವಳು ಔರಂಗಜೇಬನನ್ನು ಸದಾ ಪ್ರೀತಸರ್ಪವೆಂದೇ ಕರೆಯುತ್ತಿದ್ದಳು. ಔರಂಗಜೇಬ ಹತ್ತು ವರುಷದವನಿರುವಾಗ ಫಕೀರನೊಬ್ಬನು ಸಾಮ್ರಾಟರಿಗೆ ನಿಮ್ಮ ನಾಲ್ಕು ಗಂಡು ಮಕ್ಕಳಲ್ಲಿ ಹೆಚ್ಚು ಸುಂದರನಾದವನು ನಿಮಗೆ ಶತ್ರುವಾಗುವನು ಎಂದು ಹೇಳಿದ್ದನು. ಅದನ್ನು ಜಹನಾರಾ ಕೇಳಿದ್ದಳು. ನಾಲ್ವರಲ್ಲಿ ಹೆಚ್ಚು ಸುಂದರನಾದವನೆಂದರೆ ಔರಂಗಜೇಬನೇ !

ಜಹನಾರಾ ಅಂತಃಪುರದ ಸೆರೆಯಲ್ಲಿ ನಿಂತಿದ್ದಳು. ಮುಂದೆ ಯಮುನೆ ಎಂದಿನಂತೆ ಹರಿಯುತ್ತಿದ್ದಳು. ಯಮುನೆಯ ಆಚೆಗೆ ತಾಜ ಮಹಲ ಹೊಳೆಯುತ್ತಿತ್ತು. ಬೆಳದಿಂಗಳಲ್ಲಿ ತಾಜ ಮಹಲಿನ ಗುಮ್ಮಟವು ಒಂದು ಬಿಳಿ ಮುತ್ತಿನಂತೆ ಕಾಣುತ್ತಿತ್ತು. ಆದರೆ ಜಹನಾರಳಿಗೆ ಹಗಲಿನಲ್ಲಿಯೇ ಈಗ ಈ ಗುಮ್ಮಟವು ರಕ್ತದ ಹನಿಯಂತೆ ಕಂಗೊಳಿಸಹತ್ತಿತು ! ವೃದ್ಧ ತಂದೆ ಶಹಾಜಹಾನರು ಮಗನಾದ ಔರಂಗಜೇಬನಿಗೆ ಬಂದು ಭೆಟ್ಟಿಯಾಗಲು ಹೇಳಿಕಳಿಸಿದರು. ಔರಂಗಜೇಬ ಬರುವದಾಗಿ ಹೇಳಿ ಮೊದಲು ನಜರಾಣಾ ಕಳಿಸಿದನು. ಮಗನಾದ ಔರಂಗಜೇಬನು ಪ್ರೀತಿಯಿಂದ ನನಗೆ ಏನನ್ನೋ ಕಳಿಸಿದ್ದಾನೆ ಎಂದು ಸಾಮ್ರಾಟರು ನಜರಾಣಾದ ತಾಟನ್ನು ತೆರೆದಾಗ, ಅದರಲ್ಲಿ ದಾರಾ ಶಿಕೋವನ ರುಂಡವಿತ್ತು ! ಹಿಂದೂಸ್ಥಾನವನ್ನೇ ಆಳಿದ ಸಾಮ್ರಾಟರು ಅತ್ತರು. ಜಹನಾರಾ ತಮ್ಮನ ರುಂಡವನ್ನು ನೋಡಿ ದುಃಖತಪ್ತಳಾದಳು. ಅವಳಿಗೀಗ ಶಾಂತಿ ಬೇಕಿತ್ತು. ಸತ್ತವರಿಗಷ್ಟೇ ಶಾಂತಿಯೆಂಬುದು ಈಗ ಅವಳಿಗೆ ತಿಳಿಯಹತ್ತಿತು!

ಶಹಾಜಹಾನರು ಮೊಗಲ ಸಿಂಹಾಸನದ ಮೇಲೆ ಕುಳಿತಾಗ ಹೀಗೇನಾದರೂ ಆಗಿದ್ದರೆ, ಔರಂಗಜೇಬನ ರುಂಡನೇ ಹಾರುತ್ತಿತ್ತು. ವೃದ್ಧ ತಂದೆ ಕಣ್ಣೀರಿಟ್ಟರು. ಜಹನಾರಾ ಬೇಗಂ ಕೂಡ ಅತ್ತೇ ಅತ್ತಳು. ಔರಂಗಜೇಬ ತಂದೆಯ ಭೆಟ್ಟಿಗೆ ಬರಲಿಲ್ಲ. ಆಗ್ರಾಕ್ಕೆ ಜಹನಾರಾ ಬೇಗಂಳಿಗೆ ಪತ್ರವನ್ನು ಕಳಿಸಿ ಅವಳಿಗೆ ಬಂದು ತನ್ನ ಜನಾನಾದಲ್ಲಿ ಇರಲು ಆಮಂತ್ರಿಸಿದನು.

ರಾಜಕುಮಾರಿ ಆ ಪತ್ರವನ್ನು ಹರಿದು, ತನಗೆ ತಮ್ಮನ ಅಂತಃಪುರಕ್ಕಿಂತಲೂ ತಂದೆಯ ಪಾದದಡಿಯಲ್ಲಿ ಸಾಯುವದೇ ಹಿತವೆಂದು ಹೇಳಿಕಳಿಸಿದಳು. ತಂದೆ ನರಳುತ್ತಿದ್ದರೂ ಔರಂಗಜೇಬ ಬರಲಿಲ್ಲ. ಮುರಾದಭಕ್ಷನನ್ನೂ ಹೋಗಗೊಡಲಿಲ್ಲ.

ಔರಂಗಜೇಬ ಮುರಾದನಿಗೆ ಪಟ್ಟ ಕಟ್ಟುವ ಸಿದ್ಧತೆಗಳನ್ನು ಮಾಡಹತ್ತಿದನು. ಯಮುನಾ ನದಿಯ ದಂಡೆಯ ಮೇಲೆ ಡೇರೇ ಹೊಡಿಸಿ ಅಲ್ಲಿಯೇ ಸಿಂಹಾಸನಾರೋಹವೆಂದು ಪ್ರಕಟಿಸಿದನು. ಜ್ಯೋತಿಷಿಗಳು ತೆಗೆದುಕೊಟ್ಟ ಮುಹೂರ್ತದ ದಿನವು ಬಂದಿತು. ಅಂದು ಮುಂಜಾನೆ ರಾಜಕುಮಾರ ಮುರಾದ ಔರಂಗಜೇಬನ ಭೆಟ್ಟಿಗೆ ಹೊರಟನು. ಔರಂಗಜೇಬ ಇನ್ನೊಂದು ಡೇರೆಯಲ್ಲಿದ್ದನು. ಮುರಾದನ ಹಿತೈಷಿಗಳಲ್ಲಿ ಒಬ್ಬನಾದ ಸರದಾರ ಇಬ್ರಾಹಿಂಖಾನನು ಕುದುರೆಯ ಕಡಿವಾಣವನ್ನು ತನ್ನ ಕೈಯಲ್ಲಿ ಹಿಡಕೊಂಡು ಅಲ್ಲಿಗೆ ಹೋಗುವದು ಬೇಡವೆಂದು ಸಂಜ್ಞೆ ಮಾಡಿದನು. ಹತ್ತು ಹೆಜ್ಜೆ ಕುದುರೆಯ ಕಡಿವಾಣವನ್ನು ಹಿಡಿದು "ಸಾಮ್ರಾಟರಾಗಲಿರುವ ಮುರಾದಭಕ್ಷ, ...ಇದೇ..ಔರಂಗಜೇಬರ ಡೇರೆಗೆ ಹೋಗುವ....ಹಾದಿ.... ತಾವೀಗ ಹೋಗುತ್ತಿರುವ ಸೆರೆಮನೆಯ ಹಾದಿಯೇನೊ....!" ಎಂದನು. ಮುರಾದನಿಗೆ ತನಗೆ ಸಿಂಹಾಸನವು ದೊರೆಯುವದಲ್ಲಾ ಎಂಬ ಹಿಗ್ಗಾಗಿತ್ತು. ಅವನಿಗೆ ಇಬ್ರಾಹಿಂಖಾನನ ಮಾತುಗಳೇ ಕೇಳಿಸಲಿಲ್ಲ.



ಔರಂಗಜೇಬನ ಡೇರೆಯಲ್ಲಿ ಅವನ ವಿಶ್ವಾಸದ ಸರದಾರರಷ್ಟೇ ಇದ್ದರು. ಔರಂಗಜೇಬ ಹಿಂದೂಸ್ಥಾನದ ಸಾಮ್ರಾಟನಾಗಲಿರುವ ಮುರಾದಭಕ್ಷನನ್ನು ಸ್ವಾಗತಿಸಿ ಸಿಂಹಾಸನದ ಬಳಿ ಕರೆತಂದನು. ಸಂಗೀತವು ಪ್ರಾರಂಭವಾಯಿತು. ನೃತ್ಯಗಾತಿಯರು ನರ್ತನವನ್ನು ಮಾಡಹತ್ತಿದರು. ಡೇರೆಯ ತುಂಬಾ ಪುಷ್ಪಗಳನ್ನು ತೂರಲಾಯಿತು. ಗುಲಾಬಿಯ ಪನ್ನೀರನ್ನು ಸುತ್ತಲೂ ಸಿಂಪಡಿಸಲಾಯಿತು. ಸುಗಂಧದ ಕಾಷ್ಠಗಳನ್ನು ಅಲ್ಲಲ್ಲಿ ಹಚ್ಚಿಡಲಾಯಿತು.

ಔರಂಗಜೇಬ ಸೋದರನಾದ ಮುರಾದನನ್ನು ಅಪ್ಪಿಕೊಂಡನು. ಮುರಾದನ ಸರದಾರರನ್ನೆಲ್ಲಾ ಔರಂಗಜೇಬನ ಸೇನಾಪತಿ ಸಂತೋಷಕೂಟಕ್ಕೆ ಬೇರೊಂದು ಡೇರೆಗೆ ಆಹ್ವಾನಿಸಿದ್ದನು. ಅವರೆಲ್ಲರೂ ಅಲ್ಲಿ ಮದಿರೆ, ಮದಿರಾಕ್ಷಿಯರ ಸುಖದಲ್ಲಿ ಲೋಲುಪ್ತರಾಗಿದ್ದರು.

ಔರಂಗಜೇಬ ತನ್ನ ಡೇರೆಯಲ್ಲಿ ನೆರೆದವರಿಗೆಲ್ಲಾ ಮದಿರೆಯನ್ನು ಹಂಚಲು ಹೇಳಿದನು. ಸುರೆ ಬಂದಿತು. ಸುರಾಂಗನೆಯರೂ ಬಂದರು. ಸುಗಂಧವು ಸುತ್ತಲೂ ಹರಡಿ ಆಗಲೇ ಅಮಲೇರುವಂತಾಯಿತು.

ಔರಂಗಾಜೇಬ ಮುರಾದನಿಗೆ 'ಮುರಾದಭಕ್ಷ ತಾವೀಗ ಡೇರೆಯ ಒಳಭಾಗದಲ್ಲಿ ವಿಶ್ರಮಿಸಿಕೊಳ್ಳಿ. ನಾನು ಸಿಂಹಾಸನಾರೋಹಣದ ಸಿದ್ಧತೆಗಳನ್ನು ಖುದ್ದಾಗಿ ನೋಡಿಕೊಳ್ಳುತ್ತೇನೆ. ನಾನೇ ಬಂದು ಜಹಾಪನಾ ಅವರನ್ನು ಎಬ್ಬಿಸುತ್ತೇನೆ" ಎಂದು ಹೇಳಿ, ಮುರಾದ ಭಕ್ಷನನ್ನು ಔರಂಗಜೇಬ ತಾನೇ ಕೈಹಿಡಿದು ಡೇರೆಯ ಒಳಕ್ಕೆ ಕರೆದೊಯ್ದನು. ಅಲ್ಲಿ ಮುರಾದನನ್ನು ಸ್ವರೂಪ ಸುಂದರಿಯೊಬ್ಬಳು ಅಪ್ಪಿಕೊಳ್ಳುತ್ತ ಮಂಚದತ್ತ ಕರೆದೊಯ್ದಳು. ಔರಂಗಜೇಬ ಹೊರಗೆ ಬಂದನು. ಅವನು ಮದಿರಾ ಪಾತ್ರೆಯನ್ನು ತನ್ನ ಅಧರಗಳಿಗೆ ಹಚ್ಚಿಕೊಳ್ಳುತ್ತಿದ್ದರೂ ಅದರ ಒಂದು ಬಿಂದುವನ್ನೂ ಕುಡಿದಿರಲಿಲ್ಲ.

ಸುರಾಪಾನದ ಅಮಲಿನಿಂದ ಮುರಾದನಿಗೆ ನಿದ್ರೆ ಬಂದಿತು. ಮುರಾದನ ಬಳಿ



ಅವನ ಸೇವಕನಾದ ಶಹಾಬಾಜ ಇದ್ದನು. ಶಹಾಬಾಜ ಒಬ್ಬನೇ ಮುರಾದನ ವಿಶ್ವಾಸದ ಕಂಚುಕಿ. ಔರಂಗಜೇಬ ಬಿಳಿ ಕುರ್ತಾ ಬಿಳಿ ಟೊಪ್ಪಿಗೆ, ಬಿಳಿ ಪೈಜಾಮಾ ಹಾಕಿಕೊಂಡು ಗಡ್ಡದ ಮೇಲೆ ಕೈಯಾಡಿಸುತ್ತ ಶಹಾಬಾಜನನ್ನು ಹೊರಗೆ ಕರೆದು ಬೇರೆ ಕೆಲಸವನ್ನು ಒಪ್ಪಿಸಿದನು.

ಔರಂಗಜೇಬ ತನ್ನ ಚಿಕ್ಕ ಮಗನಾದ ಅಜೀಮನನ್ನು ಕರೆದು ಅವನೆದುರು ಒಂದು ಹೊಳೆಯುವ ವಜ್ರವನ್ನು ಹಿಡಿದನು. ನಾಲ್ಕು ವರುಷದ ಅಜೀಮನಿಗೆ ಅದನ್ನು ಹಿಡಿಯುವ ಆಶೆ. ಔರಂಗಜೇಬ ಮೆಲ್ಲನೆ ಅಜೀಮನಿಗೆ "ಮಲಗಿದ ಚಾಚಾ ಮುರಾದನ ಖಡ್ಗವನ್ನು ಅವನಿಗೆ ಎಚ್ಚರವಾಗದಂತೆ ತೆಗೆದುಕೊಂಡು ಬಂದರೆ ನಿನಗೆ ಕೊಡುವೆ" ಎಂದು, ಅವನ ಕಿವಿಯಲ್ಲಿ ಹೇಳಿದನು. ಅಲ್ಲಲ್ಲಿ ಮುರಾದನಿಗೆ ಬೇಕಾದ ಕೆಲವರಿದ್ದರು. ಅವರೆಲ್ಲರೂ ಔರಂಗಜೇಬನ ಮೇಲೆ ಕಣ್ಣಿಟ್ಟಿದ್ದರೂ, ಔರಂಗಜೇಬನೇ ಹೊರಗಿದ್ದುದರಿಂದ ಅವರಿಗೆ ಯಾವ ಸಂಶಯವೂ ಬರಲಿಲ್ಲ.

ಅಜೀಮ ತನ್ನ ಕೆಲಸವನ್ನು ಮಾಡಿದ್ದನು. ಮುರಾದನಿಗೆ ಎಚ್ಚರವಾಯಿತು. ಸೊಂಟಕ್ಕೆ ಕೈಹಾಕಿದರೆ ಖಡ್ಗವಿಲ್ಲ. ಮೆಲ್ಲನೆ ಎದ್ದು, ಎದುರಿಗಿದ್ದ ಔರಂಗಜೇಬನಿಗೆ ತಲೆಬಾಗಿ "ಔರಂಗಜೇಬ, ನೀನು ಕುರಾಣದ ಮೇಲೆ ಕೈಯಿಟ್ಟು ಆಣೆ ಮಾಡಿ, ನನ್ನನ್ನು ಸಿಂಹಾಸನದ ಮೇಲೆ ಕೂಡಿಸುವೆನೆಂದು ನೀನು ಮಾಡಿದ ಪ್ರತಿಜ್ಞೆ ನನಗೀಗ ಅರ್ಥವಾಯಿತು" ಎಂದನು.

ಸಂಗೀತವು ಇನ್ನೂ ನಡದೇ ಇತ್ತು. ಮುರಾದನ ಸರದಾರರಿಗೆಲ್ಲಾ ಇನ್ನೇನು ಮುರಾದ ಸಿಂಹಾಸನವನ್ನೇರುವ ಸಮಯವು ಸನ್ನಿಹಿತವಾಯಿತೆಂದು ಭಾಸವಾಯಿತು. ಔರಂಗಜೇಬನ ಡೇರೆಯಿಂದ ಎರಡು ಆನೆಗಳು ಏಕಕಾಲಕ್ಕೆ ಹೊರಟವು. ಒಂದು ಆಗ್ರಾದತ್ತ ನಡೆಯಿತು. ಇನ್ನೊಂದು ದಿಲ್ಲಿಗೆ ಹೋಯಿತು. ದಿಲ್ಲಿಯತ್ತ ನಡೆದ ಆನೆಯ ಮೇಲಿನ ಅಂಬಾರಿಯಲ್ಲಿ ಸಾಮ್ರಾಟನಾಗಲಿರುವ ದುರ್ದೈವಿ ಮುರಾದ ಭಕ್ಷ್ಣ ಇದ್ದನು. ಔರಂಗಜೇಬನ ಈ ಮಸಲತ್ತು ಯಾರಿಗೂ ತಿಳಿಯಲಿಲ್ಲ!

ಮುಂದಿನ ಇತಿಹಾಸ ಯಾರಿಗೆ ತಾನೇ ಗೊತ್ತಿಲ್ಲ... ಫಕೀರನ ಸೋಗು ಹಾಕಿ, ಕುರಾಣದ ಮೇಲೆ ಆಣೆಯಿಟ್ಟು, ಮಕ್ಕಾಕ್ಕೆ ಹೋಗಿ ತನ್ನ ಶೇಷಾಯುಷ್ಯವನ್ನು ಕಳೆಯಲು ನಿರ್ಧರಿಸಿದ ಔರಂಗಜೇಬನು ಚಕ್ರವರ್ತಿ ಶಹಾಜಹಾನರು ಜೀವಿಸಿರುವಾಗಲೇ ಹಿಂದೂಸ್ಥಾನದ ಬಾದಶಹನಾದದ್ದು....!

....ಆದರೆ ಇತಿಹಾಸ ಹೇಳುವದಕ್ಕಿಂತಲೂ ಹೆಚ್ಚಿನದನ್ನು ತನ್ನ ಗರ್ಭದಲ್ಲಿ ಅಡಗಿಸಿಟ್ಟುಕೊಂಡಿರುತ್ತದೆ.

ಮುರಾದ ಸೆರೆಮನೆಯನ್ನು ಸೇರಿದನು. ಶಹಾಜಹಾನ, ಜಹನಾರಾ ಬೇಗಂ ಅಂತಃಪುರದಲ್ಲಿಯೇ ಸೆರೆವಾಸವನ್ನು ಅನುಭವಿಸಹತ್ತಿದರು. ದಾರಾನನ್ನು ಔರಂಗಜೇಬ ಕೊಲ್ಲಿಸಿ ಅವನ ರುಂಡವನ್ನು ಅವನ ತಂದೆಗೆ ಕಾಣಿಕೆಯಾಗಿ ಕೊಟ್ಟನು. ದಿಲ್ಲಿಯ ತುಂಬಾ ಔರಂಗಜೇಬ ರಕ್ತವನ್ನು ಚೆಲ್ಲಿದನು.

ಔರಂಗಜೇಬ ದಾರಾನ ಹೆಂಡತಿ ಉದಯಪುರಿಗೆ ತನ್ನ ಸಮ್ಮುಖದಲ್ಲಿ ಬರ ಹೇಳಿದನು. ಅವಳು ಸಾಮ್ರಾಟನ ಆಜ್ಞೆಯನ್ನು ಪಾಲಿಸಿದಳು. ಅವಳೀಗ ಔರಂಗಜೇಬನ ಹೆಂಡತಿಯಾದಳು. ದಾರಾನ ಇನ್ನೊಬ್ಬ ಹೆಂಡತಿ ರಣೌದಿಲ್‌ಳಿಗೆ ಬರ ಹೇಳಿದನು. ರಣೌದಿಲ್‌ಳು ಅಪೂರ್ವ ಸುಂದರಿ. ನಾಚಪಾಲಿಯಾಗಿ ಸಾಮಾನ್ಯ ಕುಟುಂಬದಲ್ಲಿ ಜನಿಸಿದ್ದರೂ ಯಾವ ಅಂತಃಪುರದ ಸ್ವರೂಪ ರಾಣಿಯರಿಗೂ ಸೌಂದರ್ಯದಲ್ಲಿ ಕಡಿಮೆಯಾಗಿರಲಿಲ್ಲ! ಔರಂಗಜೇಬನಿಗೆ ಎಂದಿನಿಂದಲೂ ಅವಳ ಮೇಲೆ ಕಣ್ಣಿತ್ತು. ದಾರಾನ ಹೆಂಡತಿಯೆಂದು ಮೆತ್ತಗಿದ್ದನು.

ಔರಂಗಜೇಬ ಅವಳು ತನ್ನೆದುರು ಬರಬೇಕೆಂದು ಹೇಳಿ ಕಳಿಸಿದಾಗ, ಅವಳು ಸಾಮ್ರಾಟ ಔರಂಗಜೇಬರು ತನ್ನನ್ನು ಏತಕ್ಕಾಗಿ ಕರೆಯುತ್ತಾರೆಂದು ತನಗೆ ತಿಳಿಯಬೇಕಾಗಿದೆಯೆಂದು ಹೇಳಿ ಕಳಿಸಿದಳು. "ಹಿಂದೂಸ್ಥಾನದ ಚಕ್ರವರ್ತಿ ಆಲಂಗೀರ ಬಾದಶಹಾ ಔರಂಗಜೇಬರು ತಮ್ಮ ಸುಂದರ ಕೇಶರಾಶಿಗೆ ಮೋಹಿತರಾಗಿದ್ದರಿಂದ ಅವುಗಳ ಮೇಲೆ ಕೈಯಾಡಿಸಬೇಕೆಂದು ಅವರಿಗೆ ಆಶೆಯಾಗಿದೆಯಂತೆ" ಎಂದು ಸೇವಕಿಯೊಬ್ಬಳು ಬಂದು ಹೇಳಿದಳು.

ರಣೌದಿಲ್ ತಕ್ಷಣವೇ ತನ್ನ ಸುಂದರ ಕೂದಲುಗಳನ್ನು ಕತ್ತರಿಸಿ ಔರಂಗಜೇಬನಿಗೆ ಸ್ಪರ್ಶಿಸಲು ಹೇಳಿ ಕಳಿಸಿದಳು. ಆ ಕೂದಲನ್ನು ನೋಡಿದ ಔರಂಗಜೇಬ ಅವಳನ್ನು ಮದುವೆಯಾಗುವ ಬಯಕೆಯನು ನಿಕ್ಕಸಡಿಸಿ, ತಾನೆಂದರೆ ರಾಜಕುಮಾರ






ದಾರಾನೆಂದೇ ತಿಳಿಯಬೇಕು ಎಂದು ಅವಳಿಗೆ ಹೇಳಿಕಳಿಸಿದನು.

ಈ ಮಾತುಗಳನ್ನು ಕೇಳಿದ ರಣೌದಿಲ್ ಹರಿತವಾದ ಆಯುಧವನ್ನು ತೆಗೆದುಕೊಂಡು ತನ್ನ ಮುಖಕ್ಕೆ ಗಾಯಗಳನ್ನು ಮಾಡಿಕೊಂಡು ವಿರೂಪಳಾಗಿಬಿಟ್ಟಳು. ಆ ರಕ್ತವನ್ನು ಒಂದು ವಸ್ತ್ರದಲ್ಲಿ ಹಿಡಿದು "ನನ್ನ ಸೌಂದರ್ಯವನ್ನು ಬಯಸಿದ ಆಲಂಗೀರ ಬಾದಶಹಾ ಔರಂಗಜೇಬನಿಗೆ ನನ್ನದು ಇದೇ ಕಾಣಿಕೆ. ,ನನ್ನ ಮುಖದ ಸೌಂದರ್ಯವೇ ಈ ರಕ್ತಸಿಂಚಿತ ವಸ್ತ್ರದಲ್ಲಿದೆ. ಬೇಕಿದ್ದರೆ ಅದನ್ನೇ ಅವರು ವಿವಾಹವಾಗಲಿ" ಎಂದು ಹೇಳಿಕಳಿಸಿದಳು.

ವಿರೂಪಳಾದ ರಣೌದಿಲ್‌ಳ ಮೇಲೆ ಔರಂಗಜೇಬ ಕನಿಕರವನ್ನು ತೋರಿಸಿ, ಅವಳನ್ನು ಬಿಡುಗಡೆ ಮಾಡಿದನು. ಮುಂದೆ ದಾರಾ, ಸೂಜಾ ಮತ್ತು ಮುರಾದರ ಸಂಬಂಧಿಕರನ್ನು ಕೊಲ್ಲಿಸಿ ತನ್ನ ಮಾರ್ಗವನ್ನು ನಿಷ್ಕಂಟಕವಾಗಿ ಮಾಡಿಕೊಂಡನು.

ಮೊಗಲ ಮನೆತನದಲ್ಲಿ ಅಧಿಕಾರದಾಹಿಗೆ ನಡೆದುಹೋದ ಅನ್ಯಾಯಗಳಿಗೆ ಮಿತಿಯೇ ಇಲ್ಲ. ಜಹಾಂಗೀರ ಚಕ್ರವರ್ತಿ ತಮ್ಮ ಪೂರ್ವಜರಾದ ನಸೀರುದ್ದೀನ ಖಿಲಜಿ ಗೋರಿಗೆ ಹೋಗಿ ಬಲವಾಗಿ ಒದ್ದರಂತೆ. ಅಷ್ಟೇ ಅಲ್ಲ, ತನ್ನ ತಂದೆಯ ಸಂಬಂಧಿಕರ ಗೋರಿಗಳನ್ನೆಲ್ಲಾ ಭಗ್ನಗೊಳಿಸಿ ಅಲ್ಲಿಯ ಅಸ್ತಿಪಂಜರಗಳನ್ನು ನದಿಗೆ ಹಾಕಿಸಿಬಿಟ್ಟರು. ಮೊಗಲ್ ಮನೆತನದಲ್ಲಿ ಹಿರಿಯರಿಗೆ ಕಿರಿಯರು ಕೊಟ್ಟ ಗೌರವ ಇದು. ಶಹಾಜಹಾನ ಕೊನೆಗೆ ಸೆರೆಮನೆಯಲ್ಲಿಯೇ ಸತ್ತರು. ಹೆಂಡತಿಯೊಂದಿಗೆ ಚಿರನಿದ್ರೆಗೈಯಲು ಅವರು ತಾಜ್ ಮಹಲ್ ಗೋರಿಗೆ ಹೋದರು. ಮುಂದೆ ಜಹನಾರಾ ಕೂಡ ಅಲ್ಲಿಗೇ ಹೋದಳು.

ಮದುವೆಯ ಹಂಬಲದಿಂದ ತನ್ನ ಪೂರ್ಣ ಆಯುಷ್ಯವನ್ನೇ ಬಲಿಕೊಟ್ಟ ಜಹನಾರಾ ಸತ್ತಮೇಲೆ, ಔರಂಗಜೇಬನ ಕರಾಳ ದಿನಗಳು ಪ್ರಾರಂಭವಾದವು.

ಅಂತಲೇ ಜಹನಾರಾ ತನ್ನ ಗೋರಿಯ ಮೇಲೆ ಯಾವ ಆವರಣವನ್ನೂ ಹಾಕಬಾರದೆಂದು ಹೇಳಿದ್ದಳಲ್ಲದೆ, ಸುತ್ತಲೂ ಬೆಳೆದ ಹಸಿರು ಹುಲ್ಲೇ ಸಾಕೆಂದು ವಿಧಿಸಿದ್ದಳು.

ಜಹಾನಾರಾ ಕೊನೆಗೆ ಬರೆಯುತ್ತ "ನನ್ನ ಆತ್ಮವನ್ನು ಬಿಟ್ಟು ನನಗೆ ಬೇರಾವ ವಿಶ್ವಾಸಿಕರೂ ಕಾಣಲಿಲ್ಲ. ನನ್ನ ಹೃದಯದ ಮೇಲೆ ಇಟ್ಟಷ್ಟು ನಂಬಿಕೆಯನ್ನು ನಾನಾರಲ್ಲಿಯೂ ಇಡಲಿಲ್ಲ...ನನ್ನ ಗೋರಿ ಭಗ್ನವಾದಾಗ ಇದನ್ನು ಯಾರಾದರೂ ನೋಡಬಹುದು....ನೋಡಲಿ....!" ಎಂದಿದ್ದಾಳೆ. ಆದರೆ ಜಹನಾರಳ ಗೋರಿ ಇನ್ನೂ ಇದೆ....ಅವಳ ಈ ದುಃಖದ ಮಾತುಗಳು ಗೋರಿಯಲ್ಲಿ ಅವಿತುಕೊಂಡಿದ್ದರೂ ಗೋರಿ ತನ್ನನ್ನು ನೋಡಲು ಬಂದವರಿಗೆಲ್ಲಾ ಜಹನಾರಾಳ ಗೋರಿನ ಕಥೆಯನ್ನು ಹೇಳುತ್ತದೆ.

(ಮೊಗಲ ಇತಿಹಾಸ ಪುಟಗಳಿಂದ)



ಸಂಪಾದಕರು!


ಸಂಪಾದಕ
"ನೀವು ಬರೆದು ಕಳುಹಿಸಿದ್ದು...'ಕಸದ ಬುಟ್ಟಿ'...
ಹಾಸ್ಯ ಲೇಖನವೇ? !!



ಮಿಂಚು ಹಳೇ
ಪತ್ರಿಕೆ ಅಂಗಡಿ
"ಹಿಂದೆ ಅವರು 'ಮಿಂಚು' ವಾರಪತ್ರಿಕೆಯ
ವ್ಯವಸ್ಥಾಪಕ ಸಂಪಾದಕರಾಗಿದ್ದರು...!"



ಸಂಪಾದಕ
"ನಾನು...ಆದರ್ಶ ಮಹಿಳಾ ಮಂಡಳಿಯ ಅಧ್ಯಕ್ಷೆ..
ನಿಮ್ಮನ್ನು ವಾರ್ಷಿಕೋತ್ಸವದ ಅಧ್ಯಕ್ಷತೆಗೆ
ಆಹ್ವಾನಿಸಲು ಬಂದಿದ್ದೇನೆ...."


ಸಂಪಾದಕ
"ಪತ್ರಿಕೆಯ ಪ್ರಸಾರದ 'ಬ್ಲೋ ಅಪ್'
ಗಾಗಿ ಸಲಹೆ ಕೇಳಿದ್ದಿರಲ್ಲಾ....
ಪತ್ರಿಕೆಯ ಮಧ್ಯಪುಟದಲ್ಲಿ ಇಂಥಾ
ಚಿತ್ರಗಳ 'ಬ್ಲೋ ಅಪ್' ಹಾಕಬೇಕು..!"
ಪ್ರೇಂಕುಮಾರ್

ಪ್ರೇಂಕುಮಾರ್


ನಾನು ನಿನ್ನನ್ನ ತುಂಬಾ ತುಂಬಾ ತುಂಬ ಪ್ರೀತಿಸ್ತೀನಿ ಡಿಯರ್...








ರಾಜ್ಯೋತ್ಸವ ಸೂಪರ್ ಬಂಪರ್ ಡ್ರಾ

ಬಂಪರ್ ಬಹುಮಾನ

ರೂ. 33,00,000



ಪ್ರತಿ ಟಿಕೆಟ್ಟಿಗೆ ರೂ. 5

ಡ್ರಾ 15-11-85


ಕೇವಲ 5 ರೂಪಾಯಿಗೆ ಕರ್ನಾಟಕ ರಾಜ್ಯ ಲಾಟರಿ
ಪ್ರಪ್ರಥಮ ಬಾರಿಗೆ ರೂ. 33 ಲಕ್ಷ ಬಂಪರ್ ಬಹುಮಾನ ನೀಡುತ್ತದೆ.

ಬನ್ನಿ, ಅತ್ಯಂತ ವಿಶ್ವಾಸಾರ್ಹವಾದ ಈ ಲಾಟರಿಯಲ್ಲಿ
ಅದೃಷ್ಟ ನಿಮ್ಮದಾಗಬಹುದು.

ಮೂರು ಪ್ರಥಮ ಬಹುಮಾನಗಳು : ತಲಾ ರೂ. 1,00,000
ಮೂರು ದ್ವಿತೀಯ ಬಹುಮಾನಗಳು : ತಲಾ ರೂ. 50,000
ಆರು ತೃತೀಯ ಬಹುಮಾನಗಳು : ತಲಾ ರೂ. 10,000
ರೂ. 52,20,000 ಮೌಲ್ಯದ 2,50,195 ಬಹುಮಾನಗಳು.

ಪ್ರತಿ 10 ಟಿಕೆಟ್ಟುಗಳಿಗೆ ಒಂದು ಬಹುಮಾನ ಗ್ಯಾರಂಟಿ.


ಕರ್ನಾಟಕ ರಾಜ್ಯ ಲಾಟರಿ



ತ್ವರೆ ಮಾಡಿ! ಇಂದೇ ನಿಮ್ಮ ಟಿಕೆಟ್ಟುಗಳನ್ನು ಕೊಳ್ಳಿರಿ.

ಮಾರಾಟಗಾರರು :
ಎಂಎಸ್‌ಐಎಲ್
ಮೈಸೂರ್ ಸೇಲ್ಸ್
ಇಂಟರ್‌ನ್ಯಾಷನಲ್ ಲಿಮಿಟೆಡ್.

KSL/102/Kan



ಭಾರತದ ಕ್ರಿಕೆಟ್ ಸಾಧನೆಗೆ ಕರ್ನಾಟಕದ ಕೊಡುಗೆ

ಚಿತ್ರಗಳು: ಗೋವರ್ಧನ್ ಫೋಟೋಸ್ ಮತ್ತು ಮುಸ್ತಾಕ್ ಅಹ್ಮದ್

ವಾಮನ ಕರಗುದರಿ

ಕ್ರಿಕೆಟ್ ಪ್ರಪಂಚದಲ್ಲಿ ಕರ್ನಾಟಕ ರಾಜ್ಯಕ್ಕೆ ತನ್ನದೇ ಆದ ಸ್ಥಾನವಿದೆ. ಸುಮಾರು ಏಳೂವರೆ ದಶಕಗಳ ಹಿಂದೆಯೇ ನಮ್ಮ ರಾಜ್ಯದ ಆಟಗಾರರು ಅಂತಾರಾಷ್ಟ್ರೀಯ ಖ್ಯಾತಿ ಪಡೆದಿದ್ದರು. 1911 ರಲ್ಲಿ ಕರ್ನಾಟಕದ (ಆಗಿನ ಮೈಸೂರು) ಬಿ. ಜಯರಾಮ್ ಎಂಬುವರು ಇಂಡಿಯಾ ಇಲೆವನ್ ಸಂಘದಲ್ಲಿ ಒಬ್ಬರಾಗಿ ಇಂಗ್ಲೆಂಡ್ ಕೌಂಟಿ ಸಂಘಗಳ ವಿರುದ್ಧ ಆಡಿದರು. ಅಂದಿನಿಂದ ಇಲ್ಲಿಯವರೆಗೆ ನಮ್ಮ ರಾಜ್ಯವು ಈ ವಿಶ್ವ ವಿಖ್ಯಾತ ಪಂದ್ಯದಲ್ಲಿ ಬಹುದೂರ ಸಾಗಿ ಬಂದಿದೆಯಲ್ಲದೇ ಅವಿಸ್ಮರಣೀಯ ಆಟದ ಕೌಶಲ್ಯವನ್ನೂ ಪ್ರದರ್ಶಿಸುತ್ತ ಬಂದಿದೆ.

ನಮ್ಮ ರಾಜ್ಯದವರೇ ಆದ ಕಸ್ತೂರಿ ರಂಗನ್, ಬಿ. ಸಿ. ಅಳ್ವಾ, ವಿ. ಸುಬ್ರಮಣಿಯಂ, ಬುದಿ ಕುಂದೆರನ್ ಎ. ಎಸ್. ಕೃಷ್ಣಸ್ವಾಮಿ ಇವರೆಲ್ಲರೂ ರಾಜ್ಯದ ಈಗಿನ ಕ್ರಿಕೆಟ್ ಶಕ್ತಿಗೆ ಭದ್ರವಾದ ಬುನಾದಿ ಹಾಕಿದರು ಎಂದರೆ ತಪ್ಪಾಗಲಾರದು.

ಭಾರತವು 1932 ರಲ್ಲಿ ತನ್ನ ಪ್ರಥಮ ನಿರ್ಣಾಯಕ ಪಂದ್ಯವನ್ನು ಇಂಗ್ಲೆಂಡ್ ತಂಡದೊಂದಿಗೆ ಆಡಿತು. ಆದರೆ ನಿರ್ಣಾಯಕ ಪಂದ್ಯಗಳಲ್ಲಿ ಪ್ರಥಮ ವಿಜಯವನ್ನು ಪಡೆಯಲು ಇಪ್ಪತ್ತು ವರ್ಷ ಕಾಯಬೇಕಾಯಿತು. 1952ರಲ್ಲಿ ಇಂಗ್ಲೆಂಡ್ ವಿರುದ್ಧವೇ ಮದ್ರಾಸ್‌ನಲ್ಲಿಯ ಐದನೇ ನಿರ್ಣಾಯಕ ಪಂದ್ಯವನ್ನು ಒಂದು ಇನ್ನಿಂಗ್ಸ್ ಹಾಗೂ 8 ಓಟಗಳಿಂದ ಗೆದ್ದಿತು. ವಿಜಯ ಹಜಾರೆಯವರ ನೇತೃತ್ವದಲ್ಲಿ ಈ ವಿಜಯ ಪತಾಕೆಯನ್ನು ಹಾರಿಸಲಾಯಿತು.

ಆದರೆ ಇಂಗ್ಲೆಂಡ್ ತಂಡವನ್ನು ಇಂಗ್ಲೆಂಡಿನ ನೆಲದ ಮೇಲೆಯೇ ಹಣಿದು ವಿಜಯ ಸಾಧಿಸಿದ ಶ್ರೇಯಸ್ಸು ನಾಯಕ ಅಜಿತ್ ವಾಡೇಕರ್ ಅವರಿಗೇ ಸಲ್ಲುವದು. ಅನಂತರ 1971ರಲ್ಲಿ (ಪೋರ್ಟ್ ಆಫ್ ಸ್ಪೇನ್) ವೆಸ್ಟ್ಇಂಡೀಸ್‌ನಲ್ಲಿಯ ಎರಡನೆ ನಿರ್ಣಾಯಕ ಪಂದ್ಯದಲ್ಲಿ ಭಾರತ ವೆಸ್ಟ್ಇಂಡೀಸ್ ತಂಡದ ವಿರುದ್ಧ ಪಡೆದ ಪ್ರಥಮ ವಿಜಯ.

ಈ ಎರಡೂ ವಿಜಯಕ್ಕೆ ಕಾರಣರಾದ




ಜಿ. ಆರ್. ವಿಶ್ವನಾಥ್

ಜಿ. ಆರ್ ವಿಶ್ವನಾಥ್, ಬಿ. ಎಸ್. ಚಂದ್ರಶೇಖರ್, ಇ. ಎ. ಎಸ್. ಪ್ರಸನ್ನ ಹಾಗೂ ಸೈಯ್ಯದ್ ಕಿರ್ಮಾನಿ ಕರ್ನಾಟಕದವರೇ ಆಗಿದ್ದು ಈ ನಾಲ್ವರಿಂದ ಭಾರತದ ಕ್ರಿಕೆಟ್ ತಂಡಕ್ಕೆ ಹೆಚ್ಚಿನ ಗೌರವ ದೊರೆಯಿತು. ನಂತರ ರಾಜ್ಯಕ್ಕೆ ಇವರ ಅವಿತರ ಎರಡು ಮೂರು ದಶಕಗಳು ರಾಜ್ಯಕ್ಕೆ ಕ್ರಿಕೆಟ್ ಸೇವೆ ಶ್ಲಾಘನೀಯವಾದುದು.

ಇವರೆಲ್ಲರೂ ಈಗ ಭಾರತದ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದ್ದರೂ ಇವರ ಕ್ರಿಕೆಟ್ ಸಾಧನೆಯನ್ನು ಜಗತ್ತಿನ ವಿವಿಧ ಕ್ರಿಕೆಟ್ ರಾಷ್ಟ್ರಗಳು ಮೆಲುಕು ಹಾಕುತ್ತಿವೆ.

ಕಳೆದ 50 ವರ್ಷಗಳಿಂದ ರಣಜೀ ಮತ್ತು ಇನ್ನಿತರ ರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ಆಡುತ್ತ ಬಂದಿರುವ ನಮ್ಮ ರಾಜ್ಯ ಬಹುಮುಖ ಪ್ರತಿಭೆಯನ್ನು ತೋರಿದೆಯಲ್ಲದೇ ಭಾರತ ಕ್ರಿಕೆಟ್ ತಂಡಕ್ಕೆ ಪ್ರತಿಭೆಯ ಹೊಸ ಮುಖಗಳನ್ನು ಒದಗಿಸುತ್ತ ಬಂದಿದೆ. ಇವರಲ್ಲಿ ಪ್ರಮುಖರಾದವರು ರೋಜರ್ ಬಿನ್ನಿ, ರಘುರಾಮುಭಟ್ ಮತ್ತು ಇತ್ತೀಚಿಗೆ ಒಂದು ದಿನದ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಂದ ಖ್ಯಾತಿಗಳಿಸಿರುವ ಹಾಗೂ ಕರ್ನಾಟಕದ ಹಿಂದಿನ ಪ್ರಸಿದ್ಧ ವಿಕೆಟ್ ಕೀಪರ್ ಸಯ್ಯದ್ ಕಿರ್ಮಾನಿಯವರ ಪ್ರತಿಭೆಯುಳ್ಳ ಎಸ್. ವಿಶ್ವನಾಥ್. ಇತ್ತೀಚಿನ ಬೆನ್ಸನ್ ಮತ್ತು ಹೆಡ್ಜಸ್ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ತೋರಿದ ಪ್ರತಿಭೆಯನ್ನು ಅವಲೋಕಿಸಿದರೆ ಇನ್ನೂ ತರುಣರಾಗಿರುವ ಎಸ್. ವಿಶ್ವನಾಥ್ ಅವರಿಂದ ಭಾರತ ಕ್ರಿಕೆಟ್ ತಂಡಕ್ಕೆ ಭವಿಷ್ಯದಲ್ಲಿ ಅಮೋಘ ಸೇವೆ ದೊರೆಯುವದು ಎಂಬುದರಲ್ಲಿ ಸಂದೇಹವಿಲ್ಲ.

1934ರಲ್ಲಿ ಪ್ರಾರಂಭವಾದ ರಣಜೀ ಟ್ರೋಫಿ ಚಾಂಪಿಯನ್‌ಶಿಪ್‌ನಲ್ಲಿ ಅದೇ ವರ್ಷದಿಂದ ಭಾಗವಹಿಸುತ್ತಿರುವ ನಮ್ಮ ರಾಜ್ಯ ಇಲ್ಲಿಯವರೆಗೆ ಮೂರು ಸಲ ಈ ಚಾಂಪಿಯನ್‌ಶಿಪ್ ಗೆದ್ದುಕೊಂಡಿದ್ದು ನಮ್ಮ ರಾಜ್ಯದ ಆಟಗಾರರು ಅದ್ಭುತ ಸಾಧನೆಗಳನ್ನು ಪ್ರದರ್ಶಿಸುತ್ತ ಬಂದಿರುವರು.



ಬಿ. ಎಸ್. ಚಂದ್ರಶೇಖರ್

1993–74ರಲ್ಲಿ ರಾಜಸ್ಥಾನ ತಂಡದ ವಿರುದ್ಧ ಪ್ರಥಮ ಬಾರಿ ರಣಜೀ ಚಾಂಪಿಯನ್‌ಶಿಪ್ ಗೆದ್ದುಕೊಂಡಿತು. ಈ ವಿಜಯವು ಈ. ಎ. ಎಸ್. ಪ್ರಸನ್ನ ಅವರ ನಾಯಕತ್ವದಲ್ಲಿ ಪ್ರಾಪ್ತವಾಯಿತು.



ಇ. ಎ. ಎಸ್. ಪ್ರಸನ್ನ

ನಂತರ 1977–78ರಲ್ಲಿ ಉತ್ತರ ಪ್ರದೇಶದ ವಿರುದ್ಧ ಈ ಚಾಂಪಿಯನ್‌ಶಿಪ್‌ನ ಅಂತಿಮ ಪಂದ್ಯದಲ್ಲಿ ಪ್ರಸನ್ನ ಅವರ ನಾಯಕತ್ವದಲ್ಲಿಯೇ ನಮ್ಮ ರಾಜ್ಯ ಪ್ರಶಸ್ತಿ ಗಳಿಸಿತು.

ಇತ್ತೀಚೆಗೆ ಅಂದರೆ 1982–83 ರಲ್ಲಿ ಬ್ರಿಜೇಶ್‌ಪಟೇಲ್ ಅವರ ನಾಯಕತ್ವದಲ್ಲಿ ದೇಶದ ರಾಜ್ಯಗಳಲ್ಲಿಯೇ ಬಲಾಢ್ಯ ತಂಡವಾದ ಮುಂಬಯಿ ವಿರುದ್ಧ ಪ್ರಶಸ್ತಿ ಗಳಿಸಿಕೊಂಡದ್ದು ಇದರ ಕೀರ್ತಿ ಕಿರೀಟದಲ್ಲಿ ಹೊಸದೊಂದು ತುರಾಯಿ.

ನಮ್ಮ ರಾಜ್ಯದ ಕೆಲವು ಕ್ರಿಕೆಟ್ ಪಟುಗಳು ಈ ರಣಜೀ ಟ್ರೋಫಿ ಚಾಂಪಿಯನ್‌ಶಿಪ್‌ನಲ್ಲಿ ಇಲ್ಲಿವರೆಗೆ ಸಾಧಿಸಿದ ಕೆಲವು ಸಾಧನೆಗಳು ಇನ್ನೂ ಮೆಲುಕು ಹಾಕುವಂತಿವೆ. 1967–68 ರಲ್ಲಿ ಜಿ. ಆರ್. ವಿಶ್ವನಾಥ್ ಆಂಧ್ರ ವಿರುದ್ಧದ ಪಂದ್ಯದಲ್ಲಿ ದ್ವಿಶತಕ ಬಾರಿಸಿದ್ದು ಹಾಗೂ ರೋಜರ್ ಬಿನ್ನಿ ಮತ್ತು ಸಂಜಯ್ ದೇಸಾಯ್ ಕೇರಳ ವಿರುದ್ಧದ 1977 ರ ಪಂದ್ಯದಲ್ಲಿ ಎರಡನೆ ವಿಕೆಟ್ ಜೊತೆ ಆಟದಲ್ಲಿ 451 ರನ್‌ಗಳನ್ನು ಹೊಡೆದಿದ್ದು ಅಲ್ಲದೇ ಬಿ. ಎಸ್ ಚಂದ್ರಶೇಖರ್ ಮತ್ತು ರಘುರಾಂಭಟ್ 40 ಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಕಬಳಿಸಿದ್ದು ಇವೆಲ್ಲವೂ ನಮ್ಮ ರಾಜ್ಯದ ಕ್ರಿಕೆಟ್ ಪ್ರತಿಭೆಗೆ ಶಿಖರದಂತಿವೆ.




"ಇದುವರೆಗೆ ವಾರಕ್ಕೆ ಆರುದಿನ ನಿದ್ರೆ ಮಾಡ್ತಾ ಇದ್ರು.. ಇನ್ಮುಂದೆ ಒಂದು ದಿನ ನಿದ್ರೆ ನಷ್ಟ ಮಾಡಿಕೊಳ್ತಾರೆ...."




"ಆರುದಿನ ಕೆಲಸ ಇದ್ದಾಗ ಸ್ವಲ್ಪ ಸಂತೋಷವಾಗಿದ್ದೆ, ಈಗ ಒಂದು ದಿನ ಹೆಚ್ಚಿಗೆ ಕಷ್ಟ ಅನುಭವಿಸಬೇಕಾಗಿದೆ.."

ಆರು ದಿನ ಕೆಲಸ

— ವಿ.ಆರ್.ಸಿ.ಶೇಖರ್





ಬ್ರಿಜೇಶ್ ಪಟೇಲ್

ರಭಸದ ಬ್ಯಾಟಿಂಗ್‌ನಲ್ಲಿ ಹೆಸರಾದ ಬ್ರಿಜೇಶ್ ಪಟೇಲ್ ರಣಜೀ ಹಿರೋ ಎನಿಸಿಕೊಂಡಿರುವರಲ್ಲದೇ ಅವರ ಬ್ಯಾಟಿಂಗ್ ಸಾಧನೆ ಈ ರೀತಿ ಇದೆ. 1978-79ರಲ್ಲಿ ಕೇರಳ ವಿರುದ್ಧ ಶತಕ. ಅವರು ಅದೇ ವರ್ಷ ಆಂಧ್ರ ವಿರುದ್ಧ 133, ಬರೋಡದ ವಿರುದ್ಧ 216, ದಿಲ್ಲಿ ತಂಡದ ವಿರುದ್ಧ 166 ರನ್‌ಗಳನ್ನು ಬಾರಿಸಿ ಅದ್ಭುತ ಸಾಧನೆ ಗೈದಿದ್ದಾರೆ.

ರಣಜೀ ಟ್ರೋಫಿ ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯದ ಕ್ರಿಕೆಟ್ ಪ್ರತಿಭೆಗೆ ಸುಧಾಕರರಾವ್, ವಿ. ಕುಮಾರ್, ರಘುರಾಮ ಭಟ್ ಮುಂತಾದವರೂ ಕಾರಣರಾಗಿರುವರಲ್ಲದೇ ಪ್ರತಿಭೆಯುಳ್ಳ ಅನೇಕ-ನವ ತರುಣರು ರಾಜ್ಯದ ಕ್ರಿಕೆಟ್ ಶಕ್ತಿಯನ್ನು ವರ್ಧಿಸಲು ಮುಂದೆ ಬರುತ್ತಿದ್ದಾರೆ.

ಜಾಗತಿಕ ಬಲಾಢ್ಯ ಕ್ರಿಕೆಟ್ ತಂಡ ಎಂಬ ಕೀರ್ತಿಗಳಿಸಿರುವ ಭಾರತ ತಂಡಕ್ಕೆ ನಮ್ಮ ರಾಜ್ಯ ಇಲ್ಲಿವರೆಗೆ ಪಂದ್ಯದ ಎಲ್ಲ ಕ್ಷೇತ್ರಗಳಿಗೂ ತನ್ನ ಪ್ರತಿನಿಧಿಯನ್ನು ಕೊಡಮಾಡಿದೆ. ಬೌಲಿಂಗ್‌ನಲ್ಲಿ ಇ.ಎ.ಎಸ್. ಪ್ರಸನ್ನ, ಚಂದ್ರಶೇಖರ್, ರೋಜರ್ ಬಿನ್ನಿ, ರಘುರಾಮ್‌ಭಟ್ ಮುಂತಾದವರಾದರೆ, (ಇವರು ಕೆಲವು ಸಲ ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದಾರೆ) ವಿಕೆಟ್ ಕೀಪಿಂಗ್‌ನಲ್ಲಿ ಜಾಗತಿಕ ಖ್ಯಾತಿ ಗಳಿಸಿರುವ ಸಯ್ಯದ್ ಕಿರ್ಮಾನಿ ಹಾಗೂ ಸದಾನಂದ ವಿಶ್ವನಾಥ್ (ಕಿರ್ಮಾನಿ ಬ್ಯಾಟಿಂಗ್‌ದಲ್ಲಿಯೂ ಮಿಂಚಿರುವರಲ್ಲದೇ ಶತಕ ಹೊಡೆದ ಕೀರ್ತಿಯೂ ಇವರಿಗಿದೆ) ಬ್ಯಾಟಿಂಗ್‌ನಲ್ಲಿ ಅನೇಕ ದಾಖಲೆಗಳನ್ನು ಸ್ಥಾಪಿಸಿರುವ ಜಿ. ಆರ್. ವಿಶ್ವನಾಥ, ಹೀಗೆ ನಮ್ಮ ರಾಷ್ಟ್ರವು ಕ್ರಿಕೆಟ್ ಕ್ಷೇತ್ರದಲ್ಲಿ ಜಾಗತಿಕ ಖ್ಯಾತಿ ಪಡೆಯಲು ನಮ್ಮ ರಾಜ್ಯವು ನೀಡಿದ ಕೊಡುಗೆ ಹೆಮ್ಮೆಯುಂಟು ಮಾಡುವಂಥದು.

ಈ ಕ್ರೀಡಾಪಟುಗಳ ಬಗ್ಗೆ ಕರ್ನಾಟಕದವರಷ್ಟೇ ಏಕೆ, ದೇಶವಿದೇಶದವರೂ ಅರಿತಿರುವದರಿಂದ ಅವರ ಸಾಧನೆಯ ವಿವರ



ಸಯ್ಯದ್ ಕಿರ್ಮಾನಿ


ಇಲ್ಲಿ ಅಷ್ಟೊಂದು ಅವಶ್ಯಕ ಅನಿಸುವದಿಲ್ಲ. ಇನ್ನುಳಿದ ಕರ್ನಾಟಕದ ಕ್ರಿಕೆಟ್ ಶಿರೋಮಣಿಗಳ ಸಾಧನೆಯ ಕಿರು ಪರಿಚಯವು ಪ್ರಸ್ತುತವಾಗಿದೆ.

ರೋಜರ್ ಮೈಕೇಲ್ ಬಿನ್ನಿ

ಮೂವತ್ತು ವರ್ಷದ ಇವರು ಕರ್ನಾಟಕದವರಾಗಿದ್ದು 1974-75 ರಲ್ಲಿ ರಣಜಿ ಕ್ರಿಕೆಟ್‌ನಲ್ಲಿ ಕರ್ನಾಟಕ ತಂಡದ ಶ್ರೇಯಸ್ಸಿಗೆ ಕಾರಣರಾದರಲ್ಲದೆ 1977-78 ರಲ್ಲಿ ಕೇರಳ ವಿರುದ್ಧದ ರಣಜೀ ಟ್ರೋಫಿ ಕ್ರಿಕೆಟ್ ಪಂದ್ಯವಲ್ಲಿ ಕರ್ನಾಟಕದವರೇ ಆದ ಸಂಜಯ್ ದೇಸಾಯಿ ಅವರೊಂದಿಗೆ ಪ್ರಥಮ ವಿಕೆಟ್ ಜೊತೆ ಆಟದಲ್ಲಿ 455 ರನ್ನುಗಳನ್ನ ಬಾರಿಸಿ ವಿಕ್ರಮ ಸಾಧಿಸಿದರು. ಇವರಲ್ಲಿ ಇವರಪಾಲು ಅಜೇಯ 211 ಓಟಗಳು. ಭಾರತ ತಂಡದಲ್ಲಿ ಸಧ್ಯಕ್ಕೆ ವೇಗದ ಬೌಲರು ಆಗಿ ಕಾರ್ಯನಿರ್ವಹಿಸುತ್ತಿರುವ ಇವರು ಉತ್ತಮ ಆಲ್‌ರೌಂಡರ್ ಆಗಿದ್ದು ಅತ್ಯುತ್ತಮ ಕ್ಷೇತ್ರ ರಕ್ಷಕರೆಂದೂ ಹೆಸರು ಪಡೆದಿರುವರು. ಭಾರತ ತಂಡದ ವಿಶ್ವಕಪ್ ವಿಜಯದಲ್ಲಿ ಇವರದು ಗಣನೀಯ ಪಾತ್ರ. ಒಟ್ಟು 18 ವಿಕೆಟ್ಟು ದೊರಕಿಸಿದ ಇವರು ಇದೇ ಟೂರ್ನಿಯ ಪಂದ್ಯ ಒಂದರಲ್ಲಿ 29 ಓಟಗಳಿಗೆ ನಾಲ್ಕು ವಿಕೆಟ್ ಬಲಿ ತೆಗೆದುಕೊಂಡದ್ದು ಇವರ ಹೆಗ್ಗಳಿಕೆ ನಂತರ ಆಸ್ಟ್ರೇಲಿಯದಲ್ಲಿ ನಡೆದ ಬೆನ್ಸನ್ ಮತ್ತು ಹೆಜಸ್ ಒಂದು ದಿನದ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯಲ್ಲಿಯೂ ಇವರ ಸಾಧನೆ ಶ್ಲಾಘನೀಯ.

ಸದಾನಂದ ವಿಶ್ವನಾಥ

ಇತ್ತೀಚಿನ ಭಾರತ-ಇಂಗ್ಲೆಂಡ್ ಸರಣಿಯಲ್ಲಿಯ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯದಿಂದ ಜಾಗತಿಕ ಕ್ರಿಕೆಟ್ ಕ್ಷೇತ್ರದಲ್ಲಿ ಪ್ರವೇಶಿಸಿದ ಇವರು 29-11-1962 ರಂದು ಬೆಂಗಳೂರಿನಲ್ಲಿ ಜನಿಸಿದರು. ಸಯ್ಯದ್ ಕಿರ್ಮಾನಿಯವರ ಸ್ಥಾನವನ್ನು



ಎಸ್. ವಿಶ್ವನಾಥ್

ಶಾಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಉಚಿತ!

ರಾಜ್ಯದ ಲಕ್ಷಾಂತರ ಬಡ ಕುಟುಂಬಗಳಿಗೆ ತಮ್ಮ ಮಕ್ಕಳ ಶಿಕ್ಷಣದ ವೆಚ್ಚವನ್ನು ನಿರ್ವಹಿಸುವುದು ಕಷ್ಟದ ಸಂಗತಿ. ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಉಚಿತವಾಗಿ ಹಂಚುವ ರಾಜ್ಯ ಸರಕಾರದ ಕ್ರಮ ಇಂತಹ ಕುಟುಂಬಗಳಿಗೊಂದು ಸಹಾಯ: ಹೆಚ್ಚು ಹೆಚ್ಚು ಮಕ್ಕಳು ಶಾಲೆಗೆ ಸೇರಿ ವಿದ್ಯಾವಂತರಾಗಲು ಒಂದು ಉತ್ತೇಜನ.

ಇನ್ನು ಮೇಲೆ ಎಲ್ಲಾ ಸರಕಾರಿ ಶಾಲೆಗಳಲ್ಲಿ ಒಂದರಿಂದ ಏಳನೇ ತರಗತಿಯ ಎಲ್ಲಾ ಮಕ್ಕಳಿಗೆ ಪ್ರತಿ ವರ್ಷವೂ ಪಠ್ಯ ಪುಸ್ತಕಗಳನ್ನು ಉಚಿತವಾಗಿ ಹಂಚಲಾಗುವುದು. ಬೆಂಗಳೂರು ನಗರ ಪಾಲಿಕೆಯ ಆಡಳಿತದಲ್ಲಿರುವ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳು ಹಾಗೂ ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಸಹ ಈ ಸೌಲಭ್ಯಕ್ಕೆ ಅರ್ಹರು.

ಜ್ಞಾನಾರ್ಜನೆಗೆ ಸಹಾಯ ಮಾಡುವ ಈ ವಿಶಿಷ್ಟ ಯೋಜನೆಗೆ ಕರ್ನಾಟಕ ಸರಕಾರ 3½ ಕೋಟಿ ರೂಪಾಯಿ ವೆಚ್ಚ ಮಾಡಲಿದೆ. ಇದರಿಂದ ಸುಮಾರು 48 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ನೆರವು.

ರಾಜ್ಯ ಸರಕಾರ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿದೆ ಏಕೆಂದರೆ, ಉತ್ತಮ ಶಿಕ್ಷಣದಿಂದಲೇ ನಮ್ಮ ಮಕ್ಕಳ ಭವಿಷ್ಯ ಉತ್ತಮವಾಗುವುದು.

ಈ ಯೋಜನೆ ಈ ವರ್ಷದಿಂದಲೇ, ಈ ದಿನದಿಂದಲೇ ಪ್ರಾರಂಭ.

ತಾರೀಖು 8.6.85 ರಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಉಚಿತ ಪಠ್ಯ ಪುಸ್ತಕದ ಯೋಜನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ರಾಮಕೃಷ್ಣ ಹೆಗಡೆ ಅವರು ಉದ್ಘಾಟಿಸಲಿದ್ದಾರೆ.




ಕರ್ನಾಟಕ ವಾರ್ತೆ


ಕರ್ನಾಟಕ ಸರ್ಕಾರ—ಜನರ ಬದುಕು ಹಸನಾಗಿಸಲು ಎಡೆಬಿಡದ ಯತ್ನ

ತುಂಬಿರುವ ವಿಶ್ವನಾಥ್ ಇತ್ತೀಚಿನ ಜಿನ್ನಾ ಮತ್ತು ಹೆಜೆಸ್ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಅದ್ಭುತ ವಿಕೆಟ್ ಕೀಪಿಂಗ್ ಮಾಡಿ ಭಾರತದ ವಿಜಯಕ್ಕೆ ಕಾರಣರಾದರು. ಇತ್ತೀಚಿನ ಭಾರತದ ಶ್ರೀಲಂಕಾ ಕ್ರಿಕೆಟ್ ಪ್ರವಾಸದಲ್ಲಿ ಟೆಸ್ಟ್ ಜೀವನ ಪ್ರಾರಂಭಿಸಿರುವ ಇವರು ಕರ್ನಾಟಕ ತಂಡದ ಪ್ರಾರಂಭಿಕ ಬ್ಯಾಟ್ಸ್‌ಮನ್ ಕೂಡಾ ಆಗಿರುವರು. ಇವರು, ಭಾರತ ತಂಡದ ಭವಿಷ್ಯತ್ತಿನ ಒಳ್ಳೆಯ ಭರವಸೆದಾಯಕ ಆಸ್ತಿ.

ಇಂದು ವಿಶ್ವದ 22ಕ್ಕೂ ಹೆಚ್ಚು ದೇಶಗಳಲ್ಲಿ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿರುವ ಕ್ರಿಕೆಟ್ ಕ್ಷೇತ್ರದ ಜಾಗತಿಕ ತಂಡಗಳಲ್ಲಿ ಅಗ್ರಮಾನ್ಯ ಸ್ಥಾನಗಳಿಸಿರುವ ಭಾರತ ತಂಡಕ್ಕೆ ನಮ್ಮ ರಾಜ್ಯದ ಇಲ್ಲಿವರೆಗಿನ ಕಾಣಿಕೆ ಅತ್ಯಮೂಲ್ಯವಾಗಿದೆ. ಭವಿಷ್ಯದಲ್ಲಿ ಇವಕ್ಕೂ ಹೆಚ್ಚಿನ ಕಾಣಿಕೆಯನ್ನು ಕರ್ನಾಟಕದ ನವ ತರುಣರು ನೀಡುವರೆಂಬ ಭರವಸೆ ಇದೆ. †



ಎಮ್ಮೆ ಸಾಲ



ಸಾಲವನ್ನು ಕೊಂಬಾಗ ಹಾಲು ಬಾನುಂಡಂತೆ ಸಾಲಿಗನು ಬಂದು ಕೇಳ್ವಾಗ ಕಿಬ್ಬದಿಯ ಕೀಲು ಮುರಿದಂತೆ' ಎಂದು ಸರ್ವಜ್ಞ ಹೇಳಿದಾಗ ಸಾಲ ಮೇಳಗಳು ಹುಟ್ಟಿದ್ದಿಲ್ಲ ಎಂಬುದು ಕೆಲವರ ಅಂಬೋಣ. ಒಂದು ವೇಳೆ ಈಗ ಸರ್ವಜ್ಞ ಹುಟ್ಟಿದ್ದರೆ ಏನನ್ನುತ್ತಿದ್ದ? "ಸಾಲವನು ಕೊಂಬಾಗ ಸಾಲೋಗರುಂಡಂತೆ, ಸಾಲದ ರಿಕವ್ಹರಿಗೆ ಹೋದವರ ಕಿಬ್ಬದಿಯ ಕೀಲು ಮುರಿಯುವವರು ಸರ್ವಜ್ಞ" ಎನ್ನುತ್ತಿರಬಹುದೆ? ಅದೇನೆ ಇರಲಿ. ಓದುಗರು ಕ್ಷಮಿಸಬೇಕು. ಈಗಾಗಲೇ ಎಮ್ಮೆ ಮತ್ತು ಸಾಲ ಈ ಎರಡು ಪದಗಳಿಂದ ಸೂಕ್ಷ್ಮರಾದ ತಾವು ವಿಷಯ ಪ್ರವೇಶವನ್ನು ಮಾಡಿರಬಹುದು ಅಂದರೆ ವಾಸನೆಯನ್ನು ಹಿಡಿಯಬಹುದು ಎಂಬ ನಂಬುಗೆ. ಇಲ್ಲಿ ವಾಸನೆ ಇದರ ಅರ್ಥ ಎಮ್ಮೆಯ ಸಗಣಿಯ ವಾಸನೆ ಅಥವಾ ಮೂತ್ರದ ವಾಸನೆ ಎಂದಲ್ಲ ಆದನ್ನು ಬುದ್ಧಿವಂತರಾದ ತಾವು ಈಗಾಗಲೇ ಗುರುತಿಸಿರಲಿಕ್ಕೆ ಸಾಕು. ಇರಲಿ, ಮುಂದೆ ಹೋಗೋಣ.

ಬ್ಯಾಂಕು ಮತ್ತು ಸಾಲ ಇವು ಎರಡು ಪರ್ಯಾಯ ಪದಗಳು. ಒಂದಕ್ಕೊಂದು ಹೊಂದಿಕೊಂಡು ಹೋಗುತ್ತವೆ. ಅಥವಾ ಪೂರಕವಾಗಿರುತ್ತವೆ. ಈ ಎರಡೂ ಪದಗಳನ್ನು ಹಿಮ್ಮುಖವಾಗಿ ಬಳಸಲಿ ಅಥವಾ ಮುಮ್ಮುಖವಾಗಿ ಬಳಸಲಿ ಒಂದೇ ಅರ್ಥವನ್ನು ಕೊಡುತ್ತವೆ. ಇಂಗ್ಲೀಷಿನಲ್ಲಿ ಬ್ಯಾಂಕ್ ಇದರ ಅರ್ಥ ದಂಡೆ ಎಂದಾಗುತ್ತದೆ. ಉದಾ–ರಿಜರ್ವ್ ಬ್ಯಾಂಕ್ (ನದಿಯ ದಂಡೆ) ನದಿಯಲ್ಲಿ ಮುಳುಗಿ ಕೊಚ್ಚಿಕೊಂಡು ಹೊರಟವನಿಗೆ "ದಂಡೆ ಸಿಕ್ಕರೆ" ಪಾರಾಗುತ್ತಾನೆ. ಆದರೆ ಇಲ್ಲಿ ಹಾಗಲ್ಲ. ಒಮ್ಮೆ ದಂಡೆಯಿಂದ ಜಾರಿ ಮುಳುಗಿ ಹೋದವ ಪಾರಾಗುತ್ತಾನೆ. ಮತ್ತೊಮ್ಮೆ ದಂಡೆಗೆ ಮುಖ ತೋರಿಸುವ ಇಚ್ಛೆಯನ್ನೇ ಮಾಡುವದಿಲ್ಲ. ಅಪ್ಪಿ ತಪ್ಪಿ ಒಮ್ಮೊಮ್ಮೆ ದಂಡೆಗೆ ಬಂದರೂ ಮತ್ತೆ ಮುಳುಗುವ

ತಯಾರಿಯಲ್ಲಿಯೇ ಇರುತ್ತಾನೆ. ಹಾಗಾದರೆ ತೇಲಿಸೋ ಇಲ್ಲಾ ಮುಳುಗಿಸೋ" ಎಂದು ಪುರಂದರದಾಸರು ಹಾಡಿದ್ದಾರಲ್ಲ ಎಂದು ನೀವು ಕೇಳಬಹುದು. ಅದಕ್ಕೆ ಕಾರಣ ಪುರಂದರದಾಸರೂ ತಮ್ಮ ಪೂರ್ವಾಶ್ರಮದಲ್ಲಿ ಲೇವಾದೇವಿ ವ್ಯವಹಾರವನ್ನು ಮಾಡಿದ್ದರು ಎಂಬುದನ್ನು ತಾವು ನೆನಪಿಡಬೇಕು.

ಈ ಸಂದರ್ಭದಲ್ಲಿ ತಮಗೆ ಖಂಡೆರಾಯನ ಪರಿಚಯವನ್ನು ಮಾಡಿಕೊಡಲಾಗುವದು.

ತಮಗೆ ಖಂಡೆರಾಯನ ಪರಿಚಯವಿರಬಹುದು- ಇಲ್ಲ ಎಂದರೆ ಖಂಡೆರಾಯ ಸಿಟ್ಟಿಗೇಳುತ್ತಾನೆ. ಏಕೆಂದರೆ ಖಂಡೇರಾಯನ ಡಿಕ್ಷನರಿಯಲ್ಲಿ ಇಲ್ಲ ಎಂಬ ಪದವೇ ಇಲ್ಲ. ಆದ್ದರಿಂದ ಇದೆ ಎಂದೇ ಇಟ್ಟುಕೊಳ್ಳೋಣ. ಇಷ್ಟೆಲ್ಲ ಆಗಿ ಖಂಡೆರಾಯ ಯಾರು ಎಂಬುದನ್ನೇ ನಿಮಗೆ ಹೇಳಲಿಲ್ಲವಲ್ಲ! ಖಂಡೇರಾಯ ಒಬ್ಬ ಬ್ಯಾಂಕ್ ಮ್ಯಾನೇಜರು. ಒಬ್ಬ ಬಡ ಬ್ಯಾಂಕ್ ಮ್ಯಾನೇಜರರು. ಹ್ಞಾ ! ಹ್ಞಾ!! ಹುಬ್ಬು ಏರಿಸಬೇಡಿರಿ. ಇಲ್ಲಿ ಉಪಯೋಗಿಸಲ್ಪಟ್ಟ ಬಡ ಎಂಬ ವಿಶೇಷಣ ಸಾಂಪತ್ತಿಕ ಸ್ಥಿತಿಯನ್ನು ಕುರಿತು ಉಪಯೋಗಿಸಿದ್ದಲ್ಲ. ಬಡ ಬ್ಯಾಂಕ್ ಮ್ಯಾನೇಜರ್ ಎಂದಾಗ ಬಡ ಈ ಶಬ್ದವು ಬ್ಯಾಂಕ್ ಈ ಶಬ್ದವನ್ನು ವಿಶ್ಲೇಷಿಸುತ್ತದೆಯೋ ಅಥವಾ ಮ್ಯಾನೇಜರ್ ಈ ಶಬ್ದವನ್ನು ವಿಶ್ಲೇಷಿಸುತ್ತದೆಯೋ ತೂಗಿ ನೋಡಬೇಕು. ಬಡ ಬ್ಯಾಂಕ್ ಮ್ಯಾನೇಜರ್ ಎಂದರೆ ಬ್ಯಾಂಕು ಮೊದಲು ಒಳ್ಳೆಯ ಸ್ಥಿತಿಯಲ್ಲಿ ಇದ್ದು ಈ ಮ್ಯಾನೇಜರರು ಸೇರಿದ ಮೇಲೆ ಅದು ಬಡವಾಯಿತು ಎಂದೂ ಅಥವಾ ಬ್ಯಾಂಕ್ ಸೇರಿದ ಮೇಲೆ ತಮ್ಮ ಕೈಗುಣದಿಂದ ಮ್ಯಾನೇಜರರು ಬಡವರಾದರು ಎಂದೂ ಅರ್ಥವಾಗಬಹುದು. ಇರಲಿ, ಪ್ರಸ್ತುತ ಈಗ ಮುಂದೆ ಹೋಗೋಣ.

ಬ್ಯಾಂಕ್ ಮ್ಯಾನೇಜರ್ ಎಂದರೆ ಒಬ್ಬ ಸಭ್ಯ ಪ್ರಾಣಿ. ಮ್ಯಾನ್ ಈಸ್ ಎ ನ್ಯಾಷನಲ್ ಅನಿಮಲ್ ಎಂದು ಮ್ಯಾನ್ ಎಂಬ ಶಬ್ದಕ್ಕೆ ಡಿಫೆನಿಷನ್ ಬರೆದ ಅರಿಸ್ಟೋಟಲನಿಗೆ ಅನಿಮಲ್ ಎಂದಾಗ ಕಣ್ಣೆದುರಿಗೆ ಒಬ್ಬ ಬ್ಯಾಂಕ್ ಮ್ಯಾನೇಜರನೇ ಗೋಚರಿಸಿರಬೇಕು. ಹೊಸದಾಗಿ ಅತ್ತೆಯ ಮನೆಯನ್ನು ಸೇರಿದ ಸೊಸೆಯ ಹಾಗೆ ಆತ. ಅತ್ತ ಸಿಬ್ಬಂದಿಯವರ ಕಡೆಯಿಂದಲೂ ಅನಿಸಿಕೊಳ್ಳಬೇಕು. ಇತ್ತ ಕಸ್ಟಮರ ಕಡೆಯಿಂದಲೂ ಅನಿಸಿಕೊಳ್ಳಬೇಕು.

"ಸಂಶಯಲ್ಲೊಂದು ಮನೆ ಮಾಡಿ ಶಬ್ದಕೆ ನಾಚಿದೊಡೆಂತಯ್ಯ" ಎಂದು ಅಕ್ಕಮಹಾದೇವಿ ಬರೆದ ವಚನ ಬ್ಯಾಂಕ್ ಮ್ಯಾನೇಜರ್‌ರನ್ನು ಕುರಿತು ಬರೆದದ್ದೇ ಎಂದು ನೀವು ಹೇಳಿದರೆ ನಿಮ್ಮ ವಿಚಾರ ಅತ್ಯಂತ ಶ್ಲಾಘನೀಯವಾದದು ಎಂದೇ ಹೇಳಬೇಕು. ಅದರೆ ಇದೇ ವಚನದಲ್ಲಿ ಮುಂದೆ ಬರುವ "ಲೋಕದಲಿ ಹುಟ್ಟಿದಡ ಬಳಿಕ ಸ್ತುತಿ-ನಿಂದೆಗಳು ಬಂದರೆ ಸಮಾಧಾನಿಯಾಗಿರಬೇಕು" ಎಂದು "ಪರಿಚ್ಛೇದದಲ್ಲಿ ಸ್ತುತಿ ಎಂಬ ಪದಪ್ರಯೋಗ ದೋಷಪೂರಿತ



ರಾಜ್ಯದ ಅಸಹಾಯಕ ಹೆಣ್ಣುಮಕ್ಕಳ ಕಷ್ಟದಲ್ಲಿ ನೆರವಾಗುತ್ತದೆ ಕರ್ನಾಟಕ ಸರ್ಕಾರ

ಹೆರಿಗೆ ಭತ್ಯ. ಗರ್ಭಿಣಿಯರಾದ ಕೂಲಿಕಾರ ಮಹಿಳೆಯರಿಗೆ ಪ್ರಸವದ ಸನಿಹದ ದಿನಗಳಲ್ಲಿ ಅತ್ಯಗತ್ಯವಾಗಿ ಬೇಕಾದ ಸಹಾಯವನ್ನು ಇದೀಗ ಹೆರಿಗೆ ಭತ್ಯ ನೀಡುತ್ತದೆ.

ಮಹಿಳಾ ಕೃಷಿ ಕಾರ್ಮಿಕರು ಈಗ ಹೆರಿಗೆಯ ಮುಂಚಿನ ಹಾಗೂ ಅನಂತರದ ದಿನಗಳಲ್ಲಿ ಶ್ರಮದಾಯಕ ಕೂಲಿ ಕೆಲಸದಿಂದ ವಿರಾಮ ಪಡೆಯಬಹುದು. ಹೆರಿಗೆಯ ಮುಂಚಿನ ಹಾಗೂ ನಂತರದ ದಿನಗಳಲ್ಲಿ ಅವರಿಗೆ ಈ ಯೋಜನೆಯಂತೆ ಹೆರಿಗೆ ಭತ್ಯದ ಸಹಾಯ ದೊರೆಯುತ್ತದೆ.

ಮಾಹೆಯಾನ 100 ರೂ.ಗಳ ಈ ಭತ್ಯವನ್ನು 3 ತಿಂಗಳ ಅವಧಿಗೆ ಪ್ರಸವದ ಸನಿಹದ ದಿನಗಳಲ್ಲಿ ಒಂದೇ ಗಂಟಿನಲ್ಲಿ ನೀಡಲಾಗುತ್ತದೆ. ಈ ಸೌಲಭ್ಯ ಮೊದಲನೆಯ ಹಾಗೂ ಎರಡನೆಯ ಶಿಶುವಿನ ಜನನಕಾಲದಲ್ಲಿ ಮಾತ್ರ ದೊರೆಯುವುದು.

ಈ ಸೌಲಭ್ಯವನ್ನು ಪಡೆಯಲು ಬೇಕಾದ ದಾಖಲೆಗಳು – ಗರ್ಭಿಣಿಯು ಭೂಮಿ ಇಲ್ಲದ ಕೃಷಿ ಕಾರ್ಮಿಕರ (ಕೂಲಿಕಾರರ) ಕುಟುಂಬಕ್ಕೆ ಸೇರಿದವರೆಂಬ ಬಗ್ಗೆ ಗ್ರಾಮ ಲೆಕ್ಕಿಗರು ನೀಡುವ ಪ್ರಮಾಣ ಪತ್ರ

ಸರ್ಕಾರಿ ಆಸ್ಪತ್ರೆಯ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ನೀಡುವ ವೈದ್ಯಕೀಯ ಪ್ರಮಾಣ ಪತ್ರ

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ನಮೂನೆಗಳಿಗಾಗಿ ನಿಮ್ಮ ಹಳ್ಳಿಯ ಗ್ರಾಮ ಸೇವಕರು ಅಥವಾ ನಿಮ್ಮ ತಾಲ್ಲೂಕಿನ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರನ್ನು ಸಂಪರ್ಕಿಸಿ.



ಕರ್ನಾಟಕ ವಾರ್ತೆ

ಅಸಹಾಯಕರಿಗೊಂದು ಸಹಾಯದ ಯೋಜನೆ.



ವಾಗಿದೆ ಎಂದು ಕೆಲವು ಬ್ಯಾಂಕ್ ಮ್ಯಾನೇಜರರು ಅಭಿಪ್ರಾಯಪಟ್ಟರೆ ಅದಕ್ಕೆ ನೀವು ಆಶ್ಚರ್ಯಪಡಬೇಕಾದ ಅವಶ್ಯಕತೆಯಿಲ್ಲ. ಇನ್ನೂ ಕೆಲವರು ಮುಂದೆ ಹೋಗಿ ನಮ್ಮ ಚೇಷ್ಟೆ ಮಾಡಲೆಂದೇ ಈ "ಸ್ತುತಿ" ಎಂಬ ಪದಪ್ರಯೋಗವಾಗಿದೆ ಎಂದರೂ ಎನ್ನಬಹುದು. ಏಕೆಂದರೆ ಪಾಪ! ಬ್ಯಾಂಕ್ ಮ್ಯಾನೇಜರರ ಜೀವನದಲ್ಲಿ "ಸ್ತುತಿ" ಎಂಬ ಪದಕ್ಕೆ ಆಸ್ಪದವೇ ಇಲ್ಲ, ಮತ್ತೂ ಹಾಗೂ ಸ್ಥಾನವೂ ಇಲ್ಲ. ಯಾವಾಗಲೂ ಸತತವಾಗಿ ಇಪ್ಪತ್ನಾಲ್ಕು ಗಂಟೆ "ನಿಂದೆ ಹಾಗೂ ಸಮಾಧಾನಿಯಾಗಿರಬೇಕು" ಇಷ್ಟೇ ಒಟ್ಟಾರೆ ಅವರ ಕಡೆ ಪೂಜಾರಿ ಶ್ಯಾವಿಗೆ ಪಾಯಸ ತಿನ್ನುತ್ತಿರಬೇಕಾದರೆ ತಾನೂ ಏನಾದರೂ ತಿನ್ನಬೇಕು ಎಂದು ಹಣಮಪ್ಪ ಹಗ್ಗ ತಿಂದ ಕಥೆ. ಹಾಗೆ ನೋಡಿದರೆ ಹಣಮಪ್ಪನಿಗೆ ಸ್ವಂತ ಮಹಾತ್ಮೆ ಎಂಬುದೇ ಇಲ್ಲ ಅವನಿಗೆ ಪೂಜಾರಿಯಿಂದಲೇ ಮಹಾತ್ಮೆ ಬರಬೇಕು."ಅರ್ಚಕಸ್ಯ ಮಹಾತ್ಮಮ್ ಆದರೆ ಈ ಅರ್ಚಕಸ್ಯ ಮಹಾತ್ಮ್ಯಮ್" ಎಷ್ಟು ಬೆಳೆದು ಹೋಗುತ್ತದೆಂದರೆ ಪೂಜಾರಿ ಎಂದರೆ ಸಾಕು ಮುಂದೆ ಹಣಮಪ್ಪನಿಗೆ ಮೂರ್ಛೆ ಬರುವ ಹಾಗೆ ಹಸುತ್ತದೆ ಈಗ ಬ್ಯಾಂಕ್ ಮ್ಯಾನೇಜರ್‌ರಿಗೂ ಅಷ್ಟೇ ಪೂಜಾರಿ ಅಂದರೆ ಸಾಕು....?

ಪೂಜಾರಿಯ ವಿಷಯದಲ್ಲಿ ಒಬ್ಬರು ಒಂದು ಸ್ವಾರಸ್ಯವಾದ ಕಥೆಯನ್ನು ಹೇಳುತ್ತಾರೆ ಇದನ್ನು ನೀವೂ ಕೇಳಿರಬಹುದು. ಅದನ್ನೂ ಮರೆತಿರಬಹುದು. ಕೇಳಿದವರ ಉಜಳಣೆಗಾಗಿ ಕೇಳದಿದ್ದವರ ಅವಗಾಹನೆಗಾಗಿ ಆ ಕಥೆಯನ್ನು ಕೆಳಗೆ ಕೊಡಲಾಗಿದೆ.

ಒಬ್ಬರು ಒಂದು ಶನಿವಾರ ಹಣಮಪ್ಪನ ಗುಡಿಗೆ ಹೋಗಿದ್ದರು. ಒಳಗೆ ಪೂಜಾರಿ ಪೂಜೆ ಮಾಡುತ್ತಿದ್ದ. ಇವರು ಕೈಮುಗಿದುಕೊಂಡು ಒಳಗೆ ಹಣಮಪ್ಪನ ಕಡೆಗೆ ನೋಡುತ್ತ ನಿಲ್ಲುವ ಬದಲು ಹೊರಗೆ ನೋಡುತ್ತ ಕೈಮುಗಿದುಕೊಂಡು ನಿಂತರು. ಪೂಜಾರಿ ಪೂಜೆಮುಗಿಸಿ ಹೊರಗೆ ಹೋದ ಮೇಲೆ ಒಳಗೆ ಕೈಮುಗಿದರು.

"ಯಾಕೆ ಹೀಗೆ ಮಾಡಿದಿರಿ" ಎಂದರೆ "ಏನು ಮಾಡಲಿ ಪೂಜಾರಿ ಒಳಗೆ ಇದ್ದಾಗ ಹಣಮಪ್ಪ ಹೊರಗೆ ಇದ್ದ ಪೂಜಾರಿ ಹೊರಗೆ ಹೋದಮೇಲೆ ಹಣಮಪ್ಪ ಒಳಗೆ ಬಂದ. ಆದ್ದರಿಂದ ಪೂಜಾರಿ ಒಳಗೆ ಇದ್ದಾಗ ನಾನು ಹೊರಗೆ ಕೈಮುಗಿದೆ ಪೂಜಾರಿ ಹೊರಗೆ ಹೋದ ಮೇಲೆ ಒಳಗೆ ಕೈಮುಗಿದೆ ಎಂದು ಹೇಳಿದರು.

ನೀವು ಮ್ಯಾನೇಜರರ ಕ್ಯಾಬಿನ್ನಿಗೆ ಹೋಗಿಲ್ಲವೆಂದು ಕಾಣಿಸುತ್ತದೆ. ಹೋಗಿದ್ದರೂ ಅಲ್ಲಿ ಬಹಳ ಹೊತ್ತು ಕುಳಿತಿರಲಿಕ್ಕಿಲ್ಲ ಕುಳಿತಿದ್ದರೆ ಅಲ್ಲಿ ನಡೆಯಬಹುದಾದ ಅನೇಕ ಸಂಭಾಷಣೆಗಳನ್ನು ಕೇಳಬಹುದಿತ್ತು. ಕೇಳಿರದಿದ್ದರೆ ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

"ಏನ ಬಂದಿದ್ರಿ"?

"ರೊಕ್ಕ ಬೇಕಾಗಿತ್ರಿ"

"ರೊಕ್ಕ ? ಖಾತೆದಾಗಿದ್ರ ತೊಗೊಳ್ರಿ"

"ಖಾತೆದಾಗಿಲ್ರಿ. ಅದಕ್ಕ ನಿಮ್ಮ ಕಡೆ ಬಂದಿನಿ"

"ರೊಕ್ಕ ಎದಕ ಬೇಕಾಗಿತ್ತು ?"

"ಮನೀಗ ಬೀಗರ ಬಂದಾರ ಅವ್ರ್ನ ಊರಿಗೆ ಕಳಸಬೇಕಾಗೇದ"

"ಅದಕ ಕೊಡ್ಲಿಕ್ಕೆ ಬರೂದಲ್ಲಲ್ರಿ"

ಯಾಕ ಬರೂದುಲ್ಲ? ಕೊಡ್ಲಿಕ್ಕೆ ಬರತದ ಕೊಡ್ರಿ ನಮಗ ಅಡಚಣೆ ಬಂದಾಗ ಏನ ಮಾಡಬೇಕು? ಬ್ಯಾಂಕ್ ಇರೂದು ಯಾತಕ್ಕ ?"

o o o

"ಸಾಲಾ ಕೊಡೂದುಲ್ಲ ಅಂತೀರಾ? ಯಾಕ? ನಿಮ್ಮ ಕಿಸೇದಾಗಿಂದೇನರ ಕೊಡತೀರೇನು? ಸರಕಾರದ ರೊಕ್ಕ ಐತಿ ಕೊಡ್ರಿ, ಸಾಲಾ ಕೊಡ್ಲಿಕಾಗದಿದ್ರ ಇಲ್ಯಾಕ ಕುಂತೀರಿ ನೀವು?


"ಎಲ್ಲಾರ ಹಂಗss ನಾನೂ ಅಂತ ತಿಳಕೋಬ್ಯಾಡ್ರಿ. ಸಾಲಾ ಭಾಳ ಪ್ರಾಂಪ್ಟ ಆಗಿ ತುಂಬತೇನರಿ. ಒಂದು ಪ್ರಿಂಟಿಂಗ ಪ್ರೆಸ್ ತೂಗೋಬೇಕಾಗೇದರಿ. ಫೊಲೋ ಪ್ರೆಸ್ಸು. ಐವತ್ತ-ಅರವತ್ತ ಸಾವಿರ ಹತ್ತದರಿ. ಮೂರ ತಿಂಗಳದಾಗ ನಿಮ್ಮ ಸಾಲಾ ತೀರಿಸಿ ಬಿಡತೇನಿ. ನೋಡ್ರಿ ಬೇಕಾದರ"

o o o

ಅಲ್ಲಾ ಎಮ್ಮಿ, ಸಾಲಾ ಎಂದು ಹೇಳಹೊರಟವರು ಇದುವರೆಗೆ ಎಮ್ಮಿ ಹೋಗಲಿ ಎಮ್ಮಿಯ ಬಾಲವನ್ನೂ ತೋರಿಸಲಿಲ್ಲವಲ್ಲ ಎಂದು ನಿಮಗೆ ಬೇಜಾರಾಗಿರಬಹುದು. ಹಾಗೆ ನೋಡಿದರೆ ಎಮ್ಮೆಯನ್ನಾಗಲಿ ಎಮ್ಮೆಯ ಬಾಲವನ್ನಾಗಲಿ ನೋಡಿದವರು ಯಾರಿದ್ದಾರೆ? ಸಾಲಕೊಟ್ಟವರು ಹಿಂದಿನ ಹಿಂದಿನ ಮ್ಯಾನೇಜರರು, ಅಂದರೆ ಗ್ರೇಟ್ ಗ್ರ್ಯಾಂಡ್ ಮ್ಯಾನೇಜರು. ಫಾದರ್ ಗ್ರ್ಯಾಂಡ್ ಫಾದರ್ ಗ್ರೇಟ್ ಗ್ರ್ಯಾಂಡ್ ಫಾದರ್ ಎನ್ನುವದಿಲ್ಲವೆ ಹಾಗೆ ಅವರನ್ನು ಈಗಿನ ಮ್ಯಾನೇಜರರು ನೋಡಿಲ್ಲ ಅವರೇ ಎಮ್ಮೆಯನ್ನು ನೋಡಿದ್ದರೋ ಹೇಗೆ ಗೊತ್ತಿಲ್ಲ ಇನ್ನು ಇವರು ಎಮ್ಮೆಯನ್ನು ನೋಡು







ಒಂದು ಹೊಸ ಶಕೆಯ ಪ್ರಾರಂಭ

ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ಯ

ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯಪಂಚಾಯಿತಿ ಅಧಿನಿಯಮವು (ನ್ಯಾಯ ಪಂಚಾಯಿತಿಗಳಿಗೆ ಸಂಬಂಧಿಸಿದ ಉಪಬಂಧಗಳ ಹೊರತು) ದಿನಾಂಕ 14-8-1985ನೇ ಬುಧುವಾರ ಜಾರಿಗೆ ಬಂದಿದೆ. ಇದರಿಂದ ಮಹಾತ್ಮಾ ಗಾಂಧಿಯವರ ಗ್ರಾಮ ಸ್ವರಾಜ್ಯದ ಕನಸು ಕಾರ್ಯರೂಪಕ್ಕೆ ಬರಲಿದೆ. ಸ್ವಯಮಾಡಳಿತದ ಒಂದು ಹೊಸ ಶಕೆ ಪ್ರಾರಂಭವಾಗಿದೆ.

ಮೂರು ಹಂತಗಳ ವ್ಯವಸ್ಥೆ

ಈ ವರೆವಿಗೆ ಜಾರಿಯಲ್ಲಿದ್ದ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್‌ಗಳು ಹೆಚ್ಚು ಪರಿಣಾಮಕಾರಿಯಾಗಿರಲಿಲ್ಲ. ಬಹುತೇಕ ಅಭಿವೃದ್ಧಿ ಕಾರ್ಯಗಳು ಕೇಂದ್ರೀಕೃತವಾಗಿದ್ದು ರಾಜ್ಯ ಸರ್ಕಾರದ ಮೇಲೆಯೇ ಅವಲಂಬಿಸಿದ್ದುವು.

ಈಗ ಬರಲಿರುವ ನೂತನ ವ್ಯವಸ್ಥೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಚುನಾಯಿತ ಜಿಲ್ಲಾ ಪರಿಷತ್ತು ಮತ್ತು ಮಂಡಳ ಪಂಚಾಯತಿನ ಮೇಲೆ ಎಲ್ಲಾ ಅಭಿವೃದ್ಧಿ ಕಾರ್ಯಗಳ ಹೊಣೆ ಇರುತ್ತದೆ.

ಈ ಮಂಡಳ ಪಂಚಾಯಿತಿಯ ವ್ಯಾಪ್ತಿ 10-15 ಸಾವಿರ ಜನಸಂಖ್ಯೆಯಿರುವ 7ರಿಂದ 10 ಗ್ರಾಮಗಳು. ಗ್ರಾಮ ನೈರ್ಮಲ್ಯ, ಆರೋಗ್ಯ, ಕಾಮಗಾರಿ, ಸಮಾಜ ಕಲ್ಯಾಣ, ವ್ಯವಸಾಯೋತ್ಪತ್ತಿ ಇವುಗಳೆಲ್ಲಾ ಮಂಡಳ ಪಂಚಾಯಿತಿಗಳ ಜವಾಬ್ದಾರಿಗೆ ಸೇರಿರುವುವು. ಈ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲು ಹಿಂದಿನ ಗ್ರಾಮ ಪಂಚಾಯಿತಿಗಳಿಗೆ ಸಾಕಷ್ಟು ಕ್ಷೇತ್ರವ್ಯಾಪ್ತಿಯೂ ಆದಾಯವೂ ಇರಲಿಲ್ಲ. ಹೊಸ ಮಂಡಳ ಪಂಚಾಯಿತಿಗಳು ಗ್ರಾಮಮಟ್ಟದಲ್ಲಿ ಸಬಲ ಸಂಸ್ಥೆಗಳಾಗಿದ್ದು ಹೆಚ್ಚು ಸಮರ್ಥವಾಗಿ ಕಾರ್ಯ ನಿರ್ವಹಿಸಬಲ್ಲವು.

ಜಿಲ್ಲಾ ಪರಿಷತ್ತು ಮತ್ತು ಮಂಡಳ ಪಂಚಾಯಿತಿಗಳಿಗೆ ರಾಜ್ಯ ಸರಕಾರದಿಂದ ಸಾಕಷ್ಟು ಹಣ ಒದಗಿಸಲಾಗುವುದು ಮತ್ತು ಅವುಗಳಿಗೆ ತಮ್ಮದೇ ಆದ ಆದಾಯ ಬಾಬ್ತುಗಳಿರುತ್ತವೆ.

ಪ್ರತಿಯೊಂದು ತಾಲ್ಲೂಕಿಗೂ ಒಂದು ನಾಮಕರಣ ಮಾಡಲ್ಪಟ್ಟ ತಾಲ್ಲೂಕು ಪಂಚಾಯಿತಿ ಸಮಿತಿ ಇರುತ್ತದೆ. ಈ ಸಮಿತಿಗಳಲ್ಲಿ ವಿಧಾನ ಸಭಾ ಮತ್ತು ವಿಧಾನ ಪರಿಷತ್ತಿನ ಶಾಸಕರೂ, ಆಯಾ ತಾಲ್ಲೂಕಿನ ಜಿಲ್ಲಾ ಪರಿಷತ್ ಸದಸ್ಯರು, ಮಂಡಳ ಪಂಚಾಯಿತಿ ಪ್ರಧಾನರು ಮತ್ತಿತರರು ಇರುತ್ತಾರೆ. ಜಿಲ್ಲಾ ಪರಿಷತ್ ಕಾರ್ಯಗಳಲ್ಲಿ ನೆರವಾಗುವುದು ಹಾಗೂ ಮಂಡಳ ಪಂಚಾಯಿತಿಗಳಿಗೆ ಸಲಹೆ, ಸಹಾಯ ಮತ್ತು ಮಾರ್ಗದರ್ಶನ ನೀಡುವುದು ಅವರ ಮುಖ್ಯ ಕರ್ತವ್ಯ.

ತಾತ್ಕಾಲಿಕವಾಗಿ


ಜಿಲ್ಲಾ ಪರಿಷತ್ತುಗಳಿಗೆ ಮತ್ತು ಮಂಡಳ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸುವವರೆಗೆ ಈಗಾಗಲೇ ನೇಮಕವಾಗಿರುವ ಆಡಳಿತಾಧಿಕಾರಿಗಳು ಹಳೆಯ ತಾಲ್ಲೂಕು ಅಭಿವೃದ್ಧಿ ಸಮಿತಿಗಳು ಮತ್ತು ಗ್ರಾಮ ಪಂಚಾಯಿತಿಗಳ ಕಾರ್ಯಗಳನ್ನು ನಿರ್ವಹಿಸುವರು.

ಹೊಸ ಮತದಾರರ ಪಟ್ಟಿ

18 ವರ್ಷಕ್ಕೆ ಮೇಲ್ಪಟ್ಟ ಎಲ್ಲರೂ ಜಿಲ್ಲಾ ಪರಿಷತ್ತಿನ ಮತ್ತು ಮಂಡಳ ಪಂಚಾಯಿತಿಗಳ ಚುನಾವಣೆಗಳಲ್ಲಿ ಮತದಾರರಾಗಲು ಅರ್ಹರಾಗಿರುತ್ತಾರೆ. ಇದಕ್ಕಾಗಿ ಹೊಸ ಮತದಾರರ ಪಟ್ಟಿಯನ್ನು ತಯಾರಿಸಲಾಗುವುದು. ಹೊ ಮತದಾರರ ಪಟ್ಟಿಯನ್ನು ರಚಿಸುವ ಬಗ್ಗೆ ಕರಡು ನಿಯಮಗಳನ್ನು 16-8-85ರಂದು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ.


ರಾಜ್ಯದಲ್ಲಿ ಅಧಿಕಾರದ ವಿಕೇಂದ್ರೀಕರಣವನ್ನು ಸಾಧಿಸಿ "ಗ್ರಾಮ ಸ್ವರಾಜ್ಯ"ದ ಕನಸನ್ನು ನನಸಾಗಿಸಲು ಕರ್ನಾಟಕ ಸರಕಾರವು ಎಡೆಬಿಡದೆ ಶ್ರಮಿಸುತ್ತಿದೆ.


ಗ್ರಾಮ ಸ್ವರಾಜ್ಯ – ಜನಹಿತಕ್ಕಾಗಿ
ಅಧಿಕಾರದ ವಿಕೇಂದ್ರೀಕರಣ



ಕರ್ನಾಟಕ ವಾರ್ತೆ







ವದು ದೂರದ ಮಾತು.

ಇಲ್ಲಿ ಸಾಲ ಎಂಬ ಪದದ ವಿಶ್ಲೇಷಣೆಯನ್ನು ಮಾಡುವದು ಅವಶ್ಯವಿದೆ ಎನಿಸುತ್ತದೆ. ಸಾಲ ಎಂದರೆ ಏನು? ಅದರ ಅರ್ಥ ವ್ಯಾಪ್ತಿ ಎಷ್ಟು? ಯಾವ ಯಾವ ಕ್ರಿಯೆಗಳು ಸಾಲ ಎನಿಸಿಕೊಳ್ಳುತ್ತವೆ? ಸಂಕ್ಷೇಪವಾಗಿ ಸಾಲ ಎಂದರೆ ಇಷ್ಟು ಹೇಳಬಹುದು. ಪಂಡಿತರು ಪರಮಾತ್ಮನನ್ನು "ತುದಿ ಮೊದಲು ಮಧ್ಯಾಂತ ರಹಿತನು" ಎಂದು ವರ್ಣಿಸುತ್ತಾರೆ. ಸಾಲ ಎನ್ನುವದೂ ಹೀಗೆಯೇ. ಅದಕ್ಕೆ ಆದಿ ಮಧ್ಯ, ಅಂತ್ಯ ಎನ್ನುವದೇ ಇಲ್ಲ. ಒಂದು ದೃಷ್ಟಿಯಿಂದ ಸಾಲ ಎನ್ನುವದೂ ಪರಮಾತ್ಮನ ಒಂದು ಅವತಾರವೇ ಈ ಸಾಲವನ್ನು ತೀರಿಸಲು ಆ ಸಾಲ, ಆ ಸಾಲವನ್ನು ತೀರಿಸಲು ಮತ್ತೊಂದು ಸಾಲ ಮತ್ತೊಂದು ಸಾಲವನ್ನು ತೀರಿಸಲು ಮಗದೊಂದು ಸಾಲ–ಹೀಗೆಯೇ ಸಾಲ–ಹಣ ಮಪ್ಪನ ಬಾಲ. ಒಬ್ಬರು ಒಂದು ಮಿಠಾಯಿ ಅಂಗಡಿಗೆ ಹೋದರು. "ಜಿಲೇಬಿ ಹೆಂಗ ಕಿಲೋನಪಾ?" ಎಂದು ಕೇಳಿದರು. "ಇಪ್ಪತ್ರೂಪಾಯಿ ಕಿಲೋರಿ" ಎಂದ ಅಂಗಡಿಕಾರ. "ಒಂದ ಕಿಲೋ ಜಿಲೇಬಿ ಕೊಡು" ಎಂದು ಜಿಲೇಬಿಯನ್ನು ಕಟ್ಟಿಸಿಕೊಂಡರು. ನಂತರ ಅವರ ಕಣ್ಣು ಮೈಸೂರ ಪಾಕಿನ ಮೇಲೆ ಬಿತ್ತು.

"ಮೈಸೂರ ಪಾಕ ಹೆಂಗಪಾ?"

"ಇಪ್ಪತ್ತ ರೂಪಾಯಿರಿ"

"ಹಂಗಾರ ಜಿಲೇಬಿ ಬ್ಯಾಡಾ ಮೈಸೂರ ಪಾಕ ಕೊಟ್ಟಬಿಡು."

"ಹಲ್ವಾ ತಾಜಾ ಇದ್ದಾಂಗ ಕಾಣಸ್ತದಲ್ಲೊ ಹಲ್ವಾ ಹೆಂಗ?"

"ಅದೂ ಇಪ್ಪತ್ತ ರೂಪಾಯಿರಿ"

"ಹಂಗಾರ ಮೈಸೂರ ಪಾಕ ಬ್ಯಾಡಾ. ಒಂದ ಕಿಲೋ ಹಲ್ವಾನ ಕೊಟ್ಟಬಿಡು."

ಹಲ್ವಾ ತೆಗೆದುಕೊಂಡು ಗಿರಾಕಿ ಆಢ್ಯತೆಯಿಂದ ಮುಂದೆ ಹೊರಟ. ಅಂಗಡಿಕಾರ ಒದರಿದ.

"ರಾಯರ, ಹಲ್ವಾದ ರೊಕ್ಕಾ ಕೊಡ್ರಿ."

"ಹಲ್ವಾ ನಾನು, ಮೈಸೂರ ಪಾಕಿನ ಬದ್ಲಿ ತೊಗೊಂಡೇನಿ."

"ಹಂಗಾರ ಮೈಸೂರ ಪಾಕಿನ ರೊಕ್ಕ ಕೊಡ್ರಿ."

"ಮೈಸೂರು ಪಾಕು ಜಿಲೇಬಿ ಬದ್ಲಿ ತೊಗೊಂಡೇನಿ."

"ಜಿಲೇಬಿ ರೊಕ್ಕಾ ಕೊಡ್ರಿ."

"ಜಿಲೇಬಿ ರೊಕ್ಕ? ಜಿಲೇಬಿ ಯಾರ ತೊಗೊಂಡಾರ ನಿಮ್ಮ ಅಂಗಡ್ಯಾಗ"??? ಸಾಲದ ಕಥೆಯೂ ಹೀಗೆಯೇ.

ಒಂದು ಸಾಲ ತೀರಿಸಲು ಮತ್ತೊಂದು ಸಾಲ, ಮತ್ತೊಂದಕ್ಕೆ ಮಗದೊಂದು-ಸಾಲ ತೀರಿಸಲು ಬಾಕಿ ಉಳಿದಿರುವದಾದರೂ ಎಲ್ಲಿದೆ ಬ್ಯಾಂಕಿನಲ್ಲಿ? ಏಕೆ ತಲೆ ಚಿಟ್ಟು ಹಿಡಿಯಿತೆ? ಇಷ್ಟಕ್ಕೇ

> ಬರಹಗಾರ್ತಿ
> ನೀನು ನಲ್ಲೆ
> ಎಂದು ಹೇಳಿದಾಗ
> ಪ್ರೇಮಗೀತೆ
> ಹಾಡಿದೆ
> ಒಲ್ಲೆ
> ಎಂದು ಓಡಿದಾಗ
> ನನ್ನ ಬದುಕೊಂದು
> ಗಾಥೆಯಾಯ್ತು
> —ಪರಮೇಶ ಕಾರ್ತಿಕ

ಹೀಗಾದರೆ ಹೇಗೆ ಸ್ವಾಮಿ? ನಿಮಗೇ ಹೀಗಾದರೆ ನಮ್ಮ ಖಂಡೇರಾಯನಿಗೆ ಹೇಗಾಗಬೇಡ! ಈ ಗಡಿಬಿಡಿಯಲ್ಲಿ ನಾವು ಖಂಡೇರಾಯನನ್ನೇ ಮರೆತುಬಿಟ್ಟದ್ದೇವೆ? ಖಂಡೇರಾಯ ಎಲ್ಲಿದ್ದಾನೆ? ಬನ್ನಿರಿ ಖಂಡೇರಾಯನ ಹತ್ತಿರ ಹೋಗೋಣ.

ಖಂಡೇರಾಯರು ಹಳೆಯ ಸಾಲಗಳನ್ನು ಪರಿಶೀಲಿಸುತ್ತ ಕುಳಿತಿದ್ದಾರೆ. ಎಲ್ಲರಿಗೂ ಜಡಿದು ನೋಟೀಸ್ ಕಳಿಸಿದ್ದಾರೆ. ಒಂದು ಸಲ ಅವರ ಕಣ್ಣನ್ನು ಸೆಳೆಯಿತು. ಅದೇ ಎಮ್ಮಿ ಸಾಲ ಹತ್ತು ವರ್ಷಗಳ ಕೆಳಗೆ ದೊಡ್ಡಣ್ಣನಿಗೆ ಕೊಡಲಾಗಿತ್ತು. ಒಂದು ಪೈಸೆಯನ್ನು ತುಂಬಿರಲಿಲ್ಲ. ದೊಡ್ಡಣ್ಣನಿಗೆ ಒಂದು ನೋಟೀಸು ಬಿಡುವದು ಅವಶ್ಯವೆನಿಸಿತು. ಒಂದು ನೋಟೀಸು ಕಳಿ[illegible] ಬಿಟ್ಟರು.

ಶ್ರೀಯುತ ದೊಡ್ಡಣ್ಣನವರ ಅವರಿಗೆ,

ವಿಷಯ–ಎಮ್ಮೆ ಸಾಲ, ಕ್ರಮಸಂಖ್ಯೆ–

ಮಹನೀಯರೇ,

ನೀವು ಬ್ಯಾಂಕಿನಿಂದ ದಿ....ರಂದು.... ರೂಪಾಯಿಗಳ ಎಮ್ಮೆ ಸಾಲವನ್ನು ಪಡೆದುಕೊಂಡಿರುವದು ಸರಿಯಷ್ಟೆ. ಸಾಲ ಪಡೆದು ಹತ್ತು ವರ್ಷಗಳು ಮುಗಿಯುತ್ತ ಬಂದರೂ ನೀವು ಒಂದು ಕಂತನ್ನೂ ತುಂಬಿಲ್ಲ ಎಂಬುದನ್ನು ನಿಮ್ಮ ಅವಗಾಹನೆಗೆ ತರಲು ನಮಗೆ ತೀವ್ರ ವಿಷಾದವೆನಿಸುತ್ತದೆ. ಇಷ್ಟು ಹೊತ್ತಿಗೆ ನಿಮ್ಮ ಸಾಲವು ಪೂರ್ತಿಯಾಗಿ ತೀರಬೇಕಾಗಿತ್ತು. ಬಡ್ಡಿಗೆ ಬಡ್ಡಿ ಬೀಳುತ್ತ ನಡೆದು ನಿಮ್ಮ ಸಾಲದ ಹೊಣೆಯು ಹೆಚ್ಚಾಗುತ್ತ ಹೋಗುತ್ತಲಿದೆ. ಈ ನೋಟೀಸು ಮುಟ್ಟಿದ ಕೂಡಲೇ ನೀವು ಬ್ಯಾಂಕಿಗೆ ಬಂದು ಸಾಲವನ್ನು ಬಡ್ಡಿ ಸಮೇತ ಚುಕ್ತಾ ಮಾಡಬೇಕು. ತಪ್ಪಿದಲ್ಲಿ ನಿಮ್ಮ ಮೇಲೆ ನಾವು ಯೋಗ್ಯ ಕಾನೂನು ಕ್ರಮವನ್ನು ಕೈಕೊಳ್ಳುವದು ಅನಿವಾರ್ಯವಾಗುತ್ತದೆ. ಇಂತಹ ಅಹಿತಕಾರಿ ಕ್ರಮವನ್ನು ನಿಮ್ಮ ಮೇಲೆ ಜರುಗಿಸುವ ಸಂದರ್ಭವನ್ನು ನೀವು ನಮಗೆ ಒದಗಿಸುವದಿಲ್ಲ ಎಂದು ನಂಬುತ್ತೇವೆ.

ವಂದನೆಗಳೊಂದಿಗೆ,


ತಮ್ಮ ವಿಶ್ವಾಸಿ,
ಖಂಡೆರಾವ್
ಮ್ಯಾನೇಜರ್

ಮುಂದೆ ಎರಡು-ಮೂರು ದಿವಸಗಳ ನಂತರದ ಖಂಡೇರಾಯರು ಒಬ್ಬರೇ ಕ್ಯಾಬಿನ್ನಿನಲ್ಲಿ ಕುಳಿತಿದ್ದಾರೆ ಬೆಳಗಿನ ಹನ್ನೊಂದು ಘಂಟೆಯಾಗಿದೆ. ಪ್ರಧಾನ ಕಚೇರಿಯಿಂದ ಬಂದ ಟಪಾಲನ್ನು ಒಡೆದು ಏನನ್ನೋ ಓದುತ್ತಿದ್ದಾರೆ. ಇದ್ದಕ್ಕಿದ್ದಂತೆ ಕ್ಯಾಬಿನ್ನಿನಲ್ಲಿ ಸ್ವಲ್ಪ ಕತ್ತಲೆ ಬಿದ್ದಂತಾಯಿತು. ನೋಡುನೋಡುವಷ್ಟರಲ್ಲಿ ಒಂದು ಎಮ್ಮೆ ಮ್ಯಾನೇಜರರ ಕ್ಯಾಬಿನ್ನನ್ನು ಹೊಕ್ಕಿತು! ಮ್ಯಾನೇಜರರು ಹೌಹಾರಿದರು. ಎಮ್ಮೆಯು ಹಿಂದೆ

ದೊಡ್ಡಣ್ಣ ನಿಂತಿದ್ದ. ಒಳ್ಳೆ ಕಟ್ಟುಮಸ್ತಾದ ಆಳು ದಷ್ಟಪುಷ್ಟ ಶರೀರ ಮೊಳಕಾಲ ಮೇಲೆ ತೊಡೆ ಕಾಣುವ ಹಾಗೆ ಎತ್ತಿಕಟ್ಟಿದ ಧೋತರವೊಂದನ್ನು ಬಿಟ್ಟರೆ ಮೈಮೇಲೆ ಮತ್ತೆ ಯಾವದೇ ಬಟ್ಟೆ ಇಲ್ಲ. ಕೂದಲಿನ ಬಣ್ಣವೇ ಕರಗಿ ಮೈಮೇಲೆ ಇಳಿದಂತೆ ಮಿರಿಮಿರಿ ಮಿಂಚುವ ದೇಹ, ಮುಖದ ತುಂಬ ದೋಸೆಯ ತೂತುಗಳು ಕಪ್ಪು ಮೀಸೆ. ಆ ಮೀಸೆ ಅವನ ಬಾಯಿ ತುಟಿ, ಮೂಗಿನ ಹೊರಳೆಗಳನ್ನು ಮುಚ್ಚಿ ಹಾಕಿತ್ತು, ಉಸಿರು ಬಿಟ್ಟನೆಂದರೆ ಮೀಸೆ, ಬಿರುಗಾಳಿಗೆ ಕಾಂಗ್ರೆಸ್ ಹುಲ್ಲು ಅಲುಗಾಡಿದಂತೆ ಅಲುಗಾಡುತ್ತಿತ್ತು. ಕೈಯಲ್ಲಿ ಹಗ್ಗ!

ಸಾಕ್ಷಾತ್ ಯಮಧರ್ಮರಾಯ!! ಯಶೋದಾ ಮಾತೆಗೆ ಬಾಯಿಯಲ್ಲಿ ಬ್ರಹ್ಮಾಂಡವನ್ನು ತೋರಿಸಲು ಶ್ರೀಕೃಷ್ಣ ಆ ಎಂದು ಬಾಯಿ ತೆರೆದಂತೆ ಖಂಡೇರಾಯರು ಆ ಎಂದು ಬಾಯಿ ತೆರೆದರು.

"ನೋಟೀಸ ಕಳಿಸಿದವರು ನೀವ ಏನು?"



"ಹ್ಲಾ-ಹಂ-ಹಂ-ಹಾ-ಹಾ-ಹಾ-ಹಾ"

"ಎಂಥಾ ಎಮ್ಮಿ ಕೊಡಿಸೀರಿ ಯಾರಿಗೆ ಜೀತಾಗ್ಯೆತಿ ನಿಮ್ಮ ಎಮ್ಮಿ? ಹಾಲ ಹಿಂಡೂದುಲ್ಲ ಬಿಡೂದುಲ್ಲ ತೊಗೊಳ್ರಿ ನಿಮ್ಮ ಎಮ್ಮೀನ..."

ಎಮ್ಮಿ ದೊಡ್ಡಣ್ಣನ ಎದುರಿಗೆ ಬಂದು ಇಲಿ ಮರಿಯಂತೆ ನಿಂತಿತ್ತು. ಮೈತುಂಬಾ ಎಲಬುಗಳೇ ಎದ್ದು ಕಾಣುತ್ತಿದ್ದವು. ಅದರ ಎರಡೂ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಿತ್ತು. ಧೊಪ್ಪ ಎಂದು ಹಗ್ಗ ಖಂಡೇರಾಯರ ಟೇಬಲ್ಲಿನ ಮೇಲೆ ಬಂದು ಬಿದ್ದಿತು. ಖಂಡೇರಾಯರು ಕಣ್ಣರಳಿಸಿ ಸಹಾಯಕ್ಕಾಗಿ ತಮ್ಮ ಸಿಪಾಯಿ ಪರ್ವಣ್ಣನನ್ನು ಹುಡುಕಿದರು ಆತ ಚಾಣಾಕ್ಷ! "ನನಗ ಡೆಲಿವರಿ ಮಾಡೂದೈತಿ" ಎಂದು ಆಗಲೇ ತನ್ನ ಮನೆಗೆ ಜಾರಿಕೊಂಡಿದ್ದ! ಉಳಿದ ಸ್ಟಾಫ್ ಮೆಂಬರುಗಳು ಖಂಡೇರಾಯರ ಕಡೆಗೆ ಮುಖ ತಿರುಗಿಸದೆ ಹಿಂದಿನಿಂದಲೆ ಮುಸಿ ಮುಸಿ ನಗಹತ್ತಿದರು.

"ಕಟಗೊಳ್ರಿ ನಿಮ್ಮ ಕುರ್ಚೀದ ಕಾಲಿಗೆ ಎಮ್ಮೀನ" ದೊಡ್ಡಣ್ಣ ಇನ್ನೊಮ್ಮೆ ಗುಡುಗಿದ.

ಸರ್ವೆ ಜನಾಃ ಸುಖಿನೋಭವಂತು. ಸರ್ವೆ ಭದ್ರಾಣಿ ಪಶ್ಯಂತು!

ಶಿವನ ಪುಟ್ಟಿ



ಹೃದಂಬಾಕಾಶದಿ ಏರಿಸು ಪುಟ್ಟಿ
ಅವರೊಳ್ ಜ್ಞಾನಸುದೀಪವನಿಟ್ಟು
ಮುತ್ತಿದ ಕತ್ತಲೆ ಮೊತ್ತವನಟ್ಟಿ
ಸುತ್ತಲು ಬರುತಿಹ ಗಾಳಿಯ ಕಟ್ಟಿ

೨

ಬಂಧುರ ಸತ್ಯದ ಸ್ತಂಭವನೂರಿ
ಸುಂದರ ಭಕುತಿಯ ದಾರವ ತೂರಿ
ಅಷ್ಟಮದಂಗಳ ದಾರಿಯ ಮೀರಿ
ಆತ್ಮಾನಂದದ ಸೊಗವನು ತೋರಿ

೩

ನಭದಲಿ ಬೆಳಗಲಿ ಚಿನ್ಮಯ ಕಿರಣ
ತುಂಬಲಿ ಪುಟ್ಟಿಯು ದೇವರ ಸ್ಮರಣ
ಆಗಲಿ ಜನನದ ಮರಣದ ಹರಣ
ಇಂತೇರಿಸು ಪುಟ್ಟಿಯ ಜಾಣ

–ಶ್ರೀ ಮೂಜಗಂ, ಹುಬ್ಬಳ್ಳಿ

ಹೆಂಡಿಯ ಪಾಂಡವರು

ದೀವಳಿಗೆ ದಿನದಂದು ಹೆಂಡಿಯ ಪಾಂಡವರು
ಮನೆಯ ಅಂಗಳದಾಗ ಕುಂತಾರ
ಹೊನ್ನವರಿ ಗೊಂಚಲ ಉತ್ತರಾಣಿ ಕಡ್ಡಿ
ಹಣೆಗೆ ಕುಂಕುಮ ಬಟ್ಟು ಇಟ್ಟಾರ ||೧||

ಉಕ್ಕಿನ ಗದೆ ಬಿಲ್ಲು ಬತ್ತಳಿಕೆ ಬಚ್ಚಿಟ್ಟು
ಬಗೆ ಬಗೆ ವೇಷವ ತೊಟ್ಟಾರ
ತಲೆಮರೆಸಿ ಹೊಂಟಾರ ಊಳಿಗದ ಆಳಾಗಿ
ವಿರಾಟನರಮನೆ ಹೊಕ್ಕಾರ ||೨||



ಕುಟ್ಟುವ ಬೀಸುವ ಕಷ್ಟದ ಕೆಲಸವ
ಮಾಡುತ್ತ ದಿನವನ್ನು ನೂಕ್ಯಾರ
ಕಲ್ಲು ಕಡಬವ ಮಾಡಿ ಸುಳ್ಳು ಶ್ಯಾವಿಗೆ ಮಾಡಿ
ಕಹಿಯನ್ನೆ ಸಿಹಿಮಾಡಿ ಉಂಡಾರ ||೩||

ಸಂಕಟ ಬಂದಾಗ ಸಿಡಿದೆದ್ದು ನಿಂತಾರ
ಕೀಚಕನ ಬಸಿರನ್ನು ಬಗೆದಾರ
ಉತ್ತರನ ಮುಂದಿಟ್ಟು ಕೌರವನ ಪಡೆಬಡಿದ
ಆಕಳ ಸೆರೆಯನ್ನು ಬಿಡಿಸ್ಯಾರ ||೪||

ಉಪವಾಸ ವನವಾಸ ಅಜ್ಞಾತವಾಸವನು
ಧೀರತನದಲಿ ಕಾದಿ ಗೆದ್ದಾರ
ನ್ಯಾಯ ತಕ್ಕಡಿಯಲ್ಲಿ ತೂಗಿ ಬಂದಾರಿವರು
ದೇವಮಾನವರಾಗಿ ನಿಂತಾರ ||೫||

–ಕಂಜ್ಯಾಣಿ, ರಣರಪ್ಪ, ಮುಲಘಾಣ





ನೀರು ತುಂಬುವ ಹಬ್ಬ



ಅಶ್ವಿನಿ ಕೃಷ್ಣ ಪಕ್ಷದ ತ್ರಯೋದಶೀ ಸಂಜೆಗೆ ನೀರು ತುಂಬುವ ಹಬ್ಬ. ಅಂದು ದೊಡ್ಡ ನೀರಿನ ಹಂಡೆಯನ್ನು ಅಲಂಕರಿಸಿ ನೀರು ತುಂಬಿ ಆರತಿ ಮಾಡಿ ಗಂಗಾಪೂಜೆಯನ್ನು ಮಾಡುವರು. ಈ ನೀರು ಮರು ದಿನದ ಅಂದರೆ ನರಕ ಚತುರ್ದಶಿಯ ಬೆಳಗಿನ ಅಭ್ಯಂಜನಕ್ಕೆ ಉಪಯೋಗಿಸಬೇಕಾದುದು. ನೀರು ತುಂಬುವ ಹಬ್ಬದ ಸಂಜೆಗೆ ಮನೆಯ ಹೊಸ್ತಿಲದ ಮೇಲೆ ಕಟ್ಟೆಯ ಮೇಲೆ ಮಾಳಿಗೆಯ ಮೇಲೆ ಒಳಗೆ ಮತ್ತು ಸುತ್ತಲೂ ಸಾಲುಸಾಲಾಗಿ ದೀಪಗಳನ್ನು ಹಚ್ಚುವರು. ದೀಪಗಳ ಆವಳಿ ಅಂದರೆ ಸಾಲೇ ದೀಪಾವಳಿಯು. ಸಾಲುಸಾಲಾಗಿ ನೂರಾರು ದೀಪಗಳನ್ನು ಹಚ್ಚುವದೇ ಈ ಹಬ್ಬದ ವೈಶಿಷ್ಟ್ಯ. ಮನೆಯ ಮಾಳಿಗೆಯ ಮೇಲೆ ಎತ್ತರವಾದ ಕೋಲನ್ನು ನಿಲ್ಲಿಸಿ ಆಕಾಶದೀಪವನ್ನು ಹಚ್ಚುವರು. ಇದಕ್ಕೆ ಸ್ವರ್ಗದೀಪವೆಂದೂ ಹೆಸರು. ಸ್ವರ್ಗದ ಬಾಗಿಲಿಗೆ ಬೆಳಕು ತೋರಿಸುವಷ್ಟು ಇದು



ಸ್ವರ್ಗದ ಬಾಗಿಲನ್ನು ಬೆಳಗಿಸುವ ಆಕಾಶ ಬುಟ್ಟಿ

ಫಲಹಾರದ ಸಿದ್ಧತೆ



ನರಕ ಚತುರ್ದಶಿ:- ಶ್ರೀ ಕೃಷ್ಣನು ನರಕಾಸುರನನ್ನು ಸಂಹರಿಸಿದ ವಿಜಯೋತ್ಸವದ ಆರತಿ. ಆರತಿ ಮಾಡುವ ಅಕ್ಕ-ತಂಗಿಯರಿಗೆ ಬೆಳ್ಳಿಯ ರೂಪಾಯಿ ಹಾಕುತ್ತಿರುವದು

ಎತ್ತರದಾಗಿರಬೇಕೆಂಬುದು ಇದನ್ನು ಹಚ್ಚುವವರ ಹಂಬಲ. ಬಣ್ಣ ಬಣ್ಣದ ಕಾಗದ ಕತ್ತರಿಸಿ ಮಾಡಿದ ಆಕಾಶಬುಟ್ಟಿಯಲ್ಲಿ ಹಚ್ಚಿದ ಈ ದೀಪವು ಬಣ್ಣ, ಬಣ್ಣದ ಬೆಳಕನ್ನು ಬೀರುತ್ತಿರುತ್ತದೆ. ಹೊಸ ಅಳಿಯನನ್ನು ನೀರು ತುಂಬುವ ಹಬ್ಬದ ಸಂಜೆಗೇ ಬರಮಾಡಿಕೊಳ್ಳುವರು. ಶಾವಿಗೆ ಪಾಯಸ ಮಾಡಿ ಬಡಿಸಿ ಕುಟುಂಬದವರೆಲ್ಲ ಉಂಡು ನಲಿದಾಡುವರು.

ನರಕ ಚತುರ್ದಶಿ

ಮರುದಿನ ನರಕ ಚತುರ್ದಶಿಯು. ಅಂದು ಬೆಳಗ್ಗೆ ದೇವರಿಗೆ ಆರತಿ ಮಾಡಿ ಕುಟುಂಬದವರಿಗೆಲ್ಲ ಆರತಿ ಮಾಡುವರು. ಈ ಆರತಿಗೆ ಅಕ್ಕ-ಪಕ್ಕದ ಮನೆಯವರು ಬಂಧುಗಳು ಹೀಗೆ ಎಲ್ಲರನ್ನೂ ಆಹ್ವಾನಿಸುವದುಂಟು. ಆರತಿಯ ತಟ್ಟೆಯಲ್ಲಿ ಗಂಡಸರು ಬೆಳ್ಳಿಯ ರೂಪಾಯಿಗಳನ್ನು ಹಾಕುವರು. ಅವನ್ನು ಆರತಿ ಮಾಡಿದ ಹೆಂಗಸರು ಹಂಚಿಕೊಳ್ಳುವರು. ಈ ಆರತಿ ದ್ವಾಪರಯುಗದಲ್ಲಿ ಶ್ರೀ ಕೃಷ್ಣನು ನರಕಾಸುರನನ್ನು ಕೊಂದು ಜಯಶಾಲಿಯಾಗಿ ಬಂದಾಗ ದ್ವಾರಕೆಯ ಸುವಾಸಿನಿಯರು ಅವನಿಗೆ ಮಾಡಿದ ಆರತಿಯ ಸಂಕೇತವಾದ ಆರತಿಯು. ನರಕಾಸುರನು ಈಗಿನ ಆಸಾಮ ಪ್ರಾಂತದಲ್ಲಿದ್ದ ಪ್ರಾಗ್‌ಜ್ಯೋತಿಷಪುರದ ರಾಜನಾಗಿದ್ದನು. ಇವನು ಭೂದೇವಿಯ ಮಗನು. ಭೂದೇವಿಯು ಇವನಿಗೆ ವೈಷ್ಣವಾಸ್ತ್ರವನ್ನು ದೊರಕಿಸಿಕೊಟ್ಟಿದ್ದಳು. ಸ್ವತಃ ಇವನೂ ಬ್ರಹ್ಮನ ವರವನ್ನು ಪಡೆದಿದ್ದನು. ಈ ಎರಡರಿಂದ ಬಲಿಷ್ಠನಾದ ಇವನು ದೇವತೆಗಳನ್ನು ಜಯಿಸಿ ದೇವತೆಗಳ ತಾಯಿಯಾದ ಅದಿತಿಯ ಕುಂಡಲಗಳನ್ನೂ ವರುಣನ ಛತ್ರವನ್ನೂ ಅಪಹರಿಸಿದ್ದನು. ಮೇರು ಪರ್ವತದ ರತ್ನ ಖಚಿತ ಶಿಖರವನ್ನು ಆಕ್ರಮಿಸಿದ್ದನು. ನಾನಾದೇಶಗಳಿಂದ ಎಲ್ಲ ಜನಾಂಗಕ್ಕೆ ಸೇರಿದ ಹದಿನಾರು ಸಾವಿರ ಕನ್ನಿಕೆಯರನ್ನು ಬಂಧನದಲ್ಲಿಟ್ಟು ಪೀಡಿಸುತ್ತಿದ್ದನು. ಭೂಮಿಯ ಈ ಮಗನ ಹಾವಳಿಯ ಕಾವು ಸ್ವರ್ಗಕ್ಕೆ ಮುಟ್ಟಿತು. ಐಶ್ವರ್ಯಮದ ಸ್ತ್ರೀ ವ್ಯಾಮೋಹ ಅತಿಯಾದವು. ಇವನನ್ನು ದಂಡಿಸುವದು ಆಗತ್ಯವಾಯಿತು. ಶ್ರೀಕೃಷ್ಣನು ಇವನ ಮೇಲೆ ದಂಡೆತ್ತಿ ಹೋಗಿ ಇವನಿಗೆ ಸಹಾಯಕರಾದ ಮುರು, ನಿಸುಂದ, ಹಯಗ್ರೀವರೆಂಬ ದೈತ್ಯರನ್ನು ಸಂಹರಿಸಿ ನರಕಾಸುರನನ್ನು ಕೊಂದು ಅದಿತಿಯ ಕುಂಡಲಗಳನ್ನೂ ವರುಣನ ಛತ್ರವನ್ನೂ ತಿರುಗಿ ಕಳಿಸಿದನು. ಮೇರು ಪರ್ವತದ ಶಿಖರವನ್ನು ಮುಕ್ತಗೊಳಿಸಿದನು. ಹದಿನಾರು ಸಾವಿರ ಯುವತಿಯರನ್ನು ಬಂಧನದಿಂದ ಬಿಡುಗಡೆ ಮಾಡಿದನು. ಶ್ರೀ ಕೃಷ್ಣನ ಈ ವಿಜಯೋತ್ಸವವೇ ನರಕ ಚತುರ್ದಶಿಯ ಹಬ್ಬ. ನರಕಾಸುರನಂಥ ಲೋಕಕಂಟಕನ



ಪಾಳುಬಿದ್ದಿದ್ದ ಈ ಗುಡಿ ಈಗ
ಸಹಸ್ರ ಸಂಖ್ಯೆಯಲ್ಲ ಭಕ್ತರನ್ನು
ಆಕರ್ಷಿಸುತ್ತಿದೆ.



ಇವರೇನೋ ಯಜ್ಞ ಮಾಡ್ತಾರೆ. ಆ
ಹವಿಸ್ಸಿನ ಭಾಗ ಪಡೆಯಲು ಇಂ
ಅಗ್ನಿ, ವರುಣರು ಬರಬೇಕಲ್ಲ.

ಮಹಿಳಾ ಪುರೋಹಿತರು

• ಕೆ.ಆರ್. ಸ್ವಾಮಿ




ಮೊದಲು ಈಶ್ವರ ದೇವಸ್ಥಾನ
ಆಗಿತ್ತು ಈಗ ಅಮ್ಮನವರಿಗೇ
ಪ್ರಾಮುಖ್ಯತೆ.



ಈಗ ಮಂತ್ರ ಘೋಷಗಳು
ರಸವತ್ತಾಗಿ ರಾಗ, ತಾಳ ಬದ್ಧವಾಗಿ

ಅಳಿಯತನದ ಸಂಭ್ರಮ





ಆರತಿ



ತೈಲ ಲೇಪನ

ದೌರ್ಜನ್ಯದ ಪರಿಹಾರ ಮತ್ತು ಸಾವಿರಾರು ಕನ್ನಿಕೆಯರ ಬಿಡುಗಡೆ ಇವು ಚಿರಸ್ಮರಣೀಯವಾದ ಘಟನೆಗಳು. ವರುಣನು ನ್ಯಾಯದ ದೇವತೆ. ಅವನ ಛತ್ರ ನ್ಯಾಯದ ಛತ್ರ. ಅದನ್ನೇ ನರಕಾಸುರನು ಅಪಹರಿಸಿದ್ದನು. ಮೇರು ಪರ್ವತವು ಐಶ್ವರ್ಯದ ಸಂಕೇತ. ಈ ಧನಲೋಭಿಗೆ ಅದರ ಶಿಖರವೇ ಬೇಕಾಯಿತು. ಹೀಗೆ ನ್ಯಾಯವನ್ನು ಅಲ್ಲಗಳೆದು ಮದಾಂಧನಾದ ಇವನನ್ನು ಶ್ರೀಕೃಷ್ಣನು ಸಂಹರಿಸಬೇಕಾಯಿತು. ಇವನ ಬಂಧನದಿಂದ ಬಿಡಿಸಿದ ಹದಿನಾರು ಸಾವಿರ ಸ್ತ್ರೀಯರನ್ನು ಶ್ರೀಕೃಷ್ಣನು ಮದುವೆಯಾದದ್ದು ಸಾಂಕೇತಿಕ. ಅಸುರನ ಬಂಧನದಲ್ಲಿದ್ದ ಇವರು ಕುಲಗೆಟ್ಟವರು ಎಂಬ ಸಂದೆಯನ್ನು ತಪ್ಪಿಸು




ಅಭ್ಯಂಜನ



ಉಡುಗೊರೆ

ವುದೇ ಇವರ ಉದ್ದೇಶ. ಕೃಷ್ಣನೇ ಅವರನ್ನು ಮದುವೆಯಾದ ಮೇಲೆ ಅವರು ಸಮಾಜ ಬಾಹಿರರು ಎಂದು ಹೇಳುವ ಧೈರ್ಯ ಯಾರಿಗೂ ಉಂಟಾಗಲಾರದು. ಹೀಗೆ ಸಾಂಕೇತಿಕವಾಗಿ ಶ್ರೀ ಕೃಷ್ಣನನ್ನು ಮದುವೆಯಾದ ಇವರಿಗೆ ತಮ್ಮ ತಮ್ಮ ಪತಿಯೂ ಇದ್ದನು. ಶ್ರೀಕೃಷ್ಣನು ಸಾಂಕೇತಿಕವಾಗಿ ಇವರನ್ನು ತಾನು ಮದುವೆಯಾಗಿ ಇವರು ಸಮಾಜ ಬಾಹಿರರಾಗುವವನ್ನು ತಪ್ಪಿಸಿ ಬಳಿಕ ಇವರ ಮದುವೆ ಮಾಡಿಸಿ ಇವರ ಕಷ್ಟವನ್ನು ತಪ್ಪಿಸಿದನು. ಶ್ರೀಕೃಷ್ಣನೊಡನಾದ ಸಾಂಕೇತಿಕ ವಿವಾಹವು ಆಧ್ಯಾತ್ಮಿಕ ಪತಿ ಪತ್ನೀ ರೂಪಕ ಸಂಬಂಧವನ್ನು ಪಡೆಯಿತು. ಹೀಗೆ ನರಕಚತುರ್ದಶಿಯು ಸಾವಿರಾರು ಕನ್ನಿಕೆಯರನ್ನು ಬಂಧನದಿಂದ ಬಿಡಿಸಿದ ವಿಜಯೋತ್ಸವದ ದಿನ. ನ್ಯಾಯ ಧರ್ಮಗಳನ್ನು ಧಿಃಕ್ಕರಿಸಿದವನನ್ನು ದಂಡಿಸಿದ ದಿನ. ಐಶ್ವರ್ಯ ಮತ್ತು ಶಕ್ತಿಯ ಮದವನ್ನು ಹತ್ತಿಕ್ಕಿದ ದಿನ. ಈ ಹಬ್ಬವು ಈ ಮಹತ್ತರವಾದ ಘಟನೆಗಳ ನೆನಪಿನ ಹಬ್ಬ. ಇದು ದ್ವಾಪರದ ಘಟನೆಗಳ ಹಿನ್ನಲೆ.



ನರಕಾಸುರನ ಕಥೆಯ ವೇದದಲ್ಲಿಯ ಮೂಲ

ನರಕಾಸುರನ ಈ ಕಥೆಯ ಮೂಲವು ಇನ್ನೂ ಆಳವಾಗಿ ನೋಡಿದರೆ ವೇದದಲ್ಲಿ ಸಿಗುವದು. ಋಗ್ವೇದದಲ್ಲಿಯ ಗೋವುಗಳನ್ನು ಬಂಧಿಸಿಟ್ಟ ಫಣಿಗಳ ಕಥೆಯೇ ಮುಂದೆ ನರಕಾಸುರನ ಕಥೆಯಾಗಿದೆ. ಗೋವುಗಳೇ ಸ್ತ್ರೀಯರು. ಫಣಿಗಳೇ ನರಕಾಸುರನು. ಜಲ ಪ್ರವಾಹಗಳನ್ನು ತಡೆದಿಟ್ಟ ವೃತ್ರಾಸುರನ ಕಥೆಗೂ ಇದು ಹೋಲುತ್ತದೆ. ಜಲಪ್ರವಾಹಗಳೇ ಸ್ತ್ರೀಯರು. ವೃತ್ರಾಸುರನೇ ನರಕಾಸುರನು. ಮಾನವನ ಇತಿಹಾಸದಲ್ಲಿ ಅತಿ ಪ್ರಾಚೀನ ಕಥೆಗಳು ಮತ್ತು ರೂಪಕಗಳು ಮತ್ತೆ ಮತ್ತೆ ಹೊಸರೂಪಗಳನ್ನು ತಾಳುತ್ತಲೇ ಇರುತ್ತವೆ. ಆಯಾ ಕಾಲದ ಐತಿಹಾಸಿಕ ವ್ಯಕ್ತಿಗಳ ಮತ್ತು ಘಟನೆಗಳ ಹೆಸರನ್ನು ಹೊತ್ತು ಹಳೆಯ ಕಥೆಗಳು ಮತ್ತೆ ಮತ್ತೆ ಪ್ರಚಲಿತವಾಗುತ್ತವೆ. ಇವುಗಳ ನೆನಪನ್ನು ಉಳಿಸುವ ಹಬ್ಬ, ಉತ್ಸವಗಳು ಬಳಕೆಯಲ್ಲಿ ಬರುತ್ತವೆ. ಇಂಥ ಹಬ್ಬಗಳಲ್ಲಿ ನರಕಚತುರ್ದಶಿಯು ಪ್ರಮುಖವಾದುದು. ಬೆಳಿಗ್ಗೆ ಆರತಿ, ಅಭ್ಯಂಜನ ಸ್ನಾನ, ಹೊಸಬಟ್ಟೆಗಳನ್ನು ಧರಿಸುವದು ಮತ್ತು ಸಿಹಿ ತಿಂಡಿಗಳು ಈ ಹಬ್ಬದ ವೈಶಿಷ್ಟ್ಯಗಳು.

ಲಕ್ಷ್ಮೀ ಅಮಾವಾಸ್ಯೆ

ಆಶ್ವಿನ ಕೃಷ್ಣ ಪಕ್ಷದ ಅಮಾವಾಸ್ಯೆಯು ನರಕ-ಚತುರ್ದಶಿಯ ಮರುದಿನದ ಸಡಗರದ ಹಬ್ಬ. ಅಂದು ಸಂಜೆಗೆ ಲಕ್ಷ್ಮೀ ಪೂಜೆಯು ಪ್ರಧಾನವಾದ ಕಾರ್ಯಕ್ರಮ. ಇದು ಮುಖ್ಯವಾಗಿ ವ್ಯಾಪಾರಿಗಳ ಹಬ್ಬ. ಎಲ್ಲ ಅಂಗಡಿಗಳಲ್ಲಿಯೂ ವಿಜೃಂಭಣೆಯಿಂದ ಲಕ್ಷ್ಮೀಪೂಜೆಯನ್ನು ಮಾಡುವರು. ತಮ್ಮ ಬಂಧು ಮಿತ್ರರನ್ನೂ ಗಿರಾಕಿಗಳನ್ನೂ ಲಕ್ಷ್ಮೀ ಪೂಜೆಗೆ ಆಹ್ವಾನಿಸುವರು. ವ್ಯಾಪಾರಿಗಳಿಗೆ ಇದು ವರ್ಷ ಕೊನೆಯ ದಿನ. ಇಂದಿಗೆ ಅವರ ವರ್ಷ ಲೆಕ್ಕಪತ್ರ ಮುಗಿಯುವದು. ಮರುದಿ ದಿಂದ ಹೊಸ ಆರ್ಥಿಕ ವರ್ಷವು ಪ್ರಾರಂ ವಾಗುವದು. ಲೇವಾದೇವಿ ಮಾ ವವರೂ ಹೆಚ್ಚಿನ ಸಂಭ್ರಮದಿಂದ ಲಕ್ಷ್ಮಿ ಪೂಜೆ ಮಾಡುವರು. ಮನೆಗಳಲ್ಲಿಯ ಅನೇಕರು ಮಾಡುವರು. ಜೈನರಿಗೆ ಇ ಮಹಾವೀರನ ನಿರ್ವಾಣದ ದಿನ



ಅಮಾವಾಸ್ಯೆಯ ಸಂಜೆ ಲಕ್ಷ್ಮೀ ಪೂಜೆ

ಆಗಿದೆ.

ಯಕ್ಷರಾತ್ರಿ

ಅಮಾವಾಸ್ಯೆಯ ರಾತ್ರಿಯನ್ನು ಯಕ್ಷ ರಾತ್ರಿಯೆಂದೂ ಕರೆಯುವರು. ಈ ಯಕ್ಷ ರಾತ್ರಿಯ ಉಲ್ಲೇಖ ವಾತ್ಸಾಯನನ ಕಾಮ ಸೂತ್ರಗಳಲ್ಲಿ ಬರುವದು. ಇದನ್ನು ಜಖರಾತ್ರಿ ಮತ್ತು ಸುಖರಾತ್ರಿಯೆಂದೂ ಕರೆಯುವರು. ಈ ರಾತ್ರಿಯನ್ನು ಸ್ತ್ರೀ ಪುರುಷರು ಒಟ್ಟಾಗಿ ನೃತ್ಯ ಗೀತ ಆಟ ಪಾಟ–ವಿನೋದ ಇತ್ಯಾದಿಗಳಿಂದ ಕಳೆಯುವರು. ಈ ಅಮಾವಾಸ್ಯೆಯ ರಾತ್ರಿ ಕಾಳೀ ಪೂಜೆಯನ್ನು ಮಾಡುವ ಪರಿಪಾಠವೂ ಕೆಲವು ಕಡೆಗೆ ಇದೆ.

ಬಲಿ ಪಾಡ್ಯಮಿ

ಕಾರ್ತಿಕ ಶುಕ್ಲ ಪಕ್ಷದ ಪ್ರತಿಪದೆಯ ದಿನವೇ ದೀಪಾವಳೀ ಪ್ರತಿಪದೆಯ ದಿನ. ಇದನ್ನು ಬಲಿಪಾಡ್ಯಮಿ ಎಂದು ಕರೆಯುತ್ತಾರೆ. ಮನೆಯ ಪಡಸಾಲೆ ಅಥವಾ ನಡುಮನೆಯಲ್ಲಿ ಬಣ್ಣ ಬಣ್ಣದ ರಂಗವಲ್ಲಿಯನ್ನು

ನಳ ಚಕ್ರವರ್ತಿ ಹಾಗೂ ಧರ್ಮರಾಜನನ್ನು ದಿಕ್ಕು ತಪ್ಪಿಸಿದ ದ್ಯೂತ



ಪ್ರತಿ ವರ್ಷ ದೀಪಾವಳಿಯಲ್ಲಿ ಮೂರು ದಿನ ತನ್ನ ಸಾಮ್ರಾಜ್ಯವನ್ನು ನಡೆಸುವ ಬಲಿಚಕ್ರವರ್ತಿಯ ಪೂಜೆ. ಬಲಿಪಾಡ್ಯಮಿಯ ವಿಶೇಷ

ಬಲಿ ಚಕ್ರವರ್ತಿಯ ಚಿತ್ರವನ್ನು ತೆಗೆಯುತ್ತಾರೆ. ಕೆಲವರು ಬಲಿ ಚಕ್ರವರ್ತಿಯ ಕೋಟೆಯನ್ನೂ ಕಟ್ಟುತ್ತಾರೆ. ದೀಪಾವಳಿಯಲ್ಲಿ ನರಕ ಚತುರ್ದಶಿಯಿಂದ ಪ್ರತಿಪದೆಯವರೆಗೆ ಮೂರು ದಿನ ಬಲಿ ಚಕ್ರವರ್ತಿಯ ರಾಜ್ಯವಿರುತ್ತದೆ ಎಂಬ ಪ್ರತೀತಿಯಿದೆ. ಬಲಿ ಚಕ್ರವರ್ತಿಯು ಪ್ರಲ್ಹಾದನ ಮೊಮ್ಮಗನು. ಇವನು ಪರಾಕ್ರಮಿಯೂ ಮಹತ್ವಾಕಾಂಕ್ಷಿಯೂ ಆಗಿದ್ದನು. ಇಂದ್ರನ ಮೇಲೆ ದಂಡೆತ್ತಿ ಹೋಗಿ ಪ್ರಾಣ ಕಳೆದುಕೊಳ್ಳುವದರಲ್ಲಿದ್ದನು. ಆದರೆ ಶುಕ್ರಾಚಾರ್ಯರು ಮೃತಸಂಜೀವಿನಿಯಿಂದ ಇವನನ್ನು ಬದುಕಿಸಿದರು. ಮುಂದೆ ಇವನು ವಿಶ್ವಜಿದ್ ಯಾಗ ಮಾಡಿ ಅಗ್ನಿಯಿಂದ ದಿವ್ಯವಾದ ರಥ ಅಶ್ವಧ್ವಜಗಳನ್ನು ದೊರಕಿಸುವನು. ತನ್ನ ಪಿತಾಮಹ ಪ್ರಲ್ಹಾದನಿಂದ ದಿವ್ಯಧನುಸ್ಸನ್ನೂ ದೊರಕಿಸುವನು. ಹೀಗೆ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಇಂದ್ರನ ಮೇಲೆ ಮತ್ತೊಮ್ಮೆ ದಂಡೆತ್ತಿ ಹೋಗಿ ಸ್ವರ್ಗವನ್ನು ವಶಪಡಿಸಿಕೊಳ್ಳುವನು. ಇಂದ್ರ ಪದವಿಗಾಗಿ ನರ್ಮದಾ ನದಿಯ ದಂಡೆಯ ಮೇಲೆ ಅಶ್ವಮೇಧ ಯಾಗವನ್ನು ಪ್ರಾರಂಭಿಸುವನು. ಆಗ ವಿಷ್ಣುವು ವಾಮನ ರೂಪದಿಂದ ಬಂದು ಮೂರು ಹೆಜ್ಜೆ ಸ್ಥಳವನ್ನು ದಾನವಾಗಿ ಬೇಡಿ ತ್ರಿವಿಕ್ರಮನಾಗಿ ಎರಡು ಹೆಜ್ಜೆಗಳಿಂದ ಭೂಮಿ ಮತ್ತು ಅಂತರಿಕ್ಷಗಳನ್ನು ವ್ಯಾಪಿಸಿ ಮೂರನೆಯ ಹೆಜ್ಜೆಯನ್ನು ಇವನ ತಲೆಯ ಮೇಲಿಟ್ಟು ಇವನನ್ನು ಸುತಲ ಲೋಕಕ್ಕೆ ಅಟ್ಟುವನು. ಆದರೆ ಇವನ ಔದಾರ್ಯ ಮತ್ತು ಸ್ಥೈರ್ಯಗಳನ್ನು ಮೆಚ್ಚಿ, ನೀನು ಮುಂದೆ ಬರುವ ಸಾವರ್ಣಿಕ ಮನ್ವಂತರದಲ್ಲಿ ಇಂದ್ರನಾಗುವೆ ಎಂದು ಹರಸುವನು. ದೀಪಾವಳಿಯಲ್ಲಿ ಮೂರು ದಿನ ಇವನ ರಾಜ್ಯ ನಡೆಯುವಂತೆ ಮಾಡುವನು. ಇವನು ಏಳು ಜನ ಚಿರಂಜೀವಿಗಳಲ್ಲಿ ಒಬ್ಬನಾಗುವಂತೆ ಮಾಡುವನು. ಬಲಿಚಕ್ರವರ್ತಿಯು ತನ್ನ ಯೋಗ್ಯತೆಯನ್ನು ಮೀರಿದ ಇಂದ್ರ ಪದವಿಗೆ ಆಸೆ ಪಟ್ಟದ್ದಕ್ಕಾಗಿ ಈ ದಂಡನೆಯನ್ನು ಅನುಭವಿಸಬೇಕಾಯಿತು. ಆದರೆ ಇವನ ಔದಾರ್ಯವು ಇವನನ್ನು ಚಿರಂಜೀವಿಯನ್ನಾಗಿ ಮಾಡಿತು. ಇವನಿಗೆ ಇಂದ್ರಪದವಿಯನ್ನು ತಪ್ಪಿಸಲು ಬಂದ ವಿಷ್ಣುವಿನಿಂದಲೇ ಇಂದ್ರಪದವಿಯು ದೊರೆಯುವಂತಾಯಿತು. ಬಲಿ ಪ್ರತಿಪದೆಯು ಕೃತಯುಗದ ಈ ಎಲ್ಲ ಘಟನೆಗಳನ್ನು ನೆನಪಿಗೆ ತರುತ್ತದೆ. ಬಲಿಯ ದಾನವೀರತೆಯು ಬಲಿಯ ವ್ಯಕ್ತಿತ್ವವನ್ನೇ ತ್ರಿವಿಕ್ರಮನನ್ನಾಗಿ ಮಾಡಿ ವಿಷ್ಣುವೇ ವಾಮನನಾಗುವಂತೆ ಮಾಡುತ್ತದೆ.

ಬಲಿಯು ಮೂರು ಲೋಕಗಳನ್ನೂ ವ್ಯಾಪಿಸಿಕೊಳ್ಳಲು ಧಾವಿಸುವ ಕತ್ತಲೆ. ವಿಷ್ಣುವು ಸೂರ್ಯನ ಪ್ರಕಾಶ. ಬೆಳಿಗ್ಗೆ ವಾಮನನಾಗಿ ಉದಯಿಸಿದ ಈ ಪ್ರಕಾಶ ದಿಗಂತವನ್ನೆಲ್ಲ ವ್ಯಾಪಿಸಿ ಕತ್ತಲೆಯ ತಲೆಯ ಮೇಲೆ ಕಾಲಿಟ್ಟು ಪಾತಾಳಕ್ಕೆ ತಳ್ಳುತ್ತದೆ ಎಂಬ ರೂಪಕವೂ ಈ ಕಥೆಯಲ್ಲಿದೆ. ದೀಪಾವಳಿಯ ನರಕಾಸುರವಧೆ ಮತ್ತು ಬಲಿ ಬಂಧನ ಈ ಎರಡು ಕಥೆಗಳಲ್ಲಿಯೂ ಕತ್ತಲೆಯನ್ನು ಪರಿಹರಿಸಿ ಬೆಳಕನ್ನು ಕೊಡುವದರ ರೂಪಕವಿದೆ.

ಗೋವರ್ಧನ ಪೂಜೆ

ಬಲಿ ಪ್ರತಿಪದೆಯ ದಿನ ಗೋವರ್ಧನ ಬೆಟ್ಟದ ಪೂಜೆಯನ್ನು ಮಾಡುವುದು ಇನ್ನೊಂದು ವಿಶಿಷ್ಟವಾದ ಕಾರ್ಯಕ್ರಮ. ಈ ದಿನವೇ ಮಥುರೆಯ ಹತ್ತಿರದ ಗೋವರ್ಧನ ಬೆಟ್ಟಕ್ಕೆ ಹೋಗಿ ಗೋಪಾಲಕರೆಲ್ಲ ಇಂದ್ರನ ಪೂಜೆ ಮಾಡುತ್ತಿದ್ದರು. ಕೃಷ್ಣನ ಇದನ್ನು ನಿಲ್ಲಿಸಿದನು. ಆಗ ಇಂದ್ರನು ಕುಪಿತನಾಗಿ ಧಾರಾಕಾರವಾಗಿ ಮಳೆಗರೆದನು. ಕೃಷ್ಣನು ಗೋವರ್ಧನ ಪರ್ವತವನ್ನೇ ಎತ್ತಿಹಿಡಿದು ಗೋಪಾಲಕರನ್ನೆಲ್ಲ ರಕ್ಷಿಸಿದನು. ಅಂದಿನಿಂದ ಇಂದ್ರನ ಪೂಜೆಯ ಬದಲಾಗಿ ಗೋವರ್ಧನ ಬೆಟ್ಟದ ಪೂಜೆಯು ಆರಂಭವಾಯಿತು. ಇದರ ಸವಿನೆನಪೆಂದು ರಂಗವಲ್ಲಿಯಲ್ಲಿ ಗೋವರ್ಧನ ಬೆಟ್ಟವನ್ನು ಶ್ರೀ ಕೃಷ್ಣನು ಎತ್ತಿ ಹಿಡಿದ ಚಿತ್ರವನ್ನು ಬರೆದು ಪೂಜಿಸುವ ರೂಢಿಯೂ ಬಳಕೆಯಲ್ಲಿ ಬಂದಿದೆ.



ದ್ಯೂತ-ಪ್ರತಿಪತ್

ಬಲಿ ಪ್ರತಿಪದೆಗೆ ದ್ಯೂತ ಪ್ರತಿಪತ್ ಎಂದೂ ಹೆಸರಿದೆ. ಅಂದು ಎಲ್ಲರೂ ದ್ಯೂತವನ್ನು ಆಡಲೇಬೇಕು. ದ್ಯೂತವು ನಮ್ಮ ದೇಶದಲ್ಲಿ ಬಹಳ ಹಳೆಯ ಕಾಲದಿಂದಲೂ ನಡೆದು ಬಂದ ಆಟ. ಋಗ್ವೇದದಲ್ಲಿ ಅಕ್ಷಸೂಕ್ತ ಎಂಬ ಸೂಕ್ತವೇ ಇದೆ. ಇದರಲ್ಲಿ ದ್ಯೂತವನ್ನು ಆಡಿ ಎಲ್ಲವನ್ನೂ ಕಳೆದುಕೊಂಡ ಓರ್ವ ಋಷಿಯ ಗೋಳಿನ ವರ್ಣನೆಯಿದೆ. ನಲ, ಯುಧಿಷ್ಠಿರ ಮೊದಲಾದವರು ದ್ಯೂತವನ್ನು ಆಡಿ ಕಷ್ಟಪಟ್ಟಿದುದು ಪ್ರಸಿದ್ಧವೇ ಇದೆ. ಆದರೂ ಈ ಆಟ ನಿರಂತರವಾಗಿ ನಡೆದುಕೊಂಡು ಬಂದಿದೆ. ಮೃಚ್ಛಕಟಿಕವೇ ಮೊದಲಾದ ಸಂಸ್ಕೃತ ನಾಟಕಗಳಲ್ಲಿ ಇದರ ಉಲ್ಲೇಖವು ಬರುತ್ತದೆ. ಈ ದ್ಯೂತವು ಈಗ ದೀಪಾವಳಿಯಲ್ಲಿ ಪಗಡಿಯ ಆಟದ ರೂಪದಲ್ಲಿ ಬಳಕೆಯಲ್ಲಿದೆ. ಪಾಂಡವರ ದ್ಯೂತದಾಟ ವನವಾಸ, ಮುಂದೆ ಆದ ಯುದ್ಧ ಈ ಘಟನೆಗಳನ್ನು ಚಿತ್ರಿಸುವ ಶಗಣಿಯ ಪಾಂಡವರನ್ನು ಮಾಡಿ ಇಡುವ ರೂಢಿಯಿದೆ. ಪ್ರತಿದಿನ ಒಂದೊಂದು ಘಟನೆಯನ್ನು ಚಿತ್ರಿಸುತ್ತ ಇಡೀ ಮಹಾಭಾರತದ ಕಥೆಯನ್ನು ಶಗಣಿಯ ಉಂಡೆಗಳಿಂದ ಮಾಡಿ ತೋರಿಸುವ ರೂಢಿಯಿದೆ. ದೀಪಾವಳಿಯಾದ ಮೇಲೆ ಈ ಶಗಣಿಯ ಪಾಂಡವರನ್ನೆಲ್ಲ ಮನೆಯ ಮಾಳಿಗೆಯ ಮೇಲೆ ಇಟ್ಟು ಒಣಗಿಸಿ ಬಳಿಕ ಉರುವಲಕ್ಕೆ ಉಪಯೋಗಿಸುತ್ತಾರೆ. 'ಮಾರ್ಗಪಾಲಿ' ಎಂಬ ಗ್ರಾಮದೇವತೆಯನ್ನು ಪೂಜಿಸುವದೂ ಹಗ್ಗ ಜಗ್ಗುವ ಸ್ಪರ್ಧೆಯೂ ಈ ದಿನದ ಇನ್ನೊಂದು ವೈಶಿಷ್ಟ್ಯ. ಹಗ್ಗದ ಒಂದು ಬದಿಯನ್ನು ರಾಜರು ಶ್ರೀಮಂತರು ಹಿಡಿಯುವರು. ಇನ್ನೊಂದನ್ನು ಸಾಮಾನ್ಯ ಪ್ರಜೆಗಳು ಹಿಡಿಯುವರು.



ಜಾತಿ-ಮತಭೇದವಿಲ್ಲದ, ಬಂಧು-ಮಿತ್ರರೊಡನೆ ಫಲಹಾರ: ದೀಪಾವಳಿ ಹಬ್ಬದ ವೈಶಿಷ್ಟ್ಯಗಳಲ್ಲೊಂದು

ರಾಜ್ಯದ ನಿಸ್ಸಹಾಯಕ ಹೆಣ್ಣುಮಕ್ಕಳಿಗೆ "ಅರಿಶಿನ-ಕುಂಕುಮ"ದ ಕೊಡುಗೆ.

ದೇವದಾಸಿ ಪದ್ಧತಿಯ ನಿರ್ಮೂಲನ ಹಾಗೂ ಅವರ ಪುನರುದ್ಧಾರ

ತಲೆ ತಲಾಂತರದಿಂದ ಬಂದಿದ್ದ ದೇವದಾಸಿ ಪದ್ಧತಿಯಂಥ ಹೀನ ಸಂಪ್ರದಾಯದ ಸಾಮಾಜಿಕ ಪಿಡುಗನ್ನು ತೊಡೆದು ಹಾಕಲೆಂದು ಕರ್ನಾಟಕ ದೇವದಾಸೀ (ಸಮರ್ಪಣಾ ನಿಷೇಧ) ಕಾನೂನನ್ನು ಜಾರಿಗೊಳಿಸಲಾಗಿದೆ.

ಯಾವ ಸ್ತ್ರೀಯನ್ನೂ ದೇವರು. ದೇವಾಲಯ ಅಥವಾ ಧಾರ್ಮಿಕ ಸಂಸ್ಥೆಯ ಹೆಸರಿನಲ್ಲಿ ಸಮರ್ಪಿಸುವುದನ್ನು ಈ ಕಾನೂನು ನಿಷೇಧಿಸುತ್ತದೆ. ಅಲ್ಲದೆ ಅಂತಹ ಅಪರಾಧಗಳ ಶೋಧನೆ. ವಿಮುಕ್ತಿಗೊಂಡ ಮಹಿಳೆಯರ ಪಾಲನೆ. ರಕ್ಷಣೆ. ಆಕೆಯ ಕಲ್ಯಾಣ ಹಾಗೂ ಪುನರುದ್ಧಾರಕ್ಕೂ ಈ ಕಾನೂನು ಅನುವು ಮಾಡಿಕೊಡುತ್ತದೆ. ಈ ಕಾನೂನಿನ ಉಲ್ಲಂಘನೆಯ ಅಪರಾಧಗಳಿಗೆ ರೂ. 2000 ದಿಂದ 5000 ರೂ.ಗಳವರೆಗೆ ಜುಲ್ಮಾನೆ ವಿಧಿಸಬಹುದಾಗಿದೆ.

ಹೀಗೆ ವಿಮುಕ್ತಿಗೊಂಡ ಮಹಿಳೆಯ ವಿವಾಹ ಆಕೆಯ ಪುನರುದ್ಧಾರದ ಶ್ರೇಷ್ಠ ಮಾರ್ಗ. ಇಂತಹ ಮದುವೆಗಳಿಗೆ ಉತ್ತೇಜನ ನೀಡುವ ಸಲುವಾಗಿ ರಾಜ್ಯ ಸರ್ಕಾರ ಈ ದಂಪತಿಗಳಿಗೆ 3000/- ರೂ.ಗಳ ಪ್ರೋತ್ಸಾಹ ಧನವನ್ನು ನೀಡುತ್ತದೆ. ಈ ಪ್ರೋತ್ಸಾಹ ಧನವನ್ನು ಪಡೆಯಲು ಯುವಕರು 21 ವರ್ಷದ ಮೇಲ್ಪಟ್ಟವರಾಗಿದ್ದು ಮಾಹೆಯಾನ 500 ರೂ.ಗಳ ಖಚಿತ ಸಂಪಾದನೆಯುಳ್ಳವರಾಗಿರಬೇಕು. ವಿವಾಹವಾಗುವ ದೇವದಾಸಿಯರು 18 ರಿಂದ 35 ವರ್ಷ ವಯಸ್ಸಿನವರಾಗಿದ್ದು ಕರ್ನಾಟಕದಲ್ಲಿ ಕನಿಷ್ಠ 2 ವರ್ಷಗಳಿಂದ ವಾಸವಾಗಿರಬೇಕು.

ಇದರೊಂದಿಗೆ. ಇನ್ನೂ ಅನೇಕ ಯೋಜನೆಗಳನ್ನು ರಾಜ್ಯ ಸರ್ಕಾರ ದೇವದಾಸಿಯರ ಪುನರುದ್ಧಾರಕ್ಕಾಗಿ ಹಮ್ಮಿಕೊಂಡಿದೆ. ಜನತಾ ಮನೆಗಳ ನೀಡಿಕೆ ಈ ಯೋಜನೆಗಳಲ್ಲೊಂದು. ಇದರೊಂದಿಗೇ ದೇವದಾಸಿಯರಿಗೆ ಸಾಲಗಳನ್ನು ಹಾಗೂ ಪ್ರೋತ್ಸಾಹ ಧನವನ್ನು ನೀಡಿ ತನ್ಮೂಲಕ ಅವರು ಸಣ್ಣ ಕೈಗಾರಿಕೆ. ಹೈನುಗಾರಿಕೆ ಮುಂತಾದ ವ್ಯಾಪಾರ. ಉದ್ಯೋಗಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸ್ವಾತಂತ್ರ್ಯವನ್ನು ಪಡೆಯುವಂತೆ ಮಾಡಲಾಗುವದು

ಅಲ್ಲದೆ ಸೌಂದತ್ತಿ ಮತ್ತು ಅಥಣಿಗಳಲ್ಲಿ ಅಬಲಾಶ್ರಮಗಳನ್ನು ರಾಜ್ಯ ಸರ್ಕಾರ ಸ್ಥಾಪಿಸಿದೆ. ಇಲ್ಲಿ ದೇವದಾಸಿ ಜೀವನವನ್ನು ತೊರೆದ ಮಹಿಳೆಯರಿಗೆ ಆಶ್ರಯ ನೀಡಲಾಗುತ್ತಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಿಮ್ಮ ಜಿಲ್ಲೆಯ ಸಮಾಜ ಕಲ್ಯಾ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಿ



ಕರ್ನಾಟಕ ವಾರ್ತೆ

ಅಸಹಾಯಕರಿಗೊಂದು ಸಹಾಯದ ಯೋಜನೆ.

ಬಲಿ ಪ್ರತಿಪದೆಯು ವಿಕ್ರಮರಾಜನು ಸಿಂಹಾಸನವನ್ನು ಏರಿದ ದಿನವೂ ಆಗಿದೆ. ವಿಕ್ರಮ ಸಂವತ್ಸರವು ಅಂದಿನಿಂದ ಆರಂಭವಾಗುತ್ತದೆ.

ಯಮದ್ವಿತೀಯಾ (ಭಾವಬಿದಿಗೆ)

ಇವರ ಮರುದಿನ ಭಾವಬಿದಿಗೆ. ಅಂದು ಅಕ್ಕತಂಗಿಯರು ಅಣ್ಣತಮ್ಮಂದಿರಿಗೆ ಹಬ್ಬದ ಊಟ ಹಾಕಿ ಉಡುಗರೆಗಳನ್ನು ಕೊಡುವದು ಮುಖ್ಯ. ಈ ಪದ್ಧತಿಯನ್ನು ಯಮ ಯಮಿಯರು ಬಳಕೆಯಲ್ಲಿ ತಂದರು. ಯಮನ ತಂಗಿ ಯಮಿಯು ತನ್ನ ಅಣ್ಣನನ್ನು ಅನೇಕ ಸಲ ಊಟಕ್ಕೆ ಕರೆಯುತ್ತಿದ್ದಳಂತೆ. ಆದರೆ ಅವನಿಗೆ ಸಮಯವೇ ಸಿಗುತ್ತಿರಲಿಲ್ಲ. ಕೊನೆಗೆ ಯಮಿಯು ದೀಪಾವಳಿಯ ದ್ವಿತೀಯಾದ



ಭಾವ ಬಿದಿಗೆಯ ದಿನ ಸಹೋದರನಿಗೆ ಆರತಿ



ದಿನ ಬಲಾತ್ಕಾರದಿಂದ ಅವನನ್ನು ಕರೆದು ಅಭ್ಯಂಜನ ಸ್ನಾನ ಮಾಡಿಸಿ ಹಬ್ಬದ ಊಟ ಹಾಕಿ ಉತ್ಸವ ಮಾಡಿದಳಂತೆ. ಅಂದು ನರಕಕ್ಕೆ ಹೋಗಬೇಕಾದವರನ್ನು ಬಿಟ್ಟು ಬಿಡಲು ಹೇಳಿದಳಂತೆ ಎಲ್ಲ ಅಕ್ಕ ತಂಗಿಯರೂ ತಮ್ಮ ಅಣ್ಣ ತಮ್ಮಂದಿರಿಗೆ ಹಬ್ಬ ಮಾಡಿಸಿ ಉಡುಗರೆ ಕೊಡಬೇಕೆಂದು ಕಟ್ಟಳೆ ಮಾಡಿದಳಂತೆ. ಭಾವ ಬಿದಿಗೆಯ ದಿನ ಯಮಲೋಕಕ್ಕೆ ರಜಾ ಕೊಡುವ ಪದ್ಧತಿ ಅಂದಿನಿಂದ ಪ್ರಾರಂಭವಾಯಿತು. ಅಣ್ಣ ತಮ್ಮಂದಿರು ಅಂದು ತಮ್ಮ ಮನೆಯಲ್ಲಿ ಊಟ ಮಾಡಬಾರದು. ಅಕ್ಕ ತಂಗಿಯರ ಮನೆಗೇ ಹೋಗಬೇಕು. ಅದರಲ್ಲಿಯೂ ತಂಗಿಗೆ ಹೆಚ್ಚಿನ ಪ್ರಾಶಸ್ತ್ಯ. ಅಕ್ಕತಂಗಿಯರಿಲ್ಲದವರು ಚಿಕ್ಕಪ್ಪ ದೊಡ್ಡಪ್ಪರ ಮಗಳಾದ ಅಕ್ಕ ಅಥವಾ ತಂಗಿಯ ಮನೆಗೆ ಹೋಗಬೇಕು. ಅವರೂ ಇಲ್ಲದಿದ್ದರೆ ಪ್ರೀತಿಯ ಅಕ್ಕ ತಂಗಿಯರ ಮನೆಗೆ ಹೋಗಬೇಕು. ಹೀಗೆ ಯಮ ಯಮಿಯರಿಂದ ಆರಂಭವಾದ ಈ ಹಬ್ಬಕ್ಕೆ ಯಮ ದ್ವಿತೀಯಾ ಎಂದೂ ಹೆಸರಿದೆ. ಹಿಂದಿನ ಕೆಲವು ರಾಜರು ಭಾವ ಬಿದಿಗೆಯ ದಿನ ಜೇಲಿನಲ್ಲಿದ್ದವ



ರನ್ನೂ ಅಕ್ಕ ತಂಗಿಯರ ಮನೆಗೆ ಹೋಗಲು ಬಿಡುಗಡೆ ಮಾಡುತ್ತಿದ್ದ ಉಲ್ಲೇಖಗಳಿವೆ.

ಪಟಾಕಿಗಳ ಗದ್ದಲ ದೀಪಾವಳಿಯ ಇನ್ನೊಂದು ವೈಶಿಷ್ಟ್ಯ. ಇತ್ತೀಚೆಗೆ ದೀಪಾವಳಿ ಸಂಚಿಕೆಗಳೂ ದೀಪಾವಳಿ ಗ್ರೀಟಿಂಗ್ಸ್ ಕಾರ್ಡುಗಳೂ ಈ ಗದ್ದಲಕ್ಕೆ ಸೇರಿಕೊಂಡಿವೆ. ಆರ್ಕಿಯಾಲಜಿಯವರು ಉತ್ಖನನವನ್ನು ಕೈಕೊಂಡಾಗ ನಗರಗಳ ಕೆಳಗೆ ನಗರಗಳು ದೊರೆಯುವಂತೆ ದೀಪಾವಳೀ ಹಬ್ಬದ ಉತ್ಖನನವನ್ನು ಕೈಕೊಂಡರೆ ಕಥೆಗಳ ಕೆಳಗೆ ಕಥೆಗಳು ದೊರೆಯುವವು. ವಿದೇಶೀ ಇತಿಹಾಸಕಾರರ ಉಲ್ಲೇಖ ನಮ್ಮ ದೇಶದ ಸಾಹಿತ್ಯ ಇತಿಹಾಸ ಪುರಾಣಗಳಲ್ಲಿ ದೀಪಾವಳಿಯ ಉಲ್ಲೇಖ ವಿಪುಲ



ಅಸಹಾಯಕ ವಿಧವೆಯರ ಸಂಕಷ್ಟಗಳನ್ನು ಕಡಿಮೆ ಮಾಡುವ ಒಂದು ಪ್ರಯತ್ನ.

ಅಸಹಾಯಕ ವಿಧವೆಯರ ಸಂಕಷ್ಟಗಳನ್ನು ಕಡಿಮೆ ಮಾಡಲು ಒಂದು ಪ್ರಯತ್ನ. ನಿರಾಶ್ರಿತ ವಿಧವೆಯರಿಗೆ ಮಾಸಾಶನ ಯೋಜನೆ.

ದಿಕ್ಕಿಲ್ಲದ. ನನ್ನವರೆನ್ನಲು ಯಾರೂ ಇರದ ಅನಾಥ ವಿಧವೆಯರಿಗೆ ಒಂದು ಸಹಾಯ ಹಸ್ತ. ಈಗ ಅವರು ತಿಂಗಳಿಗೆ 50 ರೂ.ಗಳ ಮಾಸಾಶನ ಪಡೆಯಲು ಅರ್ಜಿ ಹಾಕಿಕೊಳ್ಳಬಹುದು.

ಅರ್ಹತೆಗಳು: 18 ವರ್ಷಕ್ಕೆ ಮೇಲ್ಪಟ್ಟಿರಬೇಕು.

ಕರ್ನಾಟಕದಲ್ಲಿ 3 ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ವಾಸ ಮಾಡುತ್ತಿರಬೇಕು.

ವಾರ್ಷಿಕ ಆದಾಯ 1500 ರೂ.ಗಳಿಗೂ ಕಡಿಮೆ ಇರಬೇಕು:

ಅರ್ಜಿನಮೂನೆಗಳು ಹಾಗೂ ವಿವರಗಳು ಪಂಚಾಯಿತಿ ತಾಲ್ಲೂಕು. ಮುನಿಸಿಪಲ್ ಅಥವಾ ಕಾರ್ಪೊರೇಷನ್ ಕಛೇರಿಗಳಲ್ಲಿ ಲಭಿಸುತ್ತವೆ.

ಖಾಲೀ ಹಾಳೆಯಲ್ಲಿ ಬರೆದುಕೊಂಡ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ:

ಅಗತ್ಯವಿರುವ ದಾಖಲೆಗಳು:
ಜನನ ಮರಣಗಳ ರಿಜಿಸ್ಟ್ರಾರ್ ಅಥವಾ ಅವರಿಂದ ಅಧಿಕಾರ ಪಡೆದವರು ನೀಡುವ ವಿಧವಾ ಪ್ರಮಾಣ ಪತ್ರ

ಹುಟ್ಟಿದ ದಿನಾಂಕದ ಬಗ್ಗೆ ಪ್ರಮಾಣ ಪತ್ರ ಅಥವಾ ಶಾಲಾ ಬಿಡುಗಡೆ ಪತ್ರ

ಪಾಸ್‌ಪೋರ್ಟ್ ಅಳತೆಯ 3 ಭಾವಚಿತ್ರಗಳು.

ಈ ಮಾಸಾಶನದ ಅವಶ್ಯಕತೆಯಿರುವ ನಿರಾಶ್ರಿತ ವಿಧವೆಯರು ನಿಮಗೆ ತಿಳಿದಿದ್ದಲ್ಲಿ ಅವರಿಗೆ ಈ ಯೋಜನೆಯ ಬಗ್ಗೆ ತಿಳಿಸಿ. ಅವರು ಅರ್ಜಿ ಹಾಕಿಕೊಳ್ಳಲು ಸಹಾಯ ಮಾಡಿ.



ಕರ್ನಾಟಕ ವಾರ್ತೆ

ಅಸಹಾಯಕರಿಗೊಂದು ಸಹಾಯದ ಯೋಜನೆ.



ವಾಗಿ ದೊರೆಯುವದಲ್ಲದೆ ವಿದೇಶೀ ಚರಿತ್ರಕಾರರಾದ ಅಲ್ಬೆರುನಿ, ಮುಲ್ತಾನದ ಅಬ್ದುಲ್ ರಹಮಾನ್, ನೆಕೋಲೋ, ಐನ್ಯೆ ಅಕಬರಿ, ಹಾಬ್ಸನ್ ಜಾಬ್ಸನ್ ರೆಕಾರ್ಡುಗಳು ಇತ್ಯಾದಿಗಳೂ ದೀಪಾವಳಿಯ ವಿಜೃಂಭಣೆಯನ್ನು ಬಾಯಿ ತುಂಬ ಹೊಗಳುವರು. ವಿಜಯನಗರದ ರಾಜರು ವೈಭವದಿಂದ ದೀಪಾವಳಿಯನ್ನು ಮಾಡುತ್ತಿದ್ದುದನ್ನು ವರ್ಣಿಸುವರು. ದೀಪಾವಳಿಯು ಭಾರತೀಯರಿಗೆ ಅತ್ಯಂತ ಆಕರ್ಷಕವಾದ ಸಾಂಸ್ಕೃತಿಕ ಹಬ್ಬವು. ದೀಪಗಳ ಮಾಲೆಗಳಿಂದ ಹೊರಗಿನ ಕತ್ತಲೆಯನ್ನು ದೂರ ಸರಿಸುವ ಈ ಹಬ್ಬದ ಹಿಂದೆ ಅಡಗಿದ ಕಥೆಗಳು ಬೋಧನೆಯಿಂದ ಒಳಗಿನ ಅಜ್ಞಾನ ಅಹಂಕಾರಗಳೆಂಬ ಕತ್ತಲೆಯನ್ನು ದೂರ ಸರಿಸುವ 'ತಮಸೋ ಮಾ ಜ್ಯೋತಿರ್ಗಮಯ' ಎಂಬಂತೆ ಕತ್ತಲೆಯನ್ನು ದೂರ ಮಾಡಿ ಬೆಳಕಿನ ಕಡೆಗೆ ಒಯ್ಯುವ ಹಬ್ಬವು. ○



ವಿ 178



ಪ್ರಕಾಶ ಪಡುಕೋಣೆ

ಕರ್ನಾಟಕದಿಂದ ಮಿಂಚಿದ ಕ್ರೀಡಾಳುಗಳು

ಡಾ. ಕೆ. ವಿಶ್ವನಾಥ್

ಕರ್ನಾಟಕವು ಭಾರತೀಯ ಕ್ರೀಡಾ ಪ್ರಪಂಚಕ್ಕೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿತಂದ ಕ್ರೀಡಾಪಟುಗಳನ್ನು ನೀಡಿದೆ. ಈ ಪಟ್ಟಿಯಲ್ಲಿ ಕ್ರಿಕೆಟ್ ಸಿಂಹಪಾಲು ಪಡೆದಿದೆ.


ಕ್ರಿಕೆಟ್ಟನ್ನುಳಿದು ಇನ್ನಾವುದೇ ಕ್ರೀಡೆಯಲ್ಲಿ ಕರ್ನಾಟಕದ ಆಟಗಾರರು ಹೆಚ್ಚು ಸಂಖ್ಯೆಯಲ್ಲಿ ಇರದಿದ್ದರೂ ಆಯ್ಕೆಯಾದವರಂತೂ ರಾಜ್ಯ-ರಾಷ್ಟ್ರಕ್ಕೆ ಹೆಸರು ತರುವಲ್ಲಿ ಹಿಂದೆ ಬಿದ್ದಿಲ್ಲ.

ಒಂದು ಕಾಲದಲ್ಲಿ ಕ್ರಿಕೆಟ್ ಕ್ರೀಡೆಗಳ ರಾಜನಾಗಿ ಮೆರೆದದ್ದುಂಟು. ಆದರೆ ಕಾಲ ಬದಲಾದಂತೆ ಕ್ರೀಡಾಪಟುಗಳಿಂದ ಹಿಡಿದು ಕ್ರೀಡಾಭಿಮಾನಿಗಳವರೆಗೆ ಅಂಧಾಭಿಮಾನದ ಪೊರೆ ಸರಿಸುತ್ತಿದ್ದಾರೆ. ಇದು ಕ್ರೀಡಾ ಬೆಳವಣಿಗೆಗೆ ಶುಭ ಸೂಚಕ.

ಕ್ರಿಕೆಟ್‌ನಲ್ಲಿ ಪಂಚಪಾಂಡವರೆನಿಸಿದ್ದ ಪ್ರಸನ್ನ, ಚಂದ್ರಶೇಖರ್, ಕಿರ್ಮಾನಿ, ಜಿ. ಆರ್. ವಿಶ್ವನಾಥ್, ಬ್ರಿಜೇಶ್ ಪಟೇಲ್ ರಿದ್ದ ಸಮಯದಲ್ಲಿ ಅಭಿಮಾನಿಗಳ ಕಿವಿಯಲ್ಲಿ ಕ್ರಿಕೆಟ್ ಗೊತ್ತಿರಲಿ ಇಲ್ಲದಿರಲಿ ಟ್ರಾನ್ಸಿಸ್ಟರ್ ಇರುತ್ತಿತ್ತು. ಅವರ ಸಂಖ್ಯೆ ಕಡಿಮೆಯಾದಂತೆ ಆ ಹುಚ್ಚು ಬಹಳಷ್ಟು ಕಡಿಮೆಯಾಗಿದೆ.

ಕರ್ನಾಟಕಕ್ಕೆ ಕೀರ್ತಿ ಕಳಶವಿಟ್ಟ ಮತ್ತೊಬ್ಬ ಕನ್ನಡಿಗರೆಂದರೆ ಪ್ರಕಾಶ್ ಪಡುಕೋಣೆ. ಎಲೆಮರೆಯಕಾಯಾಗಿದ್ದ ಪಡುಕೋಣೆ ಆಲ್ ಇಂಗ್ಲೆಂಡ್ ಪ್ರಶಸ್ತಿ ಪಡೆದ ನಂತರ ಕೀರ್ತಿಶಿಖರಕ್ಕೇರಿದರು.

ಹೀಗೆ ಕರ್ನಾಟಕ ಕ್ರಿಕೆಟ್, ಬ್ಯಾಡ್ಮಿಂ



ಟೆನ್‌ನಲ್ಲಿ ಕೀರ್ತಿತಂದವರೆ ಟೇಬಲ್ ಟೆನ್ನಿಸ್‌ನಲ್ಲಿ ವಸಂತ್ ಭಾರದ್ವಾಜ್, ಲಕ್ಷ್ಮಿ ಕಾರಂತ್ ಅವರುಗಳಲ್ಲದೆ ಅಥ್ಲೆಟಿಕ್‌ನಲ್ಲಿ ಚಂದನಾರಾವ್ ಏಕಾಏಕಿ ಅಂತರರಾಷ್ಟ್ರೀಯ ಖ್ಯಾತಿ ಪಡೆದರು. ಅಲ್ಲದೆ ಸ್ನೂಕರ್ ಮತ್ತು ಬಿಲಿಯರ್ಡ್ಸ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದವರೆಂದರೆ ಅರವಿಂದ ಸವೂರ್ ಇವರೊಂದಿಗೆ ಚಂಬಾಮುತ್ನಾಳ್ ಹಿಂದ್ ಕೇಸರಿ ಪ್ರಶಸ್ತಿ ಪಡೆದರೆ ಭಾರತ್ ಕುಮಾರ್ ಪ್ರಶಸ್ತಿಯನ್ನು ಎಂ. ಎಂ ಬ್ಯಾಹಟ್ಟಿ ಪಡೆದರು. ಹೀಗೆ ಕರ್ನಾಟಕದ ಕೊಡುಗೆ ಅಪಾರ. ಅದರೊಂದಿಗೆ ಇತ್ತೀಚೆಗೆ ಬೆಳಕಿಗೆ ಬಂದವರೆಂದರೆ ಕಿರಿಯ ಫುಟ್‌ಬಾಲ್ ಆಟಗಾರ ಬಾಬುಮಣಿ.

ಬಾಬುಮಣಿ ಕಲ್ಕತ್ತ ಸೇರಿದರು. ಅವರೊಂದಿಗೆ ನಗರದಿಂದ ಕಲ್ಕತ್ತಕ್ಕೆ ತೆರಳಿದವರೆಂದರೆ ರವಿಕುಮಾರ್, ಮುಷೀರ್ ಅಹ್ಮದ್ ಮತ್ತು ಅಸ್ಲಾಂಖಾನ್.

ಬಾಬುಮಣಿ ನಗರದ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಜ್ಯೂನಿಯರ್ ತಂಡದಲ್ಲಿ ಒಂದು ವರ್ಷ ಆಡಿದ ನಂತರ ರಾಜ್ಯವನ್ನು ಪ್ರತಿನಿಧಿಸಿದ್ದರು. ಇದಾದ ನಂತರ ಬಾಬುಮಣಿ ಸೀನಿಯರ್ ತಂಡಕ್ಕೆ ಬಡ್ತಿ ಪಡೆದರೆಂಬ ಕೂಗು ಇತ್ತಾದರೂ ಅವರನ್ನು ಯಾವ ತಂಡಕ್ಕೂ ಸೇರುವ ಮೊದಲೇ ಮೋಹನ್ ಬಾಗನ್ ಹಾರಿಸಿತು.

ಬಾಬು ಅವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಟೂರ್ನಿಗಳಲ್ಲೂ ಆಡಿದ್ದಾರೆ. ಅವರು ನೆಹರು ಸ್ವರ್ಣಕಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಇತ್ತೀಚೆಗೆ ನಗರದಲ್ಲಿ ನಡೆದ ಫೆಡರೇಷನ್ ಕಪ್ ಟೂರ್ನಿಯಲ್ಲಿ ಮೋಹನ್‌ಬಾಗನ್ ಪರವಾಗಿ ಆಡಿ ಉತ್ತಮ ಪ್ರದರ್ಶನ ನೀಡಿದ್ದರು.

ತರಬೇತಿಪಡೆದು ಉತ್ತಮ ಮಟ್ಟತಲುಪುತ್ತಿದ್ದಂತೆ ಅವರುಗಳನ್ನು ಕಲ್ಕತ್ತದ ಯಾವುದಾದರೂ ಕ್ಲಬ್‌ಗಳು ಅಪಹರಿಸುತ್ತವೆ.

ನಗರದಲ್ಲಿರುವ ಖಾಸಗಿ ಕ್ರಿಕೆಟ್ ಕ್ಲಬ್‌ಗಳಂತೆ ಫುಟ್‌ಬಾಲ್ ಕ್ಲಬ್‌ಗಳು ಉದಯಿಸಿದರೆ ಕ್ರೀಡಾಪಟುಗಳ ವಲಸೆಹೋಗುವುದನ್ನು ತಡೆಯಬಹುದು.

ಆದರೆ ನಗರದಲ್ಲಿ ಅಂಥ ಕ್ಲಬ್‌ಗಳ ಕೊರತೆ ಇದೆ. ಕೈಗಾರಿಕಾ ಕ್ಲಬ್‌ಗಳು ಆ ಕೊರತೆ ನೀಗಲು ಅಸಾಧ್ಯ. ಅದಕ್ಕಿರುವ ಕಟ್ಟುಪಾಡುಗಳನ್ನು ದಾಟಿ ಬರುವುದು ಆಗದ ಮಾತು. ಅವು ಕ್ರೀಡಾಪಟುಗಳಿಗೆ ಜೀವನೋಪಾಯಕ್ಕೆ ದಾರಿತೋರುವುದರೊಂದಿಗೆ ಅವರ ಕ್ರೀಡಾಮಟ್ಟ ಬೆಳೆಯಲು ಸಹಾಯವಾಗಬಲ್ಲವಷ್ಟೆ.

ಕೈಗಾರಿಕಾ ಕ್ಲಬ್‌ಗಳಿಗೂ ಖಾಸಗಿ ಕ್ಲಬ್‌ಗಳಿಗೂ ಇರುವ ವ್ಯತ್ಯಾಸವೆಂದರೆ ಖಾಸಗಿ ಕ್ಲಬ್‌ಗಳು ಯಾವುದೇ ಕಟ್ಟುಪಾಡಿಗೆ ಒಳಗಾಗದೆ ಆಟಗಾರರು ಬೇಡುವ ಮೊತ್ತ ತೆರಲು ಸಿದ್ಧವಿರುತ್ತವೆ. ಇದರಿಂದ ಕ್ರೀಡಾಪಟುಗಳು ಅತ್ತ ವಾಲುವುದು ಸಹಜ. ಕರ್ನಾಟಕದಲ್ಲಿ ಹಲವು ಕ್ಲಬ್‌ಗಳಿದ್ದರೂ ಅವು ಆರ್ಥಿಕವಾಗಿ ಬಲವಾಗಿಲ್ಲ.

ಕರ್ನಾಟಕದಲ್ಲೂ ಅಂಥ ಕ್ಲಬ್‌ಗಳು ಉದಯಿಸಿದರೆ ಆಗ ರಾಜ್ಯದಲ್ಲಿ ಶ್ರೇಷ್ಠರಾದ ಕ್ರೀಡಾಪಟುಗಳು ಇಲ್ಲೇ ತಮ್ಮ ಇಚ್ಛೆ ಪೂರೈಸಿಕೊಳ್ಳಲು ಸಾಧ್ಯವಾಗುವುದರೊಂದಿಗೆ ಕಲ್ಕತ್ತಾದ ಕ್ಲಬ್‌ಗಳಿಗೆ ಸವಾಲೆನಿಸುವ ಕ್ರೀಡಾಪಟುಗಳನ್ನು ತಯಾರು ಮಾಡಲು ಸಾಧ್ಯ.

ಕ್ರೀಡಾ ಮನೋಭಾವದ ಬಂಡವಾಳದಾರರು ಮುಂದೆಬಂದಲ್ಲಿ ಬಾಬುಮಣಿಯಂತಹ ಹಲವಾರು ಕ್ರೀಡಾಪಟುಗಳು ಬೆಳಕಿಗೆ ಬರಲು ಸಹಾಯಕವಾಗುತ್ತದೆ. ಅಂಥಕ್ಲಬ್‌ಗಳು ಉದಯಿಸಿ ಬೆಂಗಳೂರು ನಗರ ಕಲ್ಕತ್ತಕ್ಕಿಂತ ಮೇಲೇರಲಿ ಅವು ಆದಷ್ಟು ಬೇಗ ಉದಯಿಸಲಿ.

ಲಕ್ಷ್ಮೀ ಕಾರಂತ್



ಬಾಬುಮಣಿ

೦ ೦ ೦ ೦

ಬಾಲ್‌ಬ್ಯಾಡ್ಮಿಂಟನ್‌ನಲ್ಲಿ ಕರ್ನಾಟಕ ವನಿತೆಯರು ವಿಶ್ವದಾಖಲೆ ಬರೆದರೂ ಬೇರೆ ಕ್ರೀಡೆಗಳಷ್ಟು ಪ್ರಚಾರದ ಕೊರತೆಯಿಂದಾಗಿ ಇದು ಕೆಲವರಿಗೆ ಮಾತ್ರ ಗೊತ್ತಿರುವ ವಿಷಯದಂತಾಗಿದೆ.

ಕರ್ನಾಟಕದಲ್ಲಿ ಬ್ಯಾಡ್ಮಿಂಟನ್‌ನ ಹುಟ್ಟೇ ಅನಿರೀಕ್ಷಿತ. ಸುಮಾರು 30ವರ್ಷಗಳ ಹಿಂದೆ ಬೆಂಗಳೂರಿನ ಬಸವನಗುಡಿ ಮಹಿಳಾ ಮಂಡಳದ ಕೆಲ ಸದಸ್ಯೆಯರು ಟೆನಿಸ್ ಅಭ್ಯಾಸ ಮಾಡುತ್ತಿದ್ದಾಗ ಬೆಂಗಳೂರಿನಲ್ಲೇ ವಾಸವಾಗಿರುವ ಶಂಕರನ್, ವಾಹಬ್ ಹಾಗೂ ಜೋಸೆಫ್‌ರಿಂದ ಬ್ಯಾಡ್ಮಿಂಟನ್ ಉದಯಕ್ಕೆ ಕಾರಣವಾಯಿತು.

ಕ್ಲಬ್‌ನ ಸದಸ್ಯೆ ಶ್ರೀಮತಿ ಸುಶೀಲಾ ರಾಜಗೋಪಾಲ್ ತಂಡದವರು ಬ್ಯಾಡ್ಮಿಂಟನ್ ಆರಂಭಿಸಿದರು ಆರಂಭದಲ್ಲಿ ಮದ್ರಾಸಿನ ಟೂರ್ನಿಯಲ್ಲಿ ಭಾಗವಹಿಸಲು ಆಗಿನ ಕಾಲದ ಸಂಪ್ರದಾಯ ಅವರ ಉತ್ಸಾಹಕ್ಕೆ ಅಡ್ಡಬಂದಿತು. ಆದರೆ ಛಲಬಿಡದೆ ನಡೆಸಿದ ಪ್ರಯತ್ನ, ಮಾಡಿದ ಒಗ್ಗಟ್ಟಿನ ಗಟ್ಟಿ ಮನಸ್ಸು ಕರ್ನಾಟಕ 30 ವರ್ಷಗಳ ನಂತರ ದಾಖಲೆ ಸ್ಥಾಪಿಸಲು ನೆರವಾಯಿತು. ಅವರು ಇಷ್ಟು ಸುಲಭವಾಗಿ ಈ ದಾಖಲೆ ಸಾಧಿಸಲು ಸಾಧ್ಯವೆಂದು ಯಾರೂ ಊಹಿಸಿರಲಿಲ್ಲ.

ಕರ್ನಾಟಕ ಮಹಿಳಾ ಬಾಲ್ ಬ್ಯಾಡ್ಮಿಂಟನ್ ತಂಡದ ಮತ್ತೊಂದು ವಿಶಿಷ್ಟವೆಂದರೆ 30 ವರ್ಷಗಳಲ್ಲಿ ಅದು ಇದುವರೆಗೂ ಸೋಲಿನ ಕಹಿಯನ್ನೇ ಸವಿದಿಲ್ಲ.

ಸಧ್ಯದ ಮಹಿಳಾ ತಂಡ ಹಿರಿಯರ ಮೇಲ್ಪಂಕ್ತಿಯನ್ನು ಚಾಚುತಪ್ಪದೆ ಅನುಸರಿಸುತ್ತಿದೆ. ಪ್ರಸಕ್ತ ತಂಡದ ನಾಯಕಿ ಮೀರಾ.

ಬಾಲ್ ಬ್ಯಾಡ್ಮಿಂಟನ್ ಕ್ರೀಡೆಯನ್ನು ನಗರದಲ್ಲಿ ಹುಟ್ಟಿ ಹಾಕಿದ ಬಸವನಗುಡಿಯ ಶಂಕರನ್ ತಮ್ಮ ಇಳಿವಯಸ್ಸಿನಲ್ಲೂ ಬ್ಯಾಡ್ಮಿಂಟನ್ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದು ಇತ್ತೀಚೆಗೆ ರಾಷ್ಟ್ರೀಯ ಮಟ್ಟದ ಟೂರ್ನಿಯನ್ನು ನಗರದಲ್ಲಿ ನಡೆಸಿದಾಗಲೂ ಅವರ ವಯಸ್ಸು ಅವರ ಉತ್ಸಾಹದ ಮುಂದೆ ಕಿರಿಯರನ್ನು ನಾಚಿಸುವಂತಿತ್ತು.

೦ ೦ ೦

ಐದು ವರ್ಷಗಳ ಹಿಂದೆ ನಗರ ಅಥವಾ ರಾಜ್ಯ ಮಟ್ಟದ ಮಹಿಳಾ ಈಜು ಸ್ಪರ್ಧೆಯೆಂದರೆ ಅನಿತಾ ಪ್ರಸಾದ್ ಮತ್ತು ಶಹನಾಜ್ ಶಕೂರ್ ಪ್ರಶಸ್ತಿಗಳಿಸುವುದು ಖಚಿತವೆಂದೇ ಲೆಕ್ಕ ಹಾಕಲಾಗುತಿತ್ತು. ಅನಿತಾ ಪ್ರಸಾದ್ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದಿರುವುದಲ್ಲದೆ ಇತರ ಹಲವು ಪ್ರಶಸ್ತಿ ಪಡೆದಿರುವುದರೊಂದಿಗೆ ಏಷ್ಯನ್ ಈಜು ಸ್ಪರ್ಧೆಯಲ್ಲೂ ಈಕೆಯದೇ ಸಾರ್ವಭೌಮತ್ವವಾಗಿತ್ತು.

ಅವರ ನಂತರ ಬೆಂಗಳೂರಿನ ಮತ್ತೊಬ್ಬ ಮತ್ಸ್ಯಕನ್ಯೆ ಶಹನಾಜ್ ಶಕೂರ್ ಅವರೂ ಅನಿತಾ ಹಾದಿಯಲ್ಲೇ ನಡೆದು ಪ್ರಶಸ್ತಿಗಳನ್ನು ಪಡೆದರು. ಅಲ್ಲದೆ ಇತ್ತೀಚೆಗೆ ಏಷ್ಯನ್ ವಯೋಮಿತಿಯ ಈಜು ಸ್ಪರ್ಧೆಯಲ್ಲಿ ಶಕೂರ್ ಚಿನ್ನದ ಹುಡುಗಿ ಎನಿಸಿದರು. ರಾಷ್ಟ್ರೀಯ ಸ್ಪರ್ಧೆಗಳಲ್ಲೂ ಇವರಿಬ್ಬರ ಸಾಧನೆ ಅಪಾರ. ಇವರ ಪ್ರತಿಭೆಯ ಜೊತೆಗೆ ಇನ್ನೂ ಹಲವು ಈಜುಗಾರ್ತಿಯರು ಬೆಳಕು ಕಾಣುತ್ತಿದ್ದಾರೆ.

೦ ೦ ೦

ಇತ್ತೀಚೆಗೆ ಅಥ್ಲೆಟಿಕ್‌ನಲ್ಲಿ ಹೆಸರು ಮಾಡುತ್ತಿದ್ದ ಕಿಶೋರಿಯೆಂದರೆ ದಕ್ಷಿಣ ಕನ್ನಡದ ವಂದನಾರಾವ್ ಅವರು. 1984ರವರೆಗೂ ಎಲೆಮರೆಯ ಕಾಯಿಯಂತಿದ್ದು ಸಿಯೋಲ್ ಒಲಿಂಪಿಕ್ಸ್‌ಗೆ ಆಯ್ಕೆಯಾದ ನಂತರ ಏಕಾಏಕಿ ಕೀರ್ತಿ ಶಿಖರಕ್ಕೆ ಏರಿದರು.

ವಂದನಾರಾವ್ ಅಲ್ಲಿಯವರೆಗೂ ಅಥ್ಲೆಟಿಕ್‌ನಲ್ಲಿ ಅಂಥ ಸಾಧನೆಯನ್ನೇನೂ ಮಾಡಿರಲಿಲ್ಲ. ಸಿಯೋಲ್‌ನಲ್ಲಿ ಪದಕ ಪಡೆಯದಿದ್ದರೂ ಪ್ರತಿ ಹಂತದಲ್ಲೂ ಅವರ ಹೆಸರು ಕೇಳಿ ಬರುವಂತೆ ಮಾಡಿದರು.

ಕಳೆದ ವರ್ಷ ಮೈಸೂರಿನಲ್ಲಿ ನಡೆದ ದಸರಾ ಕ್ರೀಡಾಕೂಟದಲ್ಲಿ ಸ್ಪರ್ಧಿಸಬೇಕಿತ್ತು. ಆದರೆ ಕಾಲುನೋವಿನಿಂದ ಹಿಂದೆ ಸರಿಯಬೇಕಾಯಿತು. ನಂತರ ಈ ವರ್ಷದ ಆರಂಭದಲ್ಲಿ ಬಾಗಲಕೋಟೆಯಲ್ಲಿ ನಡೆದ ಸ್ಪರ್ಧೆಯಲ್ಲೂ ಭಾಗವಹಿಸಲು, ಸಾಧ್ಯವಾಗಲಿಲ್ಲ. ನಂತರ ಚೇತರಿಸಿಕೊಂಡು ಇತ್ತೀಚೆಗೆ ಜಕಾರ್ತಾದಲ್ಲಿ ನಡೆದ 6 ನೇ ಏಷ್ಯನ್ ಟ್ರ್ಯಾಕ್ ಮತ್ತು ಫೀಲ್ಡ್ ಕೂಟದಲ್ಲಿ ಭಾಗವಹಿಸಿ 200 ಮೀಟರ್ಸ್ ಓಟದಲ್ಲಿ ಸ್ಪರ್ಧಿಸಿ ಕಂಚಿನ ಪದಕ ತಂದಿತ್ತರು. ಇದು ಆಯ್ಕೆದಾರರಿಗೆ ಮತ್ತು ಕರ್ನಾಟಕಕ್ಕೆ ಸಮಾಧಾನದ ಸಂಗತಿಯಾಯಿತು. ಅವರಿಗೆ ಪ್ರೋತ್ಸಾಹ ನೀಡಿದವರೆಂದರೆ ಅಂತರರಾಷ್ಟ್ರೀಯ ಖ್ಯಾತಿ ಪಿ. ಟಿ. ಉಷಾ. ಅವರು ಸ್ವರ್ಣ ಪದಕಗಳನ್ನು ಕೊಳ್ಳೆ ಹೊಡೆಯುವುದರೊಂದಿಗೆ ಅಲ್ಲಿನ ಖ್ಯಾತ ಸ್ಪರ್ಧಿಗಳಿಗಿಂತ ಸೂಪರ್ ಸ್ಟಾರ್ ಎನಿಸಿದರು.

ಅಲ್ಲದೆ ಅಕ್ಟೋಬರ್ 4 ರಿಂದ 6 ರವರೆಗೆ ಕ್ಯಾನ್‌ಬೆರಾದಲ್ಲಿ ನಡೆಯುವ ವಿಶ್ವಕಪ್ ಅಥ್ಲೆಟಿಕ್‌ಗೆ ಆಯ್ಕೆಯಾದ ಉಷಾ ನಾಯಕತ್ವದ 7 ಮಂದಿಯ ತಂಡದಲ್ಲಿ ವಂದನಾರಾವ್ ಅವರೂ ಇದ್ದಾರೆ. ಈ ಲೇಖನ ಪ್ರಕಟವಾಗುವ ವೇಳೆಗೆ ಅವರು ಪದಕ ಪಡೆದು ಕರ್ನಾಟಕಕ್ಕೇ ಅಲ್ಲದೆ ರಾಷ್ಟ್ರಕ್ಕೂ ಕೀರ್ತಿ ತರಲೆಂದು ಹಾರೈಸೋಣ.

೦ ೦ ೦

ಬಿಜಾಪುರದ ಹದಿನೆಂಟರ ಹರೆಯದ ರೇಣುಕಾ ಫಡತರೆ ಅವರು ರಾಷ್ಟ್ರದ

ದೀಪಾವಳಿಯ ಹಾರ್ದಿಕ ಶುಭಾಶಯಗಳು



ಹೋಟೆಲ್ ಅನುಪಮ

ಸ್ಟೇಶನ್ ರೋಡ್, ಬೆಳಗಾವಿ

ಆಧುನಿಕ ಪದ್ಧತಿಯಲ್ಲಿ ನಿರ್ಮಿತವಾದ ಹೋಟೆ

ವಸತಿ, ಊಟ, ಉಪಹಾರ ಗೃಹ, ರುಚಿ-ರುಚಿ
ಸಸ್ಯಾಹಾರ ಆದರದ; ಸೇವೆ



ಈಗ ಪ್ರತ್ಯೇಕ ವಿಭಾಗ: ಗುಲ್ ಮೊಹರ

ಅತ್ಯಂತ ರುಚಿಕರ ಮಾಂಸಾಹಾರಿ ಭಕ್ಷ್ಯ ಭೋಜ್ಯಗಳಿಗಾಗಿ

ಬೆಳಗಾವಿಯಲ್ಲಿ, ಲಿಫ್ಟ್, ಸೌಕರ್ಯವುಳ್ಳ ಪ್ರಥಮ ಹೋಟೆಲ

...ಗವಲ್ಲಿ ಶಿಬಿರ ತರಬೇತಿ ಛಲದಿಂದ
...ಸುತ್ತಾರೆ.

...ತರೆ ಬಡ ಕುಟುಂಬದಿಂದ ಬಂದ
...ಆಕೆಗೆ ಸೈಕಲ್ [illegible]
...ಗಾಗಿ ಪೆಡಲ್ ಮಾಡಿ ನಂತರ
...ತರದ ಪ್ರೋತ್ಸಾಹದಿಂದ ಪ್ರಸ್ತು
...ಮಾನ ತ ಗಮನಾರ್ಹವಾಗಿದೆ.
...ಆಕೆ ಅವರು 1984ರ ಮೈಸೂರು
...ಕ್ರೀಡಾಕೂಟದ ಸೈಕಲ್ ವಿಭಾಗ
...ಸ್ಪರ್ಧಿಸಿ ಸ್ವರ್ಣಪದಕವನ್ನು ಗಳಿಸಿ
...ಇಲ್ಲಿ ಸಿಕ್ಕ ಪ್ರೋತ್ಸಾಹದಿಂದ
...ಗಿ ಈ ವರ್ಷದ ಆರಂಭದಲ್ಲಿ
...ಕೂಟದಲ್ಲಿ ನಡೆದ ರಾಷ್ಟ್ರ
...ನಲ್ಲೂ ಸ್ವರ್ಣಪದಕ ಪಡೆದಳು.
...ದ ಸಾಧನೆ ರಾಷ್ಟ್ರದ ಸೈಕಲ್
...ಯ ಗಮನವನ್ನು ಸೆಳೆಯಿತು. ಆಕೆಯ
...ಯನ್ನು ಗಮನಿಸಿದ ಸೈಕಲ್
...ಆಕೆಯನ್ನು ಹಾಲೆಂಡ್‌ನಲ್ಲಿ ನಡೆ...
...ನಡೆವ ಸೈಕಲ್ ಸ್ಪರ್ಧೆಗೆ ಆಯ್ಕೆ
...ತು.

o o o o

...ಶ್ರೀಕಾಂತ್ ಭಾರತ ಟೇಬಲ್
...ನಲ್ಲಿ ಪ್ರಸಕ್ತ ನಾಲ್ಕನೇ ಕ್ರಮಾಂಕದ
...ಆಟಗಾರರಾಗಿದ್ದಾರೆ.

...ಶ್ರೀಕಾಂತ್ ರಾಜ್ಯ ಮಟ್ಟದ
...ಗಳಲ್ಲಿ ಸ್ಪರ್ಧಿಸಿ ಪ್ರಶಸ್ತಿಗಳನ್ನು
...ದುದಲ್ಲದೇ ಅಖಿಲ ರಾಷ್ಟ್ರಮಟ್ಟದ
...ಗಳಲ್ಲೂ ಹಲವು ಪ್ರಶಸ್ತಿಗಳನ್ನು
...ದ್ದಾರೆ. ರಕ್ಷಣಾತ್ಮಕ ಆಟಗಾರ
...ಹೆಸರು ಪಡೆದ ಈತ ನಮ್ಮ ದಕ್ಷಿಣ
...ದ ಕೊಡುಗೆಯೇ. ಹಲವು ಅತಿ
... ಮಹಾರಥರನ್ನು ಎದುರಿಸುವ
...ಕಾಂತ್ ಇತ್ತೀಚೆಗೆ ತಾನೆ ಜಬಲ್‌ಪುರ
...ನಡೆದ ಕೇಂದ್ರ ಭಾರತ ಟೇಬಲ್
...ಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ
...ದರು.

o o o o

ಕರ್ನಾಟಕದ ಅನೇಕ ಕ್ರೀಡೆಗಳಿಗೆ
...ಭವಿಷ್ಯದ ಕೊರತೆ ಇದೆ. ಆದ
...ದ ಪಟ್ಟಿಯಲ್ಲಿ ಯುವ ಪ್ರತಿಭಾ...
...ನೆ ಕಟ್ಟಿ ಕೊಡಬಹುದು.

[illegible] 18 [illegible]
[illegible] ಮಾಡುತ್ತಲಿದೆ.

[illegible]

[illegible]



ರೇಣುಕಾ ಛಡಕರ್




ವಂದನಾ ರಾವ್

ಕರ್ನಾಟಕದ ಪರ ಕಬಡಿ ಕ್ಷೇತ್ರದಲ್ಲಿ ಆಟಗಾರರು ಸಾಕಷ್ಟು ಪ್ರಖ್ಯಾತಿ [illegible] ದ್ದಾರೆ.

ಬಂಗ್ಲಾದೇಶದ ಪ್ರವಾಸ ಕಾಲದಲ್ಲಿ ಭಾರತ ಪರ ಕರ್ನಾಟಕದ ಅನೇಕ ಆಟಗಾರರಿದ್ದರು. ನಂತರ ಮತ್ತೊಂದು ಅಂತರರಾಷ್ಟ್ರೀಯ ಸಂದರ್ಭಕ್ಕೆ ಬೆಂಗಳೂರಿನ ಗೋಪಾಲಪ್ಪ ಅವರು ನಾಯಕರಾಗಿ ರಾಜ್ಯಕ್ಕೆ ಖ್ಯಾತಿ ತಂದರು. ಆದರೆ ತದ ನಂತರ ಇದರ [illegible] ಕರ್ನಾಟಕದ ಕೊಡುಗೆ ಅಷ್ಟಾಗಿ ಕಾಣಲಿಲ್ಲ. ಇದು ಕಬಡಿ ವಿಚಾರವಾದರೂ ದೊಡ್ಡವರ ಸಣ್ಣ ತನ್ನ ಇದಕ್ಕೆ ಕಾರಣವೆಂದು ಭಾವಿಸಿದರೆ ಈ ಅಂಶವನ್ನು ತಳ್ಳಿ ಹಾಕುವಂತಿಲ್ಲ.

ಕಬಡಿ ಮತ್ತೊಂದು ಮಾದರಿಯ ವಿಶ್ವ [illegible] ಯುವತಿಯರು ಅನೇಕ ಅಭಿಮಾನಿಗಳಿಗೆ ಸಂತಸ [illegible].



ಯಾವುದೇ ಮಗುವೂ ಪರಿಪೂರ್ಣ ಪಾಲನೆಯಿಂದ ವಂಚಿತರಾಗಬಾರದು. ಆದಕಾರಣ. ಈ ಸಮಗ್ರ ಬಾಲವಿಕಾಸ ಯೋಜನೆ

ಪುಷ್ಟಿಕರ ಆಹಾರ. ಔಷಧೋಪಚಾರ ಹಾಗೂ ಸಾಕ್ಷರತೆ. ಪ್ರತಿ ಮಗುವಿನ ಆಜನ್ಮ ಹಕ್ಕು. ಈ ಪುಟಾಣಿ ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗೆಂದು ರಾಜ್ಯ ಸರ್ಕಾರ 6 ವರ್ಷದೊಳಗಿನ ಮಕ್ಕಳಿಗಾಗಿ ಒಂದು ಸಮಗ್ರ ಕಲ್ಯಾಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.
ಈ ಕಾರ್ಯಕ್ರಮದಲ್ಲಿ ಲಭಿಸುವ ಸೇವೆಗಳೆಂದರೆ:

ರೋಗ ನಿರೋಧಕಗಳು: ಟ್ರಿಪಲ್ ಆಂಟಿಜೆನ್. ಬಿಸಿಜಿ. ಪೋಲಿಯೋ. ನಿರೋಧಕ ಚುಚ್ಚುಮದ್ದು ಹಾಗೂ ಇನ್ನಿತರ ರೋಗ ನಿರೋಧಕಗಳನ್ನು ನೀಡುವುದು.

ಆರೋಗ್ಯ: ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರ ಮೂಲಕ ವೈದ್ಯಕೀಯ ಸೇವೆ. ಹಾಗೂ ಮಾರ್ಗದರ್ಶನ.

ಆಹಾರ: ಅಂಗನವಾಡಿ ಕೇಂದ್ರಗಳ ಮೂಲಕ ಪುಷ್ಟಿದಾಯಕ ಹಾಗೂ ಸಮತೋಲನ ಆಹಾರ ನೀಡುವಿಕೆ.

ವಿದ್ಯಾಭ್ಯಾಸ: ಅಂಗನವಾಡಿಗಳಲ್ಲಿ 6 ವರ್ಷದ ಒಳಗಿನ ಮಕ್ಕಳಿಗೆ ಅನೌಪಚಾರಿಕ ವಿದ್ಯಾಭ್ಯಾಸ

ಗರ್ಭಿಣಿಯರು ಹಾಗೂ ಬಾಣಂತಿಯರು: ಶಿಶುಗಳ ಪಾಲನೆ ಪೋಷಣೆ ಬಗ್ಗೆ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಸೂಕ್ತ ತಿಳುವಳಿಕೆ ನೀಡಿ. ಮಕ್ಕಳ ಯೋಗ್ಯ ಪಾಲನೆ ಆಹಾರ ಕ್ರಮ ಹಾಗೂ ಸಾಮಾನ್ಯ ಆರೋಗ್ಯರಕ್ಷಣೆ ಬಗ್ಗೆ ಮಾರ್ಗದರ್ಶನ.

ನಿರ್ದೇಶನ ಸೇವೆಗಳು: ಶಿಶುಗಳ. ಮಾತೆಯರ ಆರೋಗ್ಯ ಸಂಬಂಧವಾದ ಗಂಭೀರ ಪರಿಸ್ಥಿತಿಗಳಲ್ಲಿ ಅವರನ್ನು ಆಸ್ಪತ್ರೆಗಳು ಹಾಗೂ ಇತರ ತಜ್ಞರ ಸಂಸ್ಥೆಗಳಿಗೆ ಸೇರಿಸಿ ಯೋಗ್ಯ ಚಿಕಿತ್ಸೆ ದೊರಕುವಂತೆ ಮಾಡುವುದು

ಸೂಕ್ತ ತರಬೇತಿ ಪಡೆದ ಅಂಗನವಾಡಿ ಕಾರ್ಯಕರ್ತರುಗಳು ಮತ್ತು ಸಹಾಯಕರಿಂದ ಅಂಗನವಾಡಿ ಕೇಂದ್ರಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ಬಾಲವಿಕಾಸ ಯೋಜನಾಧಿಕಾರಿಗಳು ಈ ಕೇಂದ್ರಗಳ ಕಾರ್ಯಕ್ಷಮತೆಯ ಮೇಲ್ವಿಚಾರಣೆ ನಡೆಸುವರು.

ಪೂರ್ಣ ವಿವರ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಈ ಯೋಜನೆಯನ್ನು ಕಾರ್ಯಗತ ಗೊಳಿಸುತ್ತಿರುವ ಬ್ಲಾಕ್‌ನ ಬಾಲ ವಿಕಾಸ ಯೋಜನಾಧಿಕಾರಿಗಳು ಅಥವಾ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್‌ಗಳು



ಕರ್ನಾಟಕ ವಾರ್ತೆ

ಅಸಹಾಯಕರಿಗೊಂದು ಸಹಾಯದ ಯೋಜನೆ.

ಹಳೆಯ ಮಾತು ಹೊಸ ಅರ್ಥ

ಅತ್ಯಾಚಾರ

ಅತಿ ಆಚಾರವೇ ಅತ್ಯಾಚಾರ
ಶಿಷ್ಯನ ಈ ಉತ್ತರ ಕೇಳಿ
ತಲೆ ತುರಿಸಿದರು
ಮಡಿವಂತ ಮಾಸ್ತರು

ಹೂವು

ಯಾರದೋ ಶೃಂಗಾರಕ್ಕಾಗಿ
ನಗುನಗುತ ಅರಳಿ
ಬಾಡಿ
ಹುಡಿಗೂಡಿ ಹೋಗುವ
ಪರೋಪಕಾರಿ ಪರಿಮಳ

ಲಂಚ

ಫೈಲುಗಳು ಫರಫರನೆ
ಮೇಲೆದ್ದು ಕುಣಿಯುವಂತೆ
ಮಾಡುವ ಮೋಡಿಯಾಟ

ಮಂತ್ರಿ

ಮಂತ್ರ ಪಠಣ ಮಾಡಿದಂತೆ
ಹೋದಲ್ಲೆಲ್ಲ ಒಂದೇ ತೆರನಾ
ಒದರುವ ಸರಕಾರೀ ಯಂತ್ರ

ಸತ್ಯ

ಬಹು ಜನರು ಬಳಸದಿದ್ದರೂ
ಹಳಸದ
ಹಳೆಗಾಲದ ಹಣ್ಣು

ಸುಳ್ಳು


ಕಳ್ಳತನದಿಂದ ಬೇಕೆ ನೆಡೆದು
ಬಹುಜನರು ಬಚ್ಚಿಟ್ಟುಕೊಂಡು
ಬೆಳೆಸುವ
ಬಣ್ಣದ ಬದನೆಕಾಯಿ

ಹಣ

ಮಳೆಗಾಲದಲ್ಲಿ
ತುಂಬಿ ಹೊಂಡದಲ್ಲಿ
ಎತ್ತೆತ್ತಲೋ ಹರಿವ
ಹುಚ್ಚು ಹೊಳೆ

ಚಿಂತೆ

ಒಳಗೊಳಗೇ
ಚಕಮಕಿ ಕಡೆದು
ಹತ್ತಿ ಹೊಗೆಯಾಡಿ
ಸುಡುವ
ಒಡಲಾಳದ ಕಿಡಿ



-ಶಂ. ಗು. ಬಿರಾದಾರ



ಅಗ್ನಿದಿವ್ಯ ಒಂದು ವಿವರಣೆ



✽ ಡಾ॥ ವಾಮನ ಬೇಂದ್ರೆ

ಅಗ್ನಿದಿವ್ಯ 18.2.1976 ರಂದು ಬರೆದ 13 ಸಾಲುಗಳ ಒಂದು ಪದ್ಯ. ಪ್ರೊ. ಕೆ. ಎಸ್. ನಾರಾಯಣಾಚಾರ್ಯ ಅವರು ಬರೆದ 'ವೇದ ಸಂಸ್ಕೃತಿಯ ಪರಿಚಯ' ಭಾಗ–4 ಈ ಪುಸ್ತಕದ ಮೊರ ಹೊದಿಕೆಯ ಮೇಲೆ ಈ ಕವನ ಬರೆಯಲಾಗಿದೆ. ಈ ಪುಸ್ತಕದ ಓದು ಮುಗಿದ ಬಳಿಕ ಸ್ಫುರಿಸಿದ ಕವನವಿರಲು ಸಾಕು ಎಂದು ಈ ಕವನ ಸೃಷ್ಟಿಯ ಸಂದರ್ಭವನ್ನು ಊಹಿಸಬಹುದು. ಭಾರತೀಯರಿಗೆ ಅಗ್ನಿ–ಯಜ್ಞ ಪುರುಷ. ಪಾದರಿಗಳಿಗೆ – ಪಾಶ್ಚಿಮಾತ್ಯರಿಗೆ ಹೀಟ್ ವಿದ್ಯುತ್ ಎಂಬುದು ಒಂದು ಶಕ್ತಿ. ಭಾರತೀಯ ಋಷಿಗಳು, ತಪಸ್ವಿಗಳು, ವೇದಾರ್ಥವನ್ನು, ಅಗ್ನಿಯ ಅರ್ಥವನ್ನು ಉಪಾಸನೆಯಿಂದ ತಿಳಿದುಕೊಳ್ಳಲು ಆರಾಧನೆ ಮಾಡಿದರೆ, ಪಾಶ್ಚಿಮಾತ್ಯರು ತಮ್ಮ ಮನೆಯ ಒಲೆಯ ಸಮೀಪದ ಸ್ಥಳಕ್ಕೆ (ಫೈರ್ ಸೈಡ್) ಆರಾಮ ಆಗಿ ಕೂತು ಏನನ್ನೋ ತಿನ್ನುತ್ತ ವೇದಾರ್ಥ ಬರೆಯುತ್ತಾರೆ. ಇವು ವೇದಾಧ್ಯಯನದ ಎರಡು ದೃಷ್ಟಿಕೋನಗಳು.

ಹೀಟ್ ಎಂಬುದಕ್ಕೆ ಕಾವು, ಉಷ್ಣತೆ ಬಿಸಿ, ಕಾಮೋದ್ರೇಕ, ಸಿಟ್ಟು ಮೊದಲಾದ ಅರ್ಥ ವಿಸ್ತಾರವಿದೆ. ಈ ಎಲ್ಲ ಅರ್ಥವಿಸ್ತಾರವನ್ನು ವರಕವಿ ಅಂಬಿಕಾತನಯದತ್ತರು ಅಗ್ನಿದಿವ್ಯ ಕವನ ಸೃಷ್ಟಿಯಲ್ಲಿ ವ್ಯಂಗ್ಯಾರ್ಥ ಪೂರ್ಣವಾಗಿ ದುಡಿಸಿಕೊಂಡಿದ್ದಾರೆ. ಆದುದರಿಂದ ಇದು ಬೇಂದ್ರೆಯವರ ಭಾವಗೀತವಲ್ಲ, ಧ್ವನಿ ಕವನ.

ವೇದಾರ್ಥಗಳ ಬಸಿರಲ್ಲಿ ಬಂಗಾರವಿದೆ. ಆದರೆ ಕಾಲ ಪರಿಣಾಮದಿಂದ ಅದರ ಮೈ ಬೂದಿಯಾಗಿ, ಕೆಂಡ ಅಂಗಾರವಾಗಿ ಅದರ ಕೆಂಪು ಕಣ್ಣಿಗೆ ಕಾಣದಂತಾಗಿ ಅರಕ್ತತೆ, ಬಿಳುಪು ರೋಗ ವೇದದಲ್ಲಿಯ ಅಗ್ನಿ ಸೂಕ್ತಗಳಿಗೆ ತಟ್ಟದೆ ಎಂಬಂತೆ ಕೆಲವರಿಗೆ ತೋರುತ್ತಿದೆ. ವೇದದಲ್ಲಿ ಶ್ರದ್ಧೆ ಉಳ್ಳ ವಿದ್ವಾಂಸರು, ದಾದಿಯಾಗಿ ಆರೈಕೆ ಮಾಡಿ ಅಗ್ನಿ ಸೂಕ್ತಗಳ ನಿಜವಾದ ಅರ್ಥವನ್ನು ಮಹತಿಯನ್ನು ಭಾಷ್ಯ ಮತ್ತು ವಾಖ್ಯಾನಗಳಿಂದ ಸ್ಪಷ್ಟಪಡಿಸುತ್ತ ಹೋಗಬೇಕಾದ ಕಾಲವಿದು. ವೇದಗಳ ಅಗ್ನಿ ಸೂಕ್ತಗಳಿಗೆ ಒಂದು ಅಗ್ನಿ ಪರೀಕ್ಷೆಯನ್ನು ಈ ಕಾಲದಲ್ಲಿ ಕೊಡಬೇಕಾಗಿದೆ. ಈ ಅಗ್ನಿ ದಿವ್ಯದಿಂದ ವೇದಶಿಶು ಪಾರಾದರೆ ನಾಳೆ ಅದಕ್ಕೆ ನಿಶ್ಚಿತವಾಗಿ ನಾಯಕ ಪಟ್ಟವಿದೆ ಎಂಬ ವಿಶ್ವಾಸದ ಅಭಿವ್ಯಕ್ತಿಯಲ್ಲಿ ಈ ಕವನ ಮುಕ್ತಾಯಗೊಂಡಿದೆ.

ಅಗ್ನಿಸೂಕ್ತಗಳ ಮಹತ್ ಅರ್ಥವನ್ನು ಬದಿಗೆ ಸರಿಸಿದರೆ ಅಗ್ನಿ ಎಂದರೆ ಜೆಂಕಿ–ಅನ್ನವನ್ನು ಪಾಕಗೊಳಿಸುವ ಶಕ್ತಿ ! ಜನರಲ್ಲಿ ಹಸಿವನ್ನು ಉಂಟುಮಾಡುವ ಜಠರಾಗ್ನಿ; ದನ ಬೆದಿಗೆ ಬಂದಾಗ ಅವುಗಳಲ್ಲಿ ಉಂಟಾಗುವ ಕಾಮೋದ್ರೇಕ.

ಜನರು ಊರಲ್ಲಿ ಇದ್ದು ಹಸಿವಿಗಾಗಿ ಕಾಯುತ್ತಾರೆ; ದನ ಕಾಡಿನಲ್ಲಿದ್ದು ಕಾಮೋದ್ರೇಕದಿಂದ ಹೆಣ್ಣುಪ್ರಾಣಿಗಾಗಿ ಹುಡುಕಾಡುತ್ತ ಕಾಯುತ್ತವೆ. ಹೀಗಾಗಿ ಜನ ಮತ್ತು ದನ ಕಾಯುವ ಸ್ವಭಾವದಲ್ಲಿ ಮೂರ ಮೂರ ಇಲ್ಲ. ಸ್ವಭಾವಕ್ಕೆ ಔಷಧಿ ಇಲ್ಲ ಎಂದಮೇಲೆ ಜನರನ್ನು ಮತ್ತು ದನಗಳನ್ನು ದೂರೋದೇಕೆ, ನಿಂದಿಸುವುದೇಕೆ. ಎಂದು ಕವಿ ಪ್ರಶ್ನಿಸಿದ್ದಾರೆ.

ಅಗ್ನಿಸೂಕ್ತಗಳ ವೇದಾರ್ಥವನ್ನು ಹಿಗ್ಗಾಮುಗ್ಗಾ ಜಗ್ಗಾಡಿ ಅಗಸರು ಬಟ್ಟೆಗಳನ್ನು ಮಡಿ ಮಾಡುವುದಕ್ಕಾಗಿ ಕಲ್ಲಿನ ಮೇಲೆ ಸಾಕಷ್ಟು ಬಡಿದು, ನೀಲಿ ಹಾಕಿ ಶುದ್ಧಪಡಿಸಲು ಮಾಡುವ ಪ್ರಯತ್ನಗಳಂತೆ – ವೇದಾರ್ಥ ನಿರ್ಣಯ ಪ್ರಯತ್ನಗಳನ್ನು ವಿದ್ವಾಂಸರು ಮಾಡುತ್ತ ಬಂದಿದ್ದಾರೆ ಪಾದರಿಪುಷ್ಪ-ಹೇಸಿಗೆ ಹೂಪಿನ ವರ್ಣ ವೈವಿಧ್ಯದ ಸೌಂದರ್ಯದಷ್ಟಾದರೂ ಸೌಂದರ್ಯವನ್ನು ಅಗ್ನಿಸೂಕ್ತಗಳ ಅರ್ಥದಲ್ಲಿ ಕೆಲವರು ಕಾಣುತ್ತಿದ್ದಾರೆ ಎಂಬುದೆ ಒಂದು ಭಾಗ್ಯ.

ಟೆನಿಸ್: ಸಾಮರ್ಥ್ಯವಿದೆ: ಸೂಕ್ತ ವ್ಯವಸ್ಥೆಯಿಲ್ಲ



ಟೆನಿಸ್ ಕ್ಷಿತಿಜದಲ್ಲಿ ಎತ್ತರಕ್ಕೆ ಏರು ಯುವ ಭರವಸೆ ಮೂಡಿಸಿರುವ ಪ್ರಸಕ್ತ ವರ್ಷದ ರಾಜ್ಯ ರ್‍ಯಾಂಕಿಂಗ್‌ನಲ್ಲಿ ಪ್ರಥಮ ಸ್ಥಾನ ಗಿಟ್ಟಿಸಿರುವ ಇಮ್ಯಾನುಯಲ್ ಜಾನ್‌ರು 1983-84ರ ರಾಜ್ಯ ಚಾಂಪಿಯನ್.

ಕರ್ನಾಟಕ ರಾಜ್ಯದಲ್ಲಿ ವಿಂಬಲ್ಡನ್ ಅಥವ ಇನ್ನಾವುದೇ ಅಂತರ ರಾಷ್ಟ್ರೀಯ ಮಟ್ಟಕ್ಕೇರಬಲ್ಲ ಟೆನಿಸ್ ಆಟಗಾರರು ಹುಟ್ಟಿಬರಲು ಸಾಧ್ಯವಿಲ್ಲವೆ ?

ಈ ಪ್ರಶ್ನೆಯನ್ನು ಕೇಂದ್ರವಾಗಿಸಿಕೊಂಡು ವಿಚಾರ ಮಾಡಿದರೆ ರಾಜ್ಯದಲ್ಲಿ ಟೆನಿಸ್ ಸಾಕಷ್ಟು ಜನಸಾಮಾನ್ಯರ ದೃಷ್ಟಿಯಲ್ಲಿ ಬಲವಾಗಿ ನಿಲ್ಲದಿದ್ದರೂ ಆಟದ ದೃಷ್ಟಿಯಿಂದ ಇದು ಇತರೆ ಕ್ರೀಡೆಯಷ್ಟೇ ಸಾಮರ್ಥ್ಯ ಹೊಂದಿದ್ದಾಗಿದೆ ಎನ್ನುವ ಅಂಶ ಹೊರ ಬೀಳುತ್ತದೆ.

ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಟೆನಿಸ್ ಸಾಮರ್ಥ್ಯವನ್ನು ನೋಡಿದರೆ ನಾವು ಕಳವಳಪಡಬೇಕಾಗೇನೂ ಇಲ್ಲ. ಆದರೆ ಟೆನಿಸ್‌ನ ಬೆಳವಣಿಗೆಯಲ್ಲಿ ಮಾತ್ರ ಲೋಪ ಕಾಣುವದು.

ತಮಿಳುನಾಡಿನಲ್ಲಿ ರಾಮನಾಥಕೃಷ್ಣನ್ ಅವರು 1954ರಲ್ಲಿ ವಿಂಬಲ್ಡನ್ ಜೂನಿಯರ್ ಕಿರೀಟ ಹೊತ್ತು ತಂದಾಗ ಭಾರತದಲ್ಲಿನ ಅದರಲ್ಲೂ ದಕ್ಷಿಣ ಭಾರತದಲ್ಲಿನ ಟೆನಿಸ್ ಬಗ್ಗೆ ವಿಶ್ವವೇ ಬೆರಗಾದುದೂ ಉಂಟು. ನಂತರ ಅವರ ಮಗ ರಮೇಶ ಕೃಷ್ಣನ್‌ರು ಇದೇ ಟ್ರೋಫಿಯನ್ನು ಮತ್ತೆ ತಂದ ನಂತರ ಇವರುಗಳ ಮಟ್ಟಕ್ಕೇರಲು ಇನ್ನಾವದೇ ದಕ್ಷಿಣ ಭಾರತದ ಹುಡುಗರಿಗೆ ಸಾಧ್ಯವಾಗದಿರುವದು ಒಂದು ರೀತಿ ನೋವು ಉಂಟುಮಾಡದಿರದು.

ರಾಜ್ಯದಲ್ಲಿನ ಟೆನಿಸ್ ಅಭಿವೃದ್ಧಿಗಾಗಿ ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ರಾಜ್ಯದಲ್ಲಿನ ಚಿಣ್ಣರನ್ನು ಬೆಳಕಿಗೆ ತರಲು ಅನೇಕ ಟೆನಿಸ್ ಅಭಿಮಾನಿಗಳು ಟೊಂಕ ಕಟ್ಟಿನಿಂತಿದ್ದಾರೆ. ಆದರೆ ಈ ಕಾರ್ಯ ಕೆಲವರಿಂದಾಗದು. ಇದಕ್ಕೆ ಸಾರ್ವಜನಿಕನಾಗಿಯೂ ಸಹ

ಜೆ. ವಿ. ಶ್ಯಾಮಸುಂದರ್



ಕೈಗೆಂತ ರ್‍ಯಾಕೆಟ್ಟೇ ಉದ್ದವಾದರೂ ಟೆನಿಸ್ ಕ್ಷೇತ್ರದಲ್ಲಿ ರಾಜ್ಯದ ಹೆಸರು ಬೆಳಗುವ ಉತ್ಸಾಹದ ಚಿಲುಮೆ ಹನ್ನೆರಡು ವರುಷದ ಪಯೋನಿಯ ಆನಂದ್ ಸುಕುಮಾರ್.



ಕಾರ ಬೇಕಾಗಿದೆ.

ಸಾರ್ವಜನಿಕವಾಗಿ ಟೆನಿಸ್‌ಗೆ ಇತರೆ ಕ್ರೀಡೆಗಳಾದ ಕ್ರಿಕೆಟ್, ಫುಟ್‌ಬಾಲ್‌ಗಳಂಥ ಸಾಮಾನ್ಯರ ಕ್ರೀಡೆಗಳಿಗೆ ಸಿಗುವ ಬೆಂಬಲ ಸಿಗದು. ಟೆನಿಸ್ ಶ್ರೀಮಂತರ ಕ್ರೀಡೆ ಎಂಬ ಹಣೆಪಟ್ಟಿಯನ್ನೂ ಹಚ್ಚಿಕೊಂಡಿರುವದರಿಂದ ಈ ಕ್ರೀಡೆಯ ಬಗ್ಗೆ ಅನೇಕರ ಅನಾದರಣೆ.

ಟೆನಿಸ್ ಜಂಭದ ಕಪಾಟಿನಲ್ಲಿ ಮುಚ್ಚಿಟ್ಟ ಕ್ರೀಡೆಯಾಗಿದ್ದು ಇದು ಜನಸಾಮಾನ್ಯರ ಕೈಗೆ ಸಿಲಕಬೇಕಾದರೆ ಮುಖ್ಯವಾಗಿ ಶಾಲಾ ಮಟ್ಟದಲ್ಲಿ ಅಭಿವೃದ್ಧಿಪಡಿಸುವುದು ಅತಿಮುಖ್ಯವಾದ ಕೆಲಸವಾಗಿದೆ.

ಟೆನಿಸ್ ಆಡುವವರಿಗೂ ಭವಿಷ್ಯವಿದೆ ಎಂದು ನಿರೂಪಿಸುವ ಕಾರ್ಯವೂ ನಡೆಯಬೇಕಿದೆ. ರಾಜ್ಯಮಟ್ಟದಲ್ಲಿ ರ್‍ಯಾಂಕಿಂಗ್ ಪಡೆಯುವ ಕಿರಿಯ ಆಟಗಾರರು ಬಹುಶಃ ಟೆನಿಸ್ ವಲಯವನ್ನು ಬಿಟ್ಟು ಇನ್ನಾರೂ ಗುರುತಿಸುವ ಸೌಜನ್ಯದಿಂದಲೂ ದೂರವಾಗಿರುವ ಮಾತು ಕಠಿಣವಾದರೂ ಇದು ನಿಜ.

ಇತರೆ ಕ್ರೀಡೆಗಳಿಗೆ ಹೋಲಿಸಿದಾಗ ಟೆನಿಸ್ ಆಟಗಾರರು ಸಾರ್ವಜನಿಕ ಉದ್ದಿಮೆ ಅಥವ ಖಾಸಗಿ ಉದ್ದಿಮೆಗಳಲ್ಲಿ ಸುಲಭವಾಗಿ ನೌಕರಿ ಸ್ಥಾನವನ್ನು ಗಿಟ್ಟಿಸಲಾರರು. ನಂತರ ಟೆನಿಸ್‌ನಲ್ಲಿ ಅಭ್ಯಾಸವೂ ಕಠಿಣತರವಾಗಿದ್ದು ದೈಹಿಕ ಆಲಸ್ಯವೂ ಹೆಚ್ಚಾಗುವದರಿಂದ ಹುಡುಗರ ವಿದ್ಯಾಭ್ಯಾಸಕ್ಕೆ ತೊಂದರೆ ಆಗಬಹುದೆಂಬ ಭಯ ಪೋಷಕರನ್ನು ಆವರಿಸುವದು ಸಹಜ.

ಟೆನಿಸ್ ಆಟವನ್ನು ರಾಜ್ಯದಾದ್ಯಂತ ಪರಿಚಯಿಸಲು ಜಿಲ್ಲಾ ಮಟ್ಟದಲ್ಲೇ ಟೆನಿಸ್ ವಲಯ ಟೂರ್ನಿಗಳು ನಡೆದು ನಂತರ ರಾಜಧಾನಿಯಲ್ಲಿ ಅಂತಿಮ ಘಟ್ಟದ ಪಂದ್ಯಗಳನ್ನಾಡಿಸುವದರಿಂದ ಟೆನಿಸ್‌ನಲ್ಲಿಯೂ ಉತ್ತಮ ಆಟಗಾರರು ಉದಯಿಸಬಹುದೆಂಬುದು ತಜ್ಞರ ಅಭಿಪ್ರಾಯವಾಗಿದೆ.

ಸಧ್ಯದಲ್ಲಿ ಬೆಂಗಳೂರು ಹಾಗೂ ಮೈಸೂರಿನಲ್ಲಿ ಇರುವ ಟೆನಿಸ್ ಚಟುವಟಿಕೆ ರಾಜ್ಯದ [illegible] ಅವರೆ ದಾವಣಗೆರೆ, ಮಂಗಳೂರು, ಬೆಳಗಾವಿ ಹಾಗೂ ಧಾರವಾಡಗಳಲ್ಲಿ ಟೆನಿಸ್‌ನಿಂದ ಪ್ರಭಾವಿತರಾದವರಿದ್ದಾರೆ ಎಂಬುದನ್ನು ಅನೇಕ ಪ್ರದರ್ಶನ ಪಂದ್ಯಗಳು ಸಾಬೀತುಪಡಿಸಿವೆ.

ರಾಜ್ಯ ಟೆನಿಸ್ ಸಂಸ್ಥೆಯು ಈ ಕ್ರೀಡೆಯ ಅಭಿವೃದ್ಧಿಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕಿರಿಯ ಆಟಗಾರರಿಗಾಗಿ ಬೆಂಗಳೂರಿನಲ್ಲಿ ತರಬೇತಿ ಶಿಬಿರಗಳನ್ನು ನಡೆಸುತ್ತಿದ್ದು ಅರ್ಹತೆ ಪಡೆದ ಕೋಚ್‌ಗಳಾದ ಬಾಲಸುಂದರಂ, ಪ್ರಿಯದರ್ಶಿ, ಸಿ. ವಿ. ಕೆ. ನಾಯ್ಡು ಹಾಗೂ ಎನ್. ಐ. ಎಸ್. ಕೋಚ್ ವಿಶ್ವಮೋಹನ್ ಅವರುಗಳು ತರಬೇತಿ ನೀಡುತ್ತಲಿದ್ದಾರೆ.

ಪ್ರಸಕ್ತ ವರ್ಷದಲ್ಲಿ 6 ವರ್ಷದಿಂದ 16 ವರ್ಷದೊಳಗಿನ ವಯೋಮಿತಿಯ 100 ರಿಂದ 120 ಅಭ್ಯರ್ಥಿಗಳು ತರಬೇತಿ ಶಿಬಿರದಲ್ಲಿದ್ದಾರೆ.

ಬೆಂಗಳೂರು ನಗರವೂ ಸೇರಿದಂತೆ ರಾಜ್ಯದಾದ್ಯಂತ ಇರುವ ಟೆನಿಸ್ ಕೋರ್ಟ್‌ಗಳು ತರಬೇತಿ ನೀಡುವಲ್ಲಿ ಸೂಕ್ತವಾಗಿಲ್ಲದಿರುವದು ಒಂದು ಸಮಸ್ಯೆ ಆಗಿದೆ. ಅದರಲ್ಲೂ ಕಂಠೀರವ ಕ್ರೀಡಾಗಾರದಲ್ಲಿನ ಕೋರ್ಟ್ ಎನ್. ಐ. ಎಸ್. ಸ್ಥಳಾಂತರವಾದ ನಂತರ ಶೀರ ಹದಗೆಟ್ಟಿದೆ.

ರಾಜ್ಯದಾದ್ಯಂತ ಮೂಲೆ ಮೂಲೆಯಲ್ಲಿನ ಪ್ರತಿಭೆಯನ್ನು ಹುಡುಕಲು 'ಮಿನಿ ಸರ್ಕ್ಯೂಟ್'ಗಳನ್ನು ನಡೆಸುವದು ಅತ್ಯಂತ ಅವಶ್ಯಕವಾದ ಅಂಶಗಳಲ್ಲಿ ಒಂದಾಗಿದೆ. ಟೆನಿಸ್ ಬಗ್ಗೆ ಆಸಕ್ತರಾಗಿರುವ ಉದ್ದಿಮೆಗಳವರು ತರಬೇತಿ ಶಿಬಿರದ ಖರ್ಚು ವೆಚ್ಚಗಳನ್ನು ಭರಿಸಿದರೆ ತರಬೇತಿಗೆಗಾಗಿ ಸಾಮಾನ್ಯ ದರ್ಜೆಯ ಮಕ್ಕಳೂ ಬರಲು ಸಾಧ್ಯವಾಗುವುದು. ಸಧ್ಯದ ಪರಿಸ್ಥಿತಿಯಲ್ಲಿ ತರಬೇತಿ ಶಿಬಿರದ ಶುಲ್ಕ, ಟೆನಿಸ್ ರಾಕೆಟ್ ಕೊಳ್ಳುವಿಕೆ ಮುಂತಾದವುಗಳಿಂದ ಶಿಬಿರಾರ್ಥಿಗಳಿಗೆ ಸ್ವಲ್ಪ ಕಷ್ಟವೇ ಎನಿಸಬಹುದು.

ರಾಜ್ಯದಲ್ಲಿನ ಟೆನಿಸ್ ಆಟಗಾರರು ಟೆನಿಸ್‌ನಲ್ಲಿ ಗಳಿಸುವ ಮನ್ನಣೆ ಪರಿಗಣಿಸಬೇಕಾದರೆ ಅದಾವ ಪವಾಡವೂ ಬೇಕಿಲ್ಲ ಕನಿಷ್ಟ ಸೌಲಭ್ಯಗಳನ್ನಾದರೂ ಅವರು ಪಡೆಯಬೇಕು ವಿದೇಶದಲ್ಲಿ. ಒಂದೊಂದು ಕ್ಲಬ್‌ಗಳಲ್ಲೂ ಇಪ್ಪತ್ತರಿಂದ ಮೂವತ್ತು ಕೋರ್ಟ್‌ಗಳಿದ್ದು, ಅವುಗಳಲ್ಲಿ ಸಿಂಥಟಿಕ್, ಹಾರ್ಡ್ ಕೋರ್ಟ್‌ಗಳೂ ಇರುತ್ತವೆ. ಇಲ್ಲಿನ ಬಾಲಕರು ಟೆನಿಸ್ ಉಳಿದಂತೆ ಇನ್ನಾವುದೇ ಯೋಚನೆಯೂ ಇಲ್ಲದಂತೆ ಅಭ್ಯಾಸ ಮಾಡುವದರಿಂದ ಅವರ ಆಟದ ಮಟ್ಟದಲ್ಲೂ ಅಗಾಧ ಬೆಳವಣಿಗೆ ಉಂಟಾಗುತ್ತದೆ.

ಭಾರತ ಅಥವ ರಾಜ್ಯ ಮಟ್ಟದಲ್ಲಿನ ಕ್ರೀಡಾಪಟುಗಳ ಅಭಿವೃದ್ಧಿಗಾಗಿ ಇತರೇ ಕ್ರೀಡೆಯಾದ ಕ್ರಿಕೆಟ್‌ನಂಥ ಆಟಗಾರರನ್ನು 'ಬೆಸ್ಟ್ ಪ್ಲೇಯರ್' ಎಂದು ಆರಿಸಿದರೆ,



ನನ್ನ ಬಗ್ಗೆ ಅನುಮಾನ ಬೇಡ ಖಂಡಿತ ಬ್ಯಾಕ್ ಹ್ಯಾಂಡ್‌ನಿಂದಲೂ ಪಾಯಿಂಟ್ ಪಡೆಯುತ್ತೇನೆ ಎಂಬ ಭರವಸೆ ನೀಡಿರುವ ಬಾಲಾಜಿ ಶ್ರೀನಿವಾಸ್ ಹದಿನಾಲ್ಕು ವರ್ಷದ ವಯೋಮಿತಿಯನ್ನು ಭಾರತೀಯ ಸರ್ಕ್ಯೂಟ್‌ನಲ್ಲಿ ಗಮನ ಸೆಳೆದ ಆಟಗಾರ.

ದೀಪಾರಾಧನೆ-ದೀಪೋತ್ಸವ



ಆಕಾಶದೀಪ, ಪಕ್ಕಿಪಕ್ಕಿದೀಪ, ಸಮೂಹದೀಪ, ಜಲದೀಪ, ಹಣತೆದೀಪ ಇತ್ಯಾದಿ ನಾನಾವಿಧ ಎಂಟೆ ಬತ್ತಿಗಳ ದೀಪಾರಾಧನೆಯಿಂದ ಆಚರಿಸುವ ಹಬ್ಬವು ಇಂದು ವಿಜ್ಞಾನ ಪ್ರಧಾನವಾದ ವಿದ್ಯುದ್ದೀಪದ ಉಜ್ವಲ ಪ್ರಕಾಶದಲ್ಲಿ ವಿಜೃಂಭಿಸುತ್ತಿದೆ. ವಿಜ್ಞಾನದ ಬಲದಿಂದ ಮನುಷ್ಯ ಅದ್ಭುತ ಪ್ರಗತಿ ಸಾಧಿಸಿದ್ದಾನೆ. ಬಟ್ಟೆ ರಂಗದಲ್ಲಿಯಂತೂ ನೂತನ ಸಾಧಿಸಿದ ಪ್ರಗತಿ ಅಪೂರ್ವ, ಅದ್ಭುತ. ಇಂಥ ಅದ್ಭುತ ಸಾಧನೆಯ ಪ್ರತ್ಯಕ್ಷದರ್ಶನ ಪಡೆಯಬೇಕಾದರೆ ನೀವು-

ಬಿ ಬಾಬು ಮತ್ತು ಕಂಪನಿ

ಇವರ ಏಕಮೇವಾದ್ವಿತೀಯ ಬೃಹತ್ ವಸ್ತ್ರಭಾಂಡಾರವನ್ನೇ ಸಂದರ್ಶಿಸಬೇಕು. ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ ಭಾರತದಲ್ಲಿ ಉತ್ಪಾದಿತವಾಗುವ ಸೀರೆ ಪತ್ತಲು, ರವಿಕೆಗಳು. ಸೂಟಿಂಗ್ಸ್. ಶರ್ಟಿಂಗ್ಸ್. ಗೃಹ ಶೃಂಗಾರದ ಹಾಗೂ ನಿತ್ಯೋಪಯೋಗಿ ಬಟ್ಟೆ ಬರೆಗಳ ಪರಂಪರೆ ಮತ್ತು ಫ್ಯಾಷನ್‌ಗಳ ಸುಂದರ ಸಂಗಮವನ್ನು ಒಂದೇ ಕಡೆಯಲ್ಲಿ ಕಂಡು ವಿಸ್ಮಯ ಪಡುವಿರಿ.

ವರ್ಷದಲ್ಲಿ ಒಂದೇ ಸಲ ಬರುವ ಸಂದರ್ಭ
ದಸರಾ-ದೀಪಾವಳಿ ಉಚಿತ ಕಾಣಿಕೆ ಯೋಜನೆಯಲ್ಲಿ ಭಾಗವಹಿಸಿ
ಪಾತ್ರೆಗಳ ಉಚಿತ ಕಾಣಿಕೆ ಪಡೆಯಿರಿ

ಬಿ. ಬಾಬು ಮತ್ತು ಕಂ., ಹುಬ್ಬಳ್ಳಿ

ಬಟ್ಟೆ ರಂಗದಲ್ಲಿ ಆರು ದಶಕಗಳಿಗೂ ಮಿಕ್ಕಿದ ಅಖಂಡ ಸೇವ

ಫೋನ: **63160-67001**



...ಕಿರಿಯ ವಯಸ್ಸಿನಲ್ಲಿ ಪ್ರಶಸ್ತಿ ಮತ್ತು ...ನಗಳ ಗಳಿಕೆಯಲ್ಲಿ ಮುಂದಾದ ...ಟರ್ ವಿಜಯಕುಮಾರ್ ಹದಿನಾರು ...ರುಷದ ವಯೋಮಿತಿಯಲ್ಲಿ ರಾಜ್ಯದ ...ರಡನೆ ಸ್ಥಾನ ಪಡೆದಿರುವರು.

...ತೆ ಟೆನಿಸ್ ಆಟಗಾರರಿಗೂ ಅವಕಾಶ ...ಡುವಂಥ ಕಾಲಬರಬೇಕು. ಇದು ...ನಿಸ್ ಅಭಿವೃದ್ಧಿಗೆ ಮತ್ತೊಂದು ಮಾರ್ಗ ...ನ್ನುವದು ತಜ್ಞರ ಅಭಿಮತ.

ರಾಜ್ಯದಲ್ಲಿನ ಆಟಗಾರರನ್ನು ಕಾಡು...ರುವ ಇನ್ನೊಂದು ಪ್ರಶ್ನೆ ಅವರಲ್ಲಿನ ...ದೈಹಿಕ ಶಕ್ತಿ.' ಟೆನಿಸ್‌ಗೆ ಬೇಕಾದ ...ದೈಹಿಕ ಶಕ್ತಿ ಪೂರೈಸುವಂಥ ಪೌಷ್ಟಿಕಾಂ...ದ ಕೊರತೆ ಇದೆ. ಸಮರ್ಥವಾಗಿ ಟೆನಿಸ್ ...ನಮ್ಮ ಆಟಗಾರರು ಈ ನ್ಯೂನತೆಯಿಂದ ...ಮೊದಲ ಸೆಟ್‌ನಲ್ಲಿ ಆಡಿದ ಆಟವನ್ನು ...ತೀಯ ಸೆಟ್‌ಗೆ ಆಡರು. ಮೂರು ಸೆಟ್ ...ದ್ದರಂತೂ ಆಟಗಾರರು ಕುಸಿದು ಬಿಡು...ತ್ತಾರೆ.

ಈ ಒಂದು ಕೊರತೆಯಿಂದಲೇ ಅನೇಕ ...ಭಾರತೀಯ ಆಟಗಾರರು ವಿದೇಶದಲ್ಲಿನ ...ಟೂರ್ನಿಗಳಲ್ಲಿ ಮೊದಲಸುತ್ತಿಗೆ ಸುಸ್ತಾಗಲು ...ಕಾರಣವಾಗಿದೆ.

ರಾಜ್ಯದ ಆಟಗಾರರ ಬಗ್ಗೆ ಹೇಳಬೇ...ಕೆಂದರೆ ರಾಜ್ಯ ಚಾಂಪಿಯನ್ ರಾದ ಪ್ರಿಯ...ದರ್ಶ ಅವರ ಆಟದ ತರುವಾಯ [illegible] ಉತ್ತಮ ಆಟಗಾರರು ಈ ಸ್ಥಾನ ತುಂಬಲು ಮೈಸೂರಿನ ರಘುವೀರ ಬರಬೇಕಾಯಿತು.

ಕಳೆದೆರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಆಹ್ವಾನ ಟೆನಿಸ್ ಟೂರ್ನಿಯಲ್ಲಿ ರಾಜ್ಯದ ನಾಲ್ಕನೆ ಶ್ರೇಯಾಂಕದ ಆಟಗಾರ ರಘುವೀರ ರಾಷ್ಟ್ರದ ಅಗ್ರಗಣ್ಯ ಆಟಗಾರರಾದ ಶಶಿಮೆನನ್, ನಂದನ್ ಬಾಲ್ ಅವರುಗಳನ್ನೂ ಹಿಂದೆ ಹಾಕಿ ಪ್ರಶಸ್ತಿ ಪಡೆದ ನಂತರ ಮತ್ತೆ ಅವರು ಅಂಥ ಮಟ್ಟಕ್ಕೇರಿದ್ದು ಕಂಡುಬರಲಿಲ್ಲ.

ರಾಜ್ಯದಲ್ಲಿನ ಪ್ರತಿಭಾವಂತ ಆಟಗಾರರ ಸರ್ಕ್ಯೂಟ್‌ಗಳಲ್ಲಿ ತೋರುವ ಆಸಕ್ತಿ ಮತ್ತಿತರೇ ಪಂದ್ಯಗಳಲ್ಲಿ ತೋರುವದಿಲ್ಲ ಎಂಬ ಭಾವನೆ ಮೂಡಿಸಿದ್ದಾರೆ.

ರಾಜ್ಯದ ಟೆನಿಸ್ ಇತಿಹಾಸಕ್ಕೆ ಮತ್ತೊಂದು 'ಮಚ್ಚೆ' ಎಂದರೆ ಮಹಿಳಾ ಅಭ್ಯರ್ಥಿಗಳ ಕೊರತೆ. ಇಲ್ಲೂ ಇತರೇ ರಾಜ್ಯಗಳನ್ನು ಹೋಲಿಸಿದರೆ ನಾವು ತೀರ ಹಿಂದೆ. ಮೋನಿಕಾ ಮುತ್ತಣ್ಣ ಅವರನ್ನು ಉಳಿದಂತೆ ಉತ್ತಮ ಟೆನಿಸ್ ಆಟಗಾರ್ತಿ ರಾಜ್ಯದಿಂದ ಹೊರಬಂದಿಲ್ಲ.

ಪ್ರಸಕ್ತ ರಾಜ್ಯದಲ್ಲಿನ ಕಿರಿಯ ಆಟಗಾರರಲ್ಲಿ ಪ್ರಥಮ ಶ್ರೇಯಾಂಕದ ಆಟಗಾರರಾದ ಇಮಾನ್ಯುಯಲ್ ಜಾನ್ ಉತ್ತಮ ಭವಿಷ್ಯ ಹೊಂದಿದ್ದಾರೆ.

16 ವರ್ಷದ ವಯೋಮಿತಿಯಲ್ಲಿನ ಜಾನ್ ರಾಜ್ಯ ತಂಡದ ಆಯ್ಕೆಯ ಟ್ರಯಲ್ಸ್‌ನಲ್ಲಿ ಗಿರೀಶ್ ಹಾಗೂ ಪೀಟರ್, ವಿಜಯಕುಮಾರ್ ಅವರನ್ನು ಸೋಲಿಸಿದರು.

ರಾಜ್ಯದ ಸಬ್ ಜೂನಿಯರ್ ಟೆನಿಸ್ ಟ್ರಯಲ್ ಆಯ್ಕೆಗಾಗಿ ಹನ್ನೆರಡು ವರ್ಷದ ವಯೋಮಿತಿಯಲ್ಲಿ ಆನಂದ ಸುಕುಮಾರ್ ಮೈಸೂರಿನ ರೋಹಿತ್ ವಿಜಯಕುಮಾರ್ ಅವರುಗಳು ಉತ್ತಮ ಭವಿಷ್ಯಹೊಂದಿದ್ದು ಆಯ್ಕೆಪಟ್ಟಿಯಲ್ಲಿ ಇವರನ್ನೂ ಸೇರಿಸಿದಂತೆ ಮೈಸೂರಿನ ಬಾಲಕರಾದ ಎಂ.ಜೆ.ಚರಣ್ ಹಾಗೂ ಡಿ. ಜಯದೇವ, ಭಕ್ತವತ್ಸಲ [illegible] ಮತ್ತು [illegible] ಆಗಿದ್ದಾರೆ.

ಹದಿನಾಲ್ಕರ ವಯೋಮಿತಿಯಲ್ಲಿ ದೆಹಲಿಯಲ್ಲಿ ನಡೆದ ಲಿಂಕಾ ನಾಸ್ಟರ್ ಟೂರ್ನಿಗೆ ಆಯ್ಕೆಯಾದ ಮೈಸೂರಿನ ಚೈತನ್ಯ ಶ್ರೀನಿವಾಸ್ ಮತ್ತು ಬಾಲಾಜಿ ಶ್ರೀನಿವಾಸ್ ಅವರುಗಳು ಉತ್ತಮ ಭವಿಷ್ಯಹೊಂದಿದ್ದು ಇವರನ್ನು ಉಳಿದಂತೆ ಮೈಸೂರಿನ ಆರ್. ಅರವಿಂದ್, ಜಯಶಂಕರ್ ಹೆಗಡೆ. ಪ್ರಸನ್ನಕುಮಾರ್ ಹಾಗೂ ರಾಜೇಶ್ ಭಾಟಿಯಾ ಅವರುಗಳ ಭರವಸೆ ಮೂಡಿಸಿರುವ ಆಟಗಾರರು.

ಹದಿನಾರು ವರುಷ ವಯೋಮಿತಿಯಲ್ಲಿ ಇಮಾನ್ಯುಯಲ್ ಜಾನ್, ಪೀಟರ್, ವಿಜಯಕುಮಾರ್ ಮೈಸೂರಿನ ಕೆ.ಎಸ್. ಗಿರೀಶ್. ಗೋಕುಲ್ ಪದ್ಮನಾಭ, ಎಂ. ಅಲಿಖಾನ್ ಅವರುಗಳು ಮುಂಚೂಣಿಯಲ್ಲಿರುವ ಆಟಗಾರರು.

1984ರಲ್ಲಿ ನಾಗಪುರದಲ್ಲಿ ನಡೆದ ಭಾರತೀಯ ಸರ್ಕ್ಯೂಟ್‌ನಲ್ಲಿ ಬಾಲಾಜಿ ಶ್ರೀನಿವಾಸ್ ನಂತರ ಅಖಿಲ ಭಾರತ ಮುಕ್ತ ಟೆನಿಸ್‌ನಲ್ಲಿ ಚೈತನ್ಯ ಶ್ರೀನಿವಾಸರು ಉತ್ತಮವಾಗಿ ಹೆಸರು ಮಾಡಿದರೆ ಕಳೆದ ವರ್ಷ ನಡೆದ ಲಿಂಕಾ ಮದರಾಸು ವಲಯದಲ್ಲಿ ಪೀಟರ್ ವಿಜಯಕುಮಾರ್ ಅವರು ಉತ್ತಮವಾಗಿ ಆಡಿದರು.

ಪ್ರಸಕ್ತ ವರ್ಷದ ರಾಜ್ಯ ರ್‍ಯಾಂಕಿಂಗ್‌ನಲ್ಲಿ ಹದಿನಾರುವರ್ಷದ ವಯೋಮಿತಿಯಲ್ಲಿ ಇಮಾನ್ಯುಯಲ್ ಜಾನ್ (ಪ್ರಥಮ) ಪೀಟರ್ ವಿಜಯಕುಮಾರ್ (ದ್ವಿತೀಯ) ಹರೀಶ್ (ತೃತೀಯ) ಸ್ಥಾನ ಪಡೆದರೆ ಹದಿನಾಲ್ಕು ವರ್ಷದಲ್ಲಿ ಚೈತನ್ಯ ಶ್ರೀನಿವಾಸ್ (ಪ್ರಥಮ) ಬಾಲಾಜಿ ಶ್ರೀನಿವಾಸ್ (ದ್ವಿತೀಯ) ಸ್ಥಾನ ಪಡೆದರು. ಹನ್ನೆರಡು ವರ್ಷದಲ್ಲಿ ಆನಂದ ಸುಕುಮಾರ್, (ಪ್ರಥಮ) ರೋಹಿತ್ ವಿಜಯಕುಮಾರ್ (ದ್ವಿತೀಯ ಸ್ಥಾನ ಪಡೆದಿದ್ದಾರೆ.)

†

ಕಾಮ

ಹಸಿರು ನೆಲ – ಹಸಿದ ನೆಲ
ಬಯಕೆ ಆಳ ಆಳ
ಪರಮಾಣು ಅಣು ಚಿನ್ಮಿತ್ತಲ್ಲಿ
ರಾಡಿ ರಾಡಿ, ಕಿಚಿ ಕಿಚಿ
ಹಸಿರೆಂಬುದಲ್ಲ
ಪರಿಣಾಮ —
ಹಸಿರು ನೆಲ ತುಂಬೆಲ್ಲ
ಪೈರು ಚಿಗುರೊಡೆದು
ವರ್ಧಿಸಿ ಕಾಳು ತುಂಬಿಕೊಂಡಾಗ
ಗುಡುಗು – ಮಿಂಚು – ಸಿಡಿಲಿನ
ಆರ್ಭಟೆ, ಅಕಾಲ ಸುರಿಮಳೆ
ಪೈರು ಸಹಿತ ಕಾಳು
ಜಲ ಪ್ರಳಯದಲ್ಲಿ ಜಾರಿದಾಗ
ಹಸಿವು ಹಿಂಗಿದ ನೆಲ ಬಂಜರು

....

ಮತ್ತೆ ಹಸಿವು
ಆದರೆ ಹಸಿರು ಮಾತ್ರ ಇಲ್ಲ

ಪ್ರಕಾಶ ದೇಶಪಾಂಡೆ






ಹುಚ್ಚು ಹರೆಯದ ಹಂಬಲ

ಶಿಲಾ ಬಾಲಿಕೆಯರ
ಎದುರು ನಿಂತಾಗ
ಮೈ 'ಜುಂ' ಎನ್ನುವುದು
ಹದಿ ಹರೆಯದ – ಚದುರೆಯರು
ಗೊಮ್ಮಟನ ದರ್ಶನ ಮಾಡುವಾಗ
ಚಿತ್ತಲಾಗುವ ಒತ್ತಾಸೆ ಉಂಟಾಗುವುದು
ಉಡುಪಿ ಕೃಷ್ಣನ ದರ್ಶನಕ್ಕೆ
ನುಗ್ಗಾಡುವ ನೀರೆಯರ ನಡುವೆ ಸಿಕ್ಕಾಗ
ಕೃಷ್ಣನಾಗುವ ಕನಸು ಮೂಡುವುದು
ಅರ್ಧ ಉಡಿಗೆಯ ಹುಡಿಗೆಯರ ಕಂಡು
ಸಿನಿಮಾ ವಿಲನ್ ಆಗುವ ಬಯಕೆಯಾಗುವುದು
ಚಲಿಸುವ ಬಸ್ಸಿನಲ್ಲಿ
ನಿಂತ ಚೆಲುವೆಯ ನೋಡಿ
ಆಸನ ಬಿಟ್ಟು ಕೊಡುವ ಉದಾರ ಬುದ್ಧಿ (?)
'ಏಕದಂ' ಉದ್ಭವಿಸುವುದು
ಒಂಟಿ ಹೆಣ್ಣು ಕೈಗೆ ಸಿಕ್ಕರೆ
ಮೈಯಲ್ಲಿ ಕೀಚಕನ ಅವತಾರವಾಗುವುದು
ಹುಚ್ಚು ಹರೆಯದ ಹಂಬಲ
ರೊಚ್ಚಿಗೆದ್ದ ಜೇನು ಹುಳಗಳಂತೆ
ಚೆದುರಿ ಚೆಲ್ಲಾಪಿಲ್ಲಿ ಇಚ್ಛೆಯು
ಗಂಡಿಗೆ ಕಾಮದ ಕಿಚ್ಚು ತಾಗಿದಾಗ !

ಡಿ. ವಿ. ಬಡಿಗೇರ



ರಂ.ಶಾ.

ಮಧ್ಯಮ ವರ್ಗವನ್ನು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಕೌಟುಂಬಿಕ ಸ್ವರೂಪದ ಹೊಸ ಸಮಸ್ಯೆಯೊಂದು ತಲೆ ಎತ್ತುತ್ತಿದೆ. ಅದು ಅನೇಕ ಕಾನೂನಿನ, ಭಾವನಾತ್ಮಕ ಹಾಗೂ ಸಾಮಾಜಿಕ ಪ್ರಶ್ನೆಗಳಿಗೆ ಅವಕಾಶ ಕಲ್ಪಿಸಿದೆ, ವ್ಯಕ್ತಿ-ವ್ಯಕ್ತಿಗಳಲ್ಲಿನ ಸಂಘರ್ಷ, ಸಂವೇದನೆ, ಪರಿಸ್ಥಿತಿಯ ಹಿಡಿತಕ್ಕೆ ಸಿಲುಕಿ, ಉಪಾಯಗಾಣದೆ ನರಳುತ್ತಿರುವ ಸನ್ನಿವೇಶಗಳು ಅನೇಕ. ಅದನ್ನೇ ರಂ. ಶಾ. ತಮ್ಮ ಲೇಖನಿಯ ಮೂಲಕ ವಿಶ್ಲೇಷಿಸಿದ್ದಾರೆ.

'ಊಂ ಹೂಂ,' ಗೋಡೆಯ ಕಡೆ ಮೋರೆ ಮಾಡಿ ಮಲಗಿದ್ದ ಸುಮತಿ ಗಂಡನತ್ತ ಹೊರಳಲಿಲ್ಲ. ಅನಂತ ಹೆಗಲು ಹಿಡಿದು ಅಲುಗಾಡಿಸಿದಾಗ, ಅವನ ಕೈ ಕಿತ್ತೊಗೆದು ಮೋರೆಗೆ ಮುಸುಕು ಹಾಕಿದಳು, ಎಂದೂ ಮುಸುಕು ಹಾಕದಿದ್ದಾಕೆ.

ಅವನಿಗೂ ಬೇಸರವೆನಿಸಿತು. ಅವನೂ ಅವಳೆಡೆ ಬೆನ್ನು ಮಾಡಿ ಮಲಗಿದ. ಆದರೆ ಹಾಗೆ ನಿದ್ದೆಯೊಂದು ಬರಬೇಕಲ್ಲ?

ಒಮ್ಮೊಮ್ಮೆ ಇವಳು ಹೀಗೇಕೆ ಮಾಡುತ್ತಾಳೆ? ಒಮ್ಮೊಮ್ಮೆ ಅಲ್ಲ, ಇತ್ತೀಚೆಗೆ ದಿನವೂ ಇವಳಿಗೇ ಬೇಡವಾಗಿದ್ದರೆ ತನಗೂ ಬೇಡ. ಆದರೆ ಏಕೆ ಬೇಡ? ತಾನೇನು ಮುದುಕನಾದೆನೇ? ಮದುವೆಯಾಗಿ ಆರೇಳು ವರ್ಷ ಕೂಡ ಆಗಿಲ್ಲ. ಇಲ್ಲ, ಆರಾಯಿತು, ಏಳು ಆಗಿಲ್ಲ. ಚಿತ್ರಾಗೇ ನಾಲ್ಕು ವರ್ಷ ಆಗಿರಬೇಕು. ಆಕೆ ಹುಟ್ಟಿದ್ದೆಂದು?....

ಅನಂತ ಕಣ್ಣು ತೆಗೆದು ನೋಡಿದ. ಮಂದ ಬೆಳಕಿನಲ್ಲಿ ಅವನಿಗೆ ಕೆಳಗೆ ಮಲಗಿದ ಮಗಳ ತಲೆಯಷ್ಟೇ ಕಾಣಿಸಿತು. ಅವಳ ದಟ್ಟ ಕೂದಲು ತನ್ನ ಅಂಶ. ಮೋರೆ ಮಾತ್ರ–ಮೋರೆಯಷ್ಟೇ ಏಕೆ, ಈಗಿಂದಲೇ ಸ್ವಭಾವ ಕೂಡ ತಾಯಿಯಂತಹದು. ಮಹಾ ಹಟಮಾರಿ. ತಾನು ಹೇಳಿದಂತೆಯೇ, ತನ್ನ ಮನಸ್ಸಿನಂತೆಯೇ ಆಗಬೇಕು.

ಇದೇ ಈ ಹೆಂಡತಿ ಎನಿಸಿಕೊಳ್ಳುವಾಕೆ ಇಲ್ಲೇ ಮಲಗಿದ್ದರೂ ಇವಳಿಗೆ ತನ್ನ ಮಿತಿಯಿಲ್ಲ. ಇಬ್ಬರೂ ಒಂದೇ ಪಲ್ಲಂಗದ ಮೇಲೆ ಮಲಗಿದರೂ ಹಾಗೆ ಸಂಪರ್ಕ ಎಂಟು ದಿನಕ್ಕೋ, ಹತ್ತು ದಿನಕ್ಕೋ.....ಇವಳಿಗೆ ತನ್ನ ಕಡೆಗೆ ಮೋರೆ ಮಾಡಿ ಮಲಗಿಕೊಳ್ಳಲು ಏನಾಗುತ್ತದೆ? ಅಥವಾ ತನ್ನ ರಗ್ಗಿನಲ್ಲಿ ಊಂ ಹೂಂ....

ಏನಿಲ್ಲ. ತಾನು ಗಂಡ. ತನ್ನ ಇಚ್ಛೆಯನ್ನು ತಿರಸ್ಕರಿಸುವಳೆಂದರೆ ಏನು? ಇವಳ ಮನಸ್ಸಿರಲಿ, ಇಲ್ಲದಿರಲಿ, ತನ್ನ ಮನಸ್ಸಿನಂತೆ....... ಅವನ ಮೈಯಂತೆ ತಲೆಯೂ ಕಾಯ್ದಿತು. ಧಡಧಡನೆ ಮೈಯಲ್ಲಿಯ ರಕ್ತವೆಲ್ಲ ಮೋರೆಯತ್ತ ನುಗ್ಗಿದಂತಾಯಿತು.

ಮತ್ತೆ ನೆನಪಾಯಿತು. ಒಮ್ಮೆಯೇ ಹೀಗೆ ಆಗಿತ್ತು. ಚಿತ್ರಾ ಹುಟ್ಟುವ ಮೊದಲು. ಒಮ್ಮೆಯೇ. ಆದರೆ ಅವಳ ಕಟ್ಟಿಗೆಯಂತೆ ಬಿಗಿದ ಮೈಯೇನು? ಕಣ್ಣಲ್ಲಿ ಗಳಗಳ ನೀರೇನು? ತನಗೇ ಅದೆಲ್ಲ ಹೇಸಿಗೆ ಇಟ್ಟಿತ್ತು.



ದೃಷ್ಟಿ

ನನ್ನ ನಿನ್ನ ನಡುವೆ ವಸಂತ ವಾಸ
ಬೀಸುತ್ತಿಲ್ಲ
ನನ್ನ ನಿನ್ನ ನಡುವೆ ಬೆಳದಿಂಗಳ
ರಾತ್ರಿಗಳು ಹರಡುತ್ತಿಲ್ಲ
ನಿನ್ನ ರಾತ್ರಿಗಳಲ್ಲೋ ಕಳೆಯುತ್ತಿವೆ
ನನ್ನ ರಾತ್ರಿಗಳಲ್ಲೋ ಕಳೆಯುತ್ತಿವೆ
ಜನರ ದೃಷ್ಟಿಯಲ್ಲಿ ಮಾತ್ರ
ನಮ್ಮಿಬ್ಬರ ರಾತ್ರಿಗಳು ಒಂದಾಗಿಯೇ
ಕಾಣುತ್ತಿವೆ.

—ಗವೀಶ ಹಿರೇಮಠ

ಅದೆಲ್ಲ ಮುಗಿದ ಮೇಲೆ ಸುಮತಿ ಬಿಕ್ಕಿ ಹೇಳಿದಳು "ಗಂಡನೆಂಬವ ಹೆಂಡತಿನ್ನ ಬಲಾತ್ಕರಿಸತಾನೆ ಅಂತ ಕೇಳಿದ್ದೆ. ರೇಪ್ ಅಂದರ ಏನನ್ನೋದು ಈಗ ತಿಳೀತು. ನಾತಿಚರಾಮಿ ಅಂದರ ಇದೇ ಏನು?.... ಏನು ದೊಡ್ಡ ಪೌರುಷ ಮಾಡಿ ಘನಾತು?" ಅದು ಖರೆ ಎನ್ನಿಸಿತ್ತು. ಆದರೆ ಆಕೆ ಯಾಕೂ ಹೀಗೇಕೆ ಮಾಡಬೇಕು?....

ಅನಂತನಿಗೆ ತಲೆ ಕೆಟ್ಟಂತಾಯಿತು. ಮಗ್ಗಲು ಹೊರಳಿಸಬೇಕೆಂದರೆ ಮತ್ತೆ ಹೆಂಡತಿಯ ತಲೆ ನೋಡಬೇಕು–ಹೌದು, ಆಕೆ ಮುಸುಕು ತೆಗೆಯಬೇಕು. ಆ ಕೂದಲಿನಲ್ಲಿಯ ಬೆವರಿನ ವಾಸನೆ ಈ ಜನ್ಮದಲ್ಲಿಯೇ ನಿದ್ದೆ ಹತ್ತಲಿಕ್ಕಿಲ್ಲ.

ಅವನು ಹಾಗೆಯೇ ಎದ್ದ. ರಗ್ಗು ಮುದ್ದೆಮಾಡಿ ಹಿಡಿದ. ಸುಮತಿ ಅಂದ ಹಾಗೆ ಮುಸುಕು ತೆಗೆದಿದ್ದಳು. ಮಾಂಸ ರಟ್ಟೆ ರಗ್ಗಿನ ಹೊರಗೆ ಬಂದಿತ್ತು ಇವಳನ್ನು ಹೀಗೆಯೇ ಹಿಡಿದು.

ಅವನು ಮತ್ತೆ ಅವಡುಗಚ್ಚಿದ ಸೊಳ್ಳೆ ಪರದೆ ಬಿಡಿಸಿ ಕೆಳಗೆ ಕಾಲಿಟ್ಟ ಮಗಳು ಚಿತ್ರಾ ಹೇಗೆ ತಾನೊಂದೇ ಮಲಗಿತ್ತು! ಸೊಳ್ಳೆಯ ಪರದೆಯಲ್ಲಿ ಅದರ ಮೋರೆ



ಎಷ್ಟು ಸಿರಾಗತವೆನಿಸಿತು!

ಅವನು ಮೆಲು ಹೆಜ್ಜೆಯಲ್ಲಿ ಹೊರಗಿನ ಕೋಣೆಗೆ ಬಂದ. ಇನ್ನು ಸೋಫಾದಮೇಲೆ ಮಲಗಿಕೊಳ್ಳುವದೊಂದೇ ಉಳಿದದ್ದು. ಜೇಗಾವಿಯ ಗುಂಗಾಡುಗಳು ತಾವೆನ್ನುತ್ತಿದ್ದವು. ಅನಂತ ದೀಪ ಹಾಕದೆ ಹಾಗೆಯೇ ಸೋಫಾದ ಮೇಲೆ ಅಡ್ಡಾದ. ತಲೆದಿಂಬೂ ಇಲ್ಲ. ತೋಳಿಗೆ ತಲೆಯಿಟ್ಟು ಮುಸುಕು ಹಾಕಿದ.

ಸುಮತಿಗೆ ಇಷ್ಟರಲ್ಲಿ ನಿದ್ದೆ ಹತ್ತಿರಲು ಸಾಧ್ಯವಿಲ್ಲ. ತಾನು ಹಾಸಿಗೆ ಬಿಟ್ಟಿದ್ದದ್ದು ಆಕೆಗೆ ತಿಳಿದಿರಲಿಕ್ಕಿಲ್ಲವೇ? ಅನಂತನಿಗೆನ್ನಿಸಿತು. ತನ್ನ ಮನೆಯಲ್ಲೇ ತಾನು ಪರದೇಶಿ. ಹೌದು ಪರದೇಶಿ. ಅವ್ವ ಸತ್ತಾಗ ತನಗೆ ಪರದೇಶಿ ಎಂದಿದ್ದರು. ಅಂದರೇನೋ ಆಗ ತಿಳಿಯಲಿಲ್ಲ. ಆವರೆ ಮುಂದೆಲ್ಲ ಆ ಶಬ್ದದೊಡನೆ ಕಣ್ಣು ತುಂಬಿಬರಬೇಕು. ಅದೂ ಸುಮತಿಗೆ ತುಂಬಿದ್ದ ಅಕ್ಕಿಯ ಕೊಳಗ ಕಾಲಿಂದ ನೂಗಿಸಿ ತನ್ನ ಮನೆಯಲ್ಲಿ–

ಅವನ ಮನಸ್ಸು ಕಹಿಯಾಯಿತು. ಯಾವದು ತನ್ನ ಮನೆ? ಇಲ್ಲಿ ತನ್ನ ಒಂದೂ ಮಾತು ನಡೆಯುವದಿಲ್ಲ. ತಾನು ಇಲ್ಲೂ ಪರದೇಶಿ. ಎದೆ ತುಂಬಿ ಬಂದಿತು. ಗಂಟಲು ತುಂಬಿತು. ದನಿ ತೆಗೆಯುವಿದ್ದರೆ ಜೀವನವೇ ಹೋದೀತು, ಎನ್ನುವಷ್ಟು ಸಂಕಟವೆನಿಸಿತು. ಆದರೂ ಅವನು ಬಾಯಿ ಬಿಗಿ ಹಿಡಿದ. ತಾನು ದನಿ ತೆಗೆದು ಅತ್ತರೆ ಮಗಳಿಗೆ ಎಚ್ಚರವಾದೀತು. ಅದಕ್ಕಿಂತ ಹೆಂಡತಿ ಎನಿಸಿಕೊಳ್ಳುವಾಕೆಗೆ ಏನೆನ್ನಿಸೀತು? ಅವ್ವ ಇಂದು ಜೀವಿಸಿದ್ದರೆ?–

ಮದುವೆಯಾಗುವವರೆಗೆ ಅವ್ವನ ನೆನಪು ಕಾಡಿತು. ಈಗ ಹೆಂಡತಿ ಹೀಗೆ ಒದ್ದಾಗ ಮತ್ತೆ ಅವ್ವನ ನೆನಪಾಗುತ್ತದೆ. ಅಂದರೆ ಇದು ಮದರ್ ಎಕ್ಸ್‌ಟೆನ್ಶನ್ ಏನು? ಹೆಂಡತಿ- ತಾಯಿ – ಹೆಂಡತಿ. ಹಾಗಾದರೆ ಶರೀರ ಸಂಬಂಧ? ಫ್ರಾಯ್ಡ್?

ಅನಂತನಿಗೆ ಇನ್ನಷ್ಟು ಬಿತ್ತರಿಸಿ ಬಂತು. ತಲೆ ಇನ್ನಷ್ಟು ಬಿಸಿಯಾದಂತೆ ಎನಿಸಿತು. ಸೊಂಟದ ಬಿಸಿ ಇನ್ನೂ ಆರಿರಲಿಲ್ಲ. ಬಚ್ಚಲಿಗೆ ಹೋಗಬೇಕೆನ್ನಿಸಿತು. ಹಾಗೆಯೇ ಅತ್ತ ಮಲಗುವ ಕೋಣೆ ಅಡುಗೆ ಮನೆ ದಾಟಿ ಬಚ್ಚಲಿಗೆ ಹೋದ. ಊಂ ಹೂಂ ಈ ಕಾವು ಸುಡಬೇಕು ಇದನ್ನು–ಆದರೆ ಇದು ತನ್ನನ್ನೇ ಸುಡುತ್ತಲಿದೆ. ತಣ್ಣೀರಿನ ಸ್ನಾನ ಮಾಡಬೇಕು. ಬ್ರಹ್ಮಚರ್ಯ ಪುಸ್ತಕದಲ್ಲಿ ಎಂದೋ ಓದಿದ ಹಾಗೆ.

ಬಚ್ಚಲಿನ ಬಾಗಿಲಿಗೆ ಚಿಲುಕ ಹಾಕಿ ದಿಗಂಬರನಾದ. ಚಳಿ ಎನಿಸಿತು. ಸಾಯು, ಸೂಳೇಮಗನೇ! ತನ್ನನ್ನೇ ಬೈದುಕೊಂಡು ಕೊಟ್ಟಿನಿಂದ ಎರಡು ತಂಬಿಗೆ ನೀರು ಬಡಬಡನೆ ಹೆಗಲ ಮೇಲೆ ಸುರಿದುಕೊಂಡ.

ಹೆಂಡತಿ ಬಂದ ಮೇಲೆ ಎಂದೂ ತಣ್ಣೀರು ಸ್ನಾನದ ಪಾಳಿ ಬಂದಿರಲಿಲ್ಲ– ಆದರೆ ಗಂಡ ಹೆಂಡತಿ ಈ ಜಗತ್ತಿನಲ್ಲಿ ಯಾವುದೂ ಖರೆಯಲ್ಲ. ತಾನೊಬ್ಬ ಒಬ್ಬನೇ. ಇದು, ಇದಿಷ್ಟೆ ಖರೆ. ಭೋಗಿಸುವವನು ತಾನೊಬ್ಬನೇ. ಸಂಬಂಧ ಜೋಡಿಸಿಕೊಂಡು ಬಂದವರು ಅಷ್ಟೇ ಸುಲಭವಾಗಿ ಕಡಿದುಕೊಂಡೂ ಹೋಗುತ್ತಾರೆ. ಈಗ ಸುಮತಿಯೇ ಮುಕುಳಿ ತಿರುವಿ ಮಲಗಿಕೊಳ್ಳಲಿಲ್ಲವೇ? ಅವನು ಇನ್ನೂ ಆರೆಂಟು ತಂಬಿಗೆ ನೀರು ಸುರಿದುಕೊಂಡ. ತಲೆಯಮೇಲೆ, ಹೆಗಲ ಮೇಲೆ.

o o o

ಬಚ್ಚಲಲ್ಲಿ ನೀರಿನ ಸದ್ದಾದಾಗ ಸುಮತಿ ಗೋಣು ತಿರುವಿ ನೋಡಿದಳು. ಮಗ್ಗಲಲ್ಲಿ ಗಂಡ ಇಲ್ಲ. ಅವನೇ ಬಚ್ಚಲಿಗೆ ಹೋಗಿರಬೇಕು. ಒಂದಕ್ಕೆ. ನಂತರ ನೀರು ಸುರುವಿರಬೇಕು. ಆದರೆ ಇದೇನು ಇಷ್ಟೊಂದು ನೀರು? ಆಕೆ ಎದ್ದು ಕುಳಿತಳು.

ಸ್ನಾನ ಮುಗಿಸಿ ಅನಂತ ಬೆಕ್ಕಿನ ಹೆಜ್ಜೆಯಲ್ಲಿ ಮಲಗುವ ಕೋಣೆ ದಾಟಿ ಪಡಸಾಲೆಗೆ ಹೋದದ್ದನ್ನು ನೋಡಿದಾಗ, ಅವನ ರಗ್ಗು ತಮ್ಮ ಹಾಸಿಗೆಯ ಮೇಲೆ ಇಲ್ಲವೆನ್ನುವದು ಅವಳ ಲಕ್ಷ್ಯಕ್ಕೆ ಬಂದಿತು. ಅಂದರೆ? ಇವರು ಮಲಗಿದ್ದದರೂ ಎಲ್ಲಿ?

ಆಕೆ ಹಾಸಿಗೆ ಬಿಟ್ಟಿದ್ದಳು. ಅವಳ ಹೆಜ್ಜೆಯ ಸಪ್ಪಳ ಕೇಳಿಯೋ ಏನೋ ಅನಂತ ತಲೆಗೆ ಮುಸುಕು ಹಾಕಿದ್ದ.

ಸುಮತಿಗೆ ಒಂದರೆ ಕ್ಷಣ ಏನೂ ಹೊಳೆಯಲಿಲ್ಲ. ಏನೂ ಕಾಣಿಸಲಿಲ್ಲ. ಆಕೆ ದೀಪ ಹಚ್ಚಿದಳು. ಗೂಟದ ಮೇಲೆ ಹಸಿಪಂಜಿ ಕಾಣಿಸಿತು. ಅಂದರೆ ಮಹಾರಾಯ ಸ್ನಾನ ಮಾಡಿದ್ದಾರೇನು?

"ಏನ್ರಿ," ಆಕೆ ನಿಂತಲ್ಲಿಂದಲೇ ಕರೆದಳು. ಮತ್ತೊಮ್ಮೆ. ಮೂರನೆಯ ಸಲ. ಅವನು ಮಿಸುಕಲಿಲ್ಲ. ಆಕೆ ಅವನ ರಟ್ಟಿಗೆ ಕೈಹಾಕಿದಳು. ಅವನು ಬಿಗಿಯಾಗಿ ಹಿಡಿದುಕೊಂಡ.


"ಏನ್ರೀ. ಒಳಗ ಮಲಕೋ ನಡೀರಿ. ಇಲ್ಲಿ ಥಂಡಿ ಭಾಳ ಅದs"

ಆಕೆ ಅವನ ಹೊದಿಕೆಗೆ ಕೈಹಾಕಿದಳು. "ನಾ ಇಲ್ಲೇ ಮಲಕೋತೇನಿ. ನೀನs

ಹೃದಯ ದೂರ

ಅಂದು ನೀ
ಮರೆಯದಿರು ಎಂದಾಗ
ಆನಂದಾಶ್ರುಗಳುದುರಿದ್ದವು
ಇಂದು ನೀ
ಮರೆತು ಬಿಡು
ಎಂದಾಗ,
ಕಣ್ಣಲ್ಲಿ ಕೆಂಪಾಶ್ರು
ಹರಿಯಿತು
ಆ ನೋವು ನನಗಲ್ಲ,
ನನ್ನ ಹೃದಯಕೆ.
ಎಷ್ಟೊಂದು ದೂರ
ಇಬ್ಬರ ಹೃದಯಗಳು
ನೀ ನನಗದನ್ನು
ತೆಗೆದಿರಿಸಿರಬಹುದು
ಇನ್ನುಳಿದಿರುವ
ನಿನ್ನ ನೆನಪಿನ
ಸುಳಿಯಲ್ಲಿ ಸಿಕ್ಕು
ನಾನೇನಾಗುವೆನೋ
ಗೊತ್ತಿಲ್ಲ.

—ಕೆ. ಗುರುರಾಜ





ಒಳಗ ಮಲಕ್ಕೋ, ಬಿಚ್ಚಗ, ಮಚ್ಚರ ದಾಣಿಯೊಳಗ"

"ಏಳ್ರಿ ಏಳ್ರಿ," ಮುಂದೇನು ಮಾಡ ಮಾಡಬೇಕೆಂಬುದು ತಿಳಿಯದೆ ಆಕೆ ಅಲ್ಲೇ ಕುಳಿತಳು. ಅವನ ಕಾಲ ಹತ್ತಿರ.

ಟಿಕ್ ಟಾಕ್ ಮಾಡುತ್ತಿದ್ದ ದೊಡ್ಡ ಗಡಿಯಾರ ಸರ್‌ರ್‌ರ್ ಫಣ್ ಎಂದು ಗಂಟೆ ಬಾರಿಸಿತು. ಎಷ್ಟು ಹೊಡೆಯಿತೋ? ಆಕೆ ಎದ್ದು ನೋಡಲಿಲ್ಲ.

"ಏನ್ರೀ, ಏಳ್ರೆಲ್ಯಾ" ಕಳವಳದಿಂದ ಆಕೆ ಹೇಳಿದಳು.

"ನಾ ಒಮ್ಮೆ ಹೇಳಿದೆ. ನಾ ಇಲ್ಲೇ ಮಲಕೋತೇನಿ" ಅವನು ರಗ್ಗು ತೆಗೆ ದೊಗೆದ. "ನಾ ಎಲ್ಲಿ ಮಲಕೊಂಡರ ನಿನಗೇನು ?"

"ಹಾಂಗ ಹಟ ಮಾಡಬ್ಯಾಡ್ರಿ" ಆಕೆ ಅವನ ಕೈಹಿಡಿದಳು" ನಿಮ್ಮ ಮನಸ್ಸಿನ್ಹಾಂಗs ಆಗಲಿ."

"ಹೌದಲ್ಲೋ ? ನನ್ನ ಮನಸ್ಸಿನಾಗ ಇಲ್ಲೇ ಮಲಕ್ಕೊಳ್ಳೋದದ". ಆಕೆ ಉಸಿರು ಹಾಕಿದಳು. 'ಆತು ಇಲ್ಲೇ ಮುಗಸರಿ' ಅಲ್ಲೇ ಅಡ್ಡಾಗಬೇಕೆನ್ನುತ್ತಿದ್ದಾಗ ಅವನು ಆಕೆಗೆ ಜಾಗ ಕೊಡದೆ ಎಬ್ಬಿಸಿದ. ನೀವು ? ಛೇ, ಛೇ, ನೀವು ಒಳಗ ಮಲಕೋಬೇಕು. ನೀವು ಬ್ಯಾಂಕಿನಾಗಿನ ಆಫೀಸರು."

"ನೋಡ್ರೀ, ನನಗೂ ಸಿಟ್ಟು ಬಂದ್ಯದ."

"ನಾನೂ ಅದೇ ಅಂದೆ. ದಣಿದು ಬಂದೀರಿ. ಮಲಕೋರಿ ಛೆಚ್ಚಗs ಅಂತ."

ಇವನ ಅಡ್ಡಮಾತಿಗೆ ಏನು ಉತ್ತರ ಕೊಡಬೇಕೆಂಬುದು ಆಕೆಗೆ ತಿಳಿಯ ದಾಯಿತು.

"ನಿಮ್ಮ ಮನಸ್ಸಿನಾಗ ಇಂದು ಇತ್ತ ಹೌದಲ್ಲೋ ? ಆಗs ಮಾಡಿ ಮುಗಿಸಿದ್ದರ ಆಗಲಿತ್ತು."

–ಏನು ಮಾಡೋದು. ಏನು ಮುಗ ಸೋದು ? ಮತ್ತ ನೀವು ಅದಕ್ಕ ರೇಪ್ ಅನ್ನಾವರು. ಏನೂ ಬ್ಯಾಡೇ ಬ್ಯಾಡ."

ಆಕೆಯ ಜೀವ ಅಳುಮುಸ್ಸಿಗೆ ಬಂತು. 'ನಂದು ತಪ್ಪಾತು-'

ಅವನು ನಕ್ಕ. ತನಗರಿಯದಂತೆ ಅಿರ ಸ್ಕಾರ ಅವರಲ್ಲಿ ಹೊಕ್ಕಾಗಿತ್ತು.

"ನಿಮ್ಮದು ತಪ್ಪು ... ತಪ್ಪುಗತ್ಯದ ? ನೀವು ಆಫೀಸರು ನೋಡ್ರಿ. ತಪ್ಪು ನನ್ನ ದಾಗತ್ಯದ. ನಮ್ಮೂ ಎರಡು ನೂರು ಕಾಸ್ಟಿಂಗ್ ಈವತ್ತು ರಿಜೆಕ್ಟ್ ಆಗಿ ಬಂದವು."

ಆಕೆ ಅವನ ಕಣ್ಣುಗಳತ್ತ ನೋಡಿದಳು. ಅವನು ಕಣ್ಣು ತಪ್ಪಿಸಿದ.

"ನನಗ ನೀವು ಹೇಳಲಿಲ್ಲ."

"ಏನು ದೊಡ್ಡ ವಿಜಯಶ್ರೀ ಅಂತ ಹೇಳೋದು ?" ಆಕೆಯ ಕಾಲಲ್ಲಿಯ ತ್ರಾಣ ಹೋದಂತಾಯಿತು. ಹಾಗು ತನ್ನ ಕಾರಖಾನೆಯಲ್ಲಿಯ ಏರು ಇಳುವುಗಳ ಬಗ್ಗೆ ಅವನು ಎಂದೂ ತನ್ನೊಡನೆ ಹಂಚಿಕೊಂಡಿರಲಿಲ್ಲ. ಯಾಕೆ ? ತನಗೆ ಹೇಳಿದ್ದರೆ ತಾನು ಒಂದಿಷ್ಟು ಸಮಾ

ಕಾಲಚಕ್ರ

ಅಯ್ಯೋ ಹೆಣ್ಣೆ
ಹಗಲಿಡೀ ನಿನ್ನ
ಬಾಳಿನುದ್ದಕ್ಕೂ
ಈ ಗಂಡಿನ ಕಿಡಿ-
ಕೋಪ ತಾಪಕ್ಕೆ ತುತ್ತಾಗಿ
ಗಾಣದೆತ್ತು ದುಡಿದ ಹಾಗೆ
ದುಡಿದೂ, ದುಡಿದು
ಮನದಲ್ಲೇ ಕೊರಗಿ
ಸೊರಗಿ ಜೀವ
ಸಣ್ಣಾಗಿ ಹೋಗುವದು.
ಆದರೆ,
ಇರುಳಲ್ಲಿ ?
ನಿನ್ನ ಮೈ ಕಾಂತಿಯ
ನೋಟದಲ್ಲೇ ನಿನ್ನ
ಬಣ್ಣಿಸುತ್ತ ನಿನ್ನಲ್ಲಿ
ಒಂದಾಗಿ ನಿನ್ನ
ಹೊಗಳಿ ಮುದ್ದಾಡಿ
ರಂಭೆ-ಊರ್ವಶಿಯರಿಗೆ
ಹೋಲಿಸಿ
ಅರಗಿನ ಹಾಗೆ
ಕರಗಿ ಹೋಗುವರೀ
ಪುರುಷರು.

— ಕೆ. ಗುರುರಾಜ

ಧಾನ ಹೇಳಬಹುದಾಗಿತ್ತಲ್ಲವೇ ? ಅ... ಬಿಸಿಲ್ಲದಿದ್ದರೂ ಅವನಿಗೆ ಅಷ್ಟೇ ಹಗುರಾಗಿಸ ಬಹುದಾಗಿತ್ತು...

ಆಕೆಯ ಕಾಲು ಕಾಲಿಗೆ ಗುಂಗಾಡು ಮುತ್ತತೊಡಗಿದವು. "ಏನ್ರೀ, ನಡೀರಿ ಒಳಗ, ಇಲ್ಲಿ ಗುಂಗಾಡು ಭಾಳ ಅಗ್ಯಾವ,"

"ನಮಗ ನಡೀತಾವ, ನೀವs ಒಳಗ ಹೋಗ್ರಿ."

ತಾನೂ ಇಲ್ಲೇ ಬಂದು ಮಲಗಬೇಕೆಂ ದಿನಿಸೀತು ಒಂದು ಕ್ಷಣ ಸುಮತಿಗೆ. ಆದರೆ ಇದೇನು ಹುಡುಗಾಟ ?

"ಪ್ಲೀಜ್, ನಂದು ತಪ್ಪಾತು ಅಂದೆನಲ್ಲ. ಇನ್ನ "ನಾ ಎಂದೂ..." ಆಕೆ ನಾಲಗೆ ಕಡಿದುಕೊಂಡಳು. ತಾನು ಅದೇನು ಹೇಳ ಹೊರಟಿದ್ದೆ? ಎಂದೂ–ಎಂದೂ ನಿಮಗೆ ವಿರೋಧ ಮಾಡುವಳಲ್ಲ? ಊಂ ಆಗ ಲಾರದ್ದು, ಅವನಿಗಷ್ಟೇ ಅಹಂಕಾರವೇನು? ತನಗೆ ಅಭಿಮಾನ, ಮಾನ ಮರ್ಯಾದ ಇಲ್ಲವೇನು ?

ಅವನು ಅದನ್ನೇ ಎಳೆದು ಹಿಡಿದ. "ಎಂದೂ–ಏನು ?" ಎದ್ದು ಕುಳಿತ, ಆಕೆ ನೋರಿ ಕೆಳಗೆ ಹಾಕಿದಳು.

"ನಿಮಗ ಟೆನ್ಶನ್ ಚಿಂತಿ ಕಾಳಜಿ ಇರ ತಾವ, ಹಾಂಗ, ನನಗೂ ಇರತಾವ." ಆಕೆಯೆಂದಳು. ಅನಂತನಿಗೆ ಉತ್ತರ ಬಾಯಿಗೆ ಬಂದಿತ್ತು. "ಅವನ್ನ ಮರೀಲಿಕ್ಕೆ ಅಂತೇ, ಎಷ್ಟು ? ಹದಿನೈದು ಮಿನಿಟು ಅರ್ಧ ತಾಸು ನೀ ಮಗ್ಗಲಿನ್ಯಾಗ ಇರ ಬೇಕು. ನಿನ್ನ ಸ್ಪರ್ಶದಾಗ ಎಲ್ಲಾ ಮರೀ ಬೇಕು ಅಂತ ಅಂದರ, ಒಂದೇ ಹಾಸಿಗ್ಯಾಗ ಇದ್ದರೂ ನಿನ್ನ ಜಗತ್ತು ಬ್ಯಾರೆ. ನನ್ನ ಜಗತ್ತು ಬ್ಯಾರೆ" ಅವನು ಅದನ್ನು ಹೇಳ ಲಿಲ್ಲ.

"ಆಫೀಸರು ನೋಡ್ರಿ ಎಷ್ಟಂದರೂ? " ಇಷ್ಟೇ ಅಂದ.

"ಅನಂತ, ಪ್ಲೀಜ್" ಎಷ್ಟೋ ದಿವಸ ಗಳ ಮೇಲೆ ಆಕೆ ಹೆಸರುಗೊಂಡು ಕರೆ ದಳು, "ಪ್ಲೀssssಜ್ ನಾನು ಮನ್ಯಾಗ ನಿಮ್ಮ ಸಂಗತಿ" ಎಂದಾರೆ ಹಾಂಗ ನಡಕೊಂಡೀದೇನು ? ಆಫೀಸರ ಇದ್ದರ ಬ್ಯಾಂಕಿನ್ಯಾಗ ಮನಾಗ ಮಗಗೆ ತಾಯಿ



ಗಂಡನ–" ಅವಳು ಮತ್ತೆ ಮಾತು ತಡೆದಳು.

"ಮ್ಯಾಡಂ. ಅದೇ ನನ್ನ ತಕರಾರು–ಹೋಗಲಿ ಬಿಡರಿ. ನಿಮಗೂ ನಾಳೆ ಬ್ಯಾಂಕ್ ಅದ. ಬೆಳಗಾದರೆದ್ದು ನನಗೂ ಫ್ಯಾಕ್ಟರಿಗೆ ಹೋಗೋದು ಅದs. ಮಲಕೋ ಹೋಗ್ರಿ"

"ನೀವು ಬರೂದಿಲ್ಲ ಹಂಗಾದರ?" ಆಕೆಯ ಮನಸ್ಸು ಬರಿದಾಗಿತ್ತು. ಆಕೆ ಹಿಂದಿರುಗಿದಳು. ತನ್ನದೇ ಭೋಗ. ತನ್ನ ಗೆಳತಿ ಯಶೋದಾಭಟ್ಟಹಾಗೆ ಸೀನಿಯರ್. ಎರಡು ಮಕ್ಕಳಾದವು. ಆದರೂ ಗಂಡ ಎಷ್ಟು ಅಕ್ಕರತೆಯಿಂದ ನೋಡಿಕೊಳ್ಳುತ್ತಾನೆ! ಪ್ರೇಮಾ ಪೈ ಗಂಡ ದಿನವೂ ಸ್ಕೂಟರಿನಲ್ಲಿ ಬಿಟ್ಟು, ಸ್ಕೂಟರಿನಲ್ಲಿ ಕರೆದುಕೊಂಡು ಹೋಗುತ್ತಾನೆ! ಇನ್ನು ತನ್ನ ಗಂಡ?

ಬೆಳಿಗ್ಗೆ ಏಳೂವರೆಗೆ ಫ್ಯಾಕ್ಟರಿಗೆ ಹೊರಡಬೇಕು. ತಾನು ಅಡಿಗೆ ಊಟ ಮುಗಿಸಿ ಚಿತ್ರಳನ್ನು ಅಬಚಿಯ ಮನೆಯಲ್ಲಿ ಬಿಟ್ಟು ಬಸ್ಸು ಹಿಡಿದು ಬ್ಯಾಂಕಿಗೆ ಹೋಗಬೇಕು ಸಂಜೆ ಹಾಗೆಯೇ ಮರಳಿ ಮನೆಗೆ ಮಧ್ಯಾಹ್ನ ಹನ್ನೆರಡುವರೆ, ಒಂದು ಗಂಟೆಗೆ ಬಂದು ಊಟ ಮಾಡಿ ಹೋದ ಗಂಡ ಸಂಜೆ ಮನೆಗೆ ಬರಲಿಕ್ಕೆ ಏಳೋ ಎಂಟೋ........? ರವಿವಾರ ಅವನಿಗೆ ಸೂಟಿಯಾದರೆ ತನಗೆ ಸೋಮವಾರ. ಮನೆಗೆ ಬಂದ ಬಳಿಕವೂ ಮಗಳ ಜೊತೆ ಒಂದಿಷ್ಟು ಮಾತು, ಆಟ. ತನ್ನ ಜತೆಗೆ ಅಷ್ಟರಪುರತೆ. ನಂತರ ಮಾತ್ರ ತನ್ನ ಮೈಮಾಂಸ ಅವನ ಹಕ್ಕಿನದು. ಹಸಿದ ನಾಯಿ ಪಿಟ್ಟಿನ ಚೀಲ ಹರಿದಂತೆ ತನ್ನ ಮೈಹರಿಯುತ್ತಾನೆ! ಇವನಿಗೆ ಇಷ್ಟಕ್ಕಾಗಿ ಹೆಂಡತಿ ಬೇಕೇನು? ಪುಕ್ಕಟೆ ಅಡಿಗೆಯಾಕೆ–ಪುಕ್ಕಟೆ ಸೂಳೆ.

ಅಷ್ಟು ದೊಡ್ಡ ಹಾಸಿಗೆಯ ಮೇಲೆ ಹೇಗೆ ಹೊರಳಾಡಿದರೂ ಆಕೆಗೆ ನಿದ್ದೆ ಬರದಾಯಿತು. ಎಷ್ಟೋ ಹೊತ್ತು. ಕೊನೆಗೆ ಆಕೆ ಪಲಂಗ ಬಿಟ್ಟು ಕೆಳಗೆ ಮಗಳನ್ನು ಅಪ್ಪಿಕೊಂಡು ಮಲಗಿದಳು.

o o o o

ದಿಂಬು ಇಲ್ಲ. ಕಿರಿಯಗಲ ಸೋಫಾ. ಮಗ್ಗಲು ಹಾಸಿಗೆ ಇಲ್ಲ. ಅನಂತನಿಗೆ ಹೇಗೋ ಆಯಿತು. ತಣ್ಣೀರಿನ ಸ್ನಾನದಿಂದಾಗಿ ಸೊಂಟದ ಕಾವು ಆರಿತು. ಆದರೆ ತಲೆಯ ಕಾವು ಇಳಿದಿರಲಿಲ್ಲ.

ತಾನೊಬ್ಬ ಹುಚ್ಚ. ಮಹಾ ಹುಚ್ಚ. "ನಮ್ಮ ಮಗಳೂ ಏನ್ರೆಪಾ, ಬ್ಯಾಂಕಿನ್ಯಾಗ ಪ್ರೊಬೆಶನರ್ ಆಫೀಸರು. ಈವತ್ತಿಲ್ಲ ನಾಳೆ ಕನ್‌ಫರ್ಮ್ ಆಗತಾಳ. ಅವಕ್ಕ ನೋಕರಿ ಬಿಡೋ ಪ್ರಶ್ನೆ ಇಲ್ಲ. ಹಿಂಗಿತ್ತೂ ಮುಂದಿನ ವಿಚಾರ," ತನ್ನ ಮಾವ ಹೊರಗಿನ ಕೋಣೆಯಲ್ಲಿ ತನ್ನ ಬೀಗನಿಗೆ-ಅಕ್ಕನ ಗಂಡನಿಗೆ ಹೇಳುತ್ತಿದ್ದರು. ಈ ಹುಡುಗಿಯನ್ನು ನೋಡದೆಯೂ ಮಾಡಿಕೊಳ್ಳಲು ಅಡ್ಡಿಯಿಲ್ಲ ಎನಿಸಿತ್ತು. ಅನಂತನಿಗೆ ಆಗ.

ಇಂಡಾಲ್‌ದಲ್ಲಿಯ ಕೆಲಸ. ಇಂದಿಲ್ಲ ನಾಳೆ ಬಿಟ್ಟು ಸ್ವತಂತ್ರ ವರ್ಕ್‌ಶಾಪ್ ಹಾಕುವ ಹುಳ ಎಂದಿನಿಂದ ತಲೆ ಕೊರೆಯುತ್ತಿತ್ತು. ಅದಕ್ಕೇ ಕೆಲಸದಲ್ಲಿ ಸ್ಥೈರ್ಯವೆನಿಸಿರಲಿಲ್ಲ. ಮದುವೆ ಮುಂದೆ ಮುಂದೆ ಬೀಳತೊಡಗಿತ್ತು. ಸಂಸಾರದ ಹೊಣೆ ಬಿದ್ದಾಗ ಸುಖದ ಕೆಲಸ ಬಿಟ್ಟು ಸ್ವತಂತ್ರ ವ್ಯವಸಾಯಕ್ಕೆ ಕಾಲಿಡಲು ಧೈರ್ಯವಾದೀತೇ?

ಆದೇ ಹೆಂಡತಿಗೆ ಕೆಲಸವಿದ್ದರೆ ನಿಶ್ಚಿತ ಪ್ರಾಪ್ತಿಯಿದ್ದರೆ ತಾನು ಯಾವ ಬೇಕಾದ ಧೈರ್ಯ ಮಾಡಬಹುದು.

ತನ್ನ ಮಾನದಿಂದ ಅಷ್ಟೇನು ಸ್ಫುರದ್ರೂಪಿಯಲ್ಲದ– ಅಥವಾ ಸ್ಪಷ್ಟವೇ ಹೇಳಬೇಕೆಂದಿದ್ದರೆ ನಾದುಗಪ್ಪು ಬಣ್ಣದ ಸುಮತಿಯನ್ನು ನೋಡಿದ ಶಾಸ್ತ್ರ ಮಾಡಿ ತನ್ನ ಒಪ್ಪಿಗೆ ತಿಳಿಸುವಾಗ ತಾನುಹೇಳಿದ್ದ" ನಾನು ಸ್ವತಂತ್ರ ವೃತ್ತಿಯ ಮನಶಾ. ಈ ನೋಕರಿ ಭಾಳ ದಿವಸ ಮಾಡಾಂವಲ್ಲ. ನನ್ನದೇ ವರ್ಕ್‌ಶಾಪ್ ಹಾಕಬೇಕಂತೇನಿ."

"ಇಂಜನಿಯರೂ ಡಾಕ್ಟರರೂ ಉಪಾಸ ಬೀಳೂದಿಲ್ಲ" ಮಾವ ಖುಶಿಯಿಂದ ಹೇಳಿದ್ದರು "ನಾವು ನಿಮ್ಮ ಡಿಗ್ರಿ ನೋಡಿ ಕೊಡತೇವೇ ಹೊರತು ನೋಕರಿಯಲ್ಲ."

ಕ್ಷಣಜೀವಿ

ಬಳ್ಳಿಯಲಿ ಹೂವೊಂದು
ಮುಂಜಾವ ನಸುಕಿನಲಿ
ಅರಳಿ ನಗುಮೊಗದಿ
ನಾ 'ಚಲುವೆ' ಎಂದಿತು.

ಕಾನನದ ಜೊನ್ನದಂತಲ್ಲ
ನನ್ನ ಈ ಚಲುವು
ನಿರ್ಜನದ ಕಾಡಿನಲಿ
ರೋದಿಸುವ ಮೊಗ್ಗಲ್ಲ —
ಶಿವನ ಜಡೆ ಏರುವೆನೋ
ಶವದ ಕತ್ತಲಿ ಬೀಳುವೆನೋ
ಸೈನಿಕನ ಪಾದದಡಿ
ಮುದುಡುವೆನೋ
ಕಾಣೆ ಈ ದಿನದ ನನ್ನ ಜೀವನ.

ಮಧು ತುಂಬಿ ಅರಳಿರುವೆ
ಮದ ದುಂಬಿ ಅನುಭವಿಸು
ಸಂಜೆ ಹೊತ್ತಿಗೆ ನನ್ನ
ಜೀವನವೆ ಮುಗಿಯುವುದು.

—ನೈದೂರು ಕೃಷ್ಣಮೂರ್ತಿ

ತಾನು ಊರಹುಚ್ಚ, ಮಾವನೇನೋ ಡಿಗ್ರಿ ನೋಡಿ ಹೆಣ್ಣು ಕೊಟ್ಟರು. ಮಾವನ ಮಗಳು?

ಎರಡು ಸಾವಿರ ರೂಪಾಯಿ ಸಂಬಳದ ನೋಕರಿ ಬಿಡುವ ನಿರ್ಧಾರ ಮಾಡಿದ್ದು ಹೇಳಿದಾಗ ಅತ್ತು ರಂಪಾಟ ಮಾಡಿದಳು.

"ನನ್ನ ಒಂದು ಮಾತು ಕೇಳಿದಿರೇನು?"

"ಮದಿವೀಕಿಂತ ಮುಂಚೇ ಹೇಳಿದ್ದೆ. ಮತ್ತ ಕೇಳೋದೇನು?

"ಯಾರಿಗೆ ಹೇಳಿದ್ದಿರಿ?" ಇದು ಉಪರಾಟಿ ನ್ಯಾಯ.

"ನಿಮ್ಮಪ್ಪಗs ಹೇಳಿದ್ದೆ. ನಾನೋಕರಿ ಬಿಟ್ಟದ್ದು ನಿನಗ ಸರಿ ಬರದಿದ್ದರ ನೀ ಖುಶ್ಯಾಲ್ ಮಂಗಳ ಸೂತ್ರ ಹರದು ತವರು ಮನ್ಯಾಗ ಹೋಗಿ ಇದ್ದುಬಿಡು." ಇನ್ನೂ ಏನು ಹೇಳುವದು?


ದೇವರು ತನಗೆ ಬುದ್ಧಿ ಕೊಟ್ಟಿದ್ದಾನೆ. ಒಳ್ಳೆಯದು ಕೆಟ್ಟದ್ದು ತಿಳಿಯುತ್ತದೆ

Happy Diwali to All Our Customers !

Indian Cargo Industries

You can transport your Cargo very safely & easily to any place all over India

Please Contact :



G. R. DINODIA
Transport Contractors

Phone : 331174-75
338675
Res. : 683115

212-A, Steel Chambers,
BROACH STREET, BOMBAY-9.

ನೌಕರಿ ವ್ಯವಸಾಯ ವಿಷಯದಲ್ಲಿ ಈ ಹೆಂಗಸಿಗೇನು ತಿಳಿಯುತ್ತದೆ? ಆಫೀಸರು ಇದ್ದರೆ ಬ್ಯಾಂಕಿನಲ್ಲಿ. ಹಾಗೆ ಹತ್ತು ಸಲ ತಾನು ಆಕೆಗೆ ಹೇಳಿದ್ದಾಗಿದೆ. ನೂರು ಸಲ ನೆನಪು ಮಾಡಿ ಕೊಟ್ಟಾಗಿದೆ. ಏಕವಚನದಲ್ಲಿ, ಬಹುವಚನದಲ್ಲಿ.

ಕಾಡುವ ದೇವರ ಕಾಟ ಕಳೆದಂತೆ ಅನ್ನ ಕಟ್ಟಿದರೆ ತನ್ನ ಹೊಣೆ ತೀರಿತು ಅನ್ನುತ್ತಾಳೆ. ತಾನು ದಿನ ಬೆಳಗಾದರೆದ್ದು ಫ್ಯಾಕ್ಟರಿಗೆ ಹೋಗುವದು ಗೊತ್ತಿಲ್ಲವೇ? ಊಟಕ್ಕೆ ತಡವಾಗುತ್ತದೆ. ಇಡ್ಲಿ, ಉಪ್ಪಿಟ್ಟು ಮಾಡಿಕೊಡುವುದಕ್ಕೇನು ಧಾಡಿ ಈಕೆಗೆ?

ಒಮ್ಮೆ ಸ್ನಾನ ಮುಗಿಸಿ ಎರಡನೆಯ ಸಲ ಚಹ ಮಾಡಿಕೊಂಡು ಕುಡಿಯುವಾಗ ಕಪಾಟಿನಲ್ಲಿ ಕಾಜಿನ ಬರಣಿಯಲ್ಲಿ ಕಂಡ ಎರಡು ಬಿಸ್ಕೀಟು ತೆಗೆದುಕೊಂಡಿದ್ದೆ ಅಥವಾ ನಾಲ್ಕು ತೆಗೆದುಕೊಂಡಿರಬಹುದು.

"ಐ! ಚಿತ್ರಾನದಕೆಯಿಂದ ಬಿಸ್ಕಿಟು ತಂದದ್ದೂ ಅವ" ಎಂದಳು. ಅಂದೇ ಸಂಜೆ ದೊಡ್ಡ ಪುಡಿಕೆ ಕ್ರೀಮ್ ಬಿಸ್ಕಿಟು ತಂದು ಇನ್ನೊಂದು ಬರಣಿಯಲ್ಲಿ ಹಾಕಿ ಇಟ್ಟರೆ ಅದಕ್ಕೆ ಎಂದೂ ಕೈಹಚ್ಚಲಿಲ್ಲ. ಮಗಳಿಗೆ ಅದರಲ್ಲಿಯದು ಕೊಡಲಿ. ಅದು ಇಸಿ ಎಂದು ಮಗಳಿಗೆ ಕಲಿಸಿದಳು.

ತಾನು ರೇಡಿಯೋ ಹಚ್ಚಿ ಕೇಳುತ್ತಿದ್ದರೆ ಆಕೆ ಬಂದ್ ಮಾಡಬೇಕು ಅಥವಾ ಸ್ಟೇಶನ್ ತಿರುವಬೇಕು. ಒಂದೇ, ಎರಡೇ, ಶೀss!

ಅನಂತ ಮತ್ತೆ ಮಗ್ಗಲಾದ. ನಿದ್ದೆ ಹತ್ತಲೊಲ್ಲದು. ಮಗಳ ಹತ್ತಿರವಾದರೂ ಮಲಗಬಹುದು ಎಂದು ಒಳಗೆ ಬಂದರೆ ಅಲ್ಲಿ ಸುಮತಿ ಗೊರಕೆ ಹೊಡೆಯುತ್ತಿದ್ದಾಳೆ! ತಿರುಗಬೇಕಂದ. ಆದರೆ ಫ್ಲಲಂಗ ತೆರದೇ ಇದೆಯಲ್ಲ? ಮಲಗಿದ ಐದು ನಿಮಿಷಕ್ಕೇ ಗಡದ್ದಾಗಿ ನಿದ್ದೆ ಹತ್ತಿತು.

o o o

೨

ದಿನಾಂಕ 10ಆಗಸ್ಟ್

ಪ್ರಿಯ ಅನಂತ,

ಅಂದು ಬೆಳಗ್ಗೆ ಸೂಟ್‌ಕೇಸಿನಲ್ಲಿ ಬಟ್ಟೆ ಬ್ರಶ್ಶು ಹಾಕಿಕೊಂಡು ಹೋದಿರಿ. ಫ್ಯಾಕ್ಟರಿಯ ಕೆಲಸದ ಬಗ್ಗೆ ಮುಂಬಯಿಗೋ, ಬೆಂಗಳೂರಿಗೋ ಹೋಗಿರಬಹುದೆಂದೆನಿಸಿತು; ನನ್ನ ಮೇಲೆ ಸಿಟ್ಟಾಗಿದ್ದಿರಿ. ನನಗೆ ಹೇಳಲಿಲ್ಲ. ಚಿತ್ರಾಗೂ ಹೇಳದೆ ಹೋಗಬೇಕೇ?

ನಿನ್ನೆ ಬೆಳಗ್ಗೆ ಫ್ಯಾಕ್ಟರಿಗೆ ಫೋನ್ ಮಾಡಿದಾಗ ನೀವು ಇರಲಿಲ್ಲ. ಯಾವ ಊರಿಗೂ ಹೋಗಿರಲಿಲ್ಲವೆಂಬುದು ಮಾತ್ರ ತಿಳಿಯಿತು. ನೀವಿದ್ದಾಗ ಎರಡು ಸಲ ಫೋನ್ ಮಾಡಿದರೆ ನೀವೇ ಎತ್ತಿ ರಾಂಗ್ ನಂಬರ್ ಎಂದಿರಿ. ಹೀಗಾಗಿ ಈ ಪತ್ರ ಬರೆಯುತ್ತಿದ್ದೇನೆ.

ನಾನು ನಿಮ್ಮೊಂದಿಗೆ ಅನುದಾರವಾಗಿ ನಡೆದುಕೊಂಡದ್ದು ನಿಜ.

ದಯವಿಟ್ಟು ಕ್ಷಮಿಸಿ ಮನೆಗೆ ಬನ್ನಿ ಚಿತ್ರಾ ನಿಮಗಾಗಿ ಹಲಬುತ್ತಾಳೆ.

ನಿನ್ನೊಲವಿನ,
ಸುಮತಿ

ಅಮರ ಚಿತ್ರ

ನೀನಿಲ್ಲವಾದೆ ಇನ್ನು
ಆದರೆ ನಿನ್ನ ಒಲವಿನ
ಚಿಲುಮೆ ಚಿಮ್ಮಿದಾಗ
ಈ ಹೃದಯಕೆ
ಪನ್ನೀರೆರಚಿದಂತಾಯ್ತು.
ನನ್ನನು ಬಿಟ್ಟು ಹೋಗಿ
ದೂರವಾದೆ
ಈ ನನ್ನ ಮನಸಿನಲ್ಲಿ
ಅಶಾಂತಿ, ಕತ್ತಲೆಯನು
ತುಂಬಿ ನಿನ್ನ
ಮಂದಹಾಸದ
'ಅಮರ ಚಿತ್ರ'
ನನ್ನ ಅಕ್ಷಿಪಟಲದಲಿ
ಚಿರಂತನ ಉಳಿಸಿದೆ
ನಿನ್ನ ಕೂಡುವ ಭಾಗ್ಯ
ಇಲ್ಲಿಲ್ಲವಾದರೂ
ನಾ ಬಂದು ಅಲ್ಲೇ
ಸೇರಬೇಕೆಂಬಿರುವೆ.

—ಕೆ. ಗುರುರಾಜ

ದಿ. 14 ಆಗಸ್ಟ್

ಪ್ರಿಯ ಅನಂತ,

ಪಪಾ ಎಲ್ಲಿ ಎಂದು ಚಿತ್ರಾ ದಿನ ಬೆಳಗಾದರೆದ್ದು ಹಲಬುತ್ತಾಳೆ. ಚಿತ್ರಾ ಅಷ್ಟೇ ಅಲ್ಲ, ಚಿತ್ರಾಳ ತಾಯಿ ಕೂಡ! ಮನೆಯಲ್ಲಿ ನೀವಿಲ್ಲದೆ ಗೋಡೆಗಳೆಲ್ಲ ಮೂಕವಾಗಿವೆ. ಏನೋ ಕ್ಷಣಿಕಸಿಟ್ಟಿನ ಭರದಲ್ಲಿ ಮನೆಬಿಟ್ಟು ಹೋಗಿರಬಹುದು. ಇನ್ನೂ ತಿರುಗಿ ಹೇಗೆ ಹೋಗುವುದೆಂದು ಅಭಿಮಾನವೂ ಅಡ್ಡ ಬರುತ್ತಿರಬಹುದು. ಮನೆ ನಿಮ್ಮದೇ ಇದೆ. ಸಂಸಾರ ನಿಮ್ಮದೇ ಇದೆ. ನೀವಿಲ್ಲದ ಸಂಸಾರ ನಿಸ್ಸಾರವಾಗಿದೆ.

ಬ್ಯಾಂಕಿನ ಕೆಲಸದಿಂದಾಗಿ ಹಗಲು ಹೊತ್ತು ಹೇಗೂ ಕಳೆಯುತ್ತದೆ. ಸಂಜೇಗೆ ಮನೆಗೆ ಬರುವದೆಂದರೆ ಎದೆಯ ಮೇಲೆ ಕಲ್ಲು ಹೇರಿದಂತಾಗುತ್ತದೆ.

ನಿಮ್ಮ
ಸುಮತಿ

20 ಆಗಸ್ಟ್

ಸುಮತಿ,

ಪ್ರಿಯ ಎಲ್ಲರ ವ್ಯಕ್ತಿಯನ್ನು ಪ್ರಿಯವೆಂದು ರೂಢಿ ಬಲದಿಂದ ಸಂಬೋಧಿಸುವ ಅಪ್ರಾಮಾಣಿಕತೆ ನನ್ನಲ್ಲಿಲ್ಲ. ನಾನು ಯಾವ ಕ್ಷಣಿಕ ಸಿಟ್ಟಿನಿಂದಲೂ ಮನೆ ಬಿಟ್ಟಿಲ್ಲ. ಪೂರ್ಣ ವಿಚಾರ ಮಾಡಿಯೇ ಮನೆ ಬಿಡಬೇಕಾಗಿ ಬಂತು.

ಒಂದಿಷ್ಟು ಹಿಂಸೆ ಎನಿಸಿತು. ಆದರೆ ಅದಕ್ಕೆ ಪರ್ಯಾಯವಿರಲಿಲ್ಲ.

ಮದುವೆಯ ಹೊಸತನದ ಆಕರ್ಷಣದಿಂದಾಗಿಯೋ, ಗಂಡ ಬಿ. ಈ. ದೊಡ್ಡ ಕಂಪನಿಯಲ್ಲಿ ಅಧಿಕಾರಿ ಎಂದು ಹೇಳಿಕೊಳ್ಳುವ ದೊಡ್ಡಸ್ತನದಿಂದಾಗಿಯೋ ನನಗೆ ನಿನ್ನದೆನ್ನುವ ಸಂಸಾರದಲ್ಲಿ ಒಂದಿಷ್ಟು ಮಹತ್ವದ ಪಾತ್ರ ಒದಗಿತ್ತು. ಹೊಸತನ ಕರಗಿತು. ಸ್ವಂತ ವ್ಯವಸಾಯಕ್ಕೆಂದು ನಾನು ನೌಕರಿ ಬಿಟ್ಟೆ. ನನ್ನ ಬೆಲೆ ಸರ್ರನೆ ಇಳಿಯಿತು. ಇಂತಹ ಮನೆಯಲ್ಲಿ ನೀರು ಕುಡಿಯುವದೂ ಅಪಮಾನಕರವೆನಿಸಿ ಮನೆ ಬಿಟ್ಟಿದ್ದೇನೆ.

ದಯವಿಟ್ಟು ನನ್ನನ್ನು ಭೆಟ್ಟಿಯಾಗಲು ಯತ್ನಿಸಬೇಡ.

—ಅನಂತ



25 ಆಗಸ್ಟ

ಪ್ರಿಯ ಅನಂತ,

ಬೇಕೆಂದೇ ಪ್ರಿಯ ಎಂದು ಕರೆದಿದ್ದೇನೆ. ನಿಮ್ಮ ಪತ್ರದಲ್ಲಿಯ ಆಶಯ ತಪ್ಪೆಂದು ನಾನು ಹೇಗೆ ಹೇಳಲಿ?

ನಿಮ್ಮೊಡನೆ ಮದುವೆಯಾಗಲು ನಾನು ಒಪ್ಪಿದಾಗ ನೀವು ಕೆಲಸ ಬಿಡಲಿರುವ ವಿಷಯ ನನಗೆ ಗೊತ್ತಿರಲಿಲ್ಲ. ಇದರ ಹೊಣೆ ತಂದೆಯವರ ಮೇಲೆ ಇದ್ದೀತು ಆದರೆ ನೀವೂ ನನಗೆ ಸ್ಪಷ್ಟವಾಗಿ ಹೇಳಬಹುದಾಗಿತ್ತು. ಮದುವೆಗೆ ಮುನ್ನ ನಾವು ಎರಡು ಸಲ ಸಿನೇಮಾಕ್ಕೆ ಹೋಗಿರಲಿಲ್ಲವೇ?..

ನೀವು ಆಗ ತಪ್ಪಿಕೂಡ ನನ್ನ ಕೈ ಹಿಡಿಯಲಿಲ್ಲ. ಸ್ಪರ್ಶಿಸಲಿಲ್ಲ. ಇಷ್ಟೊಂದು ಪ್ರಾಮಾಣಿಕತೆಯಿಂದ ವರ್ತಿಸಿದ ನೀವು ನನ್ನನ್ನು ಪೂರ್ತಿಯಾಗಿ ನೆಲೆ ತಪ್ಪಿಸಿದ್ದೂ ಮರೆಯ ಬೇಕೆಂದರೂ ಮರೆಯಲು ಆಗುವದಿಲ್ಲ.

ಅದೇನೇ ಇದ್ದರೂ ಇದಿರುಬದಿರು ಕುಳಿತು ಮಾತಾಡಿ ಮುಗಿಸಲಾರದ ವಿಷಯವಿದಲ್ಲ. ದಯವಿಟ್ಟು ಮನೆಗೆ ಬರ್ರಿ ಪರಿಚಯದವರು. ಅವರಿವರು ಏನೇನೋ ಕೇಳುತ್ತಿದ್ದಾರೆ. ಅವರಿಗೆ ಏನು ಹೇಳಲಿ?

—ಸುಮತಿ

ಸುಜಾತಾ ನಾಲ್ಕೂ ಪತ್ರಗಳ ಪ್ರತಿಗಳನ್ನು ಓದಿ ತಿರುಗಿ ಕೊಟ್ಟಳು. ಅನಂತ ಅವಳ ಮೋರೆ ನೋಡಿದ. ಸುಮತಿಯ ತಂಗಿ ಎಂದು ಅನಿಸಲಿಕ್ಕಿಲ್ಲ ಸುಂದರಿ ಹುಡುಗಿ ಎಳೆಯ ಕಳೆ ಕಣ್ಣ ಕೆಳಗೆ ಟೇಬಲ್ ಮೇಲೆ ನೆಟ್ಟಿದ್ದವು. ಈ ಹುಡುಗಿಯರು ಇಷ್ಟು ಚಂದದ ಹುಬ್ಬುಗಳನ್ನೇಕೆ ಕೊರೆಸುತ್ತಾರೆ?

ಮಾಣಿ ತಂದ್ದಿಟ್ಟ ಕಾಫಿ ಕೂಡ ಸುಜಾತಾ ಮಾತಿಲ್ಲದೆ ಮುಗಿಸಿದಳು. ಅನಂತ ಅವಳನ್ನು ನೋಡುತ್ತಲೇ ಇದ್ದ.

ಇಬ್ಬರೂ ಹೊಟೋಲಿನಿಂದ ಹೊರಬಿದ್ದರು.

"ರೇಸ್ ಕೋರ್ಸ್ ಕಡೆ ಹೋಗಿ ಬರೋಣ?" ಅವನೆಂದ.

"ಬ್ಯಾಡ ಮಳೆ ಬರೂ ಲಕ್ಷಣ ಅದ" ಅವನೂ ಆಕಾಶದತ್ತ ನೋಡಿದ.

"ಹಂಗಾರ ನಡೀರಿ ನನ್ನ ಸ್ಕೂಟರ್ ಪ್ಯಾಲೇ. ಮನೀತನಕಾ ಬಿಟ್ಟು ಬರತೀನಿ"

"ಇಷ್ಟು ಲಗೂ?" ಅನಿರೀಕ್ಷಿತವಿಲ್ಲದೆ ಮಾತು ಹೊರಬಿತ್ತು. ಅವನು ನಕ್ಕು ಸ್ಕೂಟರ್ ಸ್ಟಾರ್ಟ್ ಮಾಡಿದ.

ಇಬ್ಬರಿಗೆ ಇನ್ನೊಬ್ಬರ ಆತಂಕವಿಲ್ಲದೆ ಹತ್ತು ನಿಮಿಷ ಮಾತನಾಡಲು ಬೆಳಗಾವಿಯಲ್ಲಿ ಒಂದೂ ಜಾಗ ಇರಬಾರದೇ? ನೋಡಿದಲ್ಲೆಲ್ಲ ಜಂಗುಳಿ ಇಲ್ಲವೆ ಸಂಶಯದ ಕಣ್ಣುಗಳು ಸ್ಕೂಟರಿನ ಮೇಲೆ ಕುಳಿತವನ ಮೇಲೆ ಹೊಟ್ಟೆ ಹಿಡಿದು ಸುಜಾತಾ ಕುಳಿತಳು. "ನಿಧಾನವಾಗಿ ಬಿಡಿರಿ, ನನಗ ರೂಢಿ ಇಲ್ಲ."

ಕಿತ್ತೂರು ಚೆನ್ನಮ್ಮ ಕೋರ್ಟ್ ದಾಟಿ ಸ್ಕೂಟರು ಓಡುತ್ತಿದ್ದಂತೆ ಅವಳ ಮನಸ್ಸು ಹಿಂದಕ್ಕೆ ಓಡಿತು....

ಲಾ ಕಾಲೇಜಿನಲ್ಲಿಯ ಕ್ಲಾಸು ಮುಗಿಸಿ ಅಂದು ಸುಜಾತಾ ಸಹಜವಾಗಿ ಅಬಚಿಯ ಮನೆಗೆ ಹೋಗಿದ್ದಳು. ತವ್ಮ ಮನೆ ಊರಲ್ಲಿ, ಕೋನವಾಳಗಲ್ಲಿಯಲ್ಲಿ ಸು... ಅಬಚಿಯರ ಅಕ್ಕ ಸುಮತಿ ಮನೆಗಳು ಶಳಕವಾಡಿಯಲ್ಲಿ, ತನ್ನ ಕಾಲೇಜಿನಿಂದ ಅಷ್ಟೇನೂ ದೂರವಿಲ್ಲವಾದರೂ ಅಲ್ಲಿ ಹೋಗಿ ಮಾಡುವದಾದರೂ ಏನೆಂದು ಅಲಕ್ಷ್ಯದಿಂದಲೋ ಏನೋ ಆಕೆಯ ಜೆಟ್ಟಿ ತಿಂಗಳು ಮೂರು ವಾರಗಳಿಗೊಮ್ಮೆ.

ಸುಮತಿ ಚಿತ್ರಾಳನ್ನು ಅದೇ ಅಬಚಿಯ ಮನೆಯಲ್ಲಿ ಬಿಟ್ಟು ಬ್ಯಾಂಕಿಗೆ ಹೋಗಿರಬೇಕು. "ಮಾವಶೀ"ಎಂದು ಚಿತ್ರಾ ಸುಜಾತಾಳ ಕೊರಳಿಗೇ ಬಿದ್ದಳು. ತನ್ನೊಡನೆ ತಂದಿದ್ದ ಕ್ಯಾಡಬರಿ ಕೊಟ್ಟ ಬಳಿಕವೇ ಅವಳು ಬಿಟ್ಟದ್ದು.

"ನಿನಗ ತಿಳಿದ್ಯದೋ ಇಲ್ಲೋ?" ಎಂದು ಅಬಚಿ ತಡವರಿಸಿದಳು.

"ಇಲ್ಲ" ಎಂದು ಸುಜಾತಾ ನಕ್ಕು ಬಿಟ್ಟಳು. ಹೇಳುವಂತಹದಿದ್ದರೆ ಹೇಳೇ ಹೇಳುತ್ತಾಳೆ? ಆಕೆಯ ಹೊಟ್ಟೆಯಲ್ಲಿ ಹಾಗೆ ಯಾವುದೂ ಉಳಿಯುವದಿಲ್ಲ.

"ಸುಮತೀ ಗಂಡ ಎಂಟು ದಿನ ಆದ್ರೂ ಮನೀಗೇ ಬಂದಿಲ್ಲ," ಆಕೆ ಪಿಸುದನಿಯಲ್ಲಿ ಮೊಮ್ಮಗಳಿಗೆ ಕೇಳಿಸದಂತೆ ಹೇಳಿದಳು ಸುಜಾತಾಗೆ.

ಸುಜಾತಾಳ ಮೋರೆಯ ಮೇಲಿನ ನಗು ಒಮ್ಮೆಲೆ ಆಳಿಸಿತು. ಅವರದು ಅಷ್ಟೇನು ಸಖ್ಯವಿಲ್ಲದ ಸಂಸಾರ ಎಂದು ಅವಳಿಗೆ ಆದೇಕೋ ಅನಿಸಿತ್ತು ಯಾರು ಏನೂ ಹೇಳದಿದ್ದರೂ. ಆದರೆ ಮನೆ ಬಿಟ್ಟು ಹೋಗುವದೆಂದರೇನು?

"ಅಕ್ಕ ಏನಂತಾಳ?"

"ಆಕೆ ಅಳೂದಿಲ್ಲ. ಅತ್ತಾರ ಜೀಂವ ಹೌರಗ ಆದೀತು ನೋಡು. ನುಂಗಿ ನುಂಗಿ ಎಷ್ಟು ನುಂಗೀತವಾ ಹೆಣ್ಣು ಹೆಂಗಸು?"

"ಯಾಕಂತ? ಅಂಥಾದೇನಾತು?"

"ಹಾಂಗೇನಾಗಿಲ್ಲ, ಅಂತ ಇಲೀ ಅಂತಾಳ. ಅಂವನೂ ಛಲೋ ಮನುಷ್ಯ. ಹಾಂಗ ಹುಂಬತನ ಮಾಡೋ ಪೈಕಿ ಅಲ್ಲ."

ಬ್ಯಾಂಕಿಗೆ ಬಂದರೂ ಆಕಿ ಮನೀ ಕಡೆ ಬಂದಿಲ್ಲ. ನಮಗ್ಯಾರಿಗೆ ಏನೂ ಹೇಳಿಲ್ಲ." ಅಬಚಿ ಉಸಿರು ಹಾಕಿದಳು.

ಭಾಗ್ಯಶಾಲಿ

ನನ್ನ ಕಷ್ಟದಲಿ
ಪಾಲ್ಗೊಂಡು
ನನಗಾದ ಅವಮಾನ
ತನಗಾಯಿತೆಂದು
ನನಗೆರಡು
ಸಹಾನುಭೂತಿಯ
ಮಾತನಾಡಿ
ನನ್ನ ಕೊರಗನ್ನು
ಮರೆಸುವ
ದಿನದ ಕೋಪ-ತಾಪ
ಗಳನ್ನು ರಾತ್ರಿಯ
ಬೆವರಿನ ವಾಸನೆಯಲ್ಲಿ
ಹಂಚಿಕೊಂಡು
ನನ್ನ ಬಾಳ
ಬಾಂದಳದಲ್ಲಿ
ಪಾಲ್ಗೊಳ್ಳುವ
'ಹೆಣ್ಣು' ಸಿಕ್ಕರೆ
ನಾನೇ 'ಭಾಗ್ಯಶಾಲಿ'

—ಕೆ. ಗುರುರಾಜ



ಎಲ್ಲವೂ ಹೀಗೇಕೆ ಆಗುತ್ತಿದೆ ನೆಲೆ ತಪ್ಪಿದಂತೆ? ಪಿಸಿದ ಬಟ್ಟೆಯಂತೆ ಕೈಹಚ್ಚಿದಲ್ಲೆಲ್ಲ ಹರಿಯುತ್ತಿದೆಯಲ್ಲ?

"ಅಡಿಗಿ ಆಗೇದ ನೋಡು. ಊಟಾ ಮಾಡಿ ಹೋಗತೀಯೇನು ?"

"ಇಲ್ಲ, ಮನ್ಯಾಗ ಆತ್ತಾ ಹಾದೀ ನೋಡತಾಳ."

"ಹಾಂಗಾರ–" ಅಬಚಿ ಇನ್ನು ಚಹದ ವಿಷಯ ತೆಗೆಯುತ್ತಾರೆಂದು ಸುಜಾತಾ 'ಊಂ ಹೂಂ ಬರತೇನಿ' ಎಂದವಳೇ ಚಪ್ಪಲಿ ಎಳೆದುಕೊಂಡು ಹೊರಟೇ ಬಿಟ್ಟಳು. ಚಿತ್ರಾ, ಪಾಪ ಎಷ್ಟೋ ಹೊತ್ತು ಟಾಟಾ ಮಾಡಿದರೂ ತಿರುಗಿ ನೋಡಲಿಲ್ಲ.

ಬಸ್ಸು ಹಿಡಿದು ಮನೆಗೆ ಬಂದ ಬಳಿಕ ಎಲೆಯ ಮೇಲೆ ಕುಳಿತರೂ ಊಟ ಹೋಗಲಿಲ್ಲ. 'ಯಾಕ, ಊಟ ಮಾಡವಲ್ಲೀ ?' ಎಂದಳು ಸೋದರತ್ತೆ, ವಿಧವೆಯಾಗಿ ಅಣ್ಣನ ಮನೆ ಸೇರಿದ್ದವಳು.

"ಯಾಕಿಲ್ಲ, ಅಬಚೀ ಮನೀಗೆ ಹೋಗಿದ್ದೆ." ಇಷ್ಟೇ ಹೇಳಿದಳು ಸುಜಾತಾ. ಅವ್ವ ಜೀವಿಸಿದ್ದರೆ ಮಾತೇ ಬೇರೆ ಆಗಬಹುದಾಗಿತ್ತು. ಆಕೆಯಿಂದಾಗಿ ಸುಮತಿ ಊರಲ್ಲಿಯ ತವರುಮನೆಗೆ ಬರಹೋಗುವುದು ಹೆಚ್ಚಾಗಬಹುದಿತ್ತು. ಇಂದು ಅಬಚಿಯಿಂದ ತಿಳಿದದ್ದು ಎಂದೋ ಅವ್ವನಿಂದ ತಿಳಿಯಬಹುದಾಗಿತ್ತು. ಅಥವಾ ಆ ಪಾಳಿಯೂ ಬರತಿರಲಿಕ್ಕಿಲ್ಲ. ಯಾರಿಗೆ ಗೊತ್ತು ? ಅಬಚಿಯು ಮನೆಯಲ್ಲಿ ಏನಾದರೂ ಅಷ್ಟಷ್ಟು ಶಿಸಿಸು ಆಗಿರಬೇಕು ಎಂದುಕೊಂಡಳು ಅತ್ತೆ.

"ಚಿತ್ರಾ, ಇತ್ತೇನು ಮನ್ಯಾಗೆ ?" ತನ್ನ ವಿವಂಚನೆಯಲ್ಲಿ ಚಿತ್ರಾಳಿಗೆ ತಾನು ಎಂದಿನಂತೆ ಟಾಟಾ ಮಾಡಲಿಲ್ಲ. ಹಿಂಸಿಸಿ ಮುದ್ದು ತೆಗೆದುಕೊಳ್ಳಲಿಲ್ಲವೆಂದು ನೆನಪಾಗಿ ಸುಜಾತಗೆ ಕಳವಳವೆನಿಸಿತು.

ಎಲ್ಲವೂ ಹೀಗೇಕೆ ಆಗುತ್ತಿದೆ, ನೆಲೆ ತಪ್ಪಿದಂತೆ ? ಪಿಸಿದ ಬಟ್ಟೆಯಂತೆ ಕೈ ಹಚ್ಚಿದಲ್ಲೆಲ್ಲ ಹರಿಯುತ್ತಿದೆ. ಮೊದಲೂ ಎಲ್ಲರಲ್ಲೂ ಹೀಗೇ ಇತ್ತೋ ಅಥವಾ ಈಗಲೇ ತಮ್ಮಲ್ಲೇ ಆಗುತ್ತಿದೆಯೋ?

ತಂದೆ--ಎಲ್ಲರಿಗೂ ದಾದಾ---ತಮ್ಮ ವಕೀಲಿ ವ್ಯವಸಾಯದಲ್ಲೇ ಮುಳುಗಿದವರು. ತಾವಾಯಿತು. ತಮ್ಮ ಕೋರ್ಟ್, ಪಕ್ಷಕಾರರಾಯಿತು ಸಂಜೆಗೆ ಹೋದರೆ ಇಸ್ಪೀಟು ಕ್ಲಬ್ ಆಯಿತು. ಮನೆಯಕಡೆಗೆ ಎಂದೂ ಅವರ ಲಕ್ಷವಿಲ್ಲ. ಇಂದೇ ಅಲ್ಲ. ಅವ್ವ ಇದ್ದಾಗಿನಿಂದಲೂ. ಆಕೆಯದು ಖರೆ ರಾಜ ಯೋಗ. ರಾಣಿಯೋಗ ಅನ್ನಿರಿ ಬೇಕಾದರೆ. ಇಂದೂರಿ ಸೀರೆ-ಒಂಬತ್ತು ವಾರದ್ದು-ಉಟ್ಟ ಅವಳ ಚಿತ್ರ ಸುಜಾತಾಳ ಕಣ್ಣ ಮುಂದೆ ತೇಲಿತು ಗೋಟುಪಾಟಲಿ ಬಿಲವರು ವಂಕಿ ಸರಗಿ ಸತ್ತು ಇಲ್ಲದೆ ಆಕೆ ಯಾವ ಮದುವೆಗೂ ಮಂಗಲ ಕಾರ್ಯಕ್ಕೂ ಹೋದವಳೇ ಅಲ್ಲ. ದಿನನಿತ್ಯ ಪಪಾಪೂರಿ ಸೀರೆ ಉಟ್ಟು ಕೈಯಲ್ಲಿ ಪಾಟಲಿ ಬಿಲವರು ಹಾಕಿಕೊಂಡರೆ ಹೋಗುಬರುವ ಪಕ್ಷಕಾರರ ಸುಖ ದುಃಖ ಕೇಳಬೇಕು ಅವರ ತಿಂಡಿ ತಿನಿಸು ಚಹಾ ಊಟ ಎಲ್ಲ ಉಸಾಬರಿ ನೋಡಿಕೊಳ್ಳಬೇಕು ಮನೆಯಲ್ಲಿ ಅಡಿಗೆಯಾಕೆ ಇದ್ದರೂ ಅರ್ಧ ಅಡಿಗೆ ಅವ್ವನದೇ ಮನೆಯವರು ನಾಲ್ಕು ಮಂದಿಯಾದರೆ ಊಟದಪಂಕ್ತಿಗೆ ಹದಿನೈದು ಇಪ್ಪತ್ತು ಎಲೆ ತಪ್ಪಿದ್ದಿಲ್ಲ.

ಮಿರ್ಜಾ ಆಸ್ಪತ್ರೆಯಿಂದ ಟ್ಯಾಕ್ಸಿಯಲ್ಲಿ ಆಕೆಯ ಹೆಣ ತಂದಾಗ ತನಗಿನ್ನೂ ಏನೋ ಎಂಟೋ ವರ್ಷ ವಯಸ್ಸು. ಸುಮತಿಗೆ ಹದಿಮೂರು.

ಅವ್ವ ಹೋದಳು ಮನೆಯ ಕಳೆಯೂ ಹೋಯಿತು. ಅಡಿಗೆಯ ಮುದುಕಿ ಮೊದಲಿನನಾಕೆಯೇ. ಆದರೆ ಯಾರು ಉಂಡರು, ಯಾರು ಬಿಟ್ಟರು ಯಾರಿಗೆ ಚಹ ಯಾರಿಗೆ ಅವಲಕ್ಕಿ ಇದರ ಗೋಜು ಅವಳಿಗೇಕೆ ? ದಾದಾನ ಟೇಬಲಿನ ಮೇಲೆ ತಾನು ಮಸಿ ಬಾಟಲಿ ಉರುಳಿಸಿದಾಗ ಆ ಟೇಬಲ್ ಕ್ಲಾಥ್ ತೆಗೆಯುವವರಿಗೆ ಗತಿ ಇರಲಿಲ್ಲ. ಎಲ್ಲವೂ ಮೂರಾಬಟ್ಟೆ. ಯಾವುದಕ್ಕೆ ಯಾವುದೂ ಸಂಬಂಧವಿಲ್ಲ. ಎಲ್ಲರೂ ತಮ್ಮ ತಮ್ಮಷ್ಟಕ್ಕೆ.


ಅಂದಿಗಷ್ಟೇ ಇಲ್ಲ. ಇಂದಿಗೂ, ಅಡಿಗೆಯ ಸುಬ್ಬವ್ವ ಸತ್ತು ಈಗ ಮನೆಗೆ ಅತ್ತೆ ಬಂದಿದ್ದಾಳೆ ಇಷ್ಟೇ ಅಂತರ. ಎಲೆಯಲ್ಲಿಯ ಅನ್ನ ಮುಗಿದಿತ್ತು. ಸುಜಾತಾಳ ಕೈಬಣಗಿತ್ತು. ಅದರ ಕಡೆಗೂ ಅತ್ತೆಯ ಲಕ್ಷ್ಯವಿರಲಿಲ್ಲ. ಸುಜಾತಾಳ ಮನಸ್ಸು ಇನ್ನಷ್ಟು ಕಹಿಯಾಯಿತು. ಆಕೆ ಎದ್ದಳು. ಇದಕ್ಕೆ ಪರಿಹಾರವಿಲ್ಲವೇ ? ಇದೆಲ್ಲ ಹೀಗೇಕೆ ? ಇದು ತಮ್ಮಲ್ಲಿ ಮಾತ್ರವೋ ಅಥವಾ ಎಲ್ಲರ ಮನೆಗಳಲ್ಲೂ ಹೀಗೆಯೇ ನಡೆಯುತ್ತದೆಯೇ ?


ಸುಮತಿಯ ಲಗ್ನವಾದಾಗ ಮನೆಗೆ ಒಂದು ಹೊಸ ಆಯಾಮ ಬಂದಂತಾಯಿತು. ಗಂಡಸು ಮಕ್ಕಳಿಲ್ಲದ ಮನೆಗೆ ಒಬ್ಬ ಹರೆಯದ ಹಕ್ಕಿನ ಗಂಡಸು ಬಂದಾಗ ಆಷ್ಟೇ ಬೆಚ್ಚಗೆನಿಸಿತು.

ಅನಂತ ತಮ್ಮ ಕೋಣಿ ಬಿಟ್ಟು ಮನೆಯಲ್ಲೇ ಇರತೊಡಗಿದರು. ಅಕ್ಕನಿಗೆ ಬ್ಯಾಂಕು ಹತ್ತಿರ. ಅವರಿಗೇನೋ ಒಸ್ತು ಇದ್ದೇ ಇತ್ತು.

ಅನಂತ ಹಾಗೆ ಎಲ್ಲರೊಡನೆಯೂ ಸಲಿಗೆಯಿಂದ ಇರುವವರು. ಚೇಷ್ಟೆ ಮಾತುಗಳಿಂದ ನಕ್ಕೂ ನಗಿಸುವವರು. ಒಣಗಿದ ಕರಿಕೆಯಂತಾಗಿದ್ದ ಮನೆಗ ಚಿಗುರೊಡೆಯಿತು.

ಆದರೆ ಈ ವಾತಾವರಣ ... ಬೇಕು. ಯಾವ ...





ಹೆಚ್ಚು ದಿವಸ ನಡೆಯಲಾರದು.

ಅನಂತ ತನ್ನೊಡನೆ ಹರಟೆ ಹೊಡೆಯುವರು, ಚೇಷ್ಟೆ ಮಾಡುವದು ಸುಮತಿಗೆ ಕಣ್ಣುಕೀಸರಾಯಿತು ಅದು ತನಗೆ ತಿಳಿದದ್ದು ಬಹಳ ತಡವಾಗಿ ಅಂದರೆ ಆಕೆ ಅವರ ದುಂಬಾಲು ಬಿದ್ದು ಬೇರೆ ಮನೆ ಮಾಡಿದ ಮೇಲೆಯೇ ದೇವರೋ ನಿಸರ್ಗವೋ ತನಗೆ ಒಳ್ಳೆಯ ರೂಪ ಕೊಟ್ಟದ್ದು ತನ್ನ ದೋಷವೇ ?

ಪ್ರಥಮ ದರ್ಜೆಯಲ್ಲಿ ಡಿಗ್ರಿ ಪಡೆದು ಇಷ್ಟು ಒಳ್ಳೆಯ ಕೆಲಸ ದೊರಕಿಸಿದರೂ ಇವಳಿಗೆ ಒಂದಿಷ್ಟು ದೊಡ್ಡ ಮನಸ್ಸು ಬೇಡವೇ ? ಹೀಗಾಗಿ ತಾನೂ ಅವಳ ಮನೆಗೆ ಅಷ್ಟಾಗಿ ಹೋಗುತ್ತಿರಲಿಲ್ಲ—

ಆರ್ ಟಿ ಓ ಸರ್ಕಲ್ ದಾಟಿತು ಕೆರೆಗೆ ಸುತ್ತು ಹಾಕಿ ಮಹಾಂತಿನನಗರ ಕಡೆಗೆ ಅವರು ಸ್ಕೂಟರು ಹೊರಳಿಸಿದಾಗ ಆಕೆ ಆತಂಕವೆನಿಸಿ ಕೇಳಿದಳು.

"ನನ್ನ ಎಲ್ಲಿ ಕರಕೊಂಡು ಹೊಂಟೀರಿ?" ಅವನಿಗೆ ಅವಳ ಸಾನ್ನಿಧ್ಯವೇ ಪೋಜಿನದೆನಿಸಿರಬೇಕು.

"ನಿನ್ನ ಓಡಿಸಿಕೊಂಡು ಹೊರಟೇನಿ" ಅವನು ನಕ್ಕ.

ಎಂದಿಲ್ಲದೆ ಬಹುವಚನದಲ್ಲಿ ಮಾತನಾಡತೊಡಗಿದವನು ಈಗ ಮನಸ್ಸು ಬಿಚ್ಚಿ ನಕ್ಕಾಗ ಅವಳಿಗೂ ನಗು ಬಂತು.

"ನಮ್ಮಪ್ಪನ ಒಂದು ಕಾಳಜಿ ತಪ್ಪಿತು" ಆಕೆಯೆಂದಳು.

"ಅವರೆಂದು ಕಾಳಜಿ ಮಾಡಿದ್ದರು ?"

ಇಬ್ಬರೂ ಮತ್ತೆ ನಕ್ಕರು-

ಸುಜಾತಾಗೆ ಮುನ್ನಾ ದಿನ ತಾನು ಇಂಡಸ್ಟ್ರಿಯಲ್ ಎಸ್ಟೇಟಗೆ ಹೋದದೂ ನೆನಪಾಯಿತು.

ಮನೆಗೆ ಏಕೆ ಹೋಗಿಲ್ಲ ? ಅಕ್ಕನನ್ನು ಹೀಗೇಕೆ ಹಿಂಸಿಸುತ್ತೀರಿ?" ಎಂದೆಲ್ಲ ಆಕೆಗೆ ಕೇಳಬೇಕಾಗಿತ್ತು. "ನಿನ್ನ ದೇನು ಸಂಬಂಧ ?" ಎಂದು ಅವನು ಅಪಮಾನ ಮಾಡಿದರೂ ಆಗಲಿ ಎಂದು ಆಕೆ ಮನಸ್ಸು ಗಟ್ಟಿಮಾಡಿಯೇ ಹೋಗಿದ್ದಳು.

ಆದರೆ ಹಾಗೇನೂ ಆಗಿರಲಿಲ್ಲ. ಇವಳು ಶೆಡ್ಡಿನಲ್ಲಿ ಹೋದಾಗ ಫೈಲಿನಲ್ಲಿ ತಲೆ ಹಾಕಿದವನು ಬಿರುಸಾಗಿ 'ಕೂಡ್ರಿ' ಎಂದಿಷ್ಟೇ ಅಂದಿದ್ದ. ಮತ್ತೆ ತನ್ನ ಬರವಣಿಗೆ ನಕ್ಷೆ ಲೆಕ್ಕ ಮುಂದುವರಿಸಿದ. ಐದು ನಿಮಿಷ ಹತ್ತು ನಿಮಿಷ ಆಕೆ ಅತ್ತಿತ್ತ ನೋಡಿದಳು. ಮಗು ಹೊಸ ಆಟಿಗೆ ನೋಡುವ ಹಾಗೆ. ಲೇಥ್, ಡ್ರಿಲ್ಲಿಂಗ್ ಮಶೀನು, ಶೇಪಿಂಗ್ ಮಶೀನು ಅದರ ಸಿಡಿಸಿಡಿ ಗುರುಗುರು ಸದ್ದು. ಮಾಸಲು ಅರಿವೆಯ ಕೆಲಸದ ಹುಡುಗರು. 'ನಡೀರಿ' ಅವನು ಎದ್ದಿದ್ದು, ಎಲ್ಲಿ ಎಂತು ಹೇಳದೇ, ಹತ್ತಿರದ ಹಾಟೇಲಿಗೆ ಹೋದಾಗ ಆತ ಹೆಚ್ಚು ಮಾತಾಡಿರಲಿಲ್ಲ. ತಾನು ಮಾತು ಹೇಗೆ ಆರಂಭಿಸಬೇಕೆಂದೂ ಆಕೆಗೆ ಹೊಳೆಯಲಿಲ್ಲ.

"ಸಂಜೆಗೆ ಐದು ಗಂಟೆಗೆ ಹಾಟೆಲ್ ಕ್ರೀವ್ ಪ್ಲಾನರ್‌ನಲ್ಲಿ ಕಾಣೋಣ" ಎಂದಿಷ್ಟೇ ಹೇಳಿ ಅವನು ಎದ್ದ ತನ್ನದಾದರೂ ಇನ್ನು ಏನು ಕೆಲಸ ?....

ಅನಂತ ಸ್ಕೂಟರು ನಿಲ್ಲಿಸಿದಾಗ ಇದು ಮಾಳ ಮಾರುತಿಯ ಗುಡಿ. ತಾನು ಎಷ್ಟೋ ವರ್ಷ ಇತ್ತ ಬಂದಿರಲೇ ಇಲ್ಲವೆಂಬುದು ಸುಜಾತಾಗೆ ನೆನಪಾಯಿತು.

ದೀಪ ಹತ್ತಿದ್ದವು. ಆದರೆ ಪೂಜಾರಿ ಕಾಣಲಿಲ್ಲ. ಹೊರಗೆ ಅರಳಿಯ ಕಟ್ಟೆಗೆ ಕೂಡ್ರಬಹುದಿತ್ತು. ಆದರೆ ಅದು ಹಸಿಯಾಗಿತ್ತು. ತುಂತುರು ಮಳೆ ಹನಿಯತೊಡಗಿತು.

ಆಕೆ ಮುಂದಾಗಿ ಗಂಟೆ ಬಾರಿಸಿ ದೇವರಿಗೆ ಕೈಮುಗಿದಳು. ಅವನೂ ಕೈಜೋಡಿಸಿದ.

ಒಣ ಜಾಗ ನೋಡಿ ಇಬ್ಬರೂ ಕುಳಿತರು.

"ನೀವು ಮನೇಗೇ ಹೋಗಿಲ್ಲಂತ ?" ಆಕೆ ನೇರವಾಗಿ ವಿಷಯಕ್ಕೆ ಕೈಹಾಕಿದಳು ತುಂಬ ಗಂಭೀರಳಾಗಿ

"ಯಾರ ಮನೀಗೆ ?" ಅವನ ದನಿಯಲ್ಲಿ ಕಹಿ ತುಂಬಿತ್ತು. ಕಣ್ಣಲ್ಲಿ ನೋವು ಕಾಣಿಸಿತು. ಆಕೆ ನೆಲದ ಕಡೆಗೆ ನೋಡುತ್ತ ಒಮ್ಮೆಲೆ ನೆತ್ತಗಾದಳು "ಹಿಂಗ್ಯಾಕ ಮಾಡತೀರಿ ? ನಿಮಗ ಮನೇ ಇಲ್ಲೇನು ? ಹೆಂಡತಿ ಮಗಳು ಇಲ್ಲೇನು ?

"ಹೆಂಡತಿ ಮಗಳು ಇದ್ದಾರ. ಮನೇ ಇಲ್ಲ. ಅದನ್ನೇ ಹುಡುಕಲಿಕ್ಕೆ ಸತ್ತೇನಿ."

ತುಸು ಹೊತ್ತು ಮೌನ.

ನೀವು ಇಬ್ಬರೂ ಕೂಡಿಯೇ ಯಾಕೆ ಹುಡುಕಬಾರದು ?"

ಆದರ ಇಬ್ಬರೂ ಕೂಡಬೇಕಲ್ಲ ?

ಅವನ ಅಡ್ಡಮಾತು, ಇದಕ್ಕೆ ಏನು ಹೇಳಬೇಕು ?

ಆಕೆಗೆ ಏನೋ ನೆನಪಾಯಿತು.

"ನೀವು ಆ ಪತ್ರದ ಝುರಾಕ್ಸ್ ಪ್ರತಿ ಯಾಕ ಕೊಟ್ಟೀರಿ ? ಮೂಲ ಪತ್ರ ಯಾಕ ತೋರಿಸಲಿಲ್ಲ. ?

ಅವನ ಉತ್ತರ ಅಷ್ಟೇ ಒರಟಾಗಿತ್ತು.

"ನೀವು ನ್ಯಾಯಾಧೀಶರೋ, ಪ್ರತಿವಾದಿ ವಕೀಲರೋ ತಿಳೀಲಿಲ್ಲ" ವಾತಾವರಣ ಬಿಸಿಯಾಯಿತು ಆಕೆ ಬೇಕೆಂದೇ ನಕ್ಕಳು. "ನಂದು ಲಾ ಇನ್ನೂ ಮುಗಿದಿಲ್ಲ. ಕಡೀ ವರ್ಷ, ಇದು ಮೊದಲನೆ ಮಾತು. ಎರಡನೇದ್ದು. ಮುಂಚೆ ನೀವು ನನಗೆಂದೂ ಬಹುವಚನದಾಗ ಮಾತಾಡಿಸಿಲ್ಲ, ಪ್ಲೀಜ್. ಸುಮತಿ ಸಂಗತಿ ಸಿಟ್ಟಲೇ ಮಾತಾಡುವಾಗ ನೀವು ಬಹುವಚನ ಉಪಯೋಗಸತೀರಂತ ನನಗ ಗೊತ್ತು. ಅದಕ್ಕ ನೀವು ಬಹುವಚನದಾಗ ಮಾತಾಡಿದರ ನನಗ ಅಂಜಿಕೀನs ಬರತದ."

> 'ಹಿಂಗ್ಯಾಕೆ ಮಾಡ್ತೀರಿ? ನಿಮಗ ಮನೆ ಇಲ್ಲೇನು? ಹೆಂಡತಿಮಗಳು ಇಲ್ಲೇನು?'

‘ಗಂಡಸು ಮದುವೆ ಏಕೆ ಮಾಡಿಕೊಳ್ಳುತ್ತಾನೆ? ಚಹ, ತಿಂಡಿ, ಊಟಕ್ಕೆ ಹೋಟೆಲ್ ಇವೆ. ಕಸ, ಮೇಲುಗೆಲಸಕ್ಕೆ ಆಳು ಸಿಕ್ಕುತ್ತಾರೆ.....’

ಪ್ರತಿಯಾಗಿ ಅವನು ಮಾತನಾಡಲಿಲ್ಲ.

“ನೀವು ಸೀರಿಯಸ್ಸಾಗಿ ಹೇಳರಿ. ನನ ಗಂತ ಹೇಳರಿ” ಆಕೆ ಮುಂದುವರಿಸಿದಳು. “ನೀವು ಮನೀಗ ಯಾಕ ಹೋಗಿಲ್ಲ?”

ಅವನು ತಡೆದು ಕೇಳಿದ. “ಇದಕ್ಕ ಉತ್ತರಾ ಹೇಳಲಿಕ್ಕೇ ಬೇಕs?” ಆಕೆ ಕಾದಳು.

“ನಿಮ್ಮ ಅಕ್ಕನ ಪಾರೀ ನೋಡೇಬೇಕಂತ ಅನಸೂದಿಲ್ಲ.”

ಸುಜಾತಾ ಇದಕ್ಕೂ ಉತ್ತರಿಸಲಿಲ್ಲ.

“ಮತ್ತೇನು ಕೇಳಬೇಕಾಗಿತ್ತು?”

“ಇಷ್ಟು ಯಾಕ ಕ್ರೂರ ಆದರಿ?”

“ಗಂಡ, ಗಂಡಸರು ಇವರೆಲ್ಲ ಕ್ರೂರರು ನೋಡಿರಿ. ಹೆಂಗಸು ಪಾಪ ಮೂರ್ತಿ ಮಂತ ಕರುಣಾಮಯಿ; ಪ್ರೇಮಮಯಿ.”

“ಅನಂತರಾವ್, ಒಂದು ಮಾತು. ನಾನು ಅಕ್ಕನ ಸಲುವಾಗಿ ವಕೀಲಿ ರದ ಬದಲೀ ನಡಸಲಿಕ್ಕೆ ಬಂದಿಲ್ಲ. ಆದರ ಏನೋ ಅನಸ್ತsದ. ನೀವಿಬ್ಬರೂ ಒಂದೇಕಡೆ ಇದ್ದರ ಛಲೋ. ಎಲ್ಲಾರ ದೃಷ್ಟಿಯಿಂದ.”

“ಇದ್ದು ಏನು ಮಾಡೋದು?”

ಅದೂ ಖರೆ.

“ಇಷ್ಟು ಯಾಕ ಮನಸ್ಸು ಕಲ್ಲು ಮಾಡೀರಿ? ಮೊದಲು ಹೀಂಗ ಇದ್ದಿದ್ದಿಲ್ಲ.”

“ಕಲ್ಲಿನ ಸಂಗತೀ ಸಂಸಾರ.”

“ಅಕ್ಕ ಇಷ್ಟು ಕಲ್ಲು ಆಗ್ಯಾಳ?”

ಅವನು ಉತ್ತರಿಸಲಿಲ್ಲ. ಉಸಿರು ಹಾಕಿದ.

“ನಿಮಗೆ ಏನು ಅಂತ ಹೇಳಲಿ? ಎಷ್ಟೂಂತ ಹೇಳಲಿ?” ಮುಂದೆ ಅವನು ಕನ್ನಡದಲ್ಲಿ ಸಂಕೋಚವೆನಿಸುತ್ತದೆಯೆಂದೋ ಏನೋ ಇಂಗ್ಲೀಷು ಆಶ್ರಯಿಸಿದ.

“ಗಂಡಸು ಮದುವೆ ಏಕೆ ಮಾಡಿಕೊಳ್ಳುತ್ತಾನೆ? ಚಹ ತಿಂಡಿ ಊಟಕ್ಕೆ ಹಾಟೆಲ್ಸ್ ಇದೆ. ಕಸ ಮೇಲುಗೆಲಸಕ್ಕೆ ಆಳು ಸಿಕ್ಕುತ್ತಾರೆ.” ಅವನು ತಡೆದ ಆಕೆ ಅವನ ಕಣ್ಣುಗಳಲ್ಲಿ ನೋಡಲೆತ್ನಿಸಿದಳು, ಮೌನವಾಗಿ.

“ನೀನೂ ಬೆಳೆದ ಹುಡುಗಿ, ಎಲ್ಲ ತಿಳಿಯುತ್ತದೆ. ಜಾಣೆ ಇದ್ದೀ” ಮತ್ತಿಷ್ಟು ತಡೆದು ಅವನು ಕನ್ನಡದಲ್ಲೇ ಕೇಳಿದ “ಪತ್ರಾ ಓದಿದಿ ಏನನಿಸಿತು?”

“ಒಂದಿಷ್ಟು ತಿಳಿವಳಿಕೆ ಬೇಕಿತ್ತೆನ್ನಿಸಿತು.”

“ಯಾರದು? ಯಾರದು ತಿಳಿವಳಿಕೆ? ವಿಚಾರ ಮಾಡಾವರದು? ಏನು. ಅವಿಚಾರಿಗಳದ್ದೋ?

ಅವನ ಮಾತಿನೊಡನೆ ದನಿ ಏರಿದ್ದು ಅವನಿಗೇ ಹೊಳೆದು ಒಮ್ಮೆಲೆ ದನಿ ಇಳಿಸಿದ.

“ನನಗ ಗೊತ್ತsದ, ರಾತ್ರಿ-ರಾತ್ರಿ ನಾ ಮುಸುಕಿನ್ಯಾಗ ಒಬ್ಬನs ಅತ್ತೇನಿ?”

“ಯಾಕ?”

“ನನಗs ಗೊತ್ತಿಲ್ಲ. ಆದರ ನನ್ನ ಯಾರದೇ ಮಗ್ಗಲದಾಗ ತೂಗೋಬೇಕು. ಪ್ರೀತಾವು ಕೊಡಬೇಕು. ನನ್ನ ಜೀಂವ ನನಗs ಬೆಚ್ಚಗ ಅನಿಸಬೇಕು ಅಂತೂ ಅನಸತಿರಬೇಕು. ಆದರ ಒಬ್ಬಂಟಿಗತನ ಮಾತ್ರ ತಪ್ಪಲಿಲ್ಲ. ನಿಮ್ಮ ಅಕ್ಕ ಮನಸಿಲ್ಲದ ಮನಸಲೆ ಬಿಟ್ಟೇನೂಳೀಗತೆ ನ್ನೈ ಒಪ್ಪಿಸಿದಾಗ ಸೈತ.”

ಸುಜಾತಾ ಬೆಚ್ಚಿದಳು. ಅವನು ಇದೇನು ಹೇಳುತ್ತಿದ್ದಾನೆ?

“ಆಕಿ ಯಾಕ ಇಷ್ಟು ಅಲಿಪ್ತ ಆಗಿದ್ದಾಳು? ಹೊರಗ ಏನಾರs ಪ್ರಕರಣ?”

ಅವನು ನಕ್ಕ. ಉತ್ತರಿಸಲಿಲ್ಲ.

“ಅಥವಾ ನಿಮ್ಮದು ಏನಾದರೂ ಪ್ರಕರಣ? ಅಥವಾ ಆಕೀ ಸಂಶಯ?”

“ಯಾರಿಗ್ಗೊತ್ತು? ಅಂಥಾ ಪ್ರಕರಣ ಖರೇನs ಇದ್ದರ ಮಾತ್ರ ನನಗಾದರೂ ಸುಖ ಇರತಿತ್ತು.” ಅವನು ಮತ್ತೆ ನಕ್ಕ ಒಣದಾಗಿ.

“ನಿಮ್ಮ ಪತ್ರಗಳನ್ನ ನೆನಪು ಮಾಡಿಕೊಂಡರ ನೀವು ನೌಕರಿ ಬಿಟ್ಟದ್ದs ಆಕೀಗೆ ಆಘಾತ ಆಗಿರಬೇಕು.”

“ಯಾಕ ಆಗಬೇಕು?”

“ಅಂದರ ಹಿಂಗ. ಮದುವಿ ಮಾಡಕೊಳ್ಳೂ ಪುರಲೆ ನಿಮಗ ನೌಕರಿ ಇತ್ತು. ಸಂಸಾರದ ಖರ್ಚಿನ ಜಬಾಬದಾರಿ ಮುಂದೆ ಆಕಿ ಕೊಳ್ಳಾಗ ಕಟ್ಟಿ ನೀವು ಜಾರಿಕೊಂಡಿರಿ ಅದೂ ಹೇಳದs ಕೇಳದs ಅಂತ ಆಕೀಗೆ ಅನಿಸಿರಬೇಕು.”

“ನಿಮ್ಮ ಅಪ್ಪ ಆಕೀಗೆ ಮೊದಲು ಹೇಳಲಿಲ್ಲ ಅದು ನನ್ನ ತಪ್ಪಲ್ಲ. ಒಂದು ಎರಡನೇದ್ದಾದರ ನಾಯೇನು ಮನ್ಯಾಗ ಖಾಲೀ ಕೂತಿಲ್ಲ. ಮೊದಲು ಎಷ್ಟು ಪಗಾರ ಬರತಿತ್ತು ಅಷ್ಟು ಪ್ರಾಪ್ತಿ ನಿಶ್ಚಿತ ಅದs ಇವತ್ತು.”

“ಪ್ರಾಪ್ತಿ ಅದs ಅಂದ್ರ ಪಗಾರಧಾಂಗ ನಿಶ್ಚಿತ ಇಲ್ಲ. ತಲೀಗೆ ತಾಪ ಹಿಂಗೇನೋ ಅನಿಸಿರಬೇಕು ಆಕೀಗೆ.”

“ಏನೋ ಏನೋ!” ಅವನು ಮುಂದೆ ಮಾತಾಡಲಿಲ್ಲ. ಆಕೆ ಗಡಿಯಾರ ನೋಡಿಕೊಂಡಳು ಯಾಂತ್ರಿಕವಾಗಿ. ಅವನು ಎದ್ದು ಸ್ಕೂಟರ್ ಸ್ಟಾರ್ಟ್ ಮಾಡಿದ.

ಂ ಂ ಂ ಂ

“ಎಲ್ಲಾ ನೆನಿಸಿದರ ಹೊಟ್ಟ್ಯಾಗ ಖಾರಾ ಹಾಕಿ ಕಲಸಿಧಾಂಗ ಆಗತsದ” ಅನಂತ ಅಂದ. ಈ ಭೋಗ ನನ್ನ ಪಾಲಿಗೇ ಯಾಕ?”

ಸುಜಾತಾ ಮಾತಾಡಲಿಲ್ಲ. ಬದಲಾಗಿ ಹೊರಗೆ ಬೀಳುತ್ತಿದ್ದ ಮಳೆ ನಿಟ್ಟಿಸಿದಳು.

ಕೊನೆಯ ಕ್ಲಾಸು ಮುಗಿಯುತ್ತಿದ್ದಂತೆ ಕಾಲೇಜ್ ಆಫೀಸಿನಿಂದ ಕರೆ ಬಂದಿತ್ತು. “ನಿಮಗೆ ಯಾರದೋ ಫೋನ್ ಬಂದಿತ್ತು. ಈ ನಂಬರಿಗೆ ಫೋನ್ ಮಾಡಲಿಕ್ಕೆ ಹೇಳ್ಯಾರ.” ಒಂದು ಚೀಟಿ ಕೊಟ್ಟ ಕ್ಲಾರ್ಕ್. ಆ ನಂಬರು ಆಕೆಗೆ ಗೊತ್ತು.



ಪೋಸ್ಟ್ ಆಫೀಸಿಗೆ ಹೋಗಿ ಫೋನ್ ಮಾಡಿದಾಗ ಅನಂತನೇ ಫೋನ್ ತೆಗೆದು ಕೊಂಡ.

"ಏನು ಫೋನ್ ಮಾಡಿದ್ದಿರಿ?"

"ಏನಿಲ್ಲ. ಸಹಜ ಮಾಡಿದ್ದೆ."

ಸಹಜ ಮಾಡಿದ್ದರೆ ನಂಬರು ಏಕೆ ಕೊಟ್ಟಿಡಬೇಕು?"

"ಏನೋ ಕೆಲಸ ಇರಬೇಕು ಅನ್ನಿಸಿತು" ಆಕೆಯೆಂದಳು.

"ಏನಿಲ್ಲ. ಮೊನ್ನೆ ಸ್ಕೂಟರಿನಿಂದ ಹೋಗುವಾಗ ಪೂರಾ ತೊಯ್ದುಕೊಂಡು ಹೋದರಿ. ಪ್ರಕೃತಿ ಹ್ಯಾಂಗ ಅದ ಅಂತ ಕೇಳಬೇಕೂ ಅಂತ" ನಿನ್ನೆ ನೀವು ಕಾಲೇಜಕ್ಕ ಬಂದಿದ್ದಿಲ್ಲಂತ ಬ್ಯಾರೆ."

ಅದು ಅವನಿಗೆ ಹೇಗೆ ತಿಳಿಯಿತು? ಫೋನ್ ಮಾಡಿ ಕೇಳಿರಬೇಕು ಇನ್ನೇನು? ಮಾಳಮಾರುತಿಯಿಂದ ಅಂದು. ಬರುವಾಗ ಜೋರು ಮಳೆ. ಕೆರೆಯ ಹತ್ತಿರ ಗಾಳಿ ಬೇರೆ. ಒಂದು ಛತ್ರಿ ಏನು ಈಡಾಗ ಬೇಕು? ಇಬ್ಬರಿಗೂ ಸಚೇಲ ಸ್ನಾನ. ಮನೆಯ ಹತ್ತಿರ ಬಿಡುವಾಗ ಅನಂತ ಅಂದ "ನಿಮ್ಮನ್ನ ಕೆಟ್ಟ ಮಳ್ಯಾಗ ತಂದ್ಹಾಂಗ ಆತು"

"ಥ್ಯಾಂಕ್ಸ್." ಎಂದಷ್ಟೇ ಹೇಳಿ ಆಕೆ ಮನೆಯೊಳಗೆ ಓಡಿದ್ದಳು, ಬಟ್ಟೆ ಬದಲಾಯಿಸಲು, ಒಣ ಸೀರೆ ಉಟ್ಟು ಗುಳಿಗೆ ನುಂಗಿ ತಲೆ ಕಾಯಿಸಿಕೊಂಡರೂ ನೆಗಡಿ ತಲೆನೋವು ಬಿಡಲಿಲ್ಲ. ಮೈಯಲ್ಲಿ ಜ್ವರವೂ ಇತ್ತು, ಎರಡು ದಿನ,

"ಈವತ್ತು ಅಡ್ಡಿಯಿಲ್ಲ" ಆಕೆ ಹೇಳಿದಳು.

"ಈ ಹೊತ್ತು ಹವಾನೂ ಛಲೋ ಅದಾ."

"ಆದರ ಛಾಳಂದರ ಛಾಳ ಬ್ಯಾಸರ ಬಂದsದ."

"ಸ್ಸಾರಿ ನನ್ನಿಂದ ನಿಮಗ ಎಷ್ಟು ತ್ರಾಸು ಆತು?"

"ಪ್ಛ! ಅದಲ್ಲರೀ- ಒಟ್ಟ ಏನು ಮಾಡಬೇಕೆಂದರೂ ಮೂಡ್ ಬರವಲ್ತು."

"ಒಂದು ಸಿನೇಮಾದ ಪ್ರೊಗ್ರಾಮು ಹಾಕಿದರ ಆತು."

"ನೀವು ತೋರಸ್ತೀನಿ ಅಂದರ" ಆಕೆ ಚೇಷ್ಟೆಗಾಗಿ ಹೇಳಿದ್ದಳು, ಗೆಳತಿಯರೊಡನೆ ಹೇಳುವಂತೆ.

"ಅದಕ್ಕೇನು? ಮಧ್ಯಾಹ್ನ ಮೂರು ಗಂಟೆಕ್ಕ ರಿಕ್ಸ್ ಹತ್ತಿರ ಬಂದಿರಿ, ನಾ ಬರ್ತೀನಿ."

ಛೇ, ಇದೇನು ಎಂದು ತಾನು ಹೇಳುವದರೊಳಗಾಗಿ ಆತ ಫೋನ್ ಇಟ್ಟುಬಿಟ್ಟಿದ್ದ.

ಆ ಸಿನೇಮಾ ತಾನು ನೋಡಿರಲಿಲ್ಲ ಸಿನೇಮಾ ಮುಗಿದೊಡನೆ ಸನ್ಮಾನದಲ್ಲಿ ತುಪ್ಪದ ದೋಸೆ ತಿಂದು ಇಬ್ಬರೂ ಹೊರಬಿದ್ದರು. ಮಳೆಯಿರಲಿಲ್ಲ.

ಹಿಂಡಲಗಿಯ ಗಣಪತಿಯ ಗುಡಿಗೆ ಬರುವಷ್ಟರಲ್ಲಿ ಮೋಡ ಕವಿದುಕೊಂಡು ಬಂತು.

"ಇನ್ನು ಇಲ್ಲೇ ಕೂಡ್ರೋಣ" ಎಂದಳು ಆಕೆ.

"ಬ್ಯಾಸರ ಆಗೇದ ಅಂದಿದ್ದರಿ, ಈಗಾರೇ ಬ್ಯಾಸರ ಹೋತಿಲ್ಲೋ?" ಆತ ಸ್ಕೂಟರ್ ಸ್ಟಾಂಡಿಗೆ ಹಚ್ಚುತ್ತಿದ್ದಂತೆ ಕೇಳಿದ. ಆಕೆ ಮಾತಾಡಲಿಲ್ಲ. ಇಬ್ಬರೂ ಒಳಗೆ ಕುಳಿತರು.

ವಿಷಯ ಬದಲಾಯಿಸಲು ತಾನಾಗಿ ಕೇಳಿದಳು. "ಸಿನೇಮಾ ಹ್ಯಾಂಗನಿಸಿತು?" ಗಾಳಿಬೀಸಿ ಹೊರಗೆ ಮಳೆ ಬೀಳತೊಡಗಿತು.

"ನಾ ಸಿನಿಮಾ ನೋಡಲಿಕ್ಕೆ ಹೋಗೂದಿಲ್ಲ. ಸಿನೇಮಾ ನೋಡಲಿಕ್ಕೆ ಬರಾವರನ್ನ ನೋಡಲಿಕ್ಕೆ ಹೋಗತೀನಿ" ಅವನು ಅರ್ಧ ಚೇಷ್ಟೆಯಿಂದ ಅರ್ಧಗಂಭೀರನಾಗಿ ಹೇಳಿದ. "ಅದರಾಗ ಬೆಳಗಾವಿ ಮಂದೀಗೆ ಸಿನೇಮಾದ ಹುಚ್ಚು ಹೆಚ್ಚು. ಸಿನೇಮಾ ಎಂಥಾದ್ದು ಯಾಕ್ ಇರವಲ್ತು. ಎಷ್ಟು ಆನಂದ, ಎಷ್ಟು ಹುರುಪು ಇರ್ತsದ ಅವರ ಮಾರೀಮ್ಯಾಲೆ!"

"ಪಡದೇದ ಮ್ಯಾಲಿನ ಜಗತ್ತು ಹ್ಯಾಂಗ ಬ್ಯಾರೇ ಇರ್ತsದ, ಹಾಂಗ ನೋಡಲಿಕ್ಕೆ ಬಂದವರ ಜಗತ್ತೂ ಬ್ಯಾರೇನೇ ಅಂತೀರೇನು?"

ಆಕೆ ಹಾಗೆ ಎಂದೂ ಯೋಚಿಸಿದವಳಲ್ಲ. ಈಗ ಅದು ಸೈಯನ್ನಿಸಿತು.

ಆತ ಒಮ್ಮೆಲೆ ಗಂಭೀರನಾಗಿ ತನ್ನ ಸಂಕಟ ತೋಡಿಕೊಂಡ.

ಮಳೆಯನ್ನು ನಿಟ್ಟಿಸುತ್ತಿದ್ದಾಕೆ ಅವನ ಕಡೆಗೆ ಮೋರೆ ತಿರುವಿ ಕೇಳಿದಳು, ಯಾವಾಗಲಾದರೂ ಕೇಳಲೇಬೇಕಾಗಿತ್ತು.

"ನೀವು ಹಿಂಗ ಅಕ್ಕನ್ನ ಸಿನೇಮಾಕ್ಕೆ ಕರಕೊಂಡು ಹೋಗ್ತಿದ್ದೀರೇನು?"

ಆತ ಉಸಿರು ಹಾಕಿದ.

"ಮದಿವಿ ಆದ ಹೊಸದಾಗಿ"

"ಮುಂದs?"


"ಮುಂದೆ ಆಕೀ ಬ್ಯಾಸರ. ಸಿನೇಮಾ ನೋಡಿ ಕಣ್ಣು ನೋಯುತಾವ, ತಲೀ ನೋಯುತದಂತ ಚಷ್ಮಾ ಬಂತು, ಆದರ ಸಿನೇಮಾ ನಿಂತಿತು.

ಸಿನೇಮಾ ನೋಡಿದ ದಿವಸ ಆಕೀಗೆ ರಾತ್ರಿ ನಿದ್ದಿ ಹತ್ತತಿರಲಿಲ್ಲ ಅಂತ.

"ಅಂದರ?"

"ಅಂದರ ನನಗೂ ಅರ್ಥ ಆಗಲಿಲ್ಲ. ಸಿನೇಮಾ ನೋಡಿದ ದಿವಸ ಅಷ್ಟs ಅಲ್ಲ. ನೀನೂ ಕಲೀತಾಕಿ ಇದ್ದೀ. ನನಗೂ

> " ನಾನು ಸಿನಿಮಾ ನೋಡಲಿಕ್ಕೆ ಹೋಗೋದಿಲ್ಲ. ಸಿನಿಮಾ ನೋಡಲು ಬರುವವರನ್ನು ನೋಡಲಿಕ್ಕೆ ಹೋಗ್ತೀನಿ.... "



ಎನ್ನಳು. ಮನೆ ತಲುಪುವವರೆಗೆ ಯಾರೂ ಮಾತಾಡಲಿಲ್ಲ.

"ನಿನ್ನೆ ಸಂಜೇನ್ಯಾಗ ಸಿನೇಮಾಕ್ಕ ಹೋಗಿದ್ದಿರೇನು ?" ಬ್ಯಾಂಕಿನಲ್ಲಿ ಯಾಮಿನಿ ಕೇಳಿದಾಗ ಸುಮತಿಗೆ ಗೊಂದಲ ಕ್ಕಿಟ್ಟುಕೊಂಡಿತು.

"ಸಿನಿಮಾಕ್ಕ ? ಇಲ್ಲಲ್ಲ ?"

"ಏನು ಹೇಳ್ತೀರಿ?" ಆಕೆ ನಕ್ಕಳು. "ನಿಮ್ಮ ಮಿಸ್ಟರ್ ಸ್ಕೂಟರ್ ಒಂದೆ ಕೂತಕೊಂಡು ನೀವು ಬರೋದನ್ನ ನಾವು ನೋಡಿದೆವು. ಕಾಲೇಜು ರೋಡಮ್ಯಾಲೆ ಗದ್ದಲ ಇತ್ತು. ಆದರ ನಮ್ಮ ಯಜಮಾನರು ಹಲೋ ಸೈತ ಅಂದರು."

ಏನೋ ತಪ್ಪು ತಿಳಿವಳಿಕೆ ಸುಮತಿಗೆ ನಗು ಬಂತು. ಗಂಡ ಮನೆಬಿಟ್ಟು ಹೋಗಿದ್ದಾರಂತಲ್ಲ, ಎಂದು ಕೇಳುವ ಬದಲು ಇದು ಒಳ್ಳೆಯದೇ.

ಏಕೆ ಬರಿ ಗೋಣು ಅಲ್ಲಾಡಿಸಿದಳು. ಆಹುದಾದರೆ ಅಹುದು ಇಲ್ಲ ವಾದರೆ ಇಲ್ಲ !

ಮಧ್ಯಾಹ್ನ ನಾಲ್ಕು ಗಂಟೆಯು ಚಹದ ಹೊತ್ತಿಗೆ ರೂಪಾ ಕೇಳಿದಳು. "ಸಿನೇಮಾ ಹ್ಯಾಂಗನಿಸಿತು ?"

"ನೀವೆಲ್ಲಿ ನೋಡಿದಿರಿ ?" ಎಂದು ಕೇಳ ಬೇಕಾಗಿತ್ತು ಆದರೆ ಬೇಕೆಂದೇ ಸುಮತಿ "ನಾನು ನಿಮ್ಮನ್ನ ನೋಡಲೇ ಇಲ್ಲ" ಎಂದಳು.

"ನಾವು ನಿಮ್ಮ ಹಿಂದ ನಾಲ್ಕು ಸಾಲು ಬಿಟ್ಟು ಕೂತಿದ್ವಿ. ನಿಮ್ಮ ಯಜಮಾನರು ಹಿಂತಿರುಗಿ ಒಮ್ಮೆ ನೋಡಿದರು. ನೀವು ಮಾತ್ರ ತಿರುಗಿ ನೋಡಲಿಲ್ಲ."

ಸುಮತಿಯ ತಲೆ ಗಿರ್ರೆಂದಿತು. ಬ್ಯಾಂಕು ಬಿಟ್ಟಾಗ ಆಕೆಯ ವಿಚಾರ ಶಕ್ತಿ ಜಡ ನೀಸಿನಂತಾಗಿತ್ತು. ಬಸ್ಸಿನಿಂದ ಇಳಿದು ದಿನದ ದಾರಿಯಿಂದ ಬರುವಾಗ ಅಬಚಿಯು ಮನೆ ಕಾಣಿಸಿದಾಗಲೇ ಚಿತ್ರಾಳ ನೆನಪಾದದ್ದು. ಗ್ಯಾಸ್ ಮೇಲೆ ಹಾಲು ಕಾಯಿಸಲಿಕ್ಕೆ ಇಡುವಾಗ ಧಕ್ಕೆ ಹತ್ತಿ ಪಾತೇಲಿ ಬುಡಮೇಲಾಯಿತು. ಹಾಲು ಚೆಲ್ಲಿದ ದುಃಖಕ್ಕಿಂತ ನೆಲ ಒರೆಸುವ ಸಂಕಟವೇ ಹೆಚ್ಚಿನದಾಯಿತು. ನಡುವೆ ಒಂದ ಚಿತ್ರಾಳ ಜಿನ್ನು ಕಾಸಿಯೂ ಆಯಿತು

ಹರಿಯುವ ಹರುಪು ಅನ್ನು. ಅಂಥಾ ರಾತ್ರಿಗೂ ಆಕೀಗೆ ನಿದ್ದಿ ಹತ್ತಲಿಕ್ಕಿಲ್ಲ ಎಷ್ಟೋ ಗೊತ್ತು" ಇಷ್ಟು ಸ್ಪಷ್ಟ ಹೇಳ ಬಾರದಿತ್ತೆಂದೆನಿಸಿ ಆವನು ಬೇರೆ ಕಡೆಗೆ ನೋಡತೊಡಗಿದ.

ಆಕೆಗೆ ಸೊಂಟ ಬೆಚ್ಚಗಾದಂತೆನ್ನಿಸಿತು. ಎದೆ ಡವಡವಿಸಿತು. ಮೋರೆ ಕೆಂಪಾಯಿತು.

ತನ್ನ ಮಾತಿನ ಪರಿಣಾಮ ಆಳೆಸುವದಕ್ಕಾಗಿ ಆವನು ಜೋರು ಜೋರಾಗಿ ಹೇಳತೊಡಗಿದ. "ನಾವು ಯಾವದಕ್ಕ ರಿಲಾಕ್ಸೇಶನ್ ಅಂತೀವಲ್ಲ; ಅದು ರಿಲಾಕ್ಸೇಶನ್ ಅಲ್ಲs ಆಕೀಗೆ." ನಿನಗ ಹೇಳಿದೆನಲ್ಲ, ರೇಡಿಯೋದ ಮ್ಯಾಲೆ ನಾ ವಿವಿಧ ಭಾರತಿ ಕೇಳಕಿದ್ದರ ಆಕಿ ಬಂದು ಸುದ್ದಿ ಹಚ್ಚಬೇಕು. ಅಥವಾ ಟುಡೇ ಇನ್ ಪಾರ್ಲಿಮೆಂಟ್. ಸಿನೇಮಾ ಬ್ಯಾಡ. ತಿರಿಗಾಡೋದು ಬ್ಯಾಡ. ನನಗನಸ್ತದ. ಆಕೀಗೆ ನನ್ನವ ಅಂದ್ರ ಆಳ ಆಳ ತಿರಸ್ಕಾರ ಆನಸತಿರಬೇಕು. ಇಲ್ಲಾಂದರ ಇದಕ್ಕ ಅರ್ಥನs ಹತ್ತೂದಿಲ್ಲ."

"ನೀವು ಆಕಿನ್ನ ಎಷ್ಟು ಅರ್ಥ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದಿರಿ."

"ಪ್ರಯತ್ನ ಏನು ಮಾಡೋದದ ? ಇದು ಹೀಂಗsನಾ ಪೂರ್ವಕ್ಕ ಹೋಗೋಣ ಅಂದರ ಆಕಿ ಪಶ್ಚಿಮಕ್ಕ ಹೋಗೋಣ ಅನ್ನಾಕೆ. ನಾ ಎಕ್ಕಂಚಿ ಅಂದರ ಆಕಿ ಬಡಚಿ."

"ಇದೆಲ್ಲ ಅಲಂಕಾರಿಕ ಆತು, ದುಂಡು ದುಂಡು ಆತು. ನೀವು ಆಕೀಗೆ ಎಂದಾರೆ ಸ್ಪಷ್ಟವಾಗಿ ಹೇಳಿದ್ದೀರೇನು ? ಉದಾಹರಣಾರ್ಥ, ರೇಡಿಯೋ ಇರಲಿ. ಸ್ಟೇಶನ್ ಬದಲಾಯಿಸಬ್ಯಾಡ. ಇಂದು ಪಾರ್ಕಿಗೆ ಹೋಗೋಣ ನಡೀ. ಅಥವಾ ಇನ್ನೂ ಸ್ಪಷ್ಟ ಹೇಳಬೇಕೆಂದರ"–

"ಹೇಳು, ಹೇಳು"

ಇದು, ಇದು, ಈ ಶರೀರ ಸಂಬಂಧ ನಿನಗ ಸೇರೂದಿಲ್ಲೇನು ಅಂತ ಎಂದಾರೇ ಕೇಳಿದಿರೇನು ?"

"ನೀನು ಡಾಕ್ಟರ್ ಆಗಬೇಕಿತ್ತು. ಮಳೀ ನಿಂತsದ, ನಡೀ" ಆವನು ಎದ್ದ ಹೌದು ಮಳೆ ನಿಂತಿತ್ತು ಆಕೆಯೂ

ಅವಳು "ಅಪ್ಪಾ" ಎಂದು ಅತ್ತಾಗ ಮಾತ್ರ ಜೀವ ಕಲಕಿಸಿದಂತಾಯಿತು. ಎಷ್ಟು ರಮಿಸಿದರೂ ಅವಳ ಬಿಕ್ಕು ನಿಲ್ಲದಾಯಿತು. ಅನಂತ ಇದ್ದರೆ ಆ ಹುಡುಗಿ ಇಷ್ಟರಲ್ಲಿ ನಕ್ಕು ಎಲ್ಲಾ ಮರೆತುಬಿಡಬಹುದಾಗಿತ್ತು.

ಉಂಡು ಮಗಳ ಮಗ್ಗುಲಲ್ಲಿ ಮಲಗಿದಾಗ ಎಷ್ಟೋ ಹೊತ್ತು ಸುಮತಿಗೆ ನಿದ್ದೆ ಬರಲಿಲ್ಲ, ಅಪ್ಪಾ ಅಪ್ಪಾ ಎಂದು ಕನವರಿಸಿಕೊಳ್ಳುತ್ತ ಮಗಳು ತನ್ನನ್ನೇ ಅಪ್ಪಿಕೊಂಡಾಗ ಅವಳ ಕಣ್ಣಲ್ಲಿ ನೀರು ಬಂದವು.

ಈ ಹುಡುಗಿ ಇಷ್ಟು ಹಚ್ಚಿಕೊಂಡಿದ್ದಾಳೆ. ತಾನು ಕಣ್ಣೀರು ಹಾಕುತ್ತಿದ್ದೇನೆ. ಈ ಗೃಹಸ್ಥ ಯಾರ್‍ಯಾರ ಜತೆಗೋ ಸಿನೆಮಾ ನೋಡುತ್ತಾ ಚೈನಿಯಿಂದ ಇದ್ದಾನೆ ! ತನ್ನ ಜತೆಗೆ ಸಿನೇಮಾ ನೋಡಿ ಎಷ್ಟು ತಿಂಗಳಾದವು ? ಆಕೆಗೆ ಒಮ್ಮೆಲೆ ನೆನಪಾಗಲಿಲ್ಲ. ಅಥವಾ ?

ಅಥವಾ ತನ್ನ ಸಹೋದ್ಯೋಗಿಗಳೇ ಏನಾದರೂ ಕಟ್ಟುಕತೆ ಹುಟ್ಟಿಸಿದ್ದಾರೋ ? ಪಂಚತಂತ್ರದಲ್ಲಿ ಬರುವ ಬ್ರಾಹ್ಮಣನೂ ಮೂವರು ಮೋಸಗಾರರೂ ಕತೆ ಅವಳಿಗೆ ನೆನಪಾಯಿತು. ಇವರೇ ತನ್ನನ್ನೇನಾದರೂ ಮರುಳು ಮಾಡುತ್ತಿರಬಹುದು....

ಬಲಕ್ಕೆ ಲಿಂಗರಾಜ ಕಾಲೇಜು, ಪೋಲಿಸ್ ಲಾಯಿನು ಎಡಕ್ಕೆ ಪಾರ್ಸಿ ಸ್ಮಶಾನ ಯುೂನಿರ್ಯ ಜಮಖಾನಾ ದಾಟಿ ಸುಮತಿ ಹಾಗೆಯೇ ಸಾಗಿದ್ದಳು ಏಕೆ ಎತ್ತ ಗೊತ್ತಿಲ್ಲ. ಹಾಗೆ ಆ ರಸ್ತೆಯೂ ಅವಳ ಪರಿಚಯದ್ದಲ್ಲ. ಒಂದು ನಾಯಿ ಬೊಗಳಿದ ಸದ್ದು. ಮತ್ತೆರಡು ನಾಯಿಗಳು. ಹಿಂದೆ ನೋಡಿದರೆ ಅವು ತನ್ನನ್ನೇ ಬೆನ್ನಟ್ಟಿ ಬರುತ್ತಿವೆ. ಆಕೆ ಓಡಿದಳು. "ಅಷ್ಟೇಕೆ ಅಂಜಿಕೆ ?" ಎಂದು ಇಂಗ್ಲೀಷಿನಲ್ಲಿ ಹೇಳುತ್ತ ಒಬ್ಬ ಪುರುಷ ಅವಳನ್ನು ತೋಳತೆಕ್ಕೆಯಲ್ಲಿ ಹಿಡಿದ ಬಿಗಿಯಾಗಿ. ಯಾರು ? ರಾಮುಲು ಬ್ಯಾಂಕಿನಲ್ಲಿಯ ಹೆಡ್ ಅಕೌಂಟೆಂಟ್. ಸೀರೆ ಕಳಚುತ್ತ ಆಕೆ ಹರ್ಷದಿಂದಾಗಿ ಇನ್ನಷ್ಟು ಅಪ್ಪಿದಳು. ಜನರೆ ಯಾರೋ ಜೋರಾಗಿ ನಕ್ಕರು.

ಯಾರು ? [illegible] ಅವನ ಕೈಯಲ್ಲಿ ಸಿಗರೇಟು ಎತ್ತಿದ ಕಣ್ಣಿನ ಸಿಗರೇಟು. ಅಂಜಿಕೆಯಿಂದ ಅವಳಿಗೆ ಎಚ್ಚರಿಕೆಯಾಯಿತು. ಎದೆ ಢವಢವಿಸುತ್ತಿತ್ತು. ತೊಡೆ



ಬಂಧನ

ಈ ರಾತ್ರಿಯಲ್ಲಿ ನಿಶ್ಯಬ್ದ
ಗಾಳಿ ಕೂಡ ಮಲಗಿ ಜೋಂಪಿಸುತಿದೆ
ನನ್ನ ಭಾಗ್ಯ ದೇವತೆ ನೋಡಲು
ಹಾರಬೇಕೆಂದರೆ
ಓ; ಯಾರೋ ನನ್ನ ನನ್ನ ರೆಕ್ಕೆ
ಕಟ್ಟಿದ್ದಾರೆ.

-ಗವೀಶ ಹಿರೇಮಠ

ಸಂದಿ ಹಸಿ ಅನಿಸಿತು. ತೆಕ್ಕೆಯಲ್ಲಿಯ ಮಗಳನ್ನು ದೂರ ಸರಿಸಿದರೂ ಎಷ್ಟೋ ಹೊತ್ತು ನಿದ್ದೆ ಹತ್ತಲಿಲ್ಲ. ಈ ರಾಮುಲು ತನ್ನನ್ನು ಅಲ್ಲಲ್ಲ, ತಾನು ಅವನನ್ನು ಆ ದೃಷ್ಟಿಯಿಂದ ಎಂದೂ ನೋಡಿಲ್ಲ. ಅವನೇಕೆ ಕನಸಿನಲ್ಲಿ ಬರಬೇಕು ?

o o o o

"ನಾ ಎರಡು ಸಾರೆ ನಿಮ್ಮ ಕಾಲೇಜಿಗೆ ಫೋನ್ ಮಾಡಿದ್ದೆ" ಕುಡಿದ ಚಹಾದ ಕಪ್ಪು ಕೆಳಗೆ ಇಡುತ್ತ ಅನಂತ ಹೇಳಿದ. ಏನು ಉತ್ತರ ಕೊಡಬೇಕೆಂಬುದು ಸುಜಾತಾಗೆ ಹೊಳೆಯದಾಯಿತು. ನಿಮ್ಮದೇನು ಸಂಬಂಧ. ನಾನೇಕೆ ನಿಮಗೆ ಫೋನ್ ಮಾಡಬೇಕೆಂದು ಕೇಳಬೇಕು ? ಅಥವಾ ನಿಮ್ಮ ನಿರೂಪ ತಲುಪಲೇ ಇಲ್ಲವೆಂದು ಹೇಳಿಬಿಡಬೇಕೇ ? ಬೇಡ, ಒಂದಿಷ್ಟು ನಿಧಾನವಾಗಿ ತೆಗೆದುಕೊಂಡರಾಯಿತೆಂದಳಾಕೆ.

"ತಿಳೀತು" ಆಕೆಯೆಂದಳು.

"ಏನು ತಿಳೀತು ?" ಅವನು ಅವ ಕಡೆಗೆ ನೋಡುತ್ತ ಕೇಳಿದ. ಮೋರೆಯ ಮೇಲೆ ಕುತೂಹಲವೇ ಬೇಸರವೇ ಅಥವಾ ಅನಾಸಕ್ತಿಯೇ ?

"ಅದೇ ನೀವು ಫೋನ್ ಮಾಡಿದ್ದು" ಆಕೆ ನಕ್ಕಂತೆ ಮಾಡಿದಳು. ಅದೂ ನಿಸ್ಸಾರವಾಗಿ.

"ಹಾಗಾರ ತಿರುಗಿ ಫೋನ್ ಯಾ ಮಾಡಲಿಲ್ಲ ?"

"ಅಂದಹಾಗೆ, ಯಾಕೆ ಮಾಡಲಿಲ್ಲ ?

"ಯಾಕೆ ಮಾಡಬೇಕು? ಏನು ಕೆಲಸ ?"

"ಏನು ವಿಶೇಷ ಮಾತಾಡೋಹಾಂ ಇದ್ದಿದ್ದಿಲ್ಲ ಅದಕ್ಕ ಮಾಡಲಿಲ್ಲ" ಆ ಹೆದರುತ್ತಲೇ ಬಾಗಿಲ ಹೊರಗೆ ನೋಡುತ್ತ ಹೇಳಿದಳು.

ತಂದೆಯವರು ಕೋರ್ಟಿನಿಂದ ಬರಲು ಇನ್ನೂ ಎಷ್ಟು ಅವಕಾಶವಿದೆ ? ಅವರು ಈಗಲೇ ಬಂದರೆ ತನ್ನ ಬಿಡುಗಡೆಯಾ ದೀತು.

ಅನಂತನಿಗೂ ತನ್ನ ಮಾತು ಮು ದಂತಾಯಿತು. ಹೌದು, ಆಕೆಯದೂ ತನ್ನದೂ ಏನು ಸಂಬಂಧ, ಅದೂ ಹೆಂ ತಿಯ ಸಂಬಂಧ ಕಡಿದೊಗೆಯಬೇಕೆಂದ ತಾನೆಣಿಸಿದಾಗ ?

ಹಾಗಾದರೆ ಈ ಮನೆಗಾದರೂ ತನ ಬರಲು ಅಧಿಕಾರವೇನು ? ದಾದಾ ಅ ರಿಗೆ. ತನ್ನ ಮಾವನಿಗೆ ಇದೆಲ್ಲ ಗೊತ್ತಾಗಿ ಯೇನು ? ಇರಲಾರದು !

"ಸುಮತಿ ಇಲ್ಲಿ ಬಂದಿದ್ದಳೇನು ?" ಅವನು ಕೇಳಿದ.

"ಪ್ಚ್" ಆಕೆ ಎಂದಳು. 'ಯಾಕ ?'

"ಯಾಕಿಲ್ಲ, ಸಹಜ ಕೇಳಿದೆ" ಅವ ನೆಂದ.

"ನಿಮ್ಮ ಮಾತು, ಇಲ್ಲಿ ವಾತಾವರ ಎಲ್ಲಾ ಒಂದಿಷ್ಟು ಭಣ ಭಣ ಅನಿಸಿತು ಅದಕ್ಕ ಕೇಳಿದೆ".

ಆಕೆಗೆ ಎಳೆ ಸಿಕ್ಕಿತು. 'ಅದೂ ಕ ಅನ್ನರಿ ನಿಮ್ಮಿಬ್ಬರನಡುವಒಂದಿಷ್ಟು ಸಮಾ ಆಗಲಿ ಅಂತ ನಾ ಖಟ ಪಿಟ ಮಾಡಿದ

ಂದರ ಅದು ಆಗೂ ಹಾಂಗ ಅಂದರ, ತಿಷ್ಟರಾಗ ಆಗೂ ಹಾಂಗ ಕಾಣಸೂದಿಲ್ಲ' ಕೆಗೆ ಎದೆ ಹಗುರಾದಂತಾಯಿತು. ಹೌದು ಇನ್ನೇತರ ಭಿಡೆ?'

ಅವನ ಮೋರೆ ಜರ್ರನೆ ಇಳಿಯಿತು. ಣೋರೆಯ ಮೇಲಿನ ನಗು ಒರೆಸಿ ಒಗೆ ದಂತಾಯಿತು. ಇಲ್ಲಿ ಇನ್ನೇನು ಕೆಲಸ ?

"ನಾ ಹೋಗುತೀನಿ" ಅವನು ಎದ್ದ.

"ಇಷ್ಟು ಲಗೂ?" ಆಕೆ ಚಡಪಡಿಸಿ ಅವನ ಮೋರೆ ನೋಡಿದಳು. ಸಂಕಟವೆನಿ ತು. ಅವನು ಇಷ್ಟೆಲ್ಲ ಬಿಡಿಬಿಡಿಸಿ ಹೇಳಿದ ಮೇಲೆ !

"ದಾದಾ ಬರೂತನಕಾ ಕೂಡ್ರೆಲ್ಲ ?" ಆಕೆ ಎಂದಳು ಅರ್ಧ ಔಪಚಾರಿಕವಾಗಿ.

"ನಂದೇನು ಕೆಲಸ ಅವರ ಕಡೆ ?" ಅವನು ಕಡ್ಡಿ ತುಂಡು ಮಾಡಿದಂತೆ ಹೇಳಿ ಲ್ಲಿಂದೆದ್ದ. ಹೊರಗೆ ಸ್ಕೂಟರು ಸ್ಟಾರ್ಟ್ ಮಾಡಿದ ಸದ್ದು ಕೇಳಿಸಿತು. ಆಕೆ ಕಲ್ಲಾಗಿ ಅಲ್ಲೇ ಕುಳಿತಳು. ಹಾಗೆಂದರೆ ಅನಂತ ಇಲ್ಲಿ ಬಂದದ್ದು ಯಾರ ಸಲುವಾಗಿ ? ಅಂದರೆ....ಅಂದರೆ... ಅದೂ ದಾದಾ ಕೋರ್ಟಿಗೆ ಹೋದ ಹೊತ್ತು ಸಾಧಿಸಿ. ಅವಳ ಕಣ್ಣು ಹನಿಗೂಡಿದವು.

o o o

ಸುಮತಿ ಮನೆಗೆ ಬಂದಾಗಲೂ ಸುಜಾತಾ ಸೋಫಾದ ಮೇಲೆ ಗರ ಬಡಿ ದಂತೆ ಕುಳಿತೇ ಇದ್ದಳು. ತಪ್ಪು ಲಕ್ಷ್ಯಕ್ಕೆ ಬಂದವಳಂತೆ ಪಟ್ಟನೆ ಎದ್ದು ನಿಂತಳು. ಅದೆಷ್ಟು ಸೋತಿದ್ದಾಳೆ ! ಅದರ ಏನೆಂದು, ಹೇಗೆ ಕೇಳುವುದು? ಏನೂ ಮಾಡಲು ತಿಳಿಯದೆ ದೊಡ್ಡ ಗಡಿಯಾರ ನೋಡಿ ದಳು. ಆರು ಹೊಡೆಯಲು ಇನ್ನೂ ಅವ ಕಾಶವಿತ್ತು.

"ಈಗಿಷ್ಟರಲ್ಲಿ ದಾದಾ ಬರಬಹುದು" ಎಂದಳು ಅಕ್ಕನ ಕಣ್ಣು ತಪ್ಪಿಸಿ, ಇದು ಹೇಗೇಕೆ ಆಗುತ್ತದೆ--ತಾನು ಏನೋ ತಪ್ಪು ಮಾಡಿದಂತೆ ?

"ಅವರಿಗೆ ಭೆಟ್ಟಿಯಾಗಲಿಕ್ಕೇ ಬಂದೇನಿ" ಸುಮತಿಯ ದನಿಯಲ್ಲಿ ಸತ್ವವಿರಲಿಲ್ಲ, ಆಕೆ ಳಗೆ ಹೋದಳು. ಅತ್ತೆ ಕೊಟ್ಟ ಚಹ ಕುಡಿಯುತ್ತಿದ್ದಂತೆ ದಾದಾ ಬಂದರು.

ಅದೆಷ್ಟು ಸೊರಗಿದ್ದಾಳೆ, ಎನ್ನಿಸಿತು ಸುಮತಿಗೆ.

"ಮತ್ತೇನು, ಹ್ಯಾಂಗ ನಡದದ?" ಅವರು ಸಹಜವಾಗಿ ಕೇಳಿದರು.

"ನಡದಿಲ್ಲ, ಕೂತದ" ಆಕೆ ಕಹಿ ಯಾಗಿ ನಕ್ಕು ಹೇಳಿದಳು.

"ಒಮ್ಮೊಮ್ಮೆ ಕೂಡತ್ತದ ಒಮ್ಮೊಮ್ಮೆ ಓಡತ್ತದ, ಎಲ್ಲಾದಕ್ಕೂ ಕೂಡೇ ನಡದ್ದದ ಅನ್ನೋದು" ದಾದಾ ನಕ್ಕರು.

"ಕೂಡೋ ಬದಲಿ ಕಳದರ ?" ಅವಳ ಮಾತಿನಿಂದ ಒಮ್ಮೆಲೆ ವಿಷಯ ಗಂಭೀರ ವೆನಿಸಿತು. ದಾದಾ ಅವರಿಗೆ. 'ಯಾಕ ಏನಾತು ?"

ಆಕೆ ಹೇಳಿದಳು. ಗಂಡ ಮನೆ ಬಿಟ್ಟು ಹೋದದ್ದು. ತಾನೆರಡು ಮೂರು ಪತ್ರ ಬರೆದರೂ ಬರದೇ ಇದ್ದದ್ದು. ಬೆಟ್ಟಿಯಾಗ ಬೇಡವೆಂದು ಉತ್ತರಿಸಿದ್ದು. ಫೋನ್ ಮಾಡಿದರೆ ರಾಂಗ್ ನಂಬರ್ ಎಂದು ಹೇಳಿದ್ದು, ಎಲ್ಲ. ಅತ್ತೆವ್ವ ಗದ್ದಕ್ಕೆ ಕೈ ಹಚ್ಚಿಕೊಂಡು ಎಲ್ಲ ಕೇಳಿಕೊಂಡರು ಕನ್ನಡದಲ್ಲಿ ಮಾತಾಡಿದ್ದು ಪೂರ್ತಿ ತಿಳಿ ಯಿತು. ಇಂಗ್ಲಿಷಿನಲ್ಲಿ ಮಾತಾಡಿದ್ದು ಏನೋ ಅಸ್ಪಷ್ಟಾರ್ಥದಂತೆ. ಬಾಗಿಲ ಚೌಕಟ್ಟಿಗೆ, ಗೊಂಬೆಯಂತೆ ಆತು ನಿಂತ ಸುಜಾತಾಗೆ ಸಿನೇಮಾ ಎರಡನೆಯ ಸಲ ನೋಡಿದಂತೆ ಪುಸ್ತಕ ಎರಡನೆಯ ಸಲ ಓದಿದಂತೆ ಎನಿಸೀತು.

"ಬರತಾರೇಳು ಬೇಕಾದರ ನಾ ಹೋಗಿ ಹೇಳತೇನಿ" ದಾದಾ ಎಂದರು ಕಾಳಜಿ ಯಿಂದ.

"ನಂಗೂ ಹಾಂಗs ಅನಿಸಿತ್ತು ಅಂತ ನಾ ನಿಮ್ಮ ಕಡೆ ಬರಲಿಲ್ಲ."

"ಹಂಗಾರ ?"

"ಈಗ ಯಾವದೋ ಹುಡುಗಿ ಜತೆಗೆ ತಿರಗಾಡಲಿಕ್ಕೆಆರಂಭಿಸಿದ್ದಾರಂತೆ" ಸುಮತಿ ಇಂಗ್ಲಿಷಿನಲ್ಲಿ ಆರಂಭಿಸಿದಳು. ಅತ್ತೆಗೆ ತಿಳಿಯಬಾರದೆಂದು. ಸುಜಾತಳಿಗೆ ಕಾಲ ಕೆಳಗಿನ ನೆಲ ಕುಸಿದಂತಾಯಿತು. ಆಕೆ ಆಸಿಸಿ ನಿಂತ ಬಾಗಿಲ ಚೌಕಟ್ಟು ಗಟ್ಟಿ ಯಾಗಿ ಹಿಡಿದಳು ಆಧಾರಕ್ಕೆ.

"ನಿನಗೆ ಯಾರು ಹೇಳಿದರು ?" ದಾದಾ ಗಂಭೀರವಾಗಿಯೇ ಕೇಳಿದರು.

"ಚಕ್ಕಾ ಹಾಡು ಹಿಂಡುಯುವಾಗ ಕಣ್ಣು ಮುಚ್ಚುತ್ತದಂತೆ. ನೋಡಿದವರು ಹೇಳು ತ್ತಾರೆ, ಇನ್ನೂರು !"

"ನೋಡೋಣವಂತೆ" ದಾದಾ ಎದ್ದು ಪಡಸಾಲೆಗೆ ಬಂದರು. ಸುಜಾತಾ ಅಲ್ಲೇ ಸರಿದು ಹೋಗಲು ಜಾಗ ಮಾಡಿಕೊಟ್ಟಳು ಇಬ್ಬರಿಗೂ. ಇದು ಇನ್ನೂ ಎಲ್ಲಿಯವರೆಗೆ ಹೋಗಬಹುದು ? ಅವಳಿಗೆ ತಾನು ಬೆತ್ತಲೆ ನಿಂತಷ್ಟು ಸಂಕೋಚವಾಯಿತು.

"ಅಂದ ಹಾಂಗ ಹೇಳಲಿಕ್ಕೆ ಮರೆತೆ ನೋಡು" ಅತ್ತೆ ಆರಂಭಿಸಿಯೇ ಬಿಟ್ಟಳು. ಹೊರಗಿನವರದಾದರೂ ಲಕ್ಷ್ಯವಿರಲಿಲ್ಲ. ಸುಜಾತಾ ಮುಂದಾಗಿ ಅವರ ಕೈಹಿಡಿದು ಒತ್ತಿದಳು.

"ಸುಮ್ಮ ಇರ್ರಿ. ಈಗs ಭಾಳ ತ್ರಾಸ ಮಾಡಕೊಂಡಾಳ"

ಅತ್ತೆ ಮಾತು ನುಂಗಿದಾಗ ಸುಜಾತಾಗೆ ಒಂದು ಕುತ್ತು ಪಾರಾದಂತಾಯಿತು. ಇನ್ನು ಸುಮತಿ ಟಿಳಕವಾಡಿಯ ಮನೆ ಯಲ್ಲಿ ಇರುವದರಲ್ಲಿ ಅರ್ಥವಿಲ್ಲವೆಂದು ಹೊರಗೆ ದಾದಾ ಅವಳಿಗೆ ತಿಳಿಸಿ ಹೇಳು ತ್ತಿದ್ದರು.

"ಇಲ್ಲೇ ನಾಲ್ಕು ದಿವಸ ಬಂದು ಬಿಡು, ನಾಲ್ಕು ದಿವಸ ಬದಲಾವಣೆ ಆದಾಂಗ ಆಗತದ. ಮುಂದ ನೋಡಲಿಕ್ಕೆ ಬಂದೀತು."

ಮರು ದಿನ ಬೆಳಿಗ್ಗೆ ಕಾಲೇಜಿಗೆಂದು ಹೊರಟಾಗ ಸುಜಾತಾಳ ಮನಸ್ಸು ವಿಹ್ವಲ ಗೊಂಡಿತ್ತು. ರಾತ್ರಿ ನಿದ್ದೆ ಕೂಡ ಸರಿಯಾಗಿ ಹತ್ತಿರಲಿಲ್ಲ ಏನೇನೋ ವಿಚಿತ್ರ ಕನಸುಗಳು. ದಾದಾ ಕರಿ ಟೊಪ್ಪಿಗೆ ಹಾಕಿಕೊಂಡು ಮುತ್ತಿನ ಮುಂಡಾವಳಿ ಕಟ್ಟಿಕೊಂಡು ಹಸೆ ಮಣೆಯ ಮೇಲೆ ನಿಂತಂತೆ ಅಂತಃಪಟದ ಆಚೆಗೆ ನಿಲ್ಲ ಬೇಕಾದ ಕನೆ ಎಲ್ಲೋ ಓಡಿ ಹೋದಂತೆ. ಯಾರ್‍ಯಾರೋ ಹುಡುಕಲಿ ಹೋದಂತೆ ಯಾವುದಕ್ಕೂ ಅರ್ಥ ವಿರ ಲಿಲ್ಲ.

ಯಾಂತ್ರಿಕವಾಗಿ ಆಕೆ ಹಿಂದಿನಾಡಿಯ ಬಸ್ಸು ಏರಿದಳು. ಅಷ್ಟೇ ಯಾಂತ್ರಿಕ

ಬೆಳಕು

ನಿನ್ನ ಕಿವಿಯ ರಿಂಗಣದ ಬೆಳಕು
ಝುಗ್ಗೆಂದು ಬಾನು–ಬುವಿಯೆಲ್ಲ
ಬೆಳಗಿದಾಗ
ಆಕಾಶದ ಚಂದಿರ ಬಂದು ಮೆಲ್ಲನೆ
ಕಿವಿಯಲಿ ಕೇಳಿದ
"ನನ್ನ ತಾರೆಗಳೇನಾದರೂ ಬಂದು
ಕುಳಿತಿವೆಯೇ
ನಿನ್ನ ಪ್ರೇಯಸಿಯ ಕಿವಿಯಲಿ" ಎಂದು?

-ಗವೀಶ ಹಿರೇಮಠ

ವಾಗಿ ಇಳಿದಳು ಎಲ್ಲರಿಗಿಂತ ಹಿಂದಾಗಿ. ಇಂದು ಸಂಜೆ ಮತ್ತೆ ಅನಂತ ಮನೆಗೆ ಬಂದರೆ ತನ್ನ ಗತಿಯೇನು? ನಿನ್ನೆ ಅತ್ತೆಯ ಕೈಯೊತ್ತಿ ಸುಮ್ಮನಾಗಿಸಿದಂತೆ ಮತ್ತೆ ಆದೀತೆ? ಅಲ್ಲದೆ ಬೆಳಗ್ಗೆಯೇ–ಅಂದರೆ ತಾನು ಕಾಲೇಜಿಗಾಗಿ ಮನೆ ಬಿಟ್ಟ ನಂತರ-ಸುಮತಿ ಒಂದಿಷ್ಟು ಬಟ್ಟೆ ಬರೆ ತೆಗೆದುಕೊಂಡು ಚಿತ್ರಾಳನ್ನು ಕರೆದುಕೊಂಡು ಬರುತ್ತೇನೆಂದು ಹೇಳಿದ್ದಾಳೆ. ಅತ್ತೆ ಸುಮ್ಮನಾಗಬಹುದು. ಆಕೆಯ ಅಪ್ಪ ಬಂದುಹೋದರೆ ಚಿತ್ರಾ ಹೇಳಲಾರಳೇ?

ಕ್ಲಾಸಿಗೆ ಹೋಗುವ ಮೊದಲು ಆ ವಾರದಲ್ಲಿಯ ಪೋಸ್ಟ್ಆಫೀಸಿಗೆ ಹೋಗಿ ಸುಜಾತಾ ಅನಂತನ ಫ್ಯಾಕ್ಟರಿಗೆ ಫೋನ್ ಮಾಡಿದಳು. ಅವನು ಇದ್ದ. ನಿನ್ನೆ ಮನೆಯಲ್ಲಿ ನಡೆದದ್ದನ್ನು ಹೇಳಿದಳು.

"ನಾ ಬಂದು ಹೋದದ್ದು ಹೇಳಿದಿರಿಲ್ಲೋ?" ಅವನು ನಕ್ಕ.

"ಪ್ಲೀಜ್ ಅತ್ತೆವ್ವನ್ನ ಸುಮ್ಮ ಕೂಡಸೂ ತನಕಾ ರಗಡ ಆತು."

"ಅಂದರ ನಾ ಹುಡುಗ್ಯಾರನ್ನು ಕರಿಕೊಂಡು ತಿರಿಗ್ಯಾಡತೇನಿ. ಅಷ್ಟು ಆಕರ್ಷಣ ಶಕ್ತಿ ನನ್ನಲ್ಲಿ ಇನ್ನೂ ಶಿಲ್ಲಕ ಅದ, ಅಂತ ನಿಮ್ಮ ಅಕ್ಕ ಒಪ್ಪಿದಾಂಗ ಆತು"

"ದಯಮಾಡಿ ಎಲ್ಲಾ ಚಾಷ್ಟಿಮ್ಯಾಲಿ ಹಾಕಬ್ಯಾಡ್ರಿ. ಈಗ ಫೋನ್ ಮಾಡಿದ ಉದ್ದೇಶ ಇಷ್ಟೇ. ಇನ್ನ ಮನೀ ಕಡೆ ಹಾಯಬ್ಯಾಡ್ರಿ."

"ಭಾಳ ಛಲೋ. ಹಂಗಾರ ನೀನೇ ಫ್ಯಾಕ್ಟರಿಗೆ ಬಂದು ಬಿಡು. ಲಾಜ್‌ಗೆ ಮಾತ್ರ ಬ್ಯಾಡ. ಸುಳ್ಳೇ ಬೊಬ್ಬಾಟ ಆದೀತು."

ಆಕೆ ಸಿಟ್ಟಿನಿಂದ ಫೋನ್ ಕುಕ್ಕಿದಳು. ಇವನನ್ನು ಉಳಿಸಬೇಕೆಂದು ತಾನು ತಳಮಳಿಸಿದರೆ ಇವನಿಗೇ ಅದರ ಕಿಮ್ಮತ್ತಿಲ್ಲ!

ಹೇಳುವುದನ್ನು ಹೇಳಿ ಆಯಿತು. ತನ್ನ ಹೊಣೆ ಮುಗಿಯಿತು ಎಂದು ಆಕೆ ಅಂದುಕೊಂಡರೂ ಅಂದಿನ ಕ್ಲಾಸುಗಳಲ್ಲಿ ಅವಳಿಗೆ ಲಕ್ಷ್ಯವಿರಲಿಲ್ಲ. ಪ್ರೊಫೆಸರ್ ದೇವಳೀ ಅವರ ವಿನೋದಗಳಿಗೆ ಮಿಕ್ಕವರು ನಕ್ಕರೆಂದು ಆಕೆ ನಕ್ಕಳು.

ಪಾಠಗಳೆಲ್ಲ ಮುಗಿದು ಆಕೆ ಕಾಲೇಜು ಹೊರಗಿನ ಬಸ್ ನಿಲ್ದಾಣದಲ್ಲಿ ನೆಲ ನೋಡುತ್ತ ವಿಮನಸ್ಕಳಾಗಿ ನಿಂತಾಗ ಗಕ್ಕನೆ ಎದುರಿನಲ್ಲೇ ಸ್ಕೂಟರು ನಿಂತಿತು. ಬಂದವನು ಅನಂತ! ಇದೇನು, ಕಾಲೇಜಿಗೆ ಬರತೊಡಗಿದ? ಆಕೆಯ ಹಣೆ ಗಂಟಾಯಿತು. 'ನಡೀರಿ' ಅವನೆಂದ. ಆಕೆ ಮಾತಿಲ್ಲದೆ ಕುಳಿತಳು.

"ಇಲ್ಲಿ ಯಾಕ ಬಂದಿರಿ. ಮತ್ತ ಈಗ ಯಾಕೆ ಬಂದಿರಿ?" ಆಕೆ ಕೇಳಿದಳು. ಹೆಲ್ಮೆಟಿನಿಂದಾಗಿ ಅವನಿಗೆ ಕೇಳಿಸಿರಲಿಕ್ಕಿಲ್ಲವೆಂದು ಇನ್ನೊಮ್ಮೆ ಕೇಳಿದಳು. ಗಟ್ಟಿಯಾಗಿ. ಆರ್. ಪಿ. ಡಿ. ಕಾರ್ನರ್ ದಾಟಿ ದೇಶಮುಖ ರೋಡಗುಂಟ ಸ್ಕೂಟರ್ ಸಾಗಿತ್ತು. ಅವನು ಮಾತಾಡಲಿಲ್ಲ. ರೈಲ್ವೆ ಗೇಟು ದಾಟಿ ವೆಂಕಟೇಶ ಕೆಫೆಯ ಹೊರಗೆ ಸ್ಕೂಟರು ನಿಲ್ಲಿಸಿ ಅವರಿಬ್ಬರೂ ಒಳಗೆ ಸೇರಿದರು.

"ಏನೋ ಹೇಳತಿದ್ದಿಯಲ್ಲ?" ಹೆಂಡತಿಯನ್ನು ಕೇಳುವಷ್ಟು ಸಲುಗೆಯಿಂದ ಅನಂತ ಕೇಳಿದ. ಅವಳಿಗೆ ವಿಚಿತ್ರವೆನಿಸಿತು.

"ಕಾಲೇಜಕ್ಕ ಯಾಕ ಬಂದರಿ, ಅಂತ ಕೇಳಿದೆ."

"ಮನೀಗೆ ಬರಬ್ಯಾಡ ಅಂದೀ. ಕಾಲೇಜಿಗೆ ಬಂದೆ"

"ಕಾಲೇಜಿಗೆ ಬರಬ್ಯಾಡ ಅಂದರs?"

"ಲಾಯನ್ ಹೊಡೀತೀನಿ ನಿನ್ನ ಮ್ಯಾಲೆ" ಅವನು ನಕ್ಕ. ಅವಳು ನಗಲಿಲ್ಲ.

"ಅನಂತರಾವ, ಒಂದಿಷ್ಟು ಗಂಭೀರವಾಗಿ ವಿಚಾರ ಮಾಡ್ರಿ. ನಿಮ್ಮದು ನನ್ನ ಅಕ್ಕಂದೂ ಸಂಸಾರ–"

ಮುಂದೆ ಮಾತಾಡಬಾರದೆಂದು ಸಾಕೆಂದು ಅವನು ಕೈಯೆತ್ತಿದ.

"ಏನು ತೊಗೊಳ್ಳೀ?"

"ವಿಷಾ" ಆಕೆ ನಕ್ಕಳು.

ಅವನು ಮಾಣಿಯನ್ನು ಕರೆದು ಹೇಳಿದ ಅಣಕು ಗಂಭೀರತೆಯಿಂದ. "ಎರಡು ವಿಷಾ ತೊಗೊಂಡು ಬಾ."

ಮಾಣಿಗೆ ತಿಳಿಯಲಿಲ್ಲ. ಇಲ್ಲವೆಂದು ಹೇಳಿದವನು ಅಲ್ಲೇ ನಿಂತ.

"ಮನೀಗೆ ಹೋಗೋ ತನಕಾ ಅಕ್ಕ ಬಂದಿರತಾಳ"

ಆಕೆ ಏನೋ ಹೇಳಲೇಬೇಕೆಂದು ಹೇಳತೊಡಗಿದಳು.

"ಅದಕ್ಕೆ ನಾ ಯೇನ್ ಮಾಡಬೇಕಂತೀ."–ಕಾವಿನ ದನಿ.

"ನೀವು? ಪ್ಲೀಜ್, ಪ್ಲೀಜ್ ನನ್ನ ಬೆನ್ನು ಬಿಡರಿ. ಉಪಕಾರ ಆಗ್ತತ" ದೈನ್ಯತೆ.

"ಉಪಕಾರ?, ಉಪಕಾರ ಯಾತರದು? ಯಾರಿಗೆ? ಯಾಕೆ? ಯಾಕs ಅಂತ?"

"ನನಗ, ನನ್ನ ಸಲುವಾಗಿ"

"ಹೌದಲ್ಲೋ? ಹಂಗಾರ ಸಂಜಿನ್ಯಾಗ ಎಲ್ಲಿ ಬೆಟ್ಟಿಯಾಗಲಿ ಹೇಳು. ಆರಗಂಟೇಕ್ಕ. ನೀ ಬರಲಿಲ್ಲಾಂದ್ರ ಮಾತ್ರ ನಿಮ್ಮ ಮನೀಗೆ ಕೇಳಬಿಡಾಂವಾ, ಬರತೇನಿ ಅಂದಾಕಿ ಯಾಕ್ ಬರ್ಲಿಲ್ಲಾಂತ. ಮುಂದಿನ ಗೊಂದಲಕ್ಕ ನಾ ಜವಾಬದಾರ ಅಲ್ಲ"–ಅವನು ನಕ್ಕ.

ದಾಟಿಕೊಳ್ಳಲು ಆಕೆಗೆ ಏನಾದರೂ ಹೇಳಲೇಬೇಕಾಗಿತ್ತು.

"ನರ್ತಕಿ ಟಾಕೀಜ ಹತ್ತಿರ ಆರೂವರೆಗೆ" ಆಕೆ ಏನೋ ಹೇಳಬೇಕೆಂದು ಹೇಳಿದಳು.

ಸುಜಾತಾ ಮನೆಗೆ ಬರುವಷ್ಟರಲ್ಲಿ ಸುಮತಿ ಬಂದು ಉಂಡು ಬ್ಯಾಂಕಿಗೆ ಹೋಗಿದ್ದಳು. ಮಾವಶೀ ಎಂದು



ಚಿತ್ರಾ ಒಳಗಿನಿಂದ ಓಡುತ್ತ ಬಂದಳು.

ಆಕೆ ಎತ್ತಿಕೊಳ್ಳುತ್ತಿದ್ದಂತೆ ಕೊರಳಿಗೆ ಜೋತುಬಿದ್ದಳು. 'ಕ್ಯಾಡಬರಿ' ?

"ನೀನೇ ಕ್ಯಾಡಬರೀ" ಸುಜಾತಾ ಮೋರೆ ತುಂಬಾ ಮುದ್ದಿಕ್ಕಿದಳು.

"ಹೋಗೇ ಸುಳ್ಳು ಹೇಳತೀ,"

"ಅಂಗಾರ, ಲಾಲಿ ಪಾಪ್, ಬಬ್ಬಲ್ ಗಮ್,"

"ಹ್ಞೂ, ಊಂ, ನಾನು ಚಿತ್ರಾ ಗೊತ್ತದs ಏನು ?"

ಸುಜಾತಾ ಅವಳನ್ನು ಕೆಳಗಿಳಿಸಿದಳು. 'ನನಗ ಚಿತ್ರಾ ಬ್ಯಾಡ. ಕ್ಯಾಡಬರೀ ಬೇಕು.' ಆಕೆ ಅಜ್ಞೆಯಿಂದ ಅಂದಳು. 'ಹಾಂಗ, ಅಜ್ಜಜ್ಜಿ ಮಾತಾಡಬಾರದು' ಎಂದಳು ಚಿತ್ರಾ.

"ಹಾಂಗ, ಯಾರು ಹೇಳ್ತಾರ"

"ಅಮ್ಮ ಹೇಳ್ತಾಳ"

"ಯಾರಿಗೆ ?"

"ಮತ್ತ ಯಾರಿಗೆ ? ಅಪ್ಪಗ"

ಸುಜಾತಾ ಉಗುಳು ನುಂಗಿದಳು. ಹೇಳಿದಳು.

"ಈಗ ಊಟ ಮಾಡೋಣ. ಹಿಂದಾಗಡೆ ನಿನಗ ನಾ ಛಂದ ಛಂದ ಹೂವು ಕತ್ತರಿಸಿ ಕೊಡತೀನಿ. ವಿಮಾನ ಮಾಡಿ ಕೊಡತೀನಿ. ಹಡಗ ಮಾಡಿ ಕೊಡತೀನಿ."

ಇಡೀ ಮಧ್ಯಾಹ್ನ ಅವರಿಬ್ಬರೂ ಮನೆ ತುಂಬ ಕಾಗದ ಕತ್ತರಿಸಿ ಕಸ ಮಾಡಿದರು. ಗೊಂದಲ ಹಾಕಿದರು. ಮಳೆಯಾಗಿ ಗಟಾರಿನಲ್ಲಿ ನೀರು ಹರಿದಾಗ ಹಡಗ ತೇಲಿ ಬಿಟ್ಟರು. ಒಳಗೆ ವಿಮಾನ ಹಾರಿಸಿದರು. ಕಥೆ ಹೇಳಿದರು.

ಸಂಜೆ ಸುಮತಿ ಬ್ಯಾಂಕಿನಿಂದ ಬಂದಾಗ ಚಿತ್ರಾ ಎಲ್ಲ ವರದಿ ಒಪ್ಪಿಸಿದಳು.

"ಖರೇ, ನೀ ಮಧ್ಯಾಹ್ನದಾಗ ಮಲಕೊಂಡೇನು"? ಜೋಸತ್ತ ತಾಯಿ ಕೇಳಿದಳು.

"ಇಲ್ಲ"

"ಯಾಕ ? ಮಧ್ಯಾಹ್ನದಾಗ ಯಾಕ ಒಂದು ತಾಸು ಮಲಕೊಳ್ಳಲಿಲ್ಲ, ಮೂರು ಸಂಜಿ ಆದಕೂಡಲೇ ಕಿರಿ ಕಿರಿ ಮಾಡತಿ ! ಊಟ ಮಾಡದ ಮಲಕ್ಕೋತಿ. ಕ್ಯಾಣಾ ಆದಿ, ತಿಳೀಬಾರದು ?" ಮಾತಲ್ಲ ಚಾಟಿ ಯೇಟುಗಳು.

ಐದು ವರ್ಷ ಕೂಡಾ ತುಂಬದ ಕೂಸಿಗೆ ಇಷ್ಟೆಲ್ಲ ತಿಳಿಯುತ್ತದೆಯೇ ? ಈ ಮಾತು ತನಗೇ ಉದ್ದೇಶಿಸಿದ್ದು, ಸುಜಾತಾಳ ಮೋರೆಯ ಮೇಲಿನ ನಗು ಒರೆಸಿ ಹೋಯಿತು. ಕಣ್ಣು ಹಸಿಯಾಯಿತು. ಮನಸ್ಸು ಕುದಿಯಿತು. ಒಂದೊಪ್ಪತ್ತು. ತನಗೆ ಇದು ಸಹನೆಯಾಗಲಿಲ್ಲ. ಅನಂತ ಇಷ್ಟು ವರ್ಷ ಸಂಸಾರ ಹೇಗೆ ಮಾಡಿರಬೇಕು ?

'ನಾ ಮಾವಶೀ ಹತ್ತಿರ ಮಲಕೊಳ್ಳಾಕಿ," ಊಟ ಮುಗಿದ ಬಳಿಕ ಚಿತ್ರಾ ಹಟ ತೆಗೆದಳು.

ಜೀಗದ ಕೈ

ನೀನಂದು ನಿನ್ನ ಮನೆಯ ಬೀಗದ
ಕೈ ಕೊಟ್ಟು
ಬಾಗಿಲು ತೆರೆದು ಕೂಡಲು ಹೇಳಿದಾಗ
ನಾನು ಬಹಳಷ್ಟು ಖುಷಿಪಟ್ಟು
ನಿನ್ನ ಮನೆ ತಲುಪಿದೆ
ಆದರೇನು ಅಷ್ಟರಲಿ ಓರ್ವ
ಬಾಗಿಲು ತೆರೆದು ಕುಳಿತಿದ್ದ
ಬೀಗದ ಕೈ ಮಾತ್ರ ನನ್ನಲ್ಲೇ ಇತ್ತು.

-ಗವೀಶ ಹಿರೇಮಠ

"ನೀ ಹುಚ್ಚಿಯೇನು ?" ಎಂದಳು ಸುಮತಿ.

ಅಂದರ ತನ್ನ ಬಳಿ ಹುಚ್ಚಿಯರು ಮಾತ್ರ ಮಲಗುತ್ತಾರೇನು ? ಎಂದು ಕೊಂಡಳು ಸುಜಾತಾ. ಗೋಡೆಯ ಕಡೆಗೆ ಮೋರೆ ತಿರುವಿ,

"ಮಲಗಲೀ ಬಿಡೆ" ಎಂದಳು ಅತ್ತೆ.

"ಏನೇ ಹಟಾ ಅದೂ, ಚಿತ್ರಾ ?" ಹೊರಗೆ ಓದುತ್ತ ಕುಳಿತಿದ್ದ ದಾದಾ ಕೇಳಿದರು.

"ಮಾವಶೀ" ಎಂದು ಚಿತ್ರಾ ಸುಜಾತಾಳ ಬೆನ್ನಿಗೇ ಕೈಹಾಕಿದಾಗ ಅವಳಿಗೆ ಮಗ್ಗಲು ಬದಲಿಸಬೇಕಾಯಿತು. ಹೊದಿಕೆಯಲ್ಲಿ ಚಿತ್ರಾಳನ್ನು ತೆಗೆದುಕೊಳ್ಳಬೇಕಾಯಿತು. ಅವಳ ಮೈ ಕಾವಿನಿಂದ ಸುಜಾತಾಗೆ ಪುಲಕ್ಕಿಸಿತು. ಅವಳ ಕುರುಳು ನೇವರಿಸುತ್ತಿದ್ದಂತೆ ಅನಂತನ ನೆನಪಾಯಿತು. ಭೆಟ್ಟಿ ತಪ್ಪಿಸಿದ್ದೂ ನೆನಪಾಗಿ ಆಕೆ ಚಿತ್ರಾಳನ್ನು ಬಲವಾಗಿ ಅಪ್ಪಿದಳು. ಆ ರಾತ್ರಿ ಅವಳ ಕನಸಿನ ತುಂಬೆಲ್ಲ ಅನಂತನೇ ಕುಣಿದಾಡಿದ.

o o o

ಮೊದಲ ಭೆಟ್ಟಿ ಠರಾಯಿಸಿಕೊಂಡು ಮರುದಿನ ಸಂಜೆ ದಾದಾ ಅನಂತನಿದ್ದ ಲಾಜಿಗೇ ಹೋದರು. ಔಪಚಾರಿಕತೆ ಬದಿಗೊತ್ತಿ ನೇರ ವಿಷಯಕ್ಕೆ ಕೈ ಹಾಕಿದರು.

"ನಾ ಬಂದ ಕಾರಣ ತಿಳಿದಿರಬೇಕು."

"ತಿಳದದ," ಒಣ ದನಿಯ ಉತ್ತರ.

"ನೀವು ಮನೀಗೆ ಹೋಗದಿರೋ ಕಾರಣಾದರೂ ಏನು ?"

"ಯಾರ ಮನೀಗೆ"

"ನಿಮ್ಮ ಮನೀಗೆ, ನಿಮ್ಮ ಹಾಂಗೂ ಸುಮತಿಯ ಮನೀಗೆ."

"ಅದು ನನ್ನ ಮನೀ ಅನಸಲಿಲ್ಲ. ಅನಸೂದಿಲ್ಲ, ಅದಕ."

ದಾದಾ ಮಾತು ಹೊಳೆಯದೆ ಕಿಟಕಿಯ ಹೊರಗೆ ನೋಡತೊಡಗಿದರು. ಅವರ ಕಣ್ಣು ತುಂಬಿ ಬಂದದ್ದು ಅನಂತನಿಗೆ ನೋಡಲಾಗಲಿಲ್ಲ.

"ನಾನು ನೋಕರಿ ಬಿಡತೇನನ್ನೋ ವಿಷಯ ನಿಮಗೆ ತಿಳಿಸಿದ್ದೆ. ಮದೀನೀ ಕಿಂತ ಮೊದಲು, ನಿಮಗ ನೆನಪಿರಬೇಕು" ಅವನೆಂದ.

"ನೆನಪು ಅದ"

"ಖರೇ, ಅದನ್ನು ನೀವು ನಿಮ್ಮ ಮಗಳಿಗೆ ಹೇಳಲಿಲ್ಲ."

"ಅದು ಅಷ್ಟು ಮಹತ್ವದ್ದು ಅನಸಲಿಲ್ಲ ಮ್ಯಾಲಾಗಿ ನಿಮ್ಮಂಥ ಗ್ರಾಜುಯೇಟ್ ಇಂಜನಿಯರು ಅಂದರನ ಒಂದು ಶಕ್ತಿ ಇದ್ದ ಹಾಂಗ. ನೀವು ನೋಕರಿ ಮಾಡಿದರ ಎಷ್ಟು, ಅದನ್ನು ಬಿಟ್ಟು ವರ್ಕಶಾಪ್ ತೆಗೆದರ ಎಷ್ಟು!"

ಅನಂತನ ಅಹಂಕಾರ ಅಷ್ಟೇ ಅರಳಿತು. ಆದರೆ ಅದನ್ನು ಅವನು ತೋರಗೊಡಲಿಲ್ಲ.

"ನಿಮ್ಮ ಮಗಳಿಗೆ ಹಾಂಗ ಅನಸಲಿಲ್ಲ. ಅನಸೂದಿಲ್ಲ."



"ಆಕಿ ಹುಚ್ಚಿ ಇದ್ದಾಳ".

"ಇನ್ನ ಹುಚ್ಚೀ ಸಂಗತಿ ಹ್ಯಾಂಗ, ಎಷ್ಟು ದಿವಸ ಸಂಸಾರ ಮಾಡಬೇಕು ಹೇಳ್ರಿ" ಅವನು ನಕ್ಕ. ಅವರೂ ನಕ್ಕರು. ಮತ್ತೆ ಆತ ಗಂಭೀರನಾದ.

"ನೀವು ಹುಚ್ಚಿ ಅಂತೀರಲ್ಲ? ಆಕಿ ಖರೇನs ಶಾಣ್ಯಾ ಇದ್ದಾಳ."

ಅವರು ಮಾತಿಲ್ಲದೆ ಮುಂದೆ ಬಾಗಿದರು.

"ನಮ್ಮ ಸಂಸಾರದಾಗಿನ ಪ್ರತಿಯೊಂದು ವಸ್ತು, ಚಮಚಾ ಸವಟು ಮೊದಲು ಮಾಡಿಕೊಂಡು ಆಕೆ ತನ್ನ ಪ್ರಾಪ್ತಿಯಿಂದ ತಂದಳು. ಮೆತ್ತಗs ಅಂದಳು—ಸಂಸಾರದ ಎಲ್ಲಾ ಖರ್ಚು ನನ್ನ ಪಗಾರದಾಗಿಂದ—ನಿಮ್ಮ ಎಲ್ಲಾ ಪಗಾರ ಬ್ಯಾಂಕಿಗೆ" ಅವನು ಬೇಕೆಂದೇ ತಡೆದ.

"ಮುಂದs ?"

"ನಾ ಹುಟ್ಟ ನೋಕರಿ ಬಿಡೋದೊಂದು ತಲ್ಯಾಗ ಇತ್ತು ನೋಡರಿ. ಭಾಳೇ ಅನುಕೂಲ ಆತು ಅಂತ ಒಪ್ಪಿಕೊಂಡು ಬಿಟ್ಟೆ."

"ಅಂದರ ಜಾಯಿಂಟ್ ಅಕೌಂಟ್ ಮಾಡಿ ಮುಂದ ಅಡಚಣಿ ಮಾಡಿದಾಳೇನು ?"

"ಹಾಂಗಿದ್ದರ ಕಶೀ ಬ್ಯಾರೇ ಆಗಬಹುದಿತ್ತು"

"ಅಂದರ ?"

"ಅಂದರ ಆದರರ್ಥ ಇಷ್ಟs. ನನ್ನ ದುಡ್ಡಿನ ಮ್ಯಾಲೆ ಆಕೀ ಅಧಿಕಾರ ಇಲ್ಲ. ಅಂತ ಆಕೀ ದುಡ್ಡಿನ ಮ್ಯಾಲೆ ನನಗ ಅಧಿಕಾರ ಇಲ್ಲ. ಪರ್ಯಾಯದಿಂದ ಮನೀ ವಶಿಂದ ಐದು ಪೈಸದ ಕೋತಂಬರಿ ನಾ ತರಬೇಕಾಗಿಲ್ಲ. ಕನ್ನಡಿ, ಕಪಾಟು, ಡೈನಿಂಗ್ ಟೇಬಲು, ಫ್ರಿಜ್, ಟೂ ಇನ್ ಒನ್, ಒಂದೇ ಎರಡೇ, ಎಲ್ಲಾ ಆಕೀನೇ ತಂದಳು.

ನನ್ನ ಒಂದು ಮಾತು ಕೇಳದೇ ತಂದಳು. ಇನ್ನೇನು, ಠರಾಯಿಸಿದ ಮ್ಯಾಲೆ ನನಗ ಅಥವಾ ನನ್ನ ತೋರಿಸಲಿಕ್ಕೆ ಒಂದೆರಡು ಕಡೆ ಕರಕ್ಕೊಂಡು ಹೋಗಿದ್ಲು, ಇಷ್ಟು ಮಾತ್ರ ಖರೆ.

"ಅಂದರ ನಿಮಗ ಸಂಸಾರದಾಗ ಇನ್‌ವಾಲ್ವ ಆಗಬೇಕಾಗಿತ್ತು. ಆಕಿ ಆಗಗೊಡಲಿಲ್ಲ." ದಾದಾ ಅಂದರು. ತನ್ನ ವಿಚಾರಗಳಿಗೊಂದು ಆಕಾರ, ಒಂದು ಶಬ್ದ ಬಂಧನ ಕೊಟ್ಟಿದ್ದಕ್ಕೆ ಅನಂತ ತಲೆದೂಗಿದ.

"ಕರೆಕ್ಟ್" ಅವನೆಂದ "ನಾನೂ ನನ್ನ ಫ್ಯಾಕ್ಟರಿಯೊಳಗ ಆಕೆಗೆ ಇನ್‌ವಾಲ್ವ ಆಗಗೊಡಲಿಲ್ಲ. ಆಕೀ ಇಚ್ಛಾನೂ ಇದ್ದ ಹಾಂಗ ಕಾಣಿಸಲಿಲ್ಲ, ಆ ಮಾತು ಬ್ಯಾರೆ"

"ನಮ್ಮ ಮನೀಯೊಳಗೂ ಆಕಿ ಹಾಂಗs ಇದ್ದಳು. ನನ್ನ ಧೋತರ ಗಂಜೀ ಫ್ರಾಕು ಮೊದಲು ಮಾಡಿಕೊಂಡು ಆಕೀ ಪಸಂದ ತರತಾಳಲ್ಲ. ತರವಾಲಳು ಅಂತ ನಾನೂ ಅಲಕ್ಷ ಮಾಡತಿದ್ದೆ"

"ನಮ್ಮ ಸಂಸಾರ ಮುಗಿದಿತ್ತು" ತನ್ನ ಮಾತೇ ಅನಂತನಿಗೆ ಬಿರುಸೆನಿಸಿತು. ಆಡಿದ ಮೇಲೆ. "ನನಗೂ ಹಾಂಗ ಮೊದಮೊದಲು ಲುಂಗಿ ಬನಿಯನ್ ತಂದಳು. ನಾನೂ ತಕರಾರು ಮಾಡಲಿಲ್ಲ. ಮುಂದೆ ಮಾತ್ರ ಹೇಳಿಬಿಟ್ಟೆ. ಇದೊಂದು ವಿಷಯದ ಮಟ್ಟಿಗಾದರೂ ನನಗೆ ಸ್ವಾತಂತ್ರ್ಯ ಇರಲಿ ಅಂತ. ನಾ ಯಾವ ಅರಿವಿ ಹಾಕ್ಕೋಬೇಕು, ಎಲ್ಲಿ ಹೊಲಿಸಿಕೋಬೇಕು, ಯಾವ ಲಾಂಡ್ರಿಗೆ ಕೊಡಬೇಕೂ ಅನ್ನೋದು ನನಗೆ ಇರಲಿ ಅಂದೆ. ಇಷ್ಟು ಅಲ್ಲ, ಮನ್ಯಾಗ ಯಾವಾಗ ರೇಡಿಯೋ ಹಚ್ಚಬೇಕು ಯಾವ ಸ್ಟೇಶನ್ ಹಚ್ಚಬೇಕು ಅನ್ನೋದನ್ನು ಆಕೆ ಕಂಟ್ರೋಲ್ ಮಾಡ

> ## ಇತಿಹಾಸ ಬರೆವಾಗ
>
> ಅಂದು ಶ್ರಾವಣದ ಸಂಜೆಯಲ್ಲಿ ಈ
> ಕಲ್ಲು ಬಂಡೆಯ ಮೇಲೆ ಕುಳಿತು
> ನಿನ್ನ ಸೌಂದರ್ಯದ ಬಗ್ಗೆ ಕಾವ್ಯ ಬರೆದಾಗ
> ಹೃದಯ ತುಂಬಿ-ಕಣ್ಣು ತುಂಬಿ
> ಬಂದಿದ್ದವು
> ಇಂದು ಅದೇ ಕಲ್ಲು ಬಂಡೆಯ
> ಮೇಲೆ ಕುಳಿತು
> ನಿನ್ನ ಇತಿಹಾಸ ಬರೆಯುವಾಗಲೂ ಕಣ್ಣು
> ತುಂಬಿ ಬಂದಿವೆ ವ್ಯತ್ಯಾಸ ಇಷ್ಟೆ—
> ಅಂದಿನ ಕಣ್ಣೀರಿನಲ್ಲಿ ತಂಪಿತ್ತು ಇಂದಿನ
> ಕಣ್ಣೀರಲಿ-ಬಿಸಿಯಿದೆ.
>
> —ಗವೀಶ ಹಿರೇಮಠ

ತಾಳ. ಇದಕ್ಕೇನಂತೀರಿ ?" ಅವನು ಕಹಿಯಾಗಿ ನಕ್ಕ.

"ನಾ ಹೇಳತೀನಿ ಆಕಿಗೆ." ನೀವು ಮನೆಗೆ ನಡೀರಿ"

ಅದೊಂದು ಬಿಟ್ಟು ಮಾತು. ನಾ ಈಗ ನಿಮಗ ಹೇಳಿದ್ದು ನೂರರಾಗಿನ ಐದು ಆಗಲಿಲ್ಲ. ಮ್ಯಾಲಾಗಿ ಸ್ನೇಹ, ಸೌಹಾರ್ದ ಅಕ್ಕರತಿ ಅಗತ್ಯ, ಪರಸ್ಪರ. ಆದರ ಇವೆಲ್ಲ ಮೂಲ ಸ್ವಭಾವದಾಗs ಬೇಕಾಗತಾವ. ಬೇವಿನ ಗಿಡಕ್ಕೆ ಬೆಲ್ಲದ ನೀರು ಹಾಕಿದರ ಬಾರೀ ಹಣ್ಣು ಆಗೂದಿಲ್ಲ."

"ಹಾಂಗಾದರ ಮುಂದ ?"

"ನಾ ಮಾತ್ರ ಬ್ಯಾರೇ ಆಗಬೇಕಂತ ಠರಾಸೇನಿ ಬೇಕಾದ್ದು ಆಗಲಿ" ಅವನು ನಿರ್ಧಾರದಿಂದ ಹೇಳಿದ.

ಅವರು ಕಣ್ಣು ಒರೆಸಿಕೊಂಡರು.

"ದಾದಾ ಸಾಹೇಬ", ಅವನ ದನಿ ಹಸಿಯಾಗಿತ್ತು.

"ನನ್ನ ತಿಳಕೊಳಲಿಕ್ಕೆ ಪ್ರಯತ್ನ ಮಾಡರಿ. ನಿಮ್ಮ ಬಗ್ಗೆ ನನ್ನ ಆದರ ಎಳ್ಳಷ್ಟೂ ಕಡಿಮಿ ಆಗಿಲ್ಲ. ಆದರ ಈ ಘೋಗ ಈ ಸಂಸಾರ ನನಗ ಹೇಸಿಗೆ ಇಟ್ಟsದ. ಇನ್ನೇನು ಹೇಳಲಿ ?" ಅವನ ಕಣ್ಣಲ್ಲೂ ನೀರೂರಿದವು.

"ನನ್ನ ಹೆಂಡತಿ, ನನ್ನ ಮಗಳು, ನನ್ನ ಸಂಸಾರ. ನನ್ನದೊಂದು ಸಣ್ಣ ಜಗತ್ತು. ನನಗ ಬ್ಯಾಡಾಗೇದ ಅಂತೀರೇನು? ಆದರ ನನ್ನ ಮನೀನs ನನಗೆ ಜೇಲಾದರ ನಾ ಯಾಕ ಅಲ್ಲಿ ಇರಬೇಕು ?"

ದಾದಾ ಮಾತಾಡಲಿಲ್ಲ. ತುಸು ತಡೆದು ಅನಂತನೇ ಅಂದ. "ನನ್ನ ನಿರ್ಣಯ ತಪ್ಪೇದಂತ ನನಗೂ ಅನಸೂದಿಲ್ಲ. ಶಾರೀರಿಕ ಪಾತಳಿಮ್ಯಾಲೆ ಇನ್ನೊಬ್ಬರ ದೃಷ್ಟಿಯಿಂದ, ನಾ ಭಾಳ ಸುಖಿ ಇರಬೇಕಾಗಿತ್ತು. ಆದರ ದೇವರು ನನಗೊಂದು ಮಾನಸಿಕ ಪಾತಳಿ ಕೊಟ್ಟಾನ. ಹಿಂಗಾಗಿ ಸುಮತಿ ಸಂಗತೀ ಸಂಸಾರ ಅಂದರ ನನಗ ಭಂಗಾರದ ಪಂಜರ ಆಗೇದ."

"ಯಾವದೂ ನಿರ್ಣಯ ಅವಸರದಂತೆ ತೊಗೋಬ್ಯಾಡರಿ. ಇಷ್ಟs ನಾ ನಿಮಗ ಹೇಳೂದು. ಜಗತ್ತಿನ್ಯಾಗಿನ ಯಾವ



ಎರಡು ವ್ಯಕ್ತಿ ಸಮಾ ಇರೋದಿಲ್ಲ. ಒಂದೆ ಗಿಡದ ಒಂದು ಎಲೀ ಹಾಂಗ ಇನ್ನೊಂದು ಎಲೀ ಇರೂದಿಲ್ಲ. ಇದು ನಿಮ್ಮ ಕಾರಖಾನೆ ನೋಡರಿ. ಇಲ್ಲಿ ನೀವು ಮೈಕ್ರೋ ಮೀಟರ ಹಚ್ಚಿ ಕೊರೀತೀರಿ, ಕೆತ್ತಿತೀರಿ. ಎರಡು ವಸ್ತು ಒಂದು ಸಮಾ ಮಾಡತೀರಿ. ಆದರ ದೇವರು ಮೈಕ್ರೋ ಮೀಟರು ಇಟ್ಟಿಲ್ಲ."

"ಅಂತss ಜಗತ್ತು ಸುಂದರ ಅದ" ಅವನು ಸರಾಗವಾಗಿ ಹೇಳಿದ. 'ನಂದೂ ಅದೇ ತಕರಾರು ಅದ. ನನಗ ಯಾರೂ ಮೈಕ್ರೋ ಮೀಟರು ಹಚ್ಚಬಾರದು."

ಮಾತಿಲ್ಲದೆ ದಾದಾ ಎದ್ದರು.

o o o

ಸಂಜೆ ದಾದಾ ಮನೆಗೆ ಮರಳಿದಾಗ ಅವರ ಮುಪ್ಪು ಹತ್ತು ವರ್ಷ ಬೆಳೆದಂತೆ ಅನಿಸೀತು ಸುಜಾತಾಗೆ. ಏನಾಯಿತೆಂದು ಆಕೆ ಕೇಳಲಿಲ್ಲ.

ಅವರು ತಾವಾಗಿ ಸುಮತಿಗೆ ಹೇಳಿದರು. 'ಅಂತೂ ಏನೂ ಕೇಳಲಿಕ್ಕೆ ತಯಾರಿಲ್ಲ.'

"ಅಂತಾನೇನು ?" ಅತ್ತೆ ಕೇಳಿದರು.

"ಬ್ಯಾರೆ ಆಗೋಣ ಅಂತಾನ"

ಯಾವ ಕಲ್ಪನೆಯೂ ಇಲ್ಲದ ಅತ್ತೆಗೆ ಕುಕ್ಕರಿಸಿತು.

"ಹಿಂಗ ಹ್ಯಾಂಗ ಆತss ಸುಮತಿ" ಅವರು ದನಿತೆಗೆದರು.

"ಅಳಲಿಕ್ಕೆ ಏನಾತು ಈಗ ?" ದಾದಾ ಜಬರಿಸಿದರು.

"ನನ್ನ ಗಂಡ ಸತ್ತು ನಾ ರಂಡಿಯಾದೆ ಇಕೀ ಗಂಡ ಇದ್ದು ಇಕೀ–" ಅತ್ತೆ ಸೆರಗಿನಿಂದ ಕಣ್ಣೊರೆಸಿಕೊಂಡರು. ಅವರು ಅಳುವದನ್ನು ನೋಡಿ ಚಿತ್ರಾ ಕೂಡ ಅಳತೊಡಗಿದಳು. ಸುಜಾತಾಗೆ ಅಷ್ಟೇ ನಿಮಿತ್ತ ಸಾಕಾಯಿತು. ಆಕೆ ಚಿತ್ರಾಳನ್ನು ಎತ್ತಿಕೊಂಡು ಹೊರಗೆ ಹೋದಳು. 'ಖಜೂರ ತೊಗೊಂಡು ಬರೋಣ ಬಾ."

ಸುಮತಿ ಕುರ್ಚಿಯ ಮೇಲೆ ಕುಳಿತು ಬಿಕ್ಕಿದಳು. ಅವನ ಸ್ವಭಾವ ಹೇಗೇ ಇರಲಿ, ಎಂತೇ ಇರಲಿ ಜಗತ್ತು ತನ್ನ ಕಡೆಗೆ ಬೆರಳು ಮಾಡುವದು "ಇವಳಿಗೆ ತನ್ನ



ಗಂಡನನ್ನು ಕೈಯಲ್ಲಿ ಇಟ್ಟುಕೊಳ್ಳುವದು ಆಗಲಿಲ್ಲ. ಅಥವಾ ಇವಳಲ್ಲೇ ಏನಾದರೂ ಕೊಂಕು ಇರಬೇಕು. ತಾನು ಅವನಿಗಾಗಿ ಎಷ್ಟೆಲ್ಲ ಮಾಡಿದೆ. ಎಷ್ಟೆಲ್ಲ ಸಹಿಸಿಕೊಂಡೆ."

ಅಂಗಡಿಯಲ್ಲಿ ಖಜೂರು ಮುಗಿದಿತ್ತು. ಚಿತ್ರಾಳಿಗೆ ಅಡಕೆ ಬೇಟು ಕೊಡಿಸಿ ಸುಜಾತಾ ಅವಳ ಕೈ ಹಿಡಿದು ಹಾಗೆಯೇ ರಾಮಲಿಂಗಖಂಡ ಗಲ್ಲಿಯಲ್ಲಿ • ನಡೆಯ ತೊಡಗಿದಳು.

ವಿವಾಹ ವಿಚ್ಛೇದ !,ಕಲ್ಪನೆಗೂ ನಿಲುಕಲಾರದ್ದು. ಮನೆ ಬಿಟ್ಟು ಹೋದದ್ದು, ನಾಲ್ಕಾರು ದಿನ, ನಾಲ್ಕಾರು ವಾರಗಳ ಮಟ್ಟಿಗೆ ಇರಬಹುದು ಎಂದೆನಿಸಿತ್ತು ಆಕೆಗೆ ಮೊದಲು. ಅವನ ಜತೆ ಮಾತಾಡಿದಾಗ ಗಾಯ ಆಳವಾಗಿದೆಯೆಂಬುದೂ ಖಚಿತವಾಗಿತ್ತು. ಆದರೆ ಇದು ಮಾಯದಂಥ ಗಾಯವೇ?....

ಸುಮತಿಯೊಡನೆ ಅವನ ಸ್ವಭಾವ ಹೊಂದಲಿಲ್ಲ. ಸರಿಎಂದುಇಟ್ಟುಕೊಳ್ಳೋಣ ಆದರೆ ತನ್ನೊಡನೆ ತಿರುಗಾಡಿ ಸಿನೇಮಾ ಹಾಟೆಲ ಇದೆಲ್ಲದರ ಅರ್ಥವೇನು ? ಕಾಲೇಜಿಗೆ ಫೋನ್, ಅಪಾಯಿಂಟ್ ಮೆಂಟ್ "ನೀ ಏನು ತೊಗೋತಿ ?" "ವಿಷ!" "ಹಾಂಗಾರ ಎರಡು ವಿಷಾ ತೊಗೊಂಡು ಬಾ" ಆವಳಿಗೆ ಮೈ ಜುಮ್ಮೆಂದಿತು....

ತಾನು ಅವನಿಗೆ ಬೆಟ್ಟಿಯಾಗಲಿಕ್ಕೆ ಹೋದದ್ದು ಅವರ ಸಂಸಾರ ಸರಿಹೋಗಲಿಕ್ಕೆ. ತನ್ನಿಂದಾಗಿ ಅವನ ವಿಚ್ಛೇದನ ವಿಚಾರಗಳು ಹರಳುಗಟ್ಟಿದವೇನು ? ಅವಳ ಮೈ ಗಡ ಗಡ ನಡುಗಿತು ...

"ತಾನು ಮಹಾ ಅಪರಾಧಿ ತನ್ನಿಂದಾಗಿ ಅಕ್ಕನ ಸಂಸಾರದ ಮೇಲೆ ಕೊಳ್ಳಿ ಇಟ್ಟಂತಾಯಿತು. ಆಕೆಯ ಕಣ್ಣು ತುಂಬಿಬಂದವು. ದಾರಿ ಕಾಣದಾದಾಗ ಕೈವಸ್ತ್ರದಿಂದ ಕಣ್ಣೊರೆಸಬೇಕಾಯಿತು. 'ಮಾವಶೀ, ನೀ ಅಳತೀ ?' ಚಿತ್ರಾ ಕೇಳಿದಳು.

"ಇಲ್ಲಲ್ಲ ? ಕಣ್ಣಾಗ ಏನೋ ಬಿದ್ದss" ಹೇಳು ಹೇಳುತ್ತಿದ್ದಂತೆ ಅಳು ಒತ್ತರಿಸಿ ಬಂತು. ಆಕೆ ವಸ್ತ್ರದಿಂದ ಮೋರೆ ಮುಚ್ಚಿಕೊಂಡಳು.

"ಕತ್ತಲಾತು, ಎಷ್ಟು ಹೊತ್ತು ಹೋಗಿದ್ದಿ ಚಿತ್ರಾ ?" ಸುಮತಿ ಆಕ್ಷೇಪಿಸಿದಳು.

"ಸಣ್ಣ ಹುಡುಗರು ಬಿಸ್ಕೀಟು, ಚಾಕಲೇಟು ತಿನ್ನಬಾರದು ಖಜೂರು ಕೊಬ್ಬರಿ ತಿನ್ನಬೇಕು ಅಂತ ನೀ ಹೇಳಿದ್ದಿ"

"ಹೌದು"

"ಅಂಗಡ್ಯಾಗ ಖಜೂರ ಇದ್ದಿದ್ದಿಲ್ಲ"

"ಹಾಂಗss ಬರಬೇಕಾಗಿತ್ತು"

"ಮಾವಶೀ ಅಡಿಕೆಪುಡಿ ಕೊಡಿಸಿದಳು"

"ಹಾಂಗ ಅಡಿಕೇನೂ ತಿನಬಾರದು ಹುಡಗೋರು"

"ನೋಡು, ಮಾವಶೀಗೆ ಇಷ್ಟು ಸೈರ ಕಿಳ್ಯೂದಿಲ್ಲ"

"ತಡಾಯಾಕ ಆತು, ಅಂತ ನಾ ಕೇಳಿದೆ"

"ನಾವು ಹಿಂಗss ಹೋಗಲಿಕ್ಕೆ ಹತ್ತಿದ್ವಿ. ಮಾವಶಿ ಒಮ್ಮಿಂದೊಮ್ಮೆ ಅಳಲಿಕ್ಕೆ ಸುರು ಮಾಡಿದ್ಲು. ಅಲ್ಲಿ ಒಂದು ಅಂಗಡಿ ಅದ. ಅದರ ಕಟ್ಟೆಮ್ಯಾಲೆ ಕೂತು ಮಾವಶೀ ಎಷ್ಟೊತ್ತು ಅತ್ತಳು !"

ಸುಜಾತಾ ಸುಮತಿಯ ಕಣ್ಣು ತಪ್ಪಿಸಿದಳು.

೪

ಮಧ್ಯಾಹ್ನ ನಾಲ್ಕು ನಾಲ್ಕೂವರೆಯಾಗಿರಬಹುದು. ಒಬ್ಬ ಹುಡುಗ ಬಂದು

ಬಾಗಿಲು ಬಾರಿಸಿದ. ಸುಜಾತಾ ಬಾಗಿಲು ತೆರೆದಳು.

"ಸುಜಾತಾ ನೀವs ಏನ್ರಿ ?" ಅವನು ಕೇಳಿ ಉತ್ತರಕ್ಕಾಗಿ ಕಾಯದೆ. ಭಡ ಭಡ ಹೇಳಿಬಿಟ್ಟ.

"ನಮ್ಮ ದವಾಖಾನ್ಯಾಗ ನಿಮಗೆ ಅನಂತ ಅವರ ಫೋನ್ ಬಂದದರಿ. ನೀವು ಮನ್ಯಾಗ ಇದ್ದಿದ್ದಿಲ್ಲಾಂದರ ಅವರs ಸಂಜೀನ್ಯಾಗ ಮನೀಗೆ ಬರತಾರಂತರಿ." ಅವನು ಬದಿಯ ಡಾ|| ಉಪಾಧ್ಯೆಯವರ ದವಾಖಾನೆಯಲ್ಲಿಯ ಹುಡುಗ. ತಾನು ಮನೆಯಲ್ಲಿ ಇಲ್ಲವೆಂದು ಹೇಳಿದರೆ ಅದರ ಪರಿಣಾಮವೇನಾದೀತೆಂದೂ ಅನಂತ ತಿಳಿಸಿಬಿಟ್ಟಿದ್ದಾನೆ !

ಹದಿನೈದು ದಿವಸ ಕಾಲೇಜು ತಪ್ಪಿಸಿ ಆಯಿತು. ಸಂಜೆಗೆ ಮನೆಬಿಟ್ಟು ಹೊರಬೀಳುವದಾದರೂ ಜೀವ ಮುಷ್ಟಿಯಲ್ಲಿ ಹಿಡಿದುಕೊಂಡೇ ಹೊರಗೆ ಬರಬೇಕು. ಹಾದಿಯಲ್ಲಿ ತಂಬ ಮಾತನಾಡಿಸುತ್ತ ನಿಂತರೆ, ಅದನ್ನು ನೋಡಿದವರು ಮನೆಯಲ್ಲಿ ಹೇಳಿದರೆ ತನ್ನ ಗತಿಯೇನು? ಆಕೆ ಮರು ಮಾತಿಲ್ಲದೆ ಕಾಲಲ್ಲಿ ಚಪ್ಪಲಿ ಸರಿಸಿಕೊಂಡು ದಾವಖಾನೆಗೆ ಬಂದಳು. ಡಾಕ್ಟರರಿನ್ನೂ ಬಂದಿರಲಿಲ್ಲ. "ಹಲೋ ಅನಂತ ರಾವ್."

"ನಿಮ್ಮ ದನಿ ಕೇಳಲಿಕ್ಕೆ ಸಿಕ್ಕಿತು. ನಶೀಬ. ಈವತ್ತು ಸಂಜೀನ್ಯಾಗ ಆರು ಹದಿನೈದಕ್ಕ ಸರಿಯಾಗಿ ನಾನು ಗ್ಲೋಬ್ ಟಾಕೀಜ ಎದುರಿಗೆ ನಿಂತಿರತೀನಿ. ನೀ ಅಲ್ಲಿ ಬರಬೇಕು. ಬರಲಿಲ್ಲಾಂದ್ರ ಆರೂವರಿಗೆ ಸರಳ ಮನೀಗೆ ಬರತೀನಿ ಮತ್ತ ನಮ್ಮ ಪ್ರಕರಣ–ಕೂಡಿ ಸಿನೇಮಾ ನೋಡಿದ್ದು, ತಿರಿಗಾಡಿದ್ದು ಹಾಟೆಲ್‌ಗೆ ಹೋದದ್ದು ಎಲ್ಲಾ ಹೇಳಿಬಿಡತೇನಿ !"

"ಅಯ್ಯೋ !"

"ಅಯ್ಯೋ ಇಲ್ಲ, ಅವ್ವಾ ಇಲ್ಲ. ಸಂಜೀನ್ಯಾಗ ಆರು ಹದಿನೈದು ಗ್ಲೋಬ್ ಟಾಕೀಜ ಎದುರು" ಫೋನ್ ಕಟ್ ಆಯಿತು. ಸುಜಾತಾಳ ಎದೆ ಡವಡವಿಸಿತು.

ತಾನು ಕಾಲೇಜಿಗೆ ಹೋದರೆ ಅವನು ಜಿಟ್ಟಿಯಾಗಬಹುದೆನ್ನಿಸಿತ್ತು. ಒಮ್ಮೊಮ್ಮೆ ಹೋಗಬೇಕೆಂದೂ ಜೀವ ಎಳೆದಿತ್ತು. ಆದರೆ ಹೋದ ಬಳಿಕ ಅವನು ಬರವಿದ್ದರೆ ನಿರಾಸೆಯೆನಿಸುತ್ತದೆ. ಅದಕ್ಕಿಂತ ಅವನಿಗೇ ಏನನ್ನಿಸುತ್ತದೆಯೋ ನೋಡೋಣ.

"ಹಂಗಾರ ಎರಡು ವಿಷ ತೊಗೊಂಡು ಬಾ" ಎಂದು ಅವನು ಅಂದು ಹಾಟೇಲಿನಲ್ಲಿ ಹೇಳಿದ್ದು ಅವಳಿಗೆ ಬಹಳ ಹಿಡಿಸಿತ್ತು. ಇನ್ನಾರಾದರೂ ಆಗಿದ್ದರೆ, 'ಇವರಿಗೊಂದು ವಿಷ ನನಗೊಂದು ಚಾ ತೊಗೊಂಡು ಬಾ' ಅನ್ನಬಹುದಾಗಿತ್ತು. ತನ್ನೊಡನೆ ಅವನಿಗೂ ವಿಷ ! ಥೇಟ್ ರೋಮಿಯೋ ಜ್ಯೂಲಿಯೆಟ್ ತರಹ ! ಇಂತಹ ರಸಿಕನ ಜತೆ ಬಾಳ್ವೆ ಮಾಡಲು ಪೂರ್ವಜನ್ಮ–ಹಾಗೇನಾದರೂ ಇದ್ದರೆ–ಅದರ ಪುಣ್ಯ ಬೇಕು. ಸುಮತಿಗೆ ಇಂತಹ ಗಂಡ ಸಿಕ್ಕಿದ್ದು ಮಂಗನ ಕೈಯಲ್ಲಿ ಮಾಣಿಕ್ಯದಂತೆ. ಇವಳಿಗೆ ಅವನ ಬೆಲೆಯೇ ಇಲ್ಲ !

ಆಗ ಅರ್ಧ ತಾಸು ಕನ್ನಡಿಯ ಮುಂದೆ ಕುಳಿತು ಸಿಂಗರಿಸಿಕೊಂಡಳು. ಇಷ್ಟು ದಿವಸ ಇದಾವುದೂ ಬೇಕೆನಿಸಿರಲಿಲ್ಲ. ಅಥವಾ ಇಷ್ಟು ಬೇಕೆನಿಸಿರಲಿಲ್ಲ. ಯಾವ ಸೀರೆ ಉಡಲಿ ? ಹೋಗುವಾಗ ಅಥವಾ ತಿರುಗಿ ಬರುವಾಗ ಸುಮತಿ ನೋಡಿಯೇ ನೋಡುತ್ತಾಳೆ. ಅವಳಿಗೂ ಕಣ್ಣು ಕೀಸರಾಗಿರಬಾರದು. ಅಂತೆಯೇ ಕೈಯಲ್ಲಿ ತೆಗೆದುಕೊಂಡ ಇಂಟಿಮೇಟ್ ಸೆಂಟಿನ ಬಾಟಲಿ ಮುಚ್ಚಳ ತೆಗೆಯದೆ ಆಕೆ ಹಾಗೆಯೇ ಕಪಾಟಿನಲ್ಲಿಟ್ಟಳು. ಸುಮತಿ ಹೀಗೆ ಎಂದಾದರೂ ಅತ್ತರು ಸೆಂಟು ಬಳಸಿದ್ದಳೇ ? ಆಕೆಯ ಮದುವೆಯಲ್ಲಿ ಇನ್ನಾರಾದರೂ ಆಕೆಯ ಬಟ್ಟೆಗೆ ಒರೆಸಿರಬಹುದು ಅಷ್ಟೇ.

ಸೀರೆ ಅದೋ ಇದೋ ಎನ್ನುತ್ತ ಸುಜಾತಾ ಮತ್ತೆ ಇಪ್ಪತ್ತು ಮಿನಿಟು ಹೊತ್ತು ಕಳೆದಳು. ಎಷ್ಟಾದರೂ ಪಡಸಾಲೆಯಲ್ಲಿಯ ಗಡಿಯಾರ ಆರು ಹೊಡೆಯಲೊಲ್ಲದು.

ಅಂದ ಹಾಗೆ ತಾನು ಹೋಗದೇ ಇದ್ದರೆ ಏನಾದೀತು ? ಅನಂತ ತಾನು ಹೆದರಿಸಿದ ಹಾಗೆ ಬಂದರೂ ಬಂದರೇ ಆಕೆ ಚಿತ್ರ ಕಲ್ಪಿಸಿಕೊಂಡಳು. ಪಡಸಾಲೆಯಲ್ಲಿ ದಾದಾ ಕುಳಿತಿದ್ದಾರೆ. ಇನ್ನೊಂದ ಕಡೆ ಸೋಫಾದ ಮೇಲೆ ಸುಮತಿ. ಬಂದವರು ತನಗೆ ಏನೆನ್ನಬಹುದು ?

"ಏಯ್. ನೀ ಇನ್ನೂ ತಯಾರಾಗಿಲ್ಲೇನು ? ನಡಿ" ಎನ್ನಬಹುದೇ ? ಆಕೆಯ ಮೈತುಂಬೆಲ್ಲ ರೋಮಾಂಚದ ಹೂ ಅರಳಿದವು. ಅವರು ಅಷ್ಟೇ ಅನ್ನುವ ಪೈಕಿ, ಹೆಂಡತಿ ಕಡೆ, ಮಾವನ ಕಡೆ ನೋಡದೆ. ಆಕೆ ಗದಗದ ನಡುಗಿದಳು. ಹಾಗೆ ಎಂದಾದರೂ ಆದೀತೇ ?

ತಿಳಿ ನೀಲಿ ಬಣ್ಣದ ರುಬಿಯಾ ಸೀರೆ ಬಿಳಿಯ ಬ್ಲಾವುಜುಗಳಲ್ಲಿ, ಆಕೆ ಮತ್ತೆ ನಿಲುವುಗನ್ನಡಿಯ ಮುಂದೆ ನಿಂತಳು. ಊಂ ಹೂಂ ಎನಿಸಿತು ಆದರೂ ಇಂದು ಇಷ್ಟೇ ಸಾಕು ಗಡಿಯಾರ ಆರು ಗಂಟೆ ಬಾರಿಸಿತು. ಮನೆಯಿಂದ ಗ್ಲೋಬ್ ಟಾಕೀಜು ಐದು ಮಿನೀಟಿನ ಹಾದಿ ಮತ್ತೆ ಒಂದಿಷ್ಟು ಪೌಡರು ಮತ್ತೆ ಒಂದಿಷ್ಟು ಮುಂದಲೆಗೆ ಹಣೆಗೆ.... ಆಕೆ ಹೊರಬೀಳುತ್ತಿದ್ದಂತೆ ಸುಮತಿ ಬ್ಯಾಂಕಿನಿಂದ ಬಂದಳು. "ಗೆಳತೀ ಮನಿಗೆ ಹೋಗಿ ಬರತೀನಿ" ಸುಜಾತಾ ತಾನಾಗಿ ಹೇಳಿದಳು. "ಚಿತ್ರಾ ನೆರೆಮನೆಗೆ ಆಡಲಿಕ್ಕೆ ಹೋಗಿರಬೇಕು."

ರಸ್ತೆಗೆ ಬಂದಾಗ ಕೈಗಡಿಯಾರ ಆರೂ

ಸುಮತಿಗೆ ಇಂಥಾ ಗಂಡ ಸಿಕ್ಕಿದ್ದು ಮಂಗನ ಕೈಗೆ ಮಾಣಿಕ್ಯ ಸಿಕ್ಕಂತಾಗಿದೆ, ಇವಳಿಗೆ ಅವನ ಬೆಲೆಯೇ ಇಲ್ಲ...

ಐಮು ತೋರಿಸುತ್ತಿತ್ತು. ಇನ್ನು ಹತ್ತು ನಿಮಿಷಗಳಲ್ಲಿ ಹೋಗಲು ಆದೀತೇ? ತಡವಾದರೆ ಅವರು ಇನ್ನೊಂದು ದಾರಿಯಿಂದ ಮನೆಗೆ ಹೋದರೂ ಹೋದರೇ. ಯಾವ ದಾರಿಯಿಂದ ಹೋಗಬಹುದು? ಫಿಶ್ ಮಾರ್ಕೆಟ್ ಎದುರಿಗಿನ ರಸ್ತೆಯಿಂದಲೇ, ಅಥವಾ ಅಂಬಾಭವನದ ಎದುರಿನ ರಸ್ತೆಯಿಂದಲೇ? ಆಕೆ ಅವಸರದಿಂದ ಹೆಜ್ಜೆ ಹಾಕಿದಳು. ಅವರೇ ಒಂದು ಹೊತ್ತು ಬಂದಿರದಿದ್ದರೆ ಏನು ಮಾಡಬೇಕು? ತಾನು ಅವರನ್ನು ಇಷ್ಟು ದಿವಸ ಕಾಯಿಸಿದ್ದೇ ತಪ್ಪು....

ಅವನು ಆಕೆಯನ್ನು ನೋಡಿ ನಕ್ಕಂತೆ ಮಾಡಿದ. ಒಂದಿಷ್ಟು ಸೊರಗಿದ್ದಾರೆನ್ನಿಸಿತು ಅವಳಿಗೆ.

"ಎಷ್ಟು ಸೊರಗೀದಿ ಏನು ಕತಿ? ಮೈಯಾಗ ಆರಾಮ ಇದ್ದಿದ್ದಿಲ್ಲೇನು?" ಅವನು ಸಲಿಗೆಯಿಂದ ಕೇಳಿದ. ಅವಳಿಗೆ ಏನು ಮಾತಾಡಬೇಕೆಂಬುದು ಹೊಳೆಯಲಿಲ್ಲ.

ದೂರವಿಟ್ಟಿದ್ದ ಸ್ಕೂಟರ ಬಳಿ ಹೋಗಿ ಅವನು ಕಿಕ್ ಹೊಡೆದು ಸ್ಟಾರ್ಟ್ ಮಾಡಿದ. ಆಕೆ ಮಾತಿಲ್ಲದೆ ಏರಿ ಕುಳಿತಳು. 'ಎಲ್ಲಿ?' ಅವನೇ ಕೇಳಿದ.

"ಕ್ಯಾಂಪಿನಾಗ ಹೋಗೋಣ." 'ಮಿಲಿಟರಿ ಏರಿಯಾ' ಅವರು ಅಷ್ಟೇನು ದೂರವಿಲ್ಲದ ಬಯಲಿನವರೆಗೆ ಬಂದು ಸ್ಕೂಟರು ಬಿಟ್ಟು ನೆಲಕ್ಕೆ ಕುಳಿತರು.

"ಇದೇನು ನಡಿಸೀರಿ?" ಆಕೆ ಬೇಕೆಂದೇ ಬಿರುಸಾಗಿ ಕೇಳಿದಳು.

"ಏನು?"

"ನನಗ ಫೋನ್ ಮ್ಯಾಲೆ ಅಂಜಿಕಿ ಹಾಕತೀರಿ-"

"ನಾ ಎಲ್ಲಿ ಅಂಜಿಕಿ ಹಾಕಿದೆ? ನೀನು ನನ್ನ ಸಂಗತಿ ಸಿನೇಮಾಕ್ಕೆ ಬಂದದ್ದು ಸುಳ್ಳೇ? ಹೋಟೆಲ್ಲಿಗೆ ಬಂದದ್ದು ಸುಳ್ಳೇ? ನಾವು ಮಾಳಮಾರುತಿ ಹಿಂಡಲಗಿ ಗಣಪತಿ ಅಂತಾ ತಿರಿಗಾಡಿದ್ದು ಸುಳ್ಳೇ?"

"ನೀವು ನನ್ನ ಬ್ಲ್ಯಾಕ್‌ಮೇಲ್ ಮಾಡತಿದ್ದೀರಿ!"

"ನಿನ್ನ ಬ್ಲ್ಯಾಕ್‌ಮೇಲ್ ಮಾಡಿದರ



ನನಗೇನು ಸಿಗೋದು ಅದ?"

"ನಾನು" ಅನ್ನಬೇಕೆನಿಸಿತು ಸುಜಾತಾಗೆ.

"ಮತ್ತ ಪ್ಲೀಜ್ ಬಿ ನಾರ್ಮಲ್. ನಾ ಏನು ನಿನ್ನ ತಿನ್ನೂದಿಲ್ಲ. ಛೆಟ್ಟೆಯಾಗ ಬ್ಯಾಡ ಅಂತ ಹೇಳು. ನಿನ್ನ ನೆರಳಿನ ಹಂತೀಲೆ ಹಾಯೂದಿಲ್ಲ. ಬೆಳಗಿನ ಕಾಲೇಜು ತಪ್ಪಿಸೋದು, ಸಂಜೀನಾಗ ರಾಮದೇವಗಲ್ಲಿ ಕಿರ್ಲೋಸ್ಕರ ರೋಡಿಗೆ ಹೋಗೋದು ಬಿಟ್ಟು ಮನ್ಯಾಗ ಕೂಡೋದು ಇದು ಸರೀ ಅಲ್ಲ."

"ನಿಮಗ ಹ್ಯಾಂಗ ಗೊತ್ತಾತು?" ಈ ತಿಂಗಳ ನನ್ನ ಪೆಟ್ರೋಲ್ ಬಿಲ್ಲು ಐದು ನೂರು ರೂಪಾಯಿ ಆತು."

"ನಿಮಗ ನನ್ನ ಸ್ಥಿತಿ ಅರ್ಥ ಆಗೂದಿಲ್ಲ ಮನ್ಯಾಗ ಅಕ್ಕ-ತಂದೆ ಅವರ ಮನಸ್ಸು ನೋಯಿಸಬೇಕೋ, ಅಥವಾ ನಿಮ್ಮ ಮನಸ್ಸು ಮುರೀಬೇಕೋ?"

"ನಿನಗೇನಸ್ತದ?"

"ನನಗನಸ್ತದ, ನೀವು ಸುಮತೀ ಸಂಗತಿ ಸುಖದ ಸಂಸಾರ ಮಾಡಬೇಕು."

"ನೀ ಹೇಳತೀ ಅಂತ ಸುಮತೀ ಸಂಗತಿ ಸಂಸಾರ ಆಗಬಹುದು. ಆದರ ಇದರಾಗ ಎರಡು ಜೀವದ ಬಲೀ ಕೊಡಬೇಕಾಗತ್ತದ."

"ಎರಡು?"

"ಹೌದು ಎರಡು. ಒಂದು ನಾನು. ಇನ್ನೊಂದು-"

"ಇನ್ನೊಂದು?"

"ಇನ್ನೊಂದು ನಿಂದು" ಅವನು ಅವಳ ಕೈಹಿಡಿದಾಗ ಆಕೆ ಕೊಸರಿಕೊಳ್ಳಲಿಲ್ಲ.

"ಸುಮತಿಗೇನು ಸಂಸಾರದಾಗ ನಾ ಇದ್ದರೂ ಅಷ್ಟೇ, ಬಿಟ್ಟರೂ ಅಷ್ಟೇ, ಅದರ ಅನುಭವ. ಈ ಹದಿನೈದು ಇಪ್ಪತ್ತು ದಿವಸದಾಗ ನಿನಗೂ ಬಂದಿರಬೇಕು."

"ವಿವಾಹ ವಿಚ್ಛೇದ ಮಾಡಕೋತೀನಿ ಅಂತ ನೀವು ದಾದಾಗ ಹೇಳಿದ್ದು ಅವರು ಮನ್ಯಾಗ ಹೇಳಿದಾಗ ಎಲ್ಲಾರಿಗಿಂತ

Happy Deepavali Greetings

Solution for your problems



The persons desirous of purchasing or taking possession plots and buildings under certain conditions if consulted, can give them correct opinion as to whether they can flouri or otherwise.

Many people are suffering without knowing the real cau of defects (as per "Vastu Shilpa Shastra") in the buildings a its environments.

The sufferings mentioned below also can be set right making some minor additions and alterations in the buildin and its environments.

- Frequent sickness in the house
- Difference of opinion amongst the members of the fam
- Unnecessary expenditure towards unexpected items
- Loss in the business and profession
- Prolonged unhappinness

Interested persons may contact personally for details


V. K. MUSALE

C/o. CHANDRIKA STORES

H. D. M. C. Stall No. 8, HUBLI-20. Phone : 665

ನಮ್ಮಲ್ಲಿ ಗ್ರಾಹಕರಿಗೂ ಹಾಗೂ ಹಿತೈಷಿಗಳಿಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು !

ಕಳೆದ 17 ವರ್ಷಗಳಿಂದಲೂ ಅಖಂಡವಾಗಿ
ವಿಶ್ವಾಸಾರ್ಹ ಸೇವೆ ಸಲ್ಲಿಸುತ್ತಿರುವ ಏಕಮೇವ ಸಂಸ್ಥೆ



ವೀನಸ್ ಬ್ಯಾಟರೀಜ್


ಬ್ಯಾಟರಿ ರೀ ಕಂಡೀಶನ್ ಮಾಡುವ ತಜ್ಞರು

ಪೂನಾ - ಬೆಂಗಳೂರ ರೋಡ, ಹೊಸೂರ, ಹುಬ್ಬಳ್ಳಿ - ೫೮೦ ೦೨೧.

VENUS BATTERIES

BETTER SERVICE STATION, HOSUR, HUBLI - 580 02

Phone : 63934 Resi. : 63280



ಹೆಚ್ಚು ಆತ್ತಾಕಿ ನಾನೇ."

ಉಳಿದವರು ದುಃಖದಿಂದ ಅತ್ತಿರ ಬಹುದು. ಆಗದೀ ದಾದಾ ಸಹಿತ. ಆದರ ನೀ ಅತ್ತದ್ದು ದುಃಖದಿಂದಲ್ಲ."

"ಅಂತೀರೇನು ನೀವು ?"

"ನೀನೇ ನೆನಪು ಮಾಡಿಕೋ. ಮನುಷ್ಯ ಆನಂದ ಹೆಚ್ಚು ಆದರೂ ಅನಪೇಕ್ಷಿತ ಆದರೂ ಅಳತಾನ."

ಸುಜಾತಾ ಮೆಲ್ಲಗೆ ಕೈ ಬಿಡಿಸಿಕೊಂಡಳು.

"ಖರೇ ಅಂತೀರಿ ?"

ಆಕೆ ಅವನ ಕೈ ಒತ್ತಿದಳು.

"ದಾದಾ. ನಿಮಗ ಒಂದಿಷ್ಟು ಸವಡು ಅದ ಏನು ?" ಸುಮತಿ ಕೇಳಿದಳು. ಅವರು ಚಹ ಕುಡಿದು ಮುಗಿಸುತ್ತಿದ್ದಂತೆ.

"ಬೇಕಾದಷ್ಟು" ಅವರೆಂದರು.

"ನಿಮಗ ಒಂದು ವಿಷಯ ತಿಳಿಸಬೇಕಾಗಿತ್ತು".

ಅವರು ಮಾತಾಡಲಿಲ್ಲ.

"ಸುಜಾತಾ—" ಆಕೆ ಬಿಕ್ಕಿದಳು.

"ಏನಾತು ? ಏನು ಮಾಡಿದಳು ?"

ಸುಮತಿ ಉತ್ತರಿಸಲಿಲ್ಲ. ಅವಳ ಗಂಟಲು ಉಬ್ಬಿದವು ಅವರು ಎದ್ದು ಬಂದರು. "ಬೇಟಾ ಏನಾತು ?"

ಅವಳ ಬೆನ್ನು ತಟ್ಟಿದಂತೆ ಮಾಡಿದರು. ಅವಳಿಗೆ ಅಳು ಕಟ್ಟೆಯೊಡೆಯಿತು

ಅವರಿಗೆ ನೆನಪಾಯಿತು. ಈಗ ಆ ಹುಡುಗಿ ಒಂದಿಷ್ಟು ಹುರುಪಿನಿಂದ ಓಡಾಡುತ್ತಾಳೆ. ತನ್ನೊಡನೆ ಕೂಡ ಒಂದಿಷ್ಟು ಪ್ರೌಢಳಂತೆ ಸಲಿಗೆಯಿಂದ ಮಾತಾಡುತ್ತಾಳೆ.....

ಸುಮತಿಯ ದುಃಖದ ಆವೇಗ ಕಡಿಮೆಯಾಗಲು ಹತ್ತು ನಿಮಿಷಗಳೇ ಬೇಕಾದವು.

"ನಾ ಈವತ್ತು ಆಕಿನ್ನ ಕಣ್ಣಾರೆ ನೋಡಿದೆ."

"ಎಲ್ಲಿ ?"

"ಸ್ಕೂಟರ್ ಮ್ಯಾಲೆ"

"ಸ್ಕೂಟರ್ ಮ್ಯಾಲೆ ? ಯಾರ ಸ್ಕೂಟರ್ ?"

"ಅಬೋಲಿ ಮಾಲೆ ಹಾಕಿಕೊಂಡಿದ್ದಳು"

"ಎಲ್ಲಿ ನೋಡಿದಿ ?"

"ಬ್ಯಾಂಕಿನಿಂದ ಬರುವಾಗ. ರಾಮದೇವ ಗಲ್ಲಿಯೊಳಗ"

"ಹೌದು, ಮಾಲೀ ಹುಡುಗನ ಕಡೀಂದ ಮಧ್ಯಾಹ್ನ ನಾಕು ಗಂಟೆಕ್ಕ ಅಬೋಲಿ ಹೂವಿನ ಮೂರು ಮಾಲಿ ತೊಗೊಂಡಿದ್ದಳು. ಚಿತ್ರಾ ಹಟಾ ಮಾಡಿತು ಅಂತ" ಅತ್ತೆಯವ್ರ ದನಿಗೂಡಿಸಿದರು, ತಡಮಾಡಿ.

"ಅವರಿವರು ನನಗ ಹೇಳಿದ್ದರು ಬ್ಯಾಂಕಿನಾಗ. ನಾ ಅಷ್ಟು ಕಿವಿ ಮ್ಯಾಲೆ ಹಾಕೊಂಡಿದ್ದಿಲ್ಲ."

"ಯಾರ ಸಂಗತಿ ತಿರಿಗಾಡತಾಳ ?"

"ಆದೇ ಅವರು ಹೇಳಿದ್ದಿಲ್ಲ ಅಂತ ನಾ ವಿಶೇಷ ಮಹತ್ವ ಕೊಡಲಿಲ್ಲ. ಬೆಳೆದ ಹುಡುಗಿ ಇದ್ದಾಳ. ತನ್ನ ಒಳಿತು ಕೆಟ್ಟದ್ದು ಆಕೀಗೆ ತಿಳೀತದ ಅಂತ."

ಆಕೆ ಕಣ್ಣೊರೆಸಿಕೊಂಡಳು.

"ಮದಿವೀ ವಯಸ್ಸು ಆತು ನೋಡು" ಎಂದರು ಅತ್ತೆ.

"ಖರೇ ಯಾರ ಸಂಗತಿ ತಿರುಗಾಡತಾಳಾ ?" ದಾದಾ ಅವರ ತಾಳ್ಮೆ ತಪ್ಪತೊಡಗಿತ್ತು ದನಿಯೇರಿತ್ತು.

"ದಾದಾ, ತ್ರಾಸ ಮಾಡಕೋಬ್ಯಾಡ್ರಿ."

ಅವರು ದನಿ ಇಳಿಸಿ ಕೇಳಿದರು. "ಯಾರು, ಯಾರ ಸಂಗತೀ."

"ಇವರ ಸಂಗತಿ."

"ಅಂದರ ?"

"ಇವರು, ನಿಮ್ಮ ಅಳಿಯ ಅನಂತರಾವ ಸಂಗತಿ" ಆಕೆ ಬಿಡಿ ಬಿಡಿಸಿ ಹೇಳಿದಳು. ಕುರ್ಚಿಯ ಮೇಲೆ ಕುಳಿತಿದ್ದರೂ ಅವರು ಆಧಾರಕ್ಕಾಗಿ ಅದರ ಕೈ ಬಲವಾಗಿ ಹಿಡಿದರು. ಮಗಳ ಮಾತು ಅರ್ಥವಾಗಿದ್ದರೂ "ಏನಂದೀ ?" ಎಂದರು.

"ನನಾಗ ಒಂದಿಷ್ಟು ಸಂಶಯ ಇತ್ತೀ ಇತ್ತು" ಅಂದರು ಅತ್ತೆ. "ನೀ ಬಂದೆಯಲ್ಲ. ಆದೇ ದಿವಸ ಮಧ್ಯಾಹ್ನ ಅನಂತರಾವ ಮನೀಗೆ ಬಂದಿದ್ದರು. ಸಂಪಾಗಿ ಆಕಿ ಸಂಗತಿ ಹರಟಿ ಹೊಡದು ಚಹಾ ಕುಡಿದು ಹೋದರು. ದಾದಾ ಬರೂತನಕಾ ಕೂಡ್ರಿ ಅಂತಾ ಆಕೆ ಅಂದರ, ಅವರ ಕಡೆ ನಂದೇನು ಕೆಲಸ, ಅಂದರು."

"ಮತ್ತ ನೀ ನನಗ ಹೇಳಲೇ ಇಲ್ಲ." ದಾದಾ ಆಕ್ಷೇಪಿಸಿದರು.

"ಆದs ಇಕಿ ಬಂದಳು. ಆಕೀ ಕಲ್ಯೋದು ನಡದಿತ್ತು. ಅವರಾಗೂ ನಾ ಹೇಳಬೇಕೂಂತ ಬಾಯಿ ತೆಗದರ ಈ ಮಹಾಮಾಯಿ ನನ್ನ ಕೈ ಒತ್ತಿ ಸುಮ್ನ ಕೂಡರಿ ಅಂದಳು."


ಸುಮತಿಗೆ ಇದು ಹೊಸ ಸುದ್ದಿಯಾಯಿತು. ಅಂದರೆ ಇವರ ಸ್ನೇಹ ಎಷ್ಟು ದಿವಸಗಳದ್ದು ? ಈ ಸ್ನೇಹದಿಂದಾಗಿ ತನ್ನ ಗಂಡ ತನ್ನನ್ನು ಬಿಟ್ಟಿರಬೇಕೇನು ?

"ನಡುವ ಒಂದು ದಿವಸ ಆ ದವಾಖಾನ್ಯಾಗಿನ ಹುಡುಗ ಬಂದಿತ್ತು. ನಿಮಗ ಫೋನ್ ಬಂದದ ಅಂತ ಸುಜಾತಾಗ ಹೇಳಿತು. ನೀವು ಬರದಿದ್ದರ ಅನಂತರಾವ ಅವರs ಸಂಜೀನ್ಯಾಗ ಮನೀಗ ಬರತಾರ ಅಂತಾ ಹೇಳಿತು."

"ಏನೋ, ಏನೋ ?" ಸುಮತಿ ಉಸಿರು ಹಾಕಿದಳು ಅತ್ತೆಯ ಮಾತಿಗೆ.

"ಮನ್ಯಾಗ ಇಷ್ಟೆಲ್ಲ ನಡದಾಗ ನೀವು ಯಾರೂ ನನಗ ಒಂದು ಮಾತು ಹೇಳಬಾರದು ?" ದಾದಾ ಅವರ ದನಿ ಸೋತಿತ್ತು. ಇವರ ಮೇಲೆ ಸಿಟ್ಟಾಗಿ ಏನು ಪ್ರಯೋಜನ ? ತಾಯಿಯಿಲ್ಲದ ತಬ್ಬಲಿಯೆಂದು ಸಡಿಲು ಬಿಟ್ಟದ್ದು ತಮಗೇ ಮುಳುವಾಯಿತು....ಆಕೆಯೇನು ಸಣ್ಣವಳಲ್ಲ. ಬಿ.ಎಸ್‌ಸಿ ಮುಗಿಸಿ ಎಂ.ಎಸ್‌ಸಿ ಮೂರನೆಯ ವರ್ಷದಲ್ಲಿದ್ದಾಳೆ. ತನ್ನ ಒಳಿತು ಕೆಡಕು ಆಕೆಗೆ ತಿಳಿಯುತ್ತದೆ. ಸಿನೇಮಾ, ನಾಟಕದಿಂದಾಗಿ ಹುಡುಗರು ಪ್ರೇಮ ಗೀಮ ಏನೋ ಅನ್ನುತ್ತಾರೆ. ಇವಳು ಯಾರನ್ನೋ ಪ್ರೇಮಿಸಿ ಮದುವೆಯಾಗಲೂ ಅಡ್ಡಿಯಿಲ್ಲ. ಬ್ರಾಹ್ಮಣ–ಇತರ ಎಂದು ತಾವು ಭೇದ ಮಾಡಲಿಕ್ಕೂ ಇಲ್ಲ. ಆದರೆ ಅದೆಲ್ಲ ಬಿಟ್ಟು ತಮ್ಮ ಅಳಿಯನನ್ನು ಪುಸಲಾಯಿಸಿ–ಅವರ ತಲೆಯಲ್ಲಿ ಠಾಕ್ ಠಾಕ್ ಎಂದು ಯಾರೋ ಸುತ್ತಿಗೆಯಿಂದ ಹೊಡೆಯುತ್ತಿದ್ದಂತೆ ಎನಿಸಿತು. ಅವಳು ಬಂದಾದರೂ ಬರಲಿ.

ಅವರು ಕಾಯುತ್ತ ಕುಳಿತರು. ರೀಜ್ ಟಾಕೀಜಿನಲ್ಲಿಯ ಸಂಜೆಯ ಸಿನೇಮಾ





ಓಹ್? ನನ್ನ ಮೇಲೆ ವಿಶ್ವಾಸ ಇಲ್ವೇನು? ಒಂದೇ ಹಾಸಿಗೆಮೇಲೆ ಮಲಗಿದರೂ ಹೆಂಗಸಿನ ಮೈಗೆ ಕೈ ಹಚ್ಚದಷ್ಟು ಸಂಯಮಿ ನಾನು.............

ಮುಗಿದು ಕಲಕಲ ಬಾಯಿ ಮಾಡುತ್ತ, ಜನಜಂಗುಳಿ ಹೊರಬಿದ್ದರೂ ಈಕೆಯ ಪತ್ತೆಯಿಲ್ಲ!

ರಬ್ಬರದ ಗೊಂಬೆಯ ಕುತ್ತಿಗೆಯ ಚೆಂಡನ್ನು ಅದಗಲ್ಲಿ ಕೂಡಿಸಲು ಯತ್ನಿಸುತ್ತಿದ್ದಳು ಚಿತ್ರಾ. ತನ್ನ ತಾಯಿಗೆ ಅತು ಕೊಂಡು ಸೋಫಾದ ಮೇಲೆ ಕುಳಿತು, ಒಮ್ಮೆ ರಸ್ತೆಯ ಕಡೆಗೆ ಇನ್ನೊಮ್ಮೆ ತಂದೆಯ ಕಡೆಗೆ ನೋಡುತ್ತಿದ್ದಳು ಸುಮತಿ. ಅತ್ತೆ ಅಡಿಗೆ ಮನೆ ಕಂಡಿದ್ದರು ಅಡಿಗೆ ಊಟ ಯಾರಿಗೆ ಬಿಟ್ಟಿದೆ?

ಅಂತೂ ಸುಜಾತಾ ಬಂದಳು. ಮಾತಿಲ್ಲದೆ ಗಂಭೀರವಾಗಿ ತನ್ನ ಬರವಿಗಾಗಿಯೇ ಕುಳಿತವರನ್ನು ಅವಳು ಕ್ಷಣ ಮಾತ್ರದಲ್ಲಿ ಗುರುತಿಸಿದಾಗ ಅವಳ ಮೋರೆಯಮೇಲಿನ ಎಳೆ ನಗು ಅಳಿಸಿತು.

"ಚಪ್ಪಲು ಕಳೀಬ್ಯಾಡ" ದಾದಾ ಕುಳಿತಲ್ಲಿಂದಲೇ ಒದರಿದರು. ಆಕೆ ಕಂಬದಂತೆ ನಿಂತಳು. "ನಾವು ಕೇಳಿದ್ದು ಖರೇ ಏನು?"

ಆಕೆಗೆ ಚರ್ಚೆ ಬೇಕಿರಲಿಲ್ಲ.

"ಖರೇ" ಇಷ್ಟೇ ಹೇಳಿದಳು. ಏನೆನ್ನುವರು ತಿಳಿದುಕೊಳ್ಳುವ ಗೋಜಿಗೂ ಹೋಗದೇ.

"ಹಂಗಾರ ನೀ ಈ ಮನ್ಯಾಗ ಕಾಲು ಹಾಕ್ಬ್ಯಾಂಗಿಲ್ಲ" ದಾದಾ ರೂಕ್ಷವಾಗಿ ಹೇಳಿದರು. ದನಿ ಇಳಿದಿತ್ತು. ಸುಜಾತಾ ಒಂದು ಕ್ಷಣ– ಕ್ಷಣ ಮಾತ್ರ ಯೋಚಿಸಿದಂತೆ ಮಾಡಿದಳು. ಅಪ್ಪನ ಮೋರೆಯನ್ನೊಮ್ಮೆ ನೋಡಿ, ಅಕ್ಕನ ಮೋರೆಯನ್ನೊಮ್ಮೆ ನೋಡಿ ಬೆನ್ನು ತಿರುವಿ ಪಾವಟಿಗೆ ಇಳಿದಳು. ತಂದೆ ಮಗಳು ಅವಾಕ್ಕಾದರು. "ಮಾವಶೀ" ಎಂದು ಚಿತ್ರಾ ಕರೆದಳು, ಆಕೆ ಅಂದು ಸಂಜೆ ತನಗೆ ಮುಡಿಸಿದ ಅಬೋಲಿ ಮಾಲೆಯ ಮೇಲೆ ಕೈಯಾಡಿಸುತ್ತ. ಆ ಕರೆ ಸುಜಾತಳಿಗೆ ಕೇಳಿಸಿತೋ, ಇಲ್ಲವೋ?

o o o o

ಸುಜಾತಾ ಕೋಣೆಯ ಬಾಗಿಲು ಬಾರಿಸಿದಾಗ, ಚಿಲಕವಿಲ್ಲದಿದ್ದರೂ ತಾನೇ ಮುಂದಾಗಿ ಅನಂತ ಬಾಗಿಲು ತೆಗೆದ.

"ನೀ ಬರೋದು ಗೊತ್ತಿತ್ತು" ಅವನು ನಕ್ಕು ಹೇಳಿದ–

"ಗೊತ್ತಿತ್ತು ?"

"ಅಂದರ ಹಿಂಗ ನಿನಗ ಬರಬೇಕಾಗತದಂತ ಗೊತ್ತಿತ್ತು."

ಆಕೆಯ ಜೀವ ಅಳು ಮುಷ್ಟಿಗೆ ಬಂತು. ಕಣ್ಣು ತುಂಬಿ ಬಂದವು. ಅವನು ಅವಳ ಕೈ ಹಿಡಿದು ಕುರ್ಚಿಯ ಮೇಲೆ ಕೂಡ್ರಿಸಿದ. "ನೀರಾಗ ಬಿದ್ದ ಮ್ಯಾಲೆ ಈಸದಿದ್ದರ ಹ್ಯಾಂಗ ?" ಅವನೆಂದ.

"ನೀ ಬರತೀ, ಅಂತ ಸಿಂಗಲ್ ರೂಮ್ ಬಿಟ್ಟು ಈ ಡಬಲ್ ರೂಮು ತೊಗೊಂಡು ಇಟ್ಟು ಇಪ್ಪತ್ತು ದಿವಸ ಆದವು."

ಆಕೆ ಬಿಕ್ಕಿದಳು. "ನನಗ ಅಂಜಿಕೀನ ಬರ್ತsದ"

"ಅಂಜಿಕಿ ? ನಾ ಇರುವಾಗ ಅಂಜಿಕಿ ಯಾಕ ?"

"ಹಾಂಗ ಅಂಜಿಕಿ ಅಲ್ಲ. ನಾಲ್ಕು ಗುರುತಿನವರು, 'ಈ ಸಮಾಜ,' ಏನಂದೀತು ? ಅಂತ."

"ಅವರೇನು ಹಾಂಗೂ ಮಾತಾಡ್ತಾರ. ಹಿಂಗೂ ಮಾತಾಡ್ತಾರ. ಯಾರ ಕಡೆ ಲಕ್ಷ ಕೊಡಬಾರದು."

ಆಕೆ ಕಣ್ಣೊರಸಿಕೊಂಡು ಕೋಣೆಯನ್ನೆಲ್ಲ ಒಮ್ಮೆ ಅಳೆದಳು. ಎರಡು ಪಲಂಗ. ಅವುಗಳ ಮೇಲೆ ಡನಲೊಪಿಲ್ಲೋ. ಗಾದಿ, ತಲೆದಿಂಬು, ರಗ್ಗು, ನಡುವೆ ಡ್ರೆಸಿಂಗ್ ಟೇಬಲ್ಲು. ಒಳಗೆಯೇ ಬಚ್ಚಲು. ಸಂಡಾಸು.

"ಇಲ್ಲೇ ಇದ್ದುಬಿಡು, ಬ್ಯಾರೆ ಮನೀ ಮಾಡೋತನಕ."

"ಇಲ್ಲೆ ? ಅನಂತ, ಪ್ಲೀಜ್"

"ಓಹ್! ಯಾಕ? ನನ್ನಮ್ಯಾಲೆ ವಿಶ್ವಾಸ ಇಲ್ಲೇನು ? ಒಂದೇ ಹಾಸಿಗೆ ಮ್ಯಾಲೆ ಮಲಗಿಕೊಂಡರೂ ಹೆಂಗಸಿಗೆ ಕೈ ಹಚ್ಚದಷ್ಟು ಸಂಯಮಿ ನಾನು. ಬೇಕಾದರ ನಿಮ್ಮ ಅಕ್ಕನ್ನ ಕೇಳು."

ಅವನ ಗಂಭೀರ ಮೋರೆ ನೋಡಿ ಸುಜಾತಾಗೆ ನಗು ಬಂತು. "ಹೆಂಗಸಿಗೆ ಕೈ ಹಚ್ಚದಷ್ಟೋ ಏನು ಬರೆ ಹೆಂಡತಿಗೆ ಕೈ ಹಚ್ಚದಷ್ಟೋ ?"

"ನೀ ಫಾಜೀಲ್ ಇದ್ದೀ ?" ಅವನು ನಕ್ಕ.

"ನಿಮ್ಮ ಮ್ಯಾಲೆ ಪೂರ್ಣ ವಿಶ್ವಾಸ ಅದ ಆದರೆ ನನಗೆ ಬ್ಯಾರೆ ಖೋಲಿಬೇಕು."

"ಖಾಲಿ ಇರಲಿಕ್ಕಿಲ್ಲ."

"ಅದು ನನಗೆ ಗೊತ್ತಿಲ್ಲ."

"ಇದ್ದಿದ್ದಿಲ್ಲಂದರ ಏನು ಮಾಡೋದು?"

"ಸರಳ ಮನೀಗೆ ಹೋಗೋದು–"

ಅವಳು ಎದ್ದಳು. ಅವನು ಎದ್ದು ಅವಳನ್ನು ತಡೆದ ಒಂದು ಮಿನಿಟ ಕೂಡ್ರು". ಎಲ್ಲೋ ಒಂದು ಸಿಂಗಲ್ ರೂಮು ಖಾಲಿ ಮಾಡಿಸಲಿಕ್ಕೆ ಹದಿನೈದು ನಿಮಿಷಗಳೇ ಬೇಕಾದವು. ಅವನಿಗೆ ಸಾಕಷ್ಟು ಬೇಸರವಾಯಿತು.

"ರಾಣೀ ಸರಕಾರದವರು ಬಿಜಯಂಗೈಸಬೇಕು."

"ತಪ್ಪು ತಿಳಕೋಬ್ಯಾಡರಿ, ನಾ ಉಟ್ಟ ಸೀರೀ ಮ್ಯಾಲೆ ನಿಂತ ಕಾಲ ಮ್ಯಾಲೆ ಹೊರಬಿದ್ದು ಬಂದೇನಿ." ಆಕೆ ಆನಂದ ಎದ್ದಳು.

ದಾದಾ ಸುಜಾತಾಳನ್ನು ಹೀಗೆ ಮನೆ ಬಿಟ್ಟು ಹೊರಗೆ ಹಾಕಬಹುದೆಂದು ಮನೆಯಲ್ಲಿ ಯಾರಿಗೂ ಅನಿಸಿರಲಿಲ್ಲ. ದಾದಾ ಅವರಿಗೂ !

ಒಟ್ನಲ್ಲಿ ಪ್ರಕರಣದಿಂದಾಗಿ ಅವರ ಸ್ವ



ಉರಿದಿತ್ತೇನೋ ನಿಜ. ಆದರೆ ಅವಳನ್ನು ಕಂಡೊಡನೆ ತಾವು ಇಷ್ಟು ಸಿಟ್ಟಾಗಿ ಅವಳು ಮನೆ ಬಿಟ್ಟು ಹೋಗುವ ಪ್ರಸಂಗ ಬಂದೀತೆಂದು ಅವರು ಅಪೇಕ್ಷಿಸಿರಲಿಲ್ಲ.

ತಮಗೆ ತಿಳಿಯದಂತೆ ಪ್ರೇಮ ಪ್ರಕರಣ ನಡೆಸಿದ ತಪ್ಪು ಅವಳದು. ಅದಕ್ಕೆ ತಾವು ಸಿಟ್ಟು ಮಾಡಿದರೆ ಈ ಶಿಕ್ಷೆ ತಮಗೆ! ಹೌದು ಶಿಕ್ಷೆಯಲ್ಲದೆ ಇನ್ನೇನು?

ಊಟಕ್ಕೆ ಕುಳಿತರೆ ತುತ್ತು ಗಂಟಲ ಕೆಳಗೆ ಇಳಿಯಲಿಲ್ಲ. ಈ ಹುಡುಗಿ ಎಷ್ಟು ನಮ್ರ ನಿರಭಿಮಾನಿ, ಮಾಯಾಳು! ಕಾಲೇಜು ಟ್ರಿಪ್ಪಿಗೋ ಇನ್ನೆಲ್ಲೋ ಹೋದಾಗ ಮಾತ್ರ ಕಣ್ಣು ಮುಂದೆ ಇರಲಿಕ್ಕಿಲ್ಲ. ಇಲ್ಲದಿದ್ದರೆ ಪ್ರತಿ ರಾತ್ರಿ ತಮಗೆ ತೂಕದಿಂದ ಬಡಿಸುವಾಕೆ ಆಕೆಯೇ.

ಸುಮತಿ ಪಡಸಾಲೆಯಲ್ಲಿ ಹಾಸಿಗೆ ಹಾಕಿ ಸೊಳ್ಳೆ ಪರದೆ ಕಟ್ಟಿಕೊಟ್ಟರೂ ಅವರು ಧೇನಿಸುತ್ತ ಕುರ್ಚಿಯ ಮೇಲೆಯೇ ಕುಳಿತಿದ್ದರು.

ತಮ್ಮ ಹೆಂಡತಿ ಸತ್ತಾಗ ಏಳು ವರ್ಷದ ಹಸುಳೆ. ಎಲ್ಲರೂ ಅಳುತ್ತಾರೆ ಎಂದು ಹೆಣ ನೋಡಿ ಅತ್ತಾಕೆ. ಹಸಿರು ಯುನಿಫಾರ್ಮಿನಲ್ಲಿಯ ಸಾಲೆಯ ಹುಡುಗಿ. ತಮ್ಮ ಟೆಬಲ್ ಮೇಲಿನ ಮಸಿ ಕುಡಿಕೆ ಉರುಳಿಸಿದಾಗ ಹೆದರಿ ಮೂಲೆಯಲ್ಲಿ ಅಳುತ್ತ ಕುಳಿತಾಕೆ. ಸಾಲೆಯಲ್ಲಿ ಛತ್ರಿ ಮರೆತು ಬಂದರೂ ಹಾಗೆಯೇ. ಯುನಿಫಾರ್ಮಿನ ಆಕಾರ ಬೆಳೆದವು. ರೂಪ ಬದಲಾದವು. ಪರಕಾರ ಪೋಲಕ, ಸೀರೆ, ಮನೆಯಲ್ಲಿ ಮ್ಯಾಕ್ಸಿ ಹುಡುಗಿ ಇಂದಿಗೂ ಅಷ್ಟೇ ಎಳಸು. ತಾವು ಎಂದೂ ಆಕೆಯ ಮೇಲೆ ಕೈಮಾಡಿಲ್ಲ. ಒಂದೆರಡು ಸಲ ಹಾಗೆ ಸಿಟ್ಟು ಮಾಡಿರಬಹುದು. ಆದರೆ ಆಗ ಎಂಟೆಂಟು ದಿನ ಮಾತು ಬಿಟ್ಟ ಅಭಿಮಾನಿ ತನ್ನದು ತಪ್ಪೇನೋ ಇಲ್ಲ ಎಂದು ವಾದಿಸುವಾಕೆ.

"ದಾದಾ ಮಲಕೋತೀರಲ್ಲ."

ಸುಮತಿ ಕೇಳಿದಳು. ಕಾಲು ಗುಂಗಾಡು ಕಡಿಯುತ್ತಿದ್ದವು. ನಿರ್ವಾಹವಿಲ್ಲದೆ ದಾದಾ ಪರದೆ ಸರಿಸಿ ಅಡ್ಡಾದರು.

ಈ ಹುಡುಗಿ ಎಷ್ಟು ಬೇಗ ದೊಡ್ಡವಳಾದಳು! ದೊಡ್ಡವಳಾಗದೇ ಏನು? ಮುಂದಿನ ವರ್ಷ ಗೌನು ಹಾಕಿಕೊಂಡು ಕೇಸು ನಡೆಸುವಾಕೆ. ಆಕೆಯ ಹಲವು ಹನ್ನೆರಡು ರೂಪಗಳು ಅವರ ಕಣ್ಣು ಮುಂದೆ ಜೀಕು ತೊಟ್ಟಿಲು ಆಡಿದವು.

ಒಬ್ಬ ಹುಡುಗಿಯ ಸಂಸಾರ ಹಾಳು ಮಾಡಿದ ಈಗ ಈ ಹುಡುಗಿಯನ್ನು ಹಿಡಿದಿದ್ದಾನೆ....

ತಾನು ಅವಳೊಡನೆ ಇಷ್ಟು ಕಠೋರ ರೀತಿಯಿಂದ ವರ್ತಿಸಬಾರದಿತ್ತು. ಹೀಗೆ ಯಾಕೆ, ಏನು, ಎಂದು ಸಮಾಧಾನದಿಂದ ಕೇಳಬೇಕಾಗಿತ್ತು. ಆಕೆಯೇನು ಹಸುಗೂಸೇ?...

ಈ ರಾತ್ರಿ ಆಕೆ ಎಲ್ಲಿ ಹೋಗಿರಬಹುದು? ಯಾವುದಾದರೂ ಗೆಳತಿಯ ಮನೆಗೆ? ಅಲ್ಲಿ ಹೋದರೆ ಏನು ಹೇಳುವಾಕೆ? ಅಥವಾ ಫೇಟ್ ಆ ಮನೆ ಮುರುಕನ ಲಾಜ್‌ಗೆ ಒಬ್ಬ ಹುಡುಗಿಯ ಸಂಸಾರ ಹಾಳು ಮಾಡಿದ. ಇನ್ನು ಈ ಹುಡುಗಿಯನ್ನು ಹಿಡಿದಿದ್ದಾನೆ! ಏನಿಲ್ಲ, ನಾಳೆ ಬೆಳಿಗ್ಗೆ ಹೋಗಿ ಲಾಜ್‌ನಿಂದ ಸುಜಾತಾಳನ್ನು ಬಿಡಿಸಿ ತರುವದು ಅವನೇನಾದರೂ ನನಗೆ ಗೊತ್ತಿಲ್ಲ, ಹಾಗೆ ಹೀಗೆ ಅಂದರೆ ಪೋಲೀಸ್ ಇನ್‌ಸ್ಪೆಕ್ಟರ್‌ಗೆ ಹೇಳುವದು [illegible] ನೋಲೆಯೇ ಅವರಿಗೆ ನಿದ್ದೆ ಬಂದಿತು.

ಬೆಳಗೆ ಏಳಲು ಒಂದಿಷ್ಟು [illegible] ಸ್ನಾನಕ್ಕೆ [illegible] ನೊಡಬೊಮ್ಮ [illegible]

[illegible] ಅವನೆಂದ

[illegible]

"ಅರಾ ನಿಜತ್ತೆ"

[illegible]

ಅವರ ಜತೆಯಲ್ಲಿ [illegible] ಇದ್ದರಂತೆ.

"ಇಷ್ಟು ಲಗೂ? ಅದೆಲ್ಲಿ ಹೋದರೂ ಊರಲ್ಲೇ ಹೋಗುತ್ತೇವೆಂದರೋ [illegible] ತರಲಿಕ್ಕ ಹೇಳುವ ಇನ್ನೊಬ್ಬ ಹುಡುಗ [illegible]

❧

"ಇಲ್ಲಿ ಬಂದು ಎಂಟು ದಿವಸ ಆದವು ನೀವೇ ವಿಚಾರ ಮಾಡವಾಲ್ರಿ," ಸುಜಾತಾ ತಕರಾರು ತೆಗೆದಳು.

"ವಿಚಾರ ಯಾಕ ಮಾಡಬೇಕು ಅದೂ ನೀ ಮಗ ಳಾಗಿ ಇರುವಾಗ?"

"ನೀವು, ಗಂಡಸರು ಮಹಾ ಸ್ವಾರ್ಥಿ" ಆಕೆ ದೂರ ಸರಿದಳು.

"ನಾ ಸ್ವಾರ್ಥಿನೋ, ಅಥವಾ ಎಲ್ಲಾ ಗಂಡಸರೂ ಸ್ವಾರ್ಥಿಗಳೋ?"

"ನನ್ನ ಶಬ್ದದಾಗ ಹಿಡಿಬ್ಯಾಡ್ರಿ. ನನಗ ಬಾಕಿ ಯಾರ ಅನುಭವ ಇಲ್ಲ ನೀವು ಸ್ವಾರ್ಥಿ ಅನ್ನೋದು ಮಾತ್ರ ಈಗ ತಿಳೀತು."

ಎಂ. ಭೀಮಸೇನಪ್ಪ ಆ್ಯಂಡ್ ಬ್ರದರ್ಸ್

ಗೋದ್ರೇಜ್ ಹೋಲ್‌ಸೇಲ್ ಡೀಲರ್

ಸ್ಟೇಷನ್ ರೋಡ್, ಹುಬ್ಬಳ್ಳಿ. ಫೋನ್ : ನಂ. 63747



ಶಾಖೆಗಳು :

ಕರ್ನಾಟಕದಲ್ಲಿ ಧಾರವಾಡ, ಬೆಳಗಾವಿ, ಬಳ್ಳಾರಿ, ಗುಲಬರ್ಗಾ, ರಾಯಚೂರು ಮತ್ತು ಬೀದರು

ಆಂಧ್ರ ಪ್ರದೇಶದಲ್ಲಿ

ಕರ್ನೂಲ, ಮಹಬೂಬನಗರ ಮತ್ತು ನಂದ್ಯಾಲ

ನಿಮ್ಮ ಸೇವೆಯಲ್ಲಿ ಸದಾನಿರತ

ಗೋದ್ರೇಜ್

ಮುಖ ಶುದ್ಧಿಗಾಗಿ

ಚಮನ



"ಚಮನ ಅತ್ಯಂತ ಸ್ವಾದಿಷ್ಟ ರುಚಿಕರ ಅಲ್ಲದೇ ಮಹಾ ಸುಗಂಧಿತ ಚೂರ್ಣವಿದೆ. ಇದರ ಸೇವನೆಯಿಂದ ಬಾಯಿಗೆ ರುಚಿ ಬರುವುದು. ಮುಖವು ಸುಗಂಧಮಯನಾಗುವುದು.

ಚಮನದಲ್ಲಿ ಏನಿರುವುದು ?

ಚಮನದಲ್ಲಿ ಜೇಷ್ಠ ಮಧು, ಕೇಸರಿ, ಕಸ್ತೂರಿ, ಲವಂಗ, ಏಲಕ್ಕಿ ಜಾಯಪತ್ರೆ, ಕಂಕೋಳ, ಬಡೇಸೋಪು ಹಾಗೂ ಮೆಂಥಾಲ ಮುಂತಾದ ನಾನಾ ಪ್ರಕಾರಗಳ ಸುಗಂಧಿತ ಮತ್ತು ರುಚಿಕರ ವಸ್ತುಗಳನ್ನು ಶಾಸ್ತ್ರೀಯ ಪದ್ಧತಿಯಂತೆ ಮಿಶ್ರ ಮಾಡಿರುವುದರಿಂದ ಅಬಾಲ ವೃದ್ಧರು ಇದನ್ನು ಸೇವಿಸಬಹುದು.

— ಸಂಗ್ರಾಹಕರು —

ಬೆಂಗಳೂರು :

1. ಸಿಟಿ ಮೆಡಿಕಲ್ ಆ್ಯಂಡ್ ಜನರಲ್ ಸ್ಟೋಅರ್ಸ ಚಿಕ್ಕಪೇಟೆ.
2. ಕಲ್ಕತ್ತಾ ಪಾನಹೌಸ ಚಿಕ್ಕಪೇಟೆ ಕ್ರಾಸ್.
3. ಎಸ್. ವೆಲ್ಲಾಯಿಚಾಮಿ ಆ್ಯಂಡ್ ಸನ್ಸ್, ಅವಿನ್ಯೂ ರಸ್ತೆ,

ಮೈಸೂರು :- ಲಕ್ಷ್ಮಿಸ್ಟ್ರೀ ಸ್ಟೋರ್ಸ, ಶ್ರೀರಾಮಪೇಟೆ.

ಹುಬ್ಬಳ್ಳಿ :- ನ್ಯೂ ಕರ್ನಾಟಕ ಏಜನ್ಸೀ, ಸಿದ್ಧೇಶ್ವರ ರೋಡ. ಅತುಲ ಏಜನ್ಸೀ.

ಧಾರವಾಡ :- ಎಚ್.ಎ. ಮಹೀಂದ್ರಕರ ಆ್ಯಂಡ್ ಸನ್ಸ. ಮೇನರೋಡ.

ಬಳ್ಳಾರಿ :- ಫ್ರುಟ್ ಸೇಲ ಪಾನ ಮಹಲ ಕಾರ ಸ್ಟ್ರೀಟ್.

ಹೊಸಪೇಟೆ : ಆರ್. ಸೋಮಪ್ಪ ಶೆಟ್ಟಿ ಆ್ಯಂಡ್ ಸನ್ಸ, ಮೇನ್ ರೋಡ.

ಸ್ವಾರ ಕಂಪನಿ, ಬೆಳಗಾವಿ.



"ನನ್ನಿಂದೇನು ಮಹಾಪರಾಧವಾಗಿದೆ ತಿಳಿಸಬಹುದೇ ಮಹಾರಾಣಿಯವರೇ ?"

"ಮೊದಲು ನನ್ನ ಬಿಡಿರಿ, ಎಂಟು ಹೊಡೆದು ಹೋಗೇದ. ಬೆಂಗಳೂರಿಗೆ ಹೋದ ಮ್ಯಾಲೆ ನಮ್ಮ ಮಿತ್ರ ಒಬ್ಬ ವಕೀಲ ಇದ್ದಾನ. ನಮ್ಮ ಮದಿವೀದಶಿಂದ ವಿಚಾರ ಮಾಡೋಣ ಹಾಂಗ ಹಿಂಗ ಅಂತ ಬರೀ ಭಂಪ ಕುಟ್ಟಿದಿರಿ.

"ಹಾಂ ಅದs ? ಹೋಗೋಣಲ್ಲ, ಈಗೇನು ಅವಸರ ?" "ನೋಡು ಸುಜೀ, ನಾ ನಿನ್ನ ಪ್ರೀತಿಸತೀನಿ ನೀ ನನ್ನ ಪ್ರೀತಿಸತೀ."

"ನಮ್ಮ ಪ್ರೇಮ ಅ ಜ ರಾ ಮ ರ, ರೋಮಿಯೋ ಜ್ಯೂಲಿಯೆಟ್, ಶೀರಿ ಫರಹಾರ ಲೈಲಾಮಜ್ನೂ ಗತಿ ಇದಕ್ಕೆ ಲಗ್ನದ ಬಂಧನ ಯಾಕಬೇಕು ಅಂತ ನೀವು ಹತ್ತು ಸಾರೆ ಕೇಳಿ ಆತು."

"ಅದs ಹನ್ನೊಂದನೇ ಸಲ ಕೇಳತೀನಿ"

"ನಂದೂ ಅದೇ ಉತ್ತರ. ಪ್ರೇಮ ನಮ್ಮಿಬ್ಬರ ನಡುವೆ ಆತು. ಆದರ ನಮಗ ನಾಕು ಮಂದ್ಯಾಗ ಇರೋದಿರ್ತದ. ನಾವು ಯಾರು ?"

"ಲಾಜ್ ರಿಜಿಸ್ಟರದಾಗ ಬರೆಸಿದ್ದೇ ಅದ. ಮಿಸ್ಟರ್ ಅಂಡ್ ಮಿಸೆಸ್ ಅನಂತ."

"ಲಾಜ್‌ದಾಗಿನ ರಿಜಿಸ್ಟರ ಅಂದರ ಮ್ಯಾರೇಜ್ ರಿಜಿಸ್ಟರ ಅಲ್ಲ." ಆಕೆ ಹಾಸಿಗೆ ಬಿಟ್ಟಿದ್ದಳು. "ಇನ್ನು ಆಲಸ್ಯ ಸಾಕು. ಈವತ್ತು ಈಗs ವಕೀಲರ ಕಡೆ ಹೋಗೋಣ".

"ವಕೀಲರು ಇಷ್ಟು ಲಗೂ ಎದ್ದಿರೋದಿಲ್ಲ ಬಾ" ಎಂದು ಅವನು ಕೈ ಹಿಡಿದೆಳೆದ. "ನೀನೂ ವಕೀಲ ಆಗಾಕಿ ಇದ್ದಿ. ಭಾಳ ಹೊತ್ತು ಮಲಗೋದನ್ನು ಮುಂಚೆ ನೀ ಕಲೀಬೇಕು."

ಫೋನ್ ಮೇಲೆ ಭೆಟ್ಟಿ ಗೊತ್ತು ಮಾಡಿಕೊಂಡು ಇವರು ಮುಮುದಾಪೂರ ವಕೀಲರ ಮನೆಗೆ ಹೋದಾಗ ಅವರಿನ್ನೂ ಕೋರ್ಟಿನಿಂದ ಬಂದಿರಲಿಲ್ಲ. ಅರ್ಧ ತಾಸು ಕಾಯಬೇಕಾಯಿತು. ವಕೀಲರು ಬಂದರು. ಅವರ ಜತೆ ಇಬ್ಬರು ಪಕ್ಷಕಾರರು. ಕೋರ್ಟಿನಿಂದ ಜತೆಯಾಗಿ ಬಂದವರು. ಅವರ ಪ್ರಕರಣ ಮೊದಲು ಮುಗಿಯಿತು. ನಂತರ ಇವರ ಸರದಿ. ಅನಂತ ತನ್ನ ಪೂರ್ವೇತಿಹಾಸ ಹೇಳಿದ. ಮದುವೆಯ ವಿಚಾರವನ್ನೂ ತಿಳಿಸಿದ.

"ಮೊದಲಿನ ವಿವಾಹದಿಂದ ವಿಚ್ಛೇದನೆ ಸಿಗೋ ತನಕಾ ನಿಮಗ ಕಾಯದೇಶೀರ ಮದಿವಿ ಮಾಡಕೊಳ್ಳಲಿಕ್ಕೆ ಬರೂದಿಲ್ಲ."

ವಕೀಲರೆಂದರು.

"ಅದು ಆಯ್ತು. ವಿಚ್ಛೇದ ಅಂದರ ದೂರಿನ ಹಾದಿ, ನಾಲ್ಕು ವರ್ಷೋ ಆರು ವರ್ಷೋ ಕಾಯಬೇಕು."

"ಹಾಂಗೇನಿಲ್ಲ ಪತಿ ಪತ್ನಿಯರು ತಾವು ವರ್ಷಕ್ಕಿಂತ ಹೆಚ್ಚು ಕಾಲ ಬ್ಯಾರೆ ಇದ್ದು ವಿಚ್ಛೇದ ಕೇಳಿದರೂ ಹಾಂಗ ವಿಚ್ಛೇದ ಸಿಗಬಹುದು. ಆದರೆ ಇಬ್ಬರೂ ಒಪ್ಪಿರಬೇಕು. ಹಾಂಗ ಕೋರ್ಟಿಗೆ ಕೇಳಿದ ಮ್ಯಾಲೆ ಕನಿಷ್ಠ ಆರು ತಿಂಗಳು ಕಾಲ ಹೋಗಬೇಕಾಗತದ ಪ್ರಕರಣ ನಿಕಾಲೆ ಮಾಡಲಿಕ್ಕೆ."

ಅನಂತ ಸುಜಾತಾಳ ಮೋರೆ ನೋಡಿದ. 'ಹಿಂದೂ ವಿವಾಹ ಕಾಯದೆಯ ಹದಿಮೂರು ಬಿ ಕಲಮು' ಆಕೆ ಅಂದಳು ಪಿಸುದನಿಯಲ್ಲಿ ನಕ್ಕು. ಅದು ವಕೀಲರಿಗೂ ಕೇಳಿಸಿತು. 'ಅಂದರ ನಿಮಗೆ ಕಾಯದೆ ಗೊತ್ತದ' ಅವರೆಂದರು. 'ಪರಸ್ಪರ ಒಪ್ಪಿಗೆ ಈಗಂತೂ ಆಗಲಾರದ ಮಾತು' ಅನಂತನ ಪರವಾಗಿ ಆಕೆಯೇ ಹೇಳಿದಳು.


"ಅಥವಾ ಹಿಂಗ ಮಾಡಿದರ ಹ್ಯಾಂಗ ?" ವಕೀಲರು ತುಸು ಹೊತ್ತು ಯೋಚಿಸಿದರು. 'ಗಂಡಸಾಗಲೀ ಹೆಂಗಸಾಗಲೀ, ಮದಿವಿ ಮಾಡಿಕೊಳ್ಳೋದು ಯಾಕ ? ಅದಿಲ್ಲದೆ ಕೂಡಿ ಇರಲಿಕ್ಕೆ ಬರೂದಿಲ್ಲೇನು ?' ಅವರು ಒಬ್ಬ ಜ್ಯೂನಿಯರ್ ವಕೀಲನಿಗೆ ತಿಳಿಸಿ ಹೇಳುವಂತೆ ಸುಜಾತಾಗೆ ಹೇಳತೊಡಗಿದರು.

"ಮನು ಆಗಲೀ ಯಾಜ್ಞವಲ್ಕ್ಯ ಆಗಲಿ, ಯಾವದೇ ಪದ್ಧತಿಯಾದರೂ ವಿವಾಹ ಅಂದರ ಏನು ? ಒಬ್ಬ ಗಂಡಸು ಒಬ್ಬ ಹೆಂಗಸು ಕೂಡಿ ಇರಲಿಕ್ಕೆ 'ಒಂದು ಸಮಾಜದ ಮಂಜೂರಿ. ಈ ಮಂಜೂರಿಗೆ ಕೆಲವೊಂದು ನಿಯಮ ಪಾಲನೆ ಕೆಲವೊಂದು ಶಿಸ್ತು ಕಾಯಬೇಕಾಗತದ. ಈ ಶಿಸ್ತು ಈ ಹೊರಗಿನ ಸಮಾಜದ ಬಡಿಗೆಗಿಂತ ಒಳಗಿನ ಮನಸ್ಸಿನದು ಇರಬೇಕು. ಅದು ಸಮಾಜದ ಆರೋಗ್ಯ ವ್ಯಕ್ತಿಯ ಪರಿಶುದ್ಧತೆ ಅನಸ್ತದ."

ಒಳಗಿನಿಂದ ಎಲ್ಲರಿಗೂ ಚಹ ಬಂದಿತು.

"ಅನಂತರಾವ, ವಿಚ್ಛೇದದ ಬಗ್ಗೆ ನೀವು





ಗಟ್ಟಿ ಮನಸ್ಸು ಮಾಡಿದ್ದೀರಿ ?"

ಅವರು ಚಹ ಕುಡಿಯುತ್ತ ಕೇಳಿದರು.

"ವಿಚ್ಛೇದದ ಬಗ್ಗೆನೂ ಗಟ್ಟಿ ಮಾಡೀನಿ ಈ ಹುಡುಗಿ ಜತೆ ಮದುವೆನೂ ಗಟ್ಟಿ ಮಾಡೇನಿ" ಅವನೆಂದ.

ವಕೀಲರು ನಕ್ಕರು "ಬಹುಶಃ ಇಂತಹ ವಿಷಯಗಳಲ್ಲಿ, ಎರಡನೆಯದು ಮೊದಲು ಗಟ್ಟಿಯಾಗತದ."

ಅನಂತನೂ ನಕ್ಕ. "ನನ್ನ ಬಾಬ್ತಿಯೊಳಗ ಮಾತ್ರ ಹಾಂಗ ಆಗಿಲ್ಲ ಮೊದಲನೆಯದು ಗಟ್ಟಿ ಆತು. ಅದು ಸಡಿಲ ಮಾಡಬೇಕಂತ ಬಂದ ಈ ಹುಡುಗಿ ಮಾತ್ರ ಕಳ್ಳ ಹುದುಲಾಗ ಸಿಕ್ಕಳು !"

"ಈಗಾಗಲೇ ನೀವಿಬ್ಬರೂ ಕೂಡಿ ಇರಲಿಕ್ಕೆ ಆರಂಭಿಸಿದ್ದೀರಿ ?"

ವಕೀಲರು ಕೇಳಿದರು.

ಆಕೆ ನಾಚಿದಳು. ಅವನು ಹೌದೆಂದು ಗೋಣು ಹಾಕಿದ.

"ಪರಸ್ಪರ ಒಪ್ಪಿಗೆ ಆದ ಅಂತಾ ವಿವಾಹ ವಿಚ್ಛೇದಕ್ಕೂ ಕೂಡಲೆ ಅರ್ಜಿ ಮಾಡಲಿಕ್ಕೆ ಸಾಧ್ಯ ಅದs ಏನು? ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬ್ಯಾರೆ ಇದ್ದೇವಿ ಅಂತ ಬರೀಲಿಕ್ಕೆ ಬರ್‍ತ್ತsದ. ಹಾಂಗ ಆದರ ಆರೆಂಟು ತಿಂಗಳಿಗೆ ವಿಚ್ಛೇದ ಸಿಗಬಹುದು. ಆದರ ನಂತರ ನೀವು ಮದುವೆ ಮಾಡಿಕೊಳ್ಳಬಹುದು. ಬೇಕಾದರ ರಿಜಿಸ್ಟರ ಮಾಡಿಕೊಳ್ರಿ. ಅಥವಾ ಹಿಂದೂ ಪದ್ಧತಿಯಿಂದ ಮಾಡಿಕೊಳ್ಳಿರಿ."

"ಪರಸ್ಪರ ಒಪ್ಪಿಗೆ ದೂರಿನ ಮಾತು. ಆ ಹೆಂಡತಿ ತಂದೆಯವರೂ ವಕೀಲರಿದ್ದಾರ" ಉಗುಳು ನುಂಗಿ ಸುಜಾತಾ ಹೇಳಿದಳು.

"ಹೆಂಡತಿ ನೌಕರಿ ಮಾಡ್ತಾಳ ಅಂತೀರಿ- ಅಂದರ ಆರ್ಥಿಕ ಹೊಣೆ ಇಲ್ಲ. ಒಪ್ಪಿಗೆ ಕೊಡಲಿಕ್ಕೆ ಏನು ಅಡಚಣೆ ಇರಬಹುದು ? ಹ್ಯಾಂಗಿದ್ದರೂ ಗಂಡ ಮನೀಗೆ ಬರೂವವ ಅಲ್ಲ. ಅದು ಅವರಿಗೆ ಗೊತ್ತಿದ್ದದ್ದೇ ಅದ."

"ಸಮಾಜ ? ನಮ್ಮ ಸಮಾಜದಾಗ ವಿಚ್ಛೇದ ತೊಗೊಂಡ ಅಥವಾ ಕೊಟ್ಟ ಸ್ತ್ರೀಗೆ ಮರ್ಯಾದೆ ಇಲ್ಲ. ಯಾರದೇ ದೋಷ ಇದ್ದರೂ ಅದನ್ನ ಹೆಣ್ಣಿನ ತಲೀಗೆ ಕಟ್ಟತಾರ. ಮದಿವೀ ಗಂಡ ಬ್ಯಾರೆ ಇದ್ದರ ಇರವಲ್ಲನ್ಯಾಕೆ, ಅಷ್ಟು ಗಂಭೀರ ಅಲ್ಲ" ಸುಜಾತಾ ಹೇಳಿದಳು.

"ನಾನೇನು ಈ ಬಾಬತ್ತು ಭಾಳ ವಿಚಾರ ಮಾಡಿಲ್ಲ" ವಕೀಲರೆಂದರು. "ಹಾಂಗೆ ನೋಡಿದರ ಪ್ರತಿಯೊಂದು ಧರ್ಮದೊಳಗಿನ ವಿವಾಹವೂ ಒಂದು ಕರಾರು, ಕಾಂಟ್ರ್ಯಾಕ್ಟ. ಈ ಬಂಧನದಾಗ ಇದ್ದುಕೊಂಡು ಸಂತಾನ ಅಭಿವೃದ್ಧಿ ಆಗಬೇಕು ಅಂತ ಅಪೇಕ್ಷೆ, ಅಲ್ಲs?" ಅವರ ಮಾತಿಗೆ ಇವರಾರೂ ಉತ್ತರಿಸಲಿಲ್ಲ.

"ನಾ ಇತ್ತೀಚೆಗೆ ಓದಿದ್ದಾಂಗ ನೀವು ಕಾಂಟ್ರ್ಯಾಕ್ಟ ಮ್ಯಾರೇಜ್ ಯಾಕ ಮಾಡಕೋಬಾರದು ?"

"ನನಗ ತಿಳೀಲಿಲ್ಲ" ಅನಂತ ಅವರನ್ನ ನಡುವೆಯೇ ತಡೆದ.

"ಈಗ ನೋಡ್ರಿ, ಶಾಸ್ತ್ರ ಶುದ್ಧ, ಕಾಯದೇಶೀರ ಮದುವೆ ಅಂದರ ಆದರೂ ಏನು? ಗಂಡನ ಸಮಾಜ ಮಾನ್ಯ ಹೆಂಡತಿ. ಹೆಂಡತಿಗೆ ಸಮಾಜ ಮಾನ್ಯ ಗಂಡ. ಅವರಿಗೆ ಮಕ್ಕಳು. ಹೆಂಡತಿಗೆ ಮಕ್ಕಳಿಗೆ ಸ್ಥೈರ್ಯ ಉದರ ಪೋಷಣೆ ಹಕ್ಕು ಹಾಗೂ ಆಸ್ತಿ ಪಾಸ್ತಿಗಳಲ್ಲಿ ವಾರಸು ಹಕ್ಕು. ಇದಕ್ಕಿಂತ ಹೆಚ್ಚು ಇದ್ದೀತಂತ ನನಗ ಅನಸೂದಿಲ್ಲ" ಅವರು ಅರ್ಥಪೂರ್ಣವಾಗಿ ಸುಜಾತಾಳ ಕಡೆ ನೋಡಿದರು. ಆಕೆ ಅಂಗೈ ಮೇಲೆ ಗಲ್ಲ ಊರಿ ವಿಚಾರ ಮಗ್ನಳಾಗಿದ್ದಳು. 'ನಿಮಗ ವಿವಾಹ ಇಷ್ಟರಮಟ್ಟಿಗೆ, ಇಷ್ಟರ ಸಲುವಾಗಿ ಬೇಕು ಅನಸ್ತsದ, ಅಲ್ಲೇನು ?"

ಆಕೆ ಗೋಣು ಹಾಕಿದಳು. 'ಹಾಂಗಾರ ಈ ಕಂಟ್ರ್ಯಾಕ್ಟ ಮ್ಯಾರೇಜು ಪದ್ಧತಿ ಭಾಳ ಸುಖಕರ. ಮೊದಲನೇದಾಗಿ ಅನಂತರಾವ ಅವರು ತಮ್ಮ ಕಾರಖಾನೆಯಲ್ಲಿ ಸಮಪಾಲು ಸುಜಾತಾಗೆ ಕೊಡಬೇಕು, ಈ ಮದುವೆಗಿಂತ ಮುಂಚೆ, ಈ ಬಕ್ಷೀಸಕ್ಕೆ ಒಂದು ತಾಂತ್ರಿಕ ಕಾರಣ ಕೊಡಲಿಕ್ಕೆ ಬರ್‍ತsದ. ಹಿಂದೊಮ್ಮೆ ಆಜಾರಿ ಬಿದ್ದಾಗ ಶುಶ್ರೂಷೆ ಮಾಡಿದ್ದಳು, ಬಿಟ್ಟಿದ್ದಳು ಅಂತ. ಅಂದರ ಸಮಪಾಲು ಕಾಯದೇಶೀರ ಆಯ್ತು. ಸುಜಾತಾಗೆ ಆರ್ಥಿಕ ಸ್ಥೈರ್ಯ ಬಂದಂತಾತು. ನೀವಿಬ್ಬರೂ ಪರಸ್ಪರ ಸ್ನೇಹದಿಂದ ಆದರಭಾವದಿಂದ ಪಾಲುಗಾರರಾಗಿ ಇರತಕ್ಕದ್ದು ಅಂತ ಒಂದು ಹೊಸ ಕರಾರು.

ಸುಜಾತಾಗೆ ಮಕ್ಕಳು ಮರಿ ಆದರೆ ಅವುಗಳ ಪಾಲನ ಪೋಷಣೆ ವಿದ್ಯೆ ವಿವಾಹ ಅನಂತನ ಹೊಣೆ, ಅನ್ನಬಹುದು. ಅವು ಹುಟ್ಟಿದ ಕೂಡಲೆ ನಿಮ್ಮ ಉದ್ದಿಮೆಯಲ್ಲಿ ಅವಕ್ಕ ಸಮಪಾಲು. ಅಜ್ಞಾನ ಪಾಲಕ ಅಂತ ತಾಯಿ ಹೀಗೆ ಒಪ್ಪಿಗೆ ಪತ್ರ ಮಾಡಿ ರಿಜಿಸ್ಟರ ಮಾಡಿದರ ಆಗಬಹುದು."

"ಇದು ಕಾಯದೇಶೀರ ಆದೀತೇನು ?"


"ಸುಜಾತಾ ಸಂಶಯ ತೆಗೆದಳು. ಯಾಕ ಆಗಬಾರದು? ಇದರಾಗ ಬೇಕಾಯದೇಶೀರ ಏನು ಅದs ?"

"ಅನಂತರಾವ ಅವರ ಈಗಿನ ಹೆಂಡತಿ ಈ ಕಾಂಟ್ರ್ಯಾಕ್ಟ ಆಧಾರದಿಂದ ಅವರ ಮ್ಯಾಲೆ ವ್ಯಭಿಚಾರದ ಆರೋಪ ಮಾಡಲಿಕ್ಕಿಲ್ಲೇನು ?"

"ಆರೋಪ ಮಾಡಿ. ಏನು ಪ್ರಯೋಜನ? ವಿವಾಹ ವಿಚ್ಛೇದನ ಪಡೀಬೇಕು ಅಂತಲ್ಲೇನು? ನೀವs ಹೇಳಿಧಾಂಗ ವಿಚ್ಛೇದ ತೊಗೊಂಡ ಸ್ತ್ರೀಗೆ ಸಮಾಜದಾಗ ಮಾನ ಎಲ್ಲಿ ಅದಾ? ಆಕಿ ನೌಕರಿ ಮಾಡತಾಳ, ಅಂತೀರಿ ಹಿಂಗಾಗಿ ಆಕೀಗೆ ಉದರ ಪೋಷಣದ್ದೂ ಪ್ರಶ್ನೆ ಇಲ್ಲ ನಿಮಗೇನು ಅನಸ್ತದ ?"

'ವಿಚಾರ ಮಾಡತೇವಿ" ಅನಂತ ಅವರ ಫೀ ಕೊಟ್ಟು ಅಲ್ಲಿಂದ ಎದ್ದ. ಸುಜಾತಾ ಒಂದು ನಿಮಿಷ ತಡೆದು ಕೇಳಿದಳು "ಇದು ಬಾಯ್ ಗ್ಯಾಮಸ್ ಮ್ಯಾರೇಜ್ ಅಂದರ ಒಬ್ಬ ಹೆಂಡತಿ ಇರುವಾಗ ಇನ್ನೊಬ್ಬಳೊಡನೆ ಮದುವೆ ಅಂತ ಕ್ರಿಮಿನಲ್ ಕೇಸು ಆಗೂದಿಲ್ಲೇನು ?"

"ನಾವು ಮದುವೇನ ಆಗಿಲ್ಲ? ರಿಜಿಸ್ಟರ್ ಪದ್ಧತಿಯಿಂದೂ ಅಲ್ಲ, ಹೋಮ ಹವನಾದಿ ಧಾರ್ಮಿಕ ವಿಧಿಯಿಂದಲೂ ಅಲ್ಲ! ನಾವು ಬರೇ ಪಾರ್ಟನರ್ಸ್ ಅನಂತ ರಾವ್ ಮ್ಯಾನೇಜಿಂಗ್ ಪಾರ್ಟನರ್ ಸುಜಾತಾ ಸ್ಲೀಪಿಂಗ್ ಅಂದರ [illegible]





ಸ್ಲೀಪಿಂಗ್- ಪಾರ್ಟನರ್ ಅಂದವ್ರ್ಯಾಲಿ ಬಾಯ್ ಗ್ಯಾಮಸ್ ಹ್ಯಾಂಗ್ ಆಗತದ?" ಅವರು ನಕ್ಕರು. ವಿಚಾರ ಮಾಡಬೇಕು ಆಕೆಯೂ ನಕ್ಕಳು.

"ಅನಂತ ಉಪಾಧ್ಯ ಇವರ ಏಕೈಕ ಸ್ವಾಮಿತ್ವದಲ್ಲಿಯ ಉದ್ಯಮ ಓಮೆಗಾ ಸ್ಟೀಲ್ ಇಂಡಸ್ಟ್ರೀಜ್ ಬರುವ ಜನೆವರಿ 1 ರಿಂದ ಅನಂತ ಉಪಾಧ್ಯೆ ಹಾಗೂ ಸುಜಾತಾ ದಪ್ತರದಿಂದ ಇವರ ಸಂಯುಕ್ತ ಪಾಲುಗಾರಿಕೆಯಲ್ಲಿ ನಡೆಯಲಿದೆ. ತನ್ನಿಮಿತ್ತವಾಗಿ ರವಿವಾರ ದಿನಾಂಕ 30 ಡಿಸೆಂಬರ್‌ದಂದು ಸಂಜೆ ಹಾಟೆಲ್ ಕಾಂಚನದಲ್ಲಿ ಸಂತೋಷ ಕೂಟವನ್ನು ಏರ್ಪಡಿಸಲಾಗಿದೆ. ತಾವು ದಯವಿಟ್ಟು ಬನ್ನಿ ಆಶೀರ್ವದಿಸಿ."

ಸುಮತಿ ಟೇಬಲ್ ಮೇಲಿನ ಔತಣ ಓಲೆಯನ್ನು ಹನ್ನೆರಡನೆಯ ಸಲ ಓದಿದಳು. ಒಳ್ಳೆಯ ಜಪಾನ್ ಕಾಗದ ಮೂರು ಬಣ್ಣಗಳಲ್ಲಿ ಮುದ್ರಣ, ಕವ್ಹರ್ ಮೇಲೆ ತನ್ನ ಹೆಸರು ಅನಂತನ ಅಕ್ಷರಗಳಲ್ಲಿ ಅಂತಹದೇ ಇನ್ನೊಂದು ಆಮಂತ್ರಣ ಪತ್ರಿಕೆ ತಂದೆಯವರ ಹೆಸರಿನಲ್ಲಿ. ಅಂಚೆಯಿಂದ ಬಂದವು. ಇದು ತಂದೆಗೆ ತಿಳಿಯಬೇಕೇ? ಇವೆರಡನ್ನೂ ಮುಚ್ಚಿಟ್ಟರೆ ಅಥವಾ ಹರಿದು ಹಾಕಿದರೆ ಹೇಗೆ?

ತನ್ನ ಹುಚ್ಚುತನಕ್ಕೆ ಆಕೆಗೆ ನಗು ಬಂದಿತು. ಬೆಳಗಾವಿಯಲ್ಲಿ ತಮ್ಮಿಬ್ಬರಿಗೇ ಪತ್ರಿಕೆ ಬಂದಿರಲಿಕ್ಕೆ ಸಾಕೆ? ಸುಜಾತಾಳ ಗೆಳತಿಯರು ಅನಂತನ ಸ್ನೇಹಿತರು ಇವರೆಲ್ಲರಿಗೂ ಆಹ್ವಾನ ಪತ್ರಿಕೆ ಹೋಗಿರಬೇಕು. ಒಂದು ಹೊತ್ತು ನಾಳೆ ಪೇಪರಿನಲ್ಲಿ ಜಾಹಿರಾತು ಬಂದರೂ ಬಂತೆ....?

ಮೇಲೆ ಮೇಲೆ ನೋಡುವವರಿಗೆ ಇದು ಒಂದು ಔಪಚಾರಿಕ ಸ್ವಾಗತ ಸಮಾರಂಭ. ಸಂತೋಷ ಕೂಟ ಅನ್ನಿಸಬಹುದು. ಆದರೆ ಗೊತ್ತಿದ್ದವರಿಗೆ? ಹಾಗೆ ಗೊತ್ತಿರುವವರಾದರೂ ಎಷ್ಟು ಜನ? ಆದರೆ ಈ ಸಂತೋಷಕೂಟದಿಂದಾಗಿ ಇವರು ತಮ್ಮ ಸಂಬಂಧವನ್ನು ಪ್ರಕಟಪಡಿಸುತ್ತಿರಬೇಕು....

ಹಾಗೆಯೇ ಇರಬೇಕು ಒಂದು ಉದ್ದಿಮೆಯ ಒಡೆತನದಲ್ಲಿ ಬದಲಾವಣೆಯಾದರೆ ಅದನ್ನು ಜಾಹೀರು ಮಾಡುವ ಅವಶ್ಯಕತೆ ಇರಬಹುದು ಇರಲಿಕ್ಕೂ ಇಲ್ಲ. ಆದರೆ ಸಂತೋಷ ಕೂಟಕ್ಕಂತೂ ಇಲ್ಲಿ ಅವಕಾಶವೇ ಇಲ್ಲ ..

ಅವರು ಎಲ್ಲೋ ಹೋಗಿ ಮದುವೆಯಾಗಿ ಬಂದಿರಬೇಕು. ಇದು ಅವರ ರಿಸೆಪ್ಶನ್ ಪಾರ್ಟಿ–

"ದಾದಾ, ನಿಮ್ಮ ಮಗಳು ಮದುವಿ ಮಾಡಕೊಂಡಾಳ" ಅವರು ಮನೆಗೆ ಬಂದೊಡನೆ ಸುಮತಿ ಹೇಳಿದಳು. "ರಿಸೆಪ್ಶನ್‌ಗೆ ನಿಮ್ಮನ್ನೂ ಕರದಾಳ" ಆಕೆ ಆಮಂತ್ರಿತ ಪತ್ರಿಕೆ ಚಾಚಿದಳು.

ಅವರು ಓದಿ ನೋಡಿದರು ಎರಡು ಸಲ. ಮೂರು ಸಲ.

"ಇದು ರಿಸೆಪ್ಶನ್ ಅಲ್ಲ, ಡಿಸೆಪ್ಶನ್. ಅವನ್ನ ಕೋರ್ಟಿನ್ಯಾಗ ಎಳೀತೇನಿ. ಕ್ರಿಮಿನಲ್ ಮಾಡತೇನಿ, ಏನಂತ ತಿಳಿದಾನ....ಮಗ, ದಪ್ತರದಾರ ವಕೀಲರೆಂದರ?"

ವಾಕ್ಯ ವಾಕ್ಯಕ್ಕೆ ಅವರ ಮಾತಿನ ಕಾವು ಏರತೊಡಗಿತು. ಆಕೆ ಅವರನ್ನು ಕೈಮಾಡಿ ತಡೆದಳು.

"ಶಾಂತ ಆಗ್ರಿ ದಾದಾ, ಶಾಂತ ಆಗ್ರಿ. ಎಕ್ಸಾಯಿಟ್ ಆಗಬ್ಯಾಡ್ರಿ ಅಂತ ಡಾಕ್ಟ್ರ ಹೇಳ್ಯಾರಿಲ್ಲೋ? ಸುಮ್ಮನೆ ಬ್ಲಡ್‌ಪ್ರೆಶರ್ ಯಾಕ ಬೆಳಸಿಗೋತೀರಿ?"

ದಾದಾ ಕುರ್ಚಿಯ ಮೇಲೆ ಕುಳಿತರು.

"ನಾ ಅವನ್ನ ಹಾಂಗೇ ಬಿಡೂದಿಲ್ಲ."

"ಏನು ಮಾಡಾವ್ರಿ?

"ಜೇಲಿಗೆ ಹಾಕಸ್ತೇನಿ."

"ಮುಂದ?"

ಅವರು ಮಗಳ ಶಾಂತ ಪ್ರಶ್ನೆಗೆ ಅಪ್ರತಿಭರಾದರು.

"ಮುಂದೇನು? ಅವನು ಸಮಾಜದ ದೃಷ್ಟಿಯಿಂದ ಒಬ್ಬ ತುಚ್ಛ ನೀಚ ಮನುಷ್ಯ ಅನಸೂಹಾಂಗ ಮಾಡತೇನಿ."

ಆಕೆ ಕಹಿಯಾಗಿ ನಕ್ಕಳು. "ಇದರಿಂದ ನಿಮ್ಮ ಬಿಪಿ ಬೆಳೀತದ, ಆಯುಷ್ಯ ಕಡಿಮಿ ಆಗತದ. ಇಷ್ಟಾs, ಇನ್ನು ಸಮಾಜದ ದೃಷ್ಟಿಯಿಂದ ಅಂದರ ಹಣ ಇಲ್ಲದವ ಮಾತ್ರ ತುಚ್ಛ, ನೀಚ. ದುಡ್ಡಿದ್ದವ ಸಮಾಜ ಮಾನ್ಯ, ರಾಜ್ಯಮಾನ್ಯನಂತೂ ಸರಿಯೇ."

> "ಇದು ಮದುವೆಯ ರಿಸೆಪ್ಶನ್ ಅಲ್ಲ, ಡಿಸೆಪ್ಶನ್. ಅವನನ್ನು ಕೋರ್ಟಿಗೆ ಎಳೀತೀನಿ... ....ಜೇಲಿಗೆ ಹಾಕಿಸ್ತೀನಿ........"

"ಹಂಗಾರ ನೀ ಹೋಗು ಈ ಡಿಸೆಪ್ಶನ್‌ಗೆ,"


ಅವರು ಖಾರವಾಗಿಯೇ ಹೇಳಿದರು.

ಅದಕ್ಕೂ ಆಕೆ ನಕ್ಕಳು. "ಯಾಕ ಹೋಗಬಾರದು? ನನ್ನ ಗಂಡ ಹಾಗೂ ನನ್ನ ತಂಗಿ ಒಂದು ಉದ್ದಿಮೆಗೆ ಪಾಲುಗಾರ ಆಗತಿದ್ದರ?" ಆಕೆ ಚೇಷ್ಟೆಯಿಂದ ಹೇಳುತ್ತಿದ್ದರೆ ದಾದಾ ಕುರ್ಚಿಯ ಮೇಲೆ ಕುಳಿತಲ್ಲೇ ಥರಥರ ನಡುಗ ತೊಡಗಿದರು.

ಆಕೆ ಕೂಡಲೇ ಎದ್ದು ಅವರ ಕೋಟು ಕಳಚಿದಳು. ಕೈ ಹಿಡಿದು ಪಲ್ಲಂಗದವರೆಗೆ ಒಯ್ದು ಮಲಗಿಸಿದಳು.

"ಶಾಂತ ಆಗಿರಿ ದಾದಾ. ಮನಸ್ಸಿಗೆ ತ್ರಾಸ ಮಾಡಕೋ ಬ್ಯಾಡ್ರಿ- ಯಾರೇನು ಮಾಡಕೋವಲ್ರು, ನಮಗೇನು ತೊಗೊಂಡು ಮಾಡೂದು?" ಒಂದು ಟವೆಲ್‌ನಿಂದ ಆಕೆ ಅವರ ಮೋರೆಯ ಮೇಲಿನ ಬೆವರು ಒರೆಸಿದಳು. ಶರ್ಟಿನ ಗುಂಡಿ ತೆಗೆದಳು ಎದೆ ಹೊಟ್ಟೆಯ ಮೇಲಿನ





ಜಿವರು ಒರೆಸಿದಳು. ಒಳಗಿನ ಕೋಣೆಯಲ್ಲಿಂದ ಗುಳಿಗೆ ತಂದು ನೀರಿನೊಡನೆ ಕೊಟ್ಟಳು.

o o o o

ವಿದ್ಯುದ್ದೀಪಗಳ ಮಾಲೆ, ಅಶೋಕ ಪಲ್ಲವಗಳ ಗೊಂಚಲುಗಳು ಹಾಗೂ ಬಲೂನುಗಳಿಂದ ಪಾಟಿಲ್ ಕಾಂಚನದಲ್ಲಿಯ ಚೂಂಕೇ ಹಾಲ್ ಸುಸಜ್ಜಿತವಾಗಿತ್ತು. ಅನಂತನ ಗೆಳೆಯರಲ್ಲಿ ಸುಜಾತಾಳ ಗೆಳತಿಯರಲ್ಲಿ ಕೆಲವರು ಮುಂದಾಗಿ ಬಂದವರ ಸ್ವಾಗತಕ್ಕಾಗಿ ನಿಂತರು. ಅವರ ಮುಂಗೈಗೆ ಅತ್ತರು ಒರಸಿ, ಚಳಿಯಲ್ಲಿ ಬೇಡವೆಂದರೂ ಪನ್ನೀರು ಸಿಂಪಡಿಸಿ, ಪ್ರತಿಯೊಬ್ಬರಿಗೂ ಕಲವಿ ಗುಲಾಬಿ ಹೂ ಕೊಡುತ್ತಿದ್ದರು.

ಹಾಲಿನಲ್ಲಿ ಬುಲಾಫೆ ಪಾರ್ಟಿ. ಅವರ ಸಮಾಚಾರಕ್ಕೆ ಖುದ್ದಾಗಿ ಅನಂತ ಹಾಗೂ ಸುಜಾತಾ. ಬಾಟಲ್ ಗ್ರೀನ್ ಬಣ್ಣದ ಸಫಾರಿಯಲ್ಲಿ ಅನಂತ ಕಂಗೊಳಿಸಿದರೆ ಸುಜಾತಾ ಹಸಿರು ರೇಷ್ಮೆ ಸೀರೆ ಉಟ್ಟಿದ್ದಳು. ಮುಂಗೈಯಲ್ಲಿ ಬಂಗಾರದ ಹೊಸ ಬಳೆಗಳು ಕೊರಳಲ್ಲಿ ಸ್ಪಷ್ಟವಾಗಿ ಗೋಚರಿಸುವ ಹೊಸ ಮಾಂಗಲ್ಯ ಸೂತ್ರ, ಬೆರಳಲ್ಲಿ ಹರಳಿನ ಉಂಗುರ.

ಯಾರಿಗೂ ಇದು ಉದ್ದಿಮೆಯ ಪಾಲುಗಾರಿಕೆಯ ಸಂಭ್ರಮವೆನಿಸಲೇ ಇಲ್ಲ. ಥೇಟ್ ಮದುವೆಯ ಸಂತೋಷಕೂಟ-ಅಳಿದುಳಿದ ಸಂಶಯವನ್ನು ನಿವಾರಿಸಲು ಅನಂತ-ಸುಜಾತಾ ಟೊಂಕಕಟ್ಟಿ ನಿಂತಿದ್ದರು.

"ಸುಜಾತಾ, ಇವರು ಮಿಸ್ಟರ್....ಈಕೆ ನನ್ನ ಹೆಂಡತಿ ಸುಜಾತಾ" ಎಂದು ಅನಂತ ನಿರಾಳವಾಗಿ ಪರಿಚಯ ಮಾಡಿ ಕೊಡುತ್ತಿದ್ದರೆ "ಇವರು ನನ್ನ ಪತಿ" ಎಂದು ಸ್ತ್ರೀ ಸುಲಭವಾದ ನಾಚಿಕೆಯಿಂದ ಸುಜಾತಾ ತನ್ನ ಗೆಳತಿಯರಿಗೆ ಪರಿಚಯಿಸಿದಳು.

ಈ ಸಮಾರಂಭಕ್ಕೆ ಆಮಂತ್ರಣ ನೀಡಲು ಇಬ್ಬರೂ ಬೇರೆ ಬೇರೆಯಾಗಿಯೇ ಹೋಗಿದ್ದರಿಂದಲೋ, ತಮ್ಮ ಮದುವೆಯ ಸುಳಿವನ್ನು ಈ ಮೊದಲು ಯಾರಿಗೂ ನೀಡಿರದಿದ್ದರಿಂದಲೋ ಸಾಕಷ್ಟು ಪರಿಚಿತರಿಗೆ ಇದು ಆಶ್ಚರ್ಯವನ್ನುಂಟುಮಾಡಿತು.

ಸುಮತಿಯು ಅನೇಕ ಗೆಳತಿಯರಿಗೂ ಸುಜಾತಾ ಆಗ್ರಹದ ಆಮಂತ್ರಣ ನೀಡಿದ್ದಳು. ಉದ್ದೇಶ ಇಷ್ಟೇ. ಅಂಚೆಯ ಮೂಲಕ ಕಳಿಸಿದ ಆಮಂತ್ರಣ ಓದಿದಾದಾ ಸುಮತಿಯರಿಗೆ ಸಂಶಯವೇನಾದರೂ ಉಳಿದಿದ್ದರೆ ಈ ಸಮಾರಂಭದ ವರ್ಣನೆ ಕೇಳಿ ಅದು ಪರಿಹಾರವಾಗಬೇಕು?

೬

ಕರೆ ಗಂಟೆ ಬಾರಿಸಿದಾಗ ಮನಸ್ಸಿಲ್ಲದ ಮನಸ್ಸಿನಿಂದ ಸುಜಾತಾ ಎದ್ದಳು. ಈಗಿನ್ನೂ ಮೂರು ಮೂರುವರೆ ಆಗಿರಬೇಕು. ಆದಾರು ಬಂದಿರಬೇಕು. ಇಂತಹ ಅಡ್ಡ ಹೊತ್ತಿನಲ್ಲಿ? ಒಂದು ಗಳಿಗೆ ಮಲಗಲು ಕೂಡ ಬಿಡುವದಿಲ್ಲ. ಕೆಲಸದಾಕೆ ಬೆಳಿಗ್ಗೆ ಬಂದಿರಲಿಲ್ಲ. ರಾತ್ರಿಯ ಎಲ್ಲ ಮುಸುರೆ ಪಾತ್ರೆ ತಾನೆ ತೊಳೆದುಕೊಳ್ಳಬೇಕಾಯಿತು. ಬಟ್ಟೆ ತಾನೇ ಒಗೆಯಬೇಕಾಯಿತು. ಇಷ್ಟೆಲ್ಲ ಆಗಿ. ಅಡುಗೆ ಮುಗಿಯಬೇಕಾದರೆ ಒಂದು ಹೊಡೆಯಿತು. ಅನಂತರಾಯರ ಸವಾರಿ ಆಪ್ಟರಲ್ಲಿ ಹಾಜರು ಊಟ ಮಾತುಗಳಲ್ಲಿ ಎರಡು ಹೊಡೆದದ್ದು ತಿಳಿಯಲೇ ಇಲ್ಲ. ಊಟ ಅಂದರೆ ಅವನ ಊಟ...ತನಗೆ ಊಟ ರುಚಿಸಲೇ ಇಲ್ಲ. ಅಷ್ಟಾಗಿ ಉಂಡದ್ದು ದಕ್ಕಲೂ ಇಲ್ಲ ಕೈಕಾಲು ಬಳಬಳ ಮಾಡುತ್ತನೆ. ವಿಶ್ರಾಂತಿಯೂ ಇಲ್ಲ. ಕೆಲಸನಾಕೆ ಈಗ ಬಂದಿದ್ದರೆ ಆಕೆಯನ್ನು ಜಾಡಿಸಬೇಕು....

ಸುಜಾತಾ ಅದೇ ಸಿಟ್ಟಿನಿಂದ ಬಾಗಿಲು ತೆಗೆದಳು. ಆದರೆ ಇದಿರು ನಿಂತಿದ್ದ ಸುಮತಿಯನ್ನು ನೋಡಿ ಸ್ತಂಭಿತಳಾದಳು. ಏನು ಮಾಡಬೇಕು, ಏನು ಮಾತಾಡಬೇಕೆಂಬುದು ಕ್ಷಣ ಮಾತ್ರ ಆಕೆಗೆ ಹೊಳೆಯಲೇ ಇಲ್ಲ.

"ನೀ ...ನೀ ? ಈಗ ಹ್ಯಾಂಗಾ ?" ಪ್ರತಿಕ್ರಿಯೆಯಂತೆ ಅರ್ಥವಿಲ್ಲದ ಶಬ್ದಗಳು ತೇಲಿದವು.

"ನಾನು ನಾನೇs." ಸುಮತಿ ನಕ್ಕಳು ಎಷ್ಟು ಸೊರಗಿದ್ದಾಳೆ? "ಈಗ ಹ್ಯಾಂಗ ಅಂದರ, ಈವತ್ತು ಸೋಮವಾರ- ನಮ್ಮ ಬ್ಯಾಂಕಿಗೆ ಸೂಟಿ. ನಿನಗ ಭೆಟ್ಟಿಯಾಗಿ ಹೋಗಬೇಕಂತ ಬಂದೆ."

ಅಕ್ಕರತೆ ಮಾಡಿಕೊಂಡು ಬಂದಿದ್ದಾಳೆನ್ನಿಸಿತು ಸುಜಾತಾಗೆ. ಆಕೆಯ ಮಾತು ಕೇಳುತ್ತಿದ್ದಂತೆ, ಕೃತ್ರಿಮ ನಗೆ ನೋಡುತ್ತಿದ್ದಂತೆ.

"ಒಳಗ ಬಾರಲ್ಲ? ಬಾಗಿಲದಾಗs ಯಾಕ?"

ಸುಮತಿ ಒಳಗೆ ಕಾಲಿರಿಸಿದಳು. ವಿಶೇಷ ಆಡಂಬರವಿಲ್ಲದ ಪ್ರಶಸ್ತ ಪಡಸಾಲೆ-ಗೋಡೆಯಲ್ಲಿಯ ಕಪಾಟಿನಲ್ಲಿ ಟೂ ಇನ್ ವನ್ ಒಂದು ಮೂಲೆಯಲ್ಲಿ ಸ್ಟೀಲ್ ಕಪಾಟ. ಒಂದು ಗೋಡೆಗೆ ದಿವಾನ್. ಅದರ ಮೇಲೆ ಕಸೂತಿ ಹಾಕಿದ ಹೊದಿಕೆಯ ದಿಂಬುಗಳು, ಬದಿಗೆ ಟೀಪಾಯ್ ಮೇಲೆ ಟೇಬಲ್ ಲ್ಯಾಂಪು. ನಿಸವೆ ಕಟ್ಟಿಗೆಯ ಎರಡು ಸಾದಾ ಖುರ್ಚಿಗಳು. ನಿಂತಲ್ಲಿಂದಲೇ ಕಾಣುವ ಅಡುಗೆ ಕಟ್ಟಿ. ಅದರ ಮೇಲೆ ಗ್ಯಾಸ್ ಒಲೆ ಬದಿಯ ಶೆಲ್ಫಿನಲ್ಲಿ ಪಾತ್ರೆಗಳು ಕುಕ್ಕರು....

ಅಕ್ಕನ ಕುತೂಹಲ ನೋಡಿ ಸುಜಾತಾ ಅವಳಿಗೆ ಅಡಿಗೆ ಮನೆಯನ್ನು ತೋರಿಸಿದಳು. "ಎಲ್ಲಾ ಜೋಡಣೆ ಆಗಬೇಕು" ಆಕೆ ನಕ್ಕಳು.

"ಪ್ರತಿ ತಿಂಗಳೂ ಥೋಡೆ ಥೋಡೆ ಮಾಡಲಿಕ್ಕ ಹತ್ತೀವಿ." ತಂಗಿ ಒಂದಿಷ್ಟು ಸಂಕೋಚದಿಂದ ಹೇಳಿದಳು.

ಸುಮತಿಗೆ ಅದೇನೆನ್ನಿಸಿತೋ? ಉಂಡು ಬಿಟ್ಟ ತಟ್ಟೆಗಳನ್ನು ಮುಸುರೆ ಪಾತ್ರೆಗಳನ್ನು ಸುಜಾತಾ ಬೇಡ ಬೇಡನೆಂದರೂ. ಎತ್ತಿ ಬಚ್ಚಲಿಗೆ ಹಾಕಿದಳು. ಉಳಿದ ಅಡಿಗೆಯನ್ನು ಸಣ್ಣ ಪುಟ್ಟ ಪಾತ್ರೆಗಳಲ್ಲಿ ತೆಗೆದಿಟ್ಟಳು. ಅಡಿಗೆ ಕಟ್ಟಿ, ನೆಲ ಒದ್ದೆಯಿಂದ ಒರಸಿದಳು.

"ನನ್ನ ಕೈಗೇನು ಹತ್ತ್ಯದ ಏನು? ಇದು ಮುಗಿಸಲಿಕ್ಕಾಗ ಎಷ್ಟು ಮುಗಿತು. ನೋಡು ಕೆಲಸದಾಕಿನ್ನ ಹಚ್ಚಿಲ್ಲ ಇಲ್ಲೋ?" "ಹಚ್ಚೇವಿ" ಸುಜಾತಾ ಅಂದಳು: "ಆದರ ಇಂದು ಬೆಳಗಿನಿಂದ ಬಂದೇ ಇಲ್ಲ."

"ಚ್ಚು ಚ್ಚು ಚ್ಚು! ನನ್ನ ಹಿಂಗ ನಾಗ ಥಾಂಡಿ ತೋರದು ಇಟ್ಟು ...

> ಈ ಅಕ್ಕ ಇಷ್ಟು ರಸಿಕಳೇ? ಬರೀ ರುಕ್ಷ; ಒಂಟಿತನ ಬಯಸುವ ಜೀವಿ ಈಕೆಯೆಂದು ನನಗನ್ನಿಸಿತ್ತು....?

ನೀನು?" ಅಕ್ಕ ಟೊಂಕಕ್ಕೆ ಸೆರಗು ಕಟ್ಟಿದಳು.

"ಬ್ಯಾಡ, ಮಹಾರಾಯಳ್ಹs. ಎರಡು ಭಾಂಡಿ ಅವ, ಆಕಿ ಹಿಂದಾಗಡೆ ಬಂದರೂ ಬರಬಹುದು" ಸುಜಾತಾ ಅವಳ ಕೈ ಹಿಡಿದು ತಡೆದಳು. "ನೀಯೇನು ಇಲ್ಲಿ ಮುಸುರಿ ತಿಕ್ಕಲಿಕ್ಕೆ ಬಂದಿಲ್ಲ. ಹೌದಲ್ಲೋ?"

"ಜರೂರ ಬಿದ್ದರ ತಂಗೀ ಮನೀಗೆ ಅದಕ್ಕೂ ಬರಲಿಕ್ಕೇಬೇಕಲ್ಲ?" ಇಬ್ಬರೂ ಪಡಸಾಲೆಗೆ ಬಂದರು.

"ಎಷ್ಟು ದಿವಸ ಆದವು?"

"ಯಾವದಕ್ಕ?"

"ಅದಕ್ಕs" ಸುಮತಿ ಸಲಿಗೆಯಿಂದ ತಂಗಿಯ ರಟ್ಟೆ ಚಿವುಟಿದಳು.

"ನಿನಗ ಹ್ಯಾಂಗ ಗೊತ್ತಾತು? ಯಾರ ಹೇಳಿದರೇನು?"

"ನಿನ್ನ ಮಾರೀನ ಹೇಳಿತು. ನೀ ಊಟಾ ಮಾಡದೇ ಬಿಟ್ಟ ತಾಟು ಹೇಳೀತು. ನೀ ಉಲಟಿ ಮಾಡಿಕೊಂಡು, ನೀರು ಹಾಕದೆ ಬಿಟ್ಟ ಬಟ್ಟಲು ಹೇಳಿತು. ಇನ್ನೂ ಏನು ಬೇಕು, ಹೇಳು."

"ಎಂಥಾ ಪಕ್ಕಾ ಇದ್ದೀಯ ನೀನು?" ನನ್ನ ಪ್ರಶ್ನೆಗೆ ಇದು ಉತ್ತರ ಅಗಲಿಲ್ಲ. ನಾ ಕೇಳಿದೆ ಎಷ್ಟು ದಿವಸ ಆದವೂ ಅಂತ."

"ಎನೋಪಾ, ನನಗೂ ಲೆಕ್ಕ ಇಲ್ಲ."

"ಹಂಗಾರ ಹಿಂಗ ಮಾಡು ನೀ ದಿವಾನ್ ಮ್ಯಾಲೆ ಅಡ್ಡಾಗು. ನಾ ನಿನ್ನ ಹಂತೇಲೆ ಕೂಡತೇನಿ. ಅಥವಾ ಆ ಪರವಾನಗಿ ನನಗ ಇಲ್ಲೋ?"

"ನಿನಗ ಎಲ್ಲಾ ಪರವಾನಗಿ ಅದ, "ಸುಜಾತಾ ಅಕ್ಕನ ಆಗ್ರಹದಂತೆ ದಿವಾನ್ ಮೇಲೆ ಅಡ್ಡಾದಳು. ದಣಿದ ಜೀವಕ್ಕೆ ಅಷ್ಟೇ ಸುಖವೆನ್ನಿಸಿತು.

ಈ ಅಕ್ಕ ಇಷ್ಟು ರಸಿಕಳೇ? ಬರಿ ರುಕ್ಷ, ಒಂಟಿತನ ಬಯಸುವ ಜೀವಿ ಈಕೆಯೆಂದು ತನಗನ್ನಿಸಿತ್ತು. ಅಥವಾ ಮಾತು ಮಾತಿನಲ್ಲಿ ಅನಂತನೂ ಹಲವು ಹತ್ತಾರು ಪರಿ ತನ್ನ ಮನಸ್ಸಿನ ಮೇಲೆ ಬಿಂಬಿಸಿದ್ದ ಅಥವಾ ಎಲ್ಲೋ ಓದಿದಂತೆ ಶಯ್ಯಾಗೃಹದಲ್ಲಿಯ ವ್ಯಕ್ತಿಯೋ ಬೇರೆ, ಹೊರಗಿನ ವ್ಯಕ್ತಿಯೋ ಬೇರೆ, ಹೀಗೇನಾದರೂ ಇದೆಯೋ? ತನ್ನೊಡನೆ ಸರೀಕಳಂತೆ ಚೇಷ್ಟೆ ಮಾಡುವ ಅಕ್ಕ, ಅನಂತನ ಜತೆ ಮಲಗುವಾಗ ಒಣ ಕೊರಡಾಗಿರಬಹುದೇ? ಹಾಗೆ ಅವನು ಎಷ್ಟು ಸಲ ಹೇಳಿಲ್ಲ?

"ನೀ ಫೇಟ್ ನಿಮ್ಮ ಅಕ್ಕನ ವಿರುದ್ಧ!" ಅಂತ....

"ಯಾಕ, ಸುಮ್ಮಾದಿ? ನಿದ್ದಿ ಬಂತೇನು? ಮಲಕೋತಿದ್ದರ ಮಲಕೋ ಗಳಿಗೆ ಹೊತ್ತು. ನಾ ಅಲ್ಲಿ ತನಕಾ ಪೇಪರು ಓದತೇನಿ. ಅಲ್ಲಿ ಇಲ್ಲಿ ಒಂದಿಷ್ಟು ಸ್ವಚ್ಛ ಮಾಡತೇನಿ" ಎಂದಳು ಸುಮತಿ.

"ನಿದ್ದಿ ಬಂದಿಲ್ಲ, ಏನೂ ಇಲ್ಲ. ಸುಮ್ಮ ಕಣ್ಣು ಮುಚ್ಚಿದ್ದೆ. ಖರೇ ಹೇಳಲೀ?"

"ಹೇಳು."

"ನೀ ಹೀಂಗ ನನಗ ತಬ್ಬಿಕೊಂಡು ಕೂತರ, ಇವರು ಕೂತ ಹಾಂಗ ಅನಸ್ತsದ."

"ರಾಸ್ಕಲ್!" ಅಕ್ಕನ ನಗು ಅದೆಷ್ಟು ಬಿಚ್ಚಿದ ಮನಸ್ಸಿನದೆಂದು ಸುಜಾತಾಳಿಗೆ ಸೋಜಿಗವಾಯಿತು. ಹಿಂದಿನ ವಿಚಾರದ ಕೊಂಡಿ ಮತ್ತೆ ಜೋಡಿಸಿಕೊಂಡಿತು. ಅಥವಾ ಹೀಗಿರಬೇಕು. ಅನಂತ ಬಿಟ್ಟಾಗಿನಿಂದ, ಇವಳಲ್ಲಿ ಸುಪ್ತ ಭಾವನೆಗಳು ಜಾಗೃತಗೊಂಡಿರಬೇಕು. ಹಾಗಾಗದಿರಲಿಕ್ಕೆ ಇವಳೇನು ಮುದುಕಿಯೇ? ಇವಳ ಶರೀರ ಮನಸ್ಸುಗಳೆರಡೂ ಪುರುಷ ಸಂಗಕ್ಕಾಗಿ ತಹತಹಿಸುತ್ತಿರಬೇಕು. ಆಕೆ ನನ್ನಲ್ಲಿ ತನ್ನನ್ನು ಗುರುತಿಸಿಕೊಂಡಿರಬೇಕು. ಅದರಲ್ಲೂ ನಾನು ಬಯಕೆ ಹೆಣ್ಣು. ಎಲ್ಲವೂ ಸಾಹಜಿಕ, ನೈಸರ್ಗಿಕ....ಸುಜಾತಾ ಕಣ್ಣು ಮುಚ್ಚಿಯೇ ನಕ್ಕಳು. "ನೀನ್ಯಾಕೆ ಯಾಕ ಕೂಡತಿ? ನೀನೂ ಅಡ್ಡಾಗು ಇಲ್ಲೇ". ಕುಳಿತಾದರೂ ಮಾಡುವದೇನು? ಸುಮತಿ ಅಡ್ಡಾದಳು, ತಂಗಿಯ ಕಡೆಗೆ ಬೆನ್ನು ಮಾಡಿ. ಸುಜಾತಾ ಅವಳನ್ನು ತೋಳ ತೆಕ್ಕೆಯಲ್ಲಿ ಹಿಡಿದೇ ನಿರಾಳವಾಗಿ ಮಲಗಿದಳು.

ಆಕೆ ಅದೆಷ್ಟು ಹೊತ್ತು ಮಲಗಿದ್ದಳೋ? ಎಚ್ಚರಾದಾಗ ಸುಮತಿ ಮಗ್ಗಲಲ್ಲಿರಲಿಲ್ಲ. ಪಡಸಾಲೆ ಅಡಿಗೆ ಮನೆಯ ನಡುವಿನ ಬಾಗಿಲು ಮುಂದಾಗಿತ್ತು. ಬಹುಶಃ ಬಚ್ಚಲಿಗೆ ಹೋಗಿರಬೇಕು—ಆದರೆ ಎಷ್ಟು ಹೊತ್ತು? ಒಳಗೆ ಪಾತ್ರೆಗಳ ಸದ್ದಾಯಿತು. ಸುಜಾತಾ ಎದ್ದಳು. ನೋಡಿದರೆ ಸುಮತಿ ಈಗಾಗಲೇ ಎಂಜಲು ಮುಸುರೆ ಪಾತ್ರೆಗಳನ್ನು ತಿಕ್ಕಿ ಮುಗಿಸಿದ್ದಳು. ಒಂದಿಷ್ಟು ಅವಲಕ್ಕಿ ನೆನಸಿದ್ದಳು. ಟೊಮ್ಯಾಟೋ ಮೆಣಸಿನಕಾಯಿ ಹೆಚ್ಚಿಟ್ಟಿದ್ದಳು. ಗ್ಯಾಸ್ ಮೇಲೆ ಪಾತೇಲಿ ಇಟ್ಟು ಒಗ್ಗರಣೆ ಹಾಕಿದ್ದಳು. "ನೀ ಯಾಕ ಇಷ್ಟು ಲಗೂ ಎದ್ದಿ?" ಆಕೆ ತಂಗಿಗೆ ಕೇಳಿದಳು.

"ಆರಾಮ ನಿದ್ದಿ ಆತು ಖರೇ ನೀ ಮಲಕೊಳ್ಳಲೇ ಇಲ್ಲೇನು?"

"ನಾನೂ ಎದ್ದು ಒಂದು ಹತ್ತು ಮಿನಿಟು ಆತು ಅಷ್ಟೇ."

ಸುಮತಿ ಅವಲಕ್ಕಿ ಮಾಡಿದಳು. ಸುಜಾತಾ ಚಹ ಮಾಡಿದಳು. ಅವಲಕ್ಕಿ ತಿನ್ನುತ್ತ ಚಹ ಕುಡಿಯುತ್ತ ಪರಸ್ಪರ ಪ್ರಶಂಸಿಸಿದರು.

"ಆರು ಹೊಡೀಲಿಕ್ಕೆ ಬಂತವಾ ನಾ ಹೋಗತೇನಿ" ಸುಮತಿ ಎದ್ದಳು. "ಕುಂಕುಮಾ ಹಚ್ಚು."

ಸುಜಾತಾ ಕುಂಕುಮ ಹಚ್ಚಿದಳು.



...ಇಟ್ಟುಕೊಂಡಳು.

ಮಂಗಳ ಸೂತ್ರ ಛಲೋ ಅಗೇದ. "ಸುಮತಿ ತಂಗಿಯು ಮಂಗಳ ಸೂತ್ರ ಕೈಯಲ್ಲಿ ಹಿಡಿದು ನೋಡಿ ಹೇಳಿದಳು. ಸುಜಾತಾಳ ಗಂಟಲು ಉಬ್ಬಿತು. ಇದಕ್ಕೆ ಏನು ಉತ್ತರ ಹೇಳಬೇಕು ? ಆಕೆ ಸುಮತಿಯ ಕೊರಳಲ್ಲಿಯ ಮಂಗಳ ಸೂತ್ರದತ್ತ ಮೂಕಳಂತೆ ನೋಡಿದಳು. ತನ್ನದು ಹೊಸದು ಇಪ್ಪತ್ತೈದು ಗ್ರಾಮಿನದು. ಆಕೆಯದು ಮಾಸಲು ಹನ್ನೆರಡೋ ಹದಿನೈದೋ ಗ್ರಾಮಿನದು ಇರಬೇಕು.

"ದಗದಗಿ ಮಾಡಕೊಬ್ಯಾಡ ವಿಶ್ರಾಂತಿ ತೊಗೊ ನಾ ಮತ್ತು ಬರತೀನಿ" ಸುಮತಿ ಮುಂಗೈ ಗಡಿಯಾರ ನೋಡುತ್ತ ಪಾವಟಗೆ ಇಳಿದು ಹೋದಳು. ಆಕೆ ಕಾಣದಾಗುವವರೆಗೆ ಸುಜಾತಾ ಬಾಗಿಲಲ್ಲೇ ನಿಂತಳು. ಇಷ್ಟು ಅವಸರದಿಂದ ಈಕೆ ಹೋದದ್ದೇಕೆ? ಇನ್ನೊಂದಿಷ್ಟು ತಡವಾದರ ಅನಂತ ಮನೆಗೆ ಬರುತ್ತಾರೆಂದು ಅವರೊಡನೆ ಹೇಗೆ ವರ್ತಿಸಬೇಕೆಂದು ಸಂಕೋಚವೆ ?

ಹಾಗೂ ಇರಲಿಕ್ಕಿಲ್ಲ. ತನ್ನೊಡನೆ ಹೇಗೆ ಸಹಜವಾಗಿ ನಡೆದುಕೊಂಡಳು? ತಾನು ಇನ್ನಾರನ್ನೋ ಮದುವೆಯಾಗಿದ್ದ ಹಾಗೆ! ಮಂಗಳಸೂತ್ರವನ್ನೂ ಎತ್ತಿ ನೋಡಿದಳು. ಕೌತುಕ ಮಾಡಿದಳು. ತನಗೆ ಮಧ್ಯಾಹ್ನ ಊಟ ಹೋಗಿಲ್ಲವೆಂದು ಟೊಮ್ಯಾಟೋ ಹಾಕಿ ತೊಯ್ಸಿದವಲಕ್ಕಿ ಮಾಡಿದಳು.

ಆಕೆ ದಿವಾನ್ ಮೇಲೆ ತನಗೆ ತಬ್ಬಿಕೊಂಡು ಕುಳಿತಾಗ ತಾನು "ಇವರ ಕೂತ್ತಾಂಗ ಅನಸ್ತದ" ಅಂದಾಗ "ವಾಸ್ತವ" ಅಂದಳು ಎಷ್ಟು ಸಹಜ, ಅಕೃತ್ರಿಮ! ಅಷ್ಟೇ ಅಲ್ಲ, ಒಬ್ಬ ಮುತ್ತೈದೆ ಇನ್ನೊಬ್ಬ ಮುತ್ತೈದೆಗೆ ಹೇಳುವಂತೆ ಹೇಳಿ ಕುಂಕುಮ ಹಚ್ಚಿಸಿಕೊಂಡಳು. ಅವಳ ಕಣ್ಣಲ್ಲಿ ಟಿಚ್ಚೆಂದು ನೀರು ಬಂತು. ತಾನು ಹಚ್ಚಿದ ಕುಂಕುಮದ ಧಣಿ ಯಾರು ?....

"ಇದು ನಿಮ್ಮ ಅಕ್ಕನ ಸ್ಪೇಶಾಲಿಟಿ. ನಿನಗ ಹ್ಯಾಂಗ ಸಾಧಿಸಿತು?" ತಾವು ತಿಂದು ಉಳಿದ ಅವಲಕ್ಕಿ ಬಂದಿಷ್ಟು ಬಿಸಿ ಮಾಡಿ ಕೊಟ್ಟಾಗ ಅನಂತ ಹೇಳಿದ. ಆಕೆ ಚಹ ಕೊಡುತ್ತಿದ್ದಂತೆ ಇನ್ನೊಮ್ಮೆ ಹೇಳಿದ.

"ಅವಲಕ್ಕಿ ಉತ್ತಮ ಆಗ್ಯಾದ."

"ಹಿಂಗ ಎಂದ ನಮ್ಮ ಅಕ್ಕಗ ಹೇಳಿದೀರೇನೂ.

ಆಕೆ ಕೊಂಕು ನಗೆ ಬೀರಿದಳು.

"ಛಲೋದಕ್ಕ ಛಲೋ ಅನ್ನಲಿಕ್ಕೇ ಬೇಕು."

ಅವನು ಮೋಗಮ್ಮಾಗಿ ಹೇಳಿದ.

ರಾತ್ರಿಯ ಊಟ ಕೆಲಸ ಮುಗಿಸಿ ಗಂಡನ ಮಗ್ಗಲಲ್ಲಿ ಮಲಗುತ್ತಿದ್ದಂತೆ ಸುಜಾತಾ ಹೇಳಿದಳು "ಈವತ್ತ, ನಿಮ್ಮ ಹೆಂಡತಿ ಬಂದಿದ್ದಳು."

"ನನ್ನ ಹೇಂತ್ತೀ? ನನ್ನ ಹೇಂತಿ ಇಲ್ಲೇ ಇದ್ದಾಳ" ಅವನು ಅವಳನ್ನು ತಬ್ಬಿಕೊಂಡ." ಮೊದಲಿನ ಹೆಂಡತಿ ಅನ್ನಿರಿ. ಬೇಕಾದರ"

"ಬ್ಯಾಡಾದರ ?"

ತಾನು ಹೇಳಲೋ ಬೇಡವೋ ಎಂದು ಸಂಜೆಯಲ್ಲಿ ಹೊಟ್ಟೆಯಲ್ಲಿಟ್ಟುಕೊಂಡು ಈಗ ಇಷ್ಟು ಗಂಭೀರವಾಗಿ ಹೇಳಿದರೆ, ಇವರಿಗೆ ಎಲ್ಲ ನಗೆಚಾಟಿಕೆ! ಆಕೆ ಗಂಡನತ್ತ ಬೆನ್ನು ತಿರುವಿದಳು. ಅವನಿಗೆ ಅದೂ ಆಟವೇ. "ನಿಮ್ಮ ಸಂಗತಿ ಮಾತಾಡಾಂಗಿಲ್ಲ, ಹೋಗ್ರಿ" ಆಕೆ ಅವನ ಕೈ ತೆಗೆದು ಹಾಕಿದಳು.

"ಎಲ್ಲಿ ಹೋಗಲೀ?" ಅವನ ಅಡ್ಡ ಮಾತು- ಆಕೆ ಸುಮ್ಮನಾದಳು.

ಸುಮತಿ ಮಧ್ಯಾಹ್ನ ಮನೆಗೆ ಬಂದಾಗ ತನ್ನೊಡನೆ ವರ್ತಿಸಿದ್ದು ಅವಳಿಗೆ ವಿಶೇಷವೆನಿಸಿತ್ತು. ಅದು ಅವಳ ಸಹಜ ಗುಣವೋ, ಪ್ರತಿಕ್ರಿಯಾತ್ಮಕವೋ ಎನ್ನುವಷ್ಟು ಗೊಂದಲವಾಗಿತ್ತು. ಈಗ ಈ ಗಂಡ ಇವನು ತನ್ನ ಮೇಲೆ ತೋರಿಸುತ್ತಿರುವ ಪ್ರೀತಿ ನಿಜ ಎಷ್ಟು, ಪ್ರತಿಕ್ರಿಯಾತ್ಮಕ ಎಷ್ಟು ?

ತನ್ನ ಮೊದಲಿನ ಹೆಂಡತಿ ಎಷ್ಟು ಕ್ರೂರಿ ಅರಸಿಕ, ರುಕ್ಷ ಒಣ ಕೊರಡು, ತಾನು ಅದೆಷ್ಟು ರಸಿಕ, ಶೃಂಗಾರ ಪ್ರಿಯ ಎಂದು ತೋರಿಸಿಕೊಳ್ಳುವದಕ್ಕಾಗಿ ಅತ ತನ್ನ ಮೇಲೆ ಇಷ್ಟು ಪ್ರೇಮ ಸೂಸುತ್ತಿರ ಬೇಕೇನು ? ಹೀಗೆ ಪ್ರೀತಿಸುವದು ತನ್ನ ಸಹಜ ಗುಣ ತಾನು ಬಯಸುವದೂ ಇಂತಹ ಪ್ರೀತಿಯನ್ನೇ ಎಂದೇನಾದರೂ ಅವನು ಪ್ರಯತ್ನಪೂರ್ವಕವಾಗಿ ಸೂಚಿಸುತ್ತಿದ್ದಾನೆಯೇ ? ಹೀಗೆ ಯಾವ ಭಾವನೆಯನ್ನು ಪ್ರಕಟಿಸಲೆತ್ನಿಸಿದರೂ ಅದಕ್ಕೆ ಕೃತ್ರಿಮತೆಯ ವಾಸನೆ ಬರುತ್ತದೆ. ಒಮ್ಮೊಮ್ಮೆ ಹಾಸ್ಯಾಸ್ಪದವೂ ಆಗುತ್ತದೆ.

ಅಥವಾ...ಅಥವಾ...ಅವಳ ಎದೆ ಧಸ್ಸೆಂದಿತು. ತಾನು ಅವನ ಮೇಲೆ ತೋರುತ್ತಿರುವ ಪ್ರೇಮವೂ ಇದೇ ಜಾತಿಯದೇ ? ಇಷ್ಟೇ ಕೃತ್ರಿಮವೇ ?

ನೋಡು, ನಿನ್ನಕ್ಕ ನನ್ನನ್ನು ಮನಸಾ ಪ್ರೀತಿಸಲಿಲ್ಲ. ಶುಷ್ಕ ಕಾಷ್ಠದಂತೆ ನನ್ನೊಡನೆ ಮಲಗಿದಳು. ನಾನು ಮಹಾ ರಸಿಕ. ಆದಕ್ಕೇ ಅವಳನ್ನು ಬಿಡಬೇಕಾಯಿತು. ನನ್ನ ಜೀವನದಲ್ಲಿಯ ರಸಪಕ್ವತೆಯನ್ನು ಇನ್ನೊಂದು ವ್ಯಕ್ತಿಯಲ್ಲಿ ಶೋಧಿಸಬೇಕಾಯಿತು. ನಾನು ವಿಶುದ್ಧ ನಿರಾಪರಾಧಿ. ಅಷ್ಟೇ ಅಲ್ಲ ಅನ್ಯಾಯಕ್ಕೆ ಒಳಗಾದವ, ಎಂದೆಲ್ಲ ಅವನು ಸೂಚಿಸುತ್ತಿದ್ದಾನೆ. ಹೀಗೆ ಮಾತುಗಳಲ್ಲಿ ಸ್ಪಷ್ಟವಾಗಿ ಹೇಳಿದರೂ ಸ್ಪಷ್ಟವಾಗದೆನ್ನುವಂತೆ ತನ್ನ ವರ್ತನೆ ಇಟ್ಟುಕೊಂಡಿದ್ದಾನೆ. ಇಷ್ಟು ತಾನೂ ? ತಾನು ಹಾಗಲ್ಲ. ತಾನೂ ರಸಿಕಳು ಶೃಂಗಾರ ಪ್ರಿಯೆ, ಮಿಕ್ಕವರಿಗಿಂತ ತೂಕ ಹೆಚ್ಚು. ತನ್ನ ವೈಯಕ್ತಿಕ ಸ್ವಾರ್ಥಕ್ಕಿಂತ ಪ್ರಿಯ ವ್ಯಕ್ತಿಯ ಸುಖ ಹೆಚ್ಚು. ಆ ಸುಖಕ್ಕಾಗಿ ಸರ್ವಸ್ವವನ್ನೇ ಧಾರೆಯೆರೆಯಬಲ್ಲವಳು. ತ್ಯಾಗವಿಲ್ಲದ ಪ್ರೇಮವೆಂತಹದು? ಎಂದು ಘಂಟಾಘೋಷವಾಗಿ ಹೇಳುವಂತಹ ಪ್ರೇಮ.

ಪರಿತ್ಯಾಗದ ಮೊದಲಿನ ಸುಮತಿ ನಂತರದ ಸುಮತಿ ಬೇರೆ ಬೇರೆಯಾಗಿದ್ದರೆ, ತಾನೂ ಅನಂತನೂ ಕ್ಷಣಕ್ಷಣಕ್ಕೆ ದಿನದಿನಕ್ಕೆ ಬದಲಾಗುತ್ತಿದ್ದೇವೆ. ಅಥವಾ ಸುಮತಿಯೂ ಬೇರೆಯಾಗಿಲ್ಲ, ತಾವೂ ಬದಲಾಗಿಲ್ಲ. ಎಲ್ಲವೂ ಮೊದಲಿನಂತೆಯೇ. ತಮ್ಮ ದೃಷ್ಟಿ ಬದಲಾಗುತ್ತದೆ. ಶಾಂತವಾದ ಕೆರೆಯಲ್ಲಿ ಕಲ್ಲು ಬಿದ್ದಾಗ ಏಳುವ



ತೆರಿಗಳು ಅವು ಹೊತ್ತ ನೀರು ದಂಡೆಯುವ
ಗೆ ಮುಟ್ಟಿಸುತ್ತವೆ ಎನಿಸುತ್ತದೆ. ವಾಸ್ತ
ಕವಾಗಿ ಹಾಗೆ ಎಂದೂ ಆಗುವದಿಲ್ಲ. ಆ
ೀರು ಅಲ್ಲೀ ಕೆಳಗು ಮೇಲಾಗುತ್ತದೆ.
ಭ್ರಮೆ ಹುಟ್ಟಿಸುತ್ತದೆ. ಅದರಂತೆಯೇ ಈ
ಪರಸ್ಪರ ಸಂಬಂಧ ಕೂಡ. ಅಥವಾ ಇದಾ
ದರೂ ಅಂತಿಮ ಸತ್ಯವೇ? ಆಕೆಗೆ ಗೊಂದಲ
ಹುಟ್ಟುಕೊಂಡೀತು. ಸುಮತಿ ಮನೆಗೆ
ಬಂದದ್ದರಿಂದ ಇಷ್ಟೆಲ್ಲ ಕಲಕಿದಂತಾಯಿತು.
ಳದಲ್ಲಿಯ ರಾಡಿ ಮೇಲೆದ್ದಿತು. ಅಂದರೆ
ಳಗೆಲ್ಲ ರಾಡಿಯೇ ಇದೆಯೇ !....

ಇನ್ನೂ ಸಿಟ್ಟು ಹೋಗಿಲ್ಲೇನು? ಅನಂತ
ವಳನ್ನು ತನ್ನ ಕಡೆಗೆ ತಿರುವಿಕೊಂಡ.

"ಹೋಗಲಿಕ್ಕೆ ಬಂದಿತ್ತಿಲ್ಲಿ?" ಆಕೆ
ಯಾಂತ್ರಿಕವಾಗಿ ಹೇಳಿದಳು.

"ಏನಂತಿದ್ದಳು ಮಹಾಮಾಯಾ?"
ಸುಜಾತಾಗೆ ಈ ಉಪಾಧಿ ಹಿಡಿಸಲಿಲ್ಲ.
ಕೆ ಸುಮ್ಮನಾದಳು.

"ಏನಂತಿದ್ದಳು ?" ಅವನು ಮತ್ತೆ
ಕೇಳಿದ.

"ದಗದಗಿ ಮಾಡಿಕೊಬ್ಯಾಡ ತ್ರಾಸ
ಮಾಡಕೋಬ್ಯಾಡ, ಅಂದಳು."

"ದಗ ದಗೀ ? ತ್ರಾಸ ? ನಿನಗ್ಯಾತರ
ತ್ರಾಸ ?"

"ಈಗ ಊಟಾ ಅದೂ ಹೋಗೂದಿಲ್ಲ.
ಯಕಿ ಹತ್ತಾವಲ್ಲ ಅದಕ್ಕ"

"ನೀ ಯಾಕ ಅದನ್ನೆಲ್ಲ ಹೇಳಲಿಕ್ಕೆ
ಹೋಗಿದ್ದೀರಿ."

"ಇವೆಲ್ಲ ಹೇಳದೆಯೇ ಹೆಂಗಸರಿಗೆ ತಿಳೀ
ತಾವ" ಅವನು ಮಾತಾಡಲಿಲ್ಲ.

o o c o

ಮರುಸೋಮವಾರ ಸುಮತಿ ಸುಜಾ
ತಾಳ ಮನೆಗೆ ಹೋದಾಗ ಬಾಗಿಲು ತೆಗೆದೇ
ತ್ತು.

"ಇದೇನು, ನೀ ಮಲಕೊಂಡೇ ಇಲ್ಲ ?"
ಆಕೆ ಕೇಳಿದಳು.

"ನೀ ಬರತೀ ಅಂತ ನನಗ ಗೊತ್ತಿತ್ತು"
ಆಕೆ ನಕ್ಕಳು. "ಈವತ್ತು ಕೆಲಸದಾಕಿ
ಬಂದ ಹೋಗ್ಯಾಳ. ನಾನೂ ಎಲ್ಲಾ ಕೆಲಸ
ಮುಗಿಸೇನಿ ಅದಕ್ಕ ನಿನಗ ಅಡಿಗೆಮನೆಗೆ
ಪ್ರವೇಶ ಬಂದ್."

ಇಬ್ಬರೂ ದಿವಾನ್ ಮೇಲೇ ಕೂ
ತರು.

"ನೀ ಕಳಿಸಿದ ಮೆಂತ್ಯಹಿಟ್ಟು ಚಟ್ನಿ
ಪುಡಿ, ಉಪ್ಪಿನಕಾಯಿ, ಸಂಡಿಗೆ, ಹಪ್ಪಳ,
ನನಗ ನಾಕು ತಿಂಗಳು ಸಾಕಾಗತಾವ.
ಸುಜಾತಾ ಹೇಳಿದಳು.

"ಒಬ್ಬಳS ತಿಂದರ ?" ಸುಮತಿ
ನಕ್ಕಳು.

"ಮತ್ತ ನಾ ಒಬ್ಬಳS ತಿನ್ನಾಕಿ"
ಸುಜಾತಾ ಕೂಡ ನಕ್ಕಳು. ಅವರಿಗೆ
ತೋರಿಸಿದರ ಎಂಟು ದಿವಸ ಸಾಕಾಗ
ಲಿಕ್ಕಿಲ್ಲ"

"ಚಕ್ಕಲಿ ಹ್ಯಾಂಗ ಆಗಿದ್ದವು ?"

"ಮುಗಿಸದವರನ್ನS ಕೇಳು"

"ಅಂದರ ಮತ್ತ ಅತ್ತೆವ್ವನ್ನ ರಿಕ್ಷಾ
ಮಾಡಿ ಕಳಿಸಬೇಕಾತು.

ಸುಜಾತಾ ಅಲ್ಲೇ ಅಡ್ಡಾದಳು. ನಿನ್ನ
ಮಾರೀ ಮ್ಯಾಲೆ ಈಗ ಛಲೋ ಕಳೆ
ಬಂದದ.

ಸುಮತಿ ತನ್ನ ಜಂಬದ ಚೀಲ ತೆಗೆದಳು.

'ತಾನು ತಂದೆಗೆ ತಿಳಿಸದೇ ಅಕ್ಕನ ಗಂಡನ ಜೊತೆಗೆ ಕಾಂಟ್ರಾಕ್ಟ್ ಮ್ಯಾರೇಜ್ ಮಾಡಿಕೊಂಡೆನೆಂದು ಪಶ್ಚಾತ್ತಾಪವೇ? ಅಥವಾ ಗಂಡನನ್ನು ಹಾರಿಸಿಕೊಂಡು ಹೋದರೂ ಅದನ್ನು ಲಕ್ಷಿಸದೇ ಬರೀ ಅಕ್ಕನಾಗಿ ನಿಂತ ಸುಮತಿಗಾಗಿ ಈ ಕಂಬನಿಯೆ?...'

ಗುಲಾಬಿ ಬಣ್ಣದ ಕಾಗದ ಮೆತ್ತಿದ ತ
ತಳ ಹೊಳೆಯುವ ತೋಡೆ ತೆಗೆದಳು.

"ಮಾಡಿಸಿದೀ ?" ಸುಜಾತಾ ಆಸೆ
ಯಿಂದ ಕೇಳಿದಳು.

"ಹುಚ್ಚವ್ವ, ಇವು ಅವ್ವಾನ್ನ ಕೈಯಾ
ಗಿನ ತೋಡೆ ಅಲ್ಲೇನು ? ನಿನ್ನ ಮದಿವೀ
ದಶಿಂದ ಅಂತಾ ದಾದಾ ಈ ಬಂಗಾರ
ತೆಗದು ಇಟ್ಟಿದ್ದರು. ಹದಿನೈದು ತೊಲಿ
ಅವ- ಪಾಲಿಸ್ ಮಾಡಿಸಿದೆ. ನಿನಗ ಕೊಡ
ಬೇಕೆಂತ ತಂದೆ!"

ಸುಜಾತಾ ಎದ್ದು ಆ ತೋಡೆಗಳನ್ನು
ಅಕ್ಕರೆಯಿಂದ ಕೈಯಲ್ಲಿ ತೆಗೆದುಕೊಂಡಳು.
ಬೆಚ್ಚನೆ ಕಣ್ಣಲ್ಲಿ ನೀರು ಬಂತು.

ಎಂದೋ ಗತಿಸಿದ ತಾಯಿಗಾಗಿ ಈ
ಕಣ್ಣೀರೇನು ? ತಾನು ತಂದೆಗೆ ತಿಳಿಸದೆ
ಅಕ್ಕನ ಗಂಡನ ಜತೆಗೆ ಕಾಂಟ್ರಾಕ್ಟ್
ಮ್ಯಾರೇಜ್ ಮಾಡಿಕೊಂಡನೆಂದು ಪಶ್ಚಾ
ತ್ತಾಪವೇ ? ಅಥವಾ ಗಂಡನನ್ನು ಹಾರಿಸಿ
ಕೊಂಡು ಹೋದರೂ ಅದನ್ನು ಲಕ್ಷಿಸದೆ
ಬರಿ. ಅಕ್ಕನಾಗಿ ನಿಂತ ಸುಮತಿಗಾಗಿ ಈ
ಕಂಬನಿಯೋ ? ನೀರು ಬಳಬಳ ಹರಿಯ
ತೊಡಗಿತು. ಆಕೆ ಸೆರಗಿನ ತುದಿಯಿಂದ
ಕಣ್ಣೊರಸಿಕೊಂಡಳು.

"ಹುಚ್ಚೀ, ನಿಂದೇ ಅದು. ನಾ
ಮಾಡಿಸಿಕೊಟ್ಟೆಲ್ಲ. ಮಾಡಿಸಿದ್ದರೂ
ಹೊಸಾ ಫ್ಯಾಶನ್‌ದ್ದೇನಾದರೂ ಮಾಡಸ
ತಿದ್ದೆ" ಎಂದಳು ಸುಮತಿ.

"ಸುಮಿ, ಒಂದು ಹೇಳು. ದಾದಾಗ
ಹ್ಯಾಂಗ ಅನಿಸಿತು ? ಅತ್ತೆವ್ವ ಅಡವಾಸಿ
ಮೆಂತೆಹಿಟ್ಟು-ಚಕ್ಕಲಿ ಅದೂ ಇದೂ
ಅಂತ ತೊಗೊಂಡು ಎಂದಿಲ್ಲದೆ ಒಬ್ಬರೇ
ರಿಕ್ಷಾದಾಗ ಮನೀ ಕೇಳಿಕೊಂಡ ಬಂದರು.
ದಾದಾ ಯಾಕ ಬರಲಿಲ್ಲ ?"

ಏನು ಹೇಳಬೇಕು ? ಸುಮತಿ ಮೋರೆ
ತಿರುವಿದಳು.

"ಹೇಳಲ್ಲ ?" ಸುಜಾತಾ ಅಕ್ಕನ ಗದ್ದ
ಹಿಡಿದು ಕೇಳಿದಳು. ಆದರೂ ಆಕೆ
ಮಾತಾಡಲಿಲ್ಲ.

"ಹಂಗಾರ ಈ ತೋಡೆ ನಾ ತೊಗೊಳ್ಳೂ
ದಿಲ್ಲ" ಸುಜಾತಾ ಅಳತೊಡಗಿದಳು ಬಿಕ್ಕಿ
ಬಿಕ್ಕಿ. ಈ ದುಃಖವೇತರದು, ಆಕೆಗ

ಅರ್ಥವಾಗಲಿಲ್ಲ.

"ದಾದಾ ಸಿಟ್ಟಾದದ್ದಕ್ಕ, ಈ ತೋಡೆಕ್ಕ ಏನೂ ಸಂಬಂಧ ಇಲ್ಲ" ಸುಮತಿ ನಿರ್ಧಾರದಿಂದ ಹೇಳಿದಳು.

"ದಾದಾ ಸಿಟ್ಟಾದರು, ಸಹಜ. ತಲೆಮಾರಿನ ಅಂತರ ಅದ. ನೀ ಓಡಿಹೋದಿ-ಇದು ಅವರ ಶಬ್ದ-ಅಂತ ಅವರಿಗೆ ಸಿಟ್ಟಿಲ್ಲ. ಆದರ ನನ್ನ ಗಂಡನ್ನ ಓಡಿಸಿಕೊಂಡು ಹೋದೀ ಅಂತ ಸಿಟ್ಟು ಅದ."

"ಹಂಗಾರ ತೋಡೆ ಯಾಕ ಕೊಟ್ಟರು?" ಸುಜಾತಾ ಅಳುದನಿಯಲ್ಲೇ ಕೇಳಿದಳು.

"ಅವರು ಕೊಡಲಿಲ್ಲ ಅವರಿಗೆ ಕೊಡಬೇಕಾತು"

"ಅಂದರs"

"ಅಂದರs ಹಿಂಗಾತು. ಆ ವಿಷಯ ತಾವೇ ತೆಗೆದರು. ಸುಜೀದಶಿಂದ ತಗದಿಟ್ಟ ಭಂಗಾರ ಇನ್ನೇನು ಆಕೀಗೆ ಕೊಡೂದಿಲ್ಲ. ಅದರ ಮ್ಯಾಲೆ ಆಕೆಗೆ ಹಕ್ಕೂ ಇಲ್ಲ–ನೀನೇ ಅದನ್ನ ತೊಗೋ ಮುರಿಸಿ ಬೇಕಾದ್ದು ಮಾಡಿಸಿಕೋ ಅಂದರು" ಆಕೆ ತಡೆದಳು. ಮತ್ತೆ ಹೇಳತೊಡಗಿದಳು ಒಮ್ಮೆ ಹೇಳಿ ಮುಗಿಸುವ ಅವಸರದಲ್ಲಿ "ನಾ ಹೇಳಿದೆ ಅವರಿಗೆ ಇದು ಅವ್ವನ ಭಂಗಾರ ಮನೀ ಭಂಗಾರ ನನ್ನ ಮದಿವ್ಯಾಗ ಹದಿನೈದು ತೊಲಿ ಭಂಗಾರ ಹಾಕಿದಿರಿ. ಅಷ್ಟೇ ಭಂಗಾರ ಸುಜೀಗೂ ಕೊಡಲಿಕ್ಕೆಬೇಕು ಅಂತ. ಮದಿವಿ ಮಾಡಿ ಕೊಡೂ ಮುಂದ ಕೊಡತಿದ್ದೆವು. ಅಂತ ಅವರ ಹಟ. ಅದರಾಗ ಅಂತರ ಏನು, ಅಂತ ನಾ ಅಂದೇ. ನೀವು ಮಾಡಿಕೊಟ್ಟರ ಎಷ್ಟು, ಬಿಟ್ಟರ ಎಷ್ಟು? ಆಕೀ ಮದಿವೀದಶಿಂದ ಇದ್ದಿ ಭಂಗಾರ ಆಕೀ ಮದಿವ್ಯಾಗ ಕೊಡೋದು ನಿಮ್ಮ ಕರ್ತವ್ಯ ಅಂದೆ."

ಆಕೆ ಮತ್ತೆ ತಡೆದಳು.

"ಅವರೇನಂದರು ?"

"ಅವರಂದರು. ನಾಯೇನು ಅಷ್ಟು ಹಳೇ ವಿಚಾರದಾವ ಅಲ್ಲ. ಆಕಿ ತಾನೇ ಮದಿವೀ ಮಾಡಿಕೊಂಡಿದ್ದರೂ ಕೊಡತಿದ್ದೆ ಆದರs–"

"ಆದರs ಏನು ?"

ಸುಮತಿಗೆ ಏನು ಹೇಳಬೇಕೊ ತಿಳಿಯದಾಯಿತು.

"ಬಾಕೀ ಎಲ್ಲಾ ತೊಗೊಂಡು ಏನು ಮಾಡಲೀ ? ಈ ಭಂಗಾರ ಮ್ಯಾಲಿನ ಹಕ್ಕು ಆಕಿ ಕಳಕೊಂಡಾಳ. ಇದೆಲ್ಲ ನೀಂದು, ಅಂದರು. ನಾ ಇದನ್ನು ಆಕೀಗೆ ಕೊಟ್ಟರ ನಿಮ್ಮದೇನು ಹರಕತ್ತ ಅದs ಏನು, ಅಂದೆ. ಹಾಳು ಭಾವೀ ಬೀಳು ಅಂದರು." ಸುಮತಿ ಸೋತ ನಗೆ ನಕ್ಕಳು. "ನಾ ಹಾಳುಭಾವ್ಯಾಗ ಬಿದ್ದೆ."

ಸುಜಾತಾ ಆ ತೋಡೆ ಗುಲಾಬಿ ಕಾಗದದಲ್ಲಿ ಸುತ್ತ ತೊಡಗಿದಳು.

"ಹಂಗಾರ ನೀ ಇದನ್ನು ತೊಗೊಂಡು ಹೋಗು, ನನಗ ಬ್ಯಾಡ."

"ಹುಚ್ಚವ್ವ, ಇದು ನಿನ್ನ ಸ್ತ್ರೀಧನ. ನಿನ್ನ ಮದಿವೆಗೆ ಈ ಭಂಗಾರಕ್ಕ ಏನೂ ಸಂಬಂಧ ಇಲ್ಲ. ನಿನ್ನ ಹುಟ್ಟಾ ಈ ಭಂಗಾರ ಮ್ಯಾಲೆ ನಿನಗ ಹಕ್ಕು ಹುಟ್ಟೇದ. ಇಟ್ಕೋ" ಸುಮತಿ ತಾನೇ ಎದ್ದು ಸ್ಟೀಲಿನ ಕಪಾಟು ತೆಗೆದಳು. ಉಟ್ಟು ಕಳೆದೊಗೆದ ಸೀರೆಗಳನ್ನು ಹಾಗೆಯೇ ತುರುಕಿದ್ದಳು ತಂಗಿ. ಬೀಗದ ಕೈ ಶೋಧಿಸಿ ಕ್ಯಾಬಿನೆಟ್ ತೆಗೆದಳು. ಅದು ತೆರೆದೇ ಇತ್ತು. ಅದರಲ್ಲಿ ತೋಡೇ ಇಟ್ಟು ಮತ್ತೆ ಬೀಗ ಹಾಕಿದಳು. ಒಂದೊಂದೇ ಸೀರೆ ತೆಗೆದು ಗಾಳಿಗೆ ಹಾಕತೊಡಗಿದಳು.

"ನಾ ಭಾಳ ಆಲಸೀ ಆಗೇನಿ" ಅಪರಾಧಿನಿಯಂತೆ ಸುಜಾತಾ ಹೇಳಿದಳು.

ಸುಮತಿ ಮಾತಾಡಲಿಲ್ಲ.

"ದಾದಾ ನನ್ನ ಮದಿವೀದಶಿಂದ ಏನು ಅಂದರು. ಹೇಳಲಿಲ್ಲ" ಎಂದಳು. ಸುಜಾತಾ. ಅದಕ್ಕೂ ಸುಮತಿ ಪ್ರತಿ ಹೇಳಲಿಲ್ಲ.

ಎಲ್ಲ ಸೀರೆಗಳನ್ನೂ ಮಡಿಚಿ ಓರಣವಾಗಿ ಇಟ್ಟ ಮೇಲೆಯೇ ಅಂದಳು. "ಒಂದು ವಿಷಯದ ಬಗ್ಗೆ ನಮ್ಮಿಬ್ಬರದೂ ಒಮ್ಮತ ಆತು."

"ಯಾವದು ?"

"ನೀನು ಶಕ್ಯ ಇದ್ದಷ್ಟು ಲಗೂ ನಿನ್ನ ಎಲ್. ಎಲ್. ಬಿ. ಮುಗಿಸಬೇಕು. ನಿನ್ನ ಕಾಲಮ್ಯಾಲೆ ನೀ ನಿಲ್ಲೂಹಾಂಗ ಆಗಬೇಕು."

2

ಅಂದು ಸಂಜೆ ಕೆಲಸದಿಂದ ಮರಳಿ ಬರಲು ಅನಂತನಿಗೆ ತಡವೇ ಆಯಿತು.

"ಚಹಾ ಮಾಡಲೇನು ?" ಸುಜಾತಾ ಕೇಳಿದಳು.

"ಬ್ಯಾಡ. ಅಡಿಗೆ ಆಗಿದ್ದರ ಊಟ ಮಾಡಿಬಿಡೋಣ."

ಅವನ ಮಾತು, ಮೋರೆ ನೋಡಿ ಇದು ತನ್ನ ಮಾತಿಗೆ ಸಮಯವಲ್ಲ ಎಂದು ಆಕೆ ಸುಮ್ಮನಾದಳು.

ಉಂಡು ಮಲಗಿದೊಡನೆ ಅವನಿಗೆ ನಿದ್ದೆ ಆವರಿಸಿತು. ಇನ್ನು ಅವನೊಡನೆ ಮಾತಾಡುವದಾದರೂ ಯಾವಾಗ ?

ನಡು ರಾತ್ರಿಯಲ್ಲಿ ಅವನೇ ಆಕೆಯನ್ನು ಎಬ್ಬಿಸಿದ. ಎಷ್ಟು ನಿದ್ದೀ ಮಾಡೋದು ಅದೂ ?" ಆಕೆಯ ಕಣ್ಣಲ್ಲಿ ಇನ್ನೂ ನಿದ್ದೆ ತುಂಬಿತ್ತು. ಆದರೂ ಆಕೆ ಹಾಗೆಯೇ ಹಾಸಿಗೆ ಬಿಟ್ಟು ಎದ್ದಳು. ಮಂದ ನೀಲಿ ಬೆಳಕಿನಲ್ಲಿ ಸ್ವಿಚ್ ಹಾಕಿದಳು. ಕಪಾಟಿನ ಬಾಗಿಲು ತೆಗೆದಳು. ಕ್ಯಾಬಿನೆಟ್ ತೆಗೆದು ತೋಡೆ ಹಾಕಿದ ಗುಲಾಬಿ ಕಾಗದದ ಕಟ್ಟು ತೆಗೆದು ಅನಂತನ ಕೈಯಲ್ಲಿ ಕೊಟ್ಟಳು. ಅವನು ಬಿಚ್ಚಿ ನೋಡಿದ.

"ನಮ್ಮ ದಾದಾ ಕಳಿಸ್ಯಾರ" ಅವಳೆಂದಳು.

"ದಾದಾ ? ಅವರ್ಯಾಕ್ ಕಳಿಸ್ಯಾರ ?"

"ಯಾಕಂದರ ? ನಮ್ಮ ಮದಿವೀ ನಿಮಿತ್ತ."

ಅವನು ತನ್ನ ಅಂಗೈಯಲ್ಲಿ ಅದರ ತೂಕವನ್ನು ಅಂದಾಜಿಸುತ್ತ ಅಂದ

"ಖರೇ ಭಂಗಾರ ಅದs ನೋ ? ಏನು, ಭಂಗಾರದ ನೀರು ಕೊಟ್ಟಾರೊ ?"

ಆಕೆ ಅವನ ಕೈಯಲ್ಲಿಯ ತೋಡೆಯನ್ನು ಕಸಿದುಕೊಂಡಳು. ಮತ್ತೆ ಆ ಕಾಗದದಲ್ಲಿ ಸುತ್ತಿ ಮಾತಿಲ್ಲದೆ ಕಪಾಟನಲ್ಲಿಟ್ಟು ಬೀಗ ಹಾಕಿ ದೀಪ ಆರಿಸಿದಳು. ಎಂತಹ ಮನುಷ್ಯ ಇವರು? ತನಗಾಗಿ ಎಂದು ಆಯುಷ್ಯದುದ್ದಕ್ಕೂ ಕಾದಿಟ್ಟ ಭಂಗಾರದ-ಅದೂ ತನ್ನ ತಾಯಿಯಿಂದ ಬಂದ–ಒಡವೆಯನ್ನು ತನಗೆ ಒಪ್ಪಿಸಿದರೆ ಇದು ಅಪ್ಪಟ ಭಂಗಾರವೋ ಅಥವಾ ಗಿಲೀಟು

ಂಗಾರದ್ದೋ ಎಂದು ಕೇಳುತ್ತಿದ್ದಾರೆ!

ಆಕೆ ಹಾಗೆಯೇ ಹೋಗಿ ಮಲಗಿದಳು. ದರೆ ಅವನೊಂದು ಬಿಡಬೇಕಲ್ಲ?

"ಖರೇನs ಭಂಗಾರದ್ದು ಅದs" ಅವನು ವಳನ್ನು ಹತ್ತಿರಕ್ಕೆಳೆದ.

"ನನಗ ಗೊತ್ತಿಲ್ಲ." ಆಕೆ ಬಿರುಸಾಗಿ ೇಳಿದಳು.

"ಖರೇ ಭಂಗಾರದ್ದಿದ್ದರ ಇಪ್ಪತ್ತೈದು ಮೂವತ್ತು ಸಾವಿರದ್ದು ಆಗತಾವ"

ಅದಕ್ಕೂ ಆಕೆ ಉತ್ತರಿಸಲಿಲ್ಲ. ಇವರಿಗೆ ರಿ ಅದರ ಪೇಟಿಯ ಕಿಮ್ಮತ್ತು!

"ದಾದಾ ತಾವs ಬಂದಿದ್ದರೇನು?" ವನು ಮತ್ತೆ ಕೆಣಕಿದ.

"ಇಲ್ಲ."

"ಮತ್ತ ಯಾರು ತಂದು ಕೊಟ್ಟರೂ?" ವನು ಗೊತ್ತಿದ್ದೂ ಕೇಳಿದ. ಇದೇನು ಾಟಕ ನಡೆದಿದೆ?

ಆಕೆ ಮಾತಿಲ್ಲದೆ ಅವನಿಗೆ ಮೈ ಒಪ್ಪಿಸಿ ಳು. ಮನಸ್ಸು ಕಹಿಯಾಗಿತ್ತು. ಗಡಸ್ಸು ಣ್ಣದ ಚಕ್ರವೊಂದು ಅವಳ ಕಣ್ಣು ಮುಂದೆ ತಿರುಗಿತು. ತನ್ನ ಅವ್ವ. ಅವಳ ಸ್ತು, ಒಡವೆ. ಅವನ್ನು ತನಗಾಗಿ ಕಾದಿಟ್ಟ ಾದಾ ಅವರೊಡನೆ ಜಗಳಾಡಿ ಅವನ್ನು ಂದು ಕೊಟ್ಟ ಅಕ್ಕ, ಅದೊಂದು ಬೆಲೆ ಾಳುವ ಬಂಗಾರದ ಮುದ್ದೆ–ಅಥವಾ ೊಟ್ಟೆ ಇರುವುದೆಂದೂ ಶಂಕಿಸುವ ಂಡ—

–ತುಡುಗು ದನ ಹೊಲ ಮೇದ ಹಾಗೆ ನ್ನಿಂದ, ತನ್ನ ಮೈಯಿಂದ ಸುಖ ಕಿತ್ತು ಕೊಳ್ಳುವ, ಗಂಡಸು–ಆಕೆಯ ಕಣ್ಣಲ್ಲಿ ೀರು ಬಂತು.

ಅವನಿಗೂ ಸಮಾಧಾನವಾದಂತಿರಲಿಲ್ಲ. ಬಸ್ಸನೆ ಅವಳ ರಟ್ಟೆ ಹಿಡಿದು ಎಳೆದ. ಅದೂ ಅವರಿಗೆ ತಿರುಗಿ ಕೊಟ್ಟು ಬಿಡು." ಆಕೆ ತುಟಿ ಕಚ್ಚಿಕೊಂಡಳು.

"ನಮಗ ಇವ್ಯಾವ ಪುಕ್ಕಟೆ ವಸ್ತು ಬ್ಯಾಡ ದೇವರು ಕೊಟ್ಟ ಚಟ್ನಿ ಭಕ್ಕರಿ ಸಾಕು."

ಅದಕ್ಕೂ ಆಕೆ ಉತ್ತರಿಸಲಿಲ್ಲ.

"ನಿಮ್ಮಪ್ಪ ನಿಮ್ಮಕ್ಕ ಇವರದೇನೂ ಸಂಬಂಧ ಇಲ್ಲ. ಅವರು ನಮಗೇನೂ ಕೊಡಬೇಕಾಗಿಲ್ಲ. ನಮ್ಮನ್ಯಾಗ ಕಾಲು ಹಾಕಬೇಕಾಗಿಲ್ಲ."

> "ಹಡೆದವರನ್ನು, ಒಡಹುಟ್ಟಿದವರನ್ನು ದೂರಮಾಡಿ, ಇವರ ಮಾತಿನ ಮೋಡಿಗೆ ಮರುಳಾಗಿ ಬಂದರೆ, ಸೆರಗಿನಲ್ಲಿ ಸುಣ್ಣ ಕಟ್ಟಿಕೊಂಡು ಕೆರೆಗೆ ಬಿದ್ದಂತಾಯಿತು..."

ಅವನ ದನಿ ಗಡಸಾಗಿತ್ತು. ಆಕೆ ಮೌನ ವಾಗಿ ಅಳತೊಡಗಿದಳು.

"ಅಳಲಿಕ್ಕೆ ಏನಾತು?" ಅವನು ಬಿರು ಸಾಗಿ ಅವಳ ರಟ್ಟೆ ಎಳೆದು ಕೇಳಿದ.

"ಏನಾತು ಅಳಲಿಕ್ಕೆ?"

ಆಕೆಯ ಅಳು ಜೋರಾಯಿತು. ಅದ ರೊಡನೆ ಬೇಡವೆಂದರೂ ದನಿ ಬಂದಿತು. ಅನಂತ ಎದ್ದು ಕುಳಿತವನೇ ಫಟ್ ಎಂದು ಅವಳ ಕಪಾಳಿಗೆ ಹೊಡೆದ. ಆಗ ಮಾತ್ರ ಅವಳು ಅಳು ನುಂಗಿದಳು. ಗೋಡೆಯ ಕಡೆಗೆ ಮೋರೆ ತಿರುವಿ ಮಲಗಿ ದಳು. ತೊಡೆಗಳಂತೆ ಮನಸ್ಸೂ ಜಿಗಿ ಜಿಗಿ ಯಾಗಿತ್ತು. ಎಷ್ಟೋ ಹೊತ್ತು ನಿದ್ದೆ ಹತ್ತ ಲಿಲ್ಲ.

೦ ೦ ೦ ೦

ಮರುದಿನ ಸುಜಾತಾಳ ಪಾಲಿಗೆ ಕೆಟ್ಟ ಕನಸುಗಳ ಹರಕು ಚಿಂದಿಗಳ ಸರಮಾಲೆ. ಇದು ಹೀಗೇಕೆ ಆಯಿತು? ಹಡೆದವ ರನ್ನು ಒಡ ಹುಟ್ಟಿದವರನ್ನು ದೂರ ಮಾಡಿ, ಇವರ ಮಾತಿನ ಮೋಡಿಗೆ ಮರುಳಾಗಿ ಬಂದರೆ ಸೆರಗಿನಲ್ಲಿ ಸುಣ್ಣ ಕಟ್ಟಿಕೊಂಡು ಕೆರೆಗೆ ಬಿದ್ದಂತಾಯಿತು. ಸುಮತಿ ಇವರೊಡನೆ ಕೊರಡಿನಂತೆ ಬಾಳಿ ದ್ದರೆ ಆಶ್ಚರ್ಯವೇನೂ ಇಲ್ಲ. ಇವರಿಗೆ ಹೆಣ್ಣುಬೇಕು, ಹೆಂಡತಿ ಬೇಡ. ಇಷ್ಟೇ ಬರೆ, ಇದೇಖರೆ. ಇವರಿಗೆ ಕೊಟ್ಟು ಗೊತ್ತಿಲ್ಲ. ಕೊಂಡು ಗೊತ್ತಿದೆ.

ಯಾಂತ್ರಿಕವಾಗಿ ಆಕೆ ಬೆಳಗಿನ ತಿಂಡಿ ಮಾಡಿಕೊಟ್ಟಳು. ಮಧ್ಯಾಹ್ನದ ಅಡಿಗೆ ಮಾಡಿದಳು. ಯಾವುದಕ್ಕೂ ರುಚಿ ಯಿರಲಿಲ್ಲ. ಅದೂ ರುಚಿ ಬರಲಿಲ್ಲ. ಅವನು ಮಾತ್ರ ಭರಭರನೆ ತಿಂದ, ಗಬ ಗಬನೆ ಉಂಡ. ಅವರಿಗೆ ಅದೇ ರುಚಿ ಎನಿ ಸುತ್ತಿರಬೇಕು ಎನ್ನಿಸಿತು ಆಕೆಗೆ. ತನ್ನನ್ನು ಹೊಡೆದಾಗಲೂ ಅವರಿಗೆ ಅಂತರಿಕ ಸಮಾ ಧಾನವಾಗಿರಬೇಕು. ಮನೋವಿಜ್ಞಾನಿಗಳು ಅನ್ನುತ್ತಾರಲ್ಲ, ಹಾಗೆ. ಶರೀರದ ಕಾಮ ದಾಹವನ್ನು ಕ್ರೌರ್ಯದಿಂದ ಪೂರ್ತಿ ಗೊಳಿಸುವ ಪರಿ.

ಆಕೆ ಅಲ್ಲಷ್ಟು ಕುಳಿತಳು. ಇಲ್ಲಷ್ಟು ನಿಂತಳು. ಹೊತ್ತು ಹೋಗಲೊಲ್ಲದು. ಹೋಗಿಯಾದರೂ ಮಾಡುವದೇನು? ಹೊತ್ತು ಮುಳುಗಿದರೆ ಮತ್ತೆ ರಾತ್ರಿ. ಅಂದರೆ ಅವರದೇ ಸಾಮ್ರಾಜ್ಯ. ಆಕೆಗೆ ಥಟ್ಟನೆ ನೆನಪಾಯಿತು. ಸುಮತಿ ಇಲ್ಲಿ. ಈ ಮನೆಗೆ ಬರಬಾರದೆಂದು ಪತಿದೇವರು ಆಜ್ಞಾಪಿಸಿದ್ದಾರೆ!

ಇದನ್ನು ಆಕೆಗೆ ತಿಳಿಸಬೇಕು. ಅದೂ ದಾದಾ ಅವರಿಗೆ ತಿಳಿಯದ ಹಾಗೆ. ಅಂದರೆ ಆಕೆಯ ಬ್ಯಾಂಕಿಗೆ ಹೋಗಿ ಭೆಟ್ಟಿಯಾಗ ಬೇಕು. ಅಲ್ಲಿ ಹೋಗಿ ಹೇಳುವದೇನು? ಅದಕ್ಕಿಂತ ಪತ್ರ ಬರೆದರೇ ಒಳ್ಳೆಯದು. ಬರೆಯಲಿಕ್ಕೆ ಮನೆಯಲ್ಲಿ ಏನೂ ಇಲ್ಲವೆನ್ನು ವದು ಆಕೆಗೆ ನೆನಪಾಯಿತು.

ಏನೆಂದು ಬರೆಯಬೇಕು? ಅತ್ಯಂತ ಅನೌಪಚಾರಿಕವಾಗಿ, ಶುಷ್ಕ, ರುಕ್ಷವಾಗಿ ಎರಡೇ ಸಾಲು... ನೀವಿನ್ನು ಯಾರೂ ಈ ಮನೆಗೆ ಬರಬಾರದಾಗಿ ಪ್ರಾರ್ಥಿಸುತ್ತೇವೆ. ಹೀಗೆಯೇ ಏನಾದರೂ–

ಆಕೆ ಅಂಗಡಿಗೆ ಹೋಗಿ ಪೆನ್ ಕೊಂಡಳು. ಪೋಸ್ಟ್ ಆಫೀಸಿಗೆ ಹೋಗಿ ಒಂದು ಅಂತರ್ದೇಶೀಯ ಪತ್ರ ಬರೆದು ಹಾಕಿದಳು. ಮರಳಿ ಮನೆಗೆ ಬರುವಾಗ ಕಣ್ಣು ಮಂಜಾಯಿತು. ಇನ್ನು ತನ್ನ

ಮನೆಗೆ ಯಾರೂ ಬರುವದಿಲ್ಲ, ಯಾರೂ ಬರಬೇಕಾಗಿಲ್ಲ. ತಾನು ತನ್ನ ಗಂಡ. ತನ್ನ ಗಂಡ ತಾನು ಇಬ್ಬರೇ. ಅಂದರೆ ತಾನು ಎಲ್ಲೂ ಯಾರ ಮನೆಗೂ ಹೋಗುವಂತಿಲ್ಲ.

ಬಹುಶಃ ಸುಮತಿಗೂ ಅನಂತ ಇದೇ ರೀತಿ ಬಂಧನ ಹಾಕಿರಬೇಕು. ಅದಕ್ಕೇ ಆಕೆಗೆ ಆಗ ತವರುಮನೆ ಎರವಾಗಿತ್ತು! ಹಾಗೆಂದರೆ ಇದು ಒಂದು ಜೈಲು, ಕಂಬಿಯಿಲ್ಲದ್ದು. ಅಪಮಾನ ಹೊಂದಿಯೇ ಬಿಡುಗಡೆ. ಇಲ್ಲದಿದ್ದರೆ ಇಲ್ಲೇ ಭೋಗ. ನಿನ್ನೆ ರಾತ್ರಿ ಅವನು ಹೊಡೆದದ್ದು ನೆನಪಾಗಿ ಅವಳ ಕಣ್ಣು ತುಂಬಿಬಂದವು. ಇದಕ್ಕಾಗಿಯೇ ತಾನು ತಂದೆಯ ಮನೆ ಒದ್ದು ಬಂದಿದ್ದೇ? ಆಕೆಗೆ ಎದೆ ತುಂಬಿ ಬಂದಿತು.

ಮನೆಯಲ್ಲಿ ಕಾಲಿಟ್ಟವಳೇ ಬಾಗಿಲು ಮುಚ್ಚಿ, ಆಕೆ ಮನಸೋಕ್ತವಾಗಿ ಅತ್ತಳು. ಮನಸ್ಸು ಒಂದಿಷ್ಟು ಹಗುರವಾಯಿತು. ಆದರೆ ತಲೆ ಗಿಮುಗಿಮು ಎನ್ನುತ್ತಿತ್ತು. ಚಹ ಮಾಡಿಕೊಳ್ಳಬೇಕೆಂದು ಆಕೆಗೆ ನೆನಪಾಯಿತು. ಮಧ್ಯಾಹ್ನದ ಚಹವನ್ನೇ ಕುಡಿದಿಲ್ಲ!

ನೀರು ಎಸರಿಟ್ಟು ಜಾಳಿಗೆ ಕಪಾಟನಲ್ಲಿಯ ಹಾಲಿನ ಪಾತೇಲಿಗೆ ಕೈ ಹಾಕಿದಳು. ಹವೆಯಲ್ಲಿಯ ಸೆಕೆಯಿಂದಾಗಿ ಹಾಲು ಕೆಟ್ಟಿದ್ದವು. ಬೆಳಗ್ಗೆ ಒಮ್ಮೆಯೇ ಕಾಸಿದ್ದು. ಆಕೆ ಗ್ಯಾಸು ಆರಿಸಿದಳು.

ಇನ್ನು ಅನಂತ ಬಂದು ಚಹ ಕೇಳಿದರೆ? ಎದೆ ಒಡೆದು ನೀರಾಯಿತು. ಅದಕ್ಕೆ ಮತ್ತೆ ಅವನು ಹೊಡೆದರೆ? ಮನಸ್ಸು ದಣಿಯಿತು. ಏನೂ ಬೇಡವಾಗಿತ್ತು. ಆಕೆ ಹಾಗೆಯೇ ದಿವಾನ್ ಮೇಲೆ ಅಡ್ಡಾದಳು.

ಅನಂತ ಬಂದು ಬಾಗಿಲು ಬಾರಿಸಿದಾಗಲೇ ಎಚ್ಚರ. ಬಾಗಿಲು ತೆಗೆಯಬೇಕೆಂದರೆ ಮೊದಲು ಗೋಡೆಯ ಮೇಲೆ ಕೈಯಾಡಿಸಿ ಸ್ವಿಚ್ ಶೋಧಿಸಬೇಕಾಯಿತು.

"ಮಲಕೊಂಡಿದ್ದಿಯೇನು?" ಅನಪೇಕ್ಷಿತವಾಗಿ ಅವನ ದನಿ ಮಿದುವಾಗಿತ್ತು. ಆದರೆ ಬಾಯಿಗೆ ವಾಸನೆ ಬಂತು. ಆಕೆ ಇನ್ನೊಮ್ಮೆ ಜೋರಾಗಿ ಮೂಸಿದಳು ಅವನ ಕಣ್ಣು ನೋಡಿದಳು—ಸಂಶಯವೇ ಇಲ್ಲ. ಕುಡಿದು ಬಂದಿದ್ದಾನೆ! "ಒಂದು ಕಡೆ ಪಾರ್ಟಿ ಇತ್ತು!" ಅವನು ತುಸು ಅಪರಾಧಿ ಸ್ವರದಲ್ಲಿ ಹೇಳಿದ. "ಅವರು ಕೇಳಲೇ ಇಲ್ಲ" ನನ್ನನ್ನು ಅವರು ಕರೆದಿರಲಿಲ್ಲ. ಬೇರೆ ಕೆಲಸಕ್ಕಾಗಿ ನಾನು ಹೋಗಿದ್ದೆ." ಅವನ ಮಾತು ಹೇಳಬೇಕಾದುದಕ್ಕಿಂತ ಹೆಚ್ಚಾಗಿತ್ತು. ಆಕೆ ಮಾತಿಲ್ಲದೆ ಒಳಗೆ ಹೋಗಿ ಅಡುಗೆಗಿಟ್ಟಳು ಹೊರಗೆ ಬರಲಾಗದೆ ಒಳಗೇ ಅದೂ ಇದು ಮಾಡುತ್ತ ಕುಳಿತಳು.

ಇದೇನು ತನ್ನ ಆಯುಷ್ಯ! ಅಕ್ಕನ ಬಗೆಗಿನ ಸಹಾನುಭೂತಿಯಿಂದ ಅವಳ ಆಯುಷ್ಯ ಹಾಳಾಗಬಾರದೆಂದು, ಮುಂದಾಗಿ ತಿಳಿಹೇಳ ಹೋದರೆ. ಎಲ್ಲವೂ ತನ್ನ ಕೊರಳಿಗೇ ಬಿತ್ತು? ಎಂತಹ ಅನಪೇಕ್ಷಿತ ತಿರುವುಗಳು! ಫ್ಯಾಕ್ಟರಿಗೆ ಹೋದರೆ ಸುಜಾತಾ ಹಾಟೇಲಿಗೆ ಬಾ, ಹಾಟೆಲಿನಲ್ಲಿ ಮಾತಾಡಲು ಅನುವಿಲ್ಲ. ತಿರುಗಾಡಲು ಹೋಗೋಣ ಬಾ. ಬೇಸರವಿದ್ದರೆ ಸಿನೇಮಾಕ್ಕೆ ಹೋಗು. ತೋರಿಸುತ್ತೀರಾ' ಎಂದು ಚೇಷ್ಟೆಯಿಂದ ಕೇಳಿದ್ದಕ್ಕೆ ಕರೆದುಕೊಂಡು ಹೋದರು. ತನ್ನದೂ ಕಾಲು ಜಾರುತ್ತಲೇ ಹೋಯಿತು. ಆಧಾರಕ್ಕೆ ಏನೂ ಇರಲಿಲ್ಲ. ಯಾರೂ ಇರಲಿಲ್ಲ. ಹಾಗೆಂತ ಬಂದವರು—ಇನ್ನು ಈ ರಾತ್ರಿ ಏನು ಮಾಡುತ್ತಾರೋ, ಯಾರಿಗೆ ಗೊತ್ತು?

ಆಕೆ ಮಾತಿಲ್ಲದೆ ತಾಟು ಹಾಕಿದಳು. ಅವನೂ ಕರೆಸಿಕೊಳ್ಳದೆ ಬಂದು ಕುಳಿತ. ಆಕೆ ಅನ್ನ ಸಾರು ಬಡಿಸಿದಳು. ತಾನೂ ಹಾಕಿಕೊಂಡಳು. ಅವನು ಉಣತೊಡಗಿದ. ಅವಳಿಗೆ ಮಾತ್ರ ಅನ್ನದ ಮೇಲೆ ವಾಸನೆಯೇ ಎನಿಸಲಿಲ್ಲ.

"ನಾನು ನಿನ್ನ ಹೊಡೆದೆ ಅಂತ ನೀ ಸಿಟ್ಟಾಗಿದ್ದೀ, ಹೌದಲ್ಲ?" ಅವನ ಮಾತು ಬಡಬಡಿಕೆಯಂತೆ ಅವಳಿಗನ್ನಿಸಿತು. "ನಾ ನಿನ್ನ ಯಾಕ ಹೊಡದೆ, ಗೊತ್ತದಽ ಏನು? ಯಾಕ, ಹೇಳು?....ನೀನು ನನಗ ನಿನ್ನನ್ನು ಪೂರ್ತಿಯಾಗಿ ಒಪ್ಪಿಸಲಿಲ್ಲ, ತಿಳೀತೇನು? ಪೂರಾ ಒಪ್ಪಿಸಿಕೋಲಿಲ್ಲ. ಭಕ್ಕರಿ ಹಾಕು" ಆಕೆ ಭಕ್ಕರಿ ಹಾಕಿದಳು. ಇವನ ಹೊಟ್ಟೆಯಲ್ಲಿ ಇಂದು ರಾಕ್ಷಸ ಹೊಕ್ಕಿರಬೇಕು. ಮಾಡಿದ ಅಡಿಗೆ ಸಾಕಾಗಲಿಕ್ಕಿಲ್ಲ. ಆಕೆ ನಿಧಾನವಾಗಿ ಸಣ್ಣ ಸಣ್ಣ ತುತ್ತು ಮಾಡತೊಡಗಿದಳು.

"ತಿಳೀತೇನು? ಹೆಂಗಸು ಅಂದರ ಹ್ಯಾಂಗ, ಪೂರಾ ಪೂರಾ ಶರಣು ಬರಬೇಕು. ಅಂದರ ಮಜಾ ಇರತಽದ ಮತ್ತ ಎರಡನೇದ್ದು ಗೊತ್ತದಽ ಏನು? ನಿಮ್ಮ ಅಕ್ಕ ಬಂದ ದಿವಸ ಅಂದರ ಎಂಟು ದಿವಸದ ಹಿಂದ, ಅಂದೂ ನೀ ಹಿಂಗಽ ಬಿಕ್ಕೊಂಡಿದ್ದಿ. ನಿಮ್ಮ ಅತ್ತೆವ್ವ ಬಂದಿದ್ದರಲ್ಲ, ಆವತ್ತು ನಿನ್ನ ಮೈ ಬಿಗಿದೇ ಇತ್ತು. ಅಂದರ ಇದರ ಅರ್ಥ ಇಷ್ಟಽ ನಿನ್ನ ತವರುಮನೆಯವರು ಬಂದ ದಿವಸ ನಿನ್ನ ಮೈ ಬಿಗೀತಽದ ಅಂತಽ ಪಲ್ಯ ಹಾಕು"

"ಪಲ್ಯ ಮುಗೀತು" ಆಕೆ ಪಾತೇಲಿ ತೋರಿಸಿದಳು. "ಉಪ್ಪಿನಕಾಯಿ ಹಾಕಲೇನು?"

"ಉಪ್ಪಿನಕಾಯಿ? ಹಾಂ ಹಾಕು ನಡೀತಽದ"

ಆಕೆ ತೊಳೆದುಕೊಂಡು ಕಪಾಟನಲ್ಲಿಯ ಉಪ್ಪಿನಕಾಯಿ ಬಾಟಲಿ ತೆಗೆದಳು. ಅವನಿಗೆ ನಾಲ್ಕು ಹೋಳು ಹಾಕಿದಳು. ತನಗಾಗಿ ಇಟ್ಟಿದ್ದ ಅರ್ಧ ಭಕ್ಕರಿ ಹಾಕಿದಳು.

"ನೀ ಭಾಳ ಛಲೋ ಇದ್ದೀ ಶಾಣ್ಯಾ ಇದ್ದೀ ಸುಂದರ ಇದ್ದೀ"

ಅವನ ಮಾತಿಗೆ ಆಕೆ ಮೋರೆ ಕೆಳಗೆ ಹಾಕಿದಳು. "ಆದರ ಒಂದಽ ಕೊಂಕು ಈ ತವರ ಮನ್ಯಾವರ ಸಂಗತಿ ಬಿಡಂದರ ನಿನಗ ಸಿಟ್ಟು ಬರತಽದ. ಇಲ್ಲಾಂದರ ಹಿಂಗನ್ನು. ಈ ನಿಮ್ಮವರು ನಿನ್ನ ತಲ್ಯಾಗ ಏನೇನಾರೇ ತುಂಬತಾರ. ನಿನಗ ಜನಸ್ತಽದ ...ಇವನ ಸಂಗತಿ ಹತ್ತಿ ನಾ ಕೆಟ್ಟೆ.... ಅನ್ನಾ ಹಾಕು."

ಆಕೆ ಪಾತೇಲಿ ಕೆದರಿ ಎಲ್ಲ ಅನ್ನ ಹಾಕಿದಳು. ಅವನು ಸಾಕೆನ್ನಲಿಲ್ಲ. ಬೆಳಗಿನ ಅನ್ನ ಉಳಿದದ್ದನ್ನೂ ಹಾಕಿದಳು. ಅದನ್ನೂ ಸಾಕೆನ್ನಲಿಲ್ಲ. ಮೊಸರು ಸಾಕಾಗುವಂತಿರಲಿಲ್ಲ. ಒಂದಿಷ್ಟು ನೀರು ಬೆರೆಸಿ





ಸಜ್ಜಿಗೆ ಮಾಡಿದಳು.

"ಇಂಥಾ ನಾಲಾಯಕ್ ಇದ್ದಾನ ಅಂತ ಹೇಳತಾರಿಲ್ಲೋ. ನಿನ್ನ ಅಕ್ಕ ಮತ್ತ ಅತ್ತ್ಯಾ ? ಇವನ ಸಂಗತಿ ಯಾಕ ಸಂಸಾರ ಮಾಡತಿ, ಹ್ಯಾಂಗ ಸಂಸಾರ ಮಾಡತೀ ಅಂತ ಕೇಳತಾರಿಲ್ಲೋ ? ನನಗೆ ಗೊತ್ತು ಅದs"

"ನಿಮ್ಮಕ್ಕ ಇಲ್ಲಿ ಯಾಕ ಬರತಾಳ ಗೊತ್ತದs ಏನು ? ಆಕಿಗೆ ನನ್ನ ಮ್ಯಾಲೆ ಸೇಡು ತೀರಿಸಿಕೋ ಬೇಕಾಗೇದ. ಅಂತ ನಿನ್ನ ಮನಸ್ಸು ಕೆಡಸ ಲಿಕ್ಕೆ ಹತ್ಯಾಳ" ಅವನ ಕೈ ಒಣಗಿತ್ತು. ಅಡಿಗೆ ಮುಗಿದಿತ್ತು.

"ಊಟ ಆಗಿದ್ದರ ಏಳರಿ" ಆಕೆ ಹೇಳ ಬೇಕಾಯಿತು.

ಅವನು ಎದ್ದು ಕೈತೊಳೆದುಕೊಂಡ "ಈವತ್ತು ಯಾರು ಬಂದಿದ್ದಿಲ್ಲ ಹೌದಲ್ಲೋ ?"

"ಇಲ್ಲ" ವೆಂದು ಅವನಿಗೆ ಎರಡೆರಡು ಸಲ ಹೇಳಬೇಕಾಯಿತು. ಬರಿ ಹೇಳಿಯಾದರೂ ಅವನು ವಿಶ್ವಾಸವಿಡಬೇಕಲ್ಲ ?

ಮರುದಿನ ಸಂಜೆ ಅವನು ಮನೆಗೆ ಬಂದಾಗ ಆಕೆ ನೇರವಾಗಿ ಕೇಳಿಯೇ ಬಿಟ್ಟಳು. "ಈವತ್ತು ಕುಡದು ಬಂದಿಲ್ಲ ಹೌದಲ್ಲೋ ?"

"ಇಲ್ಲ" ಅವನು ಅಪರಾಧಿ ಸ್ವರದಲ್ಲಿ ಹೇಳಿದ. "ನಾಯೇನು ಕುಡುಕ ಅಲ್ಲ" ಏನಾ ಕುಡೀಲಿಕ್ಕೆ"

ಆಕೆ ಅವನ ಕಣ್ಣು ನೋಡಿದಳು. "ಹಾಂಗೇನಾರೆ ಕುಡಿದೂ ಬಿಟ್ಟೊ, ಮಾಡಿದಿರಂದರ ನಾ ಮನೀನs ಬಿಟ್ಟು ಹೋಗ ಶೀನಿ."

ಅವನು ಆಕೆಯ ಕೈ ಹಿಡಿದ, "ಅದು ಹ್ಯಾಂಗ ಹೋಗತೀ ನೋಡತೀನಿ" ಆಕೆ ನಕ್ಕಳು. "ನಿನ್ನೆ ರಾತ್ರಿ ನಿದ್ದಿ ಇಲ್ಲದ ಈವತ್ತು ಇಡೀ ದಿನ ಚೈನ ಇಲ್ಲದ ಹುಚ್ಚು ಹಿಡಿದ್ಹಾಂಗ ಆಗೇದ" ಆಕೆ ಎಂದಳು.

"ಹಾಂ, ನೋಡಿರಿ ನನಗೂ ಹಾಂಗs ಆಗತದ. ನಿಮ್ಮ ಮನಿಯವರು ಬಂದು ಹೋದರಂದರ, ನಿಮ್ಮ ಮೈ-ಮನಸ್ಸೂ ಕೂಡೇ ಬಿಗಿದೂ ಅಂದರ ನನಗೂ ರಾತ್ರಿ ನಿದ್ದಿ ಹತ್ತೂದಿಲ್ಲ. ಚೈನ ಇರೋದಿಲ್ಲ. ಅದಕ್ಕ ಕುಡೀಬೇಕಾಗತದ."

"ಹಂಗಾರ ನಿನ್ನೆ ಪಾರ್ಟೀ ಇಟ್ಟದ್ದು ಎಲ್ಲಾ ಸುಳ್ಳು. ಬಾರ್‌ಗೆ ಹೋಗಿ ನೀವು ಒಬ್ಬರs ಕುಡಿದು ಬಂದಿರಿ ಅಂದಹಾಂಗ ಆತು."

"ನನಗ ಮನೀಬಿಟ್ಟು ಓಡಿ ಹೋಗ ಲಿಕ್ಕೆ ಬರೂದಿಲ್ಲ ನೋಡು" ಅವನು ನಕ್ಕ. 'ಮತ್ತ ಅದರಾಗ ಅಂಜೂಹಾಂಗ ಏನು ಇರತsದ ಅಂತೀನಿ. ಮದ್ಯ, ಮಾಂಸ ಹಾಗೂ ಮೈಥುನ ಇವು ಮೂರೂ ಮನುಷ್ಯನಿಗೆ ಪ್ರವೃತ್ತಿಗಳು ಅಂತ ಹೇಳ್ಯಾನ ನಿಮ್ಮ ಮನು.'

"ಅಂವಾ ಇನ್ನೂ ಏನೇನೋ ಹೇಳ್ಯಾನ. ಆದರ ಇನ್ನು ನೀವು ಶರೆಶಿಂದಿ ಕುಡಿಯೂದಿಲ್ಲ ಅಂತ ಆಣೀ ಮಾಡಿರ ನಾ ಈ ಮನ್ಯಾಗ ಇರಾಕಿ."

"ಕಬೂಲ, ನಾ ಶರೆಶಿಂದಿ ಕುಡಿಯೂದಿಲ್ಲ ಇಂಡಿಯಾ ಮೇಡ್ ಫಾರೇನ್ ಲಿಕರ್ ಅಥವಾ ಫಾರೇನ್ ಮೇಡ್ ಫಾರೇನ್ ಲಿಕರ್ ಅಷ್ಟೇ ಕುಡಿತೀನಿ ಅಂತ ಆಣೀ ಮಾಡತೀನಿ."

"ನಿಮಗ ಎಲ್ಲಾ ಚ್ಯಾಷ್ಟೀನs ಆಗೇದ."


"ನೀ ನಿಮ್ಮ ತವರು ಮನ್ಯಾವರನ್ನ ದೂರ ಮಾಡು, ನಾ ಕುಡಿಯೋ ಪ್ರಶ್ನಿನs ಬರೂದಿಲ್ಲ."


ಅವಳ ಕಣ್ಣು ತುಂಬಿ ಬಂದವು. ಆದರೆ ಅವನು ಅವಳ ಕಡೆಗೆ ನೋಡಲಿಲ್ಲ.

"ಕಪಾಟನ್ಯಾಗಿನ ತೋಡೆ ನೀವು ನೋಡೀರೇನು ?" ಅವನು ಬರುತ್ತಲೇ ಆಕೆ ಕೇಳಿದ್ದಕ್ಕೆ ಅವನು ಉತ್ತರಿಸಲಿಲ್ಲ. ಆಕೆ ಅವನು ಬೆನ್ನು ಬಿಡಲಿಲ್ಲ. ಚಹಾ ಮಾಡುವ ಲಕ್ಷಣವೂ ಕಾಣಿಸಲಿಲ್ಲ. ಆಕೆ ಎರಡನೆಯ ಸಲ ಕೇಳಿದರೂ ಅವನು ಉತ್ತರ ಕೊಡಲಿಲ್ಲ. ಆಕೆಯ ಸಂಶಯ ದೃಢವಾಯಿತು. ಅವನ ಕೈ ಹಿಡಿದು ಅಳುತ್ತಲೇ ಕೇಳಿದಳು. "ಕಪಾಟನ್ಯಾಗ ಇಟ್ಟದ್ದು ತೋಡೆ ನೋಡೀರೇನು ?"

"ಅಳೂ ಅಂಥಾದ್ದು ಏನು ಅದ ಅದರಾಗ ?"

"ತೊಗೊಂಡೀರೇನು ?"





"ನೀ ಅವನ್ನು ಹಾಕೊಳ್ಳಾಕಿ ಇದ್ದಿ ಯೇನು?" ಅವನು ಸಹಜವಾಗಿ ನಕ್ಕ.

"ಏನನ್ನೋದು ಹೇಳ್ರಿಲಾ ? ನೀವು ಅವನ್ನು ತೊಗೂಂಡಿರೇನು ?"

"ಏನೂ ?"

"ಅವೇ ತೋಡೆದ ಜೋಡು, ಗುಲಾಬಿ ಕಾಗದವಾಗ ಸುತ್ತಿ ರಟ್ಟಿನ ಡಬ್ಯಾಗ ಹಾಕಿ ಇಟ್ಟಿತ್ತು. ಡಬ್ಬಿ, ಕಾಗದ ಅವ, ತೋಡೆ ಮಾತ್ರ ಇಲ್ಲ."

"ಆ ಕಾಗದ ಡಬ್ಬಿಯಾಗ ಹಾಕಿ ಇಡು. ತೋಡೆ ಅದರಾಗ ಅವ ಅಂತ ತಿಳಕೋ"

ತಾನು ಕಳೆದ ನಾಲ್ಕು ತಾಸುಗಳಿಂದ ಕುದಿದು ಕುದಿದು ದೈನಾಸ ಪಟ್ಟರೆ ಇವರಿಗೆ ಇನ್ನೂ ಜೋಕ್ಸ್ !. ಅಂದರೆ ತೆಗೆದು ಕೊಂಡವರು ಇವರೇ.

"ತೊಗೊಂಡು ಏನು ಮಾಡಿದಿರಿ, ಹೇಳಿರಿ."

ಆಕೆ ಅಳುತ್ತಲೇ ಅವನೆದುರು ಬರಿ ನೆಲದ ಮೇಲೆ ಕುಳಿತಳು. ಅದೇನು ಆವೇಶ ಬಂದಿತೋ? ಬಾಗಿ ದಣ ದಣ ತಲೆ ಅಪ್ಪ ಳಿಸಿದಳು ನೆಲಕ್ಕೆ. ಅವನು ಹೌಹಾರಿದ. ಅವಳ ರಟ್ಟೆಗಳನ್ನು ಗಟ್ಟಿ ಹಿಡಿದು ಎಬ್ಬಿಸ ಬೇಕೆಂದ. ಆಕೆ ಏಳಲಿಲ್ಲ.

'ನಾ ಹೇಳತೀನಿ. ಏಳು' ಅವನೆಂದ.

ಆಕೆ ಅವನ ರಟ್ಟೆ ಬಿಗಿದು ಮತ್ತೆ ಅಳ ತೊಡಗಿದಳು. "ಏನು ಮಾ ಡಿ ದಿ ರಿ, ಹೇಳಿರಿ".

"ನೀ ಸುಮ್ಮಾದರ ಹೇಳತೀನಿ "

ಒತ್ತಿ ಒತ್ತಿ ಬರುತ್ತಿದ್ದ ಅಳು ನುಂಗ ಲಿಕ್ಕೆ ಅವಳಿಗೆ ಹತ್ತು ಮಿನಿಟುಗಳೇ ಬೇಕಾದವು.

ತಾನು ಹೇಗೆ ಹೇಳಬೇಕು. ಎಷ್ಟು ಹೇಳಬೇಕು ಎಂದೆಲ್ಲ ಯೋಚಿಸುತ್ತಿದ್ದ ಅನಂತನಿಗೆ ಅಷ್ಟು ಹೊತ್ತೂ ಸಾಕಾಗ ಲಿಲ್ಲ.

"ಏನು ಮಾಡಿದಿರಿ ಹೇಳಿರಿ".

ಆಕೆ ಮತ್ತೆ ಕೇಳಿದಳು, ಸೆರಗಿನಿಂದ ನೀರೆ ಒರೆಸಿಕೊಳ್ಳುತ್ತ

"ಅವು ಕಪಾಟನ್ಯಾಗ ಅವ ಅಂತ ತಿಳಕೋ".

"ತೀಕೊಂಡ್ರೆ ನಾತು. ನೀವು ನನ್ನ ತೊಗೊಂಡು ಏನು ಮಾಡಿದಿರಿ. ಹೇಳಿರಿ."

"ಮುಂದಿ ಬಂಗಾರದ ಸ್ಟೇಟ್ ಬ್ಯಾಂಕ್ ಲಾಕರ್‌ನ್ಯಾಗ ಇಡತಾರ ಗೊತ್ತದ ನೋ ಇಲ್ಲೊ ?

"ಅವರದೂ ಇ ದ ರ ದೂ ಏ ನು ಸಂಬಂಧ ?"

"ಹಾಂಗs ಇದೂ"

"ನನಗ ತಿಳೀಲಿಲ್ಲ."

"ನಿನ್ನ ತೋಡೇ ಬ್ಯಾಂಕಿನ್ಯಾಗ ಅವ."

"ಬ್ಯಾಂಕಿನಾಗ ?" ಆಕೆ ತಬ್ಬಿಬ್ಬಾ ದಳು "ಯಾಕ" ?

"ಯಾಕ ಅಂದರ ? ಸುರಕ್ಷಿತ ಅಂತ"

"ಮನ್ಯಾಗ ಇಷ್ಟು ದಿವಸ ಸುರಕ್ಷಿತ ಇದ್ದಿದ್ದಿಲ್ಲ ?"

"ಸುರಕ್ಷಿತ ಇತ್ತು ಖರೇ ಬ್ಯಾಂಕಿನವರು ಬೇಕು ಅಂದರು. ತಮ್ಮಲ್ಲಿರಲಿ ಅಂದರು."

"ಅಂದರ ಅದರ ಮ್ಯಾಲೆ ಸಾಲಾ ತಗ ದಿರಿ ?" ಆಕೆ ಅವನ ಕಣ್ಣುಗಳಲ್ಲಿ ನೋಡಿ ದಳು.

"ಬ್ಯಾರೇ ಉಪಾಯಾನs ಇದ್ದಿದ್ದಿಲ್ಲ. ಬ್ಯಾಂಕಿನ ಹಪ್ತೆ ತುಂಬಲೇಬೇಕಾಗಿತ್ತು. ಕಡೀ ನೋಟೀಸು ಕೊಟ್ಟರು. ಮತ್ತೆಲ್ಲೂ ರೊಕ್ಕದ ವ್ಯವಸ್ಥಾ ಆಗಲಿಲ್ಲ." ಅವನು ಕಹಿಯಾಗಿ ನಕ್ಕ. "ನಾವೆಲ್ಲಾ ಮಿಾಸಿಗೆ ತುಪ್ಪಾ ಹಚ್ಚಿಕೊಂಡು ಸ್ಕೂಟರ್ ಮ್ಯಾಲೆ ಕಾರ್‌ನ್ಯಾಗ ಓಡ್ಯಾಡತೀವಿ. ನಮ್ಮವೇ ನಮ್ಗ ನಮಗs ಗೊತ್ತು."

ಆಕೆ ಶೂನ್ಯ ದೃಷ್ಟಿಯಿಂದ ಕೆಳಗೆ ನೋಡುತ್ತಿದ್ದಾಕೆ ನೋರೆ ಮೇಲೆತ್ತಲಿಲ್ಲ.

"ಪುಣೆ-ಮುಂಬಯಿಗೆ ಕಾಂಪಿಟೆಶನ್ ಮ್ಯಾಲೆ ಕೆಲಸ ಮಾಡಿ ಕೊಡತೀವಿ. ಮಾಲು ಪೂರೈಸತೀವಿ- ಆರಾರು ತಿಂಗಳು ಬಿಲ್ಲು ಬರೂದಿಲ್ಲ. ಇಲ್ಲಿ ಯಾವದೂ ಖರ್ಚು ತಡೀಲಿಕ್ಕೆ ಬರೂದಿಲ್ಲ. ಮಶಿನ ಗೆ ಸಾಲ ತೊಗೊಂಡದ್ದರ ಹಪ್ತೆ ತಪ್ಪಿಸ ಲಿಕ್ಕೆ ಬರೂದಿಲ್ಲ." ಅವನು ತಡೆದ. ಅಂದರೂ ಆಕೆ ಮಾತಾಡಲಿಲ್ಲ.

"ಬ್ಯಾಂಕಿನವರ ಉರಲು ಭಾಳೇ ಬಿಗೀ ಆತು. ಒಯ್ದು ಕೊಟ್ಟೆ. ಭಾಳೇನಿಲ್ಲ ಹದಿ ನೈದು ಸಾವಿರ ಜಮಾ ಮಾಡಿಕೊಂಡರು.

ಇನ್ನು ಹತ್ತೆಂಟು ದಿನ ಬಿಟ್ಟು [illegible] ಬಿಲ್ಲು ಬರೂವದ. ಬಂದ ಮ್ಯಾಲೆ [illegible] ತಂದು ಕೊಡತೀನಿ."

ಆಕೆ ಒಟ್ಟು ಮಾತಾಡಲೇ ಇಲ್ಲ.

"ನೀ ಈವತ್ತು ನೋಡಿದಿಯೇನು ?"

ಅದಕ್ಕೂ ಆಕೆ ಉತ್ತರಿಸಲಿಲ್ಲ.

"ಮಾಲಕರ ಮನ್ಯಾಗ ದೀಪ ಹತ್ತಿ ಧಾಂಗ ಕಾಣಸ್ತದ" ಅವನು ವಿಷಾ ಯಾಂತರ ಮಾಡಿದ.

"ಹೌದು, ಮುಂಜಾನೆ ಊರಿಂದ ಬಂದಾಗ" ಅಂತೂ ಆಕೆ ಮಾತಾಡಿದಳು. ಬೇಡಾದವರಿಗೆ ಘಡೆಯಿಂದ ಹೇಳಿದ ಹಾಗೆ-

"ಏನಂತಿದ್ದರು ?"

"ಏನಿಲ್ಲ, ಮಧ್ಯಾಹ್ನದಾಗ ಮಾಲಕರ ಹೆಂಡತಿ ಬಂದಿದ್ದರು. ಚಹಾ ಮಾಡಿದೆ" ಆಕೆ ನಿಧಾನವಾಗಿ ಒಂದೊಂದೇ ಶಬ್ದ ಬಿಡಿ ಬಿಡಿಸಿ ಹೇಳಿದಳು.


"ಏನೋ ನೆನಪಾತು. ಅವನ್ನು ಅವರಿಗೆ ತೋರಿಸಬೇಕು ಅನಿಸಿತು. ಕಪಾಟು ತೆಗದು ನೋಡಿದರ ಅಲ್ಲೇನದ ?" ಆಕೆ ಉಸಿರು ಹಾಕಿದಳು. ಕಣ್ಣು ಬತ್ತಿದ್ದವು.

೮

ಅಂದು ಸಂಜೆ ಅನಂತ ಮನೆಗೆ ಬಂದಾಗ ಬಾಗಿಲಿಗೆ ಬೀಗ ಹಾಕಿತ್ತು. ಅವನು ಅತ್ತಿತ್ತ ನೋಡಿದ. ಸುಜಾತಾ ಒಂದು ಹೊತ್ತು ಮಾಲಕರ ಮನೆಯಲ್ಲಿ ಕುಳಿತಿರ ಬಹುದೆಂದು ಅವರ ಮುಚ್ಚಿದ ಬಾಗಿಲು ಬಾರಿಸಿದ.

"ಹಿರೇಮಠರ ಆಸ್ಪತ್ರೆಗೆ ಹೋಗುತ್ತೇ ನೆಂದು ಹೇಳಿ ಹೋಗಿದ್ದಾಳೆ" ಎಂದು ಅವರು ಮರಾಠಿಯಲ್ಲಿ ಹೇಳಿ ಬೀಗದ ಕೈ ಕೊಟ್ಟರು. ಹಿರೇಮಠ ಆಸ್ಪತ್ರೆ ? ಅಲ್ಲೀಕೆ? ಮೈ ಸರಿಯಿಲ್ಲವೇ? ತನಗೆ ಫೋನ್ ಮಾಡಬಹುದಿತ್ತಲ್ಲ ?

ಆಕೆ ಮೂರು ದಿನ-ಹೌದು-ಮೂರು ದಿನಗಳಿಂದ ತನ್ನೊಡನೆ ಮಾತಾಡಿಲ್ಲ ವೆಂಬುದು ಅವನಿಗೆ ನೆನಪಾಯಿತು. ಅದೇ ತೋಡೆಯ ಪ್ರಕರಣ ಒಂದಿಷ್ಟು ಬಿಸಿ ಜಾ ಯಾದಾದಿನಿಂದ ತಾನೂ ಅವಳೊಡನೆ ಮಾತಾಡಿರಲಿಲ್ಲ. ಅವಳ ಮೈಗೆ ಕೈ ಹಚ್ಚಿರ



ಲಿಲ್ಲ. ಒಂದಿಷ್ಟು ಕಾವು ಆರಿದ ಬಳಿಕ ತಾನೇ ದಾರಿಗೆ ಬರುತ್ತಾಳೆ! ತಾನೇನು ಆ ಬಂಗಾರ ಮಾರಿ ಹುಡಿ ಹಾರಿಸಿಲ್ಲ. ಅದು ಮನೆಯಲ್ಲಿಯ ಕಪಾಟಿನಲ್ಲಿರುವ ಬದಲು ಬ್ಯಾಂಕಿನ ತಿಜೋರಿಯಲ್ಲಿದೆ. ಸಾಲದ ಪೂರ್ತಿ ಹಣವೂ ಇನ್ನೊಂದು ಸಾಲಕ್ಕೆ ಜಮೆಯಾಗಿದೆ.

ಅವನು ವಿಮನಸ್ಕನಾಗಿ ಬಾಗಿಲು ತೆಗೆದ. ದೀಪ ಹಚ್ಚಿದ-ಟೀಪಾಯ್ ಮೇಲೆ ಕಣ್ಣಿಗೆ ಒಮ್ಮೆಲೆ ಕಾಣುವ ಹಾಗೆ ಒಂದು ಚೀಟಿ, ಇಂಗ್ಲೀಷಿನಲ್ಲಿ "ಹಿರೇಮಠ ಆಸ್ಪತ್ರೆಯಲ್ಲಿ ಪ್ರವೇಶ ಪಡೆಯುತ್ತಿದ್ದೇನೆ" ಆಕೆಗೆ ಮೂರನೆಯ ತಿಂಗಳು ನಡೆಯುತ್ತಿತ್ತೇನೋ? ಸ್ರಾವ ಬಹಳ ಆಗಿರಬೇಕು. ಮಾಲಕರ ಹೆಂಡತಿಯನ್ನು ಕರೆದು ಕೇಳಿರಬೇಕು. ಜತೆಗೆ ಅವರೂ ಹೋಗಿರ ಬಹುದಲ್ಲ? ಕಾಳಜಿಯಾಯಿತು. ಅವನು ಬಾಗಿಲು ಹಾಗೆಯೇ ಬಿಟ್ಟು ಮಾಲಕರ ಮನೆಗೆ ಹೋದ. 'ಯಾವಾಗ ಹೋದಳು? ಜತೆಗೆ ಇನ್ನಾರು ಹೋದರು?' ಎಂದು ಕೇಳಿದ.

"ಜತೆಗೆ ಇನ್ನಾರೂ ಹೋಗಲಿಲ್ಲ" ಅಷ್ಟಕ್ಕಷ್ಟೇ ಉತ್ತರ. ಬಂಗಾರದ ಪ್ರಕರಣ ಇವರ ಮುಂದೂ ಹೇಳಿದ್ದಾಳೇನು ಮತ್ತೆ? ಇರಬೇಕು. ಅವರು ಬಂದ ಮೊದಲನೆಯ ದಿನ ಬಂಗಾರ ತೋರಿಸುತ್ತೇನೆಂದು ಕಪಾಟು ತೆಗೆದದ್ದು, ಖಾಲಿ ಡಬ್ಬಿ ನೋಡಿದ್ದು ತಾನೇ ಹೇಳಿದ್ದಾಳೆ. ಒಂದಿಷ್ಟು ಆ ಬಗ್ಗೆ ಚರ್ಚೆಯಾಗಿರಲೂ ಸಾಕು. ಅದರ ಬಳಿಕ ಅದು ಮುಂದೇನಾಯಿತು, ಎಲ್ಲಿ ಹೋಯಿತು ಎಂದೆಲ್ಲ ಕೇಳಿರಬಹುದು....

"ಮೂರು ಮೂರುವರೆ ಆಗಿದ್ದಿರ ಬಹುದು" ಎಂದರು ಮಾಲಕರ ಹೆಂಡತಿ.

"ಆಟೋದಲ್ಲಿ ಒಬ್ಬಳೇ ಹೋದಳೇ?"

"ಇಲ್ಲ. ಗೋವಾವೇಸ್ ಹೋಗಿ ಬಸ್ಸು ಹಿಡಿಯುತ್ತೇನೆಂದಳು."

"ಬಸ್ಸಿನಿಂದ?" ಅವನು ಉತ್ತರವನ್ನು ಅಪೇಕ್ಷಿಸದೇ ಮನೆಗೆ ಬಂದ. ಹಾಗಿದ್ದರೆ ಪ್ರಕೃತಿ ಅಷ್ಟು ಗಂಭೀರವಿರಲಿಕ್ಕಿಲ್ಲ. ಇಲ್ಲಿ ಕುಳಿತಾದರೂ ಮಾಡುವದೇನು? ಆತ ಮನೆಗೆ ಕೀಲಿ ಹಾಕಿದ-



"ಇದು ಸಭ್ಯತೆಯಲ್ಲ- 3-ಡಿ ಗ್ಲಾಸಿನಲ್ಲಿ ಕನ್ಯಾ ಪರೀಕ್ಷೆ ಮಾಡೋದು...."

ಆಸ್ಪತ್ರೆಗೆ ಬಂದಾಗ ಗಂಟೆ ಎಂಟಾಗಿತ್ತು. "ಶ್ರೀಮತಿ ಉಪಾಧ್ಯೆ?" ಆತ ಸ್ವಾಗತ ಕಕ್ಷದಲ್ಲಿ ಕೇಳಿದ.

"ಆ ಹೆಸರಿನವರು ಇಲ್ಲಿ ಯಾರೂ ಇಲ್ಲ"

"ಬಂಗಾರ ಸುಜಾತಾ ದಪ್ತರದಾಗ?"

"ಅಟ್ಟದ ಮ್ಯಾಲೆ ಹೋಗರಿ. ರೂಮು ನಂಬರು ಮೂರು. ಎಡಕ್ಕಿನ ಎರಡನೇ ಪೋಲ್".

ಅನಂತ ಆ ಕಿರಿದಾದ ಕೋಣೆಯಲ್ಲಿ ಕಾಲಿಟ್ಟಾಗ ಸುಜಾತಾ ಕಣ್ಣು ಮುಚ್ಚಿ ಮಲಗಿದ್ದಳು. ಅವನು ಕಬ್ಬಿಣದ ಕುರ್ಚಿಯಲ್ಲಿ ಒಂದಿಷ್ಟೂ ಸದ್ದಾಗದಂತೆ ಸರಿಸಿಕೊಂಡು ಕುಳಿತ. ಆಸ್ಪತ್ರೆಯ ಕ್ಯಾಂಡಲ್ ಬೆಳಕಿನಲ್ಲಿ ಅಲ್ಲಿಯ ಬಿಳಿದಾದ ತೊಟ್ಟಿಲು ಕೂಡ ವಿಚಿತ್ರವೆನಿಸಿತು. ಈಕೆ ಇಲ್ಲಿ ಯಾಕೆ ಬಂದಿದ್ದಾಳೆ? ಮಧ್ಯಾಹ್ನ ಮಾತಿಲ್ಲದೆ ಊಟಕ್ಕೆ ಬಡಿಸಿದಳು ತನಗೊಬ್ಬನಿಗೇ. ಮೊದಲಿನಂತೆ ಇಬ್ಬರೂ ಕೂಡಿಯೇ ಊಟಕ್ಕೆ ಕೂಡ್ರಲಿಲ್ಲ. ತಾನೂ ಬೇಕೆಂದೇ ಮಾತಾಡಲಿಲ್ಲ. ಸಿಟ್ಟು ಹಿಡಿದುಕೊಂಡಿದ್ದರೆ ಎಷ್ಟು ದಿವಸ ಉಳಿಯುತ್ತದೆಯೋ ನೋಡೋಣ. ಎಲ್ಲಾದರೂ ಬಚ್ಚಲಲ್ಲಿ ಜಾರಿ ಬಿದ್ದಿರ

...ನಾ? ...

"ಬಂದು ಊಟ ಹಾಕುತ್ತೇನೆ?"

ಧ್ವನಿ ಕ್ಷೀಣವಾಗಿತ್ತು. ಆತ ಗಡಿಬಿಡಿ ನೋಡಿಕೊಂಡ.

ಹೂಂ. ಅರ್ಥ ತಾನು ಅತು"

"ಅಬಾರ್ಶನ್ ಮಾಡಿಸಿಕೊಂಡೆ."

"ಅಬಾರ್ಶನ್? ಯಾಕ?"

ಆಕೆ ಉತ್ತರಿಸಲಿಲ್ಲ. ಒಂದೊಂದು ಇನ್ನೊಂದು ಮಾತು ಹೊಸೆಯುತ್ತಲೇ ಹೋಗುತ್ತದೆ. ಎಂದುಕೊಂಡಿರಬೇಕು.

"ಊಟ ಆಕ್ತೇನು?"

"ಇಲ್ಲ" ಅವನು ನಿರ್ಲಿಪ್ತತೆಯಿಂದ ಹೇಳಿದ "ನಾ ಆರಾಮ ಇದ್ದೀನಿ ನೀವು ಮನಿಗೆ ಹೋಗ್ರಿ ಅಡಿಗಿ ಮಾಡಿಟ್ಟದ್ದೇ ಅದ. ಬಿಸಿ ಮಾಡಿಕೊಳ್ರಿ ಇಷ್ಟು ಮಾತಾಡಿದ್ದಕ್ಕೆ ಅವಳಿಗೆ ದಣಿವೆನಿಸಿದಂತಾಯಿತು. ಕಣ್ಣು ಮುಚ್ಚಿದಳು.

ಆಯಾ ಬಂದು ಸನ್ನೆ ಮಾಡಿ ಕರೆದಳು ಅವಳ ಹಿಂದೆ ಹೋದಾಗ ಡ್ರೆಸಿಂಗ್ ರೂಮಿನಲ್ಲಿಯ ಡಿಶ್‌ನಲ್ಲಿ ತೆಗೆದಿಟ್ಟ ಗರ್ಭ ಪಿಂಡ ತೋರಿಸಿದಳು ತನ್ನ ಪಿಂಡ! ಅದನ್ನು ಆಕೆ ತೆಗೆಸಿದಳು. ಯಾಕೆ?


ಅಲ್ಲೇ ನಿಲ್ಲಬೇಕೋ ಅಥವಾ ಮರಳಿ ಮನೆಗೆ ಹೋಗಬೇಕೋ, ಅವನಿಗೆ ತಿಳಿಯದೊಲ್ಲದಾದಾಗ ಆಯಾ ಹೇಳಿದಳು.

"ನೀವು ಬೇಕಾದರೆ ಮನೆಗೆ ಹೋಗಿ. ಇಲ್ಲಿ ನಾವು ಇರತೇವೆ."

ಅವನಿಗೆ ಎಲ್ಲವೂ ಅತಂತ್ರವೆನಿಸಿತು. ಇಲ್ಲಿ ನಿಂತೇನು ಮಾಡುವದು? ಸುಜಾತಾ ಮಲಗಿದಲ್ಲಿ ಹೋಗಿಯಾದರೂ ಮಾಡುವದೇನು? ಹಾಗೆ ಮನೆಗೆ ಹೋಗಿಯಾದರೂ ಏನು ಕೆಲಸ? ಇಲ್ಲಿ ಯಾಕೆ ನಿಂತಿರಿ ಇಲ್ಲಿ ಯಾಕ ಕುಳಿತಿರಿ? ಎಂದು ಅಲ್ಲಿ ಯಾರೂ ಕೇಳುವದಿಲ್ಲ ಅಷ್ಟೇ.

ಅವನಿಗೆ ಒಮ್ಮೆಲೆ ದಣಿವಾದಂತೆನಿಸಿತು. ಹಣೆ ಮೇಲೆ, ಬೆನ್ನು ಎದೆ ಹೊಟ್ಟೆ ಎಲ್ಲ ಬೆವತಂತೆ ಅನಿಸಿತು. ಮನೆಗೆ ಹೋದರೆ ಸಾಕು.

ರಾತ್ರಿ ಊಟ ಮಾಡಿದ್ದರಿಂದಲೋ ಏನೋ, ಅವನಿಗೆ ಸರಿಯಾಗಿ ನಿದ್ರೆಯೂ ಹತ್ತಲಿಲ್ಲ.



ಬೇಗ್ಗೆ ಮತ್ತೆ ಆಸ್ಪತ್ರೆಗೆ ಹೋದ. ಸುಜಾತಾ ಒಂದಿಷ್ಟು ಗೆಲುವಾಗಿದ್ದಳು.

"ನೀವು ಫ್ಯಾಕ್ಟರಿಗೆ ಹೋಗರಿ. ನನಗ ಇಲ್ಲಿ ಚಹಾ ಹಾಲು ಊಟ ಎಲ್ಲಾ ಕೊಡತಾರ"

ಮಾತಿಲ್ಲದೆ ಹತ್ತು ನಿಮಿಷ ಕುಳಿತು ಅವನು ಅಲ್ಲಿಂದ ಎದ್ದ.

ಸಂಜೆ ಅವನು ಬಂದಾಗ ಕಾಟ್ ಮೇಲೆ ಸುಮತಿ ಚಿತ್ರಾ ಕುಳಿತಿದ್ದರು. ಅವನಿಗೆ ಹೇಗೆ ಹೇಗೋ ಆಯಿತು. "ಹ್ಯಾಂಗ ಇದ್ದಾಳ?" ಅವನು ಸುಮತಿಯನ್ನು ಮಾತನಾಡಿಸಿದ. ಈಗ ಈಕೆ ಒಂದಿಷ್ಟು ಮೈ ಕೈ ತುಂಬಿಕೊಂಡಿದ್ದಾಳೆ- ನೋಡಿ ಬಹಳ ದಿವಸಗಳಾದವು, ಚಿತ್ರಾ ಕೂಡ ಎತ್ತರವಾಗಿದ್ದಾಳೆ.

"ಅಮ್ಮಾ, ಅಪ್ಪಾ ಇಲ್ಲಿ ಯಾಕ ಬಂದಾರ?" ಚಿತ್ರಾ ತಾಯಿಯನ್ನು ಕೇಳಿದಳು.

"ಯಾಕಂದರ? ನಿನ್ನ ಮಾವಶಿನ್ನ ನೋಡಲಿಕ್ಕೆ" ಸುಮತಿ ಸಹಜವಾಗಿ ಉತ್ತರ ಕೊಟ್ಟಳು.

ಅವನಿಗೆ ಅಲ್ಲಿ ತಾನೊಬ್ಬ ತಾನೊಬ್ಬನೇ ಪರಕೀಯ ಎಂದೆನಿಸಿತು ಮಗಳು ತನ್ನೊಡನೆ ನೇರ ಮಾತನಾಡಲಿಲ್ಲ! ತಾನು ಕೇಳಿದ ಪ್ರಶ್ನೆಗೆ ಹೆಂಡತಿ-ಅಂದರೆ ಹಿಂದಿನ ಹೆಂಡತಿ ಉತ್ತರ ಕೊಡಲಿಲ್ಲ. ಈ ಹೆಂಡತಿ ಯಂತೂ ತನಗೆ ಹೇಳದೆ ಕೇಳದೆ ಗರ್ಭ ತೆಗೆಸಿಬಿಟ್ಟಿದ್ದಾಳೆ. ಇಲ್ಲಿಂದ ಓಡಿ ಹೋಗಬೇಕೆನ್ನಿಸಿತು ಅವನಿಗೆ. ಆದರೆ ಹೋಗುವುದಾದರೂ ಎಲ್ಲಿ?

"ಕೂಡ್ರಲಾ" ಸುಮತಿಯೇ ಹೇಳಿದಾಗ ಅವನಿಗೆ ಕೂಡ್ರಬೇಕಾಯಿತು. "ನೀ ಯಾವಾಗ ಬಂದೀ?" ಆತ ಕೇಳಿದ.

"ಇಕೀ ಹಾಸ್ಪಿಟಲ್‌ಗೆ ಬಂದದ್ದು ನನಗೆ ಇಲ್ಲಿ ಬಂದ ಮ್ಯಾಲೆ ತಿಳೀತು."

"ನಾನೇನು ಹೇಳಿ ಕಳಿಸಲಿಲ್ಲ" ಸುಜಾತಾ ಹೇಳಿದಳು. ಮೋರೆಯ ಮೇಲೆ ಹೊಡೆದಂತೆ.

"ನಮ್ಮ ಬ್ಯಾಂಕಿನಾಗs ಒಬ್ಬ ಹುಡುಗಿಗೆ ಸಿಜೇರಿಯನ್ ಆಗೇದ ಅಂತ ತಿಳೀತು. ಅದನ್ನ ನೋಡಬೇಕಂತ ಬಂದೆ. ಆಕಿ ರೂಮು ನಂಬರು ಬರೆದಾಗ ಇದ್ದಾಳ. ಹೋಗಿ ನೋಡಿರಿ ಬೇಕಾದರ. ರೂಮಿನ ನಂಬರು ನೋಡಕೋತ ನಾ ಬರಬೇಕಾದರ ಚಿತ್ರಾ ಈ ರೂಮಿನ್ಯಾಗ ಬಂದು ಬಿಟ್ಟಿತು?"

ತಾನು ಇವರಿಬ್ಬರಲ್ಲೂ ಅವಿಶ್ವಾಸದಿಂದ ವರ್ತಿಸುತ್ತೇನೆಂದು ಇಬ್ಬರೂ ಹೇಳಿದರು. ಯಾವ ಘಟನೆಯೂ ಇಲ್ಲದೆ, ಸುಜಾತಾ ಸುಮತಿಯನ್ನು ಕರೆಸಿಕೊಂಡಿರಬೇಕೆಂದು ತನಗೆ ಅನಿಸಿದ್ದೇನೋ ನಿಜವೆ ಆದರೂ—

"ಥಾಂಗೇನೂ ಯಾರ ಮ್ಯಾಲೆ ನನ್ನ ಅವಿಶ್ವಾಸ ಇಲ್ಲ" ಅವನಿಗೆ ಹೇಳಲೇಬೇಕಾಯಿತು. ಬಂದದ್ದಾಯಿತು. ಕುಳಿತದ್ದೂ ಆಯಿತು ಆಡುವಂತಹ ಮಾತೂ ಉಳಿದಿಲ್ಲ.

"ನಾ ಹೋಗತೀನಿ" ಅವನು ಹೊರಬಿದ್ದ ಸಹಜವಾಗಿ ಎನ್ನುವಂತೆ. ಸುಮತಿ ಒಬ್ಬಳೇ ಹೊರಗೆ ಬಂದಳು.

"ಸುಜಾತಾ ಗರ್ಭಪಾತ ಯಾಕೆ ಮಾಡಿಸಿಕೊಂಡಿರಬೇಕು?"

"ಇದು ಮಾಡಿಸಿಕೊಂಡಿದ್ದೇನು? ನನಗ ಅದೂ ಗೊತ್ತಿಲ್ಲ. ಇದು ಆದದ್ದು, ಅಂತ ನಾ ಮಾಡಿದ್ದೆ."

ಅನಂತ ಮಾತಿಲ್ಲದೆ ಮೆಟ್ಟಲು ಇಳಿದ.

"ಏನಂತಿದ್ದರು?" ಸುಜಾತಾ ಕೇಳಿದಳು. 'ನೀ ಗರ್ಭಪಾತ ಯಾಕ ಮಾಡಿಸಿಕೊಂಡಿರಬೇಕು, ಅಂತ ಅಂದರು."

"ನೀ ಏನು ಹೇಳಿದೀ?"

"ನನಗ ಅದೂ ಗೊತ್ತಿಲ್ಲ ಅಂತ ಅಂದೆ. ಅಂದಹಾಂಗ ನೀ ಒಮ್ಮಿಂದೊಮ್ಮೆ, ಇಷ್ಟು ದೊಡ್ಡ ನಿರ್ಣಯ, ಅದೂ ಒಬ್ಬಾಕೀನೇ, ಗಂಡನ್ನ ಕೇಳದೇ ಯಾಕ ತೊಗೊಂಡೀ? ಹೇಳೂ ಹಾಂಗ ಇದ್ದರ ಹೇಳು."

"ಇಶ್ಶ್, ಹೇಳದಿರಲಿಕ್ಕೆ ಏನು?" ಸುಜಾತಾ ಸೋತ ನಗೆ ನಕ್ಕಳು. 'ನೀ ಹೇಳಿದ್ದು ನೆನಪದs ನಿನಗೆ? ಎಲ್‌ಎಲ್‌ಬಿ ಮುಗಸು ಅಂತ, ಶಿಕ್ಷಣ ಅರ್ಧಕ್ಕೆ ಬಿಡಬ್ಯಾಡ ಅಂತ?"

"ಖರೇ"

"ಹಂಗಾರ ಹೊಟ್ಟೀ ಹೊತಗೊಂಡು ಕಾಲೇಜಿಗೆ ಹ್ಯಾಂಗ ಹೋಗಲಿ? ಬಾಣಂತನ ಅಂದರ ಮತ್ತ ಎರಡು ತಿಂಗಳು ಅಭ್ಯಾಸ ಇಲ್ಲ. ಮುಂದಿನದು ಯಾರು ಕಂಡಾರು?"

"ಹೌದು ಬಿಡು, ಕಾಲೇಜು ಸುರು ಆಗೋದರೊಳಗ ನಿಂಗ ವಿಶ್ರಾಂತಿ ಸಿಗತsದ ಪ್ರಕೃತಿ ಸುಧಾರಸ್ತsದ, ಆದರ ಅವರಿಗೆ ಹೇಳದೆಯೇ ಯಾಕ ಇದು ಮಾಡಿಸಿಕೊಂಡೀ?"

"ಇದನ್ನ ಅವರಿಗೇನು ಹೇಳೋದು?" ಸುಜಾತಾ ಮತ್ತೆ ನಕ್ಕಳು. 'ನೀನೂ ದಾದಾ ನನಗ ಎಲ್‌ಎಲ್‌ಬಿ ಮುಗಸು ಅಂತ ಹೇಳಿರಿ ಅಂತಂದರ ಅವರಿಗೆ ಟರ್ ಪಣ."

"ನಿನ್ನ ಪತ್ರ ಮುಟ್ಟಿತು"

"ಎಂಥಾ ವಿಚಿತ್ರ ಮಂದೀ?" ಸುಜಾತಾ ಅಲ್ಲೇ ವಿಷಯ ಮುಗಿಸಿದಳು.

ಮರುದಿನ ಅನಂತ ಬೇಗ್ಗೆ ಆಸ್ಪತ್ರೆಗೆ ಹೋಗಲಿಲ್ಲ. ಸಂಜೆಗೇ ಹೋದ. ಅವನು ಅಪೇಕ್ಷಿಸಿದಂತೆ ಸುಮತಿ ನೊದಲೇ ಬಂದಿದ್ದಳು. ಜತೆಗೆ ಚಿತ್ರಾ ಇರಲಿಲ್ಲ. ಇನ್ನೊಂದು ವಿಶೇಷ. ತನ್ನ ಬಟ್ಟೆ ಬರೆ ವೇಷ ಭೂಷಣಗಳ ಬಗ್ಗೆ ಅಷ್ಟೊಂದು ಶ್ರದ್ಧೆಯಿಲ್ಲದ ಸುಮತಿ ಅಂದು ವಿಶೇಷವಾಗಿ ಶ್ರಮವಹಿಸಿ ಅಲಂಕರಿಸಿಕೊಂಡಂತೆ ಕಂಡಿತು ಅವನಿಗೆ. ಎಂದಿಲ್ಲದ ದುಂಡುಮಲ್ಲಿಗೆ ಮಾಲೆ ಕೂಡ. ಸುಜಾತಾ ಎದ್ದು ಮೋರೆ ತೊಳೆದುಕೊಂಡು ಪಾವಡರ ಹಚ್ಚಿಕೊಂಡಂತಿತ್ತು. ಒಂಟಿ ಹೆಳಲು ಹಾಕಿ ಆಗಿತ್ತು. ಆಕೆಗಾಗಿ ತಂದಿದ್ದ ಮಾಲೆ ಟೇಬಲ್ ಮೇಲಿತ್ತು. ಸುಮತಿಯೇ ಅವಳ ಹೆರಳು ಹಾಕಿರಬೇಕು.

ಅನಂತ ಕುರ್ಚಿಯ ಮೇಲೆ ತುಸು ಹೊತ್ತು ಕುಳಿತ ರೂಢಿಯಂತೆ.

ಮಾತನಾಡುವದಾದರೂ ಏನು? ಪ್ರಕೃತಿ ಹೇಗಿದೆ? ನಿದ್ದೆ ಹತ್ತುತ್ತದೆಯೇ? ಹಸಿವೆ ಆಗುತ್ತದೆಯೇ? ಎಲ್ಲ ಮೋರೆಯೇ ಹೇಳುತ್ತದೆ.

"ನಾ ಹೋಗತೀನಿ" ಅವನು ಎದ್ದು ಹೋದ.

ಮರುದಿನ ರೂಢಿಯಂತೆ ಅವನು ಬಂದಾಗ ಕೆಳಗೆ ಆಯಾ ಆಶ್ಚರ್ಯದಿಂದ ಹೇಳಿದಳು. "ನಿಮಗ ಗೊತ್ತಿಲ್ಲಾ?



"ವಸ್ತ್ರರವಾರ ಬಾಯಿ ಬೇಗ್ಗೆ ಡಿಸ್‌ಚಾರ್ಜ್ ತೊಗೊಂಡರು."

"ನಾ ಮನೀಗೆ ಹೋಗೇ ಇಲ್ಲ" ಅವನಿಗೆ ಹೇಳಬೇಕಾಯಿತು. ಕಿಸೆಯಲ್ಲಿಯ ಕೀಲಿಯ ಕೈ ಮುಟ್ಟಿಕೊಂಡು ನೋಡಿ.

ಅಂದರೆ ಆಕೆ ತನ್ನ ತವರು ಮನೆಗೇ ಹೋಗಿದ್ದಾಳೆ ! ಅವರಾರೂ ತಮ್ಮಲ್ಲಿ ಬರಬಾರದು ಎಂದು ತಾನೇ ಎಂದೋ ಆಕೆಗೆ ಹೇಳಿದ್ದೆ. ಈಗ ಅವರು ಬರುವದು ಒತ್ತಟ್ಟಿಗೆ ಇರಲಿ, ಈಕೆಯೇ ಅಲ್ಲಿ ಹೋಗಿ ಕೂಡಿದ್ದಾಳೆ.

ಹೊರಗೇ ಊಟ ಮುಗಿಸಿಕೊಂಡು ಮನೆಗೆ ಮರಳಿದಾಗ ತಡವಾಗಿತ್ತು. ಮಲಗಿದ ನಂತರವೂ ಎಷ್ಟೋ ಹೊತ್ತು ನಿದ್ದೆ ಬರಲಿಲ್ಲ. ಸುಜಾತಾ ಹೀಗೇಕೆ ವರ್ತಿಸುತ್ತಾಳೆ ? ತನಗೆ ಹೇಳದೆ ಕೇಳದ ಗರ್ಭಪಾತ ಮಾಡಿಸಿಕೊಂಡು ತನ್ನ ಇಷ್ಟಾನಿಷ್ಟ ಗೊತ್ತಿದ್ದು ಅಕ್ಕನಲ್ಲಿ ಹೋಗಿದ್ದಾಳೆ....

ತಾನು ನೌಕರಿ ಬಿಟ್ಟದ್ದಕ್ಕೆ ಸುಮತಿ ತನ್ನ ಮೇಲೆ ಸಿಟ್ಟು ಹಿಡಿದಳು. ಎಂದಿಗೂ ಕ್ಷಮಿಸಲಿಲ್ಲ. ಈಕೆಗೂ ಹೀಗೆಯೇ ಏನು ? ಈಕೆಗೆ ಹೇಳದೆ ತಾನು ಬಂಗಾರ ಬ್ಯಾಂಕಿನಲ್ಲಿ ಇಟ್ಟದ್ದಕ್ಕೆ ಈಕೆಯೂ ಸಿಟ್ಟಿಗೆದ್ದಾಳೆ. ಸಿಟ್ಟೆಂದರೇನು ? ಅಕ್ಕ ಬೇಕು. ಇವಳು ಬೇಡ. ಅಕ್ಕ ಬಾಕಿ ತಕರಾರು ಮಾಡಲಿಲ್ಲ. ಈಕೆ ಈಕೆ... ಅವನಿಗೆ ಏನೋ ಚಕ್ಕನೆ ಹೊಳೆದಂತಾಯಿತು. ತನ್ನ ಪಿಂಡವನ್ನು ಬೆಳೆಸುವದೂ ಬೇಡವೆಂದು. ಹೌದು ಅದೇ ಕಾರಣ—ಬೇಡವೆಂದೇ ತೆಗೆಸಿದಳು. ಬೇರೆ ಕಾರಣವಿರಲಿಕ್ಕೆ ಸಾಧ್ಯವೇ ಇಲ್ಲ. ಸುಜಾತಾಗೆ ತನ್ನ ಬಗ್ಗೆ ಅತ್ಯಂತ ತಿರಸ್ಕಾರ ಹುಟ್ಟಿರಬೇಕು. ತಿರಸ್ಕಾರವೇನು, ಹೇಸಿಗೆಯೇ ಕೈಗೆ ಮೈಗೆ ಹತ್ತಿದ ಹೊಲಸು ತೊಳೆದುಕೊಳ್ಳುತ್ತೇನೆ. ಬಟ್ಟೆಗೆ ಹತ್ತಿದರೆ ತೆಗೆದು ಬಿಸಾಡಬಹುದು. ಒಳಗೆ ಬೆಳೆಯುತ್ತಿದ್ದರೆ? ಅವಳ ಸ್ಥಿತಿಯಲ್ಲಿ ತಾನಿದ್ದರೆ ಏನು ಮಾಡುತ್ತಿದ್ದೆ ?...

ಮರುದಿನ ಮಧ್ಯಾಹ್ನ ಆತ ಸಹಜವಾಗಿ ಎನ್ನುವಂತೆ ಬ್ಯಾಂಕಿಗೆ ಫೋನು ಮಾಡಿದ.

"ಒಮ್ಮಿಂದೊಮ್ಮೆ ಡಿಸ್‌ಚಾರ್ಜ್ ತೆಗೆದುಕೊಂಡರೇ ?"



"ಹಾಗೇನಿಲ್ಲ" ಸುಮತಿ ಒಪ್ಪಿಸಿ, ಯೋಚಿಸಿ ಮಾತನಾಡಿದಳು "ನೀವು ಬಂದು ಹೋದಮ್ಯಾಲೆ ಡಾಕ್ಟರರು ಬಂದಿದ್ದರು ಮರುದಿನ ಬೆಳಿಗ್ಗೆ ಒಂದು ಸಿಜೇರಿಯನ್ ಇಟಕೊಂಡೇವಿ. ಬಾಗ ಬೇಕು ಅಂದರು ಬೆಳಿಗ್ಗೆ ಆರು ಗಂಟೆಕ್ಕ ಕರಕೊಂಡು ಬಂದೆವು."

"ನಮ್ಮಲ್ಲಿ ಬರಲಿಲ್ಲ ?"

"ಇನ್ನೂ ಅಶಕ್ತತನ ಅದ. ಮೂರು ನಾಲ್ಕು ವಾರ ವಿಶ್ರಾಂತಿ ಬೇಕಂತ ಡಾಕ್ಟರರು ಹೇಳ್ಯಾರ, ಅಲ್ಲಿ ಬಂದು ನೋಡಾವರು ಯಾರು ?"

"ಸಂಜೀನ್ಯಾಗ ನವಡು ಅದs ಏನು ?

ಆಕೆ ಉತ್ತರಿಸಲಿಲ್ಲ. ಮೊದಲಿನ ಎರಡೂ ವಿಷಯ ಪೂರ್ವಸಿದ್ಧತೆ ಮಾಡಿಕೊಂಡು ಹೇಳಿದಂತಾಗಿತ್ತು. ಫೋನು ಕೂಡ ಅವೇಕ್ಷಿತವೇ ಇತ್ತು. ಅದರ ಈ ಅಪಾಯಿಂಟ್‌ಮೆಂಟ್ ? ಆಕೆಗೆ ನಗು ಬಂತು. ಅವನು ಮತ್ತೆ ಅದನ್ನೇ ಕೇಳಿದ."

"ಯಾಕ ?"

"ಅವನ್ನ ಹಿಂದಾಗಡೆ ಹೇಳತೀನಿ. ಈವತ್ತು ಸಂಜೀನ್ಯಾಗ ಆರೂವರೆ ಗಂಟೆಕ್ಕ ಮಿಲಿಟರಿ ಮಹಾದೇವ ಗುಡ್ಯಾಗ ಭೆಟ್ಟಯಾಗರಿ. ಸ್ವಲ್ಪ ಮಾತಾಡೋದದ."

ಪ್ರಯತ್ನ ಪೂರ್ವಕವಾಗಿ ಆಕೆ ಪ್ರಸಾಧನ ಮಾಡಿಕೊಂಡಿದ್ದಾಳೆನ್ನಿಸಿತು ಅನಂತನಿಗೆ. ಮತ್ತೊಮ್ಮೆ ಮೊನ್ನೆ ಆಸ್ಪತ್ರೆಯಲ್ಲಿ ಇಂದು ಇಲ್ಲಿ. ಮಲ್ಲಿಗೆ ಮಾಲೆ ಇಲ್ಲ. ಬದಲು ಇಂಪೋರ್ಟೆಡ ಮಾದಕ ಸುಗಂಧ. ಒಂದಿಷ್ಟು ದಪ್ಪಾಗಿದ್ದಾಳೆ. ಸುಖದ ಮೈ. ಬ್ಯೂಟಿ ಪಾರ್ಲರ್‌ಗೂ ಹೋಗಿ ಬಂದಿರಬೇಕು. ಅವನನ್ನು ನೋಡಿ ಮೋಹಕವಾಗಿ ನಕ್ಕಳು "ಒಬ್ಬಾಕೀನs ಬಂದೀ ?" ಅವನು ಕೇಳಿದ.

"ನೀವು ಒಬ್ಬಾಕಿನ್ನ ಕರದಿತ್ರಿ ಸುಜಾತಾನೂ ಬರಬೇಕಾಗಿತ್ತೇನು ?"

"ಛೆ ...ಛೇ.... ಹಾಂಗನಲಿಲ್ಲ ನಾನು, ಚಿತ್ರಾನ್ನ ಕರಕೊಂಡು ಬಂದರೂ ಬರಬಹುದು ಅನಿಸಿತ್ತು."

"ನಾನೇ ಬ್ಯಾಡಂದೆ ನನ್ನ ನಿಮ್ಮ ನಡುವ ಆ ರಿಪೋರ್ಟರ ಯಾಕ ಮತ್ತ ?" ಆಕೆ ಕಾರಣವಿಲ್ಲದೆ ನಕ್ಕಳು.

ಇಬ್ಬರೂ ಒಂದು ಬೆಂಚಿನ ಮೇಲೆ ಕುಳಿತರು "ನಾ ಒಬ್ಬ ಮಹಾಮೂರ್ಖ ಅವನೆಂದ ಆಕೆ ಜೋರಾಗಿ ಮೂಸಿದಳು.

"ಯಾಕ ?" ಅವನು ಕೇಳಿದ

"ಕುಡುದು ಬಂದೀರೇನು ?" ಅಂತ

ನೋಡಿದೆ" ಆಕೆ ನಕ್ಕಳು.

"ಅಂದ್ರ ಸುಜಾತಾ ನಿನಗ ಹೇಳ್ಯಾಳ ಎಲ್ಲಾ ?"

"ಆಕಿ ಹೊಟ್ಟ್ಯಾಗ ಯಾವ ಮಾತೂ ಉಳಿಯೂದಿಲ್ಲ."

"ಸತ್ತೆ! ಇನ್ನೂ ಏನೇನು ಹೇಳ್ಯಾಳ?"

"ಅದೇ ನೀವು ಆಕಿನ್ನ ಹೊಡದದ್ದು, ಮನಸ್ಸಿಗೆ ಭಾಳ ಹಚ್ಚಿಕೊಂಡು ಕೆಟ್ಟ ಅನಿಸಿಕೊಂಡು, ತಮ್ಮ ಮ್ಯಾಲೆ ತಾವೇ ಸಿಟ್ಟಾಗಿ ಕುಡಿದು ಬಂದದ್ದು–"

"ನಾ ಹಾಂಗ ನಿನ್ನ ಎಂದಾದರೂ ಹೊಡೆದಿದ್ದಿನೇನು ?"

"ಹೊಡಿಲೂ ಇಲ್ಲ; ಕುಡಿಲೂ ಇಲ್ಲ !"

"ನೀ ಈಗೀಗ ಭಾಳ ರಸಿಕ ಆಗೀದೀ !" ಇಬ್ಬರೂ ನಕ್ಕರು.

"ಆಗಳೆ ನೀವೇನೋ ನಿಮ್ಮ ಗುಣ ವರ್ಣನ ಮಾಡಿಕೊಂಡಿರಿ" ಆಕೆ ನೆನಪು ಮಾಡಿಕೊಟ್ಟಳು. 'ಮಹಾ ಮೂರ್ಖ ಅಂತ' 'ಇದನ್ನ ಹೇಳಬೇಕಂತ ನಾ ನಿನ್ನ ಕರೆಸಿದ್ದು' ಅವನು ಭಂಗಾರದ ಪ್ರಕರಣ ಪೂರ್ತಿ ಹೇಳಿದ–'ನನಗೇನೋ ಅನಿಸಿತು. ಮನ್ಯಾಗಿರೋ ಭಂಗಾರ ಬ್ಯಾಂಕಿನಾಗ ಇದ್ದರ ಏನು ಲುಕಸಾನು ಅಂತ.'

"ನನ್ನ ಒಂದು ಮಾತು ಕೇಳಿದ್ದರ ನಾ ಎಲ್ಲಿಯಾದರೂ ವ್ಯವಸ್ಥಾ ಮಾಡಿ ಕೊಡಬಹುದಾಗಿತ್ತು."

"ನೀನು ?" ಅವನಿಗೆ ಆಶ್ಚರ್ಯ ವಾಯಿತು.

"ನೀವು ನನ್ನ ಬಿಟ್ಟರ ಏನಾತು, ನಾ ಎಲ್ಲಿ ಬಿಟ್ಟೇನಿ ನಿಮ್ಮನ್ನ ?"

"ಅಂದರ ನಾ ಮಹಾ ಮಹಾ ಮಹಾ.." ಅವನ ಮಾತು ಅರ್ಥಕ್ಕೆ ನಿಲ್ಲಿಸಿದಳು ಆಕೆ. 'ತಿಳೀತು. ಮುಂದಿನದು ಹೇಳಿರಿ.' 'ಅಂದರ ನಿನಗ ಇದು ಮಹತ್ವದ್ದು ಅನಸಲಿಲ್ಲ ?'

"ಮಹತ್ವದ್ದೇ ಅದ. ಅದರ ಅಂಥಾ ದುರುಸ್ತ ಆಗಲಾರದ ತಪ್ಪೇನಲ್ಲ.

"ರೊಕ್ಕಾ ತುಂಬಿದರ ವಾಗೀನೆ ತಿರುಗಿ ಬರ್ತ್ತೈದ ಹೌದಲ್ಲೋ ?"

"ಹೌದೇ ಹೌದು. ಆದರ ಸುಜಾತಾ ನನ್ನ ಕ್ಷಮಿಸಲಿಕ್ಕೆ ತಯಾರಿಲ್ಲ"

"ಯಾರು ಹೇಳಿದರು ?"

"ಇಲ್ಲದಿದ್ದರ ಆಕೀಗ ತನ್ನ ಹೊಟ್ಟ್ಯಾಗ ಬೆಳಿಯೋ ಪಿಂಡದ ಬಗ್ಗೆ ಕೂಡ ಪಾಪ, ಅದರನೇನು ತಪ್ಪು ಹೇಳು-ಅದರ ಬಗ್ಗೆ ಕೂಡ ತಿರಸ್ಕಾರ ಅನಿಸಿತು. ಹೇಸಿಕಿ ಇಟ್ಟಿತು. ಈ ಸುಟ್ಟ ಗಂಡನ ಸಂಸರ್ಗ ಸಂಪರ್ಕ ಅಂತೂ ಬ್ಯಾಡೇ ಬ್ಯಾಡ. ಇವನ ಅವಶೇಷನೂ ತನ್ನ ಶರೀರದಾಗ ಬ್ಯಾಡ ಅನಿಸಿರಬೇಕು ಆಕೀಗೆ. ಅವನು ಭಾವಾ ವೇಶದಿಂದ ಅವಳ ಕೈ ಹಿಡಿದ, ಆಕೆಯ ಮೈಯೆಲ್ಲ ಕಂಪಿಸಿತು.

"ನೀವು ಆಕಿನ್ನ ಭಾಳ ಪ್ರೀತಿಸತೀರಿ ಅಂತ ನಿಮಗ ಹಿಂಗ ಅನಸ್ತೈದ" ಸುಮತಿ ತನ್ನ ಕೈ ಬಿಡಿಸಿಕೊಳ್ಳದೆ ಹೇಳಿದಳು.

"ಅಂದರ ?" ಅವನು ಕೈಬಿಟ್ಟ.

"ಏನಿಲ್ಲ. ಪಾದಾಗ, ನನಗ ಅನಿಸಿತು ಆಕೀ ಲಾ ಮುಗಿಸಬೇಕು ಅಂತ–ಅದ ನ್ನೊಮ್ಮೆ ನಾ ಆಕೀಗೆ ಸಹಜ ಹೇಳಿದ್ದೆ. ಇನ್ನು ಒಂದೇ ವರ್ಷ ಉಳಿದೈದ. ಅದನ್ನ ಮುಗಿಸಬೇಕು ಅಂತ ಆಕಿ ಗರ್ಭಪಾತ ಮಾಡಿಸಿಕೊಂಡಳು-ಅಂದರ ಹಿಂಗ ಆಕಿ ನನಗ ಹೇಳಿದ್ದು. ನಿಮ್ಮ ವಿಶ್ಲೇಷಣೆ ನನಗೆ ಗೊತ್ತಿಲ್ಲ."

"ಹಾಂಗಾದರ ಆಕಿ ನನಗ ಮುಂಚೆ ಯಾಕ್ ಹೇಳಲಿಲ್ಲ ?"

"ಯಾಕಂದರ ನೀವು ಬ್ಯಾಡ ಅಂತಿದ್ದಿರಿ. ಲಾ ಯಾಕ ? ಕೆಲಸ ಯಾಕ ? ದುಡ್ಡು ಯಾಕ ಗಳಿಸಬೇಕು ? ಅಂತ ಕೇಳತಿದ್ದಿರಿ,

"ಕೇಳಿ, ಬ್ಯಾಡ ಅಂದಮ್ಯಾಲೆ ಕ್ಯುರೆಟ್ ಮಾಡಿಸಿಕೊಳ್ಳೋದು ಹಟ ಮಾರಿತನ ಆಗತಿತ್ತು."

"ಇಷ್ಟು ಸಹಜ ಕಾರಣ, ಅಂತೀ ?"

"ಇಷ್ಟೇ ಇರಬೇಕು. ಹಾಂಗ ನೀವು ತಿಳಕೊಂಡದ್ದೂ ಬರೋಬರೀನೈ. ಈಗ, ನೀವು ನೋಕರಿ ಬಿಟ್ಟರಿ, ನನಗ ಸಿಟ್ಟು ಬಂತು. ಯಾಕ ? ನನ್ನ ಸುರಕ್ಷಿತತೆಯ ಭಾವನೆ ನಷ್ಟ ಆತು. ಆದರೂ ಅಷ್ಟು ಸಿಟ್ಟು ಬರಲಿಲ್ಲ. ಯಾಕಂದರ ನನ್ನದೇ ಒಂದು ನೋಕರಿ ಅದ. ನಿಮ್ಮ ನೋಕರಿ ಮ್ಯಾಲೆ ನಾ ಅವಲಂಬಿಸಿ ಕೂತಿಲ್ಲ."

ಆಕೆ ತನ್ನ ಅವನ ಮೋರೆಯ ಮೇಲಿನ ಭಾವ ನಿರೀಕ್ಷಿಸಲೆತ್ನಿಸಿದಳು. ಕತ್ತಲಲ್ಲಿ ಕಾಣಲಿಲ್ಲ.

"ಆಕೀಗೆ ನಾವು ಹದಿನೈದು ತೊಲಿ ಭಂಗಾರ ಕೊಟ್ಟೆವು. ನಾವು ಕೊಟ್ಟೆವು ಅಂದರ ನಮ್ಮ ದೊಡ್ಡಸ್ತನ ಅಲ್ಲ. ಆಕೀದೈ ಅದು. ಆಕೀಗೆ ಒಪ್ಪಿಸಿದೆವಿ. ಮೂವತ್ತೈದು ನಾಲ್ವತ್ತು ಸಾವಿರ ರೂಪಾಯಿ ಕಿಮ್ಮತ್ತು ನೋಡಿರಿ. ಆಕೀಗೆ ಅದರಾಗೈ ಒಂದು ಸುರಕ್ಷಿತತೆ ಭಾವನೆ ಹುಟ್ಟಿತು. ನೀವು ಅದಕ್ಕ ಧಕ್ಕೆ ಹಚ್ಚಿದಿರಿ."

"ಅಬ್ಬಾ !!"

"ಇಷ್ಟೈ ಅಲ್ಲ, ನಮ್ಮಿಬ್ಬರಿಗೂ ವಿಶ್ವಾಸ ಘಾತ ಮಾಡಿದಿರಿ ಅಂತ ಅನಿಸಿತು"

"ನಾ ಯಾರಿಗೂ ಬೇಕಂತ ಮೋಸ ಮಾಡಲಿಲ್ಲ."

ಆಕೆ ಮಾತಾಡಲಿಲ್ಲ. ವಿಶ್ವಾಸ ಸೂಚಿಸಲು ಎಂಬಂತೆ ಅವನ ಕೈ ಒತ್ತಿದಳು. ಅವನು ಅದನ್ನು ಹಿಡಿದುಕೊಂಡೇ ಎದ್ದ.

ಇಬ್ಬರೂ ಹೊರಟದ್ದರು.

ಸುಮತಿ ಮನೆಗೆ ಬಂದಾಗ ದಾದಾ ಊಟಕ್ಕಾಗಿ ಕಾಯುತ್ತಿದ್ದರು.

"ಎಷ್ಟು ಹೊತ್ತು ಅದೂ ?" ಅತ್ತೆವ್ವ ಸಿಟ್ಟಾದರು.

"ಗೆಳತಿಯ ಮಗನ ಹುಟ್ಟಿದ ದಿವಸ ಇತ್ತು. ಅವರು ಇವರು ಬಂದರು. ಹೊತ್ತಾದದ್ದು ತಿಳಿಲೇ ಇಲ್ಲ" ಆಕೆ ಜಾರಿಕೊಂಡಳು.

ಊಟ ಕೆಲಸ ಮುಗಿದ ಮೇಲೆ ಸುಮತಿ ತಂಗಿಗೆ ಹಾಸಿಗೆಹಾಸಿ ಪರದೆಕಟ್ಟಿಕೊಟ್ಟಳು ತನ್ನ ಹಾಸಿಗೆ ಹಾಸಿ ಮೊದಲೇ ಮಲಗಿದ್ದ ಚಿತ್ರಾಳನ್ನು ಎತ್ತಿ ಹಾಕಿದಳು. ದಾದಾ ಹೊರಗೆ ಪಡಸಾಲೆಯಲ್ಲಿ ಮಲಗಿದ್ದರು.

ಸುಜಾತಾ ತನ್ನ ಹಾಸಿಗೆಗೆ ಹೋಗುವ ಮೊದಲು ಅಕ್ಕನ ಬಳಿ ಬಂದಳು.

"ಏನಂತಿದ್ದರು ?" ಆಕೆಯ ಪ್ರಶ್ನೆಗೆ ಸುಮತಿ ಉತ್ತರ ಕೊಡಲೇ ಇಲ್ಲ.

"ಏನಂತಿದ್ದರು ?"

"ಯಾರು ?"

"ನೀ ಯಾರ ಭೆಟ್ಟಿಗೆ ಹೋಗಿದ್ದಿ, ಅವರು"

"ನಾ ಯಾರ ಭೆಟ್ಟಿಗೂ ಹೋಗಿದ್ದಿಲ್ಲ"

"ಇಂಟಿಮೇಟ್ ಬಾಟ್ಲಿ ಎಂದಿಲ್ಲದ ಅರ್ಧಾ ಖಾಲೀ ಆಗೇದ"

ಇಬ್ಬರೂ ಪಿಸಿ ಪಿಸಿ ದನಿಯಲ್ಲಿ ಮಾತು ಬೆಳೆಸಿದರು.

"ನಾ ಪಾರ್ಟೀಗೆ ಹೋಗಿದ್ದೆ."

"ಅಲ್ಲಿ ಅವರೂ ಬಂದಿದ್ದರು."

"ನಿನಗ ಹ್ಯಾಂಗ ಗೊತ್ತು ? ಏನರೇ ಹೇಳ್ತೀ"

"ನಿನ್ನ ಮೈಗ ಅರಿವೆಗೆ ಅವರ ವಾಸನೆ ಬರ್ತ್ತದ"

ಆಕೆ ಅಕ್ಕನ ಕೈಹಿಡಿದು ಮುದ್ದಿಸಿದಳು. ಸುಮತಿಯ ಕಣ್ಣಲ್ಲಿ ನೀರು ತುಂಬಿದವು. "ನಾಳೆ ಹೇಳ್ತೀನಿ" ಆಕೆ ಮೆಲ್ಲನೆ ಕೈಬಿಡಿಸಿಕೊಂಡಳು.

o o o o

೯

ಮುಂದೆರಡು ಸಲ ಅನಂತನ ಫೋನು ಬಂದಾಗ ಸುಮತಿ ಬಿಡುವಿಲ್ಲೆಂದು ತಪ್ಪಿಸಿದಳು. ಹೋದರೆ ತಂಗಿಗೆ ಸಂಕಟ. ಬಿಟ್ಟರೆ ತನಗೆ ಸಂಕಟ.

ನಾಲ್ಕನೆಯ ದಿವಸ ಸಂಜೆ ಐದೂವರೆಗೆ ಬ್ಯಾಂಕು ಬಿಟ್ಟಾಗ ಬಾಗಿಲಲ್ಲೇ ಅವನ ಸ್ಕೂಟರ್. ಹಿಂದೆ ಕೂಡಲೇಬೇಕಾಯಿತು ಅವನು ಒಯ್ದಲ್ಲಿಗೆ ಹೋಗಲೇಬೇಕಾಯಿತು.

"ನೀವು ಅಕ್ಕತಂಗಿ ಇಬ್ಬರನ್ನೂ ಒಂದೇ ಉರುಲು ಹಾಕಿ ಫಾಶೀಗೆ ಏರಸಬೇಕು. ಅವನೆಂದ.

"ನನ್ನೊಬ್ಬಾಕಿನ್ನ ಏರಿಸಿದರ ಸಾಕು. ಸಾಕಷ್ಟು ಪ್ರಶ್ನ ಬಿಡತಾವ" ಆಕೆ ನಕ್ಕಳು.

"ಸುಜಿ ಉಳಿತಾಳಲ್ಲ ನನ್ನ ಕಾಡಲಿಕ್ಕೆ ?"

"ಆಕೀ ಸಂಗತಿ ಮದಿವಿ ಆಗಿರಿ, ಅಂದರ ಕಾಟ ತಪ್ಪತ್ತದ."

ಅವನು ಮಾತಾಡಲಿಲ್ಲ. ರೇಸ್ ಕೋರ್ಸ್‌ಗುಂಟ ಅವನ ಸ್ಕೂಟರು ವೇಗದಿಂದ ಸಾಗಿತ್ತು.

"ಅಥವಾ ಸುಜಿನ್ನ ಫಾಶಿಗೇರಿಸಿದರ ?" ಅವನು ನಕ್ಕ.

"ನಾ ದಿನಾ ಸಾಯಬೇಕಾಗತದ, ನಿಮ್ಮ ರಾಜ್ಯದಾಗ ಎಷ್ಟೆಂದರೂ ಕಾಯದೇಶೀರ ಹೆಂಡತಿ ನೋಡರಿ. ರೆಸ್ಟಿಟ್ಯೂಶನ್ ಆಫ್ ಕಂಜುಗಲ್ ರೈಟ್ಸ್ ಶರೀರ ಸಂಬಂಧದ ಅಧಿಕಾರ ನಿಮ್ಮದು ನನ್ನ ಮ್ಯಾಲೆ, ನನ್ನದು ನಿಮ್ಮ ಮ್ಯಾಲೆ ಉಳದಽ ಉಳೀತದ" ಆಕೆ ನಕ್ಕಳು.

ಸ್ಕೂಟರು ಕಡೆಗೆ ನಿಲ್ಲಿಸಿ ಇಬ್ಬರೂ ಬಯಲಲ್ಲಿ ಕುಳಿತರು.

"ನೀವು ಒಂದು ಮಾತು ಕೇಳಿದ್ದರೆ ನಾನು ವಿವಾಹವಿಚ್ಛೇದಕ್ಕ ಅನುಮತಿ ಕೊಡತಿದ್ದೆ. ಒಂದು ವರ್ಷಕ್ಕಿಂತ ಹೆಚ್ಚು ಕಾಲ ನಾವು ವಿಭಕ್ತ ಆಗಿ ಇದ್ದೇವಿ ಅಂತ ಬರೆದು ಕೊಡತಿದ್ದೆ."

"ಮುಂದೆ ?

"ಮುಂದೇನು ? ನೀವು ಸುಖೇನೈವ ಸುಜಾತಾನ ಸಂಗತಿ ಮದಿವಿ ಮಾಡಿಕೋಬಹುದಾಗಿತ್ತು."

"ಈಗೂ ನಮ್ಮ ಮದಿವಿ ಆಗೇದಲ್ಲ, ಕಾಂಟ್ರಾಕ್ಟ್ ಮ್ಯಾರೇಜು ?"

"ದಾದಾ ಅಂತಾರ ಹಿಂಗ ಕಾಯದೇನು ಇಲ್ಲ. ಇಂದಿಗೂ ನೀವು ನನ್ನ ವಿವಾಹಿತ ಪತಿ. ಸುಜಾತಾನ ನಿಮ್ಮ ಸಂಬಂಧ ವಿವಾಹಬಾಹ್ಯ. ಹಿಂದಿನ ಕಾಲದಾಗ ಗೌಡರೂ ದೇಸಾಯರೂ ಹೆಂಗಸರನ್ನು ಇಟಕೊಶಿದ್ದಿಲ್ಲಽ, ಹಾಂಗ ನೀವು ಆಕಿನ್ನ ಇಟಕೊಂಡಿದ್ದೀರಿ–"

"ಸುಮಿ, ಹೊಡೀತೀನಿ ನಿನ್ನ" ಆಕೆಯ ಕಣ್ಣಂಚಿನಲ್ಲಿ ನೀರು ಮಿಂಚಿತು. "ಅದನ್ನು ನಾ ಬೇಡಿ ಬಂದಿಲ್ಲ."

"ಅದಕ್ಕಽ ನಾ ಅಂದದ್ದು, ಇಬ್ಬರನ್ನೂ ಗಲ್ಲಿಗೇರಿಸಬೇಕಂತ. ಇಬ್ಬರೂ ಅಷ್ಟಽ ಅಯೋಗ್ಯರಿದ್ದೀರಿ !"

"ಮೂರನೆಯವರು ಯಾರಾದರೂ ಸುಯೋಗ್ಯರು ಭೆಟ್ಟಿಯಾಗಿದ್ದಾರೇನು ?" ಆಕೆ ನಾಟಕೀಯವಾಗಿ ಕೇಳಿ ನಕ್ಕಳು. ಅವನು ಆಕೆಯ ಕೈ ಚಿವುಟಿದ.

"ಪ್ಲೀಜ್, ಹಿಂಗ ನೀವು ನನ್ನ ಮೈಗೆ ಕೈಹಚ್ಚಿದರ ಸುಜಾತಾಗ ಅದರ ವಾಸನೆ ಬರ್ತ್ತದಂತ. ಆಕೆ ಅದಕ್ಕೆ ಮುದ್ದು ಕೊಟಗೋತ ಕೂಡ್ರತಾಳ."

"ಈಗ ನಾ ಏನು ಮಾಡಲಿ ಹೇಳು?" "ನನಗ ವಿಚ್ಛೇದನ ಕೊಡಿರಿ. ಆಕೀ ಸಂಗತಿ ಮದಿವೀ ಮಾಡಿಕೊಳ್ಳರಿ. ಸುಖದಿಂದ ಇರ್ರಿ" "ನಿನಗ ಡೈವೋರ್ಸ್ ಕೊಡಲಾರೆ. ಅಷ್ಟು ಬಿಟ್ಟು ಮಾತಾಡು."

"ನನ್ನ ಕೇಳತಿದ್ದರ, ಸುಜಾತಾನ್ನ ನೀವು ಮನಸಿನ್ಯಾಗಿಂದ ತಗದು ಹಾಕಿರಿ. ಎಲ್ಲಿಯಾದರೂ ಆಕೀ ಮದಿವಿ ಮಾಡಿ ಕೊಡೋಣ ಅಂತ.

"ಆಕಿನ್ನ ಹ್ಯಾಂಗ ಬಿಟ್ಟು ಇರಲಿ?"

"ಉಂಡಿ ಕೈಯಾಗೂ ಇರಬೇಕು. ತಿನ್ನಲಿಕ್ಕೂ ಬೇಕು ಅಂದರ ಹ್ಯಾಂಗ?" ಅವನು ಮಾತಾಡಲಿಲ್ಲ. "ಹೋಗೋಣು ?" ಆಕೆ ಎದ್ದಳು. ಕತ್ತಲೆ ಆವರಿಸಿತ್ತು. "ಸುಜಾತಾನ ಸಂಗತಿ ಒಂದಿಷ್ಟು ಮಾತಾಡಬೇಕು" ಅವನಂದ.

"ಅದರಾಗೇನದ, ಮನೀಗೆ ಹೊಗ್ರೆಲಾ ಮಧ್ಯಾಹ್ನದಾಗ ? ದಾದಾ ಅವರೂ ಇರೂದಿಲ್ಲ."

"ಅತ್ತೆವ್ವ ಇರ್ತಾರ–ಚಿತ್ರಾ ಇರತಾಳ ಮತ್ತು ಮನ್ಯಾಗ ಮಾತಾಡಲಿಕ್ಕೆ ಅಷ್ಟು ಪ್ರಶಸ್ತ ಅನಸೂದಿಲ್ಲ"

"ಹಿಂಗ ಮಾಡರಿ. ನಾಳೆ ಸಂಜೀನ್ಯಾಗ ಆರು ಗಂಟೆಕ್ಕೆ ರೆಕ್ಸ್ ಟಾಕೀಜ ಹತ್ತಿರ ಕಾಯರಿ. ನಾ ಅಲ್ಲೆ ಆಕಿನ್ನ ಕಳಿಸತೀನಿ.

o o o

ಆಟೋದಿಂದ ಇಳಿಯುತ್ತಿದ್ದ ಸುಜಾತಾ ಅನಂತನಿಗೆ ತುಸು ಬೆಳ್ಳಗೆ ಬೆಳ್ಳಗೆ ಕಂಡಳು ಇನ್ನೂ ಮೈ ಶಕ್ತಿಗೂಡಿಲ್ಲ.

ಆತ ಮುಂದಾಗಿ ಅವಳ ಕೈಹಿಡಿಯ ಹೋದ. ಮತ್ತೆ ಏನನ್ನಿಸಿತೋ, ಹಿಂದೆ ಸರಿದ–ಆಕೆ ನಿಧಾನವಾಗಿ ಅವನ ಸ್ಕೂಟರ್ ಏರಿದಳು. ಇಬ್ಬರೂ ಹಾಟೆಲ್ ರಾಮದೇವಕ್ಕೆ ಬಂದರು. ಊರ ಹೊರಗೆ ಯಾವ ಸದ್ದು ಗದ್ದಲವೂ ಇಲ್ಲ.

ಮಾತು ಹೇಗೆ ಆರಂಭಿಸಬೇಕೆಂಬುದು ಅನಂತನಿಗೆ ಒಗಟಾಯಿತು. ಪ್ರಕೃತಿಯ ಬಗ್ಗೆ ಕೇಳಬೇಕು, ತೀರ ಔಪಚಾರಿಕ– ಇಷ್ಟೆಲ್ಲ ಏಕೆ ಮಾಡಿಸಿಕೊಳ್ಳಬೇಕಾಗಿತ್ತು. ಎನ್ನಬೇಕೆ, ಈಗ ಅಪ್ರಸ್ತುತ.

"ಒಂದಿಷ್ಟು ಗಂಭೀರ ವಿಚಾರ ಮಾಡ



ಏನಾಗ್ತಿ— ಅವನು ತೊದಲುತ್ತಾನೆ—
"ನನಗ ತ್ರಾಸ ಆಗತೈತಿ... ವಿ ನ ದೇವ್ರೇ!" ಆಕೆ ಇನ್ನೂ ನಗುತ್ತಿದ್ದಳು.

"ಆಮೇಲೆ ವಿಚ್ಛೇದನ ಕೊಡಬೇಕಾಗಿ ಬಂದಿದ್ದೇನು" ಅವನ ಸ್ವರ ಬಿಗಿಯಿತ್ತು. "ಆಕೆ ತುಂಬ ಒಳ್ಳೆ ಹೆಣ್ಣು. ಇನ್ನು ಅವ... ತಾನಾಗಿ ಅದ ನನಗ ಕೇಳಿದಳು."

"ಏನಂತ?"

"ನನ್ನ ಸಂಗಾತೀ ವಿಚ್ಛೇದನ ತೊಗೊಂಡು ... ಜ್ಞಾನ ಸಂಗ್ತಿ ಮದುವಿ ಯಾಕ ಮಾಡಕೊಳ್ಳಬಾರದಂತ."

"ನೀವೇನೆಂದಿರಿ?"

"ನಾ ಏನೂ ಆಕೀಗೆ ಹೇಳಲಿಲ್ಲ. ಆದರ ಅದು ಕ್ರೂರ ಅಂತ ಅನಿಸ್ತದ. ಆಕಿ ಮಾಡಿದ ತಪ್ಪಾದರೂ ಏನು? ಆಕಿ ನನ್ನ ಸಂಗತಿ ಒಂದಿಷ್ಟು ವಿಚಿತ್ರವಾಗಿ ನಡಕೊಂಡಿರಬಹುದು. ಅದು ನನಗ ವಿಚಿತ್ರ ಅನಿಸಬಹುದು ಆಕೀಗೆ ಅಥವಾ ಇನ್ನೊಬ್ಬರಿಗೆ ಅದು ಸಾಮಾನ್ಯ ಅಂತ ಕಾಣಿಸಬಹುದು."

"ಹಾಗಾದರ ಆಕೀಗೆ ವಿಚ್ಛೇದ ಯಾಕ ಕೊಟ್ಟಿರಿ?"

ಅವನು ನಕ್ಕ "ನಿನ್ನ ಸಂಗತೀ ಇನ್ನೊಮ್ಮೆ ಮದುವೀ ಮಾಡಕೊಳ್ಳಲಿಕ್ಕೆ. ವೇದ ಬ್ರಾಹ್ಮಣರ ಸಮಕ್ಷಮ."

"ಹಾಗಾದರ ಹಿಂದಿನ ಮದುವಿಗೆ ಸಾಕ್ಷಿ ನಾನು ಇಷ್ಟೇ ಒಂದಿದ್ದರೇನು?" ಆಕೆ ಹೊಟ್ಟೆ ತುಂಬ ನಕ್ಕಳು. ತನ್ನ ವಿನೋದಕ್ಕೆ ತಾನೇ. "ವೇದ ಬ್ರಾಹ್ಮಣರು ಯಾಕ ಬೇಕಾಗತಾರ?"

"ಅದೊಂದು ಮಂಗಲ ಪ್ರಸಂಗದ ಪ್ರತೀಕ ಅಂತ. ಒಂದು ಪವಿತ್ರ ಸಂಸ್ಕಾರ ಅಂತ."

"ಹಂಗಾರ ನಮ್ಮ ಸಂಬಂಧ ಅಮಂಗಲ ಅಪವಿತ್ರ ಇತ್ತೇನು?" ಅವಳ ಪ್ರಶ್ನೆಗೆ ಅವನಿಗೆ ಉತ್ತರಿಸಲಾಗಲಿಲ್ಲ. ಬದಲು ಹಾಗೆ ಕೇಳಬೇಡ ಎನ್ನುವಂತೆ ಅವನು ಅವಳ ಕೈ ಒತ್ತಿ ಹಿಡಿದ. "ಯಾವ ಪ್ರೇಮವೂ ಅಪವಿತ್ರ ಇರೋದಿಲ್ಲ ಅಮಂಗಲ ಇರೋದಿಲ್ಲ." ಅವನು ಎನ್ನೋ ವೇದಾಂತಿಯ ಹಾಗೆ ಹೇಳಿದ.

... ಸಮಾಜ ಬೇರೆ. ನಮ್ಮ ಮಂದಿಯೊಳಗ ಇಂದೇನಾಗತದ"

ಅವನು ಕಾಫಿಗೆ ಆರ್ಡರು ಕೊಟ್ಟ.

"ಸಮಾಜ ಮಾನ್ಯ ಕಾಯದೇಶೀರ ಗಂಡ ಹೆಂಡತಿ ಅನ್ನೋ ಸಂಬಂಧ ಕೆಲ ಕೆಲವು ಸಲ ಅವರಿಗೇ ಕಾಟ್ರೊಡಕು ಅನಿಸಿದರೂ, ಈ ಸಂಬಂಧ ಅವರ ಸುತ್ತ ಒಂದು ಸಂರಕ್ಷಕ ಕವಚ ತಯಾರು ಮಾಡತದ."

ಅವನು ನಕ್ಕ. "ನಾ ಭಾಳ ವಿಚಾರ ಮಾಡೇನಿ ಇದರ ಬಗ್ಗೆ. ಇದರಿಂದಾಗಿ ಇಚ್ಛಾ ಇದ್ದರೂ ಗಂಡ ಸ್ವೈರಾಚಾರಿ ಆಗೋದಿಲ್ಲ, ಹೆಂಡತಿ ಸ್ವೈರಾಚಾರಿ ಆಗೋದಿಲ್ಲ, ಆದಾವನ್ನ ಸಮಾಜ ಹೀನ ದೃಷ್ಟಿಯಿಂದ ನೋಡತದ."

ಮಾಣಿ ತಂದಿಟ್ಟ ಕಾಫಿ ಆಕೆ ಮಾತಿಲ್ಲದೆ ಮುಗಿಸಿದಳು.

"ಸ್ವೈರಾಚಾರಿ ಆಗಾವ್ರು ಆಗೇ ಆಗತಾರ" ಎಂದಳಾಕೆ.

ಅವನು ಕಾಫಿ ಗುಟುಕರಿಸಿದ.

"ಅವಕ್ಕ ಸಮಾಜದ ಮಾನ್ಯತೆ ಇರೋದಿಲ್ಲ. ಸಮಾಜ, ನಾಲ್ಕು ಜನ ಅದನ್ನು ಕೀಳು ದೃಷ್ಟಿಯಿಂದ ನೋಡತಾರ. ಅವನೊಬ್ಬ ಸಮಾಜಕ್ಕ ಹತ್ತಿದ ಹುಣ್ಣು ಅಂತ ತಿಳಕೋತಾರ. ಅವನಿಂದ ಅಥವಾ ಅವಳಿಂದ ಕೂಡ ದೂರ ಇರ್ತಾರ."

ತಟ್ಟೆಯಲ್ಲಿ ಹಣ ಇಟ್ಟು ಅವನು ಎದ್ದ— "ಹೋಗೋಣ ನಡೀ. ಮನಿತನಕ ಬಿಡತೀನಿ."

ಹೀಗೆ ಅರ್ಧಮಾತಿನಲ್ಲೇ ಅವನೇಕೆ ಭೆಟ್ಟಿ ಮುಗಿಸಿದ ಎನ್ನುವದು ಸುಜಾತಾಗೆ ತಿಳಿಯಲಿಲ್ಲ. ತನ್ನೊಡನೆ ಅಷ್ಟು ಸಲಿಗೆ ಕೂಡ ತೋರಿಸಲಿಲ್ಲ. ಮನೆಗೆ ಬಂದಾಗ ಅವಳಿಗೆ ದಣಿವೂ ಎನಿಸಿತು.

ಮರುವಾರ ಮಧ್ಯಾಹ್ನ ಅವನು ಮನೆಗೇ ಬಂದಾಗ ಅವಳಿಗೆ ಆಶ್ಚರ್ಯ ವಾಯಿತು. "ಬೇಗ ತಯಾರಾಗು" ಎಂದು ಆಕೆಗೆ ಹೇಳಿ ಮಗಳೊಡನೆ ಆಡ ತೊಡಗಿದ, ಅವಳನ್ನೆತ್ತಿ ಮುದ್ದಿಸಿದ. ಕುರಿಮರಿ ಬೇಕೇ ಮಾಡಿದ. ಸುಜಾತಾ ವ್ಯಾನ್ಟಿ ಬದಲಿಸಿ ಕಲೆಯಾದ ಬಿಗಿದಿದ್ದ ಬಂದಾಗ, ಚಪ್ಪಲ ಕೈಯಲ್ಲಿ ಚಾಕಲೇಟು ಇಟ್ಟು ದಾಟಿಕೊಂಡ.

ಸ್ಕೂಟರಿನಲ್ಲಿ ಬಂದು ಇಳಿದರೂ ಸೆಂಟ್ ಪಾಲ್ಸ್ ಹೈಸ್ಕೂಲಿನ ಹಿಂದೆ ಒಂದು ಗಿಡದ ಅಡಿಯಲ್ಲಿ ಕುಳಿತರು.

"ಯಾಕ, ಮಂಗಳಸೂತ್ರ ಹಾಕ್ಕೊಂಡಿಲ್ಲ?" ಅವನು ಕೇಳಿದ.

"ಮತ್ತೊಮ್ಮೆ ಪಕ್ಕಾ ಮದಿವಿ ಮಾಡಕೊಳ್ಳೂದದ ಅಂದರಿ. ಅದಕ್ಕ ತಗದು ಇಟ್ಟೆ" ಆಕೆ ನಕ್ಕಳು. ಅವನಿಗೆ ಮೋಹಕ ವೆನಿಸಿತು. ಎಷ್ಟೋ ಹೊತ್ತು ಅವಳ ಮೋರೆ ನೋಡಿದ. ಹೊಸದಾಗಿ ನೋಡುವ ಹಾಗೆ.

ಆಕೆ ಗಂಭೀರಳಾಗಿ ಮೋರೆ ಕೆಳಗೆ ಹಾಕಿದಳು. "ನಾ ಒಂದಿಷ್ಟು ವಿಚಾರ ಮಾಡಿದೆ." ಆಕೆಯೆಂದಳು. "ಒಬ್ಬರ ಸುಖ ಸಂತೋಷ ಹುಗದು ಇವರ ಮ್ಯಾಲೆ ಕಟ್ಟಿದ ಅರಮನೆ ಎಂದೂ ಸುಖವಿದ್ದು ಆಗಲಾರದು. ಅದು ಭಾಳಾದರ ಒಂದು ಛಂದ ಗೋರಿ ಆಗತದ."

"ಅದರ ಸುಮತಿ ಸ್ವಸಂತೋಷದಿಂದ ವಿಚ್ಛೇದಕ್ಕೆ ತಯಾರಾಗ್ಯಾಳ."

"ಇಷ್ಟು ವರ್ಷ ಆಕೀ ಸಂಗತಿ ಸಂಸಾರ ಮಾಡಿ ನಿಮಗ ಇನ್ನೂ ತಿಳೀಲಿಲ್ಲ!"

"ಏನು?"



ಇಲ್ಲಿ ಕುಡಿಯುವ ನೀರಿಗೆ ತೀವ್ರ ಅಭಾವವಿದೆ.... ದಯವಿಟ್ಟು ಬೇಗನೆ ಭಾಷಣ ಮುಕ್ತಾಯ ಮಾಡಿ.



"ನೀವು ಭೆಟ್ಟಿಗಿಂತ ಕರವಾಗ ಆಕಿ ಮನ್ಯಾಗಿನ ಮಿಸ್ ಚೀಫ್, ಇಂಟಿಮೇಟ್ ಎಲ್ಲಾ ಸೆಂಟ್ ಹಾಕ್ಕೊಂಡು ನಿಮ್ಮ ಭೆಟ್ಟಿಗೆ ಬಂದಿದ್ದಳು!"

ನಿಂದು ಕಸ್ಟಂ ಚೆಕಿಂಗ್‌ಗಿಂತ ಹೆಚ್ಚು ಆತು" ಅವನು ನಡುವೆಯೇ ನಕ್ಕ. "ಆದರ ಆಕೀಗೆ ತಿಳಿವಳಿಕೆ ಅದ. ನನ್ನ ನಿನ್ನ ಸುಖದ ನಡುವೆ ಬರತಿದ್ದರ ಆಕೆ ತಾ ಬಾಜೂಕ್ಕ ಆಗತಾಳ."

"ಆಕಿನ್ನ ಬಾಜೂಕ್ಕ ಮಾಡುವಷ್ಟು ನನ್ನ ನಿಮ್ಮ ಸುಖ ಮಹತ್ವದ್ದೇನು?"

"ಏನಿದಾ!" ಅವನು ನಕ್ಕ "ನಾವು ಮೂರೂ ಮಂದಿ ಒಂದೇ ಮನ್ಯಾಗ ಇರೋಣು. ಇಬ್ಬಿಬ್ಬರು ಹೆಂಡಂದಿರೂ ಮೊದಲು ಇರತಿದ್ದಿಲ್ಲೇನು? ನಾಲ್ಕ ನಾಲ್ಕು ಹೆಂಡಂದಿರೂ ಇರತಿದ್ದರು. ಇರ ತಾರ, ಮುಸಲ್ಮಾನರಾಗ. ಇನ್ನು ಇಬ್ಬರು ಹೆಂಡಂದಿರನ್ನು ಬೇಕಾದರ ಮಾಡಿಕೊಳ್ಳರಿ" ಆಕೆ ತಾನೂ ನಕ್ಕಳು.

ಮಾತು ಎಲ್ಲೆಲ್ಲಿ ತಿರುಗುತ್ತಿದೆ ಎನ್ನಿಸಿ ಅವನು ಮೂಲ ವಿಚಾರಕ್ಕೆ ಬಂದ.

"ಗಂಭೀರವಾಗಿ-ಸುಮತಿ ಸಂಗತೀ ವಿಚ್ಛೇದ ತೋಗೊಳ್ಳಿ ಅಲ್ಲವೇನು?"

"ಮುಂದ ಆಕಿ ಗತಿಯೇನು, ಅನ್ನೋದು ವಿಚಾರ ಮಾಡಿದಿರೇನು?"

"ಮನಸ್ಸಿಗೆ ತಕ್ಕ ನೌಕರಿ ಅದ. ಒಂದು ಮಗಳು ಅದ. ಮತ್ತ ಲೈಂಗಿಕ ಜೀವನದಾಗ ಆಕೀಗೆ ಅಷ್ಟು ಆಸಕ್ತಿ ಇಲ್ಲ."

"ನಿಮಗೇನು ಗೊತ್ತು? ಹಾಂಗ ಇಲ್ಲದ ಆಕೆ ಅಪರಾಯಿಸಿ ನಿಮ್ಮ ಭೆಟ್ಟಿಗೆ ಬರತಿದ್ದಳೇನು? ನೀವೇ ಏನೇನೋ ವಿಚಾರ ಮಾಡಿ ನಿರ್ಧರಿಸಿ ಬಿಡತೀರಿ"

"ಹಂಗಾರ ಅಂತೀಯೇನು?"

"ನಿಮಗ ಖರೇನs ತಿಳ್ಯಾದಿಲ್ಲೋ ಅಥವಾ ಹಾಂಗ ನೋಗು ಮಾಡಿ ನನ್ನ ಬಾಯಿಯಿಂದ ಎಲ್ಲಾ ಆಡಿಸಬೇಕು ಅಂತೀರೋ, ನನಗ ತಿಳೀವಲ್ತು"

"ಹುಕುಮು ಆಗಲಿ"

"ನನ್ನ ಕೇಳತಿದ್ದರ ನೀವು ಸುಮತಿ ಸಂಗತಿ ಸುಖೇನ ಸಂಸಾರ ಮಾಡಕೊಂಡು ಇರಬೇಕು."

ಆಕಿ ಅಂತಾಳ. ನಾನು ನಿನ್ನ ಸಂಗತಿ ಸಂಸಾರ ಮಾಡಿಕೊಂಡು ಇರಬೇಕು ಅಂತ ಬಯಸಾಗ.

ನಾಯೇನು ಮಾಡ್ಲಿ? ನನಗ ನೀನೂ ಬೇಕು, ಆಕೀನೂ ಬೇಕು"

ಸುಜಾತಾಳ ಕಣ್ಣು ಪಟ್ಟನೆ ಹನಿಗೂಡಿತು "ನನಗೇನು ನೀವು ಬ್ಯಾಡೇನು?"

"ಹಾಗಾದ್ರ ಹಿಂಗಯಾಕ ಅಂತೀ?" ಅವನು ಅವಳ ಕೈ ಹಿಡಿದ.

"ನೀವು ಸುಖದ್ಲಿ ಇರಬೇಕು. ನಿಮಗ ಯಾವದೇ ತರದ್ದು ಮಾನಸಿಕ ಹಿಂಸೆ ಆಗಿ ಸಿಗಬಾರದು"- ಆಕೆ ಅಳತೊಡಗಿದಳು. ತನ್ನ ಸ್ಪರ್ಶದಿಂದಲೇ ಆಕೆಗೆ ಅಳು ಒಂದಿದೆ ಎನ್ನಿಸಿತು ಅನಂತನಿಗೆ.

"ನೀ ದೂರ ಆದರ ನನಗ ಸಂಕಟ ಆಗಿಲಿಕ್ಕಿಲ್ಲೇನು? ನೀ ಹಿಂಗ ಹ್ಯಾಂಗ ಅಂತೀ?"

"ಸಹನ ಮಾಡಿಕೊಳ್ಳಲಿಕ್ಕ ಬೇಕು ಮತ್ತು ಸಂಸ್ಕೃತಿ ಅನ್ನೋದು ಯಾತಕ್ಕ?" ಆಕೆ ಕಣ್ಣೊರೆಸಿಕೊಂಡಳು.

ಅವನು ಮಾತಾಡಲಿಲ್ಲ. ಕುಸು ಹೊತ್ತಿನಲ್ಲಿ ಅವಳಿಗೆ ಮತ್ತೆ ಅಳು ಒತ್ತರಿಸಿ ಬಂತು.

"ನಿಮ್ಮನ್ನ ದೂರ ಮಾಡಿದರ ನನಗ ಸುಖ ಆಗ್ತsದ ಅಂತ ತಿಳಿದೀರೇನು?"


ಅವನು ಅವಳ ಹತ್ತಿರ ಸರಿದು ಬೆನ್ನ ಮೇಲೆ ಕೈಯಾಡಿಸಿದಂತೆ ಮಾಡಿದ. "ನೀ ನನ್ನಿಂದ ದೂರ ಆದರ ನಿನಗೂ ಮನಸ್ತಾಪ, ನನಗೂ ದುಃಖ."

"ನಿಮಗ ಇನ್ನು ದುಃಖ ಆಗೂದಿಲ್ಲ, ಆಗಗೊಡೋದಿಲ್ಲ" ಆಕೆ ಒಂದಿಷ್ಟು ಹಿಂದೆ ಸರಿದು ಕುಳಿತಳು. ಅವನಿಗೆ ಆಕೆಯ ಮಾತಿನ ಅರ್ಥವಾಗಲಿಲ್ಲ. "ಸುಮತಿ ನಿಮ್ಮನ್ನ ಸಾಕಷ್ಟು ಅರ್ಥ ಮಾಡಿಕೊಂಡಾಳ" ಆಕೆ ಎಂದಳು.

"ಖರೇ ನಾಯೇನು ಮಾಡ್ಲಿ?"

"ನನ್ನ ಮರೀರಿ ಅಂತ ನಾ ಹೇಳೂದಿಲ್ಲ. ನೀವು ನನ್ನ ಮರಿಯೂದಿಲ್ಲ ಅನ್ನೋದು ನನಗ ಗೊತ್ತು" ಹೇಳುತ್ತಿದ್ದಂತೆ ಮತ್ತೆ ಆಕೆಯ ಕಣ್ಣು ತುಂಬಿದವು. "ಅಕ್ಕ ಅಂದರ ನಾನು ಅಂತ ತಿಳೀರಿ"

"ಮುಂದ ನಿನ್ನ ಗತೀ? ನೀ ಏನು ಮಾಡಾಕಿ?"



ನಾ [illegible] ಪಾಠ್ಯ-ಪು [illegible] [illegible], ಬೆಂಗಳೂರ್ನ್ಯಾಗ, [illegible] [illegible]"

"ಅದು ನನಗ ಗೊತ್ತು. ನೀ ಒಬ್ಬ [illegible] ಅಪ್ ಪ್ರೋಪೇಟ್ ಆಗಲಿ. ಪ್ಯಾಜಿ [illegible] ಆಗಲಿ. ಜಜ್ ಆಗಲಿ, ಆದರ ನಿನ್ನ ವೈಯಕ್ತಿಕ ಜೀವನ?"

"ಯಾತರ ವೈಯಕ್ತಿಕ ಜೀವನ?"

"ವೈವಾಹಿಕ ಜೀವನ ಅನ್ನು ನಿನಗ ಇನ್ನೂ ಸ್ಪಷ್ಟ ಬೇಕಾಗಿದ್ದರ"

"ನಾ ಅದರ ಬಗ್ಗೆ ವಿಚಾರ ಮಾಡೇ ಇಲ್ಲ."

"ನನ್ನ ಸಂಗತಿ ನೀ ನಾಲ್ಕು ತಿಂಗಳು ತಂಡತಿಯಾಗಿ ಇದ್ದಿ ಅನ್ನೋದು ಇಲ್ಲಿ ಸಾಕಷ್ಟು ಮಂದಿಗೆ ಗೊತ್ತು. ಇದರಿಂದಾಗಿ ನಿನ್ನ ಮದಿವಿಹ್ಯಾಂಗ ಆಗೋದು?" ಅವನು ಉಸಿರು ಹಾಕಿದ–"ನಿನ್ನ ಜೀವನ ನಾ ಹಾಳು ಮಾಡಿಧಾಂಗ ಆತು."

"ಎಂಥಾ ಮಾತು! ನಿಮ್ಮಿಂದಾಗಿ ನನ್ನ ಜೀವನ ಧನ್ಯ ಆತು. ಸಂಪನ್ನ [illegible]. ಇನ್ನ [illegible] [illegible] ಯಾರಾದರೂ ಮದಿವಿಗೆ ತಯಾರಾದರ ಅಂಥಾವರ ಸಂಗತಿ ನಾ ಮದಿವಿ ಮಾಡಿಕೋಬಹುದು."

"ನೀನು [illegible] ಹಾಕಿದರ?"

"ನನಗ ತಿಳೀಲಿಲ್ಲ.?"

"ಹಿಂಗ ಹೇಳತೀನಿ ಕೇಳು. ಈ ಎರಡು ವರ್ಷದಾಗ ನೀ ನಿನ್ನ ಮದಿವಿ ಹೊಂದಿಸಿಕೊಳ್ಳಲಿಕ್ಕೇ ಬೇಕು. ನಾವು ವರ ನೋಡತೀವಿ, ಪರಿಚಯ ಮಾಡಿ ಕೊಡತೀವಿ. ಸಾಕಷ್ಟು ಪ್ರಯತ್ನ ಮಾಡತೀವಿ ಇಲ್ಲಿ, ಬೆಂಗಳೂರಾಗ, ಮುಂಬಯಿಯಾಗ."

"ಹೊಂದದಿದ್ದರೆ?"

"ಹೊಂದದಿದ್ದರ, ನಿಮ್ಮ ಅಕ್ಕನ ಘಟಸ್ಫೋಟ ಕೊಟ್ಟು ನಾನೇ ನಿನ್ನ ಮದಿವಿ ಮಾಡಿಕೋಳ್ತೀನಿ, ಹೇಳಿಲ್ಲಂದೀ"

"ಇದು ಜುಲುಮಿ ಆಗೂದಿಲ್ಲೇನು?"

"ನಾವು ಮಾಡಿದ ತಪ್ಪಿಗೆ–ಅದರಾಗ ನನ್ನ ಪಾತ್ರ ದೊಡ್ಡದು–ಪರಿಹಾರ ಹುಡುಕೋದೂ ನಮ್ಮದೇ ಜವಾಬದಾರಿ" ಅರ್ಥ ಹೀನವಾಗಿ ಅವ ನಕ್ಕನು.

"ನೀವು ಆ ಹೊತ್ತು ಕೇಳಿದ್ದರಿ ಗರ್ಭಪಾತ [illegible] ಮಾಡಿಕೊಂಡೀ ಅಂತ. ಅದರ ಅರ್ಥ ಈಗ ಗೊತ್ತಾತಲ್ಲ?"

ಹೊತ್ತು ಮುಳುಗಿತ್ತು. ಕತ್ತಲಾಗಿತ್ತು. ಅವರು ಎದ್ದರು. †



ವೀರಜೀವನ

ರಂಗನಾಥ ದಿವಾಕರ

ನ್ಯಾಯಮಾತ್ಮಾ ಬಲ ಹೀನೇನ ಲಭ್ಯಃ ।
ಬಲಹೀನನಿಗೆ ಆತ್ಮಜ್ಞಾನ ಸಲ್ಲದು—ಉಪನಿಷತ್ತು
'ಆ ವೀರೋ ನಾ ಮಾರ್ಗ ಛೇ' । ಗಾಂಧಿ
(ಇದು ವೀರರ ಮಾರ್ಗವು)

ಇದು 'ಕರ್ಮವೀರ' ಪತ್ರಿಕೆಯ ದೀಪಾವಳಿ ಸಂಚಿಕೆ. ದೀಪಾವಳಿ ಹಬ್ಬವನ್ನು ನಾವೆಲ್ಲರೂ ಒಳ್ಳೆ ಆನಂದದಿಂದ ವಿಜೃಂಭಣೆಯಿಂದ ಆಚರಿಸುವೆವು. ನಮ್ಮ ಪರಂಪರೆಯಲ್ಲಿ ಸಾಮಾನ್ಯವಾಗಿ ಹಬ್ಬಗಳಿಗೆ ಒಂದು ಹಿನ್ನೆಲೆ ಇರುವದು. ಅದನ್ನು ನೆನಪಿಗೆ ತಂದುಕೊಳ್ಳುವದು ಅವಶ್ಯ. ದೀಪಾವಳಿ ಹಬ್ಬದ ದಿನಗಳಲ್ಲಿ 'ನರಕ ಚತುರ್ದಶಿ' ಎಂಬುದೊಂದು ದಿನ ಇರುವದು. ಅದರಲ್ಲಿಯ 'ನರಕ' ಶಬ್ದವು ಆ ಹಿನ್ನೆಲೆಯ ನೆನಪನ್ನು ಮಾಡಿಕೊಡುವದು. ಶ್ರೀ ಕೃಷ್ಣನು ತನ್ನ ಅವತಾರ ಕಾರ್ಯಗಳಲ್ಲಿ ಒಂದಾದ ನರಕಾಸುರ ಎಂಬ ರಾಕ್ಷಸನ ವಧೆ ಮಾಡಿ, ಅವನು ಸೆರೆಯಿಟ್ಟ ಹದಿನಾರು ಸಹಸ್ರ ಹೆಣ್ಣುಮಕ್ಕಳ ವಿಮೋಚನೆ ಮಾಡಿದನು. ಆ ಐತಿಹ್ಯವನ್ನು 'ನರಕ' ಶಬ್ದವು ನೆನಪಿಗೆ ತರುವದು! ಅದೇ ಸಂದರ್ಭದಲ್ಲಿ 'ದಸರೆ' ಹಬ್ಬದ ಹಿನ್ನೆಲೆಯನ್ನು ನೋಡಬಹುದು. ಆ ದಿನ ವನವಾಸದಲ್ಲಿದ್ದ ಪಂಚಪಾಂಡವರು ಒಂದು ಮರದ ಮೇಲಿಟ್ಟ ತಮ್ಮ ಶಸ್ತ್ರಾಸ್ತ್ರಗಳನ್ನು ಕೈಕೊಂಡು ಗೋರಕ್ಷೆ ಮಾಡಿದ ದಿನ ಅದು. ಇವು ಪೌರಾಣಿಕ ಕಥೆಗಳು ಎಂಬ ಮಾತು ನಿಜ. ಆದರೆ ಅವು ನಮಗೆ ನೀತಿ-ನಡಾವಳಿಗಳನ್ನು ಬೋಧಿಸುವವು.

ಈ ಎರಡೂ ಕಥೆಗಳು ವೀರತ್ವದರ್ಶಕ.

ಐತಿಹಾಸಿಕ ಕಾಲದುದ್ದಕ್ಕೂ ಕರ್ನಾಟಕವು ವೀರರ ನಾಡು ಎಂದು ಪ್ರಸಿದ್ಧ. ಏಳನೇ ಕ್ರಿಸ್ತ ಶತಮಾನದಲ್ಲಿ ಭಾರತದಲ್ಲಿ ಪ್ರವಾಸ ಮಾಡಿದ ಚೀನ ದೇಶದ ಪ್ರವಾಸಿ ಕೂಡ ವಾತಾಪಿ (ಈಗಿನ ಬದಾಮಿ) ನಗರದಲ್ಲಿ ರಾಜ್ಯವನ್ನು ಆಳುತ್ತಿದ್ದ ಚಾಲುಕ್ಯರ ಶೌರ್ಯವನ್ನು ಹೊಗಳಿದ್ದಾನೆ. ಕರ್ನಾಟಕದ ತುಂಬ ಇರುವ ವೀರಗಲ್ಲು–ಮಾಸತಿ (ಮಹಾಸತಿ) ಕಲ್ಲುಗಳು ನಮಗೆ ಇಲ್ಲಿಯ ಜನರ ಶೂರತ್ವ–ವೀರತ್ವಗಳನ್ನು ನೆನಪಿಗೆ ತಂದು ಕೊಡುವವು. ಇವುಗಳನ್ನು ನಾವು ಆಗಿನ ಕಾಲದ ದೃಷ್ಟಿಯಿಂದ ನೋಡುವದು ಅವಶ್ಯ. ಮಹಾಸತಿ ಕಲ್ಲುಗಳು ಹೆಣ್ಣು ಮಕ್ಕಳು ಸತಿ ಹೋದ ನೆನಪಿಗಾಗಿ ನೆಟ್ಟ ಕಲ್ಲುಗಳು. ಆ ಕಾಲದಲ್ಲಿ ಪತಿ ಸಮೇತ ಸತಿ ಹೋಗುವದು ಒಂದು ವೀರತ್ವದ ಲಕ್ಷಣವೇ ಆಗಿತ್ತು.

ವೀರ, ಶೂರ, ಧೀರ, ವೀರತ್ವ, ಶೂರತ್ವ, ಧೀರತ್ವ, ವೀರತನ, ಶೂರತನ, ಧೀರತನ ಇವು ಕಾಣಲು ಸಮಸಮಾನಾರ್ಥಕ ಇದ್ದರೂ ಇವುಗಳ ಅರ್ಥ ಅಷ್ಟೊಂದು ಸಮಾನಾರ್ಥಕ ಇಲ್ಲ. ಸಾಮಾನ್ಯವಾಗಿ ಶೂರ ಎಂದರೆ, ಯುದ್ಧ-ಹೋರಾಟಾದಿಗಳಲ್ಲಿ ಎದೆಗೊಟ್ಟು ಜೀವದ ಹಂಗುದೊರೆದು ಮುಂದರಿಯುವವ ಎಂದು ಹೇಳಬಹುದು. ಧೀರ ಎಂದರೆ, ಎಂಥ ದುರ್ಧರ ಪ್ರಸಂಗ ಬಂದರೂ ಎದೆಗೆಡದೆ ಅದಕ್ಕೆ ಅಂಬಿಯಾಗಿ ನಿಲ್ಲುವವ ಎನಬಹುದು. ವೀರ ಎಂದರೆ, ಅವನಲ್ಲಿ ಶೂರತೆಯಷ್ಟೇ ಧೀರತೆ ಇರಬಲ್ಲದು ಹಾಗೂ ಸದಾಕಾಲವೂ ಆ ಗುಣಗಳು ಅವನಲ್ಲಿ ಕಂಡುಬರುವವು. ಈ ರೀತಿ 'ವೀರ, ವೀರತೆ, ವೀರತ್ವ' ಈ ಶಬ್ದಗಳು ಹೆಚ್ಚು ವ್ಯಾಪಕಾರ್ಥವನ್ನು ಸೂಚಿಸು

ವವು. ಇಂಗ್ಲೀಷ್ ಭಾಷೆಯಲ್ಲಿಯ 'ಹೀರೋ' 'ಹೀರೋಯಿಝಮ್' ಈ ಶಬ್ದಗಳು ವೀರತ್ವವಾಚಕ ಶಬ್ದಗಳು ಎನ್ನಬಹುದು. ಇದಲ್ಲದೆ 'ವೀರತ್ವ' ಎಂಬ ಗುಣವು ಕೇವಲ ಪ್ರಸಂಗವಶಾತ್ ವ್ಯಕ್ತವಾಗುವ ಗುಣವಲ್ಲ. ಅದು ಜೀವನದ ಉದ್ದಕ್ಕೂ ಆಯಾ ವ್ಯಕ್ತಿಯಲ್ಲಿ ಮನೆಮಾಡಿಕೊಂಡು ಇರುವ ಗುಣವಿಶೇಷವು.

ಶೂರತ್ವ, ಧೀರತ್ವ, ವೀರತ್ವ ಈ ಗುಣಗಳು ಯುದ್ಧ ಕಾಲದಲ್ಲಿ ಅಥವಾ ಹೋರಾಟಗಳಲ್ಲಿ ಮಾತ್ರ ಅವಶ್ಯವಿದ್ದ ಗುಣಗಳು ಎಂದು ಹಲವರು ಬಗೆಯಬಹುದು. ಆದರೆ ಹಾಗೇನೂ ಇಲ್ಲ. ಪ್ರಪಂಚದಲ್ಲಿ ಮಾನವನು ಯಾವದೇ ಸ್ಥಿತಿಯಲ್ಲಿದ್ದರೂ ಅವನಿಗೆ ಈ ಗುಣಗಳು ಅವಶ್ಯವೇ ಇರುವವು. ಪ್ರಪಂಚವು ಕೂಡ ಒಂದು ಹೋರಾಟವೇ ಸೈ. ಕತ್ತಿಕಠಾರಿಗಳನ್ನು ಕೈಕೊಂಡು ಹೋರಾಡುವುದಕ್ಕೆಯೇ ಹೋರಾಟ ಎಂಬ ಶಬ್ದವನ್ನು ಉಪಯೋಗಿಸಬೇಕು ಎಂಬುದೇನೂ ವಿಧಿನಿಯಮವಲ್ಲ. ಮಾನವನು ಹುಟ್ಟಿದಂದಿನಿಂದ ಬಗೆಬಗೆಯ ಪ್ರಸಂಗಗಳನ್ನು ಎದುರಿಸುವ ಸಂದರ್ಭಗಳು ಉಂಟಾಗುವವು. ರೋಗರುಜಿನಗಳೇ ಆಗಲಿ, ಅನುವು ಆಪತ್ತುಗಳೇ ಆಗಲಿ ಮಾನವನಿಗೆ ಅವು ಪರೀಕ್ಷೆಯ ಪ್ರಸಂಗಗಳು. ಅವೆಲ್ಲ ಅವನ ಸತ್ವಪರೀಕ್ಷೆಯ ಪ್ರಸಂಗಗಳೇ ಸೈ. ಆದುದರಿಂದ ಈ ಗುಣಗಳ ಪೋಷಣೆ ಅತ್ಯಾವಶ್ಯಕ. ಚಿಕ್ಕಂದಿನಿಂದ ತಂದೆತಾಯಿಗಳು ಮಕ್ಕಳಲ್ಲಿ ಈ ಗುಣಗಳನ್ನು ಬಲಪಡಿಸಲು ಯತ್ನಿಸಬೇಕು.

ಯಾವದೇ ಮಾತಿನ ಭಯ ಎಂಬುದು ಎಲ್ಲಕ್ಕೂ ಹೆಚ್ಚಿನ ಎದೆಗೆಡುಸುವ ಪ್ರಸಂಗ ಎನ್ನಬಹುದು. ಆದುದರಿಂದಲೆ ನಿರ್ಣಯತೆ, ಅಭಯ ಎಂಬುದು ಬಹಳ ದೊಡ್ಡಗುಣ ಎನಿಸುವದು. ಪ್ರತ್ಯಕ್ಷ ಮರಣಕ್ಕಿಂತ ಮರಣಭಯವೇ ಹೆಚ್ಚು ಹಾನಿಕಾರಕ ಎಂದು ಹೇಳುವದು ಅದಕ್ಕಾಗಿಯೇ.

ಭಾರತವು 1947 ರಲ್ಲಿ ಸ್ವತಂತ್ರವಾಯಿತು. ಆದರೆ ಸ್ವಾತಂತ್ರ್ಯದ ಹೋರಾಟಕ್ಕೆ ಜನರನ್ನು ಅಣಿಮಾಡಿದ ಗಾಂಧಿ ಅವರು ಜನರನ್ನು ಸಾಕಷ್ಟು ನಿರ್ಭಯಗೊಳಿಸಿದರು. ಬ್ರಿಟಿಶ್ ಸರಕಾರವು ದಬ್ಬಾಳಿಕೆ ನಡೆಸಬಹುದು ಎಂಬುದು ಎಲ್ಲರಿಗೂ ಗೊತ್ತಿತ್ತು. ಜನರು ಈ ದಬ್ಬಾಳಿಕೆಗೆ ಅಂಜುತ್ತಿದ್ದರು. ಭಯಪಡುತ್ತಿದ್ದರು ಆ ಭಯವನ್ನು ಗಾಂಧಿ ತಮ್ಮ ಅದ್ವಿತೀಯ ಸ್ವಾರ್ಥ ತ್ಯಾಗದಿಂದ ಹಾಗೂ ನಿರ್ಭಯ ವೃತ್ತಿಯಿಂದ ಹೋಗಲಾಡಿಸಿದರು. ಗಾಂಧಿ ಅವರನ್ನು ಕುರಿತು ಬರೆಯುವಾಗ ಜವಾಹರಲಾಲ ನೆಹರೂ ಅವರು ಗಾಂಧೀ ಅವರ ನಿರ್ಭಯ ವೃತ್ತಿಯನ್ನು ಹೆಚ್ಚಾಗಿ ಹೊಗಳಿದ್ದಾರೆ. ಅದು ಗಾಂಧಿ ಅವರ ಎಲ್ಲಕ್ಕೂ ದೊಡ್ಡ ಗುಣ ಎಂದು ಹೇಳಿದ್ದಾರೆ. ಸತ್ಯಾಗ್ರಹ ಮೂಲಕ ಸ್ವಾತಂತ್ರ್ಯದ ಹೋರಾಟವನ್ನು ಹೂಡುವಾಗ ಗಾಂಧಿ ಅವರು, ಇದು ವೀರರ ಮಾರ್ಗವು, ಅಂಜುಬುರುಕರ ಮಾರ್ಗವಲ್ಲ, ಎಂದು ಹೇಳಿದ್ದಾರೆ, ಶರೀರಕ್ಕೆ ಆಗುವ ನೋವು ಸಾವುಗಳನ್ನು ಎದುರಿಸಬೇಕಾದರೆ, ನಮ್ಮ ಅಂತರ್ಯದಲ್ಲಿರುವ ಆತ್ಮವಸ್ತು ಅಜರ–ಅಮರ ಇರುವದು ಎಂಬ ಭರವಸೆ ಮುಖ್ಯವಾದುದು. ಆ ಭರವಸೆಯೇ ಮಾನವನನ್ನು ನಿರ್ಭಯನನ್ನಾಗಿಸಬಲ್ಲದು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯೇ ಗಾಂಧಿ ಪ್ರಣೀತ ಸತ್ಯಾಗ್ರಹವನ್ನು ಹೂಡುವ ಸಮಯದಲ್ಲಿಯೇ 'ಕರ್ಮವೀರ' ವಾರಪತ್ರಿಕೆ 1921 ರಲ್ಲಿ ಜನ್ಮತಾಳಿತು. ಜನರಲ್ಲಿ ನಿರ್ಭಯತೆಯ ಮೂಲಕ ಹೋರಾಟದಲ್ಲಿ ಸೇರಲು ಪ್ರವೇಶಿಸಿತು. ಆ ವೀರ ಪ್ರೇರಣೆಯೇ 'ಕರ್ನಾಟಕವು ಗಾಂಧಿ ಪ್ರಾಂತ ಎಂಬ ಬಿರುದನ್ನು ಪಡೆಯಲು ಅಣಿಮಾಡಿತು.

ಸ್ವಾತಂತ್ರ್ಯ ಹೋರಾಟದಂಥ ಹೋರಾಟಗಳು ನಿತ್ಯ ಒದಗುವ ಪ್ರಸಂಗಗಳಲ್ಲ. ನಿತ್ಯದ ಜೀವನದ ಹೋರಾಟದಲ್ಲಿಯೂ ವೀರತೆಯ ಅವಶ್ಯಕತೆ ಇರುವದು. ಈಚೆಗೆ ವೃತ್ತಪತ್ರಗಳಲ್ಲಿ ಪ್ರಸಿದ್ಧವಾದ ಎರಡು ಉದಾಹರಣೆಗಳನ್ನು ಇಲ್ಲಿ ಅವಲೋಕಿಸಬಹುದು.

ನಾಥಮುನಿ–ಸಲೀಮಾ ಅವರ ಕಥೆ ಇದು: ನಾಥಮುನಿ ಹುಟ್ಟಾ ಕಾಲುಗೇಡಿ. ಸಿಗರೇಟು ಸುತ್ತುವ ಕೆಲಸ



ವಲ್ಲಿ ಕೂಲಿಕಾರ. ಸಲೀಮಾ ಅದೇ ಕೆಲಸದಲ್ಲಿ ತೊಡಗಿದ ಮುಸಲಮಾನ ಹೆಣ್ಣುಮಗಳು ಕರುಣಾವಶಳಾಗಿ ಆಕೆ ನಾಥ ಮುನಿಯನ್ನು ವರಿಸಿದಳು. ತನ್ನ ಹೆಸರನ್ನು ಬದಲಾಯಿಸಿ 'ಪಾರ್ವತಿ' ಆದಳು. ಆಕೆಯ ಮನೆಯವರು ಅದಕ್ಕೆಲ್ಲ ವಿರೋಧಿಗಳು! ಆದರೆ ಅದನ್ನೆಲ್ಲ ಎದುರಿಸಿ ಆಕೆ ನಾಥಮುನಿಯೊಡನೆ ಸಂಸಾರ ಪ್ರಾರಂಭಿಸಿದಳು. ಎರಡು ಮಕ್ಕಳಾದವು. ಅವರು ಮಾಡುತಿರುವ ಆ ಕೆಲಸದಲ್ಲಿಯೂ ತೊಂದರೆ-ತೊಡಕು ಉಂಟಾಯಿತು. ಆದರೆ ಅದನ್ನೆಲ್ಲ ಎದುರಿಸಿ ಅವರು ದಂಪತಿಗಳಾಗಿ ಈಗಲೂ ಬಾಳುತ್ತಿರುವರು! ಇದೊಂದು ಸಾಮಾನ್ಯ ಜೀವನದಲ್ಲಿಯ ವೀರತೆ ಅಲ್ಲದೆ ಮತ್ತಿನ್ನೇನು?

ಇನ್ನೊಂದು ಉದಾಹರಣೆ ಗಿರಿಜಾ ಎಂಬ ಬೀ. ಏ. ಪರೀಕ್ಷೆ ಪಾಸಾದ ಹೆಣ್ಣು ಮಗಳದು. ಅಭ್ಯಾಸವನ್ನು ಮುಂದರಿಸುವ ಆಕಾಂಕ್ಷೆ ಆಕೆಯದು. ಹಲವರು ಜನ ಆಕೆಗೆ ದ್ರವ್ಯ ಸಹಾಯ ಮಾಡಲು ಮುಂದಾದರೂ ಆಕೆ ತನಗೆ ಯಾವುದಾದರೊಂದು ಕೆಲಸ ಕೊಡಿ, ಎಂದು ಹಾರೈಸಿದಳು. ಕೊನೆಗೆ ಆಕೆಗೆ ಕಸಗುಡಿಸುವ ಕೆಲಸ ದೊರೆಯಿತು. ಅದನ್ನೆ ಆಕೆ ಅಭಿಮಾನದಿಂದ ಮಾಡುತ್ತಿರುವಳು. ಇದರಲ್ಲಿ ಆಕೆ ತನ್ನ ಸ್ವಾಭಿಮಾನವನ್ನು ಕಂಡುಕೊಂಡಳು, ಹೊರತಾಗಿ ಹಲವರು ಕೊಡ ಮಾಡಿದ ದಾನವನ್ನು ತಿರಸ್ಕರಿಸಿದಳು. ಕಸಗುಡಿಸುವದು ಕೀಳುಗೆಲಸ ಎಂದು ಆಕೆ ಅದನ್ನು ಹೀಯಾಳಿಸಲಿಲ್ಲ. ಸಮಾಜಕ್ಕೆ ಅವಶ್ಯಕವಿದ್ದ ಯಾವ ಕೆಲಸವೂ ಹೀನ – ಹೇಯ ಎನಿಸಲು ಅರ್ಹವಲ್ಲ- ಅದು ಪವಿತ್ರವಾದುದೇ ಸೈ- ಸಮಾಜಕ್ಕೆ ಇಷ್ಟವಿದ್ದುದು, ಅವಶ್ಯವಿದ್ದುದು ಅಪವಿತ್ರ ಆಗಬಲ್ಲದೇ? ಗಾಂಧಿ ಅವರು ಇದೇ ತತ್ವವನ್ನು ಪ್ರತಿಪಾದಿಸಿದರು, ಇಷ್ಟೇ ಅಲ್ಲ. ಒಬ್ಬ ಕಸ ಗುಡಿಸುವವನ ಸಂಬಳ ಹಾಗೂ ಒಬ್ಬ ವಕೀಲನ ಸಂಬಳ ಎರಡೂ ಅಷ್ಟೇ ಇರಬೇಕು ಎಂದು ವಾದಿಸಿದ್ದರು! ಗಿರಿಜಾ ಆ ತತ್ವದ ಪ್ರತ್ಯಕ್ಷ ಉದಾಹರಣೆ!

ಇಲ್ಲಿ ಈಗಾಗಲೆ ಪ್ರಕಟವಾಗಿರುವ ಉದಾಹರಣೆಗಳತ್ತ ಲಕ್ಷ್ಯವನ್ನು ಎಳೆಯುವ ಉದ್ದೇಶವೇನೆಂದರೆ, ಸಾಮಾನ್ಯ ಜೀವನದ ಹೋರಾಟದಲ್ಲಿ ಕೂಡ ವೀರವೃತ್ತಿಗೆ ಅವಕಾಶವಿರುವದೆಂಬುದನ್ನು ಸ್ಪಷ್ಟಪಡಿಸಲು.

ಭಾರತವು ಸ್ವತಂತ್ರವಾಗಿ ಈಗಾಗಲೇ ಮುವತ್ತೆಂಟು ವರುಷಗಳಾಗಿ ಹೋದವು. ನಾವು ಭಾರತೀಯರು ನಮ್ಮದೇ ಆದ ಒಂದು ಸಂವಿಧಾನವನ್ನು (ಕಾನ್‌ಸ್ಟಿಟ್ಯೂಶನ್) ರಚಿಸಿಕೊಂಡು ಒಂದು ಪ್ರಜಾಪ್ರಭುತ್ವವಾದಿ ಆದ ರಾಷ್ಟ್ರ ಎಂದು ಬಾಳುತ್ತ ಇದ್ದೇವೆ. ಆದರೆ ಈಗ ಬೆಳೆದು ನಿಂತ ಎಪ್ಪತ್ತು ಕೋಟಿ ಜನರಿರುವ ರಾಷ್ಟ್ರದಲ್ಲಿ ಶಾಂತಿ-ಸಮೃದ್ಧಿ-ಸರ್ವಾವಕಾಶ ಇವು ನೆಲೆ ನಿಂತಿದೆಯೋ ಎಂದು ಪ್ರಶ್ನೆ ಮಾಡಿದರೆ, 'ದಿಲ್ಲಿ ತೋ ದೂರ್' ಇನ್ನೂ ಆ ಧ್ಯೇಯ ಬಹಳ ದೂರವಿದೆ ಎಂದು ಹೇಳಬೇಕಾಗಿದೆ. ಅದಕ್ಕೆ ಹಲವಾರು ಕಾರಣಗಳು ಇರಬಲ್ಲವು-ಇವೆ. ಆದರೆ ಮುಖ್ಯವಾದ ಕಾರಣ, ನಾನು ಮೇಲೆ ಕಾಣಿಸಿದ ವೀರತೆ, ಶೂರತೆ, ಧೀರತೆಗಳು ನಮ್ಮ ನಾಗರಿಕರಲ್ಲಿ ಎಷ್ಟು ಇರಬೇಕೋ ಅಷ್ಟು ಇಲ್ಲ. ನಮ್ಮ ಶಿಕ್ಷಣ ಪದ್ಧತಿಯಲ್ಲಿಯೂ ಅವುಗಳ ಅಭಾವವೇ ಕಂಡು ಬರುವದು. ನಮ್ಮ ಮಕ್ಕಳೆಲ್ಲ ವೀರರು, ಧೀರರು, ಶೂರರು ಆಗಬೇಕು ಎಂಬ ತಳಹದಿಯ ಮೇಲೆ ನಮ್ಮ ಶಿಕ್ಷಣ ಪದ್ಧತಿ ನಿಲ್ಲಬೇಕು. ಅಂದರೆ ಮಾತ್ರ ಈ ಗುಣಗಳು ಸಾರ್ವತ್ರಿಕ ಆಗಬಲ್ಲವು. ಗಾಂಧಿ ಅವರು ಮೇಲಿಂದ ಮೇಲೆ ಹೇಳಿದ ಮಾತೆಂದರೆ ಬೌದ್ಧಿಕ ಪಾಠಾಂತರಗಳಿಗಿಂತ ಶೀಲ ಸಂವರ್ಧನೆ ಹೆಚ್ಚು ಮಹತ್ವದ್ದು. ಅದು ಮಾನವರ ಸಾಮಾಜಿಕ ಜೀವನದ ಮೂಲಾಧಾರ, ಉಳಿದ ಮಾತುಗಳು ಗೌಣ. ಪ್ರಸಂಗವಾಶಾತ್ ವೀರತೆ, ಧೀರತೆ, ಶೂರತೆ ಎಂಬ ಗುಣಗಳನ್ನು ತನ್ನ ಜೀವನದಲ್ಲಿ ಪ್ರಕಟಿಸಲಾರದ ಜನ ಮುಂದರಿಯುವದು ಅಸಾಧ್ಯ. ಈ ಗುಣಗಳನ್ನು ಆತ್ಮಸಾತ್ ಮಾಡಿಕೊಂಡವನೇ ನಿಜವಾದ 'ಕರ್ಮವೀರ' ಯಾಕೆಂದರೆ ಅವನೇ ತನ್ನ ಮಾನವ್ಯವನ್ನು ಕಾಯ್ದುಕೊಂಡು ಇತರರಿಗೆ ಮಾರ್ಗದರ್ಶನ ಮಾಡಬಲ್ಲ. ಹೀಗೆ ತಾನು ಮುಂದುವರಿಯುವನಲ್ಲದೆ ಇತರರನ್ನು ತನ್ನೊಡನೆ ಮುಂದರಿಸಬಲ್ಲನು. ●

ವಿಚಾರ ವೇದಿಕೆ

ಶಿಕ್ಷಣ ಪದ್ಧತಿಗೆ ಹೊಸ ಆವಿಷ್ಕಾರ

ಹೊಸ ಶಿಕ್ಷಣ ನೀತಿ ರೂಪಿಸುವ ಬಗ್ಗೆ ದೇಶದಾದ್ಯಂತ ಸಾಕಷ್ಟು ಚರ್ಚೆ ನಡೆಯುತ್ತಿದೆ. ಇದೇ ವಿಷಯದಲ್ಲಿ 'ಕರ್ಮವೀರ' ಈ ವೇದಿಕೆ ರೂಪಿಸಿತು. "ಅಸಂಖ್ಯ ವಿದ್ವನ್ಮಣಿಗಳನ್ನೂ ತಜ್ಞರನ್ನೂ ಒದಗಿಸಿದ ನಮ್ಮ ಸದ್ಯದ ಶಿಕ್ಷಣ ಪದ್ಧತಿ ದೋಷಯುಕ್ತವಾಗಿದೆಯೇ ? ಹಾಗಿದ್ದರೆ ಹೊಸದೊಂದು ಶಿಕ್ಷಣ ಪದ್ಧತಿ ರೂಪಿಸುವದು ಅಗತ್ಯವೇ ?" ಎಂಬ ಪ್ರಶ್ನೆ ಕುರಿತು ಡಾ. ಹಾ.ಮಾ. ನಾಯಕ, ಡಾ.ಎಸ್.ಜಿ. ದೇಸಾಯಿ, ಶ್ರೀ ಎಸ್. ಎಸ್. ಒಡೆಯರ ಹಾಗೂ ಪ್ರೊ. ಸರೋಜಿನಿ ಶಿಂತ್ರಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇನ್ನುಳಿದ ಮಹನೀಯರಿಗೆ ಬೇರೆ ಐದು ಪ್ರಶ್ನೆಗಳನ್ನಿರಿಸಿ ಅವರ ವಿಚಾರಗಳನ್ನು ಸಂಗ್ರಹಿಸಲಾಯಿತು. ಈ ಐದು ಪ್ರಶ್ನೆಗಳು ಮುಂದಿನ ಪುಟದಲ್ಲಿವೆ.

ಈ ವಿಚಾರ ವೇದಿಕೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಮನನೀಯ.

ಸಂದರ್ಶನ—ಸಂಕಲನ
ಸೀತಾರಾಮ ಪುರಾಣಿಕ

ಮೂಲಭೂತ ಅಗತ್ಯ ಈಡೇರದು



ಡಾ|| ಹಾ. ಮಾ. ನಾಯಕ

ಕುಲಪತಿ

ಗುಲಬರ್ಗಾ ವಿಶ್ವವಿದ್ಯಾಲಯ

ಇದು ಒಂದು ಮಹಾಪ್ರಬಂಧದ ವಿಷಯ. ಆ ಬಗೆಗೆ ನನ್ನ ನಾಲ್ಕೇ ನಾಲ್ಕು ಮಾತುಗಳು ಇವು—

ಯಾವುದೇ ಪದ್ಧತಿಯ ಯಶಸ್ಸು ಅದರ ಅನುಷ್ಠಾನವನ್ನು ಅವಲಂಬಿಸಿರುತ್ತದೆ. ನಮ್ಮಲ್ಲಿ ಪ್ರಚಲಿತವಿರುವ ಶಿಕ್ಷಣ ಪದ್ಧತಿ ದೋಷಯುಕ್ತವಾಗಿದೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಅದಕ್ಕೆ ಬದಲಿ ಏನು ಎಂಬುದನ್ನು ಯಾರೂ ಹೇಳುವುದಿಲ್ಲ. ಬರಿದೆ ಪದ್ಧತಿಯನ್ನು ದೂಷಿಸುವುದರಿಂದ

ಪ್ರಯೋಜನವಿಲ್ಲ. ಅದನ್ನು ನಾವು ಹೇಗೆ ಅಳವಡಿಸಿಕೊಂಡಿದ್ದೇವೆ, ಕಾಲಕ್ಕೆ ಅನು ಗುಣವಾಗಿ ಬಳಸುತ್ತಿದ್ದೇವೆ ಎನ್ನುವುದು ಮುಖ್ಯ.

ಶಿಕ್ಷಣದ ಗಾತ್ರದ ಕಡೆಗೆ ಗಮನ ಕೊಟ್ಟಿರುವ ನಾವು ಅದರ ಗುಣವನ್ನು ನಿರ್ಲಕ್ಷಿಸಿದ್ದೇವೆ. ಶಿಕ್ಷಣದ ಕೊರತೆ ಇರು ವುದೇ ಇಲ್ಲಿ. ಕಟ್ಟಡಗಳಿಲ್ಲದ ಶಾಲೆಗಳು, ಅಧ್ಯಾಪಕರಿಲ್ಲದ ತರಗತಿಗಳು, ಪೀಠೋಪ ಕರಣಗಳಿಲ್ಲದ ಸಂಸ್ಥೆಗಳು ಎಂಥ ಹೊಸ ಶಿಕ್ಷಣ ಪದ್ಧತಿಯನ್ನಾದರೂ ಹೇಗೆ ಅನುಷ್ಠಾನಗೊಳಿಸುತ್ತವೆ? ಶಾಲೆ ಕಾಲೇಜುಗಳನ್ನು ತೆರೆಯುವುದರಲ್ಲಷ್ಟೆ ನಮ್ಮ ಆಸಕ್ತಿ; ಅವುಗಳಿಂದ ಏನಾಗ ಬೇಕೆಂಬುದನ್ನು ಯೋಚಿಸುವುದಿಲ್ಲ. ಬಿಟ್ಟಿ ಪುಸ್ತಕಗಳು, ಬಿಟ್ಟಿ ಸಮವಸ್ತ್ರ, ಬಿಟ್ಟಿ ಅನ್ನ ಇವುಗಳಿಂದ ಶಿಕ್ಷಣ ಸುಧಾರಿಸುವು ದಿಲ್ಲ. ಒಳ್ಳೆಯ ಪರಿಸರದ ಶಾಲೆ, ಬೋಧನೆ ಯಲ್ಲಿ ಪ್ರೀತಿಯುಳ್ಳ ಸಮರ್ಥ ಅಧ್ಯಾಪ ಕರು, ಸುಸಜ್ಜಿತವಾದ ಗ್ರಂಥಾಲಯ, ಪ್ರಯೋಗಾಲಯ, ಆಕರ್ಷಕವಾದ ಪಠ್ಯ ಪುಸ್ತಕಗಳು–ಇವೇ ಶಿಕ್ಷಣದ ಆಧಾರ. ನಮ್ಮ ಶಿಕ್ಷಣ ಕ್ರಮದಲ್ಲಿ ಇವನ್ನು ಬಿಟ್ಟು ಉಳಿದುದೆಲ್ಲ ಇದೆ!

ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಮುಖ್ಯವೆಂದು ಪರಿಗಣಿಸದೆ, ಆ ಅಧ್ಯಾಪ ಕರ ಸ್ಥಿತಿಗತಿಗಳನ್ನು ಸುಧಾರಿಸುವತ್ತ ಗಮನ ಕೊಡದೆ, ಉನ್ನತ ಶಿಕ್ಷಣದ ಕಡೆಗೇ ಹೆಚ್ಚು ಒತ್ತು ಕೊಡುತ್ತಿರುವುದು ನಮ್ಮ ಮತ್ತೊಂದು ದೋಷ. ಭದ್ರವಾದ ಪ್ರಾಥ ಮಿಕ ಶಿಕ್ಷಣದ ಬುನಾದಿಯಿಲ್ಲದೆ ನಾವು ಉನ್ನತ ಶಿಕ್ಷಣ ಸೌಧವನ್ನು ಅಲಂಕರಿಸು ತ್ತಿದ್ದೇವೆ. ಫಲವಾಗಿ, ಪದವೀಧರರೆನ್ನಿಸಿ ದವರಿಗೂ ಶಿಕ್ಷಣದ ಮೂಲಭೂತ ಅಂಶ ಗಳಾದ ಓದುವುದು, ಬರೆಯುವುದು, ಲೆಕ್ಕ ಮಾಡುವುದು ಕೂಡ ಸರಿಯಾಗಿ ಬರು ತ್ತಿಲ್ಲ! ಪ್ರಾಥಮಿಕ ಹಂತದ ಶಿಕ್ಷಣ ಬೇರು ಗಳನ್ನು ಪೋಷಿಸುವುದರ ಕಡೆ ನಾವು ಮೊದಲ ಗಮನ ಕೊಡಬೇಕಾಗಿದೆ. ಮೊದಲ ಹತ್ತು ವರ್ಷಗಳ ಶಿಕ್ಷಣ ಎಲ್ಲ ರಿಗೂ ದೊರೆಯಬೇಕು. ಮುಂದಿನ ಶಿಕ್ಷಣ ಅದ್ಯತೆಯ ಮೇಲೆ, ಅಗತ್ಯವನ್ನನುಸರಿಸಿ, ಅರ್ಹರಾದವರಿಗೆ ಮಾತ್ರ ಮೀಸಲಾಗಿರ ಬೇಕು. ಎಲ್ಲರಿಗೂ ಎಲ್ಲ ಶಿಕ್ಷಣ ಎನ್ನು ವುದು ತಪ್ಪು. ಶಿಕ್ಷಣಕ್ಕೂ ಯೋಜನೆ ಇರ ಬೇಕು. ನಮಗೆ ಎಷ್ಟು ಜನ ಡಾಕ್ಟರು ಬೇಕು, ಎಂಜಿನಿಯರು ಬೇಕು ಎಂದು ಲೆಕ್ಕ ಹಾಕದೆ, ಎಲ್ಲರನ್ನೂ ಡಾಕ್ಟರನ್ನಾಗಿ, ಎಂಜಿನಿಯರನ್ನಾಗಿ ಮಾಡುತ್ತೇವೆ ಎನ್ನುವ ಧೋರಣೆಯಿಂದಲೇ ಶಿಕ್ಷಣ ಮಾರಾಟದ ಸರಕಾಗಿದೆ; ಲಾಭದಾಯಕ ಉದ್ಯಮ ವಾಗಿದೆ. ಯೋಜಿತ ಶಿಕ್ಷಣ ನಮ್ಮ ಗುರಿ ಯಾಗಬೇಕು.

ನಮ್ಮ ಸಮಗ್ರ ಬದುಕನ್ನು ಆವರಿ ಸಿರುವ ರಾಜಕೀಯ ಶಿಕ್ಷಣ ಕ್ಷೇತ್ರವನ್ನೂ ಬಿಟ್ಟಿಲ್ಲ. ಶಿಕ್ಷಣದ ಹೆಸರಿನಲ್ಲಿ ರಾಜಕೀಯ ನಡೆಯುತ್ತಿದೆ. ರಾಜಕೀಯಸ್ಥರು ಶಿಕ್ಷಣ ತಜ್ಞರಾಗಿದ್ದಾರೆ; ಅಧ್ಯಾಪಕರು, ಶಿಕ್ಷಣ ತಜ್ಞರು ರಾಜಕೀಯಸ್ಥರಾಗಿದ್ದಾರೆ! ಇದ ರಿಂದಲೇ ನಮ್ಮ ಶಿಕ್ಷಣ ಕುಲಗೆಟ್ಟಿದೆ. ಅಧಿಕಾರದಲ್ಲಿರುವ ಪಕ್ಷಗಳು ತಮ್ಮ ಪಕ್ಷ ದವರ ಖುಷಿಗಾಗಿ ಶಿಕ್ಷಣವನ್ನು ಬಲಿ ಕೊಡುತ್ತವೆ; ಶಿಕ್ಷಣ ಧೋರಣೆಗಳನ್ನು ರೂಪಿಸುತ್ತವೆ. ಇದು ನಮ್ಮ ಈ ನಾಲ್ಕು ದಶಕಗಳ ಶಿಕ್ಷಣದಲ್ಲಿ ಸ್ಪಷ್ಟವಾಗಿ ತೋರಿಸಿ ಕೊಂಡಿದೆ.

ನನ್ನ ದೃಷ್ಟಿಯಲ್ಲಿ ನಮ್ಮ ಶಿಕ್ಷಣ ಕ್ರಮ ದೂರುವಂಥದಲ್ಲ. ಅದನ್ನು ಬಳಸುತ್ತಿರುವ ನಮ್ಮನ್ನು ನಾವೇ ನಮ್ಮ ಕೆಲಸಕ್ಕಾಗಿ ದೂರಿಕೊಳ್ಳಬೇಕಾಗಿದೆ. ಶಿಕ್ಷಣ ನಮ್ಮ ಅಗತ್ಯಗಳನ್ನನುಸರಿಸಬೇಕು; ನಮ್ಮ ಭಾಷೆಯಲ್ಲಿ ನಡೆಯಬೇಕು; ಯೋಜಿತ ವಾದುದಾಗಬೇಕು; ಗುಣಬದ್ಧವಾಗಿರ ಬೇಕು; ರಾಜಕೀಯ ಮುಕ್ತವಾಗಬೇಕು. ಎಲ್ಲಕ್ಕೂ ಮುಖ್ಯವಾಗಿ ಅದರ ಮೂಲ ಭೂತ ಅಗತ್ಯಗಳನ್ನೂ ನಾವು ಈಡೇರಿಸ ಬೇಕು. ಇದು ಇಲ್ಲದಿದ್ದರೆ ನಾವು ರೂಪಿ ಸುವ ಯಾವ ಶಿಕ್ಷಣ ಕ್ರಮದಿಂದಲೂ ಪ್ರಯೋಜನವಾಗುವುದಿಲ್ಲ. ●

ಪ್ರಶ್ನೆಗಳು

1) ಪ್ರಾಥಮಿಕ, ಪ್ರೌಢ, ಕಾಲೇಜು ಹಾಗೂ ವಿಶ್ವವಿದ್ಯಾನಿಲಯದ ಶಿಕ್ಷಣದಲ್ಲಿ ಕನ್ನಡ ಮಾಧ್ಯಮವು ಯಾವ ಮಟ್ಟದವರೆಗೆ ಇರಬೇಕು?

2) ಈಗಿನ ಪರೀಕ್ಷಾ ಪದ್ಧತಿ, ಸಾಮೂಹಿಕ ಕಾಪಿಯ ಪಿಡುಗು, ಪೇಪರ್ ತಪಾಸಣೆಯಲ್ಲಿ ಅನಾಸ್ಥೆ ಇವುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

3) ಶಿಕ್ಷಕರ ತರಬೇತಿಯು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಟ್ಟಕ್ಕೆ ಮಾತ್ರ ಸೀಮಿತವಾಗಿರಬೇಕೆ? ಅಥವಾ ಕಾಲೇಜು, ವಿಶ್ವವಿದ್ಯಾನಿಲಯ ಅಧ್ಯಾಪಕರಿಗೂ ಅದನ್ನು ವಿಸ್ತರಿಸಬೇಕೇ?

4) ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ಮತ್ತು ಸಲಹೆಗಳನ್ನು ನೀಡಿದರೆ ಈಗಿನ ಅನೇಕ ದೋಷಗಳನ್ನು ಹೋಗಲಾಡಿಸಬಹುದಲ್ಲವೇ?

5) ಶಿಕ್ಷಣ ಕ್ಷೇತ್ರದ ರಾಷ್ಟ್ರೀಕರಣದಿಂದ ಸಮಸ್ಯೆ ಬಗೆಹರಿಯಬಹುದೇ?

ಶಿಕ್ಷಣ: ಪರಿವರ್ತನೆಗೆ ಪಾಶುಪತಾಸ್ತ್ರ

ಎಸ್. ಜಿ. ದೇಸಾಯಿ
ಕುಲಪತಿ ಕರ್ನಾಟಕ
ವಿಶ್ವವಿದ್ಯಾಲಯ



ಭಾರತೀಯ ಜನಕೋಟಿಯಲ್ಲಿ ಪ್ರಜಾಪ್ರಭುತ್ವ, ಸಮಾಜವಾದ, ಜಾತ್ಯಾತೀತತೆಯ ತತ್ವ ಪ್ರಣಾಳಿಕೆಯನ್ನು ಬೆಳೆಸಬೇಕಾಗುವುದು ಅನಿವಾರ್ಯ. ಜೊತೆಯಲ್ಲಿ ಅವರೆಲ್ಲರನ್ನೂ ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಹೊಸ ಯುಗಕ್ಕೆ ತಕ್ಕಂತೆ ಮುಂದುವರಿಸುವುದು ರಾಷ್ಟ್ರದ ಕರ್ತವ್ಯ. ಅನಕ್ಷರತೆ, ಅಜ್ಞಾನ, ಬಡತನ, ನಿರುದ್ಯೋಗ ಹಾಗೂ ಅಸಮಾನತೆಗಳನ್ನೇ ಬೆಳೆಸಿಕೊಂಡು ಬರುತ್ತಿರುವ ನಮ್ಮ ಸಮಾಜವು ಬದಲಾಗಬೇಕು. ಭಾರತದಲ್ಲಿ ಇಂದಿಗೂ ಮಹಾನ್ ಸಮಸ್ಯೆಗಳಾಗಿ ಉಳಿದಿರುವ ಬಡತನದಲ್ಲಿ ನಿರುದ್ಯೋಗ ಹಾಗೂ ಅಸಮಾನತೆಗಳ ವಿರುದ್ಧ ಮಹಾಯುದ್ಧವನ್ನು ಹೂಡುವ ಕಾಲವಿದು. ಈ ಯುದ್ಧದಲ್ಲಿ ಬಳಸಬೇಕಾದ ಪಾಶುಪತಾಸ್ತ್ರವೆಂದರೆ ಶಿಕ್ಷಣ ಒಂದೇ. ಹಿಂದಿನ ಹಾಗೂ ಇಂದಿನ ಶಿಕ್ಷಣ ಪದ್ಧತಿಯನ್ನೇ ನಂಬಿ ಅದು ದೋಷಯುಕ್ತವಾಗಿಲ್ಲವೆಂದು ತಿಳಿದು ಮುಂದುವರಿದಿದ್ದರೆ, ಬದಲಿಸದಿದ್ದರೆ, ಅಪರಾಧವಾದೀತು. ಅಸಾಧಾರಣವೆನಿಸಿದ ವಿದ್ವನ್ಮಣಿಗಳನ್ನು ಒದಗಿಸಿದೆ ಎಂಬುದನ್ನು ತಿಳಿದರೂ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಅಡಗಿರುವ ಶಿವಶಕ್ತಿಯನ್ನು ಬಡಿದೆಬ್ಬಿಸುವಲ್ಲಿ ವ್ಯಕ್ತಿಗೂ, ತಾನಿರುವ ಸಮಾಜಕ್ಕೂ ಆ ಶಕ್ತಿಯನ್ನು ಸದುಪಯೋಗಗೊಳಿಸುವಲ್ಲಿ, ಇಂದಿನ ಶಿಕ್ಷಣ ಪದ್ಧತಿ ವಿಫಲವಾಗಿರುವದನ್ನು ಕಾಣುತ್ತೇವೆ.

ಜನಕೋಟಿಯ ಜೀವನ ಮೇರು ಪರ್ವತವಾಗಿ ಬೆಳೆಯಬೇಕಾದಲ್ಲಿ ಹೊಸತನದ ಚಿಂತನೆ ನಡೆಯಲೇಬೇಕು. ಇಂದು ನಮ್ಮ ಸಮಾಜದಲ್ಲಿ ಸಾಕಷ್ಟು ಬದಲಾವಣೆಯಾಗಿದ್ದರೂ, ಅಪರಾಧಿ ಪ್ರವೃತ್ತಿಯನ್ನು ಕಾಣುತ್ತೇವೆ. ಜೀವನದ ಮೌಲ್ಯಗಳನ್ನು ಗಾಳಿಗೆ ತೂರಿದ್ದೇವೆಂಬ ಭಾವನೆ ಮೂಡುತ್ತದೆ. ಮನುಷ್ಯ ಮನುಷ್ಯನನ್ನು ಮನುಷ್ಯನಾಗಿ ಕಾಣದ ಪರಿಸರ ನಿರ್ಮಾಣವಾಗಿದೆ. ಘನತೆ ಗೌರವ ಜೀವನದಿಂದ ದೂರ ಸರಿಯುತ್ತಿದ್ದೇವೆ. ತುಮುಲ, ದ್ವೇಷ, ಅಸೂಯೆ ಬೆಳೆದು, ಮಾನಸಿಕ ಶಾಂತಿ ಇಲ್ಲವಾಗಿದೆ. ಸದಾಕಾಲವೂ ಭಾರತೀಯ, ಮಾನಸಿಕ ಒತ್ತಡದಿಂದ ಬಳಲಿ ಮಾನಸಿಕ ಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತಿದ್ದಾನೆ. ಸ್ವಾತಂತ್ರ್ಯದ ಭದ್ರ ಬುನಾದಿಯ ಮೇಲೆ ಬೆಳೆದು ಸ್ವಾತಂತ್ರ್ಯದ ಪರಿಕಲ್ಪನೆಯನ್ನು ವ್ಯಕ್ತಿತ್ವದಲ್ಲಿ ಅಂತರ್ಗತವಾಗಿ ಮಾಡಿಕೊಳ್ಳದ ವಿನಃ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಬೆಲೆ ಬರದು. ಹೊಸ ಸಮಾಜಕ್ಕೆ ನಾಂದಿ ಹೇಳಬೇಕಾದರೆ ವೈಚಾರಿಕ ಕ್ರಾಂತಿಯಾಗಲೇಬೇಕು. ಪ್ರತಿಯೊಬ್ಬನಲ್ಲಿಯೂ ಅಗಾಧವಾದ ಸೃಜನಾತ್ಮಕ ಶಕ್ತಿಯಿದೆ. ಈ ವಿಚಾರದಲ್ಲಿ ನಂಬುಗೆಯಿಲ್ಲದ ಕಾರಣದಿಂದ ಸೃಜನಾತ್ಮಕತೆಯ ಬೆಳವಣಿಗೆ ಕುಂಠಿತವಾಗಿದೆ. ನಮ್ಮ ಸಂಸ್ಕೃತಿಯಲ್ಲಿ ಹಿರಿದಾದುದೆಲ್ಲವನ್ನು ಉಳಿಸಿಕೊಂಡು ವೈಜ್ಞಾನಿಕ ಹಾಗೂ ತಾಂತ್ರಿಕತೆಯ ಬೆಳವಣಿಗೆಯ ಮೂಡಿಸುವ ಪ್ರಯತ್ನ ಇಂದು ನಡೆಯ ಬೇಕು. ಈ ದಿಸೆಯಲ್ಲಿ ಶಿಕ್ಷಣದ ಪಾ ಅಮೋಘವಾದುದು.

ಶಿಕ್ಷಣವು ಬೌದ್ಧಿಕ ಮತ್ತು ದೈಹಿ ಕೆಲಸಗಳನ್ನು ಒಗ್ಗೂಡಿಸಬೇಕು. ಆ ವೃದ್ಧಿಯೊಡನೆ ಸಂಸ್ಕೃತಿ, ವಿಜ್ಞಾ ತಾಂತ್ರಿಕ ಜ್ಞಾನಗಳಿಗೆ ಪ್ರಾಧಾನ್ಯವೀ ಬೇಕಲ್ಲದೆ ಪ್ರಜಾಸತ್ತೆ, ಜಾತ್ಯಾತೀತ ಸಾಮಾಜಿಕ ಮೌಲ್ಯಗಳನ್ನು ಅಳವಡಿ ಕೊಳ್ಳಬೇಕು. ಹೀಗೆ ಬದಲಾವ ಹೊಂದಿದ ಶಿಕ್ಷಣದಿಂದ ಮಾತ್ರ ಸಮಾ ಕಲ್ಯಾಣ ಸಾಧ್ಯ.

ಯಾವುದೇ ಸಮಾಜವಾಗಲಿ, ರಾ ವಾಗಲಿ, ಆರ್ಥಿಕ ಭದ್ರತೆಯನ್ನು ಪಡೆ ಬೇಕಾದರೆ ಆ ಸಮಾಜದ ಜನಕೋಟಿ ಆರ್ಥಿಕಮಟ್ಟ ಹೆಚ್ಚಾಬೇಕಾದುದು ಅ ವಾರ್ಯ. ಹೆಣ್ಣು ಗಂಡೆಂಬ ಭೇದ ಭಾವ ಯನ್ನು ಉಳಿಸಿಕೊಂಡರೆ ನವ ಸಮಾಜ ನಿರ್ಮಾಣವಿಲ್ಲ. ಸ್ತ್ರೀಯರೆಲ್ಲರಿಗೆ ಶಿಕ್ಷ ಮುಟ್ಟಿ ಅವರ ಜೀವನದಲ್ಲಿ ಪರಿವರ್ತ ಯಾಗಬೇಕು. ಹೊಸ ಯುಗದ ನಿರ್ಮಾ ಣಕ್ಕೆ ಅವರ ಕಾಣಿಕೆ ಅಮೋಘವಾದುದು

ಕಾಯಕದ ಕಲ್ಪನೆಯನ್ನು ಹಾಗೂ

‘ಶಿಕ್ಷಣ ತಜ್ಞ’

ಯಾವುದಾವರೂ ವಿಷಯ
ಕಲಿಸುತ್ತಿರಲಿ,
ಅಥವಾ ವಿದ್ಯಾಸಂಸ್ಥೆ ನಡೆಸುತ್ತಿರಲಿ
ಅವನಾಗಿದ್ದರೂ ಖಾಲಿ ಬುರುಡೆ
‘ಅಜ್ಞ’
ಸಂದೇಹವೇಕೆ? ಅವನೇ ತಮ್ಮ
“ಶಿಕ್ಷಣ ತಜ್ಞ”

—ಸೀತಾರಾಮ ಪುರಾಣಿಕ

ಆದಕ್ಕೆ ಜೀವವನ್ನು ತರುವ ಹೃದಯ ಸಿರಿವಂತಿಕೆಯನ್ನು ಬೆಳೆಸುವ ಶಿಕ್ಷಣ ಬೇಕು. ನಾವೆಲ್ಲ ಭಾರತೀಯರು: ನಮ್ಮ ರಾಷ್ಟ್ರವು ಜಾಗತಿಕ ರಾಷ್ಟ್ರಗಳ ಮಾಲಿಕೆಯಲ್ಲಿ ಮುತ್ತೊಪ್ಪಿ ಧವಲಗಿರಿಯಾಗಿ, ಗೌರಿಶಂಕರ ಶಿಖರವಾಗಿ ಬೆಳೆದು ಬರುವಂತಾಗಬೇಕಾದರೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ ತೀವ್ರತರ ಬದಲಾವಣೆ ಆಗಬೇಕೆಂದು ನಂಬಿರುವ ವ್ಯಕ್ತಿ ನಾನು. ಯಾವ ಶಿಕ್ಷಣ ಪದ್ಧತಿಯಿಂದ ವ್ಯಕ್ತಿಯಲ್ಲಿ, ಸಮಾಜದಲ್ಲಿ ವೈಚಾರಿಕ ಸ್ವಾತಂತ್ರ್ಯಕ್ಕೆ, ಸೃಜನಾತ್ಮಕತೆಗೆ, ಕ್ರಿಯಾತ್ಮಕತೆಗೆ, ಸದ್ಭಾವನೆಗೆ, ಅಭಿಪ್ರೇರಣೆಗೆ, ಮೌಲ್ಯಾಧಾರಿತ ಜೀವನಕ್ಕೆ ಬೆಲೆಯಿಲ್ಲವೋ ಅಂಥ ಶಿಕ್ಷಣವು ಬದಲಾವಣೆಯಾಗಲೇಬೇಕು. ಇದು ಅನಿವಾರ್ಯ ಅವಶ್ಯಕ.

ಈ ವೈಚಾರಿಕ ಹಿನ್ನೆಲೆಯ ಮೇಲೆ ಹೊಸದೊಂದು ಶೈಕ್ಷಣಿಕ ನೀತಿ ಪದ್ಧತಿಯನ್ನು ರೂಪಿಸುವುದು ಅತ್ಯವಶ್ಯಕವೆಂದು ಭಾವಿಸುತ್ತೇನೆ. ○

ಹೊಸ ಪದ್ಧತಿಗೆ ಅನುವು

ಡಾ|| ಸರೋಜಿನಿ ಶಿಂತ್ರಿ
ಪ್ರಾಧ್ಯಾಪಕಿ, ಕರ್ನಾಟಕ ವಿಶ್ವವಿದ್ಯಾಲಯ



ಪ್ರಖ್ಯಾತ ಆಂಗ್ಲ ಭಾಷೆಯ ಕವಿ ಟೆನಿಸನನು ತನ್ನ ಒಂದು ಕಾವ್ಯದಲ್ಲಿ "ಓಲ್ಡ್ ಆರ್ಡರ್ ಚೇಂಜ್‌ಥ್ ಯೀಲ್ಡಿಂಗ್ ಪ್ಲೇಸ್ ಟು ನ್ಯೂ ಲೆಸ್ಟ್ ಒನ್ ಗುಡ್ ಕಸ್ಟಮ್ ಶುಡ್ ಕರಪ್ಟ್ ದಿ ವರ್ಲ್ಡ್" ಎಂದು ಹೇಳಿದ್ದಾನೆ. ಇದರ ಅರ್ಥಾಂಶ ಇಷ್ಟೇ: ಯಾವುದೇ ಒಂದು ಪದ್ಧತಿ ಎಷ್ಟೇ ಉತ್ಕೃಷ್ಟವಾಗಿದ್ದರೂ ಕಾಲಾಂತರದಲ್ಲಿ ಅದು ಹೊಸ ಪದ್ಧತಿಗೆ ಅನುವು ಮಾಡಿಕೊಡದಿದ್ದ ಪಕ್ಷದಲ್ಲಿ ಅದರಿಂದ ಕೆಡಕು ಸಂಭವಿಸಬಹುದಾಗಿದೆ. ಈ ಮಾತು ಎಲ್ಲಕ್ಕೂ ಮಿಗಿಲಾಗಿ ಶಿಕ್ಷಣ ಪದ್ಧತಿಗೆ ಅನ್ವಯಿಸುತ್ತದೆಂದು ಹೇಳಬಹುದು. ನಮ್ಮ ದೇಶದಲ್ಲಿ ಶಿಕ್ಷಣ ಪದ್ಧತಿ ಹೇಗಿರಬೇಕು ಎಂಬ ವಿಷಯದಲ್ಲಿ ಚರ್ಚೆ ಪ್ರಾರಂಭವಾದದ್ದು ರಾಜಾರಾಮ ಮೋಹನರಾಯರು ಭಾರತೀಯರಿಗೆ ಇಂಗ್ಲೀಷ್ ಶಿಕ್ಷಣ ಕೊಡುವ ಅವಶ್ಯಕತೆಯನ್ನು ಕುರಿತು ಆಗಿನ ಗವರ್ನರ್ ಜನರಲ್‌ರಿಗೆ 1823 ರಲ್ಲಿ ಪತ್ರವನ್ನು ಬರೆದ ನಂತರ. ಸರಕಾರವು ಅವರ ಬೇಡಿಕೆ

ಯನ್ನು ಗಮನದಲ್ಲಿರಿಸಿಕೊಂಡು ಶಿಕ್ಷಣ ಪದ್ಧತಿಯ ರೂಪರೇಷೆಗಳನ್ನು ಹಾಕಲು ಮೆಕಾಲೆಯವರನ್ನು ಕೇಳಿಕೊಂಡಿತು. ಮೆಕಾಲೆಯವರು ದೀರ್ಘವಾಗಿ ಆಲೋಚಿಸಿ "ಸೇವೆ ಸಲ್ಲಿಸುವ ಕಾರಕೂನ"ರನ್ನು ಒದಗಿಸುವ ಶಿಕ್ಷಣ ಪದ್ಧತಿಯ ಮೇಲಿನ 'ಮಿನಿಟ್'ನ್ನು ಲಾರ್ಡ್ ಬೆಂಟಿಂಕರಿಗೆ ಅರ್ಪಿಸುವದರ ಜೊತೆಗೆ, ಅದನ್ನು ಸ್ವೀಕರಿಸದಿದ್ದರೆ ತಾವು ರಾಜೀನಾಮೆಯನ್ನು ಕೊಡುವುದಾಗಿಯೂ ಬೆದರಿಕೆಯನ್ನು ಹಾಕಿದರು.

ಆ ಪದ್ಧತಿ ಜಾರಿಗೆ ಬಂದಿತು. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಎಲ್ಲ ಮುಖಂಡರೂ ಈ ಪದ್ಧತಿಯ ಪ್ರಕಾರ ಶಿಕ್ಷಣವನ್ನು ಪಡೆದವರೇ. ಅವರೇನು ಸಾಮಾನ್ಯರೇ? ಆದರೂ ಆ ಶಿಕ್ಷಣ ಪದ್ಧತಿಯ ಕುಂದು ಕೊರತೆಗಳನ್ನು ತಿಳಿದುಕೊಳ್ಳಲು ಅವರಿಗೆ ಕಷ್ಟವಾಗಲಿಲ್ಲ. ಸ್ವತಂತ್ರ ಭಾರತಕ್ಕೆ ಅದು ಯೋಗ್ಯವಾದುದಲ್ಲವೆಂದು ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯನ್ನು ಮಾಡಲಾಯಿತು. ಮತ್ತು ನಂತರ ಬದಲಾವಣೆಗಳು ಆಗುತ್ತಲೇ ಬಂದಿವೆ.

ಬದಲಾವಣೆಯ ಆವಶ್ಯಕತೆ ಕಾಲ ಕಾಲಕ್ಕೆ ಇದೆಯೇ ಎಂಬ ಪ್ರಶ್ನೆಗೆ, ಉತ್ತರ ಆವಶ್ಯವಿದೆಯೆಂಬುದು. ಶಿಕ್ಷಣ ಪದ್ಧತಿಯು ಸಾಮಾಜಿಕ ಆವಶ್ಯಕತೆಗಳಿಗೆ ಅನುಗುಣವಾಗಿರಬೇಕಾಗುತ್ತದೆ. ಸಾಮಾಜಿಕ ಪರಿಸ್ಥಿತಿಯಲ್ಲಿ ಕಾಲ ಕಾಲಕ್ಕೆ ಬದಲಾವ
ಗಳು ಆಗುತ್ತಿರುವದರಿಂದ, ಶಿಕ್ಷಣ ಪದ್ಧ
ಯಲ್ಲಿಯೂ ಪರಿವರ್ತನೆ ಅವಶ್ಯಕವಾಗಿರ
ತ್ತದೆ. ಶಿಕ್ಷಣ ಪದ್ಧತಿಯಲ್ಲಿ ಬೌದ್ಧಿಕ ಬೆ
ವಣಿಗೆ ಮತ್ತು ವಿಕಾಸಕ್ಕೆ ಮಹತ್ವವಿ
ಬೇಕಷ್ಟೇ? ಅವುಗಳಿಗೆ ವಿಜ್ಞಾನದಲ್ಲಿ ಆಗು
ತ್ತಿರುವ ಅನೇಕ ಸಂಶೋಧನೆಗಳ ಉ
ಯೋಗವನ್ನು ತೆಗೆದುಕೊಳ್ಳುವದು ಅವಶ್
ವಿದೆ.

ಶಿಕ್ಷಣ ಪದ್ಧತಿ ಒಂದು ಹರಿಯುವ
ಪ್ರವಾಹದಂತಿರಬೇಕು, ಒಂದು ಜೀವಂ
ಕ್ರಿಯೆ ಆಗಿರಬೇಕು. ಅದರಲ್ಲಿ ಸಮಾಜ
ದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ
ಸ್ಪಂದಿಸುವ ಶಕ್ತಿ ಇರಬೇಕು. ಒಂದು
ಕಾಲಕ್ಕೆ ಅಸಾಧಾರಣವೆನಿಸಿದ ವಿದ್ವನ್ಮಣಿ
ಗಳನ್ನು ಕೊಟ್ಟ ಪದ್ಧತಿ ಮತ್ತೊಂದು
ಕಾಲಕ್ಕೆ ಆಗಿನ ಬೇಕು–ಬೇಡಗಳಿಗೆ
ಬದಲಾಯಿಸದಿದ್ದರೆ ದೋಷಯುಕ್ತವೆನಿ
ಸುವದು. ಬದಲಾವಣೆ ನಿಸರ್ಗ
ನಿಯಮ. ○


ತರಬೇತಿ

ನೂರು ವರುಷಗಳ ಹಿಂದೆ
ಹಾಕಿದರು ಪಾಯ,
ಅದೇ ॥ 'ತರಬೇತಿ'ಯೇ ಈಗ
ಬೇರಿಲ್ಲ ಉಪಾಯ !
ಕಾಲೇಜು ಶಿಕ್ಷಕರು ತರಬೇತಿ
ಹೊರಗಂತೆ,
ವಾರ್ಸಿಟಿ ಅಧ್ಯಾಪಕರು ಅದಕ್ಕೂ
ಮೇಲಂತೆ

—ಸೀತಾರಾಮ ಪುರಾಣಿಕ

ವಿಶ್ವ ಭ್ರಾತೃತ್ವ ಬೆಳೆಸುವ ಪಾಠ ಬೇಕು

ಸದಾಶಿವ ಒಡೆಯರ
(ಮಾಜಿ ಕುಲಪತಿ ಕರ್ನಾಟಕ ವಿಶ್ವವಿದ್ಯಾಲಯ)



೧೯ನೇ ಶತಮಾನದ ಪೂರ್ವಾರ್ಧದಲ್ಲಿ ಬ್ರಿಟಿಶರ ಆಡಳಿತದಲ್ಲಿ ಭಾರತೀಯ ಶಿಕ್ಷಣ ಒಂದು ನಿರ್ದಿಷ್ಟ ರೂಪ ಪಡೆಯಿತು. ಲಾರ್ಡ್ ಬೆಂಟಿಂಕ್ ಹಾಗೂ ಮೆಕಾಲೆಯವರಂಥ ಬ್ರಿಟಿಷ್ ಅಧಿಕಾರಿಗಳ ಹಾಗೂ ರಾಜಾರಾಮ ಮೋಹನ್ ರಾಯರಂಥ ಪ್ರಗತಿಪರ ಮುಖಂಡರ ಪ್ರಭಾವದಿಂದ ಭಾರತೀಯ ಶಿಕ್ಷಣದಲ್ಲಿ ಅಳವಡಿಸಲ್ಪಟ್ಟ ಎರಡು ಮಹತ್ವದ ಅಂಶಗಳೆಂದರೆ, ಇಂಗ್ಲೀಷ್ ಭಾಷೆಯ ಜ್ಞಾನ, ಹಾಗೂ ಅದರ ಮುಖಾಂತರ ಬಂದ ಹೊಸ ವಿಷಯಗಳ, ಅದರಲ್ಲಿಯೂ ವಿಜ್ಞಾನದ ಅಭ್ಯಾಸ. ಇದರಿಂದ ಭಾರತೀಯ ಶಿಕ್ಷಣಕ್ಕೆ ಹೊಸ ತಿರುವು ಹಾಗೂ ಚಾಲನೆ ದೊರೆತು, ಅದರಿಂದ ಅನೇಕ ಭಾರತೀಯ ಮೇಧಾವಿಗಳು, ವಿದ್ವನ್ಮಣಿಗಳೂ ಹೊರಬಂದರು.

ಹೀಗೆ ರೂಪಿತವಾದ ಶಿಕ್ಷಣ ನೀತಿ ಹಾಗೂ ಪದ್ಧತಿಗಳು ಆಯಾ ಕಾಲದ ಅವಶ್ಯಕತೆಗಳ ಹಿನ್ನೆಲೆಯಲ್ಲಿ ಕಾಲಾನುಕಾಲಕ್ಕೆ ಮಾರ್ಪಡುತ್ತ ನಡೆದವು. ಅದರ ದೀರ್ಘ ಇತಿಹಾಸದಲ್ಲಿ ಬ್ರಿಟಿಷ್ ಕಾಲದಲ್ಲಿಯೂ ಅನೇಕ ಸಮಿತಿಗಳೂ ನೇಮಕಗೊಂಡು ಅವುಗಳ ಶಿಫಾರಸ್ಸುಗಳನ್ವಯ ಸುಧಾರಣೆಗಳು, ಹೊಸ ವಿಷಯಗಳ ಸೇರ್ಪಡೆ ಮಾರ್ಪಾಡುಗಳೂ ಆಗುತ್ತ ಬಂದವು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಧಾಕೃಷ್ಣನ್ ಕಮಿಶನ್ (1948) ಮುದಲಿಯಾರ್ ಕಮಿಶನ್ (1952) ಕೊಠಾರಿ ಕಮೀಶನ್ (1964) ಇವುಗಳು ಕಾಲ ಕಾಲಕ್ಕೆ ಮಾಡಿದ ಸೂಚನೆಗಳನ್ನು ಸರಕಾರ ಸಾಧ್ಯವಾದಷ್ಟು ಮಟ್ಟಿಗೆ ಕಾರ್ಯರೂಪದಲ್ಲಿ ತಂದಿದೆ. ಈ ಶಿಕ್ಷಣ ಪದ್ಧತಿಯ ಮಹತ್ವದ ಎರಡು ಅಂಶಗಳೆಂದರೆ (1) ಇಂಗ್ಲೀಷ್ ಭಾಷಾ ಜ್ಞಾನ ಹಾಗೂ (2) ಅದರಿಂದ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳಲ್ಲಿ ಗತಿ ಹಾಗೂ ಆಸಕ್ತಿ. ಇಂಗ್ಲೀಷು ಭಾಷೆಯ ಜ್ಞಾನ ಪಾಶ್ಚಿ



ನಿರುದ್ಯೋಗಿ

ಕಣ್ಣು ಮುಚ್ಚಿದರೆ ಸಾಕು
ಬಣ್ಣ ಬಣ್ಣದ ಲೋಕ
ತಾನೇ ತಾನಾಗಿ ತೆರೆದುಕೊಳ್ಳುತ್ತದೆ
ತಡವರಿಸಿಕೊಂಡು
ಉರುಳುವ ಚಕ್ರದ ಮೇಲೊಂದು
ರಥ, ರಥದೊಳಗೊಬ್ಬ
ರಾಜಕುಮಾರನಾಗಿ,
ಕೀಲುಗುದುರೆಯ ಹೂಡಿ
ಸವಾರಿ ಮಾಡುತ್ತೇನೆ
ಏಳು ಸಮುದ್ರದಾಚೆ
ಏಳು ಪರ್ವತದಾಟ
ಏಳು ಋಷಿಗಳ 'ವರ' ಪಡೆದು
ರಾಕ್ಷಸನ ಅರಮನೆಯಲ್ಲಿ
ಸೆರೆಯಾಗಿದ್ದ ರಾಜಕುಮಾರಿಯ
ಬಿಡಿಸಲು ಹೋಗಿ
ನಾನೇ ಅವಳಲ್ಲಿ ಸೆರೆಯಾಗುತ್ತೇನೆ.
ಮೇಯಲು ಹೋಗಿದ್ದ ರಾಕ್ಷಸ
ನರವಾಸನೆ ಹಿಡಿದು
ಭೋರ್ಗರೆದು ಬರುವಾಗ
ಅವಳು ನನ್ನ
'ಹಲ್ಲಿ'ಯ ಮಾಡಿ
ಗೋಡೆಗೊರೆಯುತ್ತಾಳೆ.
ಕೆರಳಿದ ರಕ್ಕಸನಿಗೆ
ಮರುಳುಮಾಡಿ
ವಿಷವಿಟ್ಟು ಕೊಲ್ಲುತ್ತಾಳೆ.
ಮತ್ತೆ ಬಂಗಾರದ ರಥಕ್ಕೆ
ಕೀಲುಗುದುರೆ ಹೂಡಿ
ರಾಜ್ಯಕ್ಕೆ ಹಿಂದಿರುಗುವಾಗ
ರಥದ ಕೀಲು ತಪ್ಪಿ
ಏಳು ಸಮುದ್ರದ ತಳ ಸೇರುತ್ತೇವೆ.
ಕಡಲ ಕತ್ತಲೆಯಲ್ಲಿ
ಉಸಿರುಕಟ್ಟಿ ಕಣ್ತೆರೆದಾಗ
ವಾಸ್ತವದ ಕಾಗೆ ಕುಕ್ಕಿ
ನೆತ್ತಿಯೆಲ್ಲಾ ರಕ್ತ.
ರಥ, ಕುದುರೆ, ರಾಜಕುಮಾರಿ,
ಸಾಮ್ರಾಜ್ಯವೆಲ್ಲಾ
ಮುಳುಗಿ ಹೋಗಿ ನಾ
ನಿರುದ್ಯೋಗಿ ಎಂಬುದೊಂದೇ ನಿಜವಾಗಿ
ಮುಸ್ಸಂಜೆ ಮುಳುಗುವ
ಸೂರ್ಯನನ್ನು ಹಿಡಿದು ನಿಲ್ಲಿಸಲು
ಯತ್ನಿಸುತ್ತೇನೆ.
ಕಾರಣ, ನಾನಿನ್ನೂ ಬೆಳಕನ್ನೇ ಕಂಡಿಲ್ಲ,
ಹಗಲು-ಗನಸನ್ನು ನನಸಾಗಿಸಿಕೊಂಡಿಲ್ಲ
ಇಂದು ಮುಳುಗಿದ ಸೂರ್ಯ
ನಾಳೆ ಹುಟ್ಟುವನೆಂಬ
ಭರವಸೆ ಇಲ್ಲ.



–ಸುಕನ್ಯಾಮಾರುತಿ

ಶ್ಚಾತ್ಯ ಸಂಸ್ಕೃತಿಗಳ ಉದಾತ್ತ ವಿಚಾರಗಳ ಸಂಸ್ಕಾರವನ್ನಿತ್ತಿತಲ್ಲದೆ, ಅವರನ್ನು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪ್ರೇರೇಪಿಸಿತು. ವಿಜ್ಞಾನದ ಅಭ್ಯಾಸ ಭಾರತೀಯರಿಗೆ ಪ್ರಪಂಚದ ಪ್ರಗತಿಯ ಮುಖ್ಯ ಪ್ರವಾಹದೊಂದಿಗೆ ಸೇರಿಕೊಳ್ಳಲು ನೆರವಾಯಿತು. ಹೀಗೆ ಇವೆರಡೂ ಭಾರತದ ಪ್ರಗತಿಗೆ ಬಹುದೊಡ್ಡ ವರದಾನಗಳಾಗಿ ಪರಿಣಮಿಸಿವೆ. ಇವುಗಳನ್ನು ಉಪೇಕ್ಷಿಸುವದು ಆತ್ಮ-ಘಾತಕವಾದದ್ದು. ಅಸಂಖ್ಯಾತ ವಿದ್ವನ್ಮಣಿಗಳನ್ನು ಪ್ರಪಂಚಕ್ಕೆ ಕೊಡಮಾಡಿದ ಶಿಕ್ಷಣ ದೋಷಯುಕ್ತವಾಗಿದೆಯೆಂದು ಬಗೆಯಲಾಗದು. ಆದರೆ ಕಾಲದ ಬದಲಾವಣೆಯೊಂದಿಗೆ ಅವಶ್ಯವಾದ ಹೊಸವಿಷಯಗಳ ಸೇರ್ಪಡೆ, ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾಗುವದು. ತಾಂತ್ರಿಕ ಜ್ಞಾನದ ಅದ್ಭುತ ಪ್ರಗತಿಗನುಗುಣವಾಗಿ ಅವಶ್ಯಕವಾದ ನೂತನ ಕಂಪ್ಯೂಟರ್, ರುಬೋಟಿಕ್ಸ್ ಇತ್ಯಾದಿಗಳ ಅಭ್ಯಾಸಕ್ಕೆ ಆದ್ಯತೆ, ಶಿಕ್ಷಣ ಕ್ರಮದಲ್ಲಿ ರೇಡಿಯೋ, ಫಿಲ್ಮ ಹಾಗೂ ಟೆಲಿವಿಜನ್‌ಗಳ ಬಳಕೆಗಳನ್ನು ಅಳವಡಿಸಬೇಕು. ಇದರೊಂದಿಗೆ ತೀವ್ರ ವಿಶೇಷ ಜ್ಞಾನದ ಹುಚ್ಚು (ಓವರ್-ಸ್ಪೆಶಲೈಜೇಶನ್) ಆಧುನಿಕ ಜನಾಂಗದ ನೀತಿಹೀನತೆ, ದೇಶಾಭಿಮಾನ ಕೊರತೆಯನ್ನು ಸರಿಪಡಿಸುವ ಸಮಗ್ರ ದೃಷ್ಟಿ ಮತ್ತು ವಿಶ್ವಭ್ರಾತೃತ್ವಗಳನ್ನು ಕುದುರಿಸುವ ಪಾಠಕ್ರಮ ಅಳವಡಿಸಬೇಕು. ಇಂಥ ಬದಲಾವಣೆ ಹಾಗೂ ಹೊಸವಿಷಯ ಸೇರ್ಪಡೆಯಿಂದ, ಸಮಾಜ ಹಾಗೂ ನಾಡಿನ ಕಲ್ಯಾಣಕ್ಕೆ ಈ ಶಿಕ್ಷಣ ಪದ್ಧತಿಯನ್ನು ಅಣಿಗೊಳಿಸಲು ಸಾಧ್ಯ. ○

ಉತ್ತಮ ಶಿಕ್ಷಣ

ಕಣ ಕಣ ಕೂಡಿದರೆ ರಾಶಿ,
ಕ್ಷಣ ಕ್ಷಣ. ಓದಿದರೆ ವಾಸಿ !
ಓದಿನ ಬಳಕೆಯೇ ಶಿಕ್ಷಣ, ಲಕ್ಷಣ.
ಮಾನವನನ್ನಾಗಿಸುವದೇ ಉತ್ತಮ
ಶಿಕ್ಷಣ ||೩||

—ಸೀತಾರಾಮ ಪುರಾಣಿಕ

ಡಾ|| ಶಂಕರನಾರಾಯಣ
ಉಪಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ

'ಬೋಧನಾ ವಿಧಾನದ ಬಗ್ಗೆ ತಿಳುವಳಿಕೆ'



ಪ್ರಾಥಮಿಕ, ಮಾಧ್ಯಮಿಕ ಹಾಗೂ ಪಿ. ಎಚ್. ಸಿ. ಮಟ್ಟದವರೆಗೆ ಮಾತೃ ಭಾಷೆ ಅಥವಾ ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾಗಿರಬೇಕು. ಅದು ಉತ್ತಮ ವಾದುದು. ಆದರೆ 5ನೇ ವರ್ಗದಿಂದ ಇಂಗ್ಲೀಷ ಭಾಷೆಯ ಕಲಿಕೆ ಪ್ರಾರಂಭ ವಾಗುತ್ತಿದ್ದರೆ, ಅದು ಸರಿಯಾದ ಕ್ರಮ ವೆಂದೇ ಹೇಳಬಹುದು. ಕಾಲೇಜು ಮಟ್ಟಿಗೆ ಹೇಳುವುದಾದರೆ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮಗಳೆರಡೂ ಇರ ಬೇಕು. ಆದರೆ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳ ಕೊರತೆ ತೋರದಷ್ಟು ಕನ್ನಡ ದಲ್ಲಿ ಶಾಸ್ತ್ರೀಯ ಗ್ರಂಥಗಳು ರಚಿತವಾಗ ಬೇಕು. ತಪ್ಪು ಭಾಷಾಂತರ ಮಾಡಿದ ಕನ್ನಡ ಪುಸ್ತಕಗಳನ್ನು ಓದುವುದಕ್ಕಿಂತ ಮೂಲದಲ್ಲಿರುವ ಇಂಗ್ಲೀಷ್ ಪುಸ್ತಕ ಗಳನ್ನು ಕಷ್ಟಪಟ್ಟು ಓದಿ ಅರ್ಥಮಾಡಿ ಕೊಳ್ಳಬೇಕು. ಸ್ನಾತಕೋತ್ತರ ಮಟ್ಟ ದಲ್ಲಿಯೂ ವಿಜ್ಞಾನ ಮತ್ತು ಇಂಜಿನಿಯ ರಿಂಗ್ ಹೊರತುಪಡಿಸಿ ಇನ್ನಿತರ ವಿಷಯ ಗಳು ಬೋಧನೆಯಲ್ಲಿ ಕನ್ನಡ ಮಾಧ್ಯಮ ವಿದ್ದರೆ ಏನೇನೂ ಆಕ್ಷೇಪಣೆಯಿಲ್ಲ. ತಾತ್ವಿಕವಾಗಿ ಕನ್ನಡ ಮಾಧ್ಯಮಕ್ಕೆ ವಿರೋಧವಿಲ್ಲದಿದ್ದರೂ, ಸಾಕಷ್ಟು ಪೂರ್ವ ತಯಾರಿ ಮಾಡಿಕೊಂಡು ಕನ್ನಡ ಮಾಧ್ಯಮವನ್ನು ಸ್ನಾತಕೋತ್ತರ ಮಟ್ಟಕ್ಕೂ ತರಬಹುದು. ಕನ್ನಡ ಮಾಧ್ಯಮದಲ್ಲಿ ಓದಿದ್ದರೆ ಉದ್ಯೋಗಾವ ಕಾಶಗಳು ಸೀಮಿತವಾಗುತ್ತವೆ ಎಂಬ ಬಗ್ಗೆ ವಿದ್ಯಾರ್ಥಿಗಳಿಗೆ ಭಯವಿರುವ ಅಂಶವನ್ನು ಅಲ್ಲಗಳೆಯುವಂತಿಲ್ಲ. ಆದರೆ ಈ ಸಮಸ್ಯೆ ಹಾಗೂ ಭಯ ತೊಲಗುವಂಥ ವ್ಯವಸ್ಥೆ ನಿರ್ಮಾಣವಾಗಬೇಕು.

ಶಿಕ್ಷಕರಿಗೆ ತರಬೇತಿ ಮುಖ್ಯವಾದು ದಾದರೂ ಕಾಲೇಜು ಮತ್ತು ಸ್ನಾತಕೋ ತ್ತರ ಶಿಕ್ಷಕರಿಗೆ ಶಾಲಾ ಶಿಕ್ಷಕರಿಗೆ ಇರು ವಷ್ಟು ತರಬೇತಿಯ ಅವಶ್ಯಕತೆಯಿಲ್ಲ. ಈಗ ಯು. ಜಿ. ಸಿ. ನಡೆಸುತ್ತಿರುವ ಓರಿಯೆಂಟೇಷನ್ ಕೋರ್ಸ್ ಇದ್ದರೆ ಸಾಕು. ಬೋಧನಾ ವಿಧಾನದ ಬಗ್ಗೆ ತಿಳಿವಳಿಕೆ ಮಾಡಿಕೊಟ್ಟರೆ ಉತ್ತಮ. ಇತ್ತೀಚೆಗೆ ಎಂ.ಫಿಲ್ ಮಾಡಿಕೊಳ್ಳುವವರಿಗೆ ಬೋಧನಾ ವಿಧಾನದ ಬಗ್ಗೆ ತಿಳಿವಳಿಕೆ ಮಾಡಿಕೊಡಬೇಕೆಂಬ ವಿಚಾರವಿದೆ.

ಪರೀಕ್ಷಾ ಪದ್ಧತಿಯಲ್ಲಿರುವ ಈಗಿನ ಅನೇಕ ದೋಷಗಳನ್ನು ತೊಡೆದುಹಾಕಲು ಶಿಕ್ಷಕ ಹಾಗೂ ವಿದ್ಯಾರ್ಥಿಗಳ ಸಂಬಂಧ ವನ್ನು ಬಲಪಡಿಸುವುದು, ಪಬ್ಲಿಕ್ ಪರೀಕ್ಷೆ ಗಳ ಸಂಖ್ಯೆಯನ್ನು ಕಡಿಮೆ ಮಾಡು ವುದು ಮತ್ತು ವಿದ್ಯಾರ್ಥಿಗಳ ಪ್ರಗತಿ ಯನ್ನು ಸತತವಾಗಿ ಪರೀಕ್ಷಿಸುತ್ತಹೋಗು ವುದು, ಮುಂತಾದ ಕ್ರಮಗಳನ್ನು ಈಗ ಕೈಗೊಂಡಿದ್ದು, ಹಂತಹಂತವಾಗಿ ಇನ್ನಿತರ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಉದಾಹರಣೆಗಾಗಿ–ಸಾಮೂಹಿಕ ಮೌಲ್ಯ ಮಾಪನ ಮತ್ತು ವಿಭಾಗೀಯ ಮೌಲ್ಯ ಮಾಪನ ಅಂದರೆ ಒಂದೇ ಉತ್ತರ ಪತ್ರಿಕೆ ಯನ್ನು (ಒಬ್ಬೊಬ್ಬ ಒಂದೊಂದು ಪ್ರಶ್ನೆ ಯಂತೆ) 8–10 ಜನರು ಮೌಲ್ಯಮಾಪನ ಮಾಡುವುದು ಅಂದರೆ ಮೌಲ್ಯಮಾಪನ ದಲ್ಲಿಯ ವ್ಯಕ್ತಿ ನಿಷ್ಠತೆ ಸಬ್ಜೆಕ್ಟಿವ್‌ನೆಸ್ ಹಾಗೂ ಅನಾಸ್ಥೆಯ ದೋಷಗಳನ್ನು ಹೋಗಲಾಡಿಸುವುದು ಸಾಧ್ಯವಾಗುತ್ತದೆ. ಈ ವಿಧಾನದ ಬಗ್ಗೆ ಇನ್ನೂ ಚರ್ಚಿ ಒಂದು ಸಮಗ್ರ ಯೋಜನೆಯನ್ನು ಕಂಡು ಕೊಳ್ಳಬೇಕಾಗಿದೆ.

ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗ ದರ್ಶನ ಮಾಡಿದರೆ ಶಿಕ್ಷಣದಲ್ಲಿ ಸುಧಾರಣೆ ಯಾಗಬಹುದು. ಆದರೆ ಡಿಗ್ರಿಗಳ ಮೇಲೆ ಸಾಕಷ್ಟು ವ್ಯಾಮೋಹವಿರುವದರಿಂದ ಇದನ್ನು ಪರಿಣಾಮಕಾರಿಯಾಗಿ ಜಾರಿ ಗೊಳಿಸುವುದು ಸಾಧ್ಯವಾಗುತ್ತಿಲ್ಲ. ಅದು ಈಗಿರುವ ಸಿಂಗಲ್ ಎಜುಕೇಷನಲ್ ಪ್ಯಾಟ್ರನ್ ತೆಗೆದುಹಾಕಿ ಆಯಾ ಪ್ರದೇ ಶಕ್ಕೆ ಹೊಂದುವಂಥ ಅಥವಾ ಸೆವೆರಲ್ ಸೆಟ್ಸ್ ಎಜುಕೇಷನಲ್ ಪ್ಯಾಟ್ರನ್ ಗಳನ್ನು ಆಲ್ಟರ್ನೇಟಿವ್‌ಗಳೆಂದು ರೂಪಿ ಯಕ್ತ ತರಬೇಕು- ಒಂದೇ ಕೋರ್ಸ್‌ನಲ್ಲಿ ಅನೇಕ ಪ್ರೊಫೆಷನಲ್ ಓರಿಯೆಂಟೆಡ್ ಬೇರೆ ಬೇರೆ ಡೈವರ್ಸಿಫಿಕೇಷನ್ ವಿಧಾನ ಗಳನ್ನು ಅಳವಡಿಸಿಕೊಳ್ಳಬೇಕು.

ಉದಾ : ರಸಾಯನ ಶಾಸ್ತ್ರದಲ್ಲಿಯೇ ಅಗ್ರಿಕಲ್ಚರಲ್ ಕೆಮಿಸ್ಟ್ರಿ, ಇಂಡಸ್ಟ್ರಿಯಲ್ ಡ್ ಹೀಗೆ ಅನೇಕ ವಿಧಾನಗಳನ್ನು ಅಳವಡಿಸಿ ಕೊಳ್ಳಬೇಕು. ಬಿ.ಎಸ್‌ಸಿ (ಎಲೆಕ್ಟ್ರಾನಿಕ್ಸ್) ಬಿ.ಎಸ್‌ಸಿ (ಕಂಪ್ಯೂಟರ್) ಯಂತಹ ಕೋರ್ಸುಗಳನ್ನು ಪ್ಯಾರಾ - ಕ್ಲಿನಿಕಲ್ ವಿಷಯಗಳಾದಂಥ ಮೆಡಿಕಲ್ ಟೆಕ್ನಾಲಜಿ ಫಾರ್ಮಸಿಗಳಂಥ ಕೋರ್ಸ್‌ಗಳನ್ನು ಆರಂ ಭಿಸಬೇಕು. ಅಲ್ಲದೆ ಡಿಪ್ಲೊಮಾ ಮುಗಿ ಸಿದ ಮೇಲೆ ಬಿ- ಇ- ಕೋರ್ಸ್‌ಗೆ ಹೋಗಲು ಅನುಕೂಲ ಮಾಡಿಕೊಟ್ಟಂತೆ ಈ ಕೋರ್ಸ್‌ಗಳನ್ನು ಮುಗಿಸಿ ಎಂ. ಬಿ. ಬಿ. ಎಸ್. ಕೋರ್ಸ್‌ಗೆ ಹೋಗಲು ಅನು ಕೂಲ ಮಾಡಿಕೊಡಬೇಕು. ಇದರಿಂದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು




ಅವಕಾಶ ಸಿಗುತ್ತದೆ. ಯು. ಜಿ. ಸಿ. ಸೂಚಿಸಿದ ಇಂತಹ ಅನೇಕ ಕೋರ್ಸುಗಳನ್ನು ಜಾರಿಗೆ ತರಬೇಕು.

ರಾಷ್ಟ್ರೀಕರಣವು, ಉತ್ತಮ ಶಿಕ್ಷಣಕ್ಕೆ ಪರಿಹಾರೋಪಾಯವೇನೂ ಅಲ್ಲ. ಪ್ರಜಾಪ್ರಭುತ್ವ ದೇಶದಲ್ಲಿ ಶಿಕ್ಷಣಕ್ಕೆ ಮುಕ್ತ ಅವಕಾಶ ಇರಬೇಕು. ಸರಕಾರಿ ಮತ್ತು ಖಾಸಗಿ ಸಂಸ್ಥೆಗಳ ಶಾಲೆಗಳನ್ನು ಸ್ಪರ್ಧಾತ್ಮಕ ಮನೋಭಾವನೆಯಿಂದ ನಡೆಸಿಕೊಂಡು ಬರಬೇಕು. ಯಾವ ಶಾಲೆಗಳು ಸ್ಪರ್ಧೆಯಲ್ಲಿ ನಿಲ್ಲುವವೋ ಅವು ಬದುಕುತ್ತವೆ. ಉಳಿದವುಗಳು ಹಾಗೆಯೇ ನಶಿಸಿ ಹೋಗುತ್ತವೆ. ರಾಷ್ಟ್ರೀಕರಣ ಮಾಡುವುದರಿಂದ ಬೇಕಾದ ಪಾಸಿಟಿವ್ ರಿಸಲ್ಟ್ ಬಂದೇ ಬರುತ್ತದೆಂದೇನಿಲ್ಲ. ಉತ್ಕೃಷ್ಟತೆಯನ್ನು ಶಿಕ್ಷಣದಲ್ಲಿ ಹೊರತರಬೇಕಾದರೆ "ಸ್ಪರ್ಧಾತ್ಮಕ" ಮನೋಭಾವದ ಮೇಲೆ ಮಾತ್ರ ಶಾಲಾ-ಕಾಲೇಜುಗಳನ್ನು ನಡೆಸಿಕೊಂಡು ಬರಬೇಕು. ●

ಪರೀಕ್ಷೆಗೂ ಉದ್ಯೋಗಕ್ಕೂ ಏಕೆ ಸಂಬಂಧ?

ಡಾ|| ರಾಮಾನುಜಂ
ಐ.ಪಿ.ಎಸ್. ಅಧಿಕಾರಿ
ಮೈಸೂರು.




ಮಾಧ್ಯಮದ ಸಮಸ್ಯೆ ನಮ್ಮಲ್ಲಿ ಇನ್ನೂ ಅಪರಿಹಾರ್ಯವಾಗಿಯೇ ಉಳಿದಿರುವುದು ವಿಚಿತ್ರವೆನಿಸುತ್ತದೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಕೆಲವು ತೊಡಕುಗಳಿರುವುದೂ ವಾಸ್ತವಾಂಶ. ಹೈಸ್ಕೂಲು, ಕಾಲೇಜು ಮಟ್ಟದವರಗಷ್ಟೇ ಏಕೆ, ವಿಶ್ವವಿದ್ಯಾಲಯಮಟ್ಟದವರೆಗೂ ಕನ್ನಡ ಮಾಧ್ಯಮವೇ ಇದ್ದರೂ ತಪ್ಪೇನಿಲ್ಲ. ಏಕೆಂದರೆ ಪರಭಾಷಾ ಮಾಧ್ಯಮಕ್ಕಿಂತ ಮಾತೃಭಾಷಾ ಮಾಧ್ಯಮದಲ್ಲಿ ವಿದ್ಯಾರ್ಥಿ ತನ್ನ ವಿಚಾರಗಳನ್ನು ಹೆಚ್ಚು ಸಮರ್ಥವಾಗಿ ಅಭಿವ್ಯಕ್ತಿಸಬಲ್ಲ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳನ್ನು ಕನ್ನಡ ಮಾಧ್ಯಮದ ಮೂಲಕ ಕಲಿಯುವುದು ಅಥವಾ ಕಲಿಸುವುದು ಸುಲಭಸಾಧ್ಯವಾಗಬೇಕಾದರೆ ಅದಕ್ಕೆ ಇನ್ನೂ ಸಮಯಾವಕಾಶ ಬೇಕಾಗುತ್ತದೆ. ಇಂಗ್ಲೀಷಿನಲ್ಲಿರುವಷ್ಟು ವಿಪುಲ ಸಂಖ್ಯೆಯಲ್ಲಿ ಮತ್ತು ಉತ್ತಮ ಗುಣಮಟ್ಟದ ಆಕರಗ್ರಂಥಗಳನ್ನು ಕನ್ನಡದಲ್ಲಿಯೂ ಒದಗಿಸಬೇಕಾದುದು ನಮ್ಮ ಹೊಣೆ ಹಾಗೂ ಕರ್ತವ್ಯವಾಗುತ್ತದೆ. ಈ ಅಗತ್ಯವನ್ನು ಪೂರೈಸುವಂಥ ಪುಸ್ತಕಗಳು ಕನ್ನಡದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹೊರಬರಬೇಕು.

ಕನ್ನಡ ಮಾಧ್ಯಮ ಬೇಕು ಎಂದಾಕ್ಷಣ ನಾವು ಇಂಗ್ಲೀಷಿನ ಅಗತ್ಯವನ್ನು ಅಲ್ಲಗಳೆಯುವಂತಿಲ್ಲ. ಇಂಗ್ಲೀಷ್ ಭಾಷೆಯ ತಕ್ಕಮಟ್ಟಿನ ಜ್ಞಾನವಾದರೂ ಅಗತ್ಯವೇ. ಇಂಗ್ಲೀಷ್ ಜ್ಞಾನವಿಲ್ಲವೆಂಬ ಒಂದೇ ಕಾರಣವು ಪ್ರತಿಭಾವಂತ ಕನ್ನಡಿಗನೊಬ್ಬ ಹೊರದೇಶಗಳಲ್ಲಿ ಹೆಸರು ಗಳಿಸುವಲ್ಲಿ ಆತಂಕವಾಗಿ ಪರಿಣಮಿಸುವಂತಾಗಬಾರದು. ಭಾಷೆ ಮನುಷ್ಯನ ಪ್ರಗತಿಗೆ ಶೃಂಖಲೆಯಾಗಬಾರದು.

ಆದರೆ ಕನ್ನಡ ಮಾಧ್ಯಮವು ಆಡಳಿತದಲ್ಲಿ ಸಾಧ್ಯವಾಗಲು ಉದ್ದೇಶಪೂರ್ವಕವಾಗಿ ತರುವ ತೊಡಕುಗಳಂತೂ ಖಂಡಿತ ನಿವಾರಣಾಯೋಗ್ಯ. ಉನ್ನತ ಆಡಳಿತ ಹುದ್ದೆಗಳಲ್ಲಿರುವ ಅಧಿಕಾರಿಗಳಲ್ಲಿ ಕನ್ನಡದ ಬಗ್ಗೆ ಇನ್ನೂ ಮನೆಮಾಡಿಕೊಂಡಿರುವ ತಾತ್ಸಾರ ಮನೋಭಾವ ತೊಲಗುವಂತೆ ಮಾಡಬೇಕು ಕನ್ನಡದ ಬಗೆಗಿನ ಅವರ ಔದಾಸೀನ್ಯ ಹಾಗೇ ಮುಂದುವರಿದರೆ ಕರ್ನಾಟಕದಲ್ಲಿ ಕನ್ನಡಾಭಿಮಾನಿಗಳಿಗೆ ಮಾತ್ರ ಸ್ಥಾನ ಎಂದು ಅವರಿಗೆ ಎಚ್ಚರಿಕೆ ನೀಡಬೇಕು. ಅವರು ಇನ್ನೂ ಹಾಗೇ ವರ್ತಿಸುತ್ತಿದ್ದರೆ ಅಂಥವರು ಕರ್ನಾಟಕದಲ್ಲಿ ಇರಕೂಡದು. (ಇಂತಹ ಅಧಿಕಾರಿಗಳ ಬಗ್ಗೆ ಡಾ|| ರಾಮಾನುಜಂ ತಮ್ಮ ಕ್ರೋಧವನ್ನು ವ್ಯಕ್ತಪಡಿಸಿದರು.)

ನಮ್ಮ ಈಗಿನ ಪರೀಕ್ಷಾ ಪದ್ಧತಿ ಒಂದು ವಿಧದಲ್ಲಿ ವೈವಿಧ್ಯರಹಿತವೇ. ಹಲವು ಕಾಲದಿಂದ ಬೇರೂರಿರುವ ಪದ್ಧತಿಯಲ್ಲಿ ದಿಢೀರನೆ ಕ್ರಾಂತಿಯನ್ನುಂಟುಮಾಡುವುದೂ ಸುಲಭವೇನಲ್ಲ. ಪರೀಕ್ಷಾ ಫಲಿತಾಂಶ ಮತ್ತು ಉದ್ಯೋಗ ಇವುಗಳಲ್ಲಿರುವ ಸಂಬಂಧವನ್ನು ತೆಗೆದುಹಾಕುವುದು ಈ ಸಮಸ್ಯೆಗಿರುವ ಪರಿಹಾರಗಳಲ್ಲೊಂದಾಗಬಲ್ಲದು. (ಈ ಬಗ್ಗೆ ಪ್ರಸ್ತಾಪಿಸುವಾಗ ಡಾ|| ರಾಮಾನುಜಂ ನಮ್ಮ ಈಗಿನ ಪರೀಕ್ಷಾ ಪದ್ಧತಿಯಲ್ಲಿ ತಮಗೆ ತೋರಿಬಂದ ದೋಷಗಳನ್ನು ವಿವರಿಸಿದರು. ಉತ್ತರ ಪತ್ರಿಕೆಗಳ ಬದಲಾವಣೆ, ಅಂಕಪಟ್ಟಿಗಳಲ್ಲಿಯ ತಪ್ಪುಗಳು, ಮೌಲ್ಯಮಾಪನ ರೀತಿ, ಒಂದೊಂದು ಪರೀಕ್ಷಾ ಕೇಂದ್ರದಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವುದು, ಪರೀಕ್ಷೆ ನಡೆಸುವಲ್ಲಿ ತೋರಿಬರುವ ಅನಾಸ್ಥೆ–ಇಂಥ ದೋಷಗಳ ನಿವಾರಣೆಗೆ ಪರಿಹಾರ ಕಂಡುಕೊಳ್ಳಬೇಕಾದುದು ಮೂಲಭೂತ ಅಗತ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.) ಆಯಾ ಉದ್ಯೋಗಕ್ಕೆ ಅನುಗುಣವಾದ ಅಪ್ ಟು ಡೇಟ್ ಪರೀಕ್ಷೆ ನಡೆಸಿ ಅದರಲ್ಲಿ ಉತ್ತೀರ್ಣನಾದವನನ್ನು ಕೆಲಸಕ್ಕೆ ಆಯ್ದುಕೊಳ್ಳಬಹುದು.

ಪುಟ 296ಕ್ಕೆ



ಯಳವಂತಿ

★ ಚಂದ್ರಕಾಂತ ಕುಸನೂರ

ಯಳವಂತಿಗೊಂದು ಶಾಲೆ ಬೇಕೆಂದರು. ಯಾರು? ಯಾರಿಗೆ? ಆದರೆ ಶಾಲೆ ಎಂದರೆ ಹೊಸದೊಂದು ಕಂಟಕ ಎಂಬುದು ಯಳವಂತಿಗರ ಗಟ್ಟಿ ಮತ. ಆದನ್ನರಿಯದೆ ಉಪಕ್ರಮ ಅನಾಹುತಕ್ಕೆ ದಾರಿ. ಗ್ರಾಮೀಣ ಜೀವನದ ಪರಿಚಯಕ್ಕೆ ಯಳವಂತಿ ಒಂದು ಬೆಳಕಿಂಡಿ.

ಸರ್ಕಾರದ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಯಳವಂತಿ ಗ್ರಾಮದ ವಿಪರೀತ ಅಭಿವೃದ್ಧಿಯಾಗಿತ್ತು. ಮೊದಲಿಗೆ ಭಯಂಕರ ಕುಗ್ರಾಮವಾಗಿದ್ದ ಈ ಯಳವಂತಿ ಗ್ರಾಮ, ಈಗ ಎಷ್ಟೊಂದು ಮುಂದೆ ಬಂದಿತ್ತೆಂದರೆ, ಮೊದಲು ಈ ಹಳ್ಳಿಯಿಂದ 'ಶಹರಕ್ಕೆ' ಬರಬೇಕಾದರೆ ಕೇವಲ ಮೂರು ಮೈಲು ನಡೆದು ಬರಬೇಕಾಗುತ್ತಿತ್ತು, ಆದರೆ, ಸರಕಾರಿ ಅಭಿಯಂತರರು ಈ ಗ್ರಾಮಕ್ಕಾಗಿಯೇ ಆ ನಿರ್ಮಿಸಿದ ರಸ್ತೆಯಿಂದಾಗಿ, 'ಶಹರ' 9 ಮೈಲು ದೂರ ಸರಿದಿತ್ತು. ಕಾಶಪ್ಪನ ಹಳ್ಳ, ಕಮಕಾನಟ್ಟಿ ದಾಟಿ, ಪಾರಪ್ಪನ ಹಳ್ಳ ಇಳಿದು ಒಂದು ಫರ್ಲಾಂಗ ಬಂದರೆ ಸಾಕು. ಒಂದು ಕಡೆಗೆ ಬಂದೇನವಾಜನ ದರ್ಗಾ ಮೇಲಿನ ಕಳಸಾ ಕಾಣುತ್ತಿತ್ತು. ಇನ್ನೊಂದು ಕಡೆಗೆ ಶರಣಬಸವೇಶ್ವರ ದೇವಾಲಯದ ಕಳಸ ಕಾಣುತ್ತಿತ್ತು. ಆದರೆ, ಈಗ, ಸುಲ್ತಾನಪುರ, ರಾಮನಗರ, ಬೈರಾಮಡಗಿ, ಹೀಂಗ ಸುತ್ತಾಡಿ ಬರಬೇಕಾಯಿತು. ಆರು ಮೈಲು ಪ್ರಗತಿಯೊಂದಿಗೆ ಮುಂದೆ ಬಂದ ಹಳ್ಳಿಯಲ್ಲಿ ವಿದ್ಯುತ್ ದೀಪಗಳೂ ಬಂದವು. ಹಳ್ಳಿಯ ತುಂಬೆಲ್ಲ, ಕಂಬಗಳು, ಅವುಗಳ ಮೇಲೆ ತಂತಿಗಳು, ಅವುಗಳಿಗೆ ನೇತಾಡುವ ಬಲ್ಬುಗಳು, ಬಂದವು. ಒಬ್ಬ ಮಾನ್ಯ ಉಪಮಂತ್ರಿಗಳ ಕರಕಮಲದಿಂದ ತಂತಿಗಳಲ್ಲಿ ವಿದ್ಯುತ ಹರಿದು, ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಿದ್ದ ಕರಂಟು, ಮತ್ತೆ ಮರಳಿ ಬರಲೇ ಇಲ್ಲ.

ಊರಲ್ಲಿ ಸಿಹಿನೀರಿನ ಬಾವಿಯೊಂದಿತ್ತು. ಅದರ ಹೆಸರು 'ರಾಯರ ಬಾವಿ' ಎಂದಿತ್ತು. ನೂರಾರು ವರ್ಷಗಳ ಹಿಂದಿದ್ದ ದಾಸನೊಬ್ಬ 'ರಾಯ' ಈ ಬಾವಿಯನ್ನು ತೋಡಿಸಿದ್ದನು. ಅಲ್ಲಿ ಹಳ್ಳಿಯ ಎಲ್ಲ ಮಂದಿ ನೀರು ತೆಗೆದುಕೊಳ್ಳುತ್ತಿದ್ದರು. ಹಳ್ಳಿಗೊಂದು ಬಾವಿ, ಕೊರಳಿಗೊಂದು ತಾಳಿ ಅಂಬೋ ಸರಕಾರದ ಘನ ನೀತಿಯಿಂದಾಗಿ, ಯಳವಂತಿಯಲ್ಲಿ ರಾಯರ ಬಾವಿ

ಕುಂಡಿಯಲ್ಲಿಯೇ ಒಂದು ಕೊಳವೆ ಬಾ[ವಿ] ತೋಡಿಸಲಾಯಿತು. 'ಭೂಮಿ ತಾಯಿ ಮೈಯಾಗ' ತೂತು ಕೊರೆದು ಪೈ[ಪ] ಇಳಿಸಿ, ಮಿಶಿನ್ ಚಾಲೂ ಮಾಡಿದ ದಿನ ಹೆಪ್ಪಿರೆಳಿನ ಗಡತರ ನೀರಿನ ಧಾರೆ ಮೇಲೆಳುತ್ತಿರುವುದನ್ನು ಕಂಡು ಊರು ಜನ ಉಜೋಲಜೋ ಎಂದು ಮೇಲಕ್ಕೆದ್ದ ಗಂ





ದಯ್ಯಾ, ನೀ ನೋಡಿದರೆ (ಬರದು)



ನಾತೆಯನ್ನು ಸ್ವಾಗತ ಮಾಡಿ [illegible] ದಿನಗಳಲ್ಲಿಯೇ [illegible] ಬಾವಿ, ಹಾಳ ಬಾವಿ ಆಗಿ [illegible]. ನಂತರ ಹೆಂಗಸರು, ಗಂಡಸರು, [illegible] ಆರು ಹರದಾರಿ ದೂರದೊಳಗಿ [illegible] ತಂದು ಕುಡಿಯಲು ಪ್ರಾರಂಭಿಸಿದರು. ಈ ನೀರಿನಿಂದ ಊರ ಜನರ ಹೊಟ್ಟೆ ಉಬ್ಬಿ, 'ನಗಾರಿ' ಆಗತೊಡಗಿ ನಾಗ, ಊರಿಗೊಂದು, ಪ್ರಾಥಮಿಕ ಆರೋಗ್ಯ ಕೇಂದ್ರ ಬಂತು. ಈ ಕೇಂದ್ರದ ಪ್ರತಾಪದಿಂದ ಇನ್ನೂತನಕಾ ಪ್ರಾಣ [illegible]ಸಿಕೊಂಡಿದ್ದ ಅನೇಕ ಮಂದಿ 'ಪದ್ಮಶ್ರೀ' ಪಡೆದರು. ಈ ಪ್ರಾಥಮಿಕ ಕೇಂದ್ರದ ಡಾಕ್ಟರ್ ಮಾಡಿಹಾಳದರ ಕೈಚಳಕದಿಂದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಅನೇಕಾನೇಕ ಪುರುಷರು ತಮ್ಮ ಪುರುಷತ್ವವನ್ನೇ ಕಳೆದುಕೊಂಡು, ದೇಶದ ಸಂತಾನ ನಿಯಂತ್ರಣದ ಪರಮ ಪವಿತ್ರ ಕಾರ್ಯಕ್ರಮಕ್ಕೆ ತಮ್ಮ ಅಮೂಲ್ಯ ಕಾಣಿಕೆಯನ್ನು ಸಲ್ಲಿಸಿದರು. ಕಾಡು ಬೆಳೆಸುವ ಕಾರ್ಯಕ್ರಮದನ್ವಯ ಸಿಕ್ಕಸಿಕ್ಕಲ್ಲಿ ಸುಬಾಬುಲ್ ಎಂಬ ಸಸಿಗಳನ್ನು ನೆಟ್ಟು, ಸಹಸ್ರಾರು ರೂಪಾಯಿ ಗುಂಡಿಗಳಲ್ಲಿ ಮುಳುಗಿಸಿ, ಊರಲ್ಲಿದ್ದ ಗಿಡಮರಗಳನ್ನೆಲ್ಲ ನೆಲಕ್ಕುರುಳಿಸಿ [illegible]ತಾರ್ಹರಾದ ಕಾಡು ಅಧಿಕಾರಿಗಳ, [illegible]ಕಾರ್ಯದಿಂದ ಯಳವಂತಿ ಗ್ರಾಮದ ಬೇವಿನ ಮರ, ಆಲದ ಮರ, ಜಾಲಿ ಮರ ಎಲ್ಲವೂ ಮಾಯವಾಗಿ ಹೋದವು.

ಅಭಿವೃದ್ಧಿ ಕಾರ್ಯಕ್ರಮಗಳಿಂದ, ಸಂಪೂರ್ಣ ತೃಪ್ತಿ ಹೊಂದಿದ್ದ ಗ್ರಾಮದ ಜನತೆ, ಇನ್ನುಮುಂದೆ ತಮ್ಮ ಗ್ರಾಮದಲ್ಲಿ ಅಭಿವೃದ್ಧಿಗೊಳಿಸುವಂತಹ ಯಾವ ವಿಷಯವೂ ಉಳಿದಿಲ್ಲವೆಂದು ಸರಕಾರಕ್ಕೆ ತಿಳಿಸಿತು. ಆದರೆ, ಸರಕಾರದ ಅಧಿಕಾರಿಗಳು ಕಾರ್ಯಕ್ರಮಗಳನ್ನು [illegible] ಜಾರಿಗೊಳಿಸುವುದು ತಮ್ಮ ಆದ್ಯ ಮತ್ತು ಪವಿತ್ರವಾದಂತಹ ಕರ್ತವ್ಯವಾಗಿದೆ ಎಂದು ಹೇಳಿ, [illegible] ಯಳವಂತಿ ಗ್ರಾಮದ ಉದ್ಧಾರಕ್ಕೆ ಸನ್ನದ್ಧ[illegible]. [illegible] ಅಧಿಕಾರಿಗಳ ಈ



"[illegible]ಗ ಅಭಾವ [illegible]
ಮುಗಿ[illegible] ಬಂದಿದ್ದಾನೆ."

ಉತ್ಸಾಹವನ್ನು ನೋಡಿ ಗ್ರಾಮಸ್ಥರು ಹಣೆಗೆ ಕೈ ಹಚ್ಚಿಕೊಂಡು, "ಬಂದಿದ್ದೆಲ್ಲ ಬರಲೀ ಸರ್ವಗುರುವಿನ ದಯೆಯಿರಲೀ" ಎಂದು ಭಜನೆ ಮಾಡುತ್ತ ಹನುಮಪ್ಪನ ಗುಡಿಯಲ್ಲಿ ಕುಳಿತುಕೊಂಡರು.

ತಿಂಗಳಿಗೊಂದು ದಿನ, ಜಿಲ್ಲಾಧಿಕಾರಿ ನೇತೃತ್ವದಲ್ಲಿ ಆ ಜಿಲ್ಲೆಯಲ್ಲಿದ್ದ ಎಲ್ಲ ಇಲಾಖೆಯಲ್ಲಿನ ಕಾರ್ಯ ಪ್ರಗತಿಯ ಆಡಾವ ತೆಗೆಯುವದೊಂದು ಸಂಪ್ರದಾಯವಿತ್ತು. ಅದರಂತೆ, ಒಂದು ದಿನ ಬೆಳಗ್ಗೆ ಹನ್ನೊಂದು ಗಂಟೆಗೆ ಎಲ್ಲ ಅಧಿಕಾರಿಗಳು ತಮ್ಮ ದಾಡಿಯ ಮೇಲೆ ಎರಡು ಸಲ ರೇಜರ್ ತಿರುಗಿಸಿಕೊಂಡು ಸಭೆಗೆ ಬಂದಿದ್ದರು.

ಚರ್ಚೆ ಇಂಗ್ಲಿಷಿನಲ್ಲಿಯೇ ನಡೆಯುವ ಪದ್ಧತಿಯಿಂದಾಗಿ, ಇಂದೂ ಸಭೆಯಲ್ಲಿ ಜಿಲ್ಲಾಧಿಕಾರಿಗಳಿಂದ ಶುರು ಮಾಡಿ, ಎಲ್ಲ ಸಣ್ಣಪುಟ್ಟ ಅಧಿಕಾರಿಗಳೂ ಇಂಗ್ಲಿಷ್‌ನಲ್ಲಿಯೇ ಚರ್ಚಿಸಿದರು. ಕನ್ನಡವೆಂಬ ರಾಜ್ಯದ ಭಾಷೆಯಲ್ಲಿ ಮಾತಾಡುವುದು ಹುಂಬತನವೆಂದು, ಪ್ರಾಮಾಣಿಕವಾಗಿ ನಂಬಿದ್ದ ಈ ಅಧಿಕಾರಿಗಳು, ಮಾತಾಡುವ ಇಂಗ್ಲಿಷ್ ಅದ್ಭುತ ರಮ್ಯವಾಗಿತ್ತು. ಪ್ರತಿಯೊಬ್ಬ ಅಧಿಕಾರಿಯ ಇಂಗ್ಲಿಷ್ ಭಾಷೆ ಪರಿಜ್ಞಾನ ಅತಿ ಉಚ್ಚ[illegible] ಈ ಅಧಿಕಾರಿಗಳ ಇಂಗ್ಲಿಷ್ ಬಗ್ಗೆ ಬರೆದರೆ, ಬೇರೆಯೊಂದು ಪ್ರಬಂಧವನ್ನೇ ಬರೆಯಬಹುದು. ಆ ವಿಷಯ ಈಗ ಬೇಡ.

ಪ್ರಸ್ತುತ ಸಭೆಯಲ್ಲಿ ಎಲ್ಲ ಅಧಿಕಾರಿಗಳು, ತಮ್ಮ ಖಾತೆಯ ಪ್ರಕಾರ ಮೂವತ್ತು ದಿನಗಳಲ್ಲಿ ತಾವು ಸಾಧಿಸಿದ ಪ್ರಗತಿ ಬಗ್ಗೆ ವರದಿಯನ್ನು ಸಲ್ಲಿಸಿದರು. ಚರ್ಚೆಯ ಸಂದರ್ಭದಲ್ಲಿ ಯಳವಂತಿ ಗ್ರಾಮದಲ್ಲಿ ಇನ್ನೂತನಕ ಒಂದು 'ಶಾಲೆ' ಇಲ್ಲೆಂದು ಗೊತ್ತಾಯಿತು. ಇಡೀ ಬದುಕಿಗೆ, ಮೂಲಭೂತವಾದಂತಹ 'ಶಿಕ್ಷಣ'ವೇ ಯಳವಂತಿ ಗ್ರಾಮದಲ್ಲಿ ಇಲ್ಲದಂತಿರುವದು ಎಲ್ಲರನ್ನು ಆಶ್ಚರ್ಯದ ಮಹಾಸಾಗರದಲ್ಲಿ ಮುಳುಗಿಸಿತು. ಏನಿಲ್ಲದಿದ್ದರೂ, ಪ್ರತಿಯೊಂದು ಹಳ್ಳಿಯಲ್ಲಿ ಒಂದು ಶಾಲೆ ಇರುವ ಈ ಕಾಲದಲ್ಲಿ ಯಳವಂತಿಯಂತಹ ಗ್ರಾಮದಲ್ಲಿ ಒಂದು ಪ್ರಾಥಮಿಕ ಶಾಲೆಯೂ ಇಲ್ಲದಿರುವದು, ಕಲಂಕಪ್ರಾಯವಾದಂತಹ ವಿಷಯವೇ ಸರಿ.

ಜಿಲ್ಲಾಧಿಕಾರಿಗಳು, ಜಿಲ್ಲಾ ಶಿಕ್ಷಣಾಧಿಕಾರಿಗಳನ್ನು ಈ ಬಗ್ಗೆ ಕೇಳಿದರು. ಎಲ್ಲರಿಗೂ ಆಶ್ಚರ್ಯವಾದಂತೇ ತಮಗೂ ಆಶ್ಚರ್ಯವಾಗಿದೆ ಎಂದೂ, ಜಿಲ್ಲಾ ಶಿಕ್ಷಣಾಧಿಕಾರಿಗಳು ಪ್ರಸ್ತಾಪಿಸಿದರು. ಈ ಬಗ್ಗೆ ಅವರು ಕೂಡಲೇ ಕ್ರಮಕೈಗೊಳ್ಳುವದಾಗಿ ತಿಳಿಸಿದರು.

ಶೈಕ್ಷಣಿಕ ವರ್ಷ ಇದೀಗ ಪ್ರಾರಂಭವಾಗುವದರಿಂದ, ಅದೇ ವರ್ಷದಿಂದಲೇ ಯಳವಂತಿ ಗ್ರಾಮದಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಬರುವ ಹದಿನೈದು ಆಗಸ್ಟಿನಿಂದಲೇ ಪ್ರಾರಂಭಿಸುವ ವ್ಯವಸ್ಥೆ ಮಾಡಬೇಕೆಂದು, ಮಾನ್ಯ ಜಿಲ್ಲಾಧಿಕಾರಿಗಳು ಆದೇಶಿಸಿದರು. ಜಿಲ್ಲಾ ಶಿಕ್ಷಣಾಧಿಕಾರಿಗಳು, ಹಾಗೆ ಮಾಡುವದಾಗಿ ತಿಳಿಸಿದರು. ಇದಾದ ನಂತರ, ಚಹಾಪಾನದ ನಂತರ ಸಭೆ ಮುಕ್ತಾಯಗೊಂಡಿತು.

o o o o

ಡಿ.ಡಿ.ಪಿ.ಐ. ಕರಿಲಿಂಗ ಆರಾಧ್ಯ ಅವರು, ಕಚೇರಿಗೆ [illegible] ತಮ್ಮ [illegible] ಅಸಿಸ್ಟೆಂಟರಾದ ಶ್ರೀ ಪೀರ್ ಮೊಹಮದ್ ಅವರನ್ನು ಕರೆದರು. ಪೀರ್ ಮೊಹಮದ್. ಮೀರ ಉಸ್ಮಾನ್ ಆಲೀ

ಂ ಬಹಾದುರ್ ಅವರ ಕಾಲದಿಂದಲೂ ಲಸ ಮಾಡುತ್ತ ಬಂದಿದ್ದರು. ಅವರಿಗೆ ಲ್ಲೆಯ ನರನಾಡಿಗಳ ಪರಿಚಯವಿತ್ತು. ್ವತಂತ್ರ್ಯ ನಂತರ ಶೇರವಾನಿ ಮತ್ತು ಾಮಿ ಟೋಪಿಯಿಂದ, ಪ್ಯಾಂಟು ಮತ್ತು ಶರ್ಟಗೆ ಪರಿವರ್ತನಗೊಂಡ ವೇಷ ೂಷೆಯಲ್ಲಿ ಪೀರ್ ಮೊಹಮದ್, ಡಿ.ಡಿ. .ಐ. ಅವರ ಚೇಂಬರಿಗೆ ಬಂದರು.

"ಏನ್ರೀ ಪೀರಮೊಹಮದ್, ಯಳಂತಿ ಿಲ್ಲಿ ಶಾಲೆನೇ ಇಲ್ಲವಂತಲ್ಲರೀ?" ಎಂದು ಲ್ಲಾ ಶಿಕ್ಷಣಾಧಿಕಾರಿಗಳು ಕೇಳಿದರು.

"ಭಾಂಚೋದ್ ಇಲ್ಲಾಂದ್ರ ಇರಲಿ ಬಿಡ್ರಿ ಾಬ್ರೆ, ಅವರು ಸಾಲಿತೊಗೊಂಡು ಏನ್ಮಾ ತ್ತಾರು?" ಎಂದು ಪೀರ್ ಮೊಹಮದ್ ೇಳಿದರು.

"ಛೀ ಛೀ ಹಾಂಗಾಗೋಲ್ಲ, ಪೀರ್ ೊಹಮದ್ ಪ್ರತಿಯೊಂದು ಹಳ್ಳಿಗೂ ಾಲೆ ಬೇಕು. ಶಿಕ್ಷಣದ ವ್ಯವಸ್ಥೆ ಮಾಡುವ ವಾಬ್ದಾರಿ ನಮ್ಮದು. ಶಿಕ್ಷಣ ಪಡೆಯು ದು, ಪ್ರತಿಯೊಬ್ಬ ಭಾರತೀಯನ ಹಕ್ಕು. ್ಲೀಜ್– ಸೀ– ಅ– ರೇಂಜಿನ ಎ.ಇ.ಓ. ಯಾರಿದ್ದಾರೆ ನೋಡಿ ಹೇಳ್ರೀ" ಎಂದು ಲ್ಲಾ ಶಿಕ್ಷಣಾಧಿಕಾರಿಗಳು ಆದೇಶಿಸಿದರು.

ಯಳವಂತಿ ತಾವರಗಿ ತಾಲ್ಲೂಕಿನ ಎ. .ಓ. ಸಾಹೇಬರು, ರೇವಣಸಿದ್ದಪ್ಪನವರಿ ್ದರು.

ರೇವಣಸಿದ್ದಪ್ಪನವರು ಶಿಕ್ಷಣತಜ್ಞರು. ಷ್ಠಾವಂತ ಮತ್ತು ದಕ್ಷ ಅಧಿಕಾರಿಗಳಾಗಿ ್ದರು. ಅವರು ಒಂದು ದೃಷ್ಟಿಯಿಂದ ಸ್ತ್ರೀ ಕ್ಷಪಾತಿ. ಹೆಣ್ಣು ಮಕ್ಕಳ ಶಿಕ್ಷಣದ ಡೆಗೆ ಅವರು ಹೆಚ್ಚು ಗಮನ ಕೊಡುತ್ತಿ ್ದರು. "ನಮ್ಮ ಧರ್ಮ, ಸಾಹಿತ್ಯ, ಸಂಸ್ಕೃತಿ ೀತಿ–ನೀತಿಗಳು ಹೆಣ್ಣು ಮಕ್ಕಳಿಂದಲೇ ುಳಿದುಕೊಂಡು ಬಂದಿವೆ" ಎಂದು ಅವರು ದೇ ಪದೇ ಹೇಳುತ್ತಿದ್ದರು. ಅವರು ಹೆಣ್ಣು ಮಕ್ಕಳ ಶಾಲೆಯ ತಪಾಸಣೆಗೇ ಹೆಚ್ಚು ಸಮಯ ವಿನಿಯೋಗಿಸುತ್ತಿದ್ದರು. ಕ್ಷಕಿಯರ ಕಲ್ಯಾಣವೇ ಅವರ 'ಜೀವ ಉದ್ದೇಶ್ಯ'ವಾಗಿತ್ತು. ತಮ್ಮ ತಾವರಗಿ ಾಲ್ಲೂಕಿನಲ್ಲಿ "ದಾಕ್ಷಾಯಣಿ ಪ್ರತಿಭಾ ಪ್ರತಿಷ್ಠಾನ" ಎಂಬ ಒಂದು ಸ್ತ್ರೀ ಕಲ್ಯಾಣಕ್ಕಾಗಿಯೇ ಶ್ರಮಿಸುವ ಸಂಸ್ಥೆಯೊಂದನ್ನು ಸ್ಥಾಪಿಸಿದ್ದರು. ಆ ಸಂಸ್ಥೆಯ ಅಧ್ಯಕ್ಷಿಣಿ ಅವರು ಶ್ರೀಮತಿ 'ದಾಕ್ಷಾಯಣಿ' ಅವರೇ ಆಗಿದ್ದರು. ತಮ್ಮ ತಾಲ್ಲೂಕಿನ ಪ್ರತಿಯೊಬ್ಬ ಶಿಕ್ಷಕಿಯಲ್ಲಿ ಸುಪ್ತವಾಗಿದ್ದ ಪ್ರತಿಭೆಯನ್ನು ಬೆಳಕಿಗೆ ತರುವ ಕೆಲಸ, ಈ ಸಂಸ್ಥೆ ಮಾಡುತ್ತಿರುವದಾಗಿ ಹೇಳುತ್ತಿದ್ದರು. ತಮ್ಮ ಅಧಿಕಾರ ಕ್ಷೇತ್ರದಲ್ಲಿದ್ದ ಪ್ರತಿಯೊಬ್ಬ ಶಿಕ್ಷಕಿ ಪ್ರತಿ ತಿಂಗಳ ಹತ್ತು ರೂಪಾಯಿ ಚಂದಾ ಹಣವನ್ನು ದಾಕ್ಷಾಯಣಿ ಪ್ರತಿಭಾ ಪ್ರತಿಷ್ಠಾನಕ್ಕೆ ಕೊಡಬೇಕೆಂದು 'ಕಳಕಳಿ'ಯ ವಿನಂತಿ ಮಾಡಿಕೊಳ್ಳುತ್ತಿದ್ದರು. ಶಿಕ್ಷಕರ ಪ್ರಾಮಾಣಿಕ ಸಹಕಾರದಿಂದ ದಾ.ಪ್ರ.ಪ್ರ. ತುಂಬ ಅಚ್ಚುಕಟ್ಟಾಗಿ ಕೆಲಸಮಾಡುತ್ತಿತ್ತು. ಮುಖ್ಯಾಧಿಕಾರಿಗಳಿಂದ ಮುಖ್ಯ ಮಂತ್ರಿಗಳವರೆಗೂ, ಎಲ್ಲರೂ ಮಾನ್ಯ ರೇವಣಸಿದ್ದಪ್ಪನವರ ಕಾರ್ಯ ಚಟುವಟಿಕೆಗಳನ್ನು ಪ್ರಶಂಸಿಸಿದ್ದರು.

ಹಕ್ಕಿ ಹಾರಾಟ

ಹಕ್ಕೀಯು ಹೊರಬಿಟ್ಟಿ ಹಾರೂತ ಹೋಗ್ಯಾವ
ನಾಡ ಸುತ್ತ್ಯಾಡಿ ಬರುವಾಗ, ಬಲ್ಲವರು
ಕೆಳಗಿಳಿಸಿ ಮುದ್ದು ಮಾಡ್ಯಾರ!!

—ಶ್ಯಾಮ ಹುದ್ದಾರ

ಟ್ರಿನ್ ಟ್ರಿನ್SSS ಎಂದು ಫೋನ್ ಬೆಲ್ಲು ಬಾರಿಸಿದಾಗ, ಹತ್ತಿರ ಕುರ್ಚಿಯಲ್ಲಿ ಕುಳಿತುಕೊಂಡಿದ್ದ ರುದ್ರಾಕ್ಷರೆಡ್ಡಿಯವರು ಫೋನೆತ್ತಿಕೊಂಡರು. "ಹಲೋ ಯಾರು, ಡಿ. ಡಿ. ಪಿ. ಐ. ಆಫೀಸನಾ, ಯಾರು ಮಾತಾಡೋದು? ಯಾರು! ಸ್ವಲ್ಪ ಗಟ್ಟಿಯಾಗಿ ಮಾತಾಡ್ರಿ ಮಾರಾಯರೇ, ಕೇಳಿಸ್ತಾಯಿಲ್ಲ. ಸ್ಪೀಕ್ ಜೋರಾಗಿ ಯಾರು? ಜಿ.ಎ.ನಾ? ಪೀರ್ ಮೊಹ್ಮದನಾ? ಯಾರು ಬೇಕಿತ್ತು! ಎ. ಇ. ಓ. ನಾ. ಇದಾರೆ, ಹೀ 'ಈಸ್ ಇನ್ ದೀ ಸೀಟ್' ಕೊಡ್ತೀನಿ" ಎಂದು ಉನ್ನತ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರಾದ ರುದ್ರಾಕ್ಷ ರೆಡ್ಡಿಯವರು "ಸರ್, ತಮ್ಮ ಫೋನು? ಡಿ. ಡಿ. ಕಚೇರಿಯಿಂದ" ಎಂದು, ರೇವಣ ಸಿದ್ದಪ್ಪನವರ ಕೈಗೆ ಫೋನ್ ಕೊಟ್ಟರು.

"ಹಾಂ, ಎಸ್. ಎಸ್, ದಿಸೀಸ್ ರೇವಣಸಿದ್ದಪ್ಪ ಅಸಿಸ್ಟೆಂಟ್ ಎಜುಕೇಷನಲ್ ಆಫೀಸರ್ ಸ್ಪೀಕಿಂಗ್–ಹೇಳ್ರೀ.... ಓಹ್ ಪೀರ್ ಮೊಹಮದ್ದ. ನಮಸ್ಕಾರಿಯಪ್ಪಾ, ಯಾನ್ ಸುದ್ದಿ ಆಯ್ತು? ನಿಮ್ಮ ಸಾಹೇಬ್ರು ಅದಾರಿಲ್ಲ! ಏನಂದ್ರಿ? ಅದಾರ್ರಾ? ಹಾಂ; ಮಾತಾಡ್ತಾರಂತಾ? ಕೊಡ್ರಿ, ಕೊಡ್ರಿ....ಹಾಂ. ಹಾಂ. ಸಾರ್, ಸಾರ್ ನಾನು ಸರ್ ಎ.ಇ.ಓ–(ನಗುತ್ತಾ) ಚನ್ನಾಗಿದ್ದೀನಿ ಸರ್. 'ಬೈಯ್ ಗ್ರೇಸ್ ಆಫ್ ಯು' ಚನ್ನಾಗಿದ್ದೀನಿ ಸರ್. ಇನ್ನೇನಿಲ್ಲ ಸರ್, ಎಲ್ಲಾ, ಓ. ಕೆ. ಸರ್. ಸಾರ್ ಸೋಮವಾರ? ಸಂತೋಷ ಮಾತಾನ.... ಉದ್ಯಾಪನಾ ಸಾರ್....ತುಪ್ಪಾನಾ ಸಾರ್, ಒಂದು ಕೇಜೀನಾ? ಬಾಳೆಲೇ ಅಂದ್ರಿ. ಹೌದು ಸರ್ 'ಬನಾನಾ ಲೀಫ್'–ನೂರು ಸಾರ್. ಕಳಿಸ್ತೀನಿ ಸರ್, ಖಂಡಿತಾ ಕಳಿಸ್ತೀನಿ ಸರ್, ನೋ ಪಂ ಸರ್. ಶುಕ್ರವಾರ–ತಮಗೆ ತಲುಪುತ್ತೆ, ಸರ್-ಎಸ್ ಸಾರ್–ಬರ್ತೀನಿ ಸಾರ್–ತಮ್ಮ ಮನೆ ಉದ್ಯಾಪನಕ್ಕೆ ಬರಲಿಲ್ಲಾಂದ್ರ ಹೇಗೆ ಸಾರ್. ಸಾರ್-ಯಳವಂತಿ? ಆಂ. ಯಳಂತಿ ಇದೆ ಸಾರ್. ಶಾಲೆನಾ. ಇಲ್ಲಾ ಸಾರ್ ಅಯ್ಯೋ ಅದೊಂದು ಕುಗ್ರಾಮ ಸರ್. ಹತ್ತು ಹುಡುಗರು ಸಿಗೋಲ್ಲ ಸರ್. ಆಗಿದೆ ಸಾರ್, ಅಭಿವೃದ್ಧಿ ಸಾಕಾದಷ್ಟಾಗಿದೆ. ಬಟ್, ನೋ ಸ್ಕೂಲ್ ಸಾರ್. ದಿಸೀಸ್ ಇಂಟೆರೆಸ್ಟೇಡು ಸಾರ್? ಅಯ್ಯೋ ಡಿ.ಸಿ.ಪೀಸಿಗಳಿಗೆ 'ಎಜುಕೇಷನ್' ಅಂದರೆ ಏನು ಗೊತ್ತು ಸಾರ್. ಸರಿ ಸರ್– ನಾನು ಒಂದೆರಡು ದಿವಸಗಳಲ್ಲಿ ಹೋಗಿ ಬಂದು, ರಿಪೋರ್ಟ 'ಕೊಡ್ತೀನಿ ಸಾರ್.

ಎಸ್. ಸರ್; ಮದ್ರಾ ಕಲ್ಕತ್ತಾ ಸರ್. ... ಸರ್, ಫ್ರಾಂಕ್ಫರ್ಟ್ ಸರ್. ಜೋನ್ಸನ್ ನಾರ್ಟನ್ ಎಂದು ದೀರ್ಘ ಪಾರ್ಶ್ವಲಾಪವನ್ನು ಮುಗಿಸಿ, ಜೀವಣ ಸಿದ್ದಪ್ಪನವರು ಫೋನ್ ಕೆಳಗಿಟ್ಟರು.

ಜೀವಣಸಿದ್ದಪ್ಪನವರಿಗೆ, ತಾದಲಾಪುರದ ಕೇಸು ತಲೆಬೇನೆಯಾಗಿತ್ತು. ತಾದಲಾಪುರದ ಪ್ರಾಥಮಿಕ ಶಾಲೆಯಲ್ಲಿ ದಮಯಂತಿ ಸಾಳುಂಕೆ ಎಂಬ 'ಮಾಸ್ತರಣಿ' ಕೆಲಸಮಾಡುತ್ತಿದ್ದಳು. ಹೊಸದಾಗಿ ನೇಮಕಾತಿ ಪಡೆದು ಬಂದ ದಮಯಂತಿಗೆ, ಹೊಂದಾಣಿಕೆ ಮಾಡಿಕೊಂಡು ಕೆಲಸ ನಿರ್ವಹಿಸುವದು ಕಷ್ಟಕರವಾಗಿತ್ತು. ಆ ಶಾಲೆಯಲ್ಲಿ ಕೇವಲ ಇಬ್ಬರು ಶಿಕ್ಷಕರು. ಒಬ್ಬ ವೆಂಕಯ್ಯ ಅವನು ಪಕ್ಕದ ಊರಿನವನು. ಯಳವಂತಿಯಲ್ಲಿ ಅವನ ಅಕ್ಕನ ಮನೆಯಿತ್ತು. ಅವನಿಗೆ ಯಾವದೂ ತೊಂದರೆ ಇರಲಿಲ್ಲ. ಮೇಲಾಗಿ ಸೀನಿಯರ್. ಹತ್ತು ವರ್ಷದ ಅನುಭವವಿತ್ತು. ಹುಡುಗರ ಸಂಖ್ಯೆ ಜಾಸ್ತಿಯಾಗಿದ್ದರಿಂದ ತಾದಲಾಪುರ ಶಾಲೆಗೆ ಹೊಸದೊಂದು ಪೋಸ್ಟ್ ಮಂಜೂರಾಗಿತ್ತು. ಆ ಪೋಸ್ಟಿಗೆ ದಮಯಂತಿ ಸಾಳುಂಕೆಯು ನೇಮಕಾತಿಯಾಗಿತ್ತು. ಊರಿಗೆ ಬಂದು ಒಂದು ತಿಂಗಳು ಯಾವ ತೊಂದರೆಯೂ ಆಗಲಿಲ್ಲ. ನಂತರ, ಮಾತ್ರ ಸರಪಂಚ ಸಾಹೇಬರಾದ ತೋಟಪ್ಪ ಹಾದಿಮನಿಯವರ "ನಜರು" ದಮಯಂತಿಯ ಮೇಲೆ ಬಿತ್ತು. ಇಪ್ಪತ್ತೆರಡು ವಯಸ್ಸು, ಶ್ಯಾಮಂತಿಗೆ ಹೂವಿನಂಥ ಬಣ್ಣ, ತುಂಬಿದ ಮೈಕೈ, ನಿತಂಬದವರೆಗೆ ಬೀಳುವ ಕೂದಲು,, ವಗೈರೆ, ವಗೈರೆ ಗುಣ ಲಕ್ಷಣಗಳಿಂದ ಕೂಡಿದ ದಮಯಂತಿ ಸಾಳುಂಕೆ, ತೋಟಪ್ಪ ಹಾದಿಮನಿಯವರ ನಿದ್ದೆ ಕೆಡಿಸಿದಳು. ತೋಟಪ್ಪನವರು, ದಮಯಂತಿಯನ್ನು ಒಲಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿದರು. ಆದರೆ ಶೀಲಗೀಲದ ಬಗ್ಗೆ ಭಯಂಕರ ಕಲ್ಪನೆಗಳನ್ನಿಟ್ಟುಕೊಂಡ ದಮಯಂತಿ, ತೋಟಪ್ಪನವರ ಹಾದಿಗೇ ಹೋಗಲಿಲ್ಲ.

ಒಂದು ದಿನ ತೋಟಪ್ಪನವರು ಸ್ವತಃ ದಮಯಂತಿ ಸಾಳುಂಕೆಯವರ ಮನೆಗೆ ಬಂದು, ತಾವು ಅವಳಿಗಾಗಿ ಹಲುಬುತ್ತಿರುವದನ್ನು ವಿವರಿಸಿದರು. ಆದರೆ ದಮಯಂತಿ ಸಾಳುಂಕೆ ಅವರನ್ನು ತುಂಬ ಗೌರವದಿಂದಲೇ ಮರಳಿ ಹೋಗಲು ತಿಳಿಸಿದಳು. ತೋಟಪ್ಪನವರು ಸ್ವಾಭಾವಿಕವಾಗಿಯೇ ಕುಪಿತಗೊಂಡರು. ಕೋಪದ ಭರದಲ್ಲಿ ಒಂದಿಷ್ಟು ಸೀರೆಯನ್ನು ಜಗ್ಗಿದರು. ಈ ವಿಷಯ ತುಂಬ ಗಂಭೀರವಾಗಿದೆಯೆಂದು ತಿಳಿದು ದಮಯಂತಿ ಸಾಳುಂಕೆ ಜೋರಾಗಿ ಕೂಗಿಕೊಂಡಳು. ಇದರಿಂದ ನೆರೆಹೊರೆಯ ಜನ ನೆರೆದರು. ತೋಟಪ್ಪನವರಿಗೆ ಸಮಾಧಾನದ ಮಾತುಗಳನ್ನು ಹೇಳಿ ಕಳುಹಿಸಿದರು. ದಮಯಂತಿ ಸಾಳುಂಕೆ ಮಹಾ ಕಿತಾಪತಿ ಹೆಂಗಸು. ಅವಳು, ಪೋಲೀಸಿನವರಿಗೆ ಈ ವಿಷಯ ತಿಳಿಸಿದಳು..

ಎಸ್. ಐ, ಜೋತಿರ್ಲಿಂಗಪ್ಪನವರು, ಕೂಡಲೇ ಕ್ರಮ ಕೈಗೊಳ್ಳುವ ಉದ್ದೇಶದಿಂದ ದಮಯಂತಿ ಸಾಳುಂಕೆಯವರನ್ನು ತಮ್ಮ ಕಚೇರಿಗೆ ಬರಹೇಳಿದರು.


ಅತಿ ಉತ್ಸಾಹದಿಂದ ಸಾಳುಂಕೆಬಾಯಿ ಜೋತಿರ್ಲಿಂಗಪ್ಪನವರ ಕಚೇರಿಗೆ ಬಂದಳು.



ಸಾಹೇಬರು ಕಚೇರಿಯಲ್ಲಿದ್ದರು, ಅವರು ಸಾಳುಂಕೆ ಬಾಯಿಯನ್ನು ನೋಡಿ, ಕಚೇರಿಯಲ್ಲಿಯೇ ಪೇದೆಗಳ ಎದುರುಗಡೆ ವಿಚಾರಣೆ ಮಾಡುವದು ಸರಿಯಲ್ಲವೆಂದು ತಿಳಿದು, ದಮಯಂತಿಬಾಯಿಯವರನ್ನು ತಮ್ಮ ಕ್ವಾರ್ಟರ್ಸ್‌ಗೆ ಕರೆದೊಯ್ದರು. ಅಲ್ಲಿ ಸಾಹೇಬರ ರಸಿಕತೆ, ವಿಚಾರಣೆ ಮಾಡುವ ಕ್ರಮ ಇತ್ಯಾದಿ ವಿಷಯಗಳಿಂದ ಗಾಬರಿಗೊಂಡು, ಸಾಳುಂಕೆಬಾಯಿ ಅಲ್ಲಿಂದ ಓಡಿದಳು.

ತಾವರಗಿ ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ಅತ್ಯಧಿಕ ಪ್ರಸಾರವುಳ್ಳ, ದಿನಪತ್ರಿಕೆ "ಜೇನುಹನಿ"ಯ ವರದಿಗಾರ, ಸಂಕೇತಕುಮಾರರ "ಇನ್ವೆಸ್ಟಿಗೇಟಿವ್ ರಿಪೋರ್ಟ್"ನಲ್ಲಿ 'ದಮಯಂತಿ ಸಾಳುಂಕೆಯ ಕಾಂಡ' ಪ್ರಕಟವಾಯಿತು. ಈ ವಿಷಯ ಧಾರಾವಾಹಿಯಾಗಿ, ಮುಂದಿನ ಸಂಚಿಕೆಗಳಲ್ಲಿ, ಪ್ರಕಟಿಸಲಾಗುವದೆಂದು ಸಂಪಾದಕರು ತಿಳಿಸಿದ್ದರು. ಇದರಿಂದ ಪತ್ರಿಕೆಯ ಪ್ರಚಾರ ಮತ್ತು ಪ್ರಸಾರ ಹೆಚ್ಚಾಯಿತು.

ತಾದಲಾಪುರದ ಕಲುಷಿತ ವಾತಾವರಣದಲ್ಲಿಯೂ ದಮಯಂತಿ ಸಾಳುಂಕೆಯವರು ಧೈರ್ಯದಿಂದ ಇದ್ದರು. ಸಂಕೇತಕುಮಾರ ಖುದ್ದಾಗಿ ಹೋಗಿ ದಮಯಂತಿಯವರ ಸಂದರ್ಶನ ಪಡೆದಿದ್ದ. ಅವನು ಧೈರ್ಯವಾಗಿರಲು ಸಾಳುಂಕೆಯವರಿಗೆ ತಿಳಿಸಿದ.



"[illegible]...ಇಬ್ಬರು ಹುಡುಗರು [illegible]...ಸಿಕ್ಕೋನ ಅವರ ನಡತೆಯ ಪ್ರಮಾಣಪತ್ರ ಬೇಕಂತೆ."

ಸಾಳುಂಕೆಬಾಯಿ ಇದ್ದಕ್ಕಿದ್ದಂತೆ ಸುದತ್ತದ ವ್ಯಕ್ತಿಯಾಗಿಬಿಟ್ಟಳು— ಸರಪಂಚ ಸುಮ್ಮನೇ ಕುಳಿತುಕೊಂಡನು. ಪಿ. ಎಸ್. ಐ. ಸಾಹೇಬರು, ಬಾಲ ಮುದುಡಿಕೊಂಡರು.

ಅಂದು ಕಾರಹುಣ್ಣಿಮಿ. ಶಾಲೆಗೆ ಅನಧಿಕೃತ ರಜೆ. ಹುಡುಗರೆಲ್ಲ ಮನೆಗಳಲ್ಲಿದ್ದರು. ದಮಯಂತಿ ಸಾಳುಂಕೆ ಮಾತ್ರ ತಮ್ಮ ರೂಂನಲ್ಲಿ ಕುಳಿತುಕೊಂಡು 'ರತಿವಿಜ್ಞಾನ' ಓದುತ್ತಿದ್ದರು. ಪಕ್ಕದ ಖಾಲಿ ವರ್ಗದಲ್ಲಿ ಸೀನಿಯರ್ ಅಸಿಸ್ಟೆಂಟ್ ವೆಂಕಯ್ಯನವರು, ಪಠ್ಯ ಪುಸ್ತಕ ಓದುತ್ತ ಕುಳಿತಿದ್ದರು.

ಯಾವದೋ ಒಂದು ವಿಷಯ ನೆನಪಾಗಿ ವೆಂಕಯ್ಯನವರು, ಪುಸ್ತಕದ ಹೊಟ್ಟೆಯಲ್ಲಿ ತಮ್ಮ ಬೆರಳೊಂದನ್ನು ಸೇರಿಸಿಕೊಂಡು ದಮಯಂತಿಬಾಯಿ ಕುಳಿತಲ್ಲಿಗೆ ಬಂದರು.

"ದಮಯಂತಿ ಮ್ಯಾಡಂ. ಈ ಕವಿತಾದ ಅರ್ಥನೇ ತಿಳೀತಾಇಲ್ಲ" ಎಂದು ವೆಂಕಯ್ಯ ದಮಯಂತಿಯವರ ಪಕ್ಕದಲ್ಲಿ ಕುಳಿತುಕೊಂಡರು. ಅವರ ಮೈಜವರಿನ 'ಘಂ' ಎಂದು ಬರುತ್ತಿದ್ದ ವಾಸನೆಯಿಂದ ದಮಯಂತಿಯ ಹೊಟ್ಟೆಯಲ್ಲಿ ಸಹಸ್ರಾರು ಕಾರುಹುಣ್ಣಿಮೆಯ ಎತ್ತುಗಳು ಓಡಿದಂತೆ ಭಾಸವಾಯಿತು.

"ನೀನೊಲಿದರೆ ಕೊರಡು ಕೊನರುವವಯ್ಯ" ಈ ವಿಷಯದ ಅರ್ಥ ಏನಂತಾಗ್ತಾಯ್ತಿ ಮ್ಯಾಡಂ" ಎಂದು ವೆಂಕಯ್ಯ ಕೇಳಿದರು.

"ಅದ್ಹ್ಯಾಂಗ್ರಿ ಮಾಸ್ತರ ಸಾಹೇಬ್ರೆ- ನೀವು ಸೀನಿಯರ್, ನಿಮ್ಗ ತಿಳೀಬೇಕು. ನೋಡ್ರಿ ಅರ್ಥ ಭಾಳ ಸಲೀಸಾಯ್ತಿ" ಎಂದಳು ದಮಯಂತಿ.

"ನೀನೊಲಿದರೆ ಅಂದ್ರೇನು" ಎಂದು ವೆಂಕಯ್ಯ ಪ್ರಶ್ನಿಸಿದರು.

"ನೀನೊಲಿದರೆ, ಅಂದರೆ, ನೀನು ಒಲಿದರೆ" ಎಂದು ಸಾಳುಂಕೆಬಾಯಿ ಬಿಡಿಸಿ ಹೇಳಿದಳು.

"ಇಲ್ಲಿ ನೀನು ಅಂದ್ರ ಯಾರೂ?" ಎಂದು ವೆಂಕಯ್ಯ ಕೇಳಿದರು.

"ಇಲ್ಲಿ ನೀನು ಅಂದರೆ, ದೇವರು, ಪರಮಾತ್ಮ"- ಎಂದಳು ದಮಯಂತಿ.

"ಹೀಂಗದ್ಯಾ? ಛಲೋ ಆಯ್ತು ಬಿಡ್ರಿ. ನೀ ಅಂದ್ರೆ ದೇವ್ರಾಂದಂತ ಆಯ್ತು, ಇನ್ನ ಅಂವಾ ಯಾರಿಗೊಲೀತಾನೂ?" ಎಂದು ವೆಂಕಯ್ಯ ಕೇಳಿದರು.

"ಯಾರಿಗಂದ್ರೇನ್ರಿ? ದೇವ್ರು ಒಲೀರ್ದೇ ತನ್ನ ಭಕ್ತರಿಗೀ?" ಎಂದು ದಮಯಂತಿ ಸಾಳುಂಕೆ ಹೇಳಿದಳು.

"ಭೇಷ್. ಅದ್ರ ದಮಯಂತಿ ಮ್ಯಾಡಂ. ನಂಗೊಂದು ಅನುಮಾನ ಬಂದಾಯ್ತು. ಅದೊಂದೀಟ ಬಿಡ್ಸಿಹೇಳ್ರಿ" ಎಂದು ತನ್ನ ಮಾತು ಮುಂದೊರಿಸುತ್ತ.

"ಪರಮಾತ್ಮಾ ಭಕ್ತರಿಗೊಲೀತಾನೂ, ಅಂತ ಇಟ್ಕೊಳ್ರಿ- ಅಂವಾ ಭಕ್ತರಿಗೆ ಒಲಿದ್ರು, ಕೊರಡ್ಯಾಕ ಕೊನರ್ತಾಯ್ತೀ? ಇದು ನನ್ನ ಬೇಜವ ಪ್ರಶ್ನಿ ಆಯ್ತು" ಎಂದು ವೆಂಕಯ್ಯ ಕೇಳಿದರು.

"ಹೌಂದು, ಭಕ್ತ ದೇವರ ಪ್ರಾರ್ಥನಿ ಮಾಡ್ತಾನು, ದೇವರು ಪ್ರಸನ್ನನಾಗಿ, ಅವನಿಗಿ ಒಲೀತಾನು, ಹೌಂದು, ಅಂದ್ಹಾಂಗ ಇವರಿಬ್ಬರ ನಡುವಂತ ಕೊರಡ್ಯಾಂಗ ಬಂತೂ? ಬಂದರೂ ಬರಲಿ, ಅದೂ ಹ್ಯಾಂಗ ಕೊನರ್ತಾಯ್ತಿ? ಹೌಂದರೀ ಟೀಚರ್, ಈ ಕೊರಡಿನ ವಿಷಯಾ ತಿಳೀತಾಯಿಲ್ಲ" ಎಂದರು ದಮಯಂತಿ ಬಾಯಿ ಸುಮ್ಮನೇ ಕುಳಿತಳು.

"ಹಾಂ, ಅದೇ ನಂದೂ ಅಂಬೋದು, ಆಯ್ತಿಲ್ಲ ದೋಷ? ಅಲ್ಲರೀ ಕೊರಡಂದ ಮ್ಯಾಗ ಅದು ಕೊನರುವದು ಅಸಾಧ್ಯ. ಹೋಗ್ಲಿ ಕೊನರ್ತ್ತೂ ಅಂದ ಇಟ್ಕೊಂಡ್ರ ಅದರಿಂದ ಭಕ್ತನಿಗೇನು ಲಾಭ? ಹೌಂದಿಲ್ಲರಿ?" ನನ್ನ, ಈ ಪುಸ್ತಕದವರು, ಈ ಸರಕಾರದವರು ಏನೂ ಇಚಾರ ಮಾಡೋದಿಲ್ಲ. ಇಂಥಾ ತೆಪ್ಪ ತೆಪ್ಪ ಹಾಡಾ ಪುಸ್ತಕದಾಗ ಹಾಕಿ ನಮ್ಮ ಚುಕ್ಕೋಳಿಗಿ ಕಲಿಸ್ರೀ ಅಂತಾರ, ಇದರಿಂದ, ಇಂಥಾ ತಾಳಿಲ್ಲದ, ತಂತಿ ಇಲ್ಲದ ಹಾಡಾ ಓದಿ, ನಮ್ಮ ಸಾಲಿ ಗೋಳು ಕಾಣ ಆಗೂ ಅಂದ್ರ ಹ್ಯಾಂಗ ದಾವ್ರಿ! ದಮಯಂತಿ ಮ್ಯಾಡಂ?" ಎಂದು ಗಟ್ಟಿಯಾಗಿ ನಗುತ್ತ ವೆಂಕಯ್ಯ ದಮಯಂತಿಬಾಯಿಯ ಮೈ ಮೇಲೆ [illegible]



ದಮಯಂತಿಬಾಯಿ ಚಿಟ್ಟನೇ ಚೀರಿ, ಪ್ರಜ್ಞಾಹೀನರಾಗಿ ಉರುಳಿದರು.

ದಮಯಂತಿಬಾಯಿಗೆ ಕಾರು ಹುಣ್ಣಿಮೆಯ್ದೇ ಕೊನೆಯ ದಿನವಾಯಿತು. ಮರು ದಿನ, ಎಂದಿನಂತೆ ಹುಡುಗರು, ವೆಂಕಯ್ಯನವರು ಶಾಲೆಗೆ ಬಂದರು, ಆದರೆ ದಮಯಂತಿಬಾಯಿ ಬರಲೇ ಇಲ್ಲ.

○ ○ ○ ○

ದಮಯಂತಿಬಾಯಿ ಸಾಳುಂಕೆ ಅವರು ಏಕಾಏಕಿ ಮಾಯವಾದ ಬಗ್ಗೆ ವಿವರವಾದ ವರದಿಯೊಂದನ್ನು ಕೂಡಲೇ ಕಳುಹಿಸಬೇಕೆಂದು ಪಿ.ಎಸ್.ಐ. ಅವರಿಂದ ಕಾಗದ ಬಂದಿತ್ತು. ಅನೇಕ ಸಲ ತಾದಲಾಪುರಕ್ಕೆ ಹೋಗಿ ಬಂದಿದ್ದರು. ಅನೇಕ ಜನರನ್ನು ಭೇಟಿಯಾಗಿ, ದಮಯಂತಿಯ ಬಗ್ಗೆ ವಿಚಾರಿಸಿದ್ದರು. ಆದರೆ,ಯಾವರೀತಿಯ ಸುಳಿವೂ ಸಿಕ್ಕಿರಲಿಲ್ಲ. ಈ ಕೇಸಿನಲ್ಲಿ ಅವರು ಎ.ಇ.ಓ. ದಿಂದ, ಸಿ. ಐ. ಡಿ.ಯಾಗಿದ್ದರು. ಇದರಲ್ಲಿ ರೋಮಾಂಚಕಾರಿ ಅನುಭವಗಳು ಆಗುವ ಸಾಧ್ಯತೆಗಳಿದ್ದವು. ದಮಯಂತಿಯನ್ನು ಪತ್ತೆ ಹಚ್ಚುವಲ್ಲಿ ತಮಗೇ ಯಶ ಸಿಗಬಹುದೆಂದು ನಂಬಿದ್ದರು. ಕನ್ಯಾಶಾಲೆಗಳಿಗೆ, ತಪಾಸಣೆಗೆ ಹೋಗುವಾಗ, ಸಾಮಾನ್ಯವಾಗಿ, ಪ್ಯಾಂಟು, ಟೀ ಶರ್ಟು ಧರಿಸುತ್ತಿದ್ದ ರೇವಣ್ಣಸಿದ್ದಪ್ಪನವರು, ದಮಯಂತಿ ಕೇಸಿನ ವಿಚಾರಣೆ ಮಾಡಲು ಹೊರಟರೆ, ಖಾಕಿ ಪ್ಯಾಂಟು ಮತ್ತು ಖಾಕಿ ಶರ್ಟು ಹಾಕಿಕೊಳ್ಳುತ್ತಿದ್ದರು. ಈ ವೇಷದಲ್ಲಿರುವಾಗ, ಅವರ ಮುಖಾಕೃತಿ ಬದಲಾಗುತ್ತಿತ್ತು. ಮಾತಿನಲ್ಲಿಯೂ ಬಿಗುವು ಬರುತ್ತಿತ್ತು. ಅನೇಕ ಸಲ, ಕನಸಿನಲ್ಲಿ ದಮಯಂತಿ ಬಂದು ಕಾಡಿಸಿದ್ದುಂಟು, ಆದರೆ ವಾಸ್ತವದಲ್ಲಿ ಮಾತ್ರ ಎಲ್ಲಾ ಕನಸಾಗಿಯೇ ಉಳಿಯುತ್ತಿತ್ತು. ಇಂಥ ಮಹತ್ವಪೂರ್ಣವಾದ ಕೇಸು ಇರುವಾಗ ಯಃಕಶ್ಚಿತ್,ಯಳವಂತಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆ ತೆರೆಯಲು ತಾವು ವರದಿ ಸಲ್ಲಿಸಬೇಕೆಂದು, ಡಿ.ಡಿ.ಪಿ.ಐ. ತಿಳಿಸಿದ್ದು ತಮ್ಮ ಮೇಲಾದ ಘೋರ ಅನ್ಯಾಯವೆಂದೇ ರೇವಣಸಿದ್ದಪ್ಪನವರು ಭಾವಿಸಿದರು.

○ ○ ○ ○

ಡಿ.ಡಿ.ಪಿ.ಐ. ಕಚೇರಿಯಿಂದ ನಾಲ್ಕಾರು ಬಾರಿ ಫೋನ್ ಬಂದು ವರದಿಗಾಗಿ ಒತ್ತಾಯ ಮಾಡಿದ್ದರಿಂದ, ಒಂದು ದಿನ ಬೇಗ್ಗೆ ತಮ್ಮ ಫಟಫಟಿಯ ಮೇಲೆ ಸವಾರಿ ಮಾಡಿಕೊಂಡು ಯಳವಂತಿಗೆ ಬಂದರು. ಸರಕಾರಿ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ನಿರ್ಮಾಣಗೊಂಡ ರೋಡಿನಲ್ಲಿ ಲಕ್ಷಾಂತರ ಗುಂಡಿಗಳಿದ್ದವು. ಒಂದು ಕಡೆಗಂತೂ ದೊಡ್ಡದೊಂದು ಕಂದಕವೇ ಹುಟ್ಟಿಕೊಂಡಿತ್ತು. ಈ ದಾರಿಯ ಮೇಲೆ ಫಟಫಟಿಗಿಂತ ನಡೆದು ಹೋದರೆ, ಬೇಗ ಹೋಗಬಹುದಾಗಿತ್ತು. ಆದರೆ ಈ ವಿಷಯ ತಿಳಿಯದೇ ರೇವಣಸಿದ್ದಪ್ಪನವರು ವಾಹನದ ಮೇಲೆ ಹೊರಟಿದ್ದರು. ಫಟಫಟಿ ಯಳವಂತಿ ತಲುಪಿದಾಗ ಮಧ್ಯಾಹ್ನ ಎರಡು ಗಂಟೆ. ಊರಲ್ಲಿ ಒಂದು ನರಪಿಳ್ಳೆಯೂ ಕಾಣಿಸಲಿಲ್ಲ. ಯಾರ ಮನೆಗಾದರೂ ಹೋಗಿ ವಿಚಾರಿಸಬೇಕೆಂದರೆ ತಮ್ಮಂಥ ಹಿರಿಯ ಅಧಿಕಾರಿಗಳು, ಇನ್ನೊಬ್ಬರ ಮನೆ ಮುಂದೆ ಹೋಗಿ ನಿಲ್ಲು



...ದು ಹೇಗೆಂದು, ಒದ್ದಾಡಿದರು. ಕೊನೆಗೆ ...ನಸ್ತಾಗಿ, ಊರ ಮಧ್ಯದಲ್ಲಿದ್ದ ಬಸ...ಣ್ಣನ ಗುಡಿಯ ಕಟ್ಟೆಯ ಮೇಲೆ ...ತುಕೊಂಡರು. ಅರ್ಧ ಗಂಟೆ ಕಳೆ...ದಿರಲಿಕ್ಕಿಲ್ಲ. ಅಷ್ಟರಲ್ಲಿ ಅರವತ್ತು ಅರತ್ತೈದು ...ರ್ಷದ ಮುದುಕಿ, ಆ ಕಡೆಯಿಂದ ಬರು...ದುದು ಕಂಡಿತು. ರೇವಣಸಿದ್ದಪ್ಪ...ನವರು ಸಮಾಧಾನದ ನಿಟ್ಟುಸಿರು ಬಿಟ್ಟು...ವ" ಎಂದರು. ಆ ಮುದುಕಿ ಥಟ್ಟನೆ ...ಂತಿತು. ರೇವಣಸಿದ್ದಪ್ಪನ ಕಡೆಗೆ ಮುಖ ...ಪ್ಪಿಕೊಂಡು ನೋಡಿತು. ನಂತರ- ...ಯಾಕರೀ ಧಾಡಬಾವು, ಒಬ್ಬೊಂಟ್ಗ ...ಯಂಗಸನ್ನ ನೋಡಿ ಅಕಿ ಶೀಲಹರಣಾ ...ಮಾಡಬೇಕಂತ ಮಾಡಿಯೇನು? ಬಡ ...ರಸ್ ನನ್ನಗನಾ, ಕೀಚಕ ನಿನ್ನ ಕುಂಡಿ ...ಬಿಬಿಬು ಮುರಿದು, ಹುಬ್ಬಾಯಿ ಮುಂದ ...ಕೇನು. ಲಬೋ ಲಬೋ ಅಂತ ...ಯಿದ್ರೆಂದ್ರ ಊರ ಪ್ರರಸ್ರೆಲ್ಲಾ ಬಂದು ...ನ್ನ ಸಿಗದು ಜರಾಸಂಧ ಮಾಡಿ ...ಟ್ಟಾರು" ಎಂದು ಬಾಯಿಗೆ ಬಂದಂತೆ ...ಯಿತು. ಅದರ ಮಾತುಗಳನ್ನು ಕೇಳಿ ...ವಣಸಿದ್ದಪ್ಪನವರ ಪೈ ಜಿವಿತು. ...ಲು ಕೊಡೆ, ಎದೆ, ಹೊಟ್ಟೆಯ ಮೇಲೆ ...ರು ಹರಿಯಿತು. ಮುದುಕಿ ಅಂದ ...ತಿ ಹೇಯಿಕ್ಕೊಂಡರೆ, ಜನ ಬಂದು, ...ನಕ್ಕೆ ಬಡಿದಂತೆ ಬಡಿದರೆ, ದೇವರೇ ...ಗತಿ ಎಂದು ಭಾವಿಸಿ, ರೇವಣಸಿದ್ದಪ್ಪ ...ಟಫಟಿಯ ನೇರ ಕುಂತು ಪರಾರಿ ...ಯಾದರು.

...

ಫಟಫಟಿ ಯುಳವಂತಿ ಸೀಮೆಯಿಂದ ಹೊರಬರುವಷ್ಟರಲ್ಲಿ ಒಬ್ಬ ದನ ಕಾಯುವ ಹುಡುಗ, ದನ ಮೇಯಿಸುತ್ತ ...ಂತಿದ್ದನ್ನು ನೋಡಿದರು. ...ಟಫಟಿ ಆ ಹುಡುಗನತ್ತ ಓಡಿಸಿದರು. ತನ್ನ ಕಡೆಗೆ ಫಟಫಟಿ ಬರುತ್ತಿರುವುದನ್ನು ...ಂಡು ಹುಡುಗ ಗಾಬರಿಗೊಂಡು ಓಡ ...ಲಾರಂಭಿಸಿತು. ಹುಡುಗಾ ಮುಂದೆ, ...ರೇವಣಸಿದ್ದಪ್ಪ ಹಿಂದೆ. ಹೀಗೆ ಹತ್ತಾರು ...ಮಿನಿಟ್ ರೇಸ್ ನಡೆದ ನಂತರ, ಹುಡುಗ ...ದಣಿದು, ದಮ್ಮು ಬಿಡುತ್ತ, ಏದುಸಿರು ...ಬಿಡುತ್ತ ನಿಂತು ಕೊಂಡಿತು. ಫಟ, ...ತು. ರೇವಣ ಸಿದ್ದಪ್ಪನವರು. ಅದರ ಮೇಲೆ ... ಕೊಂಡೇ, ನೆಲದ ಮೇಲೆ ಕಾಲೂರಿದರು.

"ಯಾ ಊರಂವನಲೇ ?" ಎಂದು ಕೇಳಿದರು.

"ಯೇವು ಯುಳವಂತಿ ಅವನ್ರೀ." ಎಂದು. ಹುಡುಗ ಕೈಜೋಡಿಸಿತು.

"ನಿಮ್ಮ ಗೌಡನ ಹೆಸರೇನಲೇ ?" ಎಂದು ರೇವಣಸಿದ್ದಪ್ಪ ಕೇಳಿದರು.

"ಅವನ ಹೆಸರ್ಯಾ-ಏನೋ ಅಯ್ತುರೀ- ಇದರಾಪ್ನ. ನೆಪ್ಪೇ ಬರಾಪಲ್ಲದು- ಹಾಂ. ಬಂತರೀ." ಎಂದ ಹುಡುಗ.

"ಏನಾಯ್ತು ಹೇಳು ಲಗೂನ." ರೇವಣ ಸಿದ್ದಪ್ಪ ಗದರಿಸಿದರು.

"ಶಿ ವಾ ನಂ ದ ಪಾಟೀಲಂತಾಯ್ತುರಿ." ಎಂದು ಹುಡುಗ ಹೇಳಿತು.

"ಶಿವಾನಂದ ಪಾಟೀಲನಾ ?" ಎಂದು ರೇವಣಸಿದ್ದಪ್ಪ ಕೇಳಿದ.

"ಹೂಂ ಹೀಂಗಿರಬೇಕೂ ಅಂತ ನನ್ನ ಅಂದಾಜಾಯ್ತುರಾ. ಮತ್ತ-ಬ್ಯಾರೆ ಇದ್ದರೂ ಇರಬೇಕ್ರೀ ಸಾವಕಾರ" ಎಂದು ಹುಡುಗ ತಿಳಿಸಿತು.

"ಇರಲಿ ಬಿಡು ತಮ್ಮಾ, ನಂದೊಂದು ಕೆಲಸಾ ಮಾಡು. ಉಪಕಾರ ಮಾಡದಂತಾಗ್ತಾಯ್ತಿ."ಎಂದರು ರೇವಣಸಿದ್ದಪ್ಪನವರು.

"ಹೇಳ್ರಿ" ಎಂದು ಹುಡುಗ ತಲೆ ಹಾಕಿತು.

ಏನಿಲ್ಲ, ತಾಪಟಗಿಲಿಂದ, ದೊಡ್ಡ ಸಾಹೇಬ್ರು ಬಂದಿದ್ರೊ,ನಿಮ್ಮೂರಾಗ ಸಾಲಿ ತಗೀಲಾಯ್ತಂತ, ಅಪ್ಪ ನೀವು ಅರ್ಜೆಂಟ್, ಗಜರದಂ ನಾಳೆ ಬಂದು, ಭೇಟಿ ಆಗ ಬೇಕಂತ, ಅಂತ ಹೇಳು" ಎಂದು ರೇವಣ ಸಿದ್ದಪ್ಪನವರು ಒಂದೇ ಉಸಿರಿನಲ್ಲಿ ತಿಳಿಸಿದರು.

ಹುಡುಗ, ತಲೆ ಅಲ್ಲಾಡಿಸಿ, "ನ್ಯಾ- ಆಗಾಗಿಂಗಿಲ್ಲರೀ ಧಣಿ. ಅವನನ್ನ, ಗೌಡ ಯಾವುನ್ಯಾಗಿರ್ತಾನೋ ಏನೋ- ಯಾರು ಹುಡುಕಿಕೊಂತ ಹೋಗಬೇಕ್ರಿ." ಎಂದ.

"ಯಾಕಪಾ ತಮ್ಮಾ ?" ಎಂದು ರೇವಣ ಸಿದ್ದಪ್ಪ ಪ್ರಶ್ನಿಸಿದರು.

"ಬಾರಾಹಮೇಷಾ, ರಂಡಿ ಮನ್ಯಾಗ ಬಿದ್ದಿರ್ತಾನ್ರಿ. ಗೌಡ, ಅಲ್ಲ್ಯಾರ



ಮಂತ್ರಿಗಳು ಮಾಸಿಕ್ಕಾ ಗಾಂಧಿ ಅವರ ಮಿತವ್ಯಯದ ಬಗ್ಗೆ ಭಾಷಣ ಮಾಡ್ತಾರಂತೆ. ಅದಕ್ಕ"

ಹೋಗ್ತಾರ್ರೀ ಸಾವಕಾರ" ಎಂದು ಹುಡುಗ ಹೇಳುವದಿಲ್ಲೆಂದು ಪಟ್ಟು ಹಿಡಿದ.


"ಸಾಯಿಲಿ ಬಿಡು" ಎಂದು ರೇವಣ ಸಿದ್ದಪ್ಪ ಫಟಫಟಿ ಚಾಲುಮಾಡಿ ತಾವರಗಿ ಕಡೆಗೆ ಹೊರಟರು.

ಯುಳವಂತಿ ಗ್ರಾಮವೆಂದರೆ, ಬೆಂಗಳೂರೇ ? ದನಕಾಯುವ ಹುಡುಗ ತನ್ನ ಗೆಳೆಯನ ಮುಂದೆ ಫಟಫಟಿ ಸವಾರನ ಕಥೆ ಹೇಳಿದ. ಗೆಳೆಯ ಇನ್ನೊಬ್ಬ ಗೆಳೆಯನಿಗೆ ಹೇಳಿದ, ಹೀಗೆ, ಬೆಳಗಾಗುವ ತನಕ. ಯಾರೋ ಊರಿಗೆ ಬಂದಿದ್ದ ಸುದ್ದಿ ಹರಡಿತು. ಈಗಾಗಲೇ ಅಭಿವೃದ್ಧಿ ಕಾರ್ಯಕ್ರಮಗಳಿಂದ ಸಾಕು ಬೇಕಾದ ಗ್ರಾಮದ ಜನರು, ಇನ್ಯಾವ ಪೀಡೆ ಬರುತ್ತದೆಂದು ಗಾಬರಿಗೊಂಡರು.

ಗೌಡರ ಮನೆಗೆ, ಪ್ರಮುಖ ನಾಗರಿಕರ ಡೆಪ್ಯುಟೇಷನ್ ಬಂತು. ಪುಣ್ಯಕ್ಕೆ ಗೌಡರು ಮನೆಯಲ್ಲಿದ್ದರು.

ಫಕೀರ್ ಮೊಹಮ್ಮದ್, ಮುಸ್ಲಿಮರ ಪ್ರತಿನಿಧಿ. ಅವನ ನೇತೃತ್ವದಲ್ಲಿ ಕಂಬಾರ ಬಾಣಪ್ಪ, ನೀರಮನಿ ಈರಪ್ಪ ಗಿಲಗಂಚಿ ಗುರುಬಾದಪ್ಪಗೌಡರು ಪಡಸಾಲೆಯಲ್ಲಿ ಬಂದು ಕುಳಿತುಕೊಂಡರು.

ಗೌಡರು ರಾತ್ರಿ ತೊಟ್ಟಿದ್ದ ಮಡಿಗೆ



ಪತ್ತೆಗೆ ಹೋಗಿದ್ದರು. ಅಲ್ಲಿ ನಾಟಕ ಕಂಪನಿಯ ಲೀಲಾಕುಮಾರಿ ಪತ್ತೆ ಮಾಡಿದ್ದಳು. ರಾತ್ರಿ ತುಂಬ ಹೊತ್ತು ನಿದ್ದೆಗೆಟ್ಟಿದ್ದರಿಂದ ಗೌಡರು ಸ್ವಲ್ಪತಡ ಮಾಡಿಯೇ ಎದ್ದಿದ್ದರು. ತೋಟದ ಮನೆಯಲ್ಲಿಯೇ 'ಚಾ' ಕುಡಿದು ತಮ್ಮ ವೆಸ್ಪಾ ZXನ ಮೇಲೆ ಮನೆಗೆ ಬಂದಿದ್ದರು. ಅದೇತಾನೆ ಗೌಡತಿಯು ಶುಭಹಸ್ತದಿಂದ ಮಾಡಿದ ಉಪ್ಪಿಟ್ಟು-'ಚಾ' ಸೇವಿಸಿ, ಮೈಮುರಿದು ಕೊಳ್ಳುತ್ತಿರುವಾಗ ಮನೆಗೆಲಸದವಳಾದ ಲೀಲಾ, ಯಾರೋ ಬಂದಿರುವದಾಗಿ ತಿಳಿಸಿದಳು.

ಗೌಡರು ಹೊರಗೆ ಬಂದರು. ಊರ ಪ್ರಮುಖರನ್ನು ನೋಡಿ-"ಓಹೋ 'ಪ್ರಮುಖ ಪ್ರಮುಖ ಮಂದಿ ಬೆಳಗಾಗುತ್ಲೇ ಬಂದೀರೆಲ್ಲಪಾ ?" ಎಂದು ಕೇಳಿ, ನೀರ ಮನಿ ಈರಪ್ಪನ ಹತ್ತಿರ ಕುಳಿತುಕೊಂಡರು.


"ಒಂದ್ ಅರ್ಜೆಂಟ್ ಕೆಲಸಾ ಆಯ್ತು. ಸುಮಾರ ಸುದ್ದಿ ಬಂದಾಯ್ತು- ನಿಮ್ಗ ಹೇಳಿ ಮುಂದಿನ ಕೆಲಸಾ ಮಾಡೋಣಾಂತ ಬಂದೀವಿ" ಎಂದು ಗಿಲಗಂಚಿ ಗುರುಪಾದಪ್ಪ ಹೇಳಿದ.

"ಅಂಥಾದ್ದೇನು ಅನಾಹುತ ಆಯ್ತಪ್ಪಾ ಗುರಪಾದಪ್ಪಣ್ಣಾ ?" ಎಂದು ಗೌಡರು ಕೇಳಿದರು.

"ನಮ್ಮ ಫಕೀರಸಾಬ್ರು. ಹೇಳ್ತಾರು, ಕೇಳ್ರಿ" ಎಂದರು ಗುರುಪಾದಪ್ಪಾಗೌಡರು ಫಕೀರ ಮೊಹ್ಮದರ ಕಡೆಗೆ ಮುಖ ಮಾಡಿದರು.

"ನಿನ್ನೆ ಮಧ್ಯಾನಾದಾಗ, ಯಾರೋ ಘಟಘಟಿ ಮ್ಯಾಗ ಬಂದಿದ್ರಂತ. ಬಂದು, ಊರು ನೋಡಕೊಂಡು ಹೋದರಂತ. ಊರಾಗ ಕಂಡಾಬಟ್ಟೆ ಗಂಡಸ್ರು ಇದ್ರೂ. ಅವರು ಒಬ್ಬರನ್ನೂ ಭೇಟಿಯಾಗಲಿಲ್ಲ. ಹಂಗೆ ಬಂದು ಹಂಗೆ ಹೋದರಂತ. ದಾರಿಯೊಳ್ಗ ದನಾಕಾಯೋ ಪೋರಗೋಳ ಮುಂದ, ಏನೋ ಸಾಲಿ ಸುದ್ದಿ ಮಾತಾಡಿದ್ನಂತ. ಸದ್ಯಕ್ಕೇ ಲೈಟೂ, ನೀರು, ರೋಡು ಬಂದು ನಮ್ಮೂರು ಸಾಕಾಗೋಷ್ಟು ಸುಡುಗಾಡಸಿದ್ದನ ಮಠಾ ಆಗ್ಯೈತಿ, ಇನ್ನ, ಈ ಸರಕಾರದವರು ಸಾಲಿನೂ ಚಾಲು ಮಾಡಿದ್ರೆ ನಮ್ಮ ಹಣೇಬಾರ ಫಲಿಸೋ ಆಗಾಂಗಿಲ್ಲ. ಬರೀ ಸಂಕಟದಸುದ್ದಿ ನಮ್ಗ ಸಿಕ್ಕೈತಿ. ನಾವು ಬಂದೀವಿ. ನೀವ್ರು ಊರಗೌಡರು. ನೀವು ಈ ಬರೀ ಸಂಕಟಾನ ತಪ್ಪಿಸಬೇಕೋಂತ ಹೇಳ್ತೇವಿ" ಎಂದು ಫಕೀರ ಮೊಹಮದ್ ವರದಿ ನೀಡಿದ. ಊರಿಗೆ ಸಾಲಿಯೂ ಬರುವ ಸಮಾಚಾರ ಕೇಳಿ, ಸಿಡಿಲು ಬಡಿದಂತಾಯಿತು. ಗೌಡರ ಸ್ವಾಭಾವಿಕ ಸಿಟ್ಟು ಉಕ್ಕೇರಿತು.

"ನನ್ನ ತಾಯಿಗಂಡ್ರು, ನಮ್ಮ ಊರನ್ನ ಸ್ಮಶಾನ ಮಾಡಿ ಬಿಟ್ರು. ಅವರ ಕಾರ್ಯಕ್ರಮದಿಂದ ನಮ್ಮ ಊರ ಮಂದೀ ದಿಕ್ಕ ತಪ್ಪಿ ಹೋಯಿತು. ಈಗ ಸಾಲಿ ಒಂದು ತಂದು ನಮ್ಮನ್ನೆಲ್ಲ ದಾರಾದಿಕ್ಕಾಲ ಮಾಡಬೇಕಂತ ಮಾಡ್ಯಾರೇನು ? ನಡೀರಿ. ಕಲಬುರ್ಗಿ ಪಟ್ಟಣದಾಗ ಸಾಲಿಗೋಳ ಮ್ಯಾಲಿನ ಹಾಪೀಸರ ಇರ್ತಾನಂತ. ಅಷ್ನ ಮುಂದೆಲ್ಲ, 'ಹಕೀಕತ್' ಹೇಳೋಣು. ನಮ್ಮೂರಿಗಿ ಸಾಲಿ ಬ್ಯಾಡ ಹೋಲಿ ಬ್ಯಾಡಾಂತ ಹೇಳೋಣು-ನೀವು ಲಗೂನೇ ಚಹಾ ಮುಗಿಸಿಗೊಂಡು ಬರ್ರಿ. ನನ್ನ



ಜೀಪಿನ್ಯಾಗ ಹೋಗೋಣು" ಎಂದು ಗೌಡರು ಹೇಳಿದರು.

ಎಂದಿಲ್ಲದೇ ಇಂದ ಗೌಡರು ಇಂತಹ ವಿಷಯದಲ್ಲಿ ಗಂಡಸುತನ ತೋರಿಸಿದ್ದಕ್ಕಾಗಿ ಎಲ್ಲರೂ ಖುಷಿ ಪಟ್ಟರು.

o o o o

ಗೌಡರ ಜೀಪು 'ಭರ್‌ಧಾವ್' ಕಲಬುರ್ಗಿ ಕಡೆಗೆ ಹೊರಟಿತು. ಗೌಡರು ಮುಂದಿನ ಸೀಟಿನಲ್ಲಿದ್ದರು. ಅವರ ಪಕ್ಕದಲ್ಲಿ ಹೆಗಲಿಗೆ "ತಮಂಚಾ" (ಬಂದೂಕು) ಹಾಕಿಕೊಂಡು ಅವರ ಬಾಡಿಗಾರ್ಡ್ ಜಟ್ಟಿಂಗಪ್ಪ ಕುಳಿತುಕೊಂಡಿದ್ದ. ಹಿಂದಿನ ಭಾಗದಲ್ಲಿ 'ಡೆಲಿಗೇಷನ್' ಕುಳಿತುಕೊಂಡಿತ್ತು.

o o o o

ಮಧ್ಯಾಹ್ನ ಎರಡರ ಸುಮಾರಿಗೆ ಗೌಡರು ಮತ್ತು ಅವರ ಮಿತ್ರ ಮಂಡಳಿ ಡಿ.ಡಿ.ಪಿ.ಐ. ಕಚೇರಿಗೆ ಬಂತು. ಗೌಡರು ಜೀಪಿನಿಂದಿಳಿದರು. ಅವರ ಹಿಂದೆ ಜಟ್ಟಿಂಗಪ್ಪ ನಿಂತುಕೊಂಡ. ಹಿಂದಿನಿಂದ ಡೆಲಿಗೇಷನ್ ಕೆಳಗಿಳಿಯಿತು.

ಹೆಗಲಿಗೆ ಬಂದೂಕ ಹಾಕಿಕೊಂಡ ಜಟ್ಟಿಂಗಪ್ಪನನ್ನು ನೋಡಿ, ಸಾಹೇಬರ ಚೇಂಬರಿನ ಮುಂದೆ ಕುಳಿತುಕೊಳ್ಳುವ ಸಿಪಾಯಿ ಕರೀಮ ಪಟೇಲ ಎದ್ದುನಿಂತು ಸಲಾಮು ಹಾಕಿದ.

'ಅದಾರೇನಪ ನಿಮ್ಮ ಸಾಹೇಬ್ರು!" ಎಂದು ಗೌಡರು ಕೇಳಿದರು.

"ಅದಾರ್ರೀ ಸಾಬ್ರ, ಯಾರು ಬಂದಾರಂತ ಹೇಳಲೀ?" ಎಂದ ಕರೀಮಪಟೇಲ.

"ಶಿವಾನಂದ ಗೌಡ್ರು ಬಂದಾರಂತ ಹೇಳು." ಎಂದರು ಗೌಡರು. ಸಿಪಾಯಿ ಒಳಗೆ ಹೋದ. ಗೌಡರು ಗಣೇಶ ಬೀಡಿ ಹೊತ್ತಿಸಿದರು. ಡೆಲಿಗೇಷನ್ ಮೆಂಬರುಗಳೆಲ್ಲರೂ ತಮ್ಮ ಜೇಬುಗಳಿಂದ ನೌ ನಂಬರ್ ಬೀಡಿ ತೆಗೆದು ಹೊತ್ತಿಸಿ, ಹೊಗೆ ಬಿಡಲು ಆರಂಭಿಸಿದರು. ನಾಲ್ಕಾರು ಜನ ಒಟ್ಟಿಗೆ ಹೊಗೆ ಬಿಡಲಾರಂಭಿಸಿದ್ದರಿಂದ ದೂರ ನಿಂತು ನೋಡುವವರಿಗೆ, ಡಿ. ಡಿ. ಪಿ. ಐ. ಕಚೇರಿಗೆ ಬೆಂಕಿ ಬಿದ್ದಿರಬಹುದೆಂದು ಭಾಸವಾಗುತ್ತಿತ್ತು.

ಸಿಪಾಯಿ ಹೊರಗೆ ಬಂದು "ಹೋಗ್ರಿ" ಎಂದ. ಗೌಡರು, ನಂತರ ಜಟ್ಟಿಂಗಪ್ಪ, ಅವನ ಹಿಂದೆ ಉಳಿದವರೆಲ್ಲರೂ ಒಳಗೆ ಬಂದರು.

ಡಿ. ಡಿ. ಪಿ. ಐ. ಶ್ರೀ ಕರಿಲಿಂಗ ಆರಾಧ್ಯರು, ತಮ್ಮ ಕುರ್ಚಿಯಲ್ಲಿ ಕುಳಿತುಕೊಂಡು ಯಾವದೋ ಫೈಲು ನೋಡುತ್ತಿದ್ದರು. ಕಪ್ಪು ಕೃಶ ದೇಹ, ಒಣಗಿದ ಮುಖ, ಆನೆಯಂತಹ ದೊಡ್ಡ ದೊಡ್ಡ ಕಿವಿ, ಜೋಂಟಿನಂತೆ ಮೂಗಿನ ಮೇಲೆ ಕನ್ನ



"ಮಹಾತ್ಮ ಗಾಂಧೀಂದ್ರೆ ಕಡಿಮೆ ಇದ್ದಿಷ್ಟ್ರು. ಸೊಸು ಬಡೆ ಅವರ ಹೆಸರು ಹೇಳಕೋದು ಇವರು ಎಷ್ಟೋ ದು ಅನುಕೂಲಕರವಾಗಿದಾ ತೆ."

ಡಕ. ನೇವಿ ಬ್ಲೂ ಸೂಟು, ಕೆಂಪು ಟೈ, ಈ ಅವತಾರದ ಕರಿಲಿಂಗ ಆರಾಧ್ಯರು ಹಳೇ ಮೈಸೂರಿನ ಯಾವದೋ ಒಂದು ಗ್ರಾಮದಿಂದ ಬಡ್ತಿಯ ಮೇಲೆ ಕಲಬುರ್ಗಿ ಪಟ್ಟಣಕ್ಕೆ ಬಂದಿದ್ದರು.

ಗೌಡರು ಮತ್ತು ಅವರ ಸಂಗಡಿಗರು, ಮುಂದೆ ನಿಂತುಕೊಂಡು ಐದು ನಿಮಿಷಗಳಾದರೂ, ಕರಿಲಿಂಗ ಆರಾಧ್ಯರು ಅವರ ಕಡೆಗೆ ಮುಖವೆತ್ತಿ ನೋಡಲೇ ಇಲ್ಲ. ಜಟ್ಟಿಂಗಪ್ಪ, 'ಹೊ- ಹೊ ಹೊ'ಎಂದು ಕೆಮ್ಮಿದ. ಕರಿಲಿಂಗ ಆರಾಧ್ಯರ ಧ್ಯಾನ ಭಂಗವಾಯಿತು. ಅವರ ದೃಷ್ಟಿ ಜಟ್ಟಿಂಗಪ್ಪ ಮತ್ತು ಅವನ ಹೆಗಲಿಗಿದ್ದ ಬಂದೂಕಿನ ಮೇಲೆ ಬಿತ್ತು. ಕರಿಲಿಂಗ ಆರಾಧ್ಯರ ಹೊಟ್ಟೆಯೊಳಗೆ ಹೊಕ್ಕುಳದಲ್ಲಿ ಗುಂಡುಸೇರಿದಂತಾಯಿತು.

ಧೈರ್ಯ ತಂದುಕೊಂಡು- ಏನು ಬೇಕಾಗಿತ್ತು?" ಎಂದು ಕೇಳಿದರು.

"ಏನ್ ಛ್ಯಾಪ್ಯಾಗೈತೀ ಅಂತ ಕೇಳ್ರಿ ಸಾಹೇಬ್ರ! ಏನ್ ಜೇರಾಗೈತ್ರೀ ಅಂತ ಏನ್ ಕೇಳಾಕತ್ತೀರಿ! ನನ್ನ ಛ್ಯಾಡ ಛ್ಯಾಂತ ಬಡಕೊಂಡ್ರಾ, ತಾಯಿಗಂಡ ಮಂದಿ ಬಂದಿಲ್ಲ ಒಂದು ಸಂಕಟಾ ನಮ್ಮ ತಲೀಮ್ಯಾಗ ಹಾಕಿದ್ರಿ. ಹೋಗ್ಲಿ ಬಿಡ್ರಿಪಾ, ಸರಕಾರ ನೌಕರದಾರ ಮಂದಿ. ಸರಕಾರ ಹೇಳಿದ್ದು ಮಾಡ್ತಾರೂ ಅಂತ ಸುಮ್ಮಾಕ ಕುಂತ್ರ; ನಿಮ್ಮ ಚಾಟಿ ಭಾಳ ಆಗಾಕತ್ತ್ಯಾವು." ಎಂದು ಗೌಡರು ಗಡಸು ದನಿಯಲ್ಲಿ ಹೇಳಿದರು.

ಗೌಡರ ಭಾಷೆ, ಮಾತು, ಆಡುವ ಶೈಲಿ, ಕರಿಲಿಂಗ ಆರಾಧ್ಯರಿಗೆ ಅರ್ಥವಾಗಲಿಲ್ಲ. ಆದರೂ ಬಂದವರಿಗೆ ಭಯಂಕರ ಕೋಪ ಬಂದಿರಬೇಕೆಂದು ಅರ್ಥಮಾಡಿಕೊಂಡರು.

"ಕೂತ್ಕೊಳ್ಳೀ ಪ್ಲೀಜ್," ಸಮಾಧಾನದಿಂದ ಹೇಳಿ" ಎಂದರು ಕರಿಲಿಂಗ ಆರಾಧ್ಯರು. ಎಲ್ಲರೂ ಕುರ್ಚಿಯ ಮೇಲೆ ಕುಳಿತುಕೊಂಡರು. ಜಟ್ಟಿಂಗಪ್ಪ ಮಾತ್ರ ಗೌಡರ ಹತ್ತಿರವೇ ನಿಂತುಕೊಂಡ.

ತಮಗೆ ಇದೊಂದು ಭಯಂಕರ ಪ್ರಸಂಗವೆಂದು ಭಾವಿಸಿ, ತಮ್ಮ ನೆರವಿಗೆ, ಕಚೇರಿ ಸಿಬ್ಬಂದಿಯವರಲ್ಲಿ ಯಾರನ್ನಾದರೂ ಕರೆದು ಹತ್ತಿರ ನಿಲ್ಲಿಸಿಕೊಳ್ಳಬೇಕೆಂದು ವಿಚಾರ ಮಾಡಿದರು. ಏನು ಮಾಡಬೇಕೆಂದು ಅರ್ಥವಾಗಲಿಲ್ಲ, ಆಗ-

'ತಮ್ಮ ಹೆಸರು, ಪರಿಚಯಾ!' ಎಂದು ಕರಿಲಿಂಗ ಆರಾಧ್ಯ ಕೇಳಿದರು.'ನನ್ನ ಹೆಸರು ಜಟ್ಟಿಂಗವೀರ, ಅವರು ನಮ್ಮ ಶಿವಾನಂದ ಗೌಡರು, ಅಲ್ಲಿ ಕುಂತವರು ಪಕೀರಸಾಬ, ಆ ಕಡೆಗೆ, ಅವರ ಕುಂಡ್ಯಾಗ ಕುಂತವ್ರು, ಬಾಣಪ್ಪಾ, ಅಲ್ಲಿ ಕುಂತಾರಲ್ಲ, ಅವರು ಈರಪ್ಪ ಮತ್ತು ಈರಪ್ಪನ ಮುಕಳಿಗಿ ಮುಕಳಿ ಹಚ್ಚಿ ಕುಂತವರು ನಮ್ಮ ಗಿಲಗಂಚಿ ಮಾವ ಗುರುಪಾದಪ್ಪನೋರು" ಎಂದು ಜಟ್ಟಿಂಗಪ್ಪ ಎಲ್ಲರ ಪರಿಚಯ ಮಾಡಿಕೊಟ್ಟ.

ಕರಿಲಿಂಗ ಆರಾಧ್ಯರು ಪ್ರಶ್ನೆ ವಿಚಾರ



ಮಾಡಿದರು.

ಊರಿನಲ್ಲಿ ಫಕೀರ ಸಾಹೇಬ ಎಂಬು ವವನ್ನು ಬಿಟ್ಟರೆ ಉಳಿದವರೆಲ್ಲರೂ ಹಿಂದೂ ಗಳು. ತಮ್ಮ ಸಹಾಯಕ, ಜಿ. ಎ. ಸಾಹೇ ಬರನ್ನು ಕರೆದರೆ, ಅವರು ಮುಸ್ಲಿಮರು. ಶಿಪಾಯಿಯನ್ನು ಕರೆಸಿದರೆ ಅವನೂ ಮುಸ್ಲಿಮ. ವಾಹಿಗೆ ಮಾತು ಬೇಡ. ಜಗಳವಾದರೆ, ಬಂದವರು ಹಿಂದೂ ಗಳು ಮತ್ತು ನನ್ನ ಸಹಾಯಕರು ಮುಸ್ಲಿ ಮರು. ಇದರಿಂದ ಆ ಜಗಳಕ್ಕೆ 'ಹಿಂದೂ ಮುಸ್ಲಿಮ' ಕಲರ್ ಬರಬಹುದೆಂದು ಸೂಕ್ಷ್ಮ ವಿಚಾರ ಮಾಡಿದರು. ಕಚೇರಿ ಯಲ್ಲಿನ ಹಿಂದೂ ಸಿಬ್ಬಂದಿ ವರ್ಗದಲ್ಲಿ ತುಸು ಸಶಕ್ತನೆಂದರೆ, ಪೈಲಾರಿ ಎಸ್. ಡಿ. ಸಿ., ಅವನು. ಎಸ್. ಪಿ. ಅಪ್ಪಿತಪ್ಪಿ ಏನಾದರೂ ಅವಾಚ್ಯ ಬಾಯಿಗೆ ಬಂದರೆ ನಾನೇ ಕರೆಯಿಸಿ, ಅವನನ್ನು ಅವಮಾನ ಗೊಳಿಸಿದೆನೆಂದು ಅಪವಾದ ಬರಬಹುದು. ಇನ್ನುಳಿದವ [illegible] ವ್ಯಕ್ತಿ ನರಸಿಂಹಾ ಚಾರಿ, ಅವನು ಬ್ರಾಹ್ಮಣ, ಅಂಜು ಬುರು... ... ಬಂದು ಅಗು ವಂತಹ ... ... ಬಿಸಿ ... ಇನ್ನು ... ಬಾಬು ಸಹ ದೇವ ... ಭಾವಿಸಿ, ಕರಿಗಂಟೆ ಬಾರಿಸಿ, ಬಾಬು ಸಹ ದೇವನನ್ನು ಕರೆಸಿದರು.

ಬಾಬು ಸಹದೇವ ಸಾಹೇಬರ ಹತ್ತಿರ ಬಂದು ನಿಂತುಕೊಂಡನು.

ಸಾಹೇಬರಿಗೆ ಸ್ವಲ್ಪ ಧೈರ್ಯ ಬಂದಂ ತಾಯಿತು.

'ನಿಮ್ಮ ಊರು ಯಾವದು ?' ಎಂದು ಸಾಹೇಬರು ಕೇಳಿದರು.

"ನಮ್ಮೂರು ಯಳವಂತಿ, ಅಲ್ಲಿ ಸರ ಕಾರದವರು ಸಾಲಿ ತಗೀತಾರಂತ ಊರಾಗ ಪುಕಾರಾಗ್ಯೆತಿ" ಎಂದು ಈರಪ್ಪ ಹೇಳಿದರು.

"ಹೌದು, ನಿಮ್ಮ ಊರಲ್ಲಿ ಶಾಲೆಯಿಲ್ಲ ವೆಂದು ತಿಳಿಯಿತು. ಗ್ರಾಮಾಭಿವೃದ್ಧಿಗೆ ತಳಹದಿಯೊಂದರೆ ಶಿಕ್ಷಣ. ಅದರ ವ್ಯವಸ್ಥೆ ಮೊದಲಾಗಬೇಕು. ಆ ದೃಷ್ಟಿಯಿಂದ ನಿಮ್ಮ ಗ್ರಾಮದಲ್ಲಿ ಶಾಲೆಯೊಂದನ್ನು ಪ್ರಾರಂಭಿಸಬೇಕೆಂದು ಸರಕಾರ ತೀರ್ಮಾ ನಿಸಿದೆ." ಎಂದು ಕರಿಲಿಂಗ ಆರಾಧ್ಯ ಹೇಳಿ ದರು.

"ಈಗಾಗಲೇ ಸರಕಾರ ಮಾಡಿದ್ದ ಕೆಲಸ ಗಳಿಂದ ನಾವು ಭಾಳ ಹೈರಾಣವಾಗೀವ್ರಿ. ಇನ್ನ ಮ್ಯಾಲ ನಮ್ಗ ಏನೂ ಬ್ಯಾಡಂತ ನಿರ್ಧಾರ ಮಾಡೀವಿ. ಅದ್ಕಂತ ನಮ್ಮೂ ರೊಳ್ಗ ನೀವು ಸಾಲಿ ತಗೀದು ಬ್ಯಾಡ" ಎಂದು ಗುರುಪಾದಪ್ಪ ಹೇಳಿದರು.

ಕರಿಲಿಂಗಯ್ಯನವರು ನಸುನಕ್ಕು "ಅಲ್ಲ ಸ್ವಾಮಿ, ಈ ಕಾಲದಲ್ಲಿ ಎಲ್ಲರೂ ತಮ್ಮ ಊರಲ್ಲಿ ಶಾಲೆ ಯಾಕೆ, ವಿಶ್ವವಿದ್ಯಾ ಲಯವೇ ಬೇಕೆಂದು ಕೇಳುವಾಗ, ನೀವು ಚಿಕ್ಕದೊಂದು ಪ್ರಾಥಮಿಕ ಶಾಲೆಯೂ ಬೇಡಂತೀರಲ್ಲಾ ?" ಎಂದು ಕೇಳಿದರು.

"ಬೇಡಲಾರದೇನೇ ಸರಕಾರದವರು ಇಷ್ಟೊಂದು ಕೊಟ್ರು ಸಾಹೇಬ್ರ- ಅವರು ಕೊಟ್ಟಿದ್ದನ್ನ ನಾವು ಎರಡೂ ಕೈಲಿಂದ ಉಣ್ಣಾಕತ್ತೀವಿ." ಎಂದು ಗೌಡರು ಹೇಳಿ ದರು.

ಸಿ.ಪಿ. ಸಿ. ಡಿ. ಪಿ.ಯವರ ಮಾರ್ಗ ದರ್ಶನ ಸಹಾಯ ಈ ಸಂಸ್ಥೆಗಿದೆ ಎಂದು ಕರಿಲಿಂಗ ಆರಾಧ್ಯ ಅವರು [illegible].

○ ○ ○ ○

ಶಿವಾನಂದಗೌಡರ ನೇತೃತ್ವದ [illegible] ಯುಕವಂತಿಗೆ [illegible]. ಒಂದು ದಿನ ಗೌಡರ ಮನೆಯಲ್ಲಿ ಸಭೆ ಸೇರಿತ್ತು. ಊರಿನ ನೂರಾರು ಜನ ಬಂದಿದ್ದರು. ಸಂಜೆಯಾಗುತ್ತ ಗೌಡರ ಆಳುಮಗ [illegible] ನಾಲ್ಕು [illegible], [illegible].

ಸರಕಾರ ನಮ್ಮ ಯುಕವಂತಿ ಗ್ರಾಮದ [illegible]. ಸರಕಾರದ ಕಾರ್ಯಕ್ರಮಗಳು [illegible] ಈಗ [illegible]. [illegible] ಊರಾಗ [illegible]. [illegible] ಬರ್ತಾರೆ. [illegible] ನಮ್ಮ ಊರ ಮಂದಿ [illegible]. ಗಾಂಧೀಜಿ [illegible], [illegible]. [illegible] ನಮ್ಮ [illegible]. [illegible], ನಮ್ಮ [illegible]. ಇನ್ನ ಚುನಾವಣೆ [illegible]? ನಮ್ಮ ಚುನಾವಣೆ [illegible]. ನಮ್ಮ [illegible], ಚೀಫ್ ಮಿನಿಸ್ಟರೋ ಅಥವಾ ಪ್ರಧಾನ ಮಂತ್ರಿಯೋ ಆಗಬೇಕಂತ ನಮ್ಮ ಮನಸ್ಸು. ನಾವು ಮುಂದ ಬರಬೇಕೂ ಅಂತ ಸರಕಾರ ನಮ್ಗೂ [illegible]. ಆದ್ದರಿಂದ, [illegible], [illegible]. [illegible]. ಸರ ಕಾರದ [illegible].

ನಡೆಸಿದ [illegible]. [illegible] ನಮ್ಮ [illegible]. ನಮ್ಮ [illegible]. ಇಂಥಾ ಸರ್ಕಾರ ಬಂದ್ರೆ ನಾ ಒಪ್ಪಾಂಗಿಲ್ಲ. ನಮ್ಮ [illegible] ಇದೆ ಅಂದ್ರೆ ನಿಮ್ಮ ಎಲ್ಲರದೂ' ಏಕ ಸ್ವರದಿಂದ "ಇದೆ, ಇದೆ ಅಂತ ಕೂಗಿ ಹೇಳಬೇಕು" ಎಂದು ಗೌಡರು ತಮ್ಮ ಭಾಷಣ ಮುಗಿಸಿದರು. ಸಭಿಕರೆಲ್ಲರೂ "ಇದೆ ಇದೆ" ಎಂದು ಕೂಗಿದರು. ಸಭೆ ಜನಗಣಮನದಿಂದ ಮುಕ್ತಾಯಗೊಂಡಿತು.

○ ○ ○ ○

ಜಟ್ಟಿಂಗಪ್ಪನ ನೇತೃತ್ವದಲ್ಲಿ ಸ್ವಯಂ ಸೇವಕರ ತಂಡ ತಯಾರಾಯಿತು. ಹೊರ ಗಿನ ಯಾವ ವ್ಯಕ್ತಿ ಬಂದರೂ ಅವನ ಮೇಲೆ 'ನಜರ್' ಇಡುವ ಕೆಲಸ ಈ ಸ್ವಯಂಸೇವಕರಿಗೆ ವಹಿಸಿಕೊಡಲಾಯಿತು. ಯಾರಾದರೂ ಅಪರಿಚಿತರು, ಊರಿಗೆ ಬಂದರೆ ಅವರನ್ನು ಕೂಡಲೇ ಹಿಡಿದು ಗೌಡರ 'ಕೊಂಡವಾಡ'ದಲ್ಲಿ ಇಡಬೇಕು. ಗೌಡರು ಮತ್ತು ಊರ ಪ್ರಮುಖರು ಒಂದು ವಿಚಾರಣೆ ನಡೆಸುವ ತನಕ ಅವರನ್ನು 'ಕೊಂಡವಾಡ' ದಲ್ಲೇ, ಬೀಗಹಾಕಿ ಇಡಬೇಕು. ಹೀಗೆಲ್ಲ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಯಿತು. ಊರಲ್ಲಿನ ಎಲ್ಲ ಯುವಕ ಯುವತಿಯರು ಉತ್ಸಾಹದಿಂದ ಸ್ವಯಂ ಸೇವಕರ ಸಂಘದಲ್ಲಿ ಸೇರಿಕೊಂಡರು.

ಊರ ಪ್ರವೇಶಕ್ಕಿರುವ ಎಲ್ಲ ಮಾರ್ಗ ಗಳ ಮೇಲೆ 'ಮಚಾನ್' ನಿರ್ಮಿಸ ಲಾದವು. ದೂರದಿಂದಲೇ ವ್ಯಕ್ತಿಗಳನ್ನಾಗಲಿ, ವಾಹನಗಳನ್ನಾಗಲಿ ಬರುವುದನ್ನು ಕಂಡರೆ ಕೂಡಲೇ ಸೂಚನೆ ನೀಡಲು, ಈ 'ಮಚಾನ್'ಗಳು ನಿರ್ಮಿತವಾದವು.

○ ○ ○ ○

ಅವರ ಗ್ರಾಮವಾದ ಯುಕವಂತಿ ಗ್ರಾಮದಲ್ಲಿ ಶಾಲೆಯನ್ನು ಪ್ರಾರಂಭಿಸುವಲ್ಲಿ [illegible] [illegible] ಬಾಲಕರಿಗೆ [illegible] ಆರಾಧ್ಯರು [illegible] ಶಿಕ್ಷಣ ಮಂತ್ರಿಗಳು ಜಿಲ್ಲೆಯ ಪ್ರವಾಸಕ್ಕೆ ಬಂದಾಗ ಅವರ ಅಮೃತ ಹಸ್ತದಿಂದಲೇ ಯುಕವಂತಿ ಗ್ರಾಮದ 'ನೂತನ ಪ್ರಾಥಮಿಕ ಶಾಲೆಯ ಕಟ್ಟಡದ [illegible] ಕಾರ್ಯಕ್ರಮ [illegible], ಡಿ.ಡಿ.ಪಿ.ಐ. ಮಾನ್ಯ ಕರಿಲಿಂಗ ಆರಾಧ್ಯರು ಸೂಚಿಸಿದ್ದರಿಂದಾಗಿ. ಬಿ. ಈ. ಓ. ದೇವಣಸಿದ್ದಪ್ಪನವರು [illegible] ಒಪ್ಪಿದರು.

ಯುಕವಂತಿ [illegible] ದಿಂದ [illegible] ನಾಟಕ [illegible] ಬಸವೇಶ್ವರ ಸ್ವಾಮಿಗಳ ಆಶ್ರಯದಲ್ಲಿ [illegible]. ದೇವಣಸಿದ್ದಪ್ಪನವರಿಗೆ ಸುದ್ದಿ ಬಂದಿತ್ತು. ಈಗ ಗಜಕರ್ಣ ನಾಟಕ ಕಂಪನಿ. ಬೆಳಗಾವಿ ಜಿಲ್ಲೆಯ ಕೂಡಲಗಿ ಗ್ರಾಮದಲ್ಲಿ [illegible]. ದೇವಣ ಸಿದ್ದಪ್ಪನವರು ಒಂದೆರಡು ದಿನಗಳಲ್ಲಿ ಕೂಡಲಗಿಗೆ ಹೋಗುವ [illegible]

ಎಂ.ಶ್ರೀಕಾಂತ್.
ಇಳಕಲ್ಲ

"[illegible]..."

...ಕೆಯಬ್ಬಿತ್ತು. ಈ ... ಕರಲಿಂಗ ಆರಾಧ್ಯರ ಫೋನ್ ...ನು, ಇಂದೇ ಯಳವಂತಿಗೆ ಹೋಗಿ ... ಕಟ್ಟಬೇಕ್ಕೆ ... ಹುರುಶಿನ ಹನ್ನೊಂದು ಗಂಟೆಯೊಳಗಾಗಿ, ... ತಿಳಿಸಬೇಕೆಂದು ಹೇಳಿದರು. ...ಗ ರೇವಣಸಿದ್ದಪ್ಪನವರು ಬೇರೆ ದಾರಿ ಯಿಲ್ಲದೆ, ಯಳವಂತಿಗೆ ಹೊರಟರು.

ರೇವಣಸಿದ್ದಪ್ಪನವರು ಮೊದಲಿನಂತೆ ತಮ್ಮ ಫಟಫಟಿಯ ಮೇಲೆ ಯಳವಂತಿಗೆ ಹೋಗಲಿಲ್ಲ. ಈ ಸಲ ಅವರು ತಾವರಗಿ ...ವ ಅಪ್ಪಯ್ಯ ದೀಕ್ಷಿತರೆಂಬ, ವೈದಿಕ ಬ್ರಾಹ್ಮಣನ ಕುದುರೆಯಮೇಲೆ ಸವಾರಿ ಮಾಡಿಕೊಂಡು ಹೊರಟರು. ಹೊರಡುವಾಗ ಬೆಳಗ್ಗೆ 8 ಗಂಟೆಯಾಗಿತ್ತು. ಪ್ರತಿ 2 ಫರ್ಲಾಂಗಿಗೆ ಒಂದು ಸಲ ನಿಂತು ನೂರು ಲೀಟರ ಉಚ್ಚೆ ಮತ್ತು ಅರ್ಧ ಕೆ. ಜಿ ಲದ್ದಿ ಹಾಕುತ್ತ ದೀಕ್ಷಿತರ ಕುದುರೆ ಯಳವಂತಿಯ ಕಡೆಗೆ ನಡೆಯಿತು.

ಸರಕಾರಿ ಅಧಿಕಾರಿಗಳು ಸಾಮಾನ್ಯ ವಾಗಿ ಜೀಪು ಅಥವ ಫಟಫಟಿಯ ...ಲ್ಲಿ ಬರುವ ಸಂಪ್ರದಾಯವಿದ್ದಿದ್ದ ರಿಂದ, ಕುದುರೆಯ ಮೇಲೆ ಬರುವ ರೇವಣಸಿದ್ದಪ್ಪನವರ ಬಗ್ಗೆ ಯಾರಿಗೂ ಅನುಮಾನ ಬರಲಿಲ್ಲ. ಮಾಮೂಲಾಗಿ ನಿಂತ ಪಹರೆದಾರರೂ, ಸುಮ್ಮನೆ ಕುಳಿತು ಕೊಂಡರು.

ರೇವಣಸಿದ್ದಪ್ಪನ ಕುದುರೆ, ಊರು ಪ್ರವೇಶ ಮಾಡಿ, ತನ್ನ ನಿಯಮಿತ ಕಾರ್ಯ ಕ್ರಮ ಜರುಗಿಸಬೇಕೆಂದು ನಿಂತು ಕೊಂಡಿತು. ಕುದುರೆ ಯಾವ ಮನೆಯ ಮುಂದೆ ನಿಂತುಕೊಂಡಿತ್ತು, ಅದೇ ಯೋಗಾಯೋಗದಿಂದ ಗೌಡರ ಮನೆ ಯಾಗಿತ್ತು. ರೇವಣಸಿದ್ದಪ್ಪನವರು, ನೆಲದ ಮೇಲೆ ಕಾಲೂರಿ, ಗೌಡರ ಮನೆ ಯಾವು ದೆಂದು ಕೇಳಿದರು. ಅವರ ಮುಂದೆ ನಿಂತ ಒಬ್ಬ ಯುವಕ, ಈ ಪ್ರಶ್ನೆಯನ್ನು ಕೇಳಿ—

"ಗೌಡರ ಮನೀ ಮುಂದೇ ನಿಂತು ಗೌಡ್ರ ಮನೀ ಯಾವದೋಂತ ಕೇಳ್ತಿ ಯಲ್ಲೋ ಸವಾರ, ಕಣ್ ಕುಡ್ಡಗಿಡ್ಡಾ ವೇನು ?" ಎಂದು ಕೇಳಿದ.

ತನ್ನ ಕಣ್ಣಿನ ಬಗ್ಗೆ ಹಾಕಿದ ಪ್ರಶ್ನೆಗೆ ಉತ್ತರ ಕೊಡದೆ, ರೇವಣಸಿದ್ದಪ್ಪ ಕುದುರೆ ಯನ್ನು ನಿಂತಲ್ಲಿಯೇ ಬಿಡುವದು ಸೂಕ್ತ ವೆಂದು ತಿಳಿದು, ಬಿಟ್ಟು ತಾವು ಗೌಡರ ಮನೆಯನ್ನು ಪ್ರವೇಶಿಸಿದರು.

"ಗೌಡ್ರೇ— ಗೌಡ್ರೇ" ಎಂದು ಕೂಗಿ ದರು. ಅತ್ತಿತ್ತ ನೋಡಿದರು. ಯಾರೂ ಕಾಣಿಸಲಿಲ್ಲ. ... ಹೊತ್ತು ಸುಮ್ಮನೆ ನಿಂತು ಪುನಃ 'ಗೌಡ್ರೇ' ಎಂದರು.

ಆಗ, ಗೌಡರ ಎರಡನೇ ಹೆಂಡತಿ ಪಾರ ಬತಿಬಾಯಿ ಹೊರಗೆ ಬಂದು.

"ಯಾರ ಬೇಕಾಗಿತ್ತು ?" ಎಂದು ಕೇಳಿ ದಳು.

ಕೆಂಪು ಗಜ್ಜರಿಯಂತೆ ಮಿಂಚುವ ಮೈ, ಎದೆಯಿಂದ ಹೊಕ್ಕಳದ ತನಕ ಬರಿದಾದ ದೇಹ, ಸೇಬಿನಂತಹ ಗಲ್ಲ, ಎರಡೂ ಬೊಗಸೆಗೂ ಸಿಲುಕಲಾರದಂತಹ ಕುಚ ಗಳು, ಇನ್ನೇನೋ ಕಂಡು ರೇವಣಸಿದ್ದಪ್ಪ ಹೌಹಾರಿದರು. ಅವರು ಹುಚ್ಚನಂತೆ ನಿಂತುಕೊಂಡಿದ್ದನ್ನು ಗಮನಿಸಿ, ಪಾರಬತಿ—

"ಯಾರ್ ಬೇಕೋ ಯಜಮಾನಾ, ಹಂಗ್ಯಾಕ ನಿಂತೀದಿ ?" ಎಂದು ಕೇಳಿದಳು.

'ನೀನೇ ಬೇಕು' ಎಂಬ ವಾಕ್ಯಬಾಯಿಗೆ ಬಂದಿದ್ದನ್ನು ತಡೆದು– "ಗೌಡ್ರು ಬೇಕು" ಎಂದು ರೇವಣಸಿದ್ದಪ್ಪನವರು ಹೇಳಿದರು.

"ಗೌಡ್ರು ಮನ್ಯಾಗಿಲ್ಲಾ" ಎಂದು ಸಂಕ್ಷಿಪ್ತ ಉತ್ತರ ಬಂತು.

"ಎಲ್ಲಿದಾರ?" ಎಂದು ರೇವಣ ಸಿದ್ದಪ್ಪ ಕೇಳಿದ್ದಕ್ಕೆ.

ಗೌಡತಿ– ಸುಡುಗಾಡದಾಗ ಎಂದಳು.

ಅಯ್ಯೋ ದೇವರೆ! ಗೌಡ್ರನ್ನ ಹುಡುಕಿ ಕೊಂಡು ಸುಡಗಾಡಕ್ಕೆ ಹೋಗಬೇಕೆ! ಎಂದು ತಮ್ಮಷ್ಟಕ್ಕೆ ತಾವೇ ಕೇಳಿಕೊಂಡು, ಇನ್ನೊಂದು ಸಲ ಪಾರಬತಿಯನ್ನು ಕಣ್ತುಂಬ ನೋಡಿ, ರೇವಣಸಿದ್ದಪ್ಪನವರು ಹೊರಗೆ ಬಂದರು.

ಹೊರಗೆ ಬಂದು ನೋಡುತ್ತಾರೆ, ಅವರ ಕುದುರೆ ಮಾಯ. ಎಲ್ಲಿ ಹೋಯಿತೆಂದು ಗಾಬರಿಗೊಂಡರು. ದೀಕ್ಷಿತರ ಕುದುರೆ ಕಳೆದು ಹೋಯಿತೆಂದರೆ ಮಾಡುವದೇ ನೆಂದು ಮರುಗಿದರು. ಅತ್ತಿತ್ತ ಸುತ್ತಾಡಿ ನೋಡಿದರೆ ಎಲ್ಲಿಯೂ ಕುದುರೆ ಕಾಣಿಸ ಲಿಲ್ಲ. ಅಪರೂಪಕ್ಕೆ ಆಗೊಮ್ಮೆ ಈಗೊಮ್ಮೆ ಯಾರಾದರೂ ಕಾಣಿಸುತ್ತಿದ್ದರು. ಆದರೆ ಅವರು ಸಾಹೇಬರ ಕಡೆಗೆ ಲಕ್ಷ್ಯಕೊಡು ತ್ತಿರಲಿಲ್ಲ.

ಶಾಲೆಗಾಗಿ ಸ್ಥಳ ಹುಡುಕಲು ಬಂದ ಎ. ಈ. ಓ. ಸಾಹೇಬರಿಗೆ ಈಗ ಕುದುರೆ ಹುಡುಕುವ ಕೆಲಸ ಪ್ರಾರಂಭವಾಯಿತು. ಇವರು ಕಂಡ ಕಂಡಲ್ಲಿ ಹೋಗಿ ನೋಡ ತೊಡಗಿದರು. ಇವರ ಸಂಶಯಾಸ್ಪದ ರೀತಿಯ ಚಲನವಲನವನ್ನು ಗಮನಿಸಿದ್ದ ಧೋತರ ಬಂಡಿ ನರಸಪ್ಪ– ಓಡೋಡಿ ಹೋಗಿ ಫಕೀರ ಮೊಹಮುದರಿಗೆ ಹೇಳಿದ. ಫಕೀರ ಮೊಹಮುದ ತನ್ನ ಗೆಳೆಯ ಈರಣ್ಣ ನೊಂದಿಗೆ ಬಂದರು.

ರೇವಣಸಿದ್ದಪ್ಪ ಆಗಸರ ಅಮೃತಪ್ಪನ ಶಿಪ್ಪಿಯಲ್ಲಿ ನಿಂತಿದ್ದರು. ಫಕೀರ ಮೊಹ ಮುದ, ಧೋತರ ಬಂಡಿ ನರಸಪ್ಪ ಮತ್ತು ಈರಣ್ಣ, ಬಂದಿದ್ದೇ ಗಬಕ್ಕನೆ, ರೇವಣ ಸಿದ್ದಪ್ಪನನ್ನು ಹಿಡಿದುಕೊಂಡರು. ಧೋತರ ಬಂಡಿ ನರಸಪ್ಪ ಹಿಂದೆ ಮುಂದೆ ನೋಡದೆ "ನಾಳಪ್ಪ- ಕಳ್ತಾನ ಮಾಡಾಕ ಬಂದೀದ್ಯಾ ಚೋರ್ಯೇದಿಮಗನಾ" ಎಂದ ರಪ್ಪಂದು ತಲೆಯ ಮೇಲೆ ಹೊಡೆದ.

"ನನ್ನಪ್ಪ ಪ್ಯಾಂಟು ಬಿಚ್ಚಿ ಆಗಸ ಬಾಕ್ಲಾಕ ನಿಂದ್ರಿಸ್ತೀನಿ" ಎಂದ ಈರಣ್ಣ.

"ಯಾರು ನೀನು? ಯಾವೂರಂವ? ಯಾಕ ಬಂದೀ? ಏನೇನು ಕಳೂ ಮಾಡ್ದಿ? ಎಂದೆಲ್ಲ ಪ್ರಶ್ನೆಗಳನ್ನು ಹಾಕಿ ಉತ್ತರದ ದಾರಿ ಕಾಯುತ್ತ ಫಕೀರ ಮೊಹಮುದ ನಿಂತುಕೊಂಡ.


ಗಾಬರಿಯಿಂದ ರೇವಣಸಿದ್ದಪ್ಪನವರ ಮುಖದಿಂದ ಒಂದೂ ಶಬ್ದ ಬರಲಿಲ್ಲ.

ರೇವಣಸಿದ್ದಪ್ಪನನ್ನು ಬಂಧಿಸಿ ಚಾವಡಿ ಕಟ್ಟೆಗೆ ತರಲಾಯಿತು. ಇಲ್ಲಿ ರೇವಣ ಸಿದ್ದಪ್ಪ ಬಾಯಿ ಬಿಚ್ಚಿದರು. ತಾವು ಯಾರು? ಯಾಕೆ ಬಂದಿದ್ದೇನೆ, ಇತ್ಯಾದಿ ವಿಷಯಗಳನ್ನು ಹೇಳಿದರು.

"ಎಲಾ, ಇವನ, ಘಾತಾಯ್ತು. ತಪ್ಪಾ ಯ್ತರೀ ಸಾಹೇಬ್ರೆ. ಮಾಫಿ ಮಾಡ್ರಿ, ಅಲ್ಲರೀ ಸಾಹೇಬ್ರೆ ಸಾಲಿ ಮಾಸೇಸರ ಆಗಿ ತಿಪ್ಯಾಗೇನ್ ಮಾಡಾಕತ್ತಿದ್ರಿ" ಎಂದು ಫಕೀರ ಮೊಹಮುದ ಕೇಳಿದರು.

ರೇವಣಸಿದ್ದಪ್ಪನವರು ತಮ್ಮ ಕುದುರೆ ವಿಷಯ ತಿಳಿಸಿದರು.

"ಹಾರಮುಂದಿ ಕುದಿರಿ ಅಂದಮ್ಯಾಗ ಅದೆಲ್ಲಿ ಹೋಗ್ತಾಯ್ತರೀ ಸಾಹೇಬ್ರ. ನಮ್ಮೂರಾಗ, ಒಂದೇ ಒಂದು ಹಾರಮುಸಿ ಆಯ್ತು. ನರಸಿಂಹಾಚಾರಿ ಜೋಶಿ, ಅಂತ. ಅವನ ಹಿಡ್ದು ಬಾಕ್ಲಾಗ ನಿಂತಿರಬೇಕು ಚಿಡ್ರಿ" ಎಂದು ಈರಣ್ಣ ಹೇಳಿದ.



"ಒಂದು ಹೊಸ ದೆವ್ವದ ಕಥೆ ಪುಸ್ತಕ ಕೊಡಿ ಸಾರ್..."

"ಅಲ್ಲರೀ ಸಾಹೇಬ್ರ ನೀವು ಯಾಕ ಪಂತಿಗಿ ಯಾಕ ಬಂದ್ರೀ?" ಎಂದು ಫಕೀರ ಮೊಹಮುದ ಕೇಳಿದ.

ರೇವಣಸಿದ್ದಪ್ಪ, ತಾವು ಬಂದ ಕಾರಣ ವೇನೆಂದು ತಿಳಿಸಿದರು.

'ಅಂದ್ರ ಹೀಂಗ ಮಾಡೋಣು ಸಾಹೇಬ್ರ. ಇಲ್ಲಿಂದ ಗೌಡರ ಮನೀಗಿ ಹೋಗೋಣು. ಗೌಡರ ಏನಂತಾರು ಕೇಳೋಣು" ಎಂದ ಈರಣ್ಣ.

ಗೌಡರ ಮನೆಗೆ ಹೋದರೆ, ಕೆಲಸ ಆಗಲಿ, ಬಿಡಲಿ, ಮತ್ತೊಮ್ಮೆ ಆ ಹೆಣ್ಣು ಕಾಣಿಸಬಹುದಲ್ಲ ಎಂಬ ಏಕೈಕ ಆಸೆ ಯಿಂದ.

"ಹೂಂನ್ರೆಪ, ಗೌಡರ ಅಭಿಪ್ರಾಯ ಕೇಳೇ ಮುಂದಿನ ಕೆಲಸ ಮಾಡೋಣು, ನಡೀರಿ" ಎಂದರು ರೇವಣಸಿದ್ದಪ್ಪ.

○ ○ ○ ○

ಎಲ್ಲರೂ ಗೌಡರ ಮನೆಗೆ ಬಂದರು. ಈ ಸಲ ಗೌಡರು ಮನೆಯಲ್ಲಿದ್ದರು.

ತಾವು ಬಂದ ಕಾರಣ. ಯಲವಂತಿ ಯಲ್ಲಿ ಶಾಲೆಯ ಅವಶ್ಯಕತೆ ಶಿಕ್ಷಣದ ಮಹತ್ವ, ಗ್ರಾಮಾಭಿವೃದ್ಧಿಯಲ್ಲಿ ಸರಕಾರಕ್ಕಿದ್ದ ಕಳಕಳಿ, ತಮ್ಮ ಮೇಲಧಿಕಾರಿಗಳ ಒತ್ತಾಯ. ಬರುವ ಇಪ್ಪತ್ತೆಂಟರಂದೇ ಮಾನ್ಯ ಶಿಕ್ಷಣ ಮಂತ್ರಿ ಗಳ ಆಗಮನ, ಅವರ ಅಮೃತ ಹಸ್ತ ದಿಂದಲೇ ಶಾಲೆಯ ಕಟ್ಟಡದ ಶಂಕು ಸ್ಥಾಪನೆ, ಅದರ ವ್ಯವಸ್ಥೆ ಗ್ರಾಮಸ್ಥರು ಮಾಡಬೇಕಾದ ಕೆಲಸ, ಎಲ್ಲದರ ಬಗ್ಗೆಯೂ ರೇವಣಸಿದ್ದಪ್ಪನವರು ವಿವರ ವಾಗಿ ಪ್ರಸ್ತಾಪಿಸಿದರು–

"ನೀವು ಸಹಾಯ ಮಾಡಬೇಕು" ಎಂದು ಕೇಳಿಕೊಂಡರು. ಗೌಡರು ಫಕೀರ ಮೊಹಮುದನ ಕಡೆಗೆ ನೋಡಿದರು. ಫಕೀರ ಮೊಹಮುದ ಎದ್ದರು. ಅವರಿಬ್ಬರು ಒಳಗೆ ಹೋದರು. ಇಪ್ಪತ್ತು ನಿಮಿಷದ ನಂತರ ಬಂದು ಕುಳಿತುಕೊಂಡರು. ಬೂಂದಿಲಾಡು, ಚುರುಮುರಿ, ಚಹಾ ಬಂತು. ರೇವಣಸಿದ್ದಪ್ಪನವರಿಗೆ ಸ್ವರ್ಗ ಸಿಕ್ಕಂತಾಯಿತು. ಗಪ್‌ಗಪ್ ತಿನ್ನಲಾ



[illegible]ದರು. ಜನಾ ಕುಣಿದಾಡ ಹತ್ತಿ
ದರು.

ನೀವು ಏನೂ ಕಾಳಜಿ ಮಾಡಬ್ಯಾಡ್ರಿ ಸಾಹೇಬ್ರ. ನಾ ಎಲ್ಲಾ ವ್ಯವಸ್ಥಾ ಮಾಡ್ತೇನಿ. ನಮ್ಮ ಈರಭದ್ರೇಶ್ವರ ಗುಡಿ ಮುಂದಿನ ಜಾಗಾ ಪ್ರಶಸ್ತ ಅಯ್ತಿ–ಅಲ್ಲಿ ಮಂಟಪ ಹಾಕಸ್ತೇನಿ. ಬಾಳಿದಿಂಡು, ತೋರಣ ಕಟ್ಟಸ್ತೇನಿ. ನಮ್ಮ ಮಸೀದಿವಳಗ ಲೌಡ್‌ಸ್ಪೀಕರಾಯ್ತಿ, ಅದನ್ನೇ ಹಚ್ಚಸ್ತೇನಿ. ಮುಂಜಾನೊಂಜೊದ್ರೊಳಗ ಡಂಗುರ ಹೊಡ್ಸತೀನಿ. ಪಾಂಚಪಚವೀಸ ಮಂದಿ ಬಂದ್ರೂ ಹರಕತ್ತಿಲ್ಲ, ಊಟದ ಇಂತಜಾಮು ಮಾಡ್ಸತೀನಿ. ಆಯ್ತಿಲ್ಲೋ?" ಎಂದು ಗೌಡರ ಹೇಳಿದರು.

ಗೌಡರ ಮಾತುಗಳನ್ನು ಕೇಳಿ ರೇವಣಸಿದ್ದಪ್ಪನವರಿಗೆ ಬ್ರಹ್ಮಾಂಡವೇ ದೊರಕಿದಂತಾಯಿತು.

ಯಾಕ ಫಕೀರ ಸಾಬಾ, ಎಲ್ಲಾ ಬರೋಬರಿ ಆಗ್ತಾಯ್ತಿಲ್ಲ ?" ಎಂದು ಗೌಡರು ಕೇಳಿದರು.

"ಹೌದು ಬರೋಬರಿ ಆಗ್ತಾಯ್ತಿ. ಇಪ್ಪತ್ತೆಂಟು ತಾರೀಖಿಗೆ ನೀವು ನಿಮ್ಮ ಮಂದಿ, ಮಂತ್ರಿ ಸಾಹೇಬ್ರು ಎಟು ತಾಸಿಗೆ ಬರ್ತೀರಿ ?" ಎಂದು ಕೇಳಿದ.

"ಟೈಮು ಈಗ ಹೇಳಾಕ ಬರಾಂಗಿಲ್ಲ. ಮಂತ್ರಿಗಳ ಮರ್ಜಿ ಮ್ಯಾಗ ಇರ್ತಾಯ್ತಿ. ಏನಿದ್ದರೂ ನೀವು ಬೇಗನೆ ಮುಂಜಾನೆಯಿಂದಲೇ ಸಂಪೂರ್ಣ ಫುಲ್ ತಯಾರಿ ಮಾಡಿಡ್ರಿ." ಎಂದು ರೇವಣಸಿದ್ದಪ್ಪ ತಿಳಿಸಿದ.

ಬಂದ ಕೆಲಸ ಆದಂತಾಯಿತೆಂದು ಸಂತೋಷದಿಂದ ಎಲ್ಲರ ಕೈ ಕುಲುಕಿ ರೇವಣಸಿದ್ದಪ್ಪನವರು ಎದ್ದರು. ದೋತರ ಬಂಡಿ, ಜೋಯಿಸರ ಮನೆ ಹಿತ್ತಲದಲ್ಲಿ ನಿಂತ ಕುದುರಿಯನ್ನು ದರದರಾಂತ ಎಳೆದು ಕೊಂಡು ಬಂದ. ರೇವಣಸಿದ್ದಪ್ಪ ಸವಾರಿ ಮಾಡಿಕೊಂಡು ಹೊರಟರು.


o o o

ಇಪ್ಪತ್ತೆಂಟರಂದು ಮಧ್ಯಾಹ್ನ ಮೂರು ಗಂಟೆಗೆ ಯಳವಂತಿ ಗ್ರಾಮದ ಕಾರ್ಯಕ್ರಮ ಫಿಕ್ಸಾಯಿತು. ಕರಿಲಿಂಗ ಆರಾಧ್ಯರು ಬಹು ಉತ್ಸಾಹದಿಂದ ಕಾರ್ಯಕ್ರಮ ರೂಪಿಸಿದರು. ಆಮಂತ್ರಣ ಪತ್ರಿಕೆಗಳನ್ನೂ ಅಚ್ಚು ಹಾಕಿಸಿದರು.

o o o

ಇಪ್ಪತ್ತೆಂಟರಂದು ಮಧ್ಯಾಹ್ನ ಎರಡು ಗಂಟೆಗೆ ಎಲ್ಲರೂ ಹೊರಟರು ಮುಂದೆ ಒಂದು ಪೋಲೀಸ್ ಜೀಪು. ಅದರಲ್ಲಿ ಎಸ್. ಐ. ಸಾಹೇಬರು. ಹಿಂದಿನ ಜೀಪಿನಲ್ಲಿ. ಡಿ.ಡಿ.ಪಿ. ಐ. ಸಾಹೇಬರ ಸಿಬ್ಬಂದಿ ವರ್ಗ. ಅವರ ಹಿಂದಿನ ಕಾರಿನಲ್ಲಿ ಕಾರ್ಯ ನಿರ್ವಾಹಕ ಅ[illegible]ರು. ಅದರ ಹಿಂದಿನ ಕಾರಿನಲ್ಲಿ ಜೇ. ಡಿ. ಪಿ. ಐ. ಸಾಹೇಬರ ಕಾರು. ಅದರಲ್ಲಿ ಜೇ. ಡಿ. ಪಿ. ಐ. ಮತ್ತು ಅವರ ಧರ್ಮ ಪತ್ನಿ, ಅದರ ಹಿಂದೆ ಮಂತ್ರಿಗಳಿಗೆ ಬೇಕಾದವರ ಎರಡು ಕಾರುಗಳು. ನಂತರ ಮಂತ್ರಿಗಳ ಕಾರು, ಹಿಂದಿನ ಸೀಟಿನಲ್ಲಿ ಮಂತ್ರಿಗಳು ಮತ್ತು ಡಿ. ಸಿ, ಸಾಹೇಬರು, ಮುಂದುಗಡೆ ಕರಿಲಿಂಗಆರಾಧ್ಯರು. ಹೀಗೆ ದೊಡ್ಡದೊಂದು "ಲವಾಜಮಾ" ಯಳವಂತಿಗೆ ಹೊರಟಿತು.

ಶ್ರೀರಾಮಪುರ[illegible], ನಾಲ್ಕು ಮೈಲು



ಕೈಗಡ

ಕೈಗಡವ ಕೊಡಬೇಡ ಹತ್ತುಗಡೆ ಜನಗಳಿಗೆ,
ಕೊಟ್ಟೆಯಾದರೆ ತಿರುಗಿ ಕೇಳಬೇಡ:
ಉಪಕೃತಿಯ ಪಡೆದವರೆ ಶತ್ರುತ್ವ ತೋರುವರು
ಗುಣನೋಡಿ ಹಣನೀಡು ನಂದಕಂದ

—ಜಿ. ಎಚ್. ಕೆ.

ಮುಂದೆ ವೇಗವಾಗಿ ವಾಹನಗಳು ಬಂದವು. ಇನ್ನೇನು ಎರಡು ಮೂರು ಫರ್ಲಾಂಗ್ ಬಂದರಾಯಿತು ಯಳವಂತಿ ಬಂದೇ ಬಿಡುತ್ತದಲ್ಲ. ಅಷ್ಟರಲ್ಲಿ ಎಲ್ಲಕ್ಕಿಂತ ಮುಂದಿದ್ದ ಜೀಪು ಗಕ್ಕನೆ ನಿಂತಿತು. ಎಲ್ಲರೂ ತಮ್ಮ ತಮ್ಮ ವಾಹನಗಳಿಗೆ ಬ್ರೇಕ್ ಹಾಕಿ ನಿಲ್ಲಿಸಿದರು—ರೇವಣಸಿದ್ಧಪ್ಪ ತಮ್ಮ ಘಟಘಟಿಯ ಮೇಲೆ 'ಪೈಲಿಟ್ಟಿ'ನಂತೆ ಹೊರಟಿದ್ದರು. ಅವರು ಯಳವಂತಿ ಗ್ರಾಮದ ಹತ್ತಿರ ರಸ್ತೆಯ ಮೇಲೆ ದೊಡ್ಡ ತಗ್ಗು ಬಿದ್ದಿದ್ದು ನೋಡಿದರು. ವಾಹನಗಳು ಮುಂದೆ ಹೋಗಲು ಸಾಧ್ಯವಿರಲಿಲ್ಲ. ಸುದ್ದಿ ಮಂತ್ರಿಗಳ ಕಿವಿಗೂ ಹಾಕಲಾಯಿತು.

ಮಂತ್ರಿಗಳು— "ಪರವಾ ಇಲ್ಲ, ಒಂದೆರಡು ಫರ್ಲಾಂಗಿದ್ದರೆ ನಡೆದುಕೊಂಡೇ ಹೋದರಾಯಿತು." ಎಂದು ಕಾರಿನಿಂದ ಇಳಿದೇ ಬಿಟ್ಟರು. ಮಂತ್ರಿಗಳು ಇಳಿದದ್ದನ್ನು ನೋಡಿ ಎಲ್ಲರೂ ಇಳಿದರು.

ರಸ್ತೆಗುಂಟ ಮೆರವಣಿಗೆ ಹೊರಟಂತಾಯಿತು.

"ಏನ್ರಿ ಇಂಜನಿಯರ್ ಅವರೆ, ಏನ್ ಕೆಲ್ಸ ಮಾಡ್ತೀರಿ? ರಸ್ತೆ ರಿಪೇರಿ ಮಾಡಾಕ ಆಗಾಂಗಿಲ್ಲೇನ್ರೀ?" ಎಂದು ಕೇಳಿದರು.

ಎಕ್ಸಿಕ್ಯೂಟಿವ್ ಇಂಜನಿಯರ್ ಬಿದರ್‌ಬಾಂಬು ಅವರು— ಸಾರ್, ಈ ವರ್ಷದ ಐ. ಆರ್. ಡಿ. ಪಿ.ಯಲ್ಲಿ ಈ ರಸ್ತೆ ಸೇರಿಸಿದ್ದೇವೆ ಸಾರ್ ಎಂದರು.

ಅದು ಇದು ಮಾತಾಡುತ್ತ ಮಂಡಳಿ ಯಳವಂತಿ ಸೀಮೆಗೆ ಬಂತು ಆಗ ಯಳವಂತಿಯಲ್ಲಿ ಹಲಗೆ ಬಾರಿಸುವ ಧ್ವನಿ ಕೇಳಿಸಿತು. ತಮ್ಮ ಸ್ವಾಗತಕ್ಕೇ ಊರ ಜನರು ಬಾಜಾ ಭಜಂತ್ರಿಯೊಂದಿಗೆ ಸಿದ್ಧರಾಗಿದ್ದಾರೆಂದು 'ಮಂಡಳಿ' ಖುಷಿಪಟ್ಟಿತು. ಕರಿಲಿಂಗ ಆರಾಧ್ಯರು ತುಂಬ ಉತ್ಸಾಹದಿಂದ ತಾವು ಮಾಡಿದ ಕಾರ್ಯದ ಬಗ್ಗೆ ಮಂತ್ರಿಗಳಿಗೆ, ತಿಳಿಸುತ್ತಿದ್ದರು. ಅಷ್ಟರಲ್ಲಿ ಯಳವಂತಿ ಗ್ರಾಮದ ಕಡೆಯಿಂದ ಸಹಸ್ರಾರು ಕವಣೆಕಲ್ಲುಗಳು, ಭರ್SS ಭರ್ರ್SSSಂದು ಬರತೊಡಗಿದವು. ನೋಡ ನೋಡುತ್ತಲೆ, ಎಸ್. ಐ. ಸಾಹೇಬರ ಮೂಗಿಗೆ ಒಂದು ಕಲ್ಲು ತಾಗಿತು. ಅವರ ಮೂಗಿನಿಂದ ರಕ್ತ ಸುರಿಯತೊಡಗಿತು. ಇನ್ನೊಂದು ಕಲ್ಲು ಕರಿಲಿಂಗ ಆರಾಧ್ಯರ ತಲೆಗೆ ಬಿತ್ತು. ಅವರ ತಲೆಯಿಂದಲೂ ರಕ್ತ ಸ್ಫುಟಿಯತೊಡಗಿತು. ಮತ್ತೊಂದು ಕಲ್ಲು ಮಂತ್ರಿಗಳ ಮೊಣಕಾಲಿಗೆ ಬಿತ್ತು. ಮಂತ್ರಿಗಳು ಗಕ್ಕನೆ ನೆಲಕ್ಕುರುಳಿದರು. ಕಲ್ಲುಗಳು ಲಕ್ಷಾಂತರ ಹಕ್ಕಿಗಳಂತೆ ಹಾರುತ್ತ ಬಂದು ಇವರೆಲ್ಲರ ಮೇಲೆ ಬೀಳತೊಡಗಿದವು.

ಪರಿಸ್ಥಿತಿಯು ಅರಿವಾಯಿತು. ರೇವಣಸಿದ್ಧಪ್ಪನವರು ತಮ್ಮ ನೌಕರಿಯ ಚಿಂತೆಯನ್ನು ಬಿಟ್ಟು ಘಟಘಟಿ ತಿರುಗಿಸಿ ಓಡಿದರು.

ಮಂತ್ರಿಗಳನ್ನು ಹೊತ್ತುಕೊಂಡು ಅವರ ಕಾರಿನಲ್ಲಿ ಹಾಕಲಾಯಿತು. ಕ್ಷಣಾರ್ಧದಲ್ಲಿ ಕಾರುಗಳು ವಿರುದ್ಧ ದಿಕ್ಕಿನಲ್ಲಿ ಓಡತೊಡಗಿದವು.




ನೆನಪುಗಳು

ಕಾಡುತ್ತವೆ ಎಂದೋ ಕಂಡ ಮುಖ
ಇನ್ನೆಂದೋ ಇದ್ದಕ್ಕಿದ್ದಂತೆ
ರಸ್ತೆಯಲ್ಲಿ ಎಕ್ಕಾ ಸಕ್ಕಾ
ಹಲ್ಲೋ ಎಂದು.

ಜಂಜಾಲ ತಪ್ಪಿಸ್ಯಾಗ ನಿಂತು
ಮರೆವು ಮುಗಿಲ್ಗೆ ಏರಿ
ಮುನ್ನಡೆಯ ಬೇಕೆಂದರೆ

ತಿರುತಿರುಗಿ ನೋಡಿ
ಮನದಾಳ ಪಾತಾಳವನ್ನೆಲ್ಲ ಕೆದರಿ
ಘಟ್ಟನೆ ಮರೆಯಾಗಿ ಬಿಡುತ್ತವೆ.
ಇದಾವ ಭಾವ ಲಹರಿ?

—ಸುರೇಶ ಪಾಟೀಲ





೨೭೯ನೇ ಪುಟದಿಂದ
ವಿಶ್ವವಿದ್ಯಾಲಯ ಕಥಾ ಅಂಚೆ ಶಿಕ್ಷಣ ವನ್ನು ಇನ್ನಷ್ಟು ಜನಪ್ರಿಯಗೊಳಿಸುವುದು ಇನ್ನೊಂದು ಉಪಾಯವಾಗಬಲ್ಲದು.

ಶಿಕ್ಷಕ ಶಿಕ್ಷಣದ ಬೆನ್ನೆಲುಬು. ಶಿಕ್ಷಕನ ಪಾತ್ರ ಅತಿಮುಖ್ಯವಷ್ಟೇ ಅಲ್ಲ, ಅನಿವಾರ್ಯ ಕೂಡ. ಶಿಕ್ಷಕರನ್ನು ಮೂರು ವಿಧವಾಗಿ ವಿಂಗಡಿಸಬಹುದು.

(1) ಅಧ್ಯಾಪಕರು-ಇವರು ವಿಷಯ ಬಲ್ಲವರು ಮಾತ್ರ.

(2) ಉಪಾಧ್ಯಾಯರು–ವಿದ್ಯಾರ್ಥಿಗಳ ಬಗ್ಗೆ ವಿಶೇಷ ದಕ್ಷತೆ ವಹಿಸಿ ಕಲಿಸುವವರು.

(3) ಆಚಾರ್ಯ-ತನ್ನ ಆಚರಣೆ ಯಿಂದಲೇ ವಿದ್ಯಾರ್ಥಿಗಳಿಗೆ ಆದರ್ಶ ಪ್ರಾಯನಾಗಿರುವವ.

ಆದ್ದರಿಂದ ಪ್ರತಿಯೊಬ್ಬ ಶಿಕ್ಷಕನೂ "ಆಚಾರ್ಯ"ನಾಗಲು ಪ್ರಯತ್ನಿಸಬೇಕು. ದೇಶದ ಸಂಸ್ಕೃತಿ-ಪರಂಪರೆಗಳ ಬಗ್ಗೆ ಅರಿವು ಅಭಿಮಾನ, ದೇಶದ ಹಾಗೂ ಮಕ್ಕಳ ಭವಿಷ್ಯದ ಬಗ್ಗೆ ಸದಾ ಜಾಗೃತಿ ಅವನಲ್ಲಿರ ಬೇಕಾಗುತ್ತದೆ. ಕಲಿಸುವ ವಿಧಾನಗಳ ಬಗೆಗಿನ ಶಿಕ್ಷಕ ತರಬೇತಿ ವ್ಯಾಸಂಗಕ್ಕಿಂತ ಶಿಕ್ಷಕನಲ್ಲಿ ಇಂಥ ಮೇಲ್ಪಟ್ಟದ ನಡೆ-ನುಡಿ ಅಳವಡಲು ಪ್ರಥಮ ಪ್ರಾಶಸ್ತ್ಯ ಸಿಗಬೇಕು. ಆ ಮಟ್ಟಕ್ಕೇರುವುದು ಅವನಿಗೆ ಸಾಧ್ಯ ವಾಗಲು ನಿಜವಾಗಿಯೂ ಅಗತ್ಯವಿರುವ ಸೌಕರ್ಯಗಳು ಒದಗಬೇಕು. ಈ ಮಟ್ಟದ ಶಿಕ್ಷಕರಿದ್ದರೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆಯಾಗಬಹುದು.

ಶಾಲೆಯಲ್ಲಾಗಲೀ ಅಥವಾ ತರಗತಿಯ ಲ್ಲಾಗಲೀ ವಿದ್ಯಾರ್ಥಿಗಳ ಸಂಖ್ಯೆ ಅಧಿಕ ವಿದ್ದಷ್ಟೂ ಅಧ್ಯಾಪನದ ಮಟ್ಟ ಕುಂಠಿತ ವಾಗುತ್ತದೆ. ಶಿಕ್ಷಣದ ಸುಧಾರಣೆಗೆ ಇದೊಂದು ಮಾರಕ ಅಂಶ. ಹೀಗಾಗಿ ಶಾಲೆಯಲ್ಲಿರುವ ಮತ್ತು ವಿಶೇಷವಾಗಿ ತರ ಗತಿಯಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಯನ್ನು ಮಿತವಾಗಿಡಲು ಪ್ರಯತ್ನಿಸ ಬೇಕು. ಗೈಡೆನ್ಸ್ ಅಂಡ್ ಕೌನ್ಸೆಲಿಂಗ್ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಇತ್ತೀಚೆ ಹೆಚ್ಚಾಗಿ ಹೇಳಬರುತ್ತಿರುವ ವಿಷಯ. ಇದು ಎಷ್ಟು ಸಾಮಯಿಕ ಪರಿಕಲ್ಪನೆ ಎಂದರೆ ಹೈಸ್ಕೂಲು ಮತ್ತು ಪಿ. ಯು. ಸಿ. ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗದ ದಿಶೆಯನ್ನು ನಿರ್ಧರಿಸುವಲ್ಲಿ, ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಯೋಗ್ಯ ಮಾರ್ಗದರ್ಶನ ಹಾಗೂ ಸಲಹೆ ನೀಡುವ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತಂದರೆ, ಶಿಕ್ಷಣ ಕ್ಷೇತ್ರದಲ್ಲಿಯ ಗೊಂದಲ, ಲಂಚಗುಳಿತನವನ್ನು ಬಹುಮಟ್ಟಿಗೆ ಕಡಿಮೆ ಮಾಡಬಹುದು.

ಶೈಕ್ಷಣಿಕ ಸಂಘ ಸಂಸ್ಥೆಗಳ ಸ್ವಾಯತ್ತ ತೆಗೆ ಕಾಲ ಇನ್ನೂ ಪಕ್ವವಾಗಿಲ್ಲ. ಶಾಲೆಗ ಳನ್ನು ಸರ್ಕಾರವೇ ನಡೆಸಲಿ ಅಥವಾ ಖಾಸಗಿಯವರೇ ನಡೆಸಲಿ ಅಂಥವರು ಶಿಕ್ಷಣದ ಬಗ್ಗೆ ನಿಜವಾದ ಕಳಕಳಿ, ಪ್ರಾಮಾಣಿಕತನವನ್ನು ಹೊಂದಿದವರಾಗಿರ ಬೇಕು; ಆಡಂಬರ, ವಂಚನೆ ಪ್ರಯೋ ಜನಕ್ಕೆ ಬಾರದು. ಪಾಲಕರಿಗೂ ಶಿಕ್ಷಣ ಪದ್ಧತಿಯ ಬಗ್ಗೆ ತಮ್ಮ ಮಕ್ಕಳ ಅಧ್ಯಯ ನದ ಬಗ್ಗೆ ಅರಿವು, ಕಳಕಳಿ, ಹೊಣೆಗಾರಿ ಕೆಯ ಭಾವನೆ ಅಷ್ಟೇ ಅಗತ್ಯ.

ಸ್ತ್ರೀ ಶಿಕ್ಷಣವೂ ಅಷ್ಟೇ ಮುಖ್ಯ. ತನ್ನ ಮನೆ ಮತ್ತು ಮಕ್ಕಳನ್ನು ಸಮರ್ಥವಾಗಿ ನೋಡಿಕೊಳ್ಳಲು ಸ್ತ್ರೀ ಸಮರ್ಥಳಾಗು ವಂಥ ಉತ್ತಮ ಮಟ್ಟದ ಶಿಕ್ಷಣ ಅದಾಗಿರ ಬೇಕು. ಇದರಿಂದ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಮಟ್ಟ ವನ್ನು ಕಾಪಾಡಿಕೊಂಡು ಹೋಗಲು ಅನುಕೂಲವಾಗುತ್ತದೆ. ಏಕೆಂದರೆ ಮಗು ವಿನ ಆಹಾರ, ಆರೋಗ್ಯ, ಮಾನಸಿಕ ಸ್ವಾಸ್ಥ್ಯದ ಬಗ್ಗೆ ಅವಳು ಮನಃಪೂರ್ವಕ ವಾಗಿ ಕಾಳಜಿ ವಹಿಸಿದರೆ ಕಲಿಕೆಯಲ್ಲಿಯ ಎಷ್ಟೋ ತೊಂದರೆಗಳು ತಾವಾಗಿಯೇ ದೂರವಾಗಬಹುದು. ○

ವ್ಯಕ್ತಿತ್ವ ವಿಕಾಸ-ಶಿಕ್ಷಣ

ಶ್ರೀಮತಿ ಡಿ. ವಿಜಯಾ
ಸಮತಾ ವೇದಿಕೆ, ಮೈಸೂರು

ನಮ್ಮ ಸದ್ಯದ ಸಾಮಾಜಿಕ ಪರಿಸ್ಥಿತಿಯ ದೃಷ್ಟಿಯಿಂದ ಹೇಳುವುದಾದರೆ ನಮಗೀಗ ಅಗತ್ಯವಿರುವುದು ಸ್ವತಂತ್ರ ವಿಚಾರಕ್ಕೆ, ವ್ಯಕ್ತಿತ್ವ ವಿಕಾಸಕ್ಕೆ ಇಂಬು ನೀಡುವ ಶಿಕ್ಷಣ. ಈ ದಿಸೆಯಲ್ಲಿ ಶಿಕ್ಷಕನ ದೃಷ್ಟಿಕೋನ ದಲ್ಲಿಯೂ ಬದಲಾವಣೆಗಳಾಗಬೇಕು. ವಿದ್ಯಾರ್ಥಿಯಲ್ಲಿ ಸ್ವತಂತ್ರ ವಿಚಾರವನ್ನು, ವ್ಯಕ್ತಿತ್ವ ವಿಕಾಸವನ್ನು ಪ್ರಚೋದಿಸುವುದು ಶಿಕ್ಷಕನ ಅಧ್ಯಾಪನದ ಪ್ರಧಾನ ಉದ್ದೇಶ ವಾಗಬೇಕು. ಇದಕ್ಕೆ ಶಿಕ್ಷಕನಾಗುವಲ್ಲಿ ಸಚ್ಚಾರಿತ್ರ್ಯ, ಸ್ವತಂತ್ರ ವಿಚಾರಧಾರೆ, ಪೂರ್ವಾಗ್ರಹಪೀಡಿತವಾಗದ ಪ್ರವೃತ್ತಿ ಮೂಲಭೂತ ಅರ್ಹತೆಗಳಾಗಬೇಕಾಗು



ನಿಮ್ಮ ಉಪವಾಸ ಸತ್ಯಾಗ್ರಹ ಅನೇಕ ವರ್ಷಗಳು ಪೂರ್ಣವಾಗಲೆಂದು ಹಾರೈಸು ತ್ತೇನೆ.

ತ್ತದೆ. ವಿದ್ಯಾರ್ಥಿಯ ಸರ್ವತೋಮುಖ ಪ್ರಗತಿಯೇ ಶಿಕ್ಷಣದ ಮುಖ್ಯ ಗುರಿ ಯಾಗಿರುವಾಗ, ಇಂಥ ಅರ್ಹತೆಗಳುಳ್ಳ ವರನ್ನು ಅಧ್ಯಾಪಕ ವೃತ್ತಿಗೆ ಆಯ್ದು ಕೊಂಡು, ಅಂಥವರಿಗೆ ಕಲಿಸುವ ವಿಧಾನ ಗಳ ಬಗ್ಗೆ ತರಬೇತಿ ನೀಡಬಹುದು. ಅಥವಾ ಕಲಿಸುವುದರಲ್ಲಿ ಆಸಕ್ತಿ, ವಿದ್ಯಾರ್ಥಿ ಗಳ ಬಗ್ಗೆ ಕಳಕಳಿ ಇರುವ ಶಿಕ್ಷಕನಿಗೆ ತರಬೇತಿ ಕಡ್ಡಾಯವಾಗಬೇಕಾಗಿಯೂ ಇಲ್ಲ.


ಇನ್ನು ಶಿಕ್ಷಣ ಪದ್ಧತಿಯ ಬಗ್ಗೆ ಹೇಳು ವುದಾದರೆ, ಸಹಶಿಕ್ಷಣ ಪದ್ಧತಿ ಸಮಾಜದ ದೃಷ್ಟಿಯಿಂದ ಆರೋಗ್ಯಕರ. ನಮ್ಮ

ಸಂಸ್ಕೃತಿಯ ಮೌಲ್ಯಗಳನ್ನು, ಪರಂಪರೆಯ ಔನ್ನತ್ಯವನ್ನು ಕಾಪಾಡಿಕೊಂಡು ಬರುವ ಪ್ರಜ್ಞೆ ನಮ್ಮ ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಮೂಡಬೇಕಾದರೆ ಸಹಶಿಕ್ಷಣ ಅದಕ್ಕೆ ಉತ್ತಮ ಮಾಧ್ಯಮವೆನಿಸೀತು. ಬಾಲಕ – ಬಾಲಕಿಯರಿಗೆ ಮುಕ್ತ, ಸಮಾನ ಅವಕಾಶಗಳಿರಬೇಕು. ತಾವು ಪರಸ್ಪರರು ಎದುರಾಳಿ (ಪ್ರತಿಸ್ಪರ್ಧಿ) ಗಳೆಂಬ ಭಾವ ಅವರಲ್ಲಿ ಮೂಡದೇ, ಸಹಾಧ್ಯಾಯಿಗಳು ಎಂಬ ಭಾವನೆ ಸದಾ ಜಾಗೃತವಾಗಿರುವಂತೆ ನೋಡಿಕೊಳ್ಳಬೇಕು.

ಇದಕ್ಕೆಲ್ಲ ಶಿಕ್ಷಕನ ಮೇಲಿರುವಷ್ಟೇ ಹೊಣೆ ಪಾಲಕ–ಪೋಷಕ–ಬಂಧುವರ್ಗದವರ ಮೇಲೂ ಇದೆ. ಸತ್ಪ್ರಜೆಯಾಗಲು, ವಿದ್ಯಾರ್ಥಿಯಲ್ಲಿ ಗುಣಮಟ್ಟವನ್ನು ಬೆಳೆಸಲು ಶಿಕ್ಷಕ ಪ್ರಯತ್ನಿಸುವಷ್ಟೇ ಶ್ರದ್ಧೆಯಿಂದ ಮನೆಯಲ್ಲಿಯೂ ಅದೇ ಮಾದರಿಯ ವಾತಾವರಣವನ್ನು ನಿರ್ಮಿಸಲು ಪಾಲಕರು ಪರಿಶ್ರಮಿಸಬೇಕು.

ಪರೀಕ್ಷಾ ಪದ್ಧತಿಯ ಬಗ್ಗೆ ಹೇಳುವುದಾದರೆ ಕಲಿಸುವವನೇ ಪರೀಕ್ಷೆ ಮಾಡಬೇಕು. ಕಲಿಸುವವನು ಮಾತ್ರವೇ ತನ್ನ ವಿದ್ಯಾರ್ಥಿಯ ಬುದ್ಧಿಮಟ್ಟ, ಅಭಿವ್ಯಕ್ತಿ ಸಾಮರ್ಥ್ಯವನ್ನು ಸಮರ್ಥವಾಗಿ ಅರಿತಿರುವುದರಿಂದ, ಅವನು ಮಾತ್ರವೇ ವಿದ್ಯಾರ್ಥಿಯ ಗುಣದೋಷಗಳ ಮೌಲ್ಯಮಾಪನಕ್ಕೆ ಅರ್ಹವ್ಯಕ್ತಿ. ಆಗ ಮಾತ್ರ, ವಿದ್ಯಾರ್ಥಿಗೆ ಮುಂದಿನ ಶಿಕ್ಷಣ ಯಾವ ಮಟ್ಟದ್ದು, ಯಾವ ಮಾದರಿಯದು ಆಗಿರಬೇಕು ಎಂಬುದನ್ನು ನಿರ್ಣಯಿಸುವುದು ಸಾಧ್ಯವಾಗುತ್ತದೆ.

ಕೂಲಿ ಮಾಡುವ ಹೆಂಗಸರಿಗೆ, ವ್ಯವಹಾರಕ್ಕೆ ಅಗತ್ಯವಿರುವಷ್ಟು ಅಕ್ಷರಜ್ಞಾನವನ್ನು ನೀಡಲು, ಅವರ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಕಾನೂನು ಸಲಹೆ ನೀಡಲು ಏರ್ಪಾಡು ಮಾಡಿರುವುದು ಸ್ತುತ್ಯಾರ್ಹ.




ಕನ್ನಡ ಮಾಧ್ಯಮವು ಎಲ್ಲಿದೆ ಸಾಧ್ಯವೇ?

ಶ್ರೀ ಡಿ. ವಿ. ಅರಸ್
ಅಧ್ಯಕ್ಷರು, ಪಿ.ಯು.ಸಿ. ಮಂಡಲಿ,
ಬೆಂಗಳೂರು.

ಕನ್ನಡ ಮಾಧ್ಯಮವನ್ನು ಎಲ್ಲ ಹಂತಗಳಲ್ಲೂ ತರಬೇಕು ಎಂಬ ಬರೀ ಬಾಯಬಡಾಯಿ ಹುರುಳಿಲ್ಲದ್ದು. ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣಕ್ಕೂ ಕನ್ನಡ ಮಾಧ್ಯಮವು ಅಳವಡಲಿ, ಸಂತೋಷ. ಆದರೆ ಕನ್ನಡ ಮಾಧ್ಯಮವನ್ನು ಜಾರಿಗೊಳಿಸುವ ಬಗೆಗಿನ ಘೋಷಣೆ–ಭಾಷಣಗಳನ್ನು ಕೈಬಿಟ್ಟು, ಅದನ್ನು ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗಬೇಕಾಗಿದೆ. ಕನ್ನಡ ಮಾಧ್ಯಮ ಎಂದೊಡನೆ, ವಿಜ್ಞಾನ–ತಂತ್ರಜ್ಞಾನಗಳನ್ನು ಕನ್ನಡಕ್ಕೆ ಅಳವಡಿಸುವುದು ಕಷ್ಟ ಎಂಬ ತಕರಾರು ಕೇಳಿಬರುತ್ತದೆ. ಆದರೆ ವಿಜ್ಞಾನ ಹಾಗೂ ತಂತ್ರಜ್ಞಾನ ಭಾಷೆಯಿಂದ ಬೆಳೆಯತಕ್ಕ ಸಂಗತಿಗಳಾಗಿರದೆ ರಾಷ್ಟ್ರದ ಸಮಗ್ರ ಜನತೆಯ ಕ್ರಿಯಾಶಕ್ತಿಯಿಂದ ಬೆಳೆಯಬಲ್ಲಂಥವಾಗಿವೆ. ಭಾಷೆಗೆ ಕ್ರಿಯಾಶಕ್ತಿಗೆ ಸಂಬಂಧವಿಲ್ಲ. ಕ್ರಿಯಾಶಕ್ತಿಯೊಂದಿದ್ದರೆ ಸಾಕು, ಕ್ರಿಯೆಗೆ ತಕ್ಕ ಭಾಷೆ ತಾನಾಗಿಯೇ ಹುಟ್ಟಿಕೊಳ್ಳುತ್ತದೆ. ಜಪಾನ್, ಇಸ್ರೇಲ್‌ಗಳಂಥ ಪುಟ್ಟ ರಾಷ್ಟ್ರಗಳು ಇಡೀ ಜಗತ್ತೇ ಬೆರಳುಕಚ್ಚುವಂತೆ ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸಿಲ್ಲವೇ? ಇದಕ್ಕೆ ಕಾರಣವೇನು? ಭಾಷಾ ಮಾಧ್ಯಮದ ಬಗೆಗಿನ ಚರ್ಚೆಗಳಲ್ಲಿ ನಿರತರಾಗದೇ ತಂತ್ರಜ್ಞಾನದ ಬೆಳವಣಿಗೆಗಾಗಿ ಅವಿರತವಾಗಿ ದುಡಿದರು. ಅವರ ಕ್ರಿಯಾಶಕ್ತಿಗೆ, ತಂತ್ರಜ್ಞಾನದ ಪ್ರಗತಿಗೆ ಭಾಷೆಯೊಂದು ಅಡ್ಡಿಯಾಗಲಿಲ್ಲ.

ಯಾವುದೇ ಒಂದು ಗುಂಪು, ಒಂದು ಸಿದ್ಧ ಭಾಷೆಯನ್ನು ರೂಪಿಸಿ ಜನತೆಗೆ ನೀಡಲು ಸಾಧ್ಯವಿಲ್ಲ. ಜನತೆಗೆ ಕ್ರಿಯೆಯಲ್ಲಿ, ಭಾಷೆಯ ಬಳಕೆಯಲ್ಲಿ ಸಕ್ರಿಯವಾದ ಇನ್‌ವಾಲ್‌ವ್‌ಮೆಂಟ್ ಇರುವಂತೆ ಮಾಡಿ, ಜನತೆಯ ಅಗತ್ಯಕ್ಕೆ ತಕ್ಕ ಅನುಸಂಧಾನಗಳಿಂದ ಭಾಷೆ ತಾನಾಗಿಯೇ ಬೆಳೆಯುತ್ತದೆ, ಇಲ್ಲನೇ ಪಾರಿಭಾಷಿಕವೇ ತಾಯ್ನುಡಿಯಲ್ಲಿರೂ ಅಂಗೀಕೃತವಾಗುತ್ತದೆ. ಇದರಲ್ಲಿ ತಪ್ಪೇನಿದೆ? ಭಾಷಾ ದ್ವೇಷ ಸಲ್ಲದು.



ಉತ್ತಮ ಮಟ್ಟದ ಶಿಕ್ಷಣ ಎಂದರೆ, ಸಮಾಜ–ಸಂಸ್ಕೃತಿಗಳೊಂದಿಗೆ ಸಂಬಂಧ ಹೊಂದಿರುವ ಶಿಕ್ಷಣ ನಮಗೆ ಬೇಕಾಗಿದೆ.

ಆರೋಗ್ಯದ ಪರೀಕ್ಷೆಯಷ್ಟೇ ಶಿಕ್ಷಣದ ಪರೀಕ್ಷೆಯೂ ಅವಶ್ಯ. ಅದಕ್ಕೆ ಅದರ ಮಹತ್ವ ಇದ್ದೇ ಇದೆ. ಎಲ್ಲರಿಗೂ ಒಂದೇ ತರಹದ ಶಿಕ್ಷಣ, ಒಂದೇ ತರಹದ ಪರೀಕ್ಷಾ ಪದ್ಧತಿ ಇರುವುದರಿಂದ ಅದರಲ್ಲಿ ಎಲ್ಲ ಪ್ರಕಾರದ ಅನಿಷ್ಟಗಳು ಸೇರಿಕೊಂಡಿವೆ. ಪರೀಕ್ಷೆಗೆ ಎಷ್ಟೊಂದು ಮಹತ್ವ ಕೊಡಲಾಗಿದೆ ಎಂದರೆ ವ್ಯಕ್ತಿ, ಸಮಾಜ ಹಾಗೂ ಮೌಲ್ಯಗಳು ಅದರ ಮುಂದೆ ಶೀಣ ಗೌಣ

[illegible] ಈ ವಿಷಯದಲ್ಲಿ [illegible] ಮಾತ್ರ [illegible] ಮುಖ್ಯ. ಪೋಷಕರ ಸಹಕಾರವೂ ಅಷ್ಟೇ ಬೇಕು. ಸರಿಯಾದ ಪರಿಸ್ಥಿತಿ ವಿಷಯವನ್ನು ಅರಗಿಸಿಕೊಂಡು ಜ್ಞಾನಾರ್ಜನೆ ಮಾಡಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರಚೋದಿಸಬೇಕು. ವಿದ್ಯಾರ್ಥಿಗಳ ಸಂಖ್ಯೆ ವಿಪರೀತವಾಗಿ [illegible] ತಪ್ಪಿದೆ. ಅದರಿಂದ ಪರೀಕ್ಷೆಯಲ್ಲಿ ನಡೆಯುವ ಎಷ್ಟೋ ಅಚಾತುರ್ಯಗಳನ್ನು ಬೆಳೆಸಿ ಪೋಷಿಸಿಕೊಂಡು ಬರಲಾಗಿದೆ. ಅದಕ್ಕಾಗಿ ಶಿಕ್ಷಕ ವರ್ಗ ಮತ್ತು ಪೋಷಕರ ಕೌನ್ಸಿಲ್ ಮಾಡಿ ಪರೀಕ್ಷಾ ಸಮಯದಲ್ಲಿ ಅವರನ್ನು ಕರೆಸಿ ಅವರೆದುರಿಗೆ ಎಲ್ಲ ಸಂಗತಿಗಳನ್ನು ತೆರೆದಿಡಬೇಕು. ಅಂದರೆ ಮಾತ್ರ ಪರೀಕ್ಷೆಯಲ್ಲಿಯ ಅವ್ಯವಹಾರಗಳನ್ನು ಹೋಗಲಾಡಿಸಬಹುದು.

ಶಿಕ್ಷಕರಿಗೆ ಮೌಲ್ಯಮಾಪನದಲ್ಲಿ ಸರಿಯಾದ ತರಬೇತಿ ಬೇಕು. ಅದರಲ್ಲಿಯ ಮುಂದಾಳತ್ವದ ಗುಣವನ್ನು ಬಡಿದೆಬ್ಬಿಸುವಂಥ ವಿಷಯಗಳು ತರಬೇತಿಯಲ್ಲಿ ಅಡಕವಾಗಿರಬೇಕು. ಜ್ಞಾನಪ್ರಸಾರ ಅತಿವೇಗದಿಂದ ಆಗುತ್ತಿರುವುದರಿಂದ, ಇಂದಿನ ವಿದ್ಯಾರ್ಥಿಗಳ ಬುದ್ಧಿಮತ್ತೆಗೆ ದೂರದರ್ಶನ, ರೇಡಿಯೋ, ವೃತ್ತಪತ್ರಿಕೆಗಳಂಥ ಸಮೂಹ ಮಾಧ್ಯಮಗಳು ಹೆಚ್ಚು ಹೆಚ್ಚಿನ ಆಹಾರವನ್ನು ಒದಗಿಸುವುದರಿಂದ ವಿವಿಧ ಪಠ್ಯ ವಿಷಯಗಳಿಗೆ ಸಂಬಂಧಪಟ್ಟಂತೆ ಹಲವು ವರ್ಷಗಳ ವರೆಗೆ ಒಂದೇ ಪಠ್ಯ ಪುಸ್ತಕವನ್ನು ನಿಗದಿಪಡಿಸಬಾರದು. ವಿವಿಧ ಕ್ಷೇತ್ರಗಳಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ದಿನೇ ದಿನೇ ಆಗುತ್ತಿರುವ ಬದಲಾವಣೆ, ಅಭಿವೃದ್ಧಿಯನ್ನು ಮಕ್ಕಳಿಗೆ ಕಾಲಕಾಲಕ್ಕೆ ತಿಳಿಸಲು ಪಠ್ಯಪುಸ್ತಕಗಳನ್ನು [illegible] ಗೊಳಿಸುತ್ತಿರಬೇಕು. [illegible] ಬದಲಾಗುವ [illegible] ಪಠ್ಯಪುಸ್ತಕಗಳಲ್ಲಿಯ ವಿಷಯ, ಅದರ ನಿರೂಪಣಾ ರೀತಿ – ಮಟ್ಟ ಬದಲಾಗುತ್ತಿರಬೇಕು. ಇದಕ್ಕೆ ತಕ್ಕಂಥ ರೀತಿಯಲ್ಲಿ ಶಿಕ್ಷಕರನ್ನ ತರಬೇತುಗೊಳಿಸಬೇಕು.

ಸಾಕಷ್ಟು ಪ್ರಮಾಣದಲ್ಲಿ ಹಣದ ವ್ಯವಸ್ಥೆಯಾಗಬೇಕೆಂಬುದೂ ಅಷ್ಟೇ ದಿಟ. ದೇಶದ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಹಂಚಿಕೆಯಾಗಿರುವ ಹಣದ ಇತ್ಯಾತ್ಮಕ ಪ್ರಮಾಣವನ್ನು ನೋಡಿದರೆ ವಿಷಾದವೆನಿಸುತ್ತದೆ. ಶಿಕ್ಷಣ ಕ್ಷೇತ್ರ ಒಳಚರಂಡಿ ಯೋಜನೆಗಿಂತ ಉಪೇಕ್ಷಿತ ಅಂಶವೇ? ದೇಶದ ಯುವಕರ ಭವಿಷ್ಯ ಅಂಧಕಾರಮಯವಾಗುತ್ತಿರುವುದನ್ನು ನೋಡುತ್ತಿದ್ದರೂ ಕಣ್ಣು ಮುಚ್ಚಿಕೊಂಡಿರುವಂಥ ಯಾವ ಜಾಡ್ಯ ಸರ್ಕಾರಕ್ಕಂಟಿದೆ? ಒಳಚರಂಡಿ ಯೋಜನೆಗೆ ಧನಸಹಾಯ ನೀಡಲು ಮುಂದಾದ ವಿಶ್ವಬ್ಯಾಂಕು, ಭಾರತದ ಶೈಕ್ಷಣಿಕ ಪ್ರಗತಿಗೆ ಧನಸಹಾಯ ನೀಡಲು ನಿರಾಕರಿಸೀತೇ? ಹಾಗಾದರೆ ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಆಗಿರುವ ಅವ್ಯವಸ್ಥೆಗಳು ದಿನದಿನಕ್ಕೆ ವಿಕೃತರೂಪ ತಳೆಯುತ್ತಿದ್ದರೂ ಸರ್ಕಾರವು ಕಣ್ಣಿದ್ದೂ ಕುರುಡನಂತೆ, ಕಿವಿಯಿದ್ದೂ ಕಿವುಡನಂತೆ ವರ್ತಿಸುತ್ತಿರುವುದರ ಅರ್ಥವೇನು? ಹಣದ ಅಭಾವದ ನೆಪವೊಡ್ಡಿ ಸರ್ಕಾರ ಪಾಲಕರ-ವಿದ್ಯಾರ್ಥಿಗಳ ಜನತೆಯ ಕಣ್ಣೊರೆಸುವ ಕೆಲಸವನ್ನು ಎಷ್ಟು ದಿನ ಮಾಡೀತು?

ಅಂದರೆ ಡೊನೇಷನ್‌ಗೆ ಗಳಿಕೆಯ ಹಣವನ್ನೆಲ್ಲ ಸುರಿದು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂದು ಹಂಬಲಿಸುವ ಪಾಲಕರನ್ನು ದೂಷಿಸುವುದೇ? ಅಂಥ ಪರಿಸ್ಥಿತಿ ನಿರ್ಮಾಣವಾಗಲು ಅನುವು ಮಾಡಿಕೊಡುತ್ತಿರುವ ಸರ್ಕಾರವನ್ನು ದೂಷಿಸುವುದೇ?

ವಿದ್ಯಾರ್ಥಿಗಳಿಗೆ ಈಗಿನ ಸ್ಥಿತಿಯಲ್ಲಿ ಸಲಹೆ ಮತ್ತು ಮಾರ್ಗದರ್ಶನಗಳಂಥ ವಿಧಾನಗಳು ಉಪಯೋಗಕ್ಕೆ ಬರುವುದಿಲ್ಲ. ಇವುಗಳನ್ನು ಜಾರಿಗೊಳಿಸಬೇಕೆಂದರೆ ಮತ್ತೆ "ಹಣ" ಬೇಕು, ಹಣ ಇಲ್ಲ. ಹೀಗಾಗಿ ಇದರ ಪ್ರಯೋಜನ ಎಷ್ಟರ ಮಟ್ಟಿಗೆ ಆಗಬಹುದು! ಹೇಳುವುದು ಕಷ್ಟ. ವಿದ್ಯಾರ್ಥಿಗಳ ಜೊತೆ ಶಿಕ್ಷಕರು ತೆರೆದ ಮನಸ್ಸಿನಿಂದ, ಪ್ರಜಾಪ್ರಭುತ್ವ ತತ್ವದ ಮೇಲೆ ಚರ್ಚೆಮಾಡಿದರೆ ಉತ್ತಮ. ಕಮ್ಯೂನಿಟಿಯು ಸಹಭಾಗಿತ್ವ ಇರಬೇಕು.

ವಿದ್ಯಾಸಂಸ್ಥೆಗಳ ರಾಷ್ಟ್ರೀಕರಣ (ನ್ಯಾಷನಲೈಸೇಷನ್) ಮಾಡುವುದರಿಂದ ಅದೊಂದು ವಿಧದ ಅಧಿಕಾರಶಾಹಿಯಾಗುತ್ತದೆ. ರಾಷ್ಟ್ರೀಕರಣ ಪರಿಕಲ್ಪನೆಯ ಹಿಂದಿರುವ ಅರ್ಥದ ಸರಿಯಾದ ಅರಿವಿಲ್ಲದೆ ಅದು ಕೂಡ ಉಪಯೋಗಕ್ಕೆ ಬಾರದೆ ಹೋಗುತ್ತದೆ. ವ್ಯಾಪಾರಿ ಕ್ಷೇತ್ರದಿಂದ "ದಳ್ಳಾಳಿಗಳನ್ನು" ತೆಗೆದುಹಾಕಬೇಕೆಂಬ ಮಾತು ಕೇಳಿಬರುತ್ತಿರುವಂತೆಯೇ "ಜ್ಞಾನಾರ್ಜನೆ"ಯ ಮಾರ್ಗದಲ್ಲಿಯ "ದಳ್ಳಾಳಿಗಳನ್ನು' ಅಥವಾ 'ಪಂಡಾಗಳನ್ನು' ಹೊರದಬ್ಬಬೇಕು. ಅಂದರೆ ಶಿಕ್ಷಣದಲ್ಲಿ ಎಷ್ಟೋ ಸುಧಾರಣೆಗಳನ್ನು ತರಬಹುದು.

ಎಲ್ಲ ಶಿಕ್ಷಕರಿಗೂ ಸರಿಯಾದ ತರಬೇತಿ ಮತ್ತು ಜವಾಬ್ದಾರಿಯ ವರ್ತನೆಗಳಅರಿವು ಬಹಳ ಮುಖ್ಯ. ಏಕೆಂದರೆ ಟೇಕ್ ಕೇರ್ ಆಫ್ ಟೀಚರ್ಸ್, ರೆಸ್ಟ್ ಆಫ್ ದಿ ಥಿಂಗ್ಸ್ ಟೇಕ್ ಕೇರ್ ಆಫ್ ದೆಮ್‌ಸೆಲ್ವ್ಸ್. ○

'ನಮ್ಮನಿಷ್ಠ ಪರಾಮರ್ಶೆ ನಡೆಯಲಿ'

ಪ್ರೊ|| ರಾಮಕುಲಕರ್ಣಿ
ಡಿ. ಪಿ. ಐ. (ನಿವೃತ್ತ)

ಭಾಷೆಯ ಮುಖ್ಯ ಉದ್ದೇಶ, ನಮ್ಮ ವಿಚಾರಗಳನ್ನು ಸರಿಯಾಗಿ ಬೇರೆಯವರಿಗೆ ತಿಳಿಸುವದು ಯಾವುದೇ ಭಾಷೆಯಾಗಿರಲಿ ಅದು ಇನ್ನೊಬ್ಬನಿಗೆ ಅರ್ಥವಾದರೆ ಸಾಕು. ತನ್ನ ಭಾವನೆಗಳನ್ನು ಸರಿಯಾಗಿ ಯಾವ ಭಾಷೆ






ಯಲ್ಲಿ ವ್ಯಕ್ತ ಮಾಡಿದರೇನು? ನಿತ್ಯದ ವ್ಯವಹಾರವನ್ನು ಮಾಡುವ ಭಾಷೆ–ವ್ಯಾವಹಾರಿಕ ಭಾಷೆ.

ಪ್ರಪಂಚದಲ್ಲಿ ಪ್ರಚಲಿತವಿರುವ ಇನ್ನಿತರ ಹಲವು ಭಾಷೆಗಳನ್ನು ಕಲಿತರೆ ತಪ್ಪೇನಿದೆ? ತಮ್ಮ ಭಾಷೆಯ ಬಗ್ಗೆ ಪ್ರೇಮ ಇರಬೇಕೆಂದಾದರೆ, ಬೇರೆ ಭಾಷೆಯ ಬಗ್ಗೆ ದ್ವೇಷವಿರಕೂಡದು. ಇಷ್ಟೆಲ್ಲ ಹೇಳಿದರೂ ಮಾತೃಭಾಷೆಗೆ ಇರಬಹುದಾದ ಪ್ರಾಧಾನ್ಯತೆಯನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಭಾವನಾತ್ಮಕತೆ, ಅಂಧಾಭಿಮಾನ, ರಾಜಕೀಯ ಸಲ್ಲದು; ಅವು ಪ್ರಯೋಜನಕ್ಕೂ ಬಾರವು. ವಾಸ್ತವವನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಾಮಾಣಿಕತೆಯಿಂದ, ತಾಯ್ನುಡಿಯ ಬಗೆಗೆ ಅಂತಃಕರಣಪೂರ್ವಕವಾಗಿ ಹೇಳಿದ ಮಾತಿಗೆ ಬೆಲೆ ಬರುತ್ತದೆ; ಅಂಥ ಮಾತು ಸತ್ವಪೂರ್ಣವೆನಿಸುತ್ತದೆ. ಇಲ್ಲವಾದರೆ ತಾಯ್ನುಡಿಯ ಬಳಕೆ ಅಭಿವೃದ್ಧಿ ಚರ್ಚೆಯ ವಿಷಯವಾಗಿಯೇ ಉಳಿದಿರುತ್ತದೆ.

ಪರೀಕ್ಷೆ ಅನಿವಾರ್ಯವಾದರೂ, ನಿಜವಾದ ಅಡ್ಡಿ ಆತಂಕಗಳನ್ನು ಕಂಡುಹಿಡಿದು–ಅವುಗಳಿಗೆ ಸರಿಯಾದ ಪರಿಹಾರಗಳನ್ನು ಕಂಡು ಹಿಡಿಯಬೇಕು. ಶ್ರೀ ಗೋವಿಂದ ವಲ್ಲಭಪಂತ್ ಕಮಿಟಿಯ ಶಿಫಾರಸುಗಳನ್ನು ಜಾರಿಗೆ ತರಬೇಕು. ಪರೀಕ್ಷೆಯ ಪ್ರಯೋಜನಗಳ ಬಗ್ಗೆ ಕೂಲಂಕಷವಾಗಿ ಯೋಚನೆ ಮಾಡಲು ಯಾರೂ ಸಿದ್ಧರಿಲ್ಲದಿರುವುದು ಖೇದವೆನಿಸುತ್ತದೆ. ಪರೀಕ್ಷೆಗಳನ್ನು ರದ್ದುಪಡಿಸಬೇಕೆಂಬ ಯೋಚನೆಯೇ ಉದ್ಭವಿಸಬೇಕಿಲ್ಲ. ಹಳೆಯ ಪರೀಕ್ಷಾ ಪದ್ಧತಿಯನ್ನು ತೆಗೆದುಹಾಕಿ, ವಿದ್ಯಾರ್ಥಿಗಳ ಜಾಣ್ಮೆಯನ್ನು ಒರೆಗೆ ಹಚ್ಚಿ, ವಿದ್ಯಾರ್ಥಿಗಳ ಪ್ರತಿಭೆಗೆ ಮನ್ನಣೆ ದೊರಕಿಸಿಕೊಡುವ ದಿಸೆಯಲ್ಲಿ ಪರೀಕ್ಷಾ ವಿಧಾನಗಳಲ್ಲಿ ಬದಲಾವಣೆಗಳಾಗಬೇಕಾಗಿದೆ. ಈ ಸಂದರ್ಭದಲ್ಲಿ ವಿಷಯವನ್ನು ಭಾವನಾತ್ಮಕವಾಗಿ ನೋಡುವುದಕ್ಕಿಂತ ವಸ್ತುನಿಷ್ಠವಾಗಿ ಪರಾಮರ್ಶಿಸಬೇಕಾಗಿದೆ. ಶಿಕ್ಷಣಕ್ಕೆ ಮೊದಲ ಆದ್ಯತೆಕೊಟ್ಟು, ಅದರಲ್ಲಿಯೂ ಪರೀಕ್ಷಾ ವಿಧಾನಗಳ ಸುಧಾರಣೆಗೆ ಇನ್ನೂ ಹೆಚ್ಚಿನ ಆದ್ಯತೆ ನೀಡಿದರೆ ಎಷ್ಟೋ ದೋಷಗಳನ್ನು ಹೋಗಲಾಡಿಸ ಬಹುದು. ಇದಕ್ಕಾಗಿ ಸಾಕಷ್ಟು ಹಣವನ್ನು ಖರ್ಚು ಮಾಡಬೇಕು. ಯಾಕೆಂದರೆ ಎಜುಕೇಷನ್ ಈಸ್ ಇನ್‌ವೆಸ್ಟ್‌ಮೆಂಟ್ ಇಟ್ ಸೆಲ್ಫ್ ಆದ್ದರಿಂದ ಶಿಕ್ಷಣಕ್ಕೆ ಪ್ರಥಮ ಆದ್ಯತೆ ಕೊಟ್ಟು ಸಾಕಷ್ಟು ಹಣವನ್ನು ಖರ್ಚು ಮಾಡಲು ತಯಾರಿರಬೇಕು. ಹಣ ಖರ್ಚು ಮಾಡಬೇಕು ಎಂದೊಡನೆ ಹಣದ ಅಪವ್ಯಯವಲ್ಲ; ಹಣದ ಸದ್ವಿನಿಯೋಗ. ಜನತೆಗೆ ನಿಜವಾದ ಅರ್ಥದಲ್ಲಿ ಉತ್ತಮ ಶಿಕ್ಷಣವನ್ನು ಒದಗಿಸಲು ಹಣವನ್ನು ವಿನಿಯೋಗಿಸಲು ಹಿಂದೆಗೆಯಬಾರದು. ಇದಕ್ಕೂ ಹೆಚ್ಚಾಗಿ ಪೊಲಿಟಿಕಲ್ ವಿಲ್ ಕೂಡ ಇದರ ಕಡೆಗೆ ಇದ್ದರೆ ಮಾತ್ರ ಇಂಥ ಕಾರ್ಯಗಳು ಯಶಸ್ವಿಯಾಗುತ್ತವೆ. ಅಂದರೆ ಶಿಕ್ಷಣ ಪದ್ಧತಿಯ ಸುಧಾರಣೆಯ ಬಗ್ಗೆ ರಾಜಕೀಯ ಧುರೀಣರು, ದೇಶ ನಾಯಕರು ಒಲವು ತೋರಿಸಬೇಕಾಗಿದೆ.

ಈಗ ಶಿಕ್ಷಕರ 'ತರಬೇತಿ'ಯು ಬಹಳ ಮಹತ್ವದ ಪಾತ್ರ ವಹಿಸುತ್ತದೆ. ಅವನಿಗೆ ತರಬೇತಿ ಅವಧಿಯಲ್ಲಿ ಶಿಕ್ಷಣದಲ್ಲಿಯ ಪ್ರತಿಯೊಂದು ಕ್ಷೇತ್ರದಲ್ಲಿರುವ ಸಮಸ್ಯೆಗಳ ಅರಿವು ಮೂಡಿಸಬೇಕು. ಅವುಗಳ ಪರಿಹಾರೋಪಾಯಗಳ ಬಗ್ಗೆ ಅವನನ್ನು ಚಿಂತನೆಗೆ ತೊಡಗಿಸಬೇಕು.

ಶಿಕ್ಷಕರನ್ನು ತರಬೇತಿಗೊಳಿಸುವಲ್ಲಿಯೂ ಬದಲಾವಣೆ ಅಗತ್ಯ. ಹಿಂದೆಂದೋ ರೂಢವಾದ ಜಾಡಿನಲ್ಲೇ ಸಾಗಿರುವ ತರಬೇತಿ ವಿಧಾನ ಬಹಳಷ್ಟು ಬದಲಾಗಬೇಕಾಗಿದೆ. ಹೊಸ ಮಾದರಿಯ ಪಠ್ಯಕ್ರಮ, ದಿನದಿನಕ್ಕೆ ಹೊಸತನ ಪಡೆಯುವ ರಾಷ್ಟ್ರೀಯ ಆಗು ಹೋಗುಗಳು, ಅನುಸಂಧಾನಗಳು. ಸವಾಲುಗಳನ್ನು ಎದುರಿಸಿ ಉತ್ತರಿಸಲು ಶಿಕ್ಷಕ ಸಮರ್ಥನಾಗುವಂತೆ ಪರಿಣಾಮಕಾರಿ ತರಬೇತಿ ಸಿಗಬೇಕು. ದೊಡ್ಡ ಕ್ಲಾಸುಗಳಿಗೆ ಕಲಿಸಬೇಕಾದ ರೀತಿ–ನೀತಿ–ವಿಧಾನಗಳು ವಿಭಿನ್ನವಾಗಿರಬೇಕಾದುದನ್ನು ಶಿಕ್ಷಕ ಅರಿತಿರಬೇಕು. ವಿದ್ಯಾರ್ಥಿಗಳ ಸೈಕಾಲಜಿಯನ್ನರಿತು ಅದಕ್ಕೆ ತಕ್ಕಂತೆ ಆತ ಪ್ರತಿಸ್ಪಂದಿಸಬಲ್ಲನಾದರೆ ಶಿಕ್ಷಣದ ಸಮಸ್ಯೆಗಳೆಷ್ಟೋ ಸುಲಭವಾಗಿ ನಿವಾರಣೆಯಾಗುತ್ತವೆ. ಯಾವುದೇ ಅಡ್ಡಿ ಆತಂಕಗಳನ್ನು ಹೇಳದೆ ಜೂನಿಯರ್ ಕಾಲೇಜ್, ಕಾಲೇಜ್, ಅಷ್ಟೇ ಏಕೆ ಯುನಿವರ್ಸಿಟಿ ಅಧ್ಯಾಪಕರಿಗೂ "ತರಬೇತಿ"ಯ ಅಗತ್ಯ ಇದ್ದೇ ಇದೆ. ಈ ದಿಸೆಯಲ್ಲಿ ಇತ್ತೀಚೆಗೆ ಅಲ್ಲಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಆದರೆ ಅವುಗಳನ್ನು ಯಶಸ್ವಿಗೊಳಿಸಬೇಕಾಗಿದೆ. ಅದಕ್ಕಾಗಿ ಸಾಕಷ್ಟು ಹಣವನ್ನು ಖರ್ಚು ಮಾಡಬೇಕು. ಅಲ್ಲದೆ ಅಮೇರಿಕೆಯಲ್ಲಿದ್ದಂತೆ–ಅರ್ಹ, ದಕ್ಷ ಹಾಗೂ ಕ್ವಾಲಿಫೈಡ್ ಶಿಕ್ಷಕನು ಎಲ್ಲಿಯೇ ಇರಲಿ, ಯಾವ ಹಂತದಲ್ಲಿಯೇ ಇರಲಿ, ಕ್ವಾಲಿಫಿಕೇಷನ್ ತಕ್ಕಂತೆ ಸಂಬಳ ಕೊಡಬೇಕು. ಅಂದರೆ ಆಯಾ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರು, ತಮ್ಮ ಒಲವಿನ ಕ್ಷೇತ್ರದಲ್ಲಿ ಹುಮ್ಮಸ್ಸಿನಿಂದ ಕೆಲಸ ಮಾಡಬಹುದು. ಶಿಕ್ಷಕನ ಯೋಗ್ಯತೆಗೆ ತಕ್ಕಂತೆ, ಅವನ ಕ್ರಿಯಾಶಕ್ತಿಗೆ ಅನುಗುಣವಾಗಿ ಅವನಿಗೆ ಅವಕಾಶ ಕೊಡಬೇಕು. ಅವನು ತನ್ನ ಕ್ರಿಯಾಶಕ್ತಿಯನ್ನು ತೋರದಿದ್ದಲ್ಲಿ ಅವನನ್ನು ತೆಗೆದು ಬೇರೆಯವನನ್ನು ತೆಗೆದುಕೊಳ್ಳಬಹುದು. ಹು ಕೆನ್ ಡೆಲಿವರಿ ದಿ ಗುಡ್ಸ್ ಎಂಬ ತತ್ವವನ್ನು ಅನುಸರಿಸಿ ಶಿಕ್ಷಕರ ನೇಮಕಾತಿಯನ್ನು ಮಾಡಬೇಕು. ಹೀಗಾ



...ನ ಶಿಕ್ಷಣದಲ್ಲಿ ಯಾಕೆ ಸುಧಾರಣೆಯಾಗುವುದಿಲ್ಲ? ಶಿಕ್ಷಣದಲ್ಲಿ ಶಿಕ್ಷಕನೇ ಮೂಲಾಧಾರ. ಆದರೆ ಈಗ ಎಲ್ಲರೂ ಅವನನ್ನೇ ಮರೆತಂತಿದೆ. ಅವನ ಯೋಗ್ಯತೆ ಪ್ರತಿಭೆ ಸೃಜನಾತ್ಮಕತೆಯನ್ನು ಕೇಳುವವರೂ ಇಲ್ಲ, ಗುರುತಿಸುವವರೂ ಇಲ್ಲ. ಹೀಗೆ ಉಪೇಕ್ಷಿತನಾದ ಶಿಕ್ಷಕ ಏನು ಮಾಡಬಲ್ಲ?

ಒಂದು ತರಹದ ವಿಚಿತ್ರ ಪ್ರವೃತ್ತಿಯನ್ನು ಹೊಂದಿರುವ ನಮ್ಮ ಸಮಾಜದಲ್ಲಿ ಪ್ರತಿಷ್ಠೆಗಾಗಿ ಹೊಡೆದಾಡುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ಶೈಕ್ಷಣಿಕ ಸಲಹೆ ಮತ್ತು ಮಾರ್ಗದರ್ಶನವನ್ನು ಕೇಳುವವರೇ ಇಲ್ಲವಾಗಿದೆ. ಅಲ್ಲದೆ ವೃತ್ತಿ ಮಾರ್ಗದರ್ಶನಗಳಿಗೂ ಈಗ ಬೆಲೆಯಿಲ್ಲದಾಗಿದೆ. ಅದಕ್ಕೆ ಎಷ್ಟೋ ಸಲ ಈಗಿರುವ ನಮ್ಮ ಶೈಕ್ಷಣಿಕ ತಪ್ಪು ನೀತಿಗಳು, ರಾಜಕಾರಣ, ಶಿಕ್ಷಣಕ್ಕಾಗಿ ಬಜೆಟ್‌ನಲ್ಲಿ ಹಣದ ಹಂಚಿಕೆ ಇಲ್ಲದಿರುವುದು ಕಾರಣವಾಗಿಧೆ.

ಪ್ರಪ್ರಥಮವಾಗಿ ಎಲ್ಲ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಕರಣವಾಗಬೇಕಾಗಿದೆ ಎಂಬ ವಿಚಾರವನ್ನು ನಾನು ಎಷ್ಟೋ ಸಲ ಹೇಳಿದ್ದೇನೆ. ಆದರದೇ ಆದ ಸ್ವಾಯತ್ತತೆಯುಳ್ಳ ಸೆಮಿ ಕಾರ್ಪೊರೇಷನ್ ತರಹ ಮಾಡಬೇಕು. ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡುವ ಪದ್ಧತಿ ಸ್ಥಗಿತವಾಗಬೇಕು. ಆಗ ಆಸಕ್ತ ಖಾಸಗಿ ವ್ಯಕ್ತಿ ಸರ್ಕಾರದ ಅನುದಾನವಿಲ್ಲದೆಯೂ ಶಿಕ್ಷಣ ಸಂಸ್ಥೆಯನ್ನು ಸಮರ್ಥವಾಗಿ ಕಟ್ಟಿ ಬೆಳೆಸಿದನಾದರೆ, ಸರ್ಕಾರಿ ಶಿಕ್ಷಣ ಸಂಸ್ಥೆಗಳ ದೌರ್ಬಲ್ಯಗಳ ಅರಿವಾಗಿ, ಜನತೆ ಹಾಗೂ ಸರ್ಕಾರ ಜಾಗೃತವಾಗುತ್ತದೆ.

ರೆವಿನ್ಯೂ ಜಿಲ್ಲೆಗಳಂತೆ ಶೈಕ್ಷಣಿಕ ಜಿಲ್ಲೆಗಳ ವರ್ಗೀಕರಣ ಮತ್ತೊಂದು ವಿಧಾನ. ತನ್ಮೂಲಕ ಶಿಕ್ಷಣದ ಪ್ರಗತಿಗಾಗಿ ಪರಸ್ಪರ ಜಿಲ್ಲೆಗಳಲ್ಲಿ ಸ್ಪರ್ಧಾ ಮನೋಭಾವವನ್ನು ಮೂಡಿಸಬಹುದು. ಕಲಿಸುವುದರಲ್ಲಿ ಹೊಸ ವಿಧಾನ, ಹೊಸ ಮಾದರಿಯ ಪಠ್ಯಕ್ರಮ, ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಿಸುವಲ್ಲಿ ಶಿಕ್ಷಕರು ವಹಿಸುವ ಆಸಕ್ತಿ ಇವುಗಳ ಮೂಲಕ ಶಿಕ್ಷಕರ ದಕ್ಷತೆಯ ಮೌಲ್ಯಮಾಪನ ನಡೆಸಿ ಯೋಗ್ಯತೆಗೆ ಮನ್ನಣೆ ನೀಡಬೇಕು. ಇದರಿಂದ ಸಂಸ್ಥೆಗಳಲ್ಲಿ, ಶಿಕ್ಷಕರಲ್ಲಿ ಸ್ಪರ್ಧಾ ಮನೋಭಾವ ಮೂಡಿ ಶಿಕ್ಷಣ ಪದ್ಧತಿಯಲ್ಲಿ ಸರ್ವೋದಯವಾಗುತ್ತದೆ. ವೋಟಿನ ದೃಷ್ಟಿ ಇಟ್ಟುಕೊಂಡು ತೇಪೆ ಹಚ್ಚುವ ಕೆಲಸದಂತೆ ಶಿಕ್ಷಣದಲ್ಲಿ ಸುಧಾರಣೆ ಮಾಡಲು ಹೋದರೆ ಈಗಾದಂತೆ ಕನಸು ಮೇಲೋಗರ ಆಗುತ್ತದೆಯೇ ಹೊರತು ಸುಧಾರಣೆ ಆಗುವುದಿಲ್ಲ.

ಆದ್ದರಿಂದ ಹಳೆ ಶಿಕ್ಷಣ ಪದ್ಧತಿಯನ್ನು ಆಮೂಲಾಗ್ರ ಕಿತ್ತು ಹಾಕಿ ಹೊಸ ಶಿಕ್ಷಣ ಪದ್ಧತಿಯನ್ನು ತರಬೇಕು. ಅದಕ್ಕಾಗಿ ಪ್ರಥಮ ಆದ್ಯತೆ ಕೊಟ್ಟು, ಹಣವನ್ನು ಸಾಕಷ್ಟು ನೀಡುವಂತಾದರೆ ಉತ್ತಮವಾದ ಹಾಗೂ ನಿಜವಾದ ಶಿಕ್ಷಣ ಕೊಡಲು ಸಾಧ್ಯ. ಇಲ್ಲವಾದಲ್ಲಿ ಬರೀ ಮಾತಿನ ಡೊಂಬರಾಟವೇ ಆಗಿ ಹೋಗುತ್ತದೆ. ದೇಶ, ದೇಶದ ಜನ ಕೆಟ್ಟ ಶಿಕ್ಷಣದ ಕೆಟ್ಟ ಪರಿಣಾಮವನ್ನು ಇನ್ನು ಮುಂದೆಯೂ ಅನುಭವಿಸಬೇಕಾಗುತ್ತದೆ. ●




ಕನ್ನಡದ ಬೆಡಗಿನ ರಾಣಿಯರು

"ಬೆಡಗು" ಅರ್ಥಾತ್ 'ಗ್ಲಾಮರ್' ಎಂಬ ಪದ ಪ್ರಾಯಶಃ ಬೆಳ್ಳಿ ತೆರೆಯ ಉಗಮದಿಂದ ಅಂಟಿಬಂದ ಒಂದು ಗುಣ ವಿಶೇಷಣ. ತೆರೆಯ ಮೇಲೆ ವಿಜೃಂಭಿಸುವ ಪ್ರತಿ ತಾರೆಯೂ ಬೆಡಗಿಯೇನೂ ಆಗ ಬೇಕಿಲ್ಲವಾದರೂ ಪಾತ್ರಗಳ ವಿಶಿಷ್ಟ ಪ್ರಾಕಾರಗಳಲ್ಲಿ ನಾಯಕಿ, ಖಳನಾಯಕಿ, ಪೋಷಕ ಪಾತ್ರಧಾರಿಣಿ, ಹೀಗೆ ನಾನಾ ವಿಧ ಪಾತ್ರಗಳ ಮೂಲಕ ಚಿತ್ರರಂಗದ ನಟಿಯರು ರೂಪುಗೊಳ್ಳುತ್ತಾರೆ.

ಚಿತ್ರ ಒಂದರ ಕಥಾನಾಯಕಿ ಇಲ್ಲವೆ ಖಳನಾಯಕಿಯಾಗುವ ಪ್ರತಿ ತಾರೆಗೂ ಬೆಡಗು ಎಂಬುದು ಅವರನ್ನು ತೆರೆಯ ಮೇಲೆ ಮೆರೆಸಬಲ್ಲ ಒಂದು ಅಸ್ತ್ರ. ಇಂಥ ತಾರೆಯ ಬೆಡಗಿನೊಂದಿಗೆ ಆಕೆಯ ಅಂಗಾಂಗಗಳ ಮಿಂಚು, ಲೈಂಗಿಕಾಕರ್ಷಣೆಯ ಸಂಚು ಮೈಗೂಡಿದಾಗ ಆಕೆ ತೆರೆಯ ಮೇಲಿನ ಗ್ಲಾಮರ್ ಕನ್ಯೆಯಾಗಿ ಮೆರೆಯುವ ಅರ್ಹತೆ ಪಡೆಯುತ್ತಾಳೆ. ಅಂದರೆ ಈ 'ಬೆಡಗಿಯರು' ತಮ್ಮ

● ಎನ್. ಪದ್ಮನಾಭ

ಚೆಲುವು, ನಿಲುವುಗಳ ಆಕರ್ಷಕ ವೈಖರಿಯಿಂದ ಪ್ರೇಕ್ಷಕರನ್ನು ತಮ್ಮತ್ತ ಸೆಳೆಯುತ್ತಾರೆ. ಒಮ್ಮೆ ಪ್ರೇಕ್ಷಕ ಇಂಥಾ ಸೆಳತಕ್ಕೆ ಸಿಕ್ಕಾಗ, ಪದೇ ಪದೇ ಅದೇ ತಾರೆಯನ್ನು ತೆರೆಯ ಮೇಲೂ ನೋಡ ಬಯಸುತ್ತಾನೆ. ತನ್ನ ಪ್ರೇಯಸಿಗೋ, ಮೆಚ್ಚಿನ ಹುಡುಗಿಗೋ ಬೇರಾವುದೋ ಬೆಡಗಿಗೋ



ಮುಖವನ್ನು ಅಂಟಿಸಿಕೊಂಡು ತಾನೇ ಕಲಿಸುವಾಗಲೆ ಮೂರ್ತಿವೆತ್ತಂತೆ ತೃಪ್ತಿಪಡು ತ್ತಾನೆ. ಆತ್ಮತೃಪ್ತಿಯೇ ಜನಪ್ರಿಯ ಚಿತ್ರ ಗಳ ಯಶಸ್ಸಿನ ರಹಸ್ಯ.

ಬೆಡಗಿಯೆಂದರೆ ರೂಪಲಾವಣ್ಯಗಳ ಖನಿ. ಆಕೆಯಲ್ಲಿ ಅಡಗಿರುವ ಆಕರ್ಷಣೆ. ಆಕೆ ಉಡುವ ವಸ್ತ್ರ, ಆಭರಣ ತೊಡುವ ಮೇಕಪ್, ಅಂಗ ಸೌಷ್ಠವ ಅವಳ ನಿಲುವು ಚೆಲುವು, ಇವೆಲ್ಲವೂ ತೆರೆಯ ಮೇಲಿನ ಮಾದಕ ಮೋಹಕ ವಸ್ತುವಾಗಿ ಪರಿಣಮಿಸಿದಾಗ. ಪ್ರೇಕ್ಷಕನಿಗೆ ಆಕೆಯ ಲಾವಣ್ಯ. ರೂಪರಾಶಿಗಳ ಸಾಕ್ಷಾತ್ಕಾರವಾಗಿ, ಆತ ವಿಶೇಷವಾದ ಸಂಮ್ಮೋಹನಕ್ಕೆ ಸಿಲುಕುತ್ತಾನೆ.

ಬೆಡಗಿಯರಿಗಿರುವ ಅರ್ಹತೆಗಿಂತ ಅವರ ಆಕರ್ಷಣೆ ಇಲ್ಲಿ ಮುಖ್ಯವಾಗುತ್ತದೆ. ಈ ಆಕರ್ಷಣೆಗಾಗಿ ಆಕೆ ತೆರೆಯ ಮೇಲೆ ತನ್ನ ವನಪು, ವೈಯ್ಯಾರ, ಬಿಂಕ, ಬಿಗುಮಾನ ಪ್ರದರ್ಶಿಸುತ್ತ ಪ್ರೇಕ್ಷಕರಿಗೆ ಕಚಗುಳಿ ಇಡುತ್ತಾಳೆ. ಇದರ ಪರಿಣಾಮ ಸಮೂಹ ಮಾಧ್ಯಮದ ಸಂವೇದನಾಶೀಲತೆ ಮರೆಯಾಗಿ ಸಂಮೋಹನ ಶಕ್ತಿಯೇ ಮುಖ್ಯವಾಗಿ ಅವಳ ಪಾತ್ರ ಪ್ರೇಕ್ಷಕರ ಮನಸೆಳೆಯುತ್ತದೆ.

ಕನ್ನಡ ಚಿತ್ರರಂಗದ ಬೆಡಗಿಯರನ್ನು ಉದ್ಧರಿಸುವಾಗ ಪ್ರಪ್ರಥಮವಾಗಿ ಬೆಡಗಿನಪರಂಪರೆಯನ್ನು ಕನ್ನಡ ತೆರೆಗೆ ತಂದು ಕೊಟ್ಟ ಕೀರ್ತಿ ತಾರೆ ಜಯಂತಿ ಅವರದು ಎನಿಸುತ್ತದೆ. (ವಾಕ್ಚಿತ್ರ ಯುಗದ ಮೊದಲಿನ ಮೂವತ್ತು ವರ್ಷಗಳ ಬೆಡಗಿಯರ ಪ್ರಸ್ತಾಪವನ್ನು ಈ ಲೇಖನದಲ್ಲಿ ಮಾಡಿಲ್ಲ.) 60ರ ದಶಕದಲ್ಲಿ ಕನ್ನಡ ಬೆಳ್ಳಿ ತೆರೆಗೆ ದೊಡ್ಡ ಆಕರ್ಷಣೆ ತಂದು ಕೊಟ್ಟವರು ತಾರೆ ಜಯಂತಿ.

ಎಂಭತ್ತರ ಆದಿಭಾಗಕ್ಕಿಂತ, ಎಪ್ಪತ್ತರ ಅಂತ್ಯದಲ್ಲಿ ಕನ್ನಡ ಚಿತ್ರರಂಗಕ್ಕೆ 'ಬೆಡಗು' ಎಂಬ ಆಕರ್ಷಣೆ ಅಂಟಿತ್ತಾದರೂ ಅರವತ್ತರಲ್ಲೇ ಈ ಆಕರ್ಷಣೆಯನ್ನು ತನ್ನ ಮಾದಕ ಅಂಗಸೌಷ್ಠವ, ಶೃಂಗಾರಾಕರ್ಷಣೆ, ಒನಪು-ಒಯ್ಯಾರ. ಈ ಉಡುಪು, ಅರೆನಗ್ನತೆಯ

ಪ್ರದರ್ಶನ, ಸ್ನಾನದ ದೃಶ್ಯ, ಮಾದಕ ನೃತ್ಯಗಳ ಮೂಲಕ ಕನ್ನಡ ತೆರೆಗೆ ತಂದು ಕೊಟ್ಟ ಬೆಡಗಿನ ರಾಣಿ ತಾರೆ ಜಯಂತಿ. ಅವರ 'ಜೇಬುದ ಹುಲಿ' ಚಿತ್ರದ ಸ್ನಾನದೃಶ್ಯ ಗಳು, 'ಬೇಕೇನು ಸಾವಿರಾನು ನೋಡು ನೋಡು' ಎಂಥ ಹಾಡಿನ ದೃಶ್ಯಗಳು (ಚಿತ್ರ: ದೇವರ ಮಕ್ಕಳು) ಯುವಜನಾಂಗಕ್ಕೆ ಹುಚ್ಚು ಹಿಡಿಸಿದ್ದನ್ನು ಇಲ್ಲಿ ಸ್ಮರಿಸ ಬಹುದು. ಎಪ್ಪತ್ತರ ಅಂತ್ಯದಿಂದ ಈ 'ಬೆಡಗು' ಕನ್ನಡ ತೆರೆಗೆ ಸಾಮಾನ್ಯ ವಿಷಯವಾಯಿತು.

ಎಂಭತ್ತರ ದಶಕದಿಂದೀಚೆಗೆ [illegible] ಕನ್ನಡ ತೆರೆಯನ್ನು 'ಬೆಡಗು' ಆವರಿಸಿ ಬಿಟ್ಟಿತು. ಅಲ್ಲಿಂದ ಮುಂದೆ ಬೆಳ್ಳಿ ತೆರೆ ಯನ್ನು ಆವರಿಸಿಕೊಂಡ ಬೆಡಗು, ಜಯಂತಿಯ ನಂತರ ಭಾರತಿಗೆ ಪರಿ ಣಾಮಕಾರಿ ಅಸ್ತ್ರವಾಯಿತು. ಪ್ರಥಮ ಬೆಡಗಿನ ಕನ್ಯೆ, ಜಯಂತಿ ಈಗ ತನ್ನ ವಯೋ ಮಾನಕ್ಕನುಗುಣವಾಗಿ ಪಾತ್ರಗಳ ಧಾಟಿ ಯನ್ನೇ ಬದಲಿಸಿಕೊಂಡಿದ್ದಾರೆ. ಮಧ್ಯಮ



[illegible] ಈಗ ಆಕೆಗೆ ಅನಿವಾರ್ಯ [illegible] 'ಮಸಣದ ಹೂವು'ವಿನ ಪಾತ್ರ) ಹಾಗೂ ಕನ್ನಡ ಚಿತ್ರರಂಗದಲ್ಲಿ ಅರವತ್ತರ ಮಧ್ಯ ಕಾಲದಿಂದ ಎಪ್ಪತ್ತರ ದಶಕದ ಅಂತ್ಯದ ವರೆಗೂ ಗ್ಲಾಮರ್ ತಾರೆಯಾಗಿ ಮೆರೆದ ಭಾರತಿ ಸಹ ಇಂದು ತನ್ನ ತಾರಾ ಪಥ ವನ್ನು ಬದಲಿಸಿಕೊಂಡಿದ್ದಾಗಿದೆ. 'ಋಣ ಮುಕ್ತಳು' ನಂತರ ಈಗ 'ತವರು ಮನೆ' ಇದಕ್ಕೆ ಉದಾಹರಣೆ. ಅವರ ನಂತರ ಬಂದ ಮಂಜುಳಾ, ಜಯಮಾಲಾ, ಆರತಿ ಇವರೂ ಸಹ ತಮ್ಮ ವಯಸ್ಸಿನಿಂದಾಗಿ ತಮ್ಮ ಬೆಡಗನ್ನು ಕಳೆದುಕೊಂಡಿದ್ದಾರೆ. ಕೆಲವರು ಇದನ್ನರಿತುಕೊಂಡು ಚಿತ್ರರಂಗ ದಿಂದ ದೂರ ಸರಿದಿದ್ದಾರೆ ಕೂಡ.

ಹೊಸ ಬೆಡಗಿಯರು

ಎಂಭತ್ತರದಶಕದ ಪ್ರಾರಂಭದಲ್ಲಿ ಹೊಸ ಬೆಡಗಿಯರ ಪೀಳಿಗೆಯೊಂದು ಬೆಳ್ಳಿ ತೆರೆ ಪ್ರವೇಶಿಸಿತು. ಈ ಪೈಕಿ ಕನ್ನಡ ತೆರೆ ಯನ್ನೂ ಪ್ರಕೃತ ಅಲಂಕರಿಸಿರುವ ಬೆಡಗಿ ಯರಲ್ಲಿ ಭವ್ಯ, ವಿಜಯಲಕ್ಷ್ಮಿ ಸಿಂಗ್, ಅಭಿನಯ, ಉಮಾಶ್ರೀ, ವಿಜಯರಂಜಿನಿ ಸೌಮ್ಯಶ್ರೀ, ಸರೋಜಾ, ತಾರಾ ಪ್ರಮುಖರಾದವರು.

ಭವ್ಯ, ಭವಿಷ್ಯದ ಭವ್ಯ

ಕಳೆದ ದಶಕದ ಬೆಡಗಿನ ತಾರೆ ಮಂಜು ಳಾರಂತೆ ನೋಡಲು ಗಿಡ್ಡ ನಿಲುವು ನಾಕಸ್ಟು ಚೆಲುವು ಹೊತ್ತ ಭವ್ಯ ಕನ್ನಡ ಚಿತ್ರರಂಗಕ್ಕೆ ಪದಾರ್ಪಣ ಮಾಡಿದ ಭವ್ಯ ರೀತಿಯಲ್ಲೇನೂ ಅಲ್ಲ. ತಿಪಟೂರು ರಘು ಶೋಧಿಸಿದ ಈ ಬೆಂಗಳೂರಿನ ಬೆಡಗಿ ರಘು ನಿರ್ದೇಶನದ 'ಕಲ್ಲುವೀಣೆ ನುಡಿಯಿತು' ಚಿತ್ರದ ಪುಟ್ಟ ಪಾತ್ರವೊಂದರಲ್ಲಿ ಮೊಟ್ಟ ಮೊದಲು ಕಾಣಿಸಿಕೊಂಡಳು. ಆಕೆಯ ದ್ವಿತೀಯ ಚಿತ್ರ 'ಸ್ವರ್ಗದಲ್ಲಿ ಮದುವೆ', ಅದರಲ್ಲಿ ಆಕೆಯೇ ಕಥಾ ನಾಯಕಿ. ಪ್ರಥಮ ಚುಂಬನ ದಂತಭಗ್ನ ವಾದರೂ, ಹುಡುಗಿಗೆ ಬೇಡಿಕೆ ಕುಗ್ಗಲಿಲ್ಲ. ಆವಳ ಬೆಡಗಿನ ತಾಜಾತನ ಹಾಗೂ [illegible] ಅಭಾವದ ಕಾರಣ [illegible] ಯುವ ಪ್ರಣಯದ ಹಂದರದ ಸುತ್ತ ಹೆಣೆದ

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ

ತಂತಿ : ರೆಗ್ ಮಾರ್ಕ್ ಸ್ಥಾಪನೆ: 1953 ದೂರವಾಣಿ : 2338

ಕಲ್ಪಿಸಿದ ಸೌಲಭ್ಯಗಳು:

- ಸಮರ್ಪಕ ತೂಕದ ವ್ಯವಸ್ಥೆ
- ಟೆಂಡರ್ ಪದ್ಧತಿಯ ಮಾರಾಟದ ಮೂಲಕ ಸ್ಪರ್ಧಾತ್ಮಕ ಬೆಲೆ
- ಸಕಲ ಸೌಕರ್ಯಗಳನ್ನೊಳಗೊಂಡ ಮಾರುಕಟ್ಟೆ ಪ್ರಾಂಗಣ
- ಉಚಿತ ವರ್ಗೀಕರಣ ಸೌಲಭ್ಯ
- ಮಾಲಿನ ಹಣದ ಸೂಕ್ತ ಬಟವಾಡೆ
- ತಕರಾರುಗಳ ತೀವ್ರ ವಿಲೇವಾರಿ ಮತ್ತು ನಿವಾರಣೆ
- ಪೇಟೆ ಜ್ಞಾನ ಪ್ರಸಾರ
- ರೈತರು ಪಾವತಿಸಬೇಕಾದ ತೂಕದ ಚಾರ್ಜನ್ನು ಸಮಿತಿಯೇ ಭರಿಸುವ ಸೌಲಭ್ಯ

ಅಭಿವೃದ್ಧಿ ಯೋಜನೆಯ ಪಕ್ಷಿನೋಟ:

- ವಿಶ್ವಬ್ಯಾಂಕ್ ಸಾಲಯೋಜನೆಯಡಿಯಲ್ಲಿ ರೂ. 17,60,000-00 ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳು.
- ವಾಣಿಜ್ಯ ಬ್ಯಾಂಕ್‌ಗಳ ಸಾಲ ಯೋಜನೆಯಡಿಯಲ್ಲಿ ರೂ. 38,13,700-00 ಅಂಗಡಿ ಮತ್ತು ಗೋದಾಮುಗಳ ನಿರ್ಮಾಣ.
- ಸಮಿತಿಯ ನಿಧಿಯಲ್ಲಿ ರೂ. 4,89,835-00 ರೂ.ಗಳ ವೆಚ್ಚದಲ್ಲಿ ಆಡಳಿತ ಕಛೇರಿ ರಸ್ತೆ ನಿರ್ಮಾಣ, ಹರಾಜು ಕಟ್ಟೆ ಮತ್ತು ಉಪಹಾರ ಗೃಹಗಳ ನಿರ್ಮಾಣ.
- ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿಯಲ್ಲಿ ರೂ. 7,30,000-00 ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳು.
- ಗ್ರಾಮೀಣ ಮಾರುಕಟ್ಟೆ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ. 1,24,000-00 ವೆಚ್ಚದಲ್ಲಿ ಸಂತೆ ಪ್ರದೇಶದಲ್ಲಿ ಉದ್ದೇಶಿತ ಹರಾಜುಕಟ್ಟೆ ಗೋದಾಮುಗಳ ನಿರ್ಮಾಣ.

ಸಮಿತಿಯ ಸದಸ್ಯರು

1.	ಶ್ರೀ ಕೆ. ಎನ್. ವೀರಪ್ಪಗೌಡ	ಅಧ್ಯಕ್ಷರು
2.	,, ಹೆಚ್. ಈರಾನಾಯಕ್	ಉಪಾಧ್ಯಕ್ಷರು
3.	,, ಬಿ. ಹಾಲಪ್ಪ	ಸದಸ್ಯರು
4.	,, ಎಸ್. ಬಿ. ಕೃಷ್ಣಪ್ಪ	,,
5.	,, ಹೆಚ್. ಹೆಚ್. ಮಂಜಪ್ಪಗೌಡರು	,,
6.	,, ಸಿ. ಬಿ. ಈಶ್ವರಪ್ಪ	,,
7.	,, ಕೆ. ಟಿ. ವೆಂಕಟಯ್ಯ	,,
8.	,, ಹೆಚ್. ಡಿ. ಶ್ರೀನಿವಾಸ	,,
9.	,, ಮಹಾಬಲ ಶೆಟ್ಟಿ	,,
10.	,, ಎನ್. ಹೆಚ್. ಜಂಬಪ್ಪ	,,
11.	,, ಡಿ. ಆರ್. ರತ್ನಾಕರ	,,
12.	,, ಕೆ. ಎನ್. ವೆಂಕಟೇಶ	,,
13.	,, ಕೆಂಪಣ್ಣ	,,
14.	,, ಗೋವಿಂದಪ್ಪ	,,
15.	ಜಂಟಿ ಮುಖ್ಯ ಮಾರಾಟಾಧಿಕಾರಿಗಳು, ಬೆಂಗಳೂರು ವಿಭಾಗ, ಬೆಂಗಳೂರು.	

ಕೆ. ಎನ್. ವೀರಪ್ಪಗೌಡ
ಅಧ್ಯಕ್ಷರು

ಹೆಚ್. ಎಂ. ರಾಮಕೃಷ್ಣ ರೆಡ್ಡಿ
ಕಾರ್ಯದರ್ಶಿಗಳು

ಹೆಚ್. ಈರಾನಾಯಕ್
ಉಪಾಧ್ಯಕ್ಷರು

ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಮಿತಿ, ಶಿವಮೊಗ್ಗ



ಕಥೆ 'ಪ್ರೇಮಪರ್ವ'ದಲ್ಲಿ ನಿರ್ದೇಶಕ ಸಿದ್ದಲಿಂಗಯ್ಯನವರ ಮೂಲಕ ದೊಡ್ಡ 'ಬ್ರೇಕ್' ಪಡೆದಳು. ಶತದಿನೋತ್ಸವ ಆಚರಿಸಿದ ಚಿತ್ರದ ಪ್ರಚಂಡ ಯಶಸ್ಸು ಮುರಳಿ, ಭವ್ಯರಿಗೆ ಬೇಡಿಕೆ ಹೆಚ್ಚಲು ಕಾರಣವಾಯಿತು.

ಮುಂದೆ "ಪ್ರೇಮಜ್ಯೋತಿ"ಯಲ್ಲಿ ಸಹ ಯುವಪ್ರಣಯಕ್ಕೆ ಪ್ರೇರಕವಾಗುವಂತೆ ಅರ್ಜುನ್ ಸರ್ಜಾನೊಂದಿಗೆ ಅಭಿನಯಿಸಿ-ಮತ್ತೊಂದು ಹಂತ ಏರಿದಳಾದರೂ ಈ ತಾರೆಯು ತೆರೆಯ ಹಿಂದಿನ ಪ್ರೇಮ ಪ್ರಕರಣದ ಸಿಕ್ಕಿನಲ್ಲಿ ಸಿಕ್ಕಿದ್ದು, ಆಕೆಯ ಇಮೇಜನ್ನು ಸಾಕಷ್ಟು ಕೆಡಿಸಲು ಕಾರಣವಾಯಿತು. "ಪ್ರೇಮಜ್ಯೋತಿ" ನಿರ್ದೇಶಿಸಿದ ಜೋಸೈಮನ್ ಹಾಗೂ ಭವ್ಯರ ನಡುವಿನ ಪ್ರೇಮಪ್ರಕರಣ-ವಿವಾಹದ ಘಟ್ಟವನ್ನೂ ದಾಟಿದೆ ಎಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಜೋಸೈಮನ್ ಇದನ್ನು ನಿರಾಕರಿಸಿದರೂ "ಬೆಂಕಿ ಇಲ್ಲದೆ ಹೊಗೆ ಇಲ್ಲ" ಎಂಬಂತೆ ಜೋಸೈಮನ್‌ರು ಮತ್ತೆ ಭವ್ಯಳನ್ನು ತನ್ನ ಜೋಡಿಗೆ "ಒಡೆದ ಹಾಲು"ನಲ್ಲಿ ಹಾಕಿದಾಗ, ಆ ಗುಮಾನಿಗೆ ಸಾಕಷ್ಟು ಪುಷ್ಟಿ ಸಿಕಿತು. ಭವ್ಯ ಮಾತ್ರ ತನ್ನ ಹಾಗೂ ಜೋಸೈಮನ್ ನಡುವೆ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಎಲ್ಲಿಯೂ ಹೇಳಿಕೆ ನೀಡದಿರುವುದು ಇಲ್ಲಿ ಗಮನಿಸಬೇಕಾದ ಅಂಶ.

ಇಷ್ಟಾದರೂ ಭವ್ಯ ತನ್ನ ತಾರಾ ಪ್ರತಿಷ್ಠೆಯನ್ನು ಕುದುರಿಸಿಕೊಳ್ಳಲು ಆಕೆ ವೀರಾಸ್ವಾಮಿಯವರ "ಪ್ರಳಯಾಂತಕ"ದಲ್ಲಿ ನಟಿಸಿ, ಈಜುವ ಉಡುಪಿನಲ್ಲಿ ತನ್ನ ಅಂಗಪ್ರದರ್ಶನ ನೀಡಿದ್ದು ಮುಖ್ಯ ಕಾರಣ. ಯುವ ಮನಸ್ಸಿಗೆ ಕಾವೇರಿಸುವ ತನ್ನ ಆ ಮಾದಕ ಮೈಪೈಖರಿಯಿಂದ, ಆಕೆ ಚಿತ್ರರಂಗದಲ್ಲಿ ಸಾಕಷ್ಟು ಕುತೂಹಲ ಕೆರಳಿಸಿದಳು. 'ಪ್ರಳಯಾಂತಕ'ದ ಪ್ರಚಂಡ ಯಶಸ್ಸು, ಭವ್ಯಳ ವೈಯಕ್ತಿಕ ಬದುಕಿನ ದೌರ್ಬಲ್ಯಗಳ ನಡುವೆಯೂ ಆಕೆಯ ತಾರಾ ಮೌಲ್ಯ ಏರಿಸಲು ಕಾರಣವಾಯಿತು.

ಮುಂದೆ ಭವ್ಯಳ ತಾರಾ ಹಂತ ಮುಗಿ ಚಿತ್ತರಕ್ಕೆ ಮುಟ್ಟಿದ್ದು ದ್ವಾರಕೀಶ್ ಆಕೆಯನ್ನು ತಮ್ಮ ನಿರ್ದೇಶನದ 'ನೀ ಬರೆದ ಕಾದಂಬರಿ' ಯಲ್ಲಿ ವಿಷ್ಣುವಿನಂಥ ಜನಪ್ರಿಯ-ಗ್ಲಾಮರ್ ನಾಯಕನ ಜೊತೆಯಲ್ಲಿ ಅಭಿನಯಿಸಲು ಆರಿಸಿದಾಗ. ಆ ಚಿತ್ರವು 'ಸೂಪರ್ ಹಿಟ್' ಆಗಿದ್ದು ಭವ್ಯಳನ್ನು ಭವಿಷ್ಯದಲ್ಲಿ ಕನ್ನಡದ ನಂಬರ್ ಒನ್ ತಾರೆಯ ಪಟ್ಟಕ್ಕೆ ಏರಿಸುವಲ್ಲಿ ಖಂಡಿತ ಸಹಕಾರಿಯಾಗುತ್ತದೆ. ಭವ್ಯ ತನ್ನ ಇಮೇಜಿನ ಬಗ್ಗೆ ಸಾಕಷ್ಟು ಜೋಪಾನವಾಗಿರಬೇಕಾದುದು ಅವಶ್ಯ. ಭಾವಪೂರ್ಣ ಅಭಿನಯಕ್ಕೆ ಮೀಸಲಿರಬೇಕಾದ ಈ ತಾರೆ ತನ್ನ ಲೈಂಗಿಕ ಆಕರ್ಷಣೆಗೇ ಆದ್ಯತೆ ನೀಡಿದರೆ ಆಕೆ ಬಹುಕಾಲ ನಿಲ್ಲುವುದು ಸಾಧ್ಯವಿಲ್ಲ. 'ಪ್ರೇಮಪರ್ವ'ದ ಮುರಳಿಯೊಂದಿಗೆ ಆಕೆ ಮತ್ತೆ 'ಪ್ರೇಮಗಂಗೆ' ಚಿತ್ರದಲ್ಲಿ ಅಭಿನಯಿಸುತ್ತಿದ್ದು ಈ ಜೋಡಿ ಇಲ್ಲಿ ಮತ್ತೆ ಯಶಸ್ವಿಯಾಗುವುದೇ ಎಂಬುದನ್ನು ಕಾದು ನೋಡಬೇಕು.

ಮುನ್ನಿಯ ವಿಫಲ ಯತ್ನ

ಚಿತ್ರಬಹ್ಮ ದಿ॥ ಡಿ. ಶಂಕರ್‌ಸಿಂಗ್ ಮತ್ತು ಅವರ ತಾರಾ ಪತ್ನಿ ಪ್ರತಿಮಾದೇವಿಯವರ ಕಿರಿಯ ಪುತ್ರಿ ವಿಜಯಲಕ್ಷ್ಮಿ ಸಿಂಗ್. ಚಿತ್ರರಂಗದ ಮಂದಿ ಅವಳನ್ನು ಮುದ್ದಿನಿಂದ ಕರೆಯುವುದು ಮಾತ್ರ 'ಮುನ್ನಿ' ಎಂದು. ಹಿಂದಿಯ ಜೀನತ್‌ಳನ್ನು ಕೆಲವು ಕೋನಗಳಲ್ಲಿ ಹೋಲುವ, ಒಮ್ಮೊಮ್ಮೆ ಟೀನಾ ಮುನೀಮ್‌ಳಂತೆ ಕಾಣುವ ಮುನ್ನಿ ಕನ್ನಡಕ್ಕೆ ಉತ್ತಮ ಕೊಡುಗೆ.

ಹಿರಿಯ ತಾರೆಯೊಬ್ಬರ ಪುತ್ರಿಯಾದ ಇಡೀ ಕುಟುಂಬವೇ ಚಿತ್ರರಂಗದಲ್ಲಿ ತೊಡಗಿಸಿಕೊಂಡಿರುವ 'ಮುನ್ನಿ'ಯ ಒಬ್ಬ ಅಣ್ಣ ಕನ್ನಡದ ಖ್ಯಾತ ನಿರ್ದೇಶಕ ಎಸ್. ವಿ. ರಾಜೇಂದ್ರಸಿಂಗ್ ಬಾಬು, ಮತ್ತೊಬ್ಬ ಅಣ್ಣ ಸಂಗ್ರಾಂಸಿಂಗ್, ಕೊನೆಯ ಅಣ್ಣ ಜೈರಾಜ್‌ಸಿಂಗ್. ಮೂವರೂ ಚಿತ್ರರಂಗದಲ್ಲಿ ನಿರ್ಮಾಪಕರಾಗಿ ನಿರ್ದೇಶಕರಾಗಿ ನೆಲೆಯೂರಿದವರು. ಹೀಗಾಗಿ ಮುನ್ನಿಗೆ ಅಭಿನಯರಂಗಕ್ಕೆ ಬರಲು ಎಲ್ಲ ಸೌಕರ್ಯಗಳೂ ಸುಲಭವಾಗಿ ಸಿಕ್ಕವು. ಎಂ. ಪಿ. ಶಂಕರ್ ಅವರ "ಶ್ರೀಮಾನ್" ಚಿತ್ರದ ಮೂಲಕ ಕನ್ನಡ ಚಿತ್ರತೆರೆ ಅಲಂಕರಿಸಿದ ಮುನ್ನಿ ಆಧುನಿಕ ಉಡುಗೆ ತೊಡುಗೆಯ ಪಾತ್ರಗಳಿಗೆ ಒಪ್ಪುತ್ತಾಳೆ. ಅವಳು ವಸ್ತ್ರ ವಿನ್ಯಾಸದಲ್ಲಿ ಕೂಡ ಪರಿಣತಳು. ತೆರೆಗೆ ಬರಲಿರುವ ಮುನ್ನ "ಕಿಲಾಡಿ ಜೋಡಿ" "ಭರ್ಜರಿ ಬೇಟೆ" ಚಿತ್ರಗಳಿಗೆ ಆಕೆ ವಸ್ತ್ರ ವಿನ್ಯಾಸ ಮಾಡಿದ್ದುಂಟು. ಪ್ರಥಮ ಚಿತ್ರದಲ್ಲೇ ತನ್ನ ಈಜುಡುಗೆಯಿಂದ ನಮ್ಮನ್ನು ಬೆರಗುಗೊಳಿಸಿದವಳು ಮುನ್ನಿ. "ಶ್ರೀಮಾನ್" ಚಿತ್ರದ ನಾಯಕ ಅನಂತ್. ಅಂಥಾ ಜನಪ್ರಿಯ ಕಲಾವಿದನೊಂದಿಗೆ ಅಭಿನಯಿಸಲು ಮುನ್ನಿಗೆ ತಾರಾಮೌಲ್ಯವಿಲ್ಲದ್ದರಿಂದಾಗಿ ಚಿತ್ರ ಗೋತಾ ಹೊಡೆಯಿತು. ಮುಂದೆ ಆಕೆ ಮಿಂಚಿದ್ದು "ಪ್ರಾಯ ಪ್ರಾಯ ಪ್ರಾಯ"ದಲ್ಲಿ. ಅದರಲ್ಲಿಯೂ ಸಹ ಆಧುನಿಕ ಯುವತಿಯಾಗಿ ತನ್ನೆಲ್ಲ ಬೆಡಗನ್ನು ಪ್ರದರ್ಶಿಸಿದ ಮುನ್ನಿ ಗ್ಲಾಮರ್ ಪಾತ್ರಗಳಿಗೇ ಲಾಯಕ್ಕು ಎಂಬುದು ನಿಸ್ಸಂದೇಹ. ಪುಟ್ಟಣ್ಣ ಕಣಗಾಲರ 'ಧರಣಿ ಮಂಡಲ'ದಲ್ಲಿ ಮುನ್ನಿಗೆ ಸಾಕಷ್ಟು ಅವಕಾಶವಿಲ್ಲದಿದ್ದರೂ ತನ್ನ 'ಗ್ಲಾಮರ್'ನಿಂದ ಆಕೆ ಪ್ರೇಕ್ಷಕರನ್ನು ಸೆರೆಹಿಡಿದದ್ದೊಂದು ವಿಶೇಷ. 'ಬೆಂಕಿಯಲ್ಲಿ ಅರಳಿದ ಹೂವು' 'ಧರ್ಮ'



[illegible] ತಾರಾ ಪ್ರತಿಭೆ [illegible] ಮುನ್ನಿಗೆ [illegible] ವಿಲ್ಲ. ಆಕೆಯ ತಾರಾ ಮೌಲ್ಯವನ್ನು [illegible] ಚಿತ್ರಗಳೂ [illegible] ಯಾಗಲಿಲ್ಲ. ನಂತರ 'ಹಾಲಿ [illegible]' ಚಿತ್ರದಲ್ಲಿ ವಿಷ್ಣುವಿನ ನಾಯಕಿಯಾಗಿ ಉತ್ತಮ ಅಭಿನಯ ನೀಡಿದರೂ ಮುನ್ನಿಗೆ ಆ ಚಿತ್ರ ಕೂಡ ಹೆಸರು ತಂದುಕೊಡಲಿಲ್ಲ. [illegible] ಚಿತ್ರವು ವಿಫಲವಾದುದೇ ಅದಕ್ಕೆ ಮುಖ್ಯ ಕಾರಣ.

ಹೀಗಾಗಿ ಅಷ್ಟಾಗಿ ಬೇಡಿಕೆಯಿಲ್ಲದೇ, ಮುನ್ನಿ ಕಾಲ ಕಳೆದಳು. ತಾರಾ ಪ್ರತಿಷ್ಠೆ ಸುಧಾರಿಸಿಕೊಳ್ಳಲು ಸ್ವಂತ ಸಹೋದರರ ಚಿತ್ರ "ಪಿತಾಮಹ" ದಲ್ಲೂ ಪ್ರಯತ್ನಿಸಿ ಆಕೆ ವಿಫಲಳಾದಳು.

ಮುನ್ನಿಯಂಥ ಸುಸಂಸ್ಕೃತ ಹಾಗೂ ವಿದ್ಯಾವಂತ ತಾರೆಯರು ಚಿತ್ರರಂಗದಲ್ಲಿ ವಿರಳ. ಅಂಥವರನ್ನು ಸೂಕ್ತವಾಗಿ ಬಳಸಿಕೊಳ್ಳುವಲ್ಲಿ ನಮ್ಮ ನಿರ್ದೇಶಕರು-ನಿರ್ಮಾಪಕರು ಸಹ ಸರಿಯಾಗಿ ಪ್ರಯತ್ನಿಸುತ್ತಿಲ್ಲ.

ಆಕೆಗೆ ಒಳ್ಳೆ ಬ್ರೇಕ್ ಸಿಕ್ಕಿದ್ದೇ ಆದರೆ ವಿಜಯಲಕ್ಷ್ಮಿ ಸಿಂಗ್ ಕನ್ನಡ ಚಿತ್ರರಂಗಕ್ಕೆ ಒಳ್ಳೆಯ ಕೊಡುಗೆಯಾಗಬಲ್ಲಳು.

ಅಭಿನಯಳ ವಿಷವರ್ತುಲ


ಅಭಿನಯ [illegible] ಕನ್ನಡಿಗರು ಅಭಿಮಾನಪಡುವಂಥ ಬೆಡಗು. 'ಅನುಭವ' [illegible] ತನ್ನ ಪ್ರತಿಭಾ [illegible] ಮೊದಲ ಚಿತ್ರದಲ್ಲೇ [illegible] ಗಳಿಸಿ, [illegible] 'ಅನುಭವ' [illegible] ಕನ್ನಡ [illegible]



ಎಂಬುದು ಈವರೆಗೆ ಬಂದಿಲ್ಲ. ಅವಳಿಗೆ 'ಯೌವ್ವನದ ಸುಳಿ'ಯಲ್ಲಿ ಎಂಬ ಚಿತ್ರದಲ್ಲಿ ದಕ್ಕಿದ ಪಾತ್ರ ಸಹ ಸೆಕ್ಸ್ ಪ್ರಧಾನ. ಇದರೊಟ್ಟಿಗೆ ಹೊಸ ಹಾಗೂ ವಿಭಿನ್ನ ದೃಷ್ಟಿಕೋನ ಹರಿಸಿದ್ದೇನೆಂದು ಕೊಚ್ಚಿಕೊಳ್ಳುವ ಈ ಚಿತ್ರದ ನಿರ್ದೇಶಕರು ಅಭಿನಯಳ ತಾರಾ ಪ್ರತಿಷ್ಠೆಯನ್ನು ಭಂಗಗೊಳಿಸಿ, ತಮ್ಮ ಸ್ವಂತ ಲಾಭಕ್ಕೆ ದೊಡ್ಡ ಸುದ್ದಿ ಮಾಡಿದ್ದಾರೆ. [illegible] ಹಂತದಲ್ಲಿ ಅಭಿನಯ ಸಂಪೂರ್ಣ ನಗ್ನಳಾಗಿ [illegible] ಬಂದರಲ್ಲಿ ಅಭಿನಯ [illegible] ಬಂದಿದ್ದು ಅದು ನಿಜ [illegible] ಈ [illegible] ಪ್ರತಿಭೆಗೆ [illegible] ದೊಡ್ಡ ಅಪಚಾರ. [illegible] ಪ್ರತಿಭೆಯನ್ನು ಸ್ಪಷ್ಟವಾಗಿ [illegible] ಆಕೆಯನ್ನು ಸೂಕ್ತವಾಗಿ [illegible] ಕೊಂಡಲ್ಲಿ [illegible] ಈ ಹುಡುಗಿ ಒಳ್ಳೆ ಕೊಡುಗೆಯಾಗಬಲ್ಲಳೆಂಬುದು ನಿಸ್ಸಂದೇಹ. ಬಟ್ಟಲು ಕಂಗಳ ಈ ಮುದ್ದು ಬಾಲೆ ಕನ್ನಡ ತೆರೆಯ ಮಂದಾರ ಪುಷ್ಪದಂತೆ ಅರಳಲಿ ಎಂದೇ ಹಾರೈಸೋಣ.

ಉಮಾಶ್ರೀಯ ದೋಷ

'ಒಡಲಾಳ' ನಾಟಕದ ಸಾಕವ್ವನಾಗಿ ಖ್ಯಾತಳಾದ ಅಸಾಧಾರಣ ಪ್ರತಿಭೆಯ ತಾರೆ ಉಮಾಶ್ರೀ. ನಾಟಕ ರಂಗದಲ್ಲಿ ಆಕೆ ಗಳಿಸಿದ ಪ್ರತಿಷ್ಠೆಗೆ ಚಿತ್ರರಂಗದಿಂದ ಧಕ್ಕೆಯುಂಟಾಗಿದೆ ಎಂದು ಹೇಳುವವರುಂಟು. 'ಅನುಭವ'ದ ಪದ್ದುವಾಗಿ ತನ್ನ ಹಾವ-ಭಾವಗಳಿಂದ ಇಡೀ ಚಿತ್ರವನ್ನೇ 'ಕದ್ದ' ಉಮಾಶ್ರೀ-ಯ ಇಮೇಜ್ ಕ್ರಮೇಣ ಕನ್ನಡ ನಿರ್ಮಾಪಕ-ನಿರ್ದೇಶಕರ ಹದ್ದಿನ ಕಣ್ಣಿಗೆ 'ಹಳದಿ'ಯಾಗಿ ಕಂಡದ್ದು ಮಾತ್ರ ನಿಜಕ್ಕೂ ಶೋಚನೀಯ. ಉಮಾಶ್ರೀ



ಎಂದ ಕೂಡಲೇ ವ್ಯಾಂಪ್ ಅರ್ಥಾತ್ ಖಳನಾಯಕಿಯ ಪಾತ್ರಕ್ಕೆ ಮೀಸಲೆಂದು ಭಾವಿಸಿದ ಚಿತ್ರ ಬ್ರಹ್ಮರು ಆಕೆಗೆ ನೀಡಿದ ಪಾತ್ರಗಳೂ ಅಂತಹವೇ. 'ಬಿಡುಗಡೆಯ ಬೇಡಿ'ಯಲ್ಲಿ ನೂರಕ್ಕೆ ನೂರು ವ್ಯಾಂಪಿಷ್ ಆದ ಉಮಾ ಸಿಗರೇಟು ಹೊತ್ತಿಸಿ, ಮದ್ಯದ ಗ್ಲಾಸು ಹಿಡಿದಾಗಲೇ ಆಕೆಯ 'ಒಡಲಾಳ'ದ ಹಾಗೂ 'ಅನುಭವ'ದ ಪ್ರತಿಭೆ ಥೂಳಿಪಟವಾಯಿತು. ನಾಯಕನಿಗೆ ತನ್ನ ಮಾದಕ ಮೈ ತಾಗಿಸಿ, ಒನಪು, ಒಯ್ಯಾರದಿಂದ ಆತನನ್ನು ಸೆರೆಹಿಡಿಯುವ ಅವಳ ಅರೆನಗ್ನ ವಸ್ತ್ರಧಾರಣೆ, ಕೆಣಕುವ ಕುಡಿನೋಟ– ಅವಳ ಪ್ರತಿಭೆಗೆ ತಕ್ಕ ಪುರಸ್ಕಾರವಲ್ಲ. 'ಹೆಂಡ್ತಿ ಬೇಕು ಹೆಂಡ್ತಿ'ಯಲ್ಲೂ ಉಮಾಶ್ರೀ ಸ್ಕೋರ್ ಮಾಡಬಹುದಾದರೂ ಆಕೆಯ ಅಗಾಧ ಪ್ರತಿಭೆಗೆ ಇವು ಸವಾಲಾಗಿ ನಿಲ್ಲಬಲ್ಲವೆ? ಎಂಬುದನ್ನು ಗಂಭೀರವಾಗಿ ಯೋಚಿಸಬೇಕು.

'ಸೆಕ್ಸ್' ತೆರೆ ಸರಿಸಿ ಪೋಷಕ ಪಾತ್ರಗಳ ಸಿಕ್ಕಿನಿಂದ ದೂರಸರಿದು ಉಮಾಶ್ರೀ ತನ್ನ ಪ್ರತಿಭೆಯನ್ನು ಬೆಳಗಲು ಅವಕಾಶ ಸಿಗಬೇಕು. ಆಗ ಮಾತ್ರ ಉಮಾಶ್ರೀ ಬಹುಕಾಲ ಚಿತ್ರರಂಗದಲ್ಲಿ ಉಳಿದಾಳು.

ಸೌಮ್ಯವಲ್ಲದ ಸೌಮ್ಯಶ್ರೀ

ಹೆಸರಿಗೆ ಮಾತ್ರ ಸೌಮ್ಯಶ್ರೀ ಎಂಬ ನಾಮಧೇಯ ಹೊತ್ತ ಸೌಮ್ಯಶ್ರೀ ಕನ್ನಡ ಚಿತ್ರ ರಂಗದಲ್ಲಿ ಒಳ್ಳೆ ಪ್ರತಿಭೆಯಾಗಿ ರೂಪುಗೊಳ್ಳುವ ಅರ್ಹತೆ ಪಡೆದ ಹುಡುಗಿ. ತುಮಕೂರು ಮಮತಾ ಎಂಬ ಮೂಲ ನಾಮಧೇಯದ ಈ ಅಚ್ಚ ಕನ್ನಡ ಪ್ರತಿಭೆಯನ್ನು ಹದಿನಾರರ ಹದಿ ವಯಸ್ಸಿಗೆ 'ಹದಿನಾರು ಆದಾಗ' ಚಿತ್ರದ ನಾಯಕಿಯಾಗಿ ಮಾಡಲು ಬಸವರಾಜ ಕೆಸ್ತೂರ್ ಹಿಡಿದು ತಂದರು. ಚಿತ್ರದ ಮುಹೂರ್ತ ನಡೆದು ನಂತರ ಪೂರ್ತಿ ಚಿತ್ರವೇ ಸ್ಥಗಿತಗೊಂಡಿತು. ಮಮತಾಳ ಪಾಲಿಗೆ ಚಿತ್ರರಂಗ ಕಾರ್ಗತ್ತಲಿನ ಕಾನನ. ಮುಂದೇನು ಮಾಡಬೇಕು ಎಂದು ತೋಚದೆ ಧೃತಿಗೆಟ್ಟ ಈ ಹುಡುಗಿ 'ನೀಲಗಿರಿಯ ಮೇಲೆ' ಎಂಬ ಗಾದೆಗೆ ಸರಿಯಾಗಿ ಪೋಷಕ ಪಾತ್ರಗಳತ್ತ ವಾಲಿದಳು. ಮೂರನೇ ದರ್ಜೆಯ ನಟಿಯಾಗಿ "ರುದ್ರ ನಾಗ" "ಬಂಧನ"ಗಳಲ್ಲಿ ತಂಗಿ ವೈದ್ಯಳು ಹೀಗೆ ಸಿಕ್ಕಿದ ಪಾತ್ರಗಳನ್ನೆಲ್ಲ ಆಕೆ ಒಪ್ಪಿಕೊಂಡದ್ದು ಅವಳ ಅಸಹಾಯಕತೆಯ ಸೂಚನೆ.

ದಿಢೀರನೆ ಜನಪ್ರಿಯತೆ ಗಳಿಸಲು ಬೆಡಗು ಬಿನ್ನಾಣದ ಪಾತ್ರಗಳಷ್ಟೇ ಕಾರಣ ಎಂದು ಸೌಮ್ಯಶ್ರೀ ಭಾವಿಸಿದಂತಿದೆ. ಅಂತೇ ಆಕೆ ಹೆಸರು ಬದಲಾಯಿಸಿಕೊಂಡು ದಿಢೀರನೆ 'ಸೆಕ್ಸ್ ಬಾಂಬ್' ಆಗಿ ಮೆರೆಯುವ ನಿರ್ಧಾರ ಕೈಗೊಂಡಂತಿದೆ. ಇದರ ಫಲವಾಗಿ ತುಟಿಗೆ ತುಟಿ ಬೆಸೆದು 'ನನ್ನ ಆವೇಶ' ಚಿತ್ರದಲ್ಲಿ ಈಜುಡುಪಿನಲ್ಲಿ ಆಕೆ ತನ್ನ ಮೈತೆರೆದು ಪ್ರದರ್ಶಿಸಲಿದ್ದಾಳೆ. ಸೌಮ್ಯಶ್ರೀಗೆ ಪ್ರತಿಭೆಯಿದೆ-ಅಭಿನಯ ಗೊತ್ತಿದೆ-ಸೂಕ್ತವಾಗಿ ಅದರ ಬಳಕೆಯಾದಾಗ ಮಾತ್ರ ಆಕೆ ಸೌಮ್ಯಶ್ರೀ ಎಂಬ ತನ್ನ ಹೆಸರಿಗೆ ತಕ್ಕಂತೆ ಸೌಮ್ಯ ಪಾತ್ರಗಳಲ್ಲಿ ಶೋಭಿಸಿ ಬೆಳ್ಳಿ ತೆರೆಯ ಶ್ರೇಷ್ಠ ಬೆಡಗಿ ಎನಿಸಬಹುದು.


ಗ್ಲೀಸರಿನ್ ಒಲ್ಲದ ತಾರೆ

ಚೊಕ್ಕ ಚಿನ್ನದ ಮೈ ಬಣ್ಣ ಹೊತ್ತ 'ಚಂದನದ ಗೊಂಬೆ'ಯಂತಿರುವ ಅಚ್ಚ ಕನ್ನಡತಿ ವಿಜಯರಂಜಿನಿ ಉದಯೋನ್ಮುಖ ತಾರೆಯರಲ್ಲಿ ಪ್ರಮುಖ ಹೆಸರು.



ಪತ್ರಕರ್ತ ಶ್ರೀ ಜಿ.ಕೆ. ಗುರುರಾಜ್ ಹಾಗೂ ವೈದ್ಯಕೀಯ ವೃತ್ತಿಯಲ್ಲಿರುವ ಶ್ರೀಮತಿ ಪ್ರೇಮಾ ದಂಪತಿಯ ಪುತ್ರಿಯಾದ ವಿಜಯರಂಜಿನಿ ಬಿ.ಎ.ವರೆಗೂ ಕಾಲೇಜು ಮೆಟ್ಟಿಲು ಹತ್ತಿದ್ದಾಳೆ. ಕಲಾಪ್ರಜ್ಞೆ-ಕಲಾಸ್ವಾರಕ್ಕೆ ಅಗತ್ಯವಾದ ವಿಶಿಷ್ಟ ಗುಣಗಳನ್ನು ಮೈಗೂಡಿಸಿಕೊಂಡಿರುವ ಈ ದಿಟ್ಟ ಹುಡುಗಿ ಪ್ರಭಾತ್ ಕಲಾವಿದರು ತಂಡದಲ್ಲಿ ಪಳಗಿದ ನರ್ತಕಿ. ಶಾಸ್ತ್ರೀಯ ನೃತ್ಯದಲ್ಲಿ ಅಪಾರ ಪರಿಶ್ರಮ. ಜೊತೆಗೆ ಇಂಪಾಗಿ ಹಾಡುವ ಮಧುರ ಕಂಠ ಇವಳಿಗಿದೆ. "ಪರಾಜಿತ" ಚಿತ್ರದ ಮೂಲಕ ನಿರ್ದೇಶಕ ಸಿದ್ಧಲಿಂಗಯ್ಯನವರು ವಿಜಯರಂಜಿನಿಗೆ ತೆರೆಯ ಪ್ರವೇಶಕ್ಕೆ ಗೆಜ್ಜೆ ಕಟ್ಟಿದರು. ತುಂಬು ಗ್ಲಾಮರ್ ಹೊತ್ತ ವಿಜಯರಂಜನಿ ಸುಮಾರು 20 ಚಿತ್ರಗಳಲ್ಲಿ ಪೋಷಕ ಪಾತ್ರಗಳನ್ನು ನಿರ್ವಹಿಸಿಯೂ ತೆರೆಗೆ ಅಪರಿಚಿತಳಾಗಿ ಉಳಿದಾಗ, ಡಾ|| ರಾಜ್‌ಕುಮಾರ್ ವಲಯವನ್ನು ಸೇರಿದ ವಿಜಯರಂಜನಿಗೆ "ಶ್ರಾವಣ ಬಂತು" ಚಿತ್ರದಲ್ಲಿ ದ್ವಿತೀಯ ನಾಯಕಿ ಪಟ್ಟ ಕಟ್ಟಲಾಯಿತು. ತನಗೆ ದೊರೆತ ಅವಕಾಶವನ್ನು ಸಮರ್ಥವಾಗಿ ಉಪಯೋಗಿಸಿಕೊಂಡ ವಿಜಯರಂಜನಿ ಮತ್ತೆ ರಾಜ್ ವಲಯದಲ್ಲಿ ಅಭಿನಯಿಸಿದ್ದು "ಅದೇ ಕಣ್ಣು"ನಲ್ಲಿ ದ್ವಿತೀಯ ನಾಯಕಿಯಾಗಿ.

"ಆ ಎರಡು ಚಿತ್ರಗಳ ಅಭಿನಯ ನನಗೆ ಸಾಕಷ್ಟು ಜನಪ್ರಿಯತೆ ತಂದುಕೊಟ್ಟಿದೆ" ಎಂದು ಸ್ಮರಿಸುವ ಈ ತಾರೆ ಬರಲಿರುವ "ಲಂಚ ಲಂಚ ಲಂಚ" ಹಾಗೂ "ಆಕಾಶವಾಣಿ"ಯಲ್ಲಿ ಸ್ವತಂತ್ರ ನಾಯಕಿಯಾಗುವ ಅದೃಷ್ಟ ಪಡೆದಿದ್ದಾಳಾದರೂ, ತೆರೆಯ ಮಾರುಕಟ್ಟೆಗೆ ಅಗತ್ಯವಾದ ತಾರಾವರ್ಚಸ್ಸನ್ನು ರೂಪಿಸಿಕೊಳ್ಳುವಲ್ಲಿ ಇನ್ನೂ ಸಫಲಪ್ರದಳಾಗಿಲ್ಲ. "ಗ್ಲಾಮರ್ ಪಾತ್ರ ಎಂದರೆ ಕೇವಲ ಶೃಂಗಾರ ಪ್ರಧಾನವಾದ ಪಾತ್ರಗಳೇ. ಆದ್ದರಿಂದ ಅಂಥವುಗಳಲ್ಲಿ ನನಗೆ ಹೆಚ್ಚು ಒಲವಿಲ್ಲ" ಎಂದು ನಿರ್ಭಿಡೆಯಿಂದ ಹೇಳುವ [illegible] [illegible] ಕುರಿತರೆ ರಂಜನಿ[illegible] ಮಾತ[illegible]. 'ಆಕಾಶವಾಣಿ' ಚಿತ್ರ




ದಲ್ಲಿ ಭಾವಪ್ರಧಾನ ಪಾತ್ರ ನಿರ್ವಹಿಸು ತ್ತಿರುವ ಈ ಭಗ್ನ ಪ್ರೇಮಿಗೆ ಗಂಭೀರ ಪಾತ್ರಗಳಲ್ಲಿ ಹೆಚ್ಚು ಒಲವು ಮೂಡಿದೆ. ಗ್ಲಿಸರೀನ್ ಇಲ್ಲದೆ ಎಷ್ಟು ಬೇಕಾದರೂ ಧಾರಾಳವಾಗಿ ಅಳಬಲ್ಲ ಭಾವೋದ್ವೇಗದ ವಿಜಯರಂಜನಿಗೆ ತಾರಾ ಗಮ್ಮತ್ತುಗಳು, ಚಮಕ್‌ಗಳು ಗೊತ್ತಿಲ್ಲವಾಗಿ, ಆಕೆ 'ಒಳ್ಳೆ ಕಲಾವಿದೆ' ಯಾಗಬೇಕೆಂಬ ಸೀಮಿತ ರೇಖೆ ಹಾಕಿಕೊಂಡಂತಿದೆ. ಈ ರೇಖೆಯ ಸೀಮೋಲ್ಲಂಘನ ಮಾಡಿ, ಹೆಚ್ಚು ಗ್ಲಾಮರ್ ಪಾತ್ರಗಳತ್ತ ಗಮನ ಹರಿಸಿದರೆ, ಆಕೆಗಿರುವ ನೃತ್ಯ-ಶೃಂಗಾರ, ಚೆಲುವುಗಳು ಇಂಥಾ ಪಾತ್ರಗಳಿಗೇ ಪೂರಕವಾಗಿ ಆಕೆ ಒಳ್ಳೆ 'ಬೆಡಗಿ' ಎನ್ನಿಸಲು ಸಾಧ್ಯ. ತಾರೆಗಿರಬೇಕಾದ ವಿಶಿಷ್ಟ ನಿಲುವುಗಳನ್ನು ಹೊತ್ತ 'ರಂಜಿನಿ'-ಕನ್ನಡ ತೆರೆಗೆ ಸಹ 'ರಂಜನಿ' ಯಾಗೇ ಮುಂದುವರೆಯಲೆಂಬುದು ಅಭಿಮಾನಿಗಳ ಹಾರೈಕೆ. ಒಳ್ಳೆಯ ಅವಕಾಶಗಳು ಲಭ್ಯವಾದರೆ 'ರಂಜನಿ' ಕನ್ನಡಕ್ಕೆ ಉತ್ತಮ ಕೊಡುಗೆಯಾಗಬಲ್ಲಳು ಎಂಬುದರಲ್ಲಿ ಎರಡು ಮಾತಿಲ್ಲ.

ಬೇಡಿಕೆಯಿಲ್ಲದ ಬೆಡಗಿಯರು

ಬೆಡಗಿನ ರೂವಾರಿಯಾದ ಜಯಂತಿ, ಬೆಡಗಿನಲ್ಲೇ ಬಂಗಾರ ಭೂಷಿತೆಯಾದ ಭಾರತಿ ಇವರು ಹಳೆಯ ಪೀಳಿಗೆಯ ಬೆಡಗಿಯರು. ವಯೋಗುಣಕ್ಕೆ ಅನುಗುಣವಾಗಿ ವಯಸ್ಸಾದ ಪಾತ್ರಗಳತ್ತ ವಾಲಿದ ಈ ಬೆಡಗಿಯರ ಸ್ಥಾನ ತುಂಬಲು ಕನ್ನಡ ಚಿತ್ರರಂಗದಲ್ಲಿ ಇನ್ನೂ ಅವಕಾಶವಾಗಿಲ್ಲ. ಈ ಬಿರುಕು ಮುಚ್ಚುವಲ್ಲಿ ಇವರ ನಂತರದಲ್ಲಿ ಹುಟ್ಟಿಕೊಂಡ ಆರತಿ, ಮಂಜುಳಾ, ಜಯಮಾಲಾ, ಕನ್ನಡ ಚಿತ್ರ ರಂಗದಲ್ಲಿ ಸಾಕಷ್ಟು ಸುದ್ದಿ ಮಾಡಿದ ತಾರೆಯರು.

ಕನ್ನಡ ಚಿತ್ರರಂಗದಲ್ಲಿ ನಾಯಕಿಯರ ಪಟ್ಟ ಕಂಡುಕೊಂಡವರ ಪೈಕಿ "ನಿತ್ಯ ಹರಿದ್ವರ್ಣೆ" (ಎವರ್ ಗ್ರೀನ್) ಎನಿಸಿದ ತಾರೆ ಜಯಂತಿ.

ಅನಂತರದ ತಾರೆ ಭಾರತಿ, ಜೊತೆಗೆ ಬಿ. ಸರೋಜಾದೇವಿ ಇವರೆಲ್ಲರೂ ತೆರೆಯ ಮೆಟ್ಟಿಗೆ ಸುದ್ದಿಯಾದರೇ ಜೋರಿತು



ಕೆಲಸ ಒಂದೆ ಸುದ್ದಿಯಾಗಲೇ ಇಲ್ಲ. ನಂತರದಲ್ಲಿ ಬಂದ ಮಂಜುಳಾ, ಆರತಿ, ಜಯಮಾಲಾ ಮಾತ್ರ ಹಗರಣಗಳ ಸರಮಾಲೆಯೇ ಆಗಿ ಕನ್ನಡ ಚಿತ್ರರಂಗದಲ್ಲಿ ದೊಡ್ಡ ಸುದ್ದಿ ಮಾಡಿದ ತಾರೆಯೆನಿಸಿದರು. ಕನ್ನಡ ಚಿತ್ರರಂಗದಲ್ಲಿ ಹಗರಣಗಳಿಗೆ ನಾಂದಿ ಹಾಡಿದ ಪ್ರಥಮ ತಾರೆ ಮಂಜುಳಾ.

1972 ರಿಂದ 1982ರ ವರೆಗೆ ಒಂದು ದಶಕ ಪೂರ್ತಿ ಆಳಿದ ಈ ತಾರೆ ಬಹುಕಾಲ ನಂಬರ್ ಒನ್ ಸ್ಥಾನದಲ್ಲೇ ಮೆರೆದಳು.


ಆರಂಭದಲ್ಲಿ ತಾರಾಗದ್ದುಗೆಯಿಲ್ಲದೆ, ಗಡಗಡ ನಡುಗಿದ್ದ ಈ ಹುಡುಗಿ ಮುಂದೆ ಡಾ॥ ರಾಜ್ ವಲಯದ ಆಶ್ರಯ ಸಿಕ್ಕಾಗ ತನ್ನ ಸಾಮ್ರಾಜ್ಯವನ್ನೇ ಸ್ಥಾಪಿಸಿಕೊಳ್ಳುವ ಯತ್ನ ನಡೆಸಿದಳು. ಈ ಸಾಮ್ರಾಜ್ಯಶಾಹೀ ಪ್ರವೃತ್ತಿಯಲ್ಲಿ ತೊಡಕಾದಾಗ ಮಂಜುಳಾ ರಾಜ್ ಅವರ ಗರಡಿಗೆ ಸೇರಿದ್ದು 'ಮೂರೂವರೆ ವಜ್ರದ' ಮೂಲಕ. ವಜ್ರ ಭವಿಷ್ಯ ಕಾಣಬಹುದಾದ ಪಾತ್ರ ಆಕೆಗೆ ಸಿಕ್ಕಿದ್ದು 'ಸಂಪತ್ತಿಗೆ ಸವಾಲ್'ನಲ್ಲಿ. ನಂತರ ಬಹುಕಾಲ ಆಕೆ ಅಂಥ ಪಾತ್ರಗಳಲ್ಲೇ ವಿಜೃಂಭಿಸಿ ಈಗ ಅವಳ ನಂತರ ಅಂಥ 'ಪಾತ್ರ ಮಾಡುವವರೇ ಇಲ್ಲ'ವೆನಿಸತೊಡಗಿದೆ.



ಕೊನೆಯಾಸೆ • ಕೆ. ಆರ್. ಸ್ವಾಮಿ




ನನ್ನ ಚಿತಾಭಸ್ಮವನ್ನು ಹಿಮಾಲಯದಲ್ಲಿ ಚೆಲ್ಲಬೇಡಿ. ಈ ತೆಂಗಿನಮರದ ಬುಡದಲ್ಲೇ ಚೆಲ್ಲಿ.



ನನ್ನನ್ನು ಸುಡಬೇಡಿ. ಇಲ್ಲಿಗೆ ದಾನ ಮಾಡಿ ಅಂತ ಅವರು ತಿಳಿಸಿದ್ದರು.



ಅದೇ ಕಟ್ಟಿಗೆಯಿಂದ ಬಡವರ ಒಪ್ಪೊತ್ತಿನ ಅನ್ನ ಬೇಯಬೇಕು ಅನ್ನೋದು ಅವರ ಕೊನೆಯಾಸೆ ಆಗಿತ್ತು.



ಮಂಜುಳಾಳ ಬಾಯಿಬಡುಕತನ ಹಮ್ಮು-ಆಕೆಯನ್ನು ಅಹಂಭಾವದ ಮೊಟ್ಟೆಯಾಗಿಸಿತ್ತು. ರಾಜ್ ವಲಯದ ಆಶ್ರಯ ತಪ್ಪಿದರೂ, ತನ್ನ ತಾರಾಪ್ರತಿಷ್ಠೆಗೆ ಕುಂದಿಲ್ಲ ಎಂದಾಕೆ ಜಂಭ ಕೊಚ್ಚಿಕೊಂಡದ್ದುಂಟು. ಮುಂದೆ ತಮಿಳಿನ ಛಾಯಾಗ್ರಾಹಕ ನಿರ್ದೇಶಕ 'ಅಮೃತಂ'ರವರ ಸಖ್ಯ, ಇಬ್ಬರೂ ವಿವಾಹವಾಗಿದ್ದರೂ 'ವಿವಾಹವಾಗಿಲ್ಲ' ಎಂಬ ಕಣ್ಣಾಮುಚ್ಚಾಲೆಯಾಟ ಕೊನೆಗೊಂದು ದಿನ ದಿಢೀರ್ ವಿವಾಹದ ಸುದ್ದಿಯ ಸ್ಫೋಟ ಮಂಜುಳಾಳ ತಾರಾಪ್ರತಿಷ್ಠೆಯನ್ನು ಹಠಾತ್ತನೆ ಛಿದ್ರಗೊಳಿಸಿತು. ಮೈಯ ಬೊಜ್ಜು ಬೆಳೆದಿರದಿದ್ದರೆ ಆಕೆ ಇಷ್ಟು ಬೇಗ ದೂರವಾಗುತ್ತಿರಲಿಲ್ಲ. ಆಕೆ ಅದೇಕಾಲಕ್ಕೆ 'ಚೀಟಿ ಹಗರಣ'ದಲ್ಲಿ ಸಿಲುಕಿದ್ದೂ ಈ ನಡುವೆ ಪತ್ರಿಕಾಸಮೂಹವನ್ನು ನಿಷ್ಠುರ ನುಡಿಗಳಿಂದ ಎದುರು ಹಾಕಿಕೊಂಡದ್ದು ಮಂಜುಳಾಳ ಹಿನ್ನಡೆಗೆ ಕಾರಣವಾಯಿತು. ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಂಡ ತಾರೆ ಅವಳು. "ಆಕೆ ತುಂಬಾ ದಪ್ಪ" ಸಾರ್, ಎಂದು ಕುಂಟುನೆಪ ಒಡ್ಡಿ ಅವಳಿಗೆ ಅವಕಾಶ ಕೊಡಲು ನಿರಾಕರಿಸಿದ ನಮ್ಮ ನಿರ್ಮಾಪಕರ ಕಣ್ಣಿಗೆ ಧಡೂತಿ ಸರಿತಾ ದಪ್ಪಗೆ ಕಾಣಲಿಲ್ಲ. ಜೋಲು ಮೈನ ಗೀತಾ ದಪ್ಪಗೆ ಕಾಣಲಿಲ್ಲ "ಒಲ್ಲದವರಿಗೆ ಮೊಸರಲ್ಲಿ ಕಲ್ಲು" ಎಂಬಂತೆ ತುಂಬು ಗ್ಲಾಮರ್‌ನ ಪ್ರತಿಭೆ ಹೊತ್ತ ಅಚ್ಚ ಕನ್ನಡದ ಹುಡುಗಿ ಮಂಜುಳಾ ದಪ್ಪಗೆ ಕಂಡಿದ್ದು ಮಾತ್ರ ಅಚ್ಚರಿಯೇ. ಇವೆಲ್ಲಕ್ಕೂ ಮಿಗಿಲಾದ ಕಾರಣ "ಮಂಜುಳಾಳ ಕೆಟ್ಟ ಗ್ರಹಗತಿ". ಅದೃಷ್ಟ ತಿರುವು ಮುರುವಾದಾಗ, ಎಲ್ಲಿಲ್ಲದ ಹುಳುಕು ಹುಡುಕುವ ಜಾಯಮಾನ ನಮ್ಮದಲ್ಲವೆ?

ಪ್ರಸ್ತುತ ಮಂಜುಳಾ ಮಗುವಿನ ತಾಯಿಯೂ ಆಗಿದ್ದಾಳೆ. ಇಂದ ... ಇನ್ನೆಲ್ಲಿಯ ಗ್ಲಾಮರ್ ಆ ನಂಬರ್ ಒನ್ ತಾರೆಗೆ? ಪಾಪ! ಮಂಜುಳಾ ಈಗ ಮೂಲೆಗುಂಪಾಗಿ ಮುದುಡಿ ಕುಳಿತ ತಾರೆಯಾಗಿದ್ದಾಳೆ.

ಹಗರಣಗಳ ಸರಮಾಲೆ ಹೆಣೆದುಕೊಂಡ ಮತ್ತೊಬ್ಬ ತಾರೆ ಆರತಿ. ಕಲ್ಪನಾ ನಂತರ ಆಕೆಯ ಪಡಿಯಚ್ಚು ನಂತೆ ಅಂಥದ್ದೇ 'ಗರತಿ'ಯ ಇಮೇಜನ್ನು ಸೃಷ್ಟಿಸಿಕೊಟ್ಟು ಆರತಿಯನ್ನು ಕನ್ನಡದ ಜನಪ್ರಿಯ ತಾರಾ ಪಟ್ಟಿಗೆ ಸೇರಿಸಿದವರು ದಿ|| ಪುಟ್ಟಣ್ಣ ಕಣಗಾಲ್. ಕಲ್ಪನಾಳನ್ನೇ ಎರಕಹೊಯ್ದಂಥ ಪಾತ್ರಗಳನ್ನು ಸೃಷ್ಟಿಸಿ, ಗರತಿ ಇಲ್ಲವೆ ಅಳುಬುರುಕಿಯಾಗಿ ಆಕೆಯನ್ನು ತಮ್ಮ ಜೀವನದ ಸಂಗಾತಿಯಾಗಿ-ಕೊಂಡು ಆಕೆಗಾಗಿಯೇ ನಿರಂತರ



ಚಿತ್ರಗಳೆನ್ನು ಹುಟ್ಟುಹಾಕಿದ ಪುಟ್ಟಣ್ಣನವರಿಂದ ಆರತಿ ಬೇರ್ಪಟ್ಟ ನಂತರ ಆಕೆ ಸೇರಿನಿಂದ ಹೊರಬಂದ ಮೀನಿನಂತಾದಳೆಂಬುದು ಹಲವರ ಅಂಬೋಣ. ಅತ್ತ ಡಾ|| ರಾಜ್ ವಲಯದಲ್ಲಿ ಹನ್ನೊಂದು ಚಿತ್ರಗಳಲ್ಲಿ ಅಭಿನಯಿಸಿ ತಾರಾ ಇಮೇಜ್ ಗಳಿಸಿಕೊಂಡು ಇತ್ತ ಪುಟ್ಟಣ್ಣನವರ ಹತ್ತು ಚಿತ್ರಗಳಲ್ಲಿ ಶ್ರೇಷ್ಠ ಮಟ್ಟದ ಅಭಿನೇತ್ರಿ ಎನಿಸಿಕೊಂಡ ಫಲ ಆರತಿಯ ಪ್ರಸ್ತುತ ಜನಪ್ರಿಯತೆ. ಆಕೆ 'ಕುಂಕುಮ ತಂದ ಸೌಭಾಗ್ಯ' ಚಿತ್ರದಿಂದ ಶತಕ ಮುಟ್ಟಿದ್ದಾದರೂ ಹಿಂದೆ ಗಳಿಸಿದ ಜನಪ್ರಿಯತೆಗಿಂತ ಹೆಚ್ಚಿನ ಜನಪ್ರಿಯತೆಯಾಗಲೀ ತಾರಾ ಪ್ರತಿಷ್ಠೆಯಾಗಲೀ ಅವರಿಗೆ ಸಿಕ್ಕಿಲ್ಲ.

ಪುಟ್ಟಣ್ಣನವರಿಂದ ಬೇರ್ಪಟ್ಟ ಆರತಿ-ಅಲ್ಲಿಯವರೆಗೂ 'ತಾರಾ-ಗೃಹಿಣಿ' ಎನಿಸಿದ್ದರೆ, ಮುಂದೆ ಗಾಸಿಪ್‌ಗಳ ದೊಡ್ಡ ಸರಕಾದರು. ಆರತಿಯ ಗರತಿಯ ಇಮೇಜ್ ಅಶೋಕ್‌ನ ಸಖ್ಯದಿಂದ ಶೀರಾ ಕನಿಷ್ಠಕ್ಕೆ ಮುಟ್ಟಿತು.

ಆರತಿ ಯಾವುದೇ ಕಾಲಕ್ಕೂ ಗ್ಲಾಮರ್ ತಾರೆಯಲ್ಲ. ಅಂಥಾ ಇಮೇಜ್ ಬೆಳೆಸಿಕೊಂಡಿದ್ದರೆ. ಅಂಬಿಕಾ, ಮಾಧವಿ, ಗೀತಾರಂತೆ ತಾನು ಸಾರ್ವಕಾಲಿಕ ಅಥವಾ ವೈವಿಧ್ಯಪೂರ್ಣ ತಾರೆ ಎನಿಸಿ ನಿರಂತರ ಬೇಡಿಕೆ ಪಡೆಯಬಹುದಿತ್ತು.

ಈ ನಡುವೆ ಆರತಿ ಖಾಸಗಿ ಬದುಕಿನ ಸಿಕ್ಕುಗಳ ಸುಳಿಯಲ್ಲಿ ಸಿಕ್ಕ ತಾರೆ. ಸಜೀವ ರಘುಪತಿಯವರೊಡನೆ ಇರಬಹುದಾದ ಸಂಬಂಧ ಆಕೆಯ ಬಗ್ಗೆ ಹಲವು ಕತೆಗಳ ಸೃಷ್ಟಿಗೆ ಕಾರಣವಾಗಿದೆ. ಅವರೇ ಆಕೆಯನ್ನು ಶಾಸಕಿಯಾಗಿ ಮಾಡಿದರೆಂಬ ಪುಕಾರೂ ಇದೆ. ನಟ ರಾಮಕೃಷ್ಣನ ಮಗುವಿನ ಅಪಹರಣ ಪ್ರಕರಣದಲ್ಲಿ ಆರತಿಯ ಪಾತ್ರ ಸದ್ಭಾವನೆಯಿಂದ ಕೂಡಿದ್ದಾದರೂ, ಪ್ರಚಾರ ಮಾಧ್ಯಮದ ಈ ಲೋಕದಲ್ಲಿ ಆಕೆ ಜನರ ಕಣ್ಣಿಗೆ ಅಪರಾಧಿಯಾಗಿ ಕಂಡಿದ್ದು ಆರತಿಯನ್ನು ನಿವೃತ್ತಿಯ ಹಂತದವರೆಗೂ ಮುಟ್ಟಿಸಿದೆ. ಆರತಿ ಇಂದು ತಮ್ಮ ತಾರಾ ವರ್ಚಸ್ಸನ್ನು ಸಂಪೂರ್ಣ ಕಳೆದುಕೊಂಡು, ಬೇಡಿಕೆಯಿಲ್ಲದ ತಾರೆ ಎನಿಸಿದ್ದಾರೆ.

ಜಯಮಾಲಾ ಅಪಜಯ

ದಕ್ಷಿಣ ಕನ್ನಡದ ಈ ಕರಾವಳಿ ಕನ್ಯೆ ಅತ್ಯಂತ ನತದೃಷ್ಟ ತಾರೆ ಎಂಬುದನ್ನು ಇಂದಿನ ಆಕೆಯ ಪರಿಸ್ಥಿತಿ ಸೂಚಿಸುತ್ತದೆ. ಗ್ಲಾಮರ್ ಹುಡುಗಿಯಾಗಿ ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಿದ ಜಯಮಾಲಾ ಡಾ|| ರಾಜ್ ವಲಯದಲ್ಲಿ ಸೇರ್ಪಡೆಯಾದ ಮೇಲೆ ಆಕೆಯ ಸಾಂಸಾರಿಕ ಸಂಕಷ್ಟಗಳು, ದೊಡ್ಡ ಕುಟುಂಬದ ಬವಣೆ ದೂರಾಗಿ ತಾರಾಮೌಲ್ಯ ಏರಬಹುದೆಂಬ ಲೆಕ್ಕಾಚಾರ ಈಗ ತಲೆಕೆಳಗಾಗಿದೆ.

ರಾಜ್ ಅವರೊಂದಿಗೆ ಆರು ಚಿತ್ರಗಳಲ್ಲಿ ನಟಿಸಿದ ನಂತರವೂ ಜಯಮಾಲಾಳ ತಾರಾ ಮಾರುಕಟ್ಟೆ ಕುದುರಲೇ ಇಲ್ಲ. "ಬರಿಗೈನಲ್ಲಿ ಹೋಗಿ ಬರಿಗೈನಲ್ಲಿ ಹಿಂದಿರುಗಿದಂತೆ' ಆಕೆ ರಾಜ್ ವಲಯ ಬಿಟ್ಟಾಗ ದೊಡ್ಡ ಶೂನ್ಯ. ಗ್ಲಾಮರ್ ಪೂರ್ಣ ತಾರೆ ಎನಿಸಿದ ಜಯಮಾಲಾಳಿಗೆ 'ಅಂತ'ದಲ್ಲಿ ಹೊಸ ಇಮೇಜ್ ಕೊಡುವ ಪ್ರಯತ್ನ ನಡೆಯಿತಾದರೂ, ಆಕೆಗೆ ತಾರಾ ಮೌಲ್ಯ ಬಂದಿದ್ದು ಅಂಬರೀಶ್ ಜೊತೆ ನಟಿಸಿದ 'ಭರ್ಜರಿ ಬೇಟೆ' ಪ್ರೇಮಮತ್ಸರ', 'ಖದೀಮಕಳ್ಳರು' ಚಿತ್ರಗಳ ನಂತರವೇ. 'ಚಂಡಿ ಚಾಮುಂಡಿ' ಚಿತ್ರವು ಜಯಮಾಲಾಳ ಮಟ್ಟಿಗೆ ವಿಶಿಷ್ಟವಾದ ಇಮೇಜ್ ನೀಡಿದರೂ ಆ ಚಿತ್ರದಿಂದ ಪ್ರಾರಂಭವಾದ ಪ್ರಭಾಕರ್-ಜಯಮಾಲಾ-ಸಖ್ಯ–ಬಹುಬೇಗ ರಟ್ಟಾಗಿ ಇಡೀ ಚಿತ್ರ ಜಗತ್ತೇ ಅವರಿಬ್ಬರೂ ವಿವಾಹವಾಗಿದ್ದಾರೆಂದು ಮಾತನಾಡಿಕೊಳ್ಳುವಂತಾಯಿತು.

ಇದರಿಂದಾಗಿ ಚಿತ್ರರಂಗವು ಜಯಮಾಲಾಳನ್ನು 'ಆಗಂತುಕ'ಳೆಂಬಂತೆ ನೋಡಲಾರಂಭಿಸಿತು- ಗ್ಲಾಮರ್ ನಾಯಕನಲ್ಲದ ಪ್ರಭಾಕರ್ ಜೊತೆ ಆಕೆ ಅಭಿನಯಿಸಿದ 'ವಿಘ್ನೇಶ್ವರ ವಾಹನ', ಜಿದ್ದು' 'ಹೊಸ ಇತಿಹಾಸ' ನೆಲಕಚ್ಚಿದಾಗ ಜಯಮಾಲಾಳಿಗೆ ನೆಲೆ ತಪ್ಪಿದಂತಾಯಿತು.

ಇಂದು ಜಯಮಾಲಾ ಕನ್ನಡ ಚಿತ್ರದಿಗಂತದ ಒಂದು 'ಕಣ್ಣಿಗೆ ಕಾಣದ ನಕ್ಷತ್ರ'

ಕನಸು ಬಂದ ಸೊಗಸು

ಕನಸು ಕಾಣುವ ಜಾಯಮಾನವೇ ನನ್ನದಲ್ಲ. ನಟನಾಗಬೇಕು. ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ನಾನೆಂದೂ ಕನಸು ಕಂಡವನಲ್ಲ. ಬಂದದ್ದನ್ನು ಬಂದಹಾಗೇ ಸ್ವೀಕರಿಸುವ ಸ್ವಭಾವ ನನ್ನದು.

ಚೆನ್ನಾಗಿ ದುಡಿಯುವದು. ಹೊಟ್ಟೆ ತುಂಬ ಉಣ್ಣುವದು. ಗಾಢವಾಗಿ ನಿದ್ರಿಸುವದು ಇವು ಮೂರನ್ನು ಪಡೆದಾತ ಬಲು ಪುಣ್ಯವಂತ.

ನನ್ನಿಂದ ಕನಸುಗಳು ಅದೇಕೋ ಗಾವುದ ದೂರ.

ಮಂತ್ರಾಲಯದಲ್ಲಿ ಗುರು ಶ್ರೀ ರಾಘವೇಂದ್ರಸ್ವಾಮಿಗಳ ಸೇವೆ ಮಾಡಿದವರಿಗೆ ರಾಯರು ಸ್ವಪ್ನದಲ್ಲಿ ದರ್ಶನ ನೀಡುವರೆಂದು ಪ್ರತೀತಿ. ಹಾಗೆ ಸ್ವಪ್ನದಲ್ಲಿ ಕಾಣಿಸಿಕೊಂಡ ಅನೇಕರ ಅನುಭವಗಳನ್ನು ನಾನು ಕೇಳಿರುವೆ.

ನಾನು ರಾಯರ ಸೇವೆ ಮಾಡಿರುವೆ. 'ಮಂತ್ರಾಲಯ ಮಹಾತ್ಮೆ' ಚಿತ್ರದಲ್ಲಿ ರಾಯರ ಪಾತ್ರ ವಹಿಸಿರುವೆ. ಆದರೆ ರಾಯರೆಂದೂ ನನಗೆ ಕನಸಿನಲ್ಲಿ ಕಾಣಿಸಿಕೊಂಡಿಲ್ಲ.

ನಾನು ಮಂತ್ರಾಲಯಕ್ಕೆ ಆಗಾಗ ಹೋಗುತ್ತಿರುತ್ತೇನೆ. ಅಲ್ಲಿಗೆ ಹೋದಾಗ ಪ್ರವೇಶದ್ವಾರದ ಪಕ್ಕದಲ್ಲೊಂದು ಕಟ್ಟೆ ಇದೆಯಲ್ಲ ಅಲ್ಲಿ ಮಲಗುವದು ವಾಡಿಕೆ. ರಾಯರ ಸನ್ನಿಧಾನದಲ್ಲೇ ಮಲಗುವ ಉದ್ದೇಶ. ಅವರು ಕನಸಿನಲ್ಲಿ ಕಾಣಿಸಿ

'ಹೀಗ್ಯಾಕೆ ನೋಡ್ತೀಯಾ ಮಾಲೆ ಬೇಕಾ?'

ನಿರೂಪಣೆ:

ಶ್ಯಾಮಸುಂದರ ಕುಲಕರ್ಣಿ


ಕೊಳ್ಳಲಿ ಎಂಬುದಲ್ಲ. ಸಹಸ್ರಾರು ಪುಣ್ಯಾತ್ಮರು ಪ್ರತಿ ನಿತ್ಯ ಓಡಾಡುವ ಜಾಗವದು. ಆ ಪುಣ್ಯ ಜೀವಿಗಳ ಪಾದ ಧೂಳಿ ಮೈಗೆ ತಾಕಿ ದೇಹವು ಪುನೀತವಾಗಲಿ ಎಂಬುದೊಂದೇ ನನ್ನ ಆಸೆ.

ಗುರುಗಳು ಸ್ವಪ್ನದಲ್ಲಿ ಕಾಣಿಸಲಿ ಎಂದು ನಾನೆಂದೂ ಪ್ರಾರ್ಥಿಸಿಲ್ಲ. ದರ್ಶನ ನೀಡುವದು ಬಿಡುವದು ಅವರ ಇಚ್ಛೆ. ಅವರಿಗೆ ತಲೆಬಾಗುವದೊಂದೇ ನಮ್ಮ ಕರ್ತವ್ಯ. ಆ ಕರ್ತವ್ಯಕ್ಕೆ ಲೋಪವಾಗದಂತೆ, ಭಕ್ತಿಗೆ ಕಿಂಚಿತ್ತೂ ದೋಷ ತಾಗದಂತೆ ನಾನು ನಡೆದುಕೊಂಡಿರುವೆ. ಆದರೆ ಕನಸಲ್ಲಿ ಅವರು ಬಂದಿಲ್ಲ. ನನಗವರು ಕಾಣಿಸಿಕೊಂಡಿಲ್ಲ. ಕಂಡು ಮಂತ್ರಾಕ್ಷತೆ ನೀಡಿಲ್ಲ.

ನಾನು ಕಂಡಿರುವದು ರಾಯರ ಕುಲದೈವ ತಿರುಪತಿಯ ಶ್ರೀ ವೆಂಕಟರಮಣಸ್ವಾಮಿಯೊಬ್ಬನನ್ನು ಮಾತ್ರ.

ಅದೊಂದು ಮರೆಯಲಾಗದ ಅನುಭವ.

ನನಗಾಗ ಹನ್ನೆರಡು ವರ್ಷ ವಯಸ್ಸು— 'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ಬಾಲ ನಟ



ಡಾ॥ ರಾಜ್‌ಕುಮಾರ್

ನಾಗಿ ನಾನು ಕಾಣಿಸಿಕೊಂಡ ದಿನಗಳವು. ನಾನು ಆಗ ಮದ್ರಾಸಿನಲ್ಲಿದ್ದೆ.

ಅದಕ್ಕೂ ಹಿಂದೆ ಒಮ್ಮೆ ನಮ್ಮ ಅಪ್ಪಾಜಿಯವರು ನಮ್ಮನ್ನೆಲ್ಲ ತಿರುಪತಿಗೆ ಕರೆದೊಯ್ದಿದ್ದರು ಬಹುಶಃ 43 ವರ್ಷಗಳ ಹಿಂದೆ ಅಂದರೆ ಸಾವಿರದೊಂಬೈನೂರ ನಲವತ್ತೆರಡರಲ್ಲಿ.

ತಿರುಪತಿಯಲ್ಲಿ ಆಗ ಈಗಿನಷ್ಟು ನೂಕು ನುಗ್ಗಲು ಇರಲಿಲ್ಲ. ಬೆಟ್ಟವೇರಲು ವಾಹನ ಸೌಕರ್ಯವೂ ಇರಲಿಲ್ಲ. ನಮ್ಮಪ್ಪಾಜೀಯವರು ಚಿಕ್ಕಮಕ್ಕಳಾದ ನಮ್ಮನ್ನೆಲ್ಲ ಬರಿಗಾಲಲ್ಲಿ ನಡೆಸಿಕೊಂಡೇ ಕರೆದೊಯ್ದಿದ್ದರು. ಆಗ ಸಾಮಾನ್ಯವಾಗಿ ಎಲ್ಲರೂ ಬೆಟ್ಟವೇರುತ್ತಿದ್ದುದೇ ಹಾಗೆ. ಅಲ್ಲಿ ಮೊದಲ ಬಾರಿ ತಿರುಪತಿ ತಿಮ್ಮಪ್ಪನನ್ನು ಕಣ್ತುಂಬ ನೋಡಿ, ಬಾಳು ಸಾರ್ಥಕವಾಯಿತು ಎಂದುಕೊಂಡಿದೆ. ಎಳೆಯ ಮನಸ್ಸಿನ ಮೇಲೂ ದೇವರು ಅಂಥ ಅಗಾಧ ಪರಿಣಾಮ ಬೀರಿದ್ದ.

ಮುಂದೆ 'ಭಕ್ತ ಪ್ರಹ್ಲಾದ' ಚಿತ್ರದ ಸಮಯದಲ್ಲಿ... ನಾನು ಹನ್ನೆರಡು ವರ್ಷದ ಬಾಲಕನಾಗಿದ್ದಾಗ ಒಂದು ದಿನ ಇದ್ದಕ್ಕಿದ್ದಂತೆ ವೆಂಕಟರಮಣಸ್ವಾಮಿ ಕಾಣಿಸಿಕೊಂಡ.

ನನ್ನ ಕಣ್ಣೆದುರೇ ಮಹಾರಾಯ ಬಂದು



ನಿಂತಿದ್ದಾನೆ.

ಕನಸಿನಲ್ಲೂ ಕಣ್ಣು ಉಜ್ಜಿಕೊಂಡು ನೋಡಿದೆ. ಹೌದು ಅದೇ ಸ್ವಾಮಿ ತಿರುಪತಿಯ ವೆಂಕಟೇಶ.

ಮೈತುಂಬ ಚಿನ್ನದ ಆಭರಣಗಳು, ವಜ್ರಹಾರಗಳು ಮುತ್ತಿನ ಸರಗಳು.

ನಾನು ಪಿಳಿಪಿಳಿ ಕಣ್ಣು ಬಿಡುತ್ತ ಅವನನ್ನೇ ನೋಡುತ್ತಿದ್ದೆ. ಆತ ನಕ್ಕ.

"ಹೀಗ್ಯಾಕೆ ನೋಡ್ತೀಯಾ? ಹಾರ ಬೇಕಾ?" ಎಂದು ಬೆರಳಿನಿಂದ ಒಂದು ಹಾರವನ್ನೆತ್ತಿ ತೋರಿಸುತ್ತ ಕೇಳಿದ?"

'ಬೇಕು' ಎಂದೆ.

ತಕ್ಷಣ ಆತ ಓಡಲು ಶುರು ಮಾಡಿದ. ನಾನು ಬೆನ್ನು ಹತ್ತಿದೆ.

"ಇದು ಸರಿಯಲ್ಲ. ಕೊಡ್ತೀನಂತ ಹೇಳಿ ಕೊಡದೇ ಹೋಗುವದು ಚೆನ್ನಾಗಿರೋಲ್ಲ." ಎಂದು ಕೂಗುತ್ತ ನಾನವನ ಬೆನ್ನು ಹತ್ತಿದೆ.

ಮಿರಿ ಮಿರಿ ಮಿಂಚುವ ಮೈ ಕಾಂತಿ. ಹೊಳೆವ ಮುಖ ಕಮಲ. ತುಂಟ ನಗು. ಆತ ಕೊಡಲಿಲ್ಲ.

ನಾನು ಬಿಡಲಿಲ್ಲ

ಓಡಿ ಓಡಿ ಕೊನೆಗೊಂದು ದೇವಸ್ಥಾನದ ಬಳಿ ಹೋದೆ. ದೇವಸ್ಥಾನದ ಕೆಳಗಿನಿಂದ ಎದ್ದು ಗರ್ಭಗುಡಿ ಸೇರಿಕೊಂಡ.

ನಾನು ದೇವಸ್ಥಾನದ ದ್ವಾರ ಪ್ರವೇಶಿಸುತ್ತಿರುವಂತೆ ಕಂಬಗಳಲ್ಲಿದ್ದ ಜಯ-ವಿಜಯರ ವಿಗ್ರಹಗಳು ಎದ್ದು ನನ್ನನ್ನು ಒಳಗೆ ಕರೆದವು. ಒಂದಲ್ಲ ಮೂರು ಕಡೆ ವೆಂಕಟರಮಣನ ದಿವ್ಯ ಶರೀರ ಕಾಣತೊಡಗಿತು.

"ಕಂಡೆ ಕಂಡೆ. ಕಣ್ತುಂಬ ಅವನನ್ನು ಕಂಡೆ.

ಕಣ್ತೆರೆದು ಎಚ್ಚರವಾದಾಗ ಬೆಳಗಿನ ಜಾವ.

ನಡೆದುದನ್ನು ನಡೆದಂತೆಯೇ ತಿಳಿಸಿದಾಗ "ಬಡ್ಡೀ ಮಗ ಬಲು ಅದೃಷ್ಟವಂತ" ಎಂದು ನನ್ನಪ್ಪಾಜೀ ಬೆನ್ನು ತಟ್ಟಿದರು. ●



'ಪರಿಣಯ ಒಲ್ಲದ ಪ್ರಣಯ ರಾಜ

ಬಾಲ್ಯದಿಂದಲೂ ನನಗೆ ಸಿನಿಮಾ ಪೋಸ್ಟರ್ಸ್ ನೋಡುತ್ತ ಬೀದಿ ಸುತ್ತುವ ಚಪಲ. ಬೇರೆ ಬೇರೆ ನಟರ ರಂಗು ರಂಗಿನ ಪೋಸ್ಟರ್ಸ್ ನೋಡಿದಾಗೆಲ್ಲ–ಇದರಲ್ಲಿ ನನ್ನ ಮುಖ ಕಾಣುವ ಯೋಗ ಬರಬಾರದೇ ಎಂದು ನನಗನಿಸಿತ್ತು.

'ಮಧುರ ಮಿಲನ'ದೊಂದಿಗೆ ನಟನಾದಾಗ ಮೊಟ್ಟ ಮೊದಲ ಬಾರಿ ಪೋಸ್ಟರುಗಳಲ್ಲಿ ನನ್ನ ಮುಖ ಕಂಡು ಹಿಗ್ಗಿನಿಂದ ಕುಣಿದಾಡಿದೆ. ಆಗ ಹೊಸ ಕನಸು ಶುರುವಾಯಿತು. ಗೋಡೆಯ ತುಂಬ ನನ್ನ ಹತ್ತಾರು ಪೋಸ್ಟರುಗಳಿದ್ದರೆ ಎಷ್ಟು ಚೆನ್ನಾಗಿರುತ್ತದಲ್ಲವೇ? ಎಂದು.

ಆ ದಿನವೂ ಬಂತು. ನಾನು ಶತ

ಶ್ರೀನಾಥ್



ಚಿತ್ರ ನಟನಾದೆ. ಅದ್ದೂರಿಯ ಸನ್ಮಾನಕ್ಕೆ ಪಾತ್ರನಾದೆ. ಈಗಲೂ ಪೋಸ್ಟರುಗಳಲ್ಲಿ ನನ್ನ ಮುಖ ಅಚ್ಚಾಗುತ್ತಲೇ ಇದೆ. ಆದರೆ ಅದಕ್ಕೆ ನಾನು ತೆರಬೇಕಾದ ಬೆಲೆ ಎಂಥದು ?

ಬಾಲ್ಯದಲ್ಲಿ ನಾನು ಸುತ್ತುತ್ತಿದ್ದ ಬೀದಿಗಳಲ್ಲಿ ಅದೇ ರೀತಿ ಪೋಸ್ಟರ್ ನೋಡ್ತಾ ಅಲೆದಾಡಬೇಕು ಎಂಬ ಆಸೆ ನನಗೆ. ಆದರದು ಸಾಧ್ಯವಾಗುತ್ತಿಲ್ಲ. ಜನಸಾಮಾನ್ಯರ ನಡುವೆ ಒಂದಾಗಿ ಬೆರೆತು, ಜನಸಾಮಾನ್ಯರಂತೆ ಸ್ವತಂತ್ರವಾಗಿ ಅಲೆದಾಡುವ ಸ್ವಾತಂತ್ರ್ಯವಿಲ್ಲದ ಮೇಲೆ ಏನು ಪ್ರಯೋಜನ? ಬಾಲ್ಯದ ನನ್ನ ಆ ಕನಸು ಕನಸಾಗಿದ್ದರೇನೇ ಚೆನ್ನಾಗಿರುತ್ತಿತ್ತೇನೋ!

‘ಶುಭಮಂಗಳ’ಕ್ಕಿಂತ ಮುಂಚಿನ ಬವಣೆಯನ್ನು ಕೇಳಬೇಡಿ. ಆಗ ನನ್ನ ಕೈಲಿ ಎರಡೇ ಎರಡು ಚಿತ್ರಗಳು. ಹೆಸರಿಗೆ ಹೀರೋ. ಆದಾಯ ಜೀರೋ. ಕೆಲಸವಿಲ್ಲದೇ ಮನೇಲಿ ಕುಳಿತಾಗ ಬಂದವರೆಲ್ಲ ಕೇಳುತ್ತಿದ್ದರು. “ಈಗ ಯಾವ ಚಿತ್ರದಲ್ಲಿ ನಟಿಸ್ತಿದ್ದೀರಾ? ತುಂಬಾ ಬಿಜಿಯಾಗಿರಬೇಕು ಅಲ್ವಾ ?” ಎಂದು.

[illegible]

ಇದ್ದಾನೆ” ಎಂದು ಮುಖಕ್ಕೆ ಹೊಡೆದಂತೆ ಹೇಳುವದು ಸುಸಂಸ್ಕೃತಿಯ ಲಕ್ಷಣವಲ್ಲ ಎಂದು ಸುಮ್ಮನಿರುತ್ತಿದ್ದೆ. ಈ ಮಂದಿಯ ಉಪಟಳ ತಾಳಲಾರದೆ ಹೊರಗೆ ಎಲ್ಲಾದರೂ ಸುತ್ತಿಕೊಂಡು ಬರೋಣವೆಂದರೆ– ಇಂಥ ಭಾರೀ ಹೀರೋ ಕೆಲಸವಿಲ್ಲದೆ ಬೀದಿ ಬೀದಿ ಅಲೆಯುತ್ತಿದ್ದಾನೆಂದು ಜನ ಆಡಿಕೊಂಡರೇನು ಗತಿ? ಎಂದು ಸುಮ್ಮನಾಗುತ್ತಿದ್ದೆ.

‘ಪ್ರಥಮ ಚುಂಬನಂ ದಂತ ಭಗ್ನಂ’ ಎಂಬಂತೆ ಚಿತ್ರ ನಿರ್ಮಾಪಕನಾಗಿ ‘ಶಿಕಾರಿ’ ತಯಾರಿಸಿದೆ. ಮತ್ತೆ ಭಾರೀ ಬವಣೆ ಪಟ್ಟೆ.

ಬಣ್ಣ ಹಚ್ಚಿಕೊಂಡು ಜುಮ್ಮೆಂದು ಹೀರೋ ಆಗಿ ಚಿತ್ರಗಳಲ್ಲಿ ಅಭಿನಯಿಸೋ

ನನ್ನ ಪಟ್ಟ ಶ್ರೀನಾಥ್ ‘ಶಿಕಾರಿ’ಯನ್ನೇಕೆ ತಯಾರಿಸಬೇಕಿತ್ತು ಎಂದು ಅನೇಕರು ಟೀಕಿಸಿದ್ದುಂಟು. ನಂತರ ಮಿತ್ರರೊಂದಿಗೆ ಸೇರಿ ಮತ್ತೆ ಚಿತ್ರ ನಿರ್ಮಾಣ ಮಾಡಿದ್ದೇನೋ ನಿಜ. ಈಗ ನಿರ್ದೇಶಕನಾಗುವ ಕನಸು ತಲೆ ಹೊಕ್ಕಿದೆ.

ಆದರೆ ಮತ್ತೆ ಅದೇ ಅಳುಕು. ನಿರ್ದೇಶಕನಾಗುವ ಕನಸು, ಕನಸಾಗಿಯೇ ಉಳಿದರೇನೇ ಒಳ್ಳೆಯದು ಎಂದೆನಿಸಿ ನಾನು ಈಗ ಚಿತ್ರ ನಿರ್ದೇಶಿಸಲು ಹಿಂದೇಟು ಹಾಕುತ್ತಿರುವೆ.

ಕನಸು ನನಸು ಎರಡೂ ಬಲು ಸುಂದರ. ಆದರೆ ನನ್ನ ಬದುಕಿನಲ್ಲಿ ಎರಡರ ನಡುವೆ ಅದೆಂಥ ಅಂತರ!

ಸಿನಿಮಾ ಸೇರಿದ ನಂತರ ನಾನು ಬಯಸಿದ್ದು ಗಂಭೀರ ನಟನಾಗಬೇಕೆಂದು. ಆದರೆ ನನಗೆ ಬಂದದ್ದು ‘ಪ್ರಣಯ ರಾಜ’ ಎಂಬ ಬಿರುದು.

ಸಹ ನಟಿಯರನ್ನು ಸ್ನೇಹದಿಂದ ಕಂಡರೆ ಅದು ಅನೇಕರಿಗೆ ಪ್ರೇಮವಾಗಿ ಕಂಡು ಇಲ್ಲದ ಪುಕಾರು ಹಬ್ಬಿದ್ದುಂಟು.

ಮದುವೆಯ ನಂತರ ಮೊದಲ ಮಗು ಗಂಡಾಗುತ್ತದೆಂದು ಕನಸು ಕಂಡೆ, ಆದರೆ ಆದದ್ದು ಹೆಣ್ಣು.

ಹಾಂ., ನಟನಾದ ನಂತರ ನಾನು ಇನ್ನೊಂದು ಕನಸು ಕಂಡಿದ್ದೆ. ಯಾರ ಮನಸ್ಸನ್ನೂ ನೋಯಿಸಬಾರದು. ಯಾರು ಏನು ಕೇಳಿದರೂ ಇಲ್ಲ ಎನ್ನಬಾರದು ಎಂದು.

ಆದರೆ ಆ ಕನಸು ಕೂಡ ಆರಂಭದಲ್ಲೇ ನುಚ್ಚುನೂರಾಯಿತು. ಹೌದು. ಚಿತ್ರ ನಟನಾದ ಹೊಸತರಲ್ಲೇ ನಾನೊಬ್ಬ ನಟಿಯ ಮನಸ್ಸನ್ನು ನೋಯಿಸಬೇಕಾಯಿತು. ಅವಳು ಗಳಗಳ ಕಣ್ಣೀರು ಸುರಿಸುವಂತೆ ಮಾಡಬೇಕಾಯಿತು.

ನಾನು ಚಿತ್ರರಂಗ ಸೇರಿದ ಆರಂಭದ ಕಾಲವದು.

‘ಮಧುರ ಮಿಲನ’ದ ನಂತರ ಆಗೊಂದು ಈಗೊಂದು ಚಿತ್ರದಲ್ಲಿ ಅಭಿನಯಿಸುತ್ತಿದ್ದೆ. ಆ ಪೈಕಿ ಬಹುಪಾಲು ಆಗ ಮದ್ರಾಸಿನಲ್ಲಿ ತಯಾರಾಗುತ್ತಿದ್ದವು.



ನಾನು ಮದ್ರಾಸಿಗೆ ಹೋದಾಗೆಲ್ಲ ಸ್ಟೇಷನ್ನಿಗೆ ನನ್ನನ್ನು ಕರೆದೊಯ್ಯಲು ಇಂಪಾಲಾ ಕಾರೊಂದು ಬಂದಿರುತ್ತಿತ್ತು.

ನಟಿಯೊಬ್ಬಳು ನನಗಾಗಿ ಕಾರು ಕಳಿಸುತ್ತಿದ್ದಳು. ಊರು ಬಿಟ್ಟು ಬಂದ ಘೋರ ಎಂದು ಮಧ್ಯಾಹ್ನ ತಾನೇ ಕೈಯಾರೆ ಮಾಡಿದ ಅಡಿಗೆಯ ಬುತ್ತಿಯ ಡಬ್ಬ ನನ್ಗೂ ತಂದಿರುತ್ತಿದ್ದಳು.

ಅವಳ ಸ್ನೇಹದಲ್ಲಿ ಸಲುಗೆಯಿತ್ತು. ಆ ಸಲುಗೆಯಲ್ಲಿ ಪ್ರೇಮ ಬೆರೆಯತೊಡಗಿತ್ತು.

ಒಂದು ದಿನ ಅವಳ ಜೊತೆ ಚಿತ್ರವೊಂದರ ಶೂಟಿಂಗ್. ಸೆಟ್‌ನಲ್ಲಿ "ನಾನು ನಿಮ್ಮನ್ನು ಪ್ರೀತಿಸುತ್ತೇನೆ, ಮದುವೆಯಾಗುತ್ತೇನೆ" ಎಂದವಳು ನನಗೆ ಹೇಳುವ ದೃಶ್ಯ.

ಸೆಟ್‌ನಲ್ಲಿ ಉತ್ಸಾಹದಿಂದ ಆಕೆ ಈ ಮಾತು ಹೇಳಿದಳು. ಮೂರು ಸಲ ಆ ಪ್ರೇಮದೃಶ್ಯದ ಮರು ಚಿತ್ರೀಕರಣ ನಡೆಯಿತು.

ಸೆಟ್‌ನಲ್ಲಿ ಹಿಗ್ಗಿನ ಚಿಲುಮೆಯಾಗಿದ್ದ

> ## ಬಾಳಿನಲ್ಲಿ
>
> ಹೆಣ್ಣು
> ಅಂದಣವನೇರಿದ
> ಉತ್ಸವಮೂರ್ತಿ.
> ಗಂಡು
> ತನುಮನವನರ್ಪಿಸಿದ
> ಭಕ್ತನಂತೆ
> ನಟಿಸುವ ಪೂಜಾರಿ.
>
> —ವನರಾಗಶರ್ಮಾ ವಜ್ರಳ್ಳಿ

ಅವಳು ಚಿತ್ರೀಕರಣ ಮುಗಿಯುತ್ತಲೇ ಕೊರಗೆ ಹೋಗಿ ಗಳಗಳ ಅಳಲು ಶುರು ಮಾಡಿದಳು.

ಅವಳ ಅಳುವಿನ ವಿಚಾರವನ್ನು ಯಾರೋ ನನಗೆ ತಿಳಿಸಿದರು.

ಹೋದೆ. 'ಇದೇನಿದು?'ಎಂದು ಕೇಳಿದೆ.

"ಸೆಟ್‌ನಲ್ಲಿ ನಾನು ಹೇಳಿದ್ದೆ ಕೇಳಿಸಿಕೊಂಡಿರಾ ?" ಅವಳ ಪ್ರಶ್ನೆ.

"ಕೇಳಿಸಿಕೊಂಡೆ. ನಾನು ನಿಮ್ಮನ್ನು ಪ್ರೀತಿಸುತ್ತೇನೆ, ಮದುವೆಯಾಗುತ್ತೇನೆ ಎಂದು ಹೇಳಿದಿ, ಆದರದು ಸಿನಿಮಾದ ಸಂಭಾಷಣೆ. ಅದಕ್ಯಾಕೆ ಅಳ್ತೀಯಾ ?"

ನಾನು ಅದಕ್ಕಲ್ಲ ಅತ್ತಿದ್ದು. ಬೆಳಿಗ್ಗೆ ನೀವು ಒಬ್ಬರೆದುರು ಹೇಳುತ್ತಿದ್ದ ಮಾತು ಕೇಳಿಸಿಕೊಂಡೆ. ಅದಕ್ಕಾಗಿ ಅಳು ಬಂತು-

"ಹೌದು, ನಾನು ಗೀತಾ ಎಂಬ ಹುಡುಗಿಯನ್ನು ಪ್ರೀತಿಸುತ್ತೇನೆ. ಅವಳನ್ನು ಮದುವೆಯಾಗುತ್ತೇನೆ."

"ನಿಜಾನಾ ?"

"ನಿಜ,"

"ಇದು ಬೇರಾವುದೇ ಸಿನಿಮಾದ ಡೈಲಾಗ್ ಅಲ್ಲ ತಾನೇ ?"

"ಅಲ್ಲ."

ಈ ಮಾತು ಕೇಳುತ್ತಲೇ ಆಕೆ ಮತ್ತೆ ಅಳಲು ಶುರು ಮಾಡಿದಳು.

"ಯಾಕೆ ?" ಎಂದು ಕೇಳಿದೆ.

"ನನ್ನ ಹೆಸರು ಗೀತಾ ಎಂದಾದರೂ ಇರಬಾರದಿತ್ತೇ ?" ಎಂದಳು.

ಅಂದು ಸಂಜೆ ಮತ್ತೆ ನನ್ನ ಬಳಿ ಬಂದು ಹೇಳಿದಳು. "ನೀವು ಗೀತಾಳನ್ನು ಮರೆಯಲು ಸಾಧ್ಯವಿಲ್ಲವೇ ?"

"ಯಾಕೆ ? ನೀನೇ ನನ್ನನ್ನು ಮರೆಯಬಹುದಲ್ಲ"

"ಇಲ್ಲ. ಅದು ನನ್ನಿಂದ ಸಾಧ್ಯವಿಲ್ಲ."

"ನನ್ನಿಂದಲೂ ಅದು ಸಾಧ್ಯವಿಲ್ಲ."

"ನನಗೆ 48 ಲಕ್ಷ ರೂಪಾಯಿಯ ಆಸ್ತಿಯಿದೆ. ದೊಡ್ಡ ಬಂಗ್ಲೆಯಿದೆ. ಆಸ್ತಿಯನ್ನೆಲ್ಲ ನಿಮಗೆ ಒಪ್ಪಿಸಿ ಬಿಡುತ್ತೇನೆ"

"ಆದರೆ ನಿನಗಿಂತ ಮೊದಲೇ ಆಕೆ ತನ್ನ ಪ್ರೀತಿಯನ್ನು ನನಗೆ ಒಪ್ಪಿಸಿದ್ದಾಳೆ. ಅವಳಿಗೆ ನಾನು ದ್ರೋಹ ಬಗೆಯಲಾರೆ ?"

"ಇದು ನಿನ್ನ ಕೊನೆಯ ನಿರ್ಧಾರವೇ ?"

"ಹೌದು."

"ಹಾಗಾದರೆ ಗುಡ್‌ಬೈ" ಎಂದು ಧಿಗ್ಗನೇ ಎದ್ದು, ರಪ್ ಎಂದು ಕಾರಿನ ಬಾಗಿಲು ಹಾಕಿಕೊಂಡು ಆಕೆ ಹೊರಟಳು.

ಮಾರನೇ ದಿನ ಅವಳ ಮನೆಯಾಳು ಬಂದು ನನ್ನನ್ನು ಮನೆಗೆ ಕರೆದೊಯ್ದ.

ಅವನ ಮುಖ ಕಂಡು ನನಗೆ ಗಾಬರಿ.

ಮನೆಗೆ ಹೋಗಿ ಸರಸರನೇ ಅವಳ ರೂಮಿಗೆ ಹೋದೆ.

ಆಕೆ ನಿಸ್ತೇಜಳಾಗಿ ಬಿದ್ದುಕೊಂಡಿದ್ದಳು. 'ನನ್ನ ವಿಪರೀತ ನಿದ್ರೆ ಮಾತ್ರೆ ತೆಗೆದುಕೊಂಡೆ, ಇಂದು ಈ ಶೀಸೆಯನ್ನೆಲ್ಲ ಖಾಲಿ ಮಾಡಬೇಕೆಂದಿರುವೆ' ಎಂದಳು.

"ಅದನ್ನು ನುಂಗಿ ಸಾಯುವಿಯಂತೆ, ಆದರೆ ಅದಕ್ಕಿಂತ ಮೊದಲು ನೀನೊಂದು ಉಪಕಾರ ಮಾಡಬೇಕು ?"

"ಏನದು ?"

ನಾನೊಂದು ಕಾಗದ, ಪೆನ್ನನ್ನು ಅವಳ ಕೈಗೆ ಕೊಟ್ಟು ಹೇಳಿದೆ. 'ನನ್ನ ಸಾವಿಗೆ ಶ್ರೀನಾಥ್‌ನೇ ಕಾರಣ ಎಂದು ಇದರಲ್ಲಿ ಬರೆದಿಟ್ಟು ಸಾಯಬೇಕು' ಎಂದು ಹೇಳಿದೆ.

ಅವಳು ಧಿಗ್ಗನೆ ಎದ್ದಳು. ನಿದ್ರೆ ಮಾತ್ರೆಯ ಸೀಸೆಯನ್ನು ಬಿಸಾಕಿ ಕಂಗ್ರಾಚ್ಯುಲೇಷನ್ಸ್-ನಿನ್ನ ಗೀತಾಳನ್ನೇ ಮದುವೆಯಾಗು ಎಂದಳು.

ನಾನೂ ಹೇಳಿದೆ. ನೀನೂ ಬೇರೆಯವರನ್ನು ಮದುವೆಯಾಗಿ-ಸುಖವಾಗಿರು.

"ಇನ್ನು ನನಗೆಲ್ಲಿಯ ಸುಖ ? ಎಂದಾಕೆ ಗಳ ಗಳ ಅಳಲು ಶುರು ಮಾಡಿದಳು. ಅದೆಷ್ಟು ಸಮಯ ಅತ್ತಳೋ.


ನಾನು ಸುಮ್ಮನಿದ್ದೆ. ಅವಳು ಚನ್ನಾಗಿ ಅಳಬೇಕು, ಅವಳ ಮನಸ್ಸಿನ ಭಾರವೆಲ್ಲ ಕರಗಿ ಕಣ್ಣೀರ ಕೋಡಿಯಾಗಿ ಹರಿಯಬೇಕು-ಎಂಬ ಬಯಕೆ ನನ್ನದಾಗಿತ್ತು.

ಯಾರ ಮನಸ್ಸಿಗೂ ನೋವುಂಟು ಮಾಡಬಾರದೆಂಬ ನನ್ನ ಕನಸನ್ನು ನಾನಾಗಿಯೇ ಹುಸಿ ಮಾಡುತ್ತಿದ್ದೆ, ಅವಳ ಹಿತಕ್ಕಾಗಿ, ಅವಳ ಸುಖಕ್ಕಾಗಿ.

ಆ ನಟೀ ಮಣಿಯ ಜೊತೆ ಪರಿಣಯ ಒಲ್ಲಿಂದ ಈ 'ಪ್ರಣಯ ರಾಜ'ನಿಗೆ ಅವಳ ಮದುವೆಯ ಆಹ್ವಾನ ಪತ್ರ ತಲುಪಿದಾಗ ಆದ ಖುಷಿ ಅಷ್ಟಿಷ್ಟಲ್ಲ.

"ನಿನ್ನ ದಾಂಪತ್ಯದಲ್ಲಿ ಸದಾ ಸುಖ, ಶಾಂತಿ, ಸಂತೃಪ್ತಿ ಸಿಗಲಿ" ಎಂದು ಹಾರೈಸಿ ನಾನವಳಿಗೆ ತಂತಿ ಕಳಿಸಿದೆ.

'ಮರದ ಮೈ ಕೊರೆವ ಕನಸು'



ದೊಡ್ಡದೊಂದು ಮರ. ಅದಕ್ಕೆ ಸದಾ ಜಂಭ. 'ನಾನು ಎಂದೂ ಬಾಗುವದಿಲ್ಲ. ನನ್ನನ್ನು ಬಾಗಿಸುವದು ಯಾರಿಂದಲೂ ಸಾಧ್ಯವಿಲ್ಲ' ಎಂಬ ಹಮ್ಮು.

ಇದನ್ನು ಕೇಳಿ ಬಿರುಗಾಳಿ ನಕ್ಕಿತು. ಒಂದು ದಿನ ಬಂದು ಬೊಯ್ಯನೇ ಬೀಸಿತು. ಮರ ಬೇರು ಸಹಿತ ಉರುಳಿತು.

ಬಿದ್ದರೂ ಮೀಸೆ ಮಣ್ಣಾಗುವದಿಲ್ಲ. ಹಾಗೆ ಹೇಳಿಕೊಳ್ಳುವದು ದೊಡ್ಡವರ ಗುಣ. ದೊಡ್ಡ ಮರ ಉರುಳಿ ಬಿದ್ದರೂ ಜಂಬ ಬಿಡಲಿಲ್ಲ. "ನಿಂತು ನಿಂತು ಸುಸ್ತಾಗಿತ್ತು. ಮಲಗಿರುವೆ. ಗಾಳಿ ಸುಮ್ಮನೇ ಕುಣಿದಾಡುತ್ತಿದೆ. ತಾನೇ ಬೀಳಿಸಿದೆನೆಂದು. ನನ್ನದು ಉಕ್ಕಿನ ಮೈ. ಈ ಗಟ್ಟಿ ಶರೀರವನ್ನು ತಂಡುಮಾಡುವದು ಯಾರಿಂದಲೂ ಸಾಧ್ಯವಿಲ್ಲ". ಎಂದಿತು ಮರ.

ಮರದ ಮಾತು ಕೇಳಿ ಗರಗಸ ಸರಸರ ಬಂದಿತು. ದಪ್ಪ ಶರೀರದ ಮರ ತೆಪ್ಪಗೆ ಮಲಗಿತ್ತು—'ಬಂದರೆ ಬರಲಿ, ತಾನೇ ಹಲ್ಲು ಮುರಿದುಕೊಂಡು ಹೋಗುತ್ತದೆ' ಎಂದು.

ಆದರೆ ಗರಗಸ ಸರ ಸರ ಎಂದು ಕೊರೆಯಲು ಶುರು ಮಾಡಿತು. ಕೊರೆದಷ್ಟೂ ಅದರ ಹಲ್ಲು ಚುರುಕಾಯಿತು. ನಿಮಿಷಾರ್ಧದಲ್ಲಿ ಮರದ ಮೈ ಸೀಳಿತು. ಅದು ಎರಡು ಹೋಳಾಗಿತ್ತು.

ಚರಣರಾಜ್

ನನ್ನದೇ ಆದ 'ಟಿಂಬರ್ ಸಾಮಿಲ್ಲನ್ನಿಟ್ಟು' ನಾನು ಗರಗಸದಿಂದ ಮರದ ಮೈ ಕೊರೆಯಬೇಕು ಎಂಬುದು ಪಿ.ಯು.ಸಿಯಲ್ಲಿದಾಗ ನನ್ನ ಕನಸಾಗಿತ್ತು.

ಎಂಥ ದೊಡ್ಡ ಮರವನ್ನೂ ಕೊರೆಯುವ ಗರಗಸ ನನ್ನ ಪಾಲಿಗೆ ದಿವ್ಯ ಅಸ್ತ್ರವಾಗಿತ್ತು. ಅದನ್ನು ಹಿಡಿದು ಕುಳಿತರೆ ನಾನು ಸರ್ವಶಕ್ತ ಎಂಬ ಭಾವನೆ ಗರಿಗೆದರುತ್ತಿತ್ತು.

ನಾನು ಬೆಳಗಾವಿಯಲ್ಲಿದ್ದೆ. 9ನೇ ತರಗತಿಯಲ್ಲಿದ್ದಾಗಲೇ ನನ್ನ ತಂದೆಗೆ ಅಪಘಾತವೊಂದರಲ್ಲಿ ಪೆಟ್ಟಾಗಿ ಅವರು ಕುಂಟುವಂತಾಯಿತು. ಆಗ ನನ್ನ ತಮ್ಮಂದಿರೂ ಚಿಕ್ಕ



ರು. ಮನೆಯ ಜವಾಬ್ದಾರಿ ಹೊತ್ತ ಹಿರಿ
ಯಣ್ಣನಾದ ನಾನು 'ಟಿಂಬರ್ ಸಾಮಿಲ್"
ಮಾಲೀಕನಾಗುವ ಕನಸು ಕಾಣುತ್ತಿ
ದ್ದರೂ ಕಾಮರ್ಸ್ ಕಾಲೇಜಿನಲ್ಲಿ ಏಕಾಂಕ
ನಾಟಕವೊಂದರಲ್ಲಿ ಪಾಲ್ಗೊಂಡದ್ದು ನನ್ನ
ಲೆಕ್ಕ ತಪ್ಪಿಸಿತು. ಆ ನಾಟಕದಲ್ಲಿ ನಾನು
ಸರೆಗುಳಿ ವೈದ್ಯನ ಪಾತ್ರ ವಹಿಸಿದ್ದೆ.
ಅದು ಜನರಿಗೆ ಬಹು ಮೆಚ್ಚಿಗೆಯಾ
ಯಿತು.

'ಸಿನಿಮಾ ಸೇರು' ಎಂದು ಒತ್ತಾಯ
ಮಾಡಿದರು. ಅದ್ಭುತ ನಟನಾಗುವ
ಸಾಮರ್ಥ್ಯ ನಿನ್ನಲ್ಲಿದೆ ಎಂದೂ ಕೆಲವರು
ಹೊಗಳಿದರು.

ಹರೆಯ, ಜೊತೆಗೆ ಹೊಗಳಿಕೆ, ಸಿನಿಮಾ
ಹುಚ್ಚು ಹಿಡಿಯಲು ತಡವಾಗಲಿಲ್ಲ. ಗರ
ಸ ಮೂಲೆ ಹಿಡಿಯಿತು. ಸಿನಿಮಾ
ಕಣ್ಣು ತುಂಬಿತು. ನಿಂತಲ್ಲಿ, ಕುಂತಲ್ಲಿ,
[illegible]ದಲ್ಲಿ, ಬಂದಲ್ಲಿ ಎಲ್ಲೆಂದರಲ್ಲಿ ಸದಾ
ಸಿನಿಮಾ ಧ್ಯಾನ. ನಟನಾಗುವ ಕನಸು.

"ಈ ಮುಖಕ್ಕೆ ಸಿನಿಮಾದಲ್ಲಿ ಅದಾರು
ಅವಕಾಶ ಕೊಡ್ತಾರೋ ?" ಎಂದೊಬ್ಬರು
ಮೂದಲಿಸಿ ನುಡಿದರು.

ಇದೇ ಮುಖವನ್ನೇ ತೆರೆಯ ಮೇಲೆ
ತೋರಿಸಬೇಕೆಂಬ ಛಲ ಹೊತ್ತು ಬೆಂಗಳೂ
ರಿನ ರೈಲು ಹತ್ತಿದೆ.

ಕಂಡ ಕಂಡವರ ಮನೆ ಸುತ್ತಿದೆ.
"ನಿಮ್ಮ ಸಿನಿಮಾದಲ್ಲಿ ನನಗೊಂದು ಅವ
ಕಾಶ ಕೊಡಿ" ಎಂದು ಅಂಗಲಾಚಿ ಬೇಡಿ
ಕೊಂಡೆ.


ನಿರ್ದೇಶಕ ಸಿದ್ಧಲಿಂಗಯ್ಯನವರು
"ಪ್ರೇಮ ಪರ್ವ" ಚಿತ್ರದಲ್ಲಿ ನನಗೊಂದು
ಅವಕಾಶ ನೀಡಿ, ನನ್ನ ಕನಸು ನಿಜವಾಗು
ವಂತೆ ಮಾಡಿದರು. ಆದರೆ ಸಿನಿಮಾ ಸೇರಿದ
ಮೇಲೆ ಇಲ್ಲಿನ ಹಲವು ವಿಚಾರಗಳನ್ನು
ಕಂಡು ನನ್ನ ಕನಸು ಕನಸಾಗಿ ಉಳಿದಿದ್ದ
ರೇನೇ ಚೆನ್ನಾಗಿತ್ತೇನೋ ಅನಿಸುತ್ತದೆ.
ಟಿಂಬರ್ ಮರ್ಚಂಟ್ ಆಗಿ, ಗರಗಸ
ದ ಮರ ಕೊರೆಯುವ ಕೆಲಸ ಮಾಡು
ತ್ತಿದ್ದರೆ ಇಷ್ಟೊತ್ತಿಗೆ ಎರಡು-ಮೂರು
ಲಾರಿಗಳನ್ನಿಟ್ಟುಕೊಂಡು ನಾನು ಹಾಯಾ
ಗಿ ಬಹುದಿತ್ತೆನಿಸುತ್ತದೆ.

ಹೀಗೊ ಆದ ನಂತರ ಕಾರಿನ ಕನಸು
ಶುರುವಾಯಿತು. ಹಾಗೆ ನನಗೆ ಮೊದಲಿ
ನಿಂದಲೂ ಕಾರಿನ ಹುಚ್ಚು. ಒಂದು
ಒಳ್ಳೆಯ ಕಾರು ಕಂಡರೆ ಅದನ್ನುಕೊಳ್ಳುವ
ಶಕ್ತಿಯಂತೂ ಇಲ್ಲವೆಂದು ನನಗೆ ಗೊತ್ತಿ
ದ್ದರಿಂದ ಅದರ ಮೈ ಮುಟ್ಟಿ ಅದನ್ನು
ಚುಂಬಿಸುವ ಆಸೆ ನನಗೆ.

ಅಂಬರೀಷ್ ಅವರು ಹೊಸ ಕಾರೊಂ
ದನ್ನು ಕೊಂಡಾಗ ನಾನು ಹುಚ್ಚನಂತೆ
ಅದಕ್ಕೆ ಚುಂಬಿಸಿದ್ದೆ. "ಅದು ಕಾರು
ಕಣೋ, ಹುಡುಗಿ ಅಲ್ಲ" ಎಂದವರು ಆಗ
ತಮಾಷೆ ಮಾಡಿದ್ದರು.

ಈಗ ನಟನಾದ ನಂತರ ಸುಂದರ ಕಾರು
ಕೊಳ್ಳುವ ನನ್ನ ಕನಸು ನಿಜವಾಗಿದೆ.
ಆದರೆ ಈಗಿನ ಪೆಟ್ರೋಲ್ ಬೆಲೆ, ರಿಪೇರಿ
ಗೆಂದು ಗ್ಯಾರೇಜಿಗೆ ಕಳಿಸಿದಾಗ ಅವರು
ಕೊಡುವ ಬಿಲ್ ನೋಡಿದರೆ ನನ್ನ ಕನಸು
ಕನಸಾಗಿ ಉಳಿದಿದ್ದರೇನೇ ಸೊಗಸಾಗಿರು
ತ್ತಿತ್ತು ಎನಿಸುತ್ತದೆ.

ಎಂಟು ವರುಷ ಹಿಂದಿನ ಘಟನೆ, ಆಗ
ನನ್ನದು ಕಷ್ಟದ ಬದುಕು. ನಟನಾಗುವ
ಆಸೆ ಹೊತ್ತು ಬೆಂಗಳೂರಿಗೆ ಬಂದುದೇನೊ



ದಿಟ. ಆದರೆ ಇಲ್ಲಿ ವರ್ಷಗಳು ಉರುಳಿ
ದರೂ ಸಿನಿಮಾದಲ್ಲಿ ಅವಕಾಶ ಸಿಗದೇ
ಸುಸ್ತಾಗಿದ್ದೆ.

ಮಹಾತ್ಮಾ ಗಾಂಧೀಜಿಯವರು ಉಪ
ವಾಸ ವ್ರತ ಮಾಡಿದ ಕಥೆ ಕೇಳಿದ್ದೆ.
ಆಗ ನಾನೂ ಉಪವಾಸದಿಂದಿರಲು ಶುರು
ಮಾಡಿದ್ದೆ. ಆಗದು ಅನಿವಾರ್ಯವೂ ಆಗಿ
ತ್ತೆನ್ನಿ.

ನನ್ನ ಬಳಿ ಎರಡೇ ಎರಡು ರೂಪಾಯಿ
ಗಳಿದ್ದವು. ಅದನ್ನೂ ಖರ್ಚು ಮಾಡಿ
ದರೆ ಬರಿಗೈ ದಾಸನಾಗುತ್ತಿದ್ದೆ. ಅಂತೇ
ಬಸ್ ಕೂಡ ಏರದೇ ರೂಮಿನಿಂದ
ಚಾಮುಂಡೇಶ್ವರಿ ಸ್ಟುಡಿಯೋವರೆಗೂ
ಅಂದು ನಡೆದುಕೊಂಡೇ ಬಂದಿದ್ದೆ.

ಕಡು ಬೇಸಿಗೆ. ಸುಡು ಬಿಸಿಲು.
ಘಡೆದೂ ನಡೆದೂ ಕಾಲು ದಣಿದಿತ್ತು.
ಹೊಟ್ಟೆ ಹಸಿದಿತ್ತು.

ಸ್ಟುಡಿಯೋದ ಗೇಟ್ ಬಳಿ ನಿಂತೆ.
ಗೇಟ್‌ಕೀಪರ್‌ನನ್ನು ಪರಿಪರಿಯಾಗಿ ಬೇಡಿ
ಕೊಂಡೆ. ಉಂ. ಹುಂ. ಆತ ಒಳಗೆ
ಬಿಡಲೊಪ್ಪಲಿಲ್ಲ. ಅದೇನು ತೋಚಿತೋ
ಜೇಬಿನಲ್ಲಿದ್ದ ಎರಡೂ ರೂಪಾಯಿಗಳನ್ನು
ಅವನ ಕೈಗೆ ತುರುಕಿ ಒಳಗೆ ಬಂದುಬಿಟ್ಟೆ.

ಸ್ಟುಡಿಯೋದ ಒಳಗೆ ಬಂದಾಗ
ಮಾಯಾಲೋಕ ಸೇರಿದ ಅನುಭವ. ನನ್ನ
ಮೆಚ್ಚಿನ ತಾರೆ ಮಂಜುಳಾರನ್ನು ಕಂಡೆ.
ಜೇನ ತಳೆದ ಚೆಂಗುಲಾಬಿಯಂತೆ ಕಂಡರು
ಸಾಹಸಸಿಂಹ ವಿಷ್ಣುವರ್ಧನ್, ಹಾಸ್ಯ
ಚಕ್ರವರ್ತಿ ದ್ವಾರಕೀಶ್ ಒಬ್ಬರ ನಂತರ
ಒಬ್ಬರನ್ನು ಕಾಣುವದೇ ಒಂದು ದಿವ್ಯ
ಅನುಭವವೆನಿಸಿತು.

ಅಂದು ಕಣ್ಣಿಗೆ ಬಿದ್ದ ನಟ-ನಟಿಯರೆಲ್ಲ
ನನ್ನ ಪಾಲಿಗೆ ದೇವತೆಗಳೆನಿಸಿದರು. ಸ್ಟುಡಿ
ಯೋದ ಮೆಟ್ಟಿಲು ಮೇಲೆ ಕುಳಿತು ನನ್ನ
ಆರಾಧ್ಯ ದೇವತೆಗಳನ್ನು ನೋಡುತ್ತಿದ್ದೆ.
ಆವಾಗ ನಿದ್ರೆ ಹತ್ತಿತೋ. ಎಚ್ಚರವಾ
ದಾಗ ಭೂಮಿಯ ಮೇಲೆ ಫಳ ಫಳ
ಹೊಳೆಯುತ್ತಿದ್ದ ನಕ್ಷತ್ರಗಳೆಲ್ಲ ಮಾಯ
ವಾಗಿ ಬಾನಿನಲ್ಲಿ ಮಿರ ಮಿರ ಮಿನುಗುವ
ನಕ್ಷತ್ರಗಳು ಉದಯಿಸಿದ್ದವು.

ಅಲ್ಲಿನ ಕಾವಲುಗಾರರು ನನ್ನನ್ನು

ಎಷ್ಟೋ ಹೋದವೋ ಏನೋ.

ನಟನಾದ ಮೇಲೆ ನಾನು ಚಾಮುಂಡೇಶ್ವರಿ ಸ್ಟುಡಿಯೋದ ಅದೇ ಮೆಟ್ಟಿಲಿನ ಮೇಲೆ ನೂರಾರು ಸಲ ಕುಳಿತಿದ್ದೇನೆ. ಎರಡೆರಡು ಶಿಫ್ಟ್‌ಗಳಲ್ಲಿ ಕೆಲಸ ಮಾಡಿದ ಆಯಾಸದಿಂದಾಗಿ ಎಷ್ಟೋ ಸಲ ಕಣ್ಣು ತೂಕಡಿಸಿದ್ದೂ ಉಂಟು. ಆದರೆ ಅಲ್ಲಿ ಹಾಗೆ ನಾನು ಮಲಗುವಂತಿಲ್ಲ. ಬೇಕೆನಿಸಿದಾಗ ಬೇಕೆಂದಲ್ಲಿ ಮಲಗುವವಕ್ಕೂ ಪುಣ್ಯ ಮಾಡಿರಬೇಕು. ನಟನಾಗುವ ಮೊದಲು ಆ ಮೆಟ್ಟಿಲ ಮಲಗಿದಾಗ ಸಿಕ್ಕ ಸುಖ, ನಟನಾದ ನಂತರ ಮುಂದೆಯೂ ಸಿಕ್ಕಿಲ್ಲ. ನಟನಾಗುವ ಕನಸು ಕನಸಾಗಿದ್ದರೇನೇ ಚೆನ್ನಾಗಿತ್ತೇನೋ ಎಂದು ಈಗ ನನಗೆ ಅನಿಸುತ್ತದೆ. ○



ಎಂಜಿನ್ ಡ್ರೈವರ್ ಆಗಬೇಕೆಂದಿದ್ದೆ

ರಾಜೇಶ್

ನೈಜ ಜೀವನದಲ್ಲಿ ಪ್ರತಿಯೊಬ್ಬರೂ ಕನಸುಗಾರರೇ, ಒಬ್ಬೊಬ್ಬರ ಕನಸು ಒಂದೊಂದು ತೆರ. ಚಿಕ್ಕವನಿದ್ದಾಗ ನಾನು ರೇಲ್ವೆ ಎಂಜಿನ್ ಡ್ರೈವರ್ ಆಗಿ ಊರೂರು ಸುತ್ತುವ ಕನಸು ಕಂಡಿದ್ದೆ.

ಆ ಕನಸು ನಿಜವಾಗದಿದ್ದರೂ 'ಪಿತಾಮಹ' ಚಿತ್ರದಲ್ಲಿ ನಾನು ಎಂಜಿನ್ ಡ್ರೈವರ್ ಆಗಿ ನನ್ನ ಹೆಪ್ಪುಗಟ್ಟಿದ ಕನಸು ನಿಜವಾಯಿತು.

ನನಗೆ 'ರಾಮಾಯಣ' – 'ಮಹಾಭಾರತ' ಗಳು ಬಹು ಪ್ರಿಯ. ಚಿತ್ರರಂಗ ಸೇರಿದಾಗ, ಶ್ರೀರಾಮ, ಶ್ರೀಕೃಷ್ಣನ ಪಾತ್ರ ಧರಿಸಬೇಕೆಂದು ಕನಸು ಕಾಣುತ್ತಿದ್ದೆ. ಒಂದು ದಿನ ಶ್ರೀ ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ನಮ್ಮ ಮನೆಗೆ ಬಂದು 'ಸುಭದ್ರಾಕಲ್ಯಾಣ' ಚಿತ್ರದಲ್ಲಿ ಶ್ರೀಕೃಷ್ಣನ ಪಾತ್ರ ಮಾಡುವೆಯಾ ?" ಎಂದು ಕೇಳಿದಾಗ ನಾನು ತಟ್ಟನೆ ಹೂಂ ಎಂದುಬಿಟ್ಟೆ.

ಕೃಷ್ಣನ ಪಾತ್ರ ವಹಿಸುವ ನನ್ನ ಕನಸು ನಿಜವಾಯಿತಾದರೂ ಅದು ಭಾಗಶಃ ನನಸಾದುದಕ್ಕೆ ನನಗೆ ವ್ಯಥೆ. ರಾಮನ ಪಾತ್ರ ವಹಿಸುವ ನನ್ನ ಕನಸು ಇನ್ನೂ ಕನಸಾಗಿಯೇ ಉಳಿದಿದೆ.

ನಾನು ಸಿನಿಮಾ ನಟನಾಗುವ ಕನಸು ಕಾಣುತ್ತಿದ್ದ ಕಾಲವೊಂದಿತ್ತು. ಆಗ ನಾನು ನಾಟಕಗಳಲ್ಲಿ ಅಭಿನಯಿಸುತ್ತಿದ್ದೆ. ನಾನೇ ನಾಟಕ ಬರೆಯುತ್ತಿದ್ದೆ. ದಿಗ್ದರ್ಶಿಸುತ್ತಿದ್ದೆ. ನಾಯಕ ಪಾತ್ರವನ್ನೂ ನಿರ್ವಹಿಸುತ್ತಿದ್ದೆ.

ನಮ್ಮ ನಾಟಕಗಳನ್ನು ನೋಡಿದ ರಸಿಕರು ಸಿನಿಮಾದಲ್ಲಿ ಅಭಿನಯಿಸಲು ಒತ್ತಾಯಿಸಿದರು. ನನ್ನಲ್ಲಿ ಆಸೆ ಚಿಗುರಿತು. ಸಿನಿಮಾ ನಟನಾಗುವ ಕನಸು ಕಾಣತೊಡಗಿದೆ.

ಒಂದು ನಾಟಕ ಪ್ರದರ್ಶನ. ಅದಕ್ಕೆ ಜನಪ್ರಿಯ ನಿರ್ಮಾಪಕರೊಬ್ಬರು ಅಧ್ಯಕ್ಷ. ನಾಟಕದ ನಂತರ ನಾಟಕವನ್ನು, ನಾಟಕದಲ್ಲಿನ ನನ್ನ ಅಭಿನಯವನ್ನೂ ಹೊಗಳಿದ ಅವರು "ನನ್ನ ಮುಂದಿನ ಚಿತ್ರದಲ್ಲಿ ಈ ವಿದ್ಯಾಸಾಗರ್ ಅವರೇ ನಾಯಕ" ಎಂದು ಪ್ರಕಟಿಸಿದರು.

ವಿದ್ಯಾಸಾಗರ್–ಇದು ರಾಜೇಶ್‌ನ ಮೊದಲ ಹೆಸರು. ಅವರ ಮಾತು ಕೇಳಿ ನನಗಾದ ಆನಂದ ಅಷ್ಟಿಷ್ಟಲ್ಲ. ಮಾರನೇ ದಿನವೇ ಅವರು ನಾನಾಗ ಕೆಲಸ ಮಾಡುತ್ತಿದ್ದ ಕೆ.ಜಿ.ಐ.ಡಿ. ಕಚೇರಿಗೆ ಬಂದು ಕಾರಿನಲ್ಲಿ ಕರೆದೊಯ್ದು ಒಪ್ಪಂದ ಮಾಡಿ



ಕೊಂಡಾಗ ನಾನು ಜೀ಼ ತೆರೆಯ ಬಹು ದೊಡ್ಡ ಹೀರೋ ಆದ ಅನುಭವ.

ಪತ್ರಿಕೆಗಳಲ್ಲಿ ನಾನೇ ನಾಯಕ ನಟ ನೆಂದು ಪ್ರಕಟವಾಗತೊಡಗಿದಾಗ ನಾನು ಕುಣಿದಾಡಿದೆ. ಚಿತ್ರ ನಾಟಕ ಸಿದ್ಧ ವಾಗಲು ಎರಡು ತಿಂಗಳು ಬೇಕಾ ಯಿತು. ಈ ಮಧ್ಯೆ ಕೆಲವರು ಪಟ್ಟಭದ್ರರ ಕೈವಾಡದಿಂದಾಗಿ ನಾನು ಚಿತ್ರದ ಖಳ ನಾಯಕನೆಂದು ಪತ್ರಿಕೆಗಳಲ್ಲಿ ಪ್ರಕಟ ವಾದಾಗ ನನಗೆ ಆಕಾಶದಿಂದ ಎತ್ತಿ ಒಮ್ಮೆಲೇ ಕೆಳಕ್ಕೆ ಎಸೆದ ಅನುಭವ.

ನಿರ್ಮಾಪಕರನ್ನು ಕೇಳಿದೆ "ಪತ್ರಿಕೆ ಗಳಲ್ಲಿ ತಪ್ಪಾಗಿ ಪ್ರಕಟವಾಗಿದೆಯಲ್ಲ ಸರ್."


"ಇಲ್ಲ. ನಿಜವಾಗಿಯೇ ಪ್ರಕಟವಾಗಿದೆ"

"ಅಂದರೆ ?"

"ನಮ್ಮ ಚಿತ್ರದಲ್ಲಿ ನೀವು ಖಳ ನಾಯಕ"

"ನಾನು ಆಯ್ಕೆಯಾದದ್ದು ನಾಯಕ ಪಾತ್ರಕ್ಕಲ್ಲವೇ ?"

"ಹೌದು, ಆದರದು ತುಂಬಾ ಸಪ್ಪೆ ಯಾಗಿದೆ. ಖಳನಾಯಕನ ಪಾತ್ರ ಸೊಗ ಸಾಗಿರುವವರಿಂದ ನೀವು ಅದೇ ಪಾತ್ರ



ವನ್ನು ಮಾಡಬೇಕು."

ಅದೇ ಸಮಯ ಚಿತ್ರದ ಉಳಿದ ಮೂವರು ಪಾಲುದಾರರು ಅಲ್ಲಿಗೆ ಬಂದರು, ಅವರೆದುರು ವಿಷಯ ಹೇಳಿದೆ.

ನೀವು ಒಪ್ಪಂದ ಮಾಡಿಕೊಂಡದ್ದು ನಾಯಕ ಪಾತ್ರಕ್ಕೆ. ಈಗ ಹೀರೋ ಬದಲು ವಿಲನ್ ಆಗು ಎಂದರೆ ಹೇಗೆ? ಎಂದೆ. ಆ ಪಾಲುದಾರರಿಗೂ ನನ್ನ ವಾದ ಹಿಡಿಸಿತು.

"ಇವರಿಗೆ ನಾಯಕ ಪಾತ್ರ ಕೊಡದಿದ್ದರೆ ನಾವು ಹಾಕಿದ ಹಣವನ್ನು ವಾಪಸ್ಸು ಕೊಡ ಬೇಕಾಗುವುದೆಂದು ಅವರು ಹೇಳಿದರು.

ಅವರ ಹಟ ಗೆದ್ದಿತು. ನನಗೆ ನ್ಯಾಯ ಸಿಕ್ಕಿತು.

ತಿಂಗಳೊಪ್ಪತ್ತಿನಲ್ಲಿ ಮುಹೂರ್ತ ನಡೆ ಯಿತು. ಹೀರೋ ಪಾತ್ರದಲ್ಲಿ ನಾನು ಮೊದಲ ದಿನ ಕ್ಯಾಮರಾ ಎದುರು ನಿಂತಾಗ ಕಣ್ಣ ತುಂಬ ಬಣ್ಣ ಬಣ್ಣದ ಕನಸುಗಳು.

ಆ ಚಿತ್ರ ಬಿಡುಗಡೆಯಾದಂತೆ, ನನ್ನ ಅಭಿನಯವನ್ನು ಜನ ಹೊಗಳಿದಂತೆ. ಮನೆಯೆದುರು ನಿರ್ಮಾಪಕರು ಕ್ಯೂ ನಿಂತಂತೆ.

ಆದರೆ ಚಿತ್ರ ಅರ್ಧಕ್ಕೇ ನಿಂತಿತು. ನನ್ನ ಕನಸು ಚೂರು ಚೂರಾಯಿತು.

ತಾಳಿದವನು ಬಾಳಿಯಾನು.

ತೆರೆಯ ಮೇಲೆ ಕಾಣಿಸಿಕೊಳ್ಳುವ ಕನಸು ಕಾಣುವವರಂತೂ ತಾಳ್ಮೆಯಿದ್ದರೆ ಮಾತ್ರ ಇಲ್ಲಿ ಸ್ಥಾನ ಪಡೆಯಬಲ್ಲರು.

1968ರಲ್ಲಿ "ನಮ್ಮ ಊರು" ಚಿತ್ರದ ನಾಯಕನಾಗಿ ನಾನು ಆಯ್ಕೆಯಾದಾಗ ನನ್ನ ಅದೃಷ್ಟದ ಬಾಗಿಲು ತೆರೆಯಿತು.

ಹತ್ತು ವರ್ಷ ನಂತರ ಮತ್ತೆ ತಾಳ್ಮೆಯ ಪರೀಕ್ಷೆ. ಕಾದೆ. ಕಾದೆ. ಕಾದೆ. "ಕಲಿ ಯುಗ"ದ ಪಾತ್ರ ಕತ್ತಲೆಯಲ್ಲಿ ನೇಯ್ದಿದ್ದ ಕನಸನ್ನು ನನಸು ಮಾಡಿತು. ಅಂತೇ ಹೇಳುವುದು ಕನಸು ಎಂಥ ಸೊಗಸು. ★

"ಕನಸಲ್ಲಿ ಹೇಮಾಮಾಲಿನಿ- ನನಸಲ್ಲಿ ಜಯಮಾಲಿನಿ"

ಜೈಜಗದೀಶ್

ಪದಿ ಹರೆಯದ ವಯಸ್ಸು. ಕಣ್ತುಂಬ ಕನಸು. ಆಗ ಹೇಮಾಮಾಲಿನಿ ಕನಸಿನ ಕನ್ಯೆ. ಆಕೆ ಧರ್ಮೇಂದ್ರನ ಜೊತೆ ಅಭಿ ನಯಿಸುವುದನ್ನು ಕಂಡಾಗ ನಾನೂ ಧರ್ಮೇಂದ್ರ ಆಗಬಾರದಿತ್ತೇ ಎಂದೆನಿಸಿರ ಬಹುದು. ಶರ್ಮಿಳಾ ಟಾಗೋರ್ ರಾಜೇಶ್ ಖನ್ನನೊಡನೆ ಅಭಿನಯಿಸುವ ದನ್ನು ಕಂಡಾಗ ನಾನೂ ರಾಜೇಶ್ ಖನ್ನ ಆಗಬಾರದಿತ್ತೇ ಎಂದೆನಿಸಿರಬಹುದು. ಹೀಗೆ ವಯಸ್ಸಿಗನುಗುಣವಾಗಿ ಕನಸು.

ಕನಸು ಕಾಣುವುದು ಆರೋಗ್ಯದ ಲಕ್ಷಣವೆಂದೂ ಹೇಳುತ್ತಾರೆ. ಆದರೆ ಕನಸು ನೀರಮೇಲಿನ ಗುಳ್ಳೆ ಹಾಗೆ. "ನೀರ ಮೇಲಣ ಗುಳ್ಳೆ ನಿಜವಲ್ಲೋ ಹರಿಯೇ" ಎಂದು ದಾಸರೇ ಹಾಡಿದ್ದಾರೆ.

ಕನಸು ನಿಜವಲ್ಲ. ಅಂತೇ ಅದು ನಮಗೆ ಸೊಗಸಾಗಿ ಕಾಣುತ್ತದೆ.


ನಾನು ಮೈಸೂರಿನಲ್ಲಿ ಓದ್ತಾ ಇದ್ದೆ.

ಒಂದು ದಿನ ಪುಟ್ಟಣ್ಣಾಜೀ ಅವರಿಂದ ಕರೆ, 'ಫಲಿತಾಂಶ' ಚಿತ್ರದ ಹೀರೋ ಆಗಿ ಆಯ್ಕೆ ಮಾಡಿರುವ ಸಿಹಿ ಸುದ್ದಿ ತಿಳಿಸಿ ದಾಗ ನನಗೆ ದಿಗ್ಭ್ರಮೆ.

ಎಂದೂ ನಟನಾಗುವ ಕನಸು ಕಾಣದೇ ಇದ್ದ ನಾನು ನಟನಾದೆ. ಹೇಮಾಮಾಲಿನಿ ಯೊಂದಿಗೆ ಧರ್ಮೇಂದ್ರನನ್ನು ಕಂಡಾ ಗೆಲ್ಲಾ ನಾನು ಧರ್ಮೇಂದ್ರನಾಗಬಾರ ದಿತ್ತೇ ಎಂದು ಕನಸು ಕಾಣುತ್ತಿದ್ದ ನಾನು ಅನಿರೀಕ್ಷಿತವಾಗಿ ನಟನಾದಾಗ ಆಶ್ಚರ್ಯವೇ ಆಯಿತು.

ತಮಾಷೆಯ ವಿಷಯವೆಂದರೆ ನನ್ನ ಮೊಟ್ಟ ಮೊದಲ ಚಿತ್ರದಲ್ಲಿ ಹೇಮಾ ಮಾಲಿನಿ ಕೂಡ ಅತಿಥಿಯಾಗಿ ನಟಿಸ ಬೇಕಿತ್ತು. ಆಕೆ ಒಪ್ಪಿ, ಶೂಟಿಂಗ್‌ಗೆ





ದಿನಗಳನ್ನು ಕೊಟ್ಟಿದ್ದಳು.

ಆದರೆ ಕಾರಣಾಂತರದಿಂದ ಹೇಮಾಮಾಲಿನಿ ಅಭಿನಯಿಸಲಿಲ್ಲ. ಆಕೆ ಆ ಚಿತ್ರದಲ್ಲಿ ಅಭಿನಯಿಸಿದ್ದರೂ ನಾನವಳೊಂದಿಗೆ ನಟಿಸುವ ಅವಕಾಶ ಇರುತ್ತಿತ್ತೋ ಇಲ್ಲವೋ. ಹೇಮಾಮಾಲಿನಿ ಇಲ್ಲದಿದ್ದರೂ ಜಯಮಾಲಿನಿಯೊಂದಿಗೆ ನಟಿಸಿ ನಾನಿಂದು ಖುಷಿ ಪಡುತ್ತಿರುವೆ.

ಹೌದು. ಹೀಗೆ ತೃಪ್ತಿಪಡುವಾತನೇ ಇಲ್ಲಿ ಸುಖಿಯಾಗಿರಬಲ್ಲ. ನಾನು ಹಾಗಾಗುತ್ತೇನೆ, ಹೀಗಾಗುತ್ತೇನೆ ಎಂದು ಕನಸು ಕಂಡು, ಕನಸು ಮಧ್ಯದಲ್ಲೇ ನೀರ್ಗುಳ್ಳೆಯಂತೆ ಒಡೆದು ಹೋದರೆ ನಮ್ಮ ಸ್ಥಿತಿ ತ್ರಿಶಂಕು ಸ್ವರ್ಗವಾಗುತ್ತದೆ.

ಅಂತೇ ನಾನು ಸಾಮಾನ್ಯವಾಗಿ ಕನಸು ಕಾಣುವದಿಲ್ಲ. ಆದರೂ 'ಅಮರಜ್ಯೋತಿ' 'ದೇವರ ಮನೆ'ಯಂಥ ಚಿತ್ರಗಳಲ್ಲಿ ನನಗೆ ಒಳ್ಳೆಯ ಅವಕಾಶ ಸಿಕ್ಕಿದೆಯೆಂದು ಕಷ್ಟಪಟ್ಟು ಅಭಿನಯಿಸಿ ಈ ಚಿತ್ರಗಳು ಖಂಡಿತ ಒಳ್ಳೆಯ ಹೆಸರು ತರುತ್ತವೆ ಎಂದು ನಾನು ಕನಸು ಕಂಡದ್ದುಂಟು. ಆದರೆ ಅವು ಅಯಶಸ್ವಿಯಾಗಿ ನನಗೆ ನಿರಾಶೆ ಆದಾಗ ಕಂಡ ಕನಸು ಕನಸಾಗಿ ಉಳಿದಿದ್ದರೇನೇ ಸೊಗಸಾಗಿರುತ್ತಿತ್ತು ಎನಿಸಿದ್ದುಂಟು.

ಒಮ್ಮೆ ಬಣ್ಣ ಹಚ್ಚಿಕೊಂಡವನು ಬೇರಾವ ಕೆಲಸವನ್ನೂ ಮಾಡಲಾರ. ಅಭಿನಯದಲ್ಲಿ ಅಕಸ್ಮಾತ್ ಫೇಲಾದರೆ ನಾವು ಬೇರೆ ಕ್ಷೇತ್ರಕ್ಕೆ ಹಾರುವುದು ಬಲು ಕಷ್ಟ. ಅಂತೇ ಒಮ್ಮೆ ಈ ರಂಗಕ್ಕೆ ಬಂದವನು ಕೊನೆತನಕ ಇಲ್ಲೇ ಇರಬೇಕು. ನಾವು ಇಲ್ಲೇ ಇರಬೇಕಾದರೆ ನಾವು ಒಳ್ಳೆಯ ಕಲಾವಿದರೆಂದು ಸಾಬೀತು ಮಾಡಲು ಪ್ರತಿ ಕ್ಷಣವೂ ದುಡಿಯಬೇಕು.

ಕಮಲಾಹಾಸನ್‌ರಂಥ ನಟನನ್ನು ನೋಡಿದಾಗ ಯಾರಿಗೆ ತಾನೇ ಖುಷಿಯಾಗುವದಿಲ್ಲ! ನೃತ್ಯ. ಫೈಟ್ಸ್, ಭಾವಾಭಿವ್ಯಕ್ತಿ– ಹೀಗೆ ಪ್ರತಿಯೊಂದರಲ್ಲೂ ಸೈ ಅನಿಸೋ ನಟ ಅವರು. ಅವರ ಚಿತ್ರ ನೋಡಿದಾಗ ನಾವು ಆತನ ಮುಂದೆ ಕುಬ್ಜರು ಅನಿಸುತ್ತದೆ.

ಅವರ ಹಾಗೆ ಒಳ್ಳೆಯ ನಟನೆನಿಸಬೇಕು ಎಂಬುದೆಂದೇ ಈಗ ನಾನು ಕಾಣುತ್ತಿರುವ ಕನಸು. 卐



ಶ್ರೀನಿವಾಸ ಮೂರ್ತಿ

"ಅಕ್ಕನನ್ನು ಮೆಚ್ಚಿದೆ ತಂಗಿಯನ್ನು ಒಪ್ಪಿದೆ"

ವೆಂಕಟಲಕ್ಷ್ಮೀ ನಾನು ಪ್ರೀತಿಸಿದ ಹುಡುಗಿ. ಆಕೆ ನನ್ನ ಅಕ್ಕನ ಮಗಳು. ಅವಳು ನನ್ನ ಹೆಂಡತಿ, ನಾನವಳ ಗಂಡ ಎಂದು ಎಂದೋ ನಿರ್ಧಾರವಾಗಿತ್ತು.

ನಾನು ರಜೆಯ ದಿನಗಳಲ್ಲೆಲ್ಲ ಅವರ ಊರಿಗೆ ಹೋಗುತ್ತಿದ್ದೆ.

ಕೆರೆಯ ದಂಡೆಯ ಮೇಲೆ, ಹೊಲದ ಏರಿಯ ಮೇಲೆ ಕೈ ಕೈ ಹಿಡಿದುಕೊಂಡು ನಾವು ಓಡಾಡುವಾಗೆಲ್ಲ ಆಕೆ ರಾಧೆ ನಾನು ಕೃಷ್ಣ ಎಂಬ ಕನಸು.

ಹೊಲದಲ್ಲಿ ಅವರೆಕಾಯಿ ಬಿಡಿಸುವಾಗ, ಮರಕೋತಿ ಆಟವಾಡುವಾಗ ಎಲ್ಲೆಂದರಲ್ಲಿ ನಾನು–ಅವಳು

"ಈ ಜೋಡಿ ಹೇಳಿ ಮಾಡಿಸಿದಂತಿದೆ, ಒಬ್ಬರನ್ನೊಬ್ಬರು ಎಷ್ಟು ಹಚ್ಚಿಕೊಂಡಿದ್ದಾರೆ ನೋಡಿ" ಎಂದು ಊರವರೆಲ್ಲ ಹೇಳುತ್ತಿದ್ದರು.

"ಒಂದು ದಿನ ಅವಳು ತಮಾಷೆಗೆ ಹೇಳಿದಳು "ನೀನು ನಾಟಕ ಸೇರಿದರೆ ನಿನ್ನನ್ನು ನಾನು ಮದುವೆ ಆಗೋದಿಲ್ಲ."

"ನೀನು ಆಗದಿದ್ದರೆ ಬಿಡು. ಪುಷ್ಪಾ ನನ್ನ ಮದ್ವೆ ಆಗ್ತೇನೆ" ಎಂದು ನಾನು ರೇಗಿಸುತ್ತಿದ್ದೆ.

ಪುಷ್ಪಾ ನನ್ನಕ್ಕನ ಎರಡನೆಯ ಮಗಳು ಅಂದರೆ ವೆಂಕಟಲಕ್ಷ್ಮೀಯ ತಂಗಿ.

"ನನ್ನ ಮಾತು ಕೇಳ್ ಪುಷ್ಪಾ ಮುನಿಸಿನಿಂದ ಹೇಳುತ್ತಿದ್ದಳು. ಯಾರನ್ನು ಮದುವೆಯಾದರೂ ನಾನು ನಿನ್ನನ್ನಂತೂ ಮದುವೆ ಆಗುವದಿಲ್ಲ."

"ಬೇಡಾಂದರೆ ಬಿಡು, ನಿನ್ನಕ್ಕನನ್ನು ಬಿಟ್ಟು ನಾನು ಯಾರನ್ನೂ ಮದುವೆ ಆಗುವದಿಲ್ಲ." ಎಂದು ನಾನು ಹೇಳುತ್ತಿದ್ದೆ.

ಒಂದು ದಿನ ಇದ್ದಕ್ಕಿದ್ದಂತೆ ನನ್ನ ಕನಸು ಒಡೆಯಿತು.

ಅದೊಂದು ಕೆಟ್ಟದಿನ. ಆಗ ವೆಂಕಟಲಕ್ಷ್ಮೀ ಎಸ್. ಎಸ್. ಎಲ್. ಸಿ ಯಲ್ಲಿದ್ದಳು.

ಶಾಲೆಯ ಕಂಪೌಂಡ್‌ನಲ್ಲೇ ಒಂದು ಬಾವಿ. ಆ ಬಾವಿಯ ಕಟ್ಟೆಯ ಮೇಲೆ ಕೆಲ ಹುಡುಗಿಯರು ಸೇರಿ ನಿತ್ಯ ಚೌಕಾಭಾರ ಆಡುತ್ತಿದ್ದರು.

ಹೀಗೇ ಆ ದಿನ ವೆಂಟಕಲಕ್ಷ್ಮೀ ಗೆಳತಿಯರೊಡನೆ ಚೌಕಾಭಾರ ಆಡುತ್ತಿದ್ದಳಂತೆ. ಆಡುತ್ತಿರುವಾಗ ಜೋಲಿ ತಪ್ಪಿ ಆಕೆ ಬಾವಿಯಲ್ಲಿ ಬಿದ್ದಳು. ನೀರಿನಿಂದ ಎತ್ತಿ ತೆಗೆಯುವಷ್ಟರಲ್ಲಿ ಆಕೆ ಸತ್ತಿದ್ದಳು.

ನನಗೆ ಆಕಾಶವೇ ಕಳಚಿ ಬಿದ್ದ ಅನುಭವ. ನನ್ನ ಅಕ್ಕನೇ ನನಗೆ ಸಮಾಧಾನ ಹೇಳಬೇಕಾಯಿತು. ಕೊನೆಗೊಂದು ದಿನ ನನ್ನ ಮದುವೆ ನಿಶ್ಚಯವಾಯಿತು. ನನ್ನಕ್ಕನ ಎರಡನೆಯ ಮಗಳು ಪುಷ್ಪಾಳೊಂದಿಗೆ.

"ನಿನ್ನಕ್ಕನನ್ನು ಬಿಟ್ಟು ಬೇರೆ ಯಾರನ್ನೂ ಮದುವೆ ಆಗುವದಿಲ್ಲ" ಎಂದು ಹಿಂದೆ ನಾನು ಹೇಳಿದ್ದೆ".

"ಯಾರನ್ನು ಮದುವೆಯಾದರೂ ನಿನ್ನನ್ನು ಮದುವೆ ಆಗುವದಿಲ್ಲ" ಎಂದು ಆಕೆ ಹೇಳಿದ್ದಳು.

ಇಬ್ಬರ ಕನಸುಗಳೂ ಹುಸಿಯಾಗಿ ಇಂದು ನಾವು ಗಂಡ-ಹೆಂಡತಿ ಆಗಿದ್ದೇವೆ.

o o o

ಮದುವೆಯಾದ ನಂತರ ಮೊದಲನೆಯ ಮಗು ಗಂಡಾಯಿತು.

ಎರಡನೆಯ ಮಗು ಹೆಣ್ಣಾಗಲಿ ಎಂದು ಕನಸು ಕಂಡೆ.

ಎರಡನೆಯ ಮಗುವೂ ಗಂಡಾಯಿತು. ಅದರ ದುಂಡು ಮುಖ ಕಂಡಾಗ ನಮಗಾದ ಖುಷಿ ಅಷ್ಟಿಷ್ಟಲ್ಲ. ಹೆಣ್ಣಾಗಲಿ ಎಂದು ನಾವು ಕನಸು ಕಂಡುದನ್ನೇ ಮರೆತೆವು.

"ರಾಮ, ಕೃಷ್ಣನಂಥ ಎರಡು ಗಂಡು ಮಕ್ಕಳನ್ನು ಹೆತ್ತ ನೀವೇ ಪುಣ್ಯಾತ್ಮರು" ಎಂದು ಒಬ್ಬರು ಹೇಳಿದರು.

"ಲವ, ಕುಶ" "ಮುತ್ತು-ರತ್ನ" "ಜೆಳ್ಳಿ-



ಚಿನ್ನ" ಎಂದು ಬಂದ ಜನ ಹೊಗಳಿದಾಗ ನಮಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿದ ಅನುಭವ.

ಮೂರು ದಿನ ಆಸ್ಪತ್ರೆಯಲ್ಲಿ ನಾವು ನಮ್ಮಿಬ್ಬರು ಮಕ್ಕಳ ಬಗ್ಗೆ ಏನೇನೋ ಕನಸು ಕಂಡೆವು.

ನಾಲ್ಕನೇ ದಿನ ಬಂದಿತು-ಒಂದು ಕಹಿ ಸುದ್ದಿ.

ಮಗುವಿನ ಅನ್ನ ನಾಳ, ಶ್ವಾಸನಾಳ ಎರಡೂ ಒಂದೇ ಆಗಿವೆಯೆಂದೂ, ಆಪರೇಷನ್ ಮಾಡದಿದ್ದರೆ ಮಗು ಬದುಕುವದೇ ಸಾಧ್ಯವಿಲ್ಲೆಂದೂ ವೈದ್ಯರು ಬಾಯಿಬಿಟ್ಟರು.

ನಾಲ್ಕು ದಿನದ ಹಸುಳೆಯ ಕಂಠ ಕೊರೆದು ಶಸ್ತ್ರಚಿಕಿತ್ಸೆ ಮಾಡುವದೆಂದರೇನು?

ಮಗುವಿನ ಸಂಕಟ ನೋಡುವದು ನಮ್ಮಿಂದಾಗಲಿಲ್ಲ.

ಬೆಂಗಳೂರಿನ ಲೇಕ್‌ಸೈಡ್ ಆಸ್ಪತ್ರೆ. ಎರಡೂವರೆ ಕೇಜಿ ತೂಕದ ಪುಟ್ಟ ಮಗು. ಏಳು ಗಂಟೆ ಕಾಲ ಶಸ್ತ್ರಚಿಕಿತ್ಸೆ.

ಬೆಂಗಳೂರಿನಲ್ಲಿ ಹಿಂದೆ ಇಂಥ ಶಸ್ತ್ರಚಿಕಿತ್ಸೆ ನಡೆದಿದ್ದರೂ-ಅಂಥ ಮಗು ಬದುಕಿದ ಉದಾಹರಣೆಯಿಲ್ಲ.

ಅದಾದ ನಂತರ ಮಗುವಿನ ನಾಭಿಗೊಂದು ನಳಿಕೆ ಹಾಕಿ ಅದರ ಮೂಲಕ ಮಗುವಿಗೆ ಹಾಲುಣಿಸಬೇಕಾಯಿತು.

ಆ ದಿನಗಳಲ್ಲಿ ನನಗೆ ಸರಿಯಾಗಿ ಸಂಪಾದನೆಯಿರಲಿಲ್ಲ.

ಮನೆಗೆ ಬಂದರೆ ಔಷಧಿಗಾಗಿ ದುಡ್ಡು ಹೊಂದಿಸುವ ಚಿಂತೆ.

ಆಸ್ಪತ್ರೆಗೆ ಬಂದರೆ ಮಗುವಿನ ಹಾಗೂ ಅದರ ತಾಯಿಯ ಸಂಕಟ ಕಂಡು ಕರುಳು ಕಿವುಚಿದ ಅನುಭವ.

ಮಗು ಹುಟ್ಟುವ ಕನಸು ಕನಸಾಗಿಯೇ ಉಳಿದಿದ್ದರೆ ಚೆನ್ನಾಗಿರುತ್ತಿತ್ತೇನೊ ಎಂದು ಎಷ್ಟೋ ಸಲ ಅನಿಸಿದ್ದುಂಟು.

ನಾಲ್ಕು ತಿಂಗಳಲ್ಲಿ ಮಗುವಿಗಾಗಿ 72 ಸಾವಿರ ರೂಪಾಯಿ ಖರ್ಚಾಗಿತ್ತು. ಅದು ಬದುಕಿದ್ದಕ್ಕಾಗಿ ನಮಗಾದ ಸಂತಸ ಅಷ್ಟಿಷ್ಟಲ್ಲ. ನಮಗೆ ನವಜೀವನ ಬಂದ ಹಿಗ್ಗು. ಅಂತೇ ಅದಕ್ಕೆ ನವೀನಕೃಷ್ಣ ಎಂದು ಹೆಸರಿಟ್ಟೆವು. ○





"ನಾ ಬಯಸಿದ್ದು ದಕ್ಕಾಯಿತೆ"

ಚಿಕ್ಕವನಿದ್ದಾಗ ನಾನು ಬಹಳ ಒರಟು. ಅಷ್ಟೇ ಸಿಟ್ಟು. ನಯ ನಾಜೂಕು ಒಂದೂ ನನಗೆ ಗೊತ್ತಿರಲಿಲ್ಲ. ನನ್ನ ತಾಯಿ ತುಂಬಾ ಮುದ್ದು ಮಾಡೋರು. ಶುಚಿ ರುಚಿಯಾದ ಅಡಿಗೆ ಮಾಡಿ ಹಾಕೋರು. ಬೆಳಿಗ್ಗೆ ಉಪಹಾರಕ್ಕೆ ದೋಸೆ ಮಾಡಿದಾಗ ನಾಲ್ಕೈದು ಜನ ಒಟ್ಟಿಗೇ ಕುಳಿತರೆ ಎಲ್ಲರಿಗೂ ಒಟ್ಟಿಗೇ ಬಿಸಿ ಬಿಸಿ ದೋಸೆ ಒದಗಿಸುವದು ಕಷ್ಟವಾಗುತ್ತಿತ್ತು. ಅಂಥ ಸಂದರ್ಭದಲ್ಲಿ ಅವರು ಉಳಿದವರಿಗೆ ದೋಸೆ ಹಾಕಿ ಆಕಸ್ಮಾತ್ ನನ್ನ ತಟ್ಟೆ ಖಾಲಿ ಉಳಿದರೆ ರಪ್ಪಂತ ಅದನ್ನೆತ್ತಿ ಬಿಸಾಕಿ ಬಿಡುತ್ತಿದ್ದೆ. ಸಿಟ್ಟು ಬಂದರೆ ಒಂದರಿಂದ ಹತ್ತರವರೆಗೆ ಎಣಿಸಬೇಕಂತೆ. ಅಂದರೆ ಅಷ್ಟರೊಳಗೆ ಸಿಟ್ಟು ಇಳಿದಿರುವದಂತೆ. ಆದರೆ ನಾನೋ ಸಿಟ್ಟು ಬಂದರೆ ಹತ್ತು ಸಾಮಾನುಗಳನ್ನಾದರೂ ಎತ್ತಿ ಎಸೆಯಬೇಕು ಎಂಬ ಸಿದ್ಧಾಂತದವ.

ಶಾಲೆಯಲ್ಲಿ ಯಾರಾದರೂ ನನ್ನ ಮಾತು ಕೇಳದಿದ್ದರೆ ತಕ್ಷಣ "ನೀನು ನನ್ನ ವೈರಿ" ಎಂದು ಘೋಷಿಸಿಬಿಡುತ್ತಿದ್ದೆ. ಹಾಗೂ ಸಂಜೆ "ಇಂಥ ಜಾಗಕ್ಕೆ ಬಾ ಯುದ್ಧ ಮಾಡಬೇಕು" ಎಂದು ಆಹ್ವಾನಿಸುತ್ತಿದ್ದೆ. ಗಂಡೆದೆಯಿದ್ದವನು ಮಾತ್ರ ಬರುತ್ತಿದ್ದ. ಅವನನ್ನು ಹಣ್ಣುಗಾಯಿ ನೀರುಗಾಯಿ ಮಾಡುವದು ಇಲ್ಲ ಅವನಿಂದ ಮೈ ಕೈ ತಟ್ಟಿಸಿಕೊಂಡು ಮನೆಗೆ ಬರುವದು ನನ್ನ ನಿತ್ಯದ ದಿನಚರಿಯಾಗಿತ್ತು.

ಹಿಂಡು ಕಟ್ಟಿಕೊಂಡು ಪುಂಡು ಪೋಕರಿಯಾಗಿ ಅಂಡಲೆಯುತ್ತಿದ್ದ ಸಮಯದಲ್ಲೇ ಒಂದು ದಿನ ನಾನು ಇದ್ದಕ್ಕಿದ್ದಂತೇ ಒಳ್ಳೆಯವನಾಗಬೇಕು ಅಂತ ಕನಸು ಕಂಡೆ. ಕೆಲವೇ ದಿನಗಳಲ್ಲಿ ಎಲ್ಲರೂ ಬೆಚ್ಚಿ ಬೀಳುವಷ್ಟು ಒಳ್ಳೆಯವನಾದೆ. ಒಳ್ಳೆಯವನಾದರೆ ಜನ ನನ್ನನ್ನು ಪ್ರೀತಿಯಿಂದ ಮಾತನಾಡಿಸುತ್ತಾರೆ. ನಾನು ಬಯಸಿದ್ದೆಲ್ಲ ನನಗೆ ಸಿಗುತ್ತದೆ. ಸಮಾಜದಲ್ಲೂ ಒಳ್ಳೆಯವರಿಗೆ ಮಾನ, ಮನ್ನಣೆ ಸಿಗುತ್ತದೆ ಎಂಬ ಸೊಗಸಾದ ಕನಸು ಕಂಡವ ನಾನು.

ಆದರೆ ಮುಂದೆ ಬೆಳೆದು ದೊಡ್ಡವ

ವಿಜಯ ಕಾಶಿ

ನಾದಾಗ ನಾನು ಮೊದಲಿನಂತೆ ಒರಟಾಗಿದ್ದರೇನೇ ಚೆನ್ನಾಗಿತ್ತು ಎಂದು ನನಗನ್ನಿಸಿತು. ಯಾಕೆಂದರೆ ಮೆತ್ತಗಿರುವವರನ್ನು ಒತ್ತುವದು ಇಂದಿನ ಸಮಾಜದ ಕೆಟ್ಟ ಗುಣ. ಇಲ್ಲಿ ಕೆಲಸ ಮಾಡುವವರಿಗಿಂತ ಜೋರಾಗಿ ಬಾಯಿ ಮಾಡುವವರದೇ ಮೇಲುಗೈ. ಸಜ್ಜನರಿಗಿಂತ ದುರ್ಜನರೇ ಗೆಲುವಿನಿಂದ ಮೆರೆಯುವ ಕಾಲವಿದು.

ಮೊದಲು ಒರಟಾಗಿದ್ದಾಗ ಒಳ್ಳೆಯವನಾದರೆ ಹಾಗಾಗುತ್ತದೆ ಹೀಗಾಗುತ್ತದ ಎಂದು ಕನಸು ಕಂಡಿದ್ದೆ. ಅದು ಕನಸಾಗಿದ್ದರೇನೇ ಸೊಗಸಾಗಿರುತ್ತಿತ್ತೇನೋ-ಎಂದು ನನಗೆ ಅನ್ನಿಸಲು ಶುರುವಾಯಿತು.

ನಾನು ಶಿವಮೊಗ್ಗ ಬಳಿಯ ಒಂದು ಹಳ್ಳಿಯ ಗವಾರ. ಪದವಿ ಪಡೆದದ್ದು ಶಿವಮೊಗ್ಗದಲ್ಲಿ. ಪದವಿ ನಂತರ ನನ್ನ ಕಾಲ ಮೇಲೆ ನಾನು ನಿಂತುಕೊಳ್ಳುವ ಕನಸು ಕಂಡೆ. "ಹಳ್ಳಿ ಬಿಟ್ಟು ಹೋಗಬೇಡ" ಎಂದು ನನ್ನ ತಂದೆ ಹೇಳಿದರು.


"ರಾಜ್ಯವನ್ನೇ ಬಿಟ್ಟು ಹೋಗುತ್ತಿರುವೆ" ಎಂದು ನಾನು ಹೇಳಿದೆ.

ರಂಗಿನ ನಗರಿ ಮುಂಬೈ ಸೇರುವದು ನನ್ನ ಬಯಕೆಯಾಗಿತ್ತು. ಅಲ್ಲಿ ನನ್ನ ಮಾವ ಒಬ್ಬರು ಕ್ಯಾಮರಾಮನ್ ಆಗಿದ್ದರು. ಹೊರಟೆ, ಬರಿಗೈಲೇ ಹೋಗುವ ಹಟ.

ಕಳಿಸಲು ಮೊದಲು ಒಪ್ಪದ ನನ್ನ ತಂದೆಯವರು ಕೈಯಲ್ಲಿ ಒಂದು ಸಾವಿರ ರೂಪಾಯಿ ಹಾಕಿ ಬೀಳ್ಕೊಟ್ಟರು.

ಕೈಲಿ ಸಾವಿರ ಹಿಡಿದುಕೊಂಡು ಸಾವಿರ ಕುದುರೆ ಸರದಾರನ ಸಂಭ್ರಮದೊಂದಿಗೆ ತಲೆ ತುಂಬ ಸೊಗಸಾದ ಸಾವಿರ ಕನಸುಗಳನ್ನು ತುಂಬಿಕೊಂಡು ಹೊರಟೆ. ಮುಂಬೈ ಸೇರಿದ ಸಾವಿರ ಗಂಟೆಗಳಲ್ಲಿ ಕೈಲಿದ್ದ ಸಾವಿರದ ಗಂಟು ಕರಗಿತು. ಕೈ ಖಾಲಿ. ಮಾವನಿಂದ ಹಣ ಕೇಳಲು ನನ್ನ ಸಜ್ಜನಿಕೆ ಅಡ್ಡ ಬರುತ್ತಿತ್ತು.

ಬರಿಗೈ ದಾಸಯ್ಯನಾಗಿ ಬಾಂಬೆ ಸುತ್ತುವಾಗ ನನ್ನ ತಲೆಯಲ್ಲಿ ಹೊಸದೊಂದು ಕನಸು ಸುತ್ತಿಕೊಳ್ಳತೊಡಗಿತು. ಅದು ಅಂಥಂಥ ಕನಸಲ್ಲ. ಅಂಥಂಥ ಹುಲು



ಮಾನವರು ಕಾಣುವ ಕನಸು ಅದಲ್ಲ. ನಾನೊಬ್ಬ ದೊಡ್ಡ ಡಕಾಯಿತನಾಗಬೇಕು ಎಂಬ ಕನಸು ಆಗ ಚಿಗುರಿ, ಬೆಳೆದು ಹೆಮ್ಮರವಾಯಿತು.

ಈಗ ಸಂಭಾವಿತ. ಮುಂದೆ ಡಕಾಯಿತ–ಎಂಥ ಅಂತರ ?

ಸಂಭಾವಿತ ನಾನು ಪದವೀಧರನಾದರೂ ಮುಂಬೈಯಂಥ ಮಹಾ ನಗರದಲ್ಲಿ ಒಂದು ಕೆಲಸವಿಲ್ಲ. ನಿತ್ಯ ಕೋಟಿಗಟ್ಟಲೆ ವ್ಯವಹಾರ ನಡೆಸುವ ನಗರವೊಂದರಲ್ಲಿ ನನ್ನಂಥವನೊಬ್ಬನು ಬಿಡಿಕಾಸಿಗೂ ಪರದಾಡಬೇಕಾದ ಸ್ಥಿತಿ,

ಇಲ್ಲಿ ನಿಮಗೆ ಬೇಕಾದುದನ್ನು 'ಕೊಡು' ಎಂದರೆ ನಿಮಗದನ್ನು ಯಾರೂ ಕೊಡುವದಿಲ್ಲ. ನೀವು ಅವರಿಂದ ಅದನ್ನು ಕಿತ್ತಿತೆಗೆದುಕೊಳ್ಳಬೇಕು. ಕಷ್ಟು ಮಾಡುವವನಿಗಿಂತ ಕಸಿದುಕೊಳ್ಳುವವನೇ ಇಲ್ಲಿ ಪರಮ ಸುಖಿ.

ಹೌದು ನಾನೊಬ್ಬ ಡಕಾಯಿತನಾಗಬೇಕು.

ನನ್ನ ಗುಂಡಿಗೆ ಜನ ಹೆದರಬೇಕು. ನನ್ನ ಹೆಜ್ಜೆಗೆ ಭೂಮಿ ನಡುಗಬೇಕು.

ಕಣ್ಣು ಕೆಂಡವಾಗಬೇಕು. ಮಾತು ಗುಡುಗಬೇಕು. ನಡಿಗೆ ಮಿಂಚಬೇಕು.

ನನ್ನ ಕಂಡವನು ಬರಸಿಡಿಲು ಬಡಿದಂತೆ ಬೆಚ್ಚಿ ಬೀಳಬೇಕು.

ಅಂಥ ಎಂಥ ಸೊಗಸಾದ ಕನಸು. ಮುಂಬೈನ ಕೈಲಿನಲ್ಲಿ, ಒಮ್ಮೊಮ್ಮೆ ಯಾವುದಾದರೊಂದು ಪಾರ್ಕ್‌ನಲ್ಲಿ ಇದೇ ಕನಸು ಕಾಣುತ್ತ ಮಲಗಿ ಬಿಡುತ್ತಿದ್ದೆ. ನಾನು ಮಲಗಿದಾಗ ಯಾರಾದರೂ ಡಕಾಯಿತರು ನನ್ನನ್ನು ಎತ್ತಿಕೊಂಡು ಹೋಗಬೇಕು. ಚಂಬಲ್ ಕಣಿವೆಯಲ್ಲೋ ಮತ್ತಾವುದೋ ತಾಣದಲ್ಲೋ ನನಗವರು ಉಗ್ರ ಶಿಕ್ಷಣ ನೀಡಿ ದೊಡ್ಡ ಡಕಾಯಿತನಾಗಿ ನನ್ನನ್ನು ಬೆಳಸಬೇಕು.

ಆಗ ನಾನೊಬ್ಬ ಪದವೀಧರ ಡಕಾಯಿತ ಡಕಾಯಿತರ ನಾಯಕ. ಕೈಲಿ ಬಂದೂಕು. ಹೆಗಲಿಗೆ ಗುಂಡುಗಳ ಮಾಲೆ. ಮಿಂಚಿನ ವೇಗದಿಂದ ಕುದುರೆ ಸವಾರಿ ಮಾಡುತ್ತ ವೇಗವಾಗಿ ಚಲಿಸುವ ರೈಲಿಗೆ ಮುತ್ತಿಗೆ ಹಾಕಬೇಕು ಇಲ್ಲಾ ಯಾವುದಾದರೂ ಸಿರಿವಂತರ ಮನೆಗೆ ಕನ್ನ ಹಾಕಬೇಕು. ಡಕಾಯಿತ ವಿಜಯಕಾಶಿಯ ಹೆಸರು ಕೇಳಿದರೇನೇ ಜನ ಗಡ ಗಡ ನಡುಗಬೇಕು.

ಧೈರ್ಯಶಾಲಿಯೇ ಡಕಾಯಿತನಾದಾನು. ಡಕಾಯಿತನಾದವನೇ ಜಗತ್ತನ್ನು ಗೆದ್ದಾನು ಕೈ ಒಡ್ಡಿ ಬದುಕುವದಕ್ಕಿಂತ ಕೈಯಿಂದ ಗುದ್ದಿ ಬದುಕುವದೇ ಮೇಲು. ಸಿರಿವಂತರ ಕೊಳ್ಳೆ ಹೊಡೆದು ಬಡವರಿಗೆ ಹಂಚುವ ಡಕಾಯಿತನ ಬದುಕಿಗಿಂತ ಶ್ರೇಷ್ಠವಾದುದು ಯಾವುದಿದೆ ?

ಹೌದು ನಾನೊಬ್ಬ ದೊಡ್ಡ ಡಕಾಯಿತನಾಗಿ ಒಂದು ಭಾರೀ ಸಿರಿವಂತರ ಬಂಗ್ಲೆಗೆ ಆಕ್ರಮಣ ಮಾಡಬೇಕು ಎಂದು ಕನಸು ಕಂಡವನು ನಾನು. ಆದರೆ ಗಿರೀಶ್ ಕಾಸರವಳ್ಳಿ, ಅವರ 'ಆಕ್ರಮಣ' ನನ್ನ ಕನಸ್ಸನ್ನು ಕನಸನ್ನು ನುಚ್ಚುನೂರು ಮಾಡಿತು.

ಬಾಂಬೆಯಲ್ಲಿದ್ದ ನಾನು ಬೆಂಗಳೂರಿಗೆ ಬರುವದೆಂದರೇನು ? ಗಿರೀಶ್ ನನಗೆ 'ಆಕ್ರಮಣ'ದಲ್ಲಿ ಅವಕಾಶ ಕೊಡುವದೆಂದರೇನು? ಗುಡ್ಡಗಾಡಿನಲ್ಲಿ ಗಡ್ಡೆ ಗೆಣಸು ತಿಂದು ಸ್ವಚ್ಛಂದ ಬದುಕುನಡೆಸಬೇಕೆಂದು ಬಯಸಿದವನಿಗೆ ಸಿನಿಮಾವೊಂದು ಸೆರೆಮನೆಯಂತಾಗಿದೆ. ನಟರಾದ ಮೇಲೆ ನಮಗೆ ಸ್ವತಂತ್ರ ಬದುಕಿಲ್ಲ. ಸ್ವಂತದ ಆಸಿಸಿಕೆಗಳಿಗೆ ಅವಕಾಶವಿಲ್ಲ. ಬೇಕಾದ ಹೋಟೆಲ್‌ಗೆ

ಹೋಗುವಂತಿಲ್ಲ. ಮುಂದಿನ ಸೀಟಿನಲ್ಲಿ ಕುಳಿತು ಸಿಳ್ಳೆ ಹೊಡೀತಾ ಸಿನಿಮಾ ನೋಡುವಂತೆಯೂ ಇಲ್ಲ.

ಈಗಲೂ ಡಕಾಯಿತನಾಗುವ ಬಯಕೆ ನನ್ನ ಮನದಾಳದಲ್ಲಿ ಹಸಿರು ಹಸಿರಾಗಿಯೇ ಇದೆ. ಆದರೆ ನನ್ನ ಮದುವೆ ಅದಕ್ಕೊಂದು ಅಡ್ಡಿಯಾಗಿದೆ. ಎಷ್ಟು ಹೇಳಿದರೂ ಆಕೆ ಬಿಡುತ್ತಿಲ್ಲ. ಬಹುಶಃ ಇದೇ ಕಾರಣಕ್ಕೆ ಇರಬೇಕು-ಡಕಾಯಿತರು ಮದುವೆಯಾಗುವದಿಲ್ಲ. ಅಥವಾ ಗಂಡು ಡಕಾಯಿತನಾಗಿ ಪುಂಡು ಪೋಕರಿಯಾಗಿ ಅಲೆಯಬಾರದೆಂದೇ ಅವನ ಮದುವೆ ಮಾಡುತ್ತಾರೇನೋ ಯಾರಿಗೆ ಗೊತ್ತು ?

ನಿರ್ಮಾಪಕರು ನಮಗೆ ಕೊಡುವ ಹಣವೇ ಕಡಿಮೆ. ಅದನ್ನು ಅವರು ಸರಿಯಾಗಿ ಕೊಡದೇ ಇದ್ದಾಗ ನಾನು ಡಕಾಯಿತನಾಗಿದ್ದರೇನೇ ಚೆನ್ನಾಗಿತ್ತೇನೋ ಅನ್ನಿಸುತ್ತದೆ. ಕೆಲವು ನಿರ್ಮಾಪಕರಿಂದ ಹಣ ವಸೂಲು ಮಾಡುವುದು ಡಕಾಯಿತರಿಂದ ಸಹ ಸಾಧ್ಯವಿಲ್ಲ ಎಂಬುದೂ ದಿಟ.

ತಾಳಿದವನು ಬಾಳಿಯಾನು.

ಇದು ವೈಜಯಂತಿಗೆ ನಾನು ತಾಳಿ ಕಟ್ಟಿದ ಮೇಲೆ ಹೇಳಿಸಿಕೊಳ್ಳುತ್ತಿರುವ ಪಾಠ. ತಾಳ್ಮೆಯಿರಲಿ, ತಾಳ್ಮೆ ಕಳೆದು ಕೊಳ್ಳಬೇಡಿ-ಎಂದಾಕೆ ಹೇಳುತ್ತಲೇ ಇರುತ್ತಾಳೆ.

ತಾಳ್ಮೆ ತಾಳಿ ಕಟ್ಟಿಸಿಕೊಂಡವರ ದೊಡ್ಡ ಗುಣ.

ಗಂಡಿಗೂ ತಾಳ್ಮೆಗೂ ಗಾವುದ ದೂರ.

ಎಲ್ಲೇ ಜಗಳ ನಡೆಯಲಿ. ಎಲ್ಲೇ ಗಲಭೆ ನಡೆಯಲಿ. ನುಗ್ಗಿಬಿಡುವದು ನನ್ನ ಸ್ವಭಾವ. ಎಲ್ಲೆಂದರಲ್ಲಿ ನುಗ್ಗಿ ಬಿಡುತ್ತೇನೆ ಯಾರೆಂದರೆ ಅವರನ್ನು ಗುದ್ದಿ ಬಿಡುತ್ತೇನೆ. ಅಂತೇ ನನ್ನ ಮಡದಿಗೆ ನನ್ನ ಜೊತೆ ಬರಲು ಭಯ. ಈ ಕಲ್ಲನ್ನು ಕಡೆದು ವಿಗ್ರಹ ಮಾಡುವ ಅವಳ ತಪಸ್ಸು ದೊಡ್ಡದು. ನಾನು ಸೌಮ್ಯ ಸ್ವಭಾವದವನಾಗಿದ್ದರೆ ಅದರ ಸಂಪೂರ್ಣ ಶ್ರೇಯಸ್ಸು ಅವಳದು.

ಆದರೇನು ಆಸೆಗೆ ಸಾವಿಲ್ಲ. ಡಕಾಯಿತನಾಗುವ ಬಯಕೆ ಆಗಾಗ ಹೆಡೆಯೆತ್ತುತ್ತಲೇ ಇರುತ್ತದೆ.

ಒಂದು ರಾತ್ರಿ ಎರಡು ಗಂಟೆ. ನಟ್ಟಿರುಳು. ನಾನುನನ್ನಾಕೆಯನ್ನು ಮೋಟಾರ್ ಬೈಕ್ ಮೇಲೆ ಕೂಡಿಸಿಕೊಂಡು ಮನೆಯ ಕಡೆ ಬರುತ್ತಿದ್ದೆ. ಇದ್ದಕ್ಕಿದ್ದಂತೇ ನಾನು ಡಕಾಯಿತನಾಗಿದ್ದರೆ ಏನು ಮಾಡುತ್ತಿದ್ದೆ ಎಂಬ ವಿಚಾರ ಸ್ಫುರಿಸಿತು. ಸರಿ ಶರವೇಗದಿಂದ ಮೋಟಾರ್ ಬೈಕನ್ನು ಬಿಟ್ಟೆ. ಸಂದಿ, ಗೊಂದಿ, ಹಳ್ಳ, ದಿಣ್ಣೆ ಯಾವುದರ ಪರಿವೆಯಿಲ್ಲದೇ ಮೋಟಾರ್ ಬೈಕ್ ಓಡಿಸುತ್ತಿದ್ದೆ.

ನನ್ನಾಕೆ ಭಯದಿಂದ ಚೀರಿದಳು. ಬೆನ್ನಿಗೆ ಗುದ್ದಿದಳು. ಊಂ ಹುಂ ಡಕಾಯಿತರ ದೊರೆ ಒಬ್ಬ ಸಾಮಾನ್ಯ ಹೆಣ್ಣಿಗೆ ಹೆದರುತ್ತಾನೆಯೇ ? ಜಿಗಿದು, ನೆಗೆದು, ಪುಟಿದು, ಸಿಟಿದು ಕಪ್ ಎಂದು ಮೋಟಾರ್ ಬೈಕ್ ಮನೆಯ ಗೇಟಿಗೆ ಅಪ್ಪಳಿಸಿದಾಗಲೇ ನನಗೆ ಎಚ್ಚರ.

"ಇದೇನಿದು ಹುಚ್ಚಾಟ ?" ನನ್ನ ಪತ್ನಿ ಕೊನೆಗೂ ಧೈರ್ಯಮಾಡಿ ಕೇಳಿದಳು. ಆಗಾಗ ಈ ಪ್ರಶ್ನೆಯನ್ನು ಆಕೆ ಕೇಳುತ್ತಲೇ ಇರುತ್ತಾಳೆ. ಡಕಾಯಿತನಾಗುವದೊಂದು ಹುಚ್ಚಾಟವಲ್ಲ, ಕೆಚ್ಚೆದೆಯವರ ಆಟ ಎಂದಾಕೆಗೆ ಹೇಳಿ ಹೇಳಿ ನಾನು ಸುಸ್ತಾಗಿದ್ದೇನೆ. ★

'ಕನ್ನಡದ ರಾಜಕಪೂರ್ ಚೀನದ ನರ್ಗಿಸ್'



ಸುರೇಶ್ ಹೆಬ್ಳೀಕರ್

ನಾನು ಹುಟ್ಟಿದ್ದು ಬೆಳೆದದ್ದು ಧಾರವಾಡದ ಸಾಧನಕೇರಿಯಲ್ಲಿ. ಗಿಡ್ಡ ಚಣ್ಣ ಹಾಕಿಕೊಂಡು, ಹೆಗಲಿಗೆ ಪುಸ್ತಕಗಳ ಚೀಲ ಏರಿಸಿಕೊಂಡು ನಾನು ಶಾಲೆಗೆ ಹೋಗುತ್ತಿದ್ದಾಗ "ಕೂ...sss" ಎಂದು ರೇಲ್ವೆ ಎಂಜಿನ್ನಿನಂತೆ ಕೂಗುತ್ತ ಶಾಲೆಯತ್ತ ಓಡುತ್ತಿದ್ದೆ-ರೇಲ್ವೆ ಎಂಜಿನ್ನಿನಂತೆ.

ಎಂಜಿನ್ನಿನಂತೆ ಓಡಿ ಓಡಿ 4ನೇ ತರಗತಿಗೆ ಬರುವಷ್ಟರಲ್ಲೇ ನಾನು ಮುಂದೆ

ಎಂಜಿನ್ ಡ್ರೈವರ್ ಆಗಬೇಕು ಎಂದು ಕನಸು ಕಾಣಲು ಶುರು ಮಾಡಿದ್ದೆ.

ಮುಂದೊಮ್ಮೆ ಹೀಗೇ ಎಂಜಿನ್ನಿನಂತೆ ಕೂಗ್ತಾ ಮುಖ್ಯ ರಸ್ತೆಯಲ್ಲಿ ಓಡುತ್ತಿದ್ದಾಗ ಟ್ರಾಫಿಕ್ ಪೋಲೀಸಿನವನು ಕೈ ಮಾಡಿ ವಾಹನಗಳನ್ನೆಲ್ಲ ನಿಲ್ಲಿಸುತ್ತಿರುವುದನ್ನು ಕಂಡಾಗ ಡ್ರೈವರ್ ಆಗಿ ಕಂಬಿಯ ಮೇಲೆ ಎಂಜಿನ್ ಓಡಿಸುವದಕ್ಕಿಂತ ಪೋಲೀಸ್ ಆಗಿ ದಾರಿಯಲ್ಲಿ ಕಾರುಗಳನ್ನು ಬಸ್ಸು, ಲಾರಿಗಳನ್ನೂ ನಿಲ್ಲಿಸುವ ಪೋಲೀಸನಾಗುವದೇ ಸೂಕ್ತ ಎನಿಸಿ ಅಂದಿನಿಂದ ಪೋಲೀಸ್‌ನ ಕನಸು ಕಾಣತೊಡಗಿದೆ.

4ನೇ ತರಗತಿಯಲ್ಲಿ ಓದುತ್ತಿರುವಾಗಲೇ ಇರಬೇಕು ಒಮ್ಮೆ ಬಯಲಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದಾಗ ಯಾವದೋ ಹುಡುಗನೊಬ್ಬನು ನನ್ನೆಡೆ ಜೋರಾಗಿ ಕಲ್ಲು ತೂರಿದ. ನನ್ನ ತಲೆಯೊಡೆದು ನೆತ್ತರು ಸೋರತೊಡಗಿದಾಗ ಶಾಲೆಯ ಮುಖ್ಯೋಪಾಧ್ಯಾಯಿನಿಯರು ತಮ್ಮ ಕೈಯಾರೆ ನನಗೆ ಪಟ್ಟಿ ಕಟ್ಟುವಾಗ ನಾನೊಬ್ಬ ದೊಡ್ಡ ಮನುಷ್ಯನಾದೆ ಎನಿಸಿತ್ತು. ಅವರು ನನ್ನೆದುರು ಎಲ್ಲ ಹುಡುಗರನ್ನೂ ಕರೆದು ನಿಲ್ಲಿಸಿ, "ಇವನ ತಲೆಗೆ ಕಲ್ಲು ಹೊಡೆದೋರು ಯಾರು ? ನಿಜಾ ಹೇಳ್ತೀರೋ... ಇಲ್ಲ ಎಲ್ಲರ ಕೈಗೂ ಬೆತ್ತದಿಂದ ಹೊಡೆಯಬೇಕೊ ?" ಎಂದವರು ಕೇಳುತ್ತಿದ್ದಾಗಂತೂ ನಾನು ಕಾಲರ್ ನೀವಿಕೊಂಡು, ಕೊರಳು ಸೆಟೆಸಿ-ಸಿನಿಮಾ ಹೀರೋನಂತೆ ನಿಂತಿದ್ದೆ. ಬಹುಶಃ ನಾನು ಹೀರೋ ಆಗುವ ಕನಸನ್ನು ಮೊದಲ ಬಾರಿ ಕಂಡದ್ದು ಆಗಲೇ ಇರಬೇಕು.

ಆದರೆ ಕಾಲೇಜು ಶಿಕ್ಷಣ ಮುಗಿಸಿ ನಾನು ಬೆಂಗಳೂರಿಗೆ ಬಂದಾಗ ನಟನಾಗುವ ಕನಸು ಉಳಿದಿರಲಿಲ್ಲ. ನಿರ್ದೇಶಕನಾಗುವ ಕನಸು ಇನ್ನೂ ಚಿಗುರಿರಲಿಲ್ಲ.

ಸಂಶೋಧನೆ ಮಾಡಿ ಕಾಲೇಜು ಪ್ರಾಧ್ಯಾಪಕನಾಗುವ ಕನಸು ಕಂಡೆ. ನಂತರ ಐ.ಎ.ಎಸ್. ಆಗಿ ಜಿಲ್ಲಾಧಿಕಾರಿಯಾಗಿ ಇಡೀ ಜಿಲ್ಲೆಯನ್ನೇ ಗಡ ಗಡ ನಡುಗಿಸುವ ಕನಸು ಕಂಡೆ. ಹತ್ತು ಅಂಕಗಳಲ್ಲಿ ನಾನು ಅನುತ್ತೀರ್ಣನಾದಾಗ ಆಡ[illegible]ತ್ತ ರಂಗಕ್ಕಿ[illegible] ಅಭಿನಯ ರಂಗವೇ ನನಗೆ ಒಗ್ಗುತ್ತದೆ ಎನಿಸತೊಡಗಿತು.

ಬದುಕಿನಲ್ಲಿ ನನ್ನ ಕೈಗೂಡದ ಕನಸುಗಳನ್ನೆಲ್ಲ ಸಾಕಾರ ಮಾಡಿಕೊಳ್ಳಲು ಇಲ್ಲಿ ಅವಕಾಶವಿದೆ. ನಾನು ಕಂಡ ಕನಸುಗಳನ್ನೇ ನೋಡಿ. ಎಂಜಿನ್ ಡ್ರೈವರ್ ಪೋಲೀಸ್, ಪ್ರಾಧ್ಯಾಪಕ, ಜಿಲ್ಲಾಧಿಕಾರಿ ಈ ಎಲ್ಲ ಪಾತ್ರಗಳಲ್ಲೂ ನಾನು ಸಿನಿಮಾದಲ್ಲಿ ಕಾಣಿಸಿಕೊಳ್ಳಲು ಸಾಧ್ಯವಿದೆ.

ಅಷ್ಟೇ ಅಲ್ಲ ನಾನು ಇತ್ತೀಚೆಗೆ ರಾಜಕಪೂರ್ ಕೂಡ ಆಗುವದು ಸಾಧ್ಯವಾಯಿತು. ನನಗೆ ಅಭಿನಯ ಗೊತ್ತಿದ್ದುದರಿಂದ.

ಇತ್ತೀಚೆಗೆ ಚೀನಕ್ಕೆ ಭೇಟಿ ನೀಡಿದ ನಿಯೋಗವೊಂದರಲ್ಲಿ ನಾನೂ ಇದ್ದೆ. ನಾನೊಬ್ಬ ಸಿನಿಮಾ ನಟನೆಂದು ತಿಳಿದಾಗ ಚೀನದ ರಾಯಭಾರ ಕಚೇರಿಯವರೂ, ಇನ್ನೂ ಅನೇಕರು ನನ್ನ ಬಗ್ಗೆ ವಿಶೇಷ ಆಸಕ್ತಿ ತೋರಿಸಿದರು.

ಒಂದು ದಿನ ರಾತ್ರಿ ನಾನು ಔತಣ ಕೂಟವೊಂದರಲ್ಲಿ ಹಾಡಬೇಕಾಯಿತು.

ಏನು ಹಾಡಲಿ ? ಯಾವ ಹಾಡು ಹೇಳಲಿ ? ಎಂದು ನಾನು ಯೋಚಿಸುತ್ತಿದ್ದಾಗ ಒಬ್ಬ ಹುಡುಗಿಯು "ಮೈ ಆವಾರಾ ಹೂಂ" ಬರುತ್ತಾ ಎಂದು ಕೇಳಿದಳು.

'ಹೂಂ' ಎಂದು ಹೇಳಿ "ಮೈ ಆವಾರಾ ಹೂಂ" ಎಂದು ಶುರುಮಾಡಿಯೇ ಬಿಟ್ಟೆ. ಎಲ್ಲರೂ ನನ್ನ ಹಾಡಿಗೆ ತಲೆದೂಗಿದರು. ಕೆಲವರು ತಾವೂ ದನಿಗೂಡಿಸಿದರು.

ಅಂದಿನಿಂದ ಚೀನದಲ್ಲಿ ಇರುವವರೆಗೆ ನಾನು ರಾಜಕಪೂರ್ ಆಗಿದ್ದೆ. ಹುಡುಗಿಯರಂತೂ ಹೋದಲ್ಲೆಲ್ಲ 'ಆವಾರಾ'ದ ಈ ಹಾಡು ಕೇಳಲು ಮುಕುರುತ್ತಿದ್ದರು. ಹಾಡಿನ ನಂತರ ಪ್ರತಿಸಲವೂ ನನಗೆ ರಾಜಮರ್ಯಾದೆ.

ರಾಜಕಪೂರ್ ರಷ್ಯದಲ್ಲಿ ಈಗಲೂ ಜನಪ್ರಿಯ ನಟ ಎಂದು ಕೇಳಿದ್ದೆ. ಅವರ ಚಿತ್ರಗಳು ಚೀನದಲ್ಲೂ ಇಷ್ಟು ಜನಪ್ರಿಯವಾಗಿರುವ ವಿಷಯ ನನಗೆ ಗೊತ್ತಿರಲಿಲ್ಲ.

ಮಿಸ್ ಚಾಂಗ್ ಅನ್ನೋ ಚಲುವೆಯಂತೂ "ಆವಾರಾ ಹೂಂ" ಹಾಡಿದ ತಕ್ಷಣ ತಾನೇ ನರ್ಗಿಸ್ ಎಂಬಂತೆ ಹಾವಭಾವ ಮಾಡುತ್ತ ಬಂದು ನನ್ನನ್ನು ಊಟಕ್ಕೆ ಎಳೆದೊಯ್ದಳು. ಅಲ್ಲಿ ನಾನು ಪುನಃ ಪುನಃ ಅದೇ ಹಾಡು ಹೇಳಬೇಕಾಯಿತು.

ಒಂದು ಹುಡುಗಿ

ಒಂದು ಹುಡುಗ.


ಇಬ್ಬರೂ ಸೇರಿದಾಗ "ಮೈ ಆವಾರಾ ಹೂಂ" ಎಂಬ ಇಂಥ ಹಾಡು.

ಪ್ರಣಯದ ಮಧುರ ಕ್ಷಣಗಳೆಲ್ಲ ಒಂದು ಸುಂದರ ಕನಸು.


ಮದುವೆಯ ಬಂಧನವೆಂಬುದೇ ಒಂದು ಕನಸು.

ಅಂತೇ ನನಗಿಂಥ ಕನಸು ಬಲು ಸೊಗಸು.

—★—











ಇಂಥ ರುಚಿಕರವಾದ ಮೇಜವಾನಿ ನಾನೆಂದೂ ಸವಿದಿರಲಿಲ್ಲ!

ಎಂಜಿನ್ ಡ್ರೈವರ್ ಆಗಬೇಕು ಎಂದು ಕನಸು ಕಾಣಲು ಶುರು ಮಾಡಿದ್ದೆ.

ಮುಂದೊಮ್ಮೆ ಹೀಗೇ ಎಂಜಿನ್ನಿನಂತೆ ಕೂಗ್ತಾ ಮುಖ್ಯ ರಸ್ತೆಯಲ್ಲಿ ಓಡುತ್ತಿದ್ದಾಗ ಟ್ರಾಫಿಕ್ ಪೋಲೀಸಿನವನು ಕೈ ಮಾಡಿ ವಾಹನಗಳನ್ನೆಲ್ಲ ನಿಲ್ಲಿಸುತ್ತಿರುವುದನ್ನು ಕಂಡಾಗ ಡ್ರೈವರ್ ಆಗಿ ಕಂಬಿಯ ಮೇಲೆ ಎಂಜಿನ್ ಓಡಿಸುವದಕ್ಕಿಂತ ಪೋಲೀಸ್ ಆಗಿ ದಾರಿಯಲ್ಲಿ ಕಾರುಗಳನ್ನು ಬಸ್ಸು, ಲಾರಿಗಳನ್ನೂ ನಿಲ್ಲಿಸುವ ಪೋಲೀಸ್‌ನಾಗುವದೇ ಸೂಕ್ತ ಎನಿಸಿ ಅಂದಿನಿಂದ ಪೋಲೀಸ್‌ನ ಕನಸು ಕಾಣತೊಡಗಿದೆ.


4ನೇ ತರಗತಿಯಲ್ಲಿ ಓದುತ್ತಿರುವಾಗಲೇ ಇರಬೇಕು ಒಮ್ಮೆ ಬಯಲಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದಾಗ ಯಾವ ದೋ ಹುಡುಗನೊಬ್ಬನು ನನ್ನೆಡೆ ಜೋರಾಗಿ ಕಲ್ಲು ತೂರಿದ. ನನ್ನ ತಲೆಯೊಡೆದು ನೆತ್ತರು ಸೋರತೊಡಗಿದಾಗ ಶಾಲೆಯ ಮುಖ್ಯೋಪಾಧ್ಯಾಯನಿಯರು ತಮ್ಮ ಕೈಯಾರೆ ನನಗೆ ಪಟ್ಟಿ ಕಟ್ಟುವಾಗ ನಾನೊಬ್ಬ ದೊಡ್ಡ ಮನುಷ್ಯನಾದೆ ಎನಿಸಿತ್ತು. ಅವರು ನನ್ನೆದುರು ಎಲ್ಲ ಹುಡುಗರನ್ನೂ ಕರೆದು ನಿಲ್ಲಿಸಿ, "ಇವನ ತಲೆಗೆ ಕಲ್ಲು ಹೊಡೆದೋರು ಯಾರು ? ನಿಜಾ ಹೇಳ್ತೀರೋ... ಇಲ್ಲ ಎಲ್ಲರ ಕೈಗೂ ಬೆತ್ತದಿಂದ ಹೊಡೆಯಬೇಕೊ ?" ಎಂದವರು ಕೇಳುತ್ತಿದ್ದಾಗಂತೂ ನಾನು ಕಾಲರ್ ನೀವಿಕೊಂಡು, ಕೊರಳು ಸೆಟೆಸಿ-ಸಿನಿಮಾ ಹೀರೋನಂತೆ ನಿಂತಿದ್ದೆ. ಬಹುಶಃ ನಾನು ಹೀರೋ ಆಗುವ ಕನಸನ್ನು ಮೊದಲ ಬಾರಿ ಕಂಡದ್ದು ಆಗಲೇ ಇರಬೇಕು.




ಆದರೆ ಕಾಲೇಜು ಶಿಕ್ಷಣ ಮುಗಿಸಿ ನಾನು ಬೆಂಗಳೂರಿಗೆ ಬಂದಾಗ ನಟನಾಗುವ ಕನಸು ಉಳಿದಿರಲಿಲ್ಲ. ನಿರ್ದೇಶಕನಾಗುವ ಕನಸು ಇನ್ನೂ ಚಿಗುರಿರಲಿಲ್ಲ.

ಸಂಶೋಧನೆ ಮಾಡಿ ಕಾಲೇಜು ಪ್ರಾಧ್ಯಾಪಕನಾಗುವ ಕನಸು ಕಂಡೆ. ನಂತರ ಐ.ಎ.ಎಸ್. ಆಗಿ ಜಿಲ್ಲಾಧಿಕಾರಿಯಾಗಿ ಇಡೀ ಜಿಲ್ಲೆಯನ್ನೇ ಗದ ಗದ ನಡುಗಿಸುವ ಕನಸು ಕಂಡೆ. ಹತ್ತು ಅಂಕಗಳಲ್ಲಿ ನಾನು ಅನುತ್ತೀರ್ಣನಾದಾಗ ಆಡ


...ತ ರಂಗಕ್ಕಿ...
ಒಗ್ಗುತ್ತದೆ ಎನಿಸ...
ಬದುಕಿನಲ್ಲಿ ನ...
ಗಳನ್ನೆಲ್ಲ ಸಾ ಕ...
ಇಲ್ಲಿ ಅವಕಾಶವಿದೆ...
ಗಳನ್ನೇ ನೋಡಿ,...
ಪೋಲೀಸ್, ಪ್ರಾ...
ಈ ಎಲ್ಲ ಪಾತ್ರಗಳ...
ದಲ್ಲಿ ಕಾಣಿಸಿಕೊಳ್ಳ...
ಅಷ್ಟೇ ಅಲ್ಲ ನಾ...
ಕಪೂರ್ ಕೂಡ...
ವಾಯಿತು. ನನಗೆ...
ದರಿಂದ.

ಇತ್ತೀಚೆಗೆ ಚಿ...
ನಿಯೋಗ ಪೊಂ...
ನಾನೊಬ್ಬ ಸಿನಿಮಾ...




ಇಂಥ ರುಚಿಕರವಾದ ಮೇಜವಾನಿ ನಾನೆಂದೂ ಸವಿದಿರಲಿಲ್ಲ!





ಓದಿದರೆ ನೀವೂ ನಗಬಹುದು!

ಲೋಕೇಶ್

ಬೆಳಕಿಲ್ಲದ ದಾರಿಯಲ್ಲಿ ಹೋಗಬಹುದು. ಆದರೆ ಕನಸುಗಳಿಲ್ಲದ ದಾರಿಯಲ್ಲಿ ಹೇಗೆ ಹೋಗುವುದು? ಕನಸು ಎಂಥಾ ಸೊಗಸು. ನಿದ್ದೆಯಲ್ಲಿ ಬೀಳುವ ಎಷ್ಟೋ ಕನಸುಗಳು ಬಹಳ ಕಾಲ ಮೆಲುಕು ಹಾಕುವಂಥಾದ್ದು. ಎಚ್ಚರವಿದ್ದಾಗ ಕಾಣುವ ಕನಸು ಅನೇಕ ಸಲ ಜೀವನವಿಡೀ ನರಳಿಸುವಂಥಾದ್ದು. ಎಚ್ಚರವಿದ್ದಾಗ ಬೀಳುವ ಕನಸು ಒಬ್ಬ ವ್ಯಕ್ತಿಯನ್ನು ತೊಂದರೆಗೀಡು ಮಾಡಬಹುದು. ಪ್ರಪಾತಕ್ಕೂ ತಳ್ಳಬಹುದು. ನಿದ್ದೆಯಲ್ಲಿ ಕನಸು ಕಾಣುತ್ತಾ, ಎಚ್ಚರವಾಗದೇ ಮಲಗಿದ್ದರೆ ಸೋಮಾರಿ ಎಂದು ಬೈಸಿಕೊಳ್ಳಲೂಬಹುದು. ಎಚ್ಚರವಿದ್ದಾಗ ಕನಸುಗಳಲ್ಲೇ ತೊಯ್ದಾಡಿ ಹುಚ್ಚರೆಂದು ಹಂಗಿಸಿಕೊಳ್ಳಲೂಬಹುದು.

ಚಿಕ್ಕಂದಿನಲ್ಲಿ "ತಿರುಕನ ಕನಸು" ಓದಿದಾಗಿನಿಂದಲೂ ನಾನು ಕಲಿತ ಮಹತ್ತರ ಪಾಠ–"ಇಲ್ಲದ್ದಕ್ಕೆ ಆಸೆಪಟ್ಟು ಇದ್ದದ್ದನ್ನು ಕಳೆದುಕೊಳ್ಳಬಾರದು." ಹೀಗೇ ಬದುಕುತ್ತಾ ಬಂದಿದ್ದೇನೆ. ಸರಳವಾದ ಬದುಕು ನನಗೆ ಯಾವಾಗಲೂ ನೆಮ್ಮದಿಕೊಟ್ಟಿದೆ. ಅನೇಕರು ನನ್ನ ಸರಳತೆಯನ್ನು ಹಂಗಿಸಿದ್ದಾರೆ. ಆಗ ನನಗೆ ನಾನೇ ನ[illegible] ನಾಗಿದ್ದೇನೆ.

ಈಗ ಕೆಲವಕ್ಕಾಗಿ ನಾನು ಕನಸು ಕಾಣುತ್ತೇನೆ. ಅದನ್ನು ಬರೆದರೆ ಓದಿ ನನ್ನ ಬಗ್ಗೆ ನೀವೂ ನಗಬಹುದು. ಕಳ್ಳೇಕಾಯಿ ಕೊಂಡು ತಿನ್ನುತ್ತಾ ಕೆಂಪೇಗೌಡ ರಸ್ತೆಯಲ್ಲಿ ನಿರಾಳವಾಗಿ ಓಡಾಡುತ್ತಿದ್ದ ದಿನಗಳು. ಕೆಲವು ತಿಂಡಿಗಳಿಗಾಗಿ ಕೆಲವು ಸಣ್ಣ ಫಲಹಾರ ಮಂದಿರಗಳನ್ನು ಹುಡುಕಿಕೊಂಡು ಹೋಗುತ್ತಿದ್ದದ್ದು. ಎಲ್ಲ ಈಗ ಕನಸಾಗಿ ಹೋಗಿದೆ. ನಾಟಕ ಹಾಗೂ ಚಿತ್ರ ಜಗತ್ತು ಒಂದು ಭ್ರಮೆಯ ಲೋಕ. ಒಮ್ಮೊಮ್ಮೆ ರಾತ್ರಿ ನಾಟಕದಲ್ಲಿ ರಾಜರಾಗಿ ಮೆರೆದಾಡಿರುತ್ತೇವೆ. ಬೆಳಗ್ಗೆ ತಿಂಡಿಗೆ ಕಾಸಿಲ್ಲದೆ ಪರದಾಡುತ್ತೇವೆ. ಚಿತ್ರಗಳಲ್ಲಿ ಹತ್ತು ಹದಿನೈದು ಜನರನ್ನು ಹೊಡೆದು ಓಡಿಸುತ್ತೇವೆ. ನಿಜ ಜೀವನದಲ್ಲಿ ಸಣ್ಣ ವಿಷಯಗಳಿಗಾಗಿ ಹೆದರಿ ಸಾಯುತ್ತೇವೆ. ತೆರೆಯ ಮೇಲೆ ವಿಶಾಲ ಮನೋಭಾವದ ಉದಾತ್ತ ಆದರ್ಶ ಜೀವಿಗಳಂತೆ ಕಾಣಿಸಿಕೊಳ್ಳುತ್ತೇವೆ. ಬದುಕಿನಲ್ಲಿ ಹಲವಾರು ಮುಖವಾಡಗಳ ಹಿಂದೆ ಬದುಕುತ್ತೇವೆ. ಅವರೂ ಅನೇಕ ಅಭಿಮಾನಿಗಳ ಕನಸಿನ ವ್ಯಕ್ತಿಗಳಾಗಿರುತ್ತೇವೆ. ಇದರ ಬಗ್ಗೆ ಪುಟಗಟ್ಟಲೆ ಬರೆಯುತ್ತಿರಬಹುದು. ಈಗ ನಾನು ಆ ತಪ್ಪು ಕೆಲಸ ಮಾಡುವುದಿಲ್ಲ. ಅನೇಕ ಅಭಿಮಾನಿಗಳ ಕನಸಿನಲ್ಲಿ ದೂರದ ಬೆಟ್ಟವಾಗಿರುವ ನಾನು ನನ್ನ ಕೆಲವು ಸಣ್ಣ ಕನಸುಗಳನ್ನು ಹೇಳಿ ಮುಗಿಸುತ್ತೇನೆ. ಎಂದೋ ಒಂದು ದಿನ ಮತ್ತೆ ನಾಟಕಕ್ಕೆ ಮರಳುವ ಕನಸು ನನಗೆ ಪ್ರಬಲವಾಗಿದೆ. ಇಂದಿನಂತೆ ಎಂದೂ ಸರಳವಾಗಿ ಬದುಕಬೇಕು. ಸಾಯುವವರೆಗೂ ಅಭಿನಯಿಸುತ್ತಲೇ ಇರಬೇಕು ಎಂಬ ಗೀಳು ಬತ್ತದೇ ಇರಬೇಕು. ಇವೇ ನನ್ನ ಕನಸುಗಳು. ★






ಮುಂಬೈಯಲ್ಲಿ ದಕ್ಷಿಣದ ತಾರೆಯರ ಮೇಲುಗೈ

ಡಿಪಿ, ಮುಂಬೈ

ಕಳೆದ ಐದು ವರ್ಷಗಳಲ್ಲಿ ದಕ್ಷಿಣ ಭಾರತವು ತಯಾರಿಸಿದ ಹಿಂದೀ ಚಿತ್ರಗಳಲ್ಲಿ ಅರ್ಧದಷ್ಟು ಚಿತ್ರಗಳನ್ನು ನಿರ್ಮಿಸಿದ ಶ್ರೇಯಸ್ಸು ಪದ್ಮಾಲಯ ಸಂಸ್ಥೆಯದು. ಉಳಿದರ್ಧ ಚಿತ್ರಗಳನ್ನು ಎಲ್. ವಿ. ಪ್ರಸಾದ್, ಶ್ರೀಧರ್, ಎ. ಪೂರ್ಣಚಂದ್ರರಾವ್, ದಾಸರಿನಾರಾಯಣರಾವ್, ಕೆ. ರಾಘವೇಂದ್ರರಾವ್, ಮೊದಲಾದ ಅತಿರಥ ಮಹಾರಥರು ತಯಾರಿಸಿದರು. ದಕ್ಷಿಣದ ಈ ಅಲೆ ಮುಂಬೈ ನಿರ್ಮಾಪಕರನ್ನು ಕೊಚ್ಚಿಕೊಂಡು ಹೋಗುವಷ್ಟು ಪ್ರಬಲವಾಗಿತ್ತು ಈ ಅವಧಿಯಲ್ಲಿ.

ಜಿತೇಂದ್ರ-ಜಗದೀಪ್ ಅಭಿನಯಿಸಿದ ಕೆ. ಬಾಪಯ್ಯ ನಿರ್ದೇಶನದ 'ದಿಲ್ ದಾರ್' ಹಾಸ್ಯ ಚಿತ್ರದೊಂದಿಗೆ ದಕ್ಷಿಣದ ಹೊಸ ಅಲೆ ಶುರುವಾಯಿತು. ನಂತರ ಮೌಲ್ಯಗಳ ಸಂಘರ್ಷದ ಕಥೆ ಆಧರಿತ 'ಟಕ್ಕರ್' ತೆರೆಕಂಡಿತು. ಈ ಎರಡು ಚಿತ್ರಗಳು ಹೊಸ ಪರಂಪರೆಯನ್ನೇ ಶುರು ಮಾಡುವವೆಂದಾಗಲೀ, ದಕ್ಷಿಣದ ಹೆಚ್ಚು ಹೆಚ್ಚು ನಿರ್ಮಾಪಕರು ಹಿಂದೀ ರಂಗಕ್ಕೆ ಧುಮುಕಲು ಅದು ಕಾರಣವಾಗುವದೆಂದಾಗಲೀ ಯಾರೂ ಊಹಿಸಿರಲಿಲ್ಲ. "ಎ. ವಿ. ಎಂ, ಜೆಮಿನಿ ಸಂಸ್ಥೆಗಳು ಮೊದಲಿನಿಂದಲೂ ಹಿಂದೀ ಚಿತ್ರ ತಯಾರಿಸುತ್ತ ಬಂದಿರುವದರಿಂದ ನನ್ನ ಚಿತ್ರಗಳು ಹೊಸ ಪರಂಪರೆಗೆ ನಾಂದಿ ಹಾಡಬಹುದೆಂದು ನಾನು ನಿರೀಕ್ಷಿಸಿರಲಿಲ್ಲ" ಎಂದು ಬಾಪಯ್ಯ ಹೇಳುತ್ತಾರೆ. ಅವರೀಗ ಮುಂಬೈನಲ್ಲಿ "ಸ್ವರ್ಗ್‌ಸೇ ಸುಂದರ್" "ಅಗ್ ಔರ್ ಶೋಲಾ" "ಆಜ್ ಕಾ ದೌರ್" ಹಾಗೂ ನಾಮಕರಣವಾಗದ ಇನ್ನೊಂದು ಚಿತ್ರವನ್ನು ನಿರ್ಮಿಸುತ್ತಿದ್ದಾರೆ, 'ದಿಲ್ ದಾರ್' ಹಾಗೂ "ಟಕ್ಕರ್" ಜಿತೇಂದ್ರನನ್ನು ದಕ್ಷಿಣದ ಎಲ್ಲ ನಿರ್ಮಾಪಕರ ಅಚ್ಚುಮೆಚ್ಚಿನ ನಟನನ್ನಾಗಿಸಿದ್ದೂ ನಿಜ.

ಜಿತೇಂದ್ರ ಅಭಿನಯಿಸಿದ ಮತ್ತೊಂದು ಚಿತ್ರ "ಮೇರೀ ಆವಾಜ್ ಸುನೋ"ದ ಪ್ರಚಂಡ ಯಶಸ್ಸು ಹೊಸ ಪರಂಪರೆಗೆ ನಾಂದಿ ಹಾಡಿತು. ಅದು ಪದ್ಮಾಲಯದ ಎ. ಶೇಷಗಿರಿರಾವ್, ಕೃಷ್ಣ, ಹನುಮಂತರಾವ್ ಸಹೋದರರು ನಿರ್ಮಿಸಿದ ಪ್ರಥಮ



ಹಿಂದೀ ಚಿತ್ರ. ನಂತರ ಅವರು ತಯಾರಿಸಿದ 'ಹಿಮ್ಮತ್‌ವಾಲಾ' ದೊಂದಿಗೆ ಜಿತೇಂದ್ರ-ಶ್ರೀದೇವಿಯರ ಜೋಡಿಯು ಜನಪ್ರಿಯವಾಯಿತಲ್ಲದೆ ಎಲ್. ವಿ. ಪ್ರಸಾದ್‌ರ "ಏಕ್ ದೂಜೇಕೆಲಿಯೆ" ಕಮಲ್ ಹಾಸನ್ ರತಿ ಅಗ್ನಿಹೋತ್ರಿ ಬಗ್ಗೆ ಜನರಿಗೆ ಹುಚ್ಚು ಹಿಡಿಸಿತು. ಅನಂತರ ಕರ್ನಾಟಕದ ಎನ್. ವೀರಾಸ್ವಾಮಿ ಕನ್ನಡದ ಯಶಸ್ವೀ ಚಿತ್ರ 'ಚಕ್ರವ್ಯೂಹ'ವನ್ನು ಹಿಂದಿಯಲ್ಲಿ ತಯಾರಿಸಿದರು. ಕೆ.ಸಿ.ಎನ್ ಚಂದ್ರು ಹಿಂದೀ ರಂಗಕ್ಕೆ ಧುಮುಕಿದರು. ದ್ವಾರಕೀಶ್ 'ಗಂಗ್ವಾ' ದೊಂದಿಗೆ ಹಿಂದೀ ರಂಗದಲ್ಲೂ ಜಯಭೇರಿ ಬಾರಿಸಿದರು.

ಕಮಲ್‌ಹಾಸನ್

ಕಮಲ್‌ಹಾಸನ್‌ನನ್ನು ಚಿತ್ರರಂಗಕ್ಕೆ ಪರಿಚಯಿಸಿದ ಕೆ. ಬಾಲಚಂದರ್ "ಏಕ್ ದೂಜೆ ಕೆ ಲಿಯೆ"ದೊಂದಿಗೆ ಅವರನ್ನು ಹಿಂದೀ ರಂಗಕ್ಕೂ ಪರಿಚಯಿಸಿದರು. ಆ ಚಿತ್ರದ ಅದ್ಭುತ ಯಶಸ್ಸು ಹಿಂದೀ ರಂಗದಿಂದ ಅವರಿಗೆ ಭಾರೀ ಬೇಡಿಕೆ ಬರಲು ಕಾರಣವಾಯಿತು. ಕಮಲ್‌ನನ್ನು ಹಾಕಿಕೊಂಡು ಕೆ. ಬಾಲಚಂದರ್ ದಿಗ್ದರ್ಶಿಸಿದ 'ಏಕ್ ನಯೀ ಪಹೇಲಿ' "ಜರಾಸೀ ಜಿಂದ್‌ಗೀ" ಚಿತ್ರಗಳ ನಂತರ ಕಮಲ್‌ನ ಸ್ಥಾನವು ಹಿಂದಿಯಲ್ಲಿ ಭದ್ರವಾಯಿತು. ನಂತರ ಅವರು ಶ್ರೀದೇವಿಯೊಂದಿಗೆ 'ಸದ್ಮಾ'ದಲ್ಲಿ ಅಭಿನಯಿಸಿದರು.

'ಸದ್ಮಾ' 'ಯಾದಗಾರ್' 'ಕರಿಷ್ಮಾ' ಗಳಲ್ಲಿನ ಕಮಲ್‌ನ ಅಭಿನಯವು ಚೆನ್ನಾಗಿತ್ತೇನೊ ನಿಜ. ಆದರೆ ಆ ಚಿತ್ರಗಳು ನೆಲ ಕಚ್ಚಿದವು. ವಿಫಲ ಚಿತ್ರಗಳ ನಂತರವೂ ಕಮಲ್‌ಗೆ ಬೇಡಿಕೆ ಕಡಿಮೆ ಆಗದಿದ್ದುದು ಅವನ ಅದೃಷ್ಟ. ಧರ್ಮೇಂದ್ರ, ಅಸಿತಾರಾಜ್‌ರೊಂದಿಗೆ ಕಮಲ್ ಅಭಿನಯಿಸಿದ "ರಾಜ್ ತಿಲಕ್" ಚಿತ್ರವನ್ನು ಬಿಡುಗಡೆಗೆ ಮುಂಚೆ ನೋಡಿದ್ದವರು ಅದು ಭಾರೀ ಯಶಸ್ಸು ಪಡೆಯುವದೆಂದು ಹೇಳಿದ್ದರು. ಆದರೆ ಚಿತ್ರವು ಬಿಡುಗಡೆಯಾದ ನಂತರ ಕಮಲ್ ಮರಳಿ ಮದ್ರಾಸಿಗೆ ಓಡಿಹೋಗಬೇಕಾಗುತ್ತದೆ ಎಂದು ಉದ್ಯಮದವರು ಹೇಳಲು ಶುರುಮಾಡಿದರು.

ಕಮಲ್‌ನನ್ನು ಹಿಂದೀ ಜನ ಮರೆತಿಲ್ಲ ಎಂಬುದಕ್ಕೆ 'ಸಾಗರ್' ಚಿತ್ರದಲ್ಲಿನ ಅವರ ಅಭಿನಯವನ್ನು ಜನ ಮುಕ್ತ ಕಂಠದಿಂದ ಹೊಗಳುತ್ತಿರುವದೇ ಸಾಕ್ಷಿ. ತಾನು ಪ್ರೀತಿಸಿದ ಹುಡುಗಿಯನ್ನು (ಡಿಂಪಲ್) ತನ್ನ ಮಿತ್ರನು (ರಿಷಿಕಪೂರ್) ಪ್ರೀತಿಸುತ್ತಿದ್ದನೆಂದು ತಿಳಿದಾಗ ಆದ ಆಘಾತವನ್ನೂ ಅಂತರಂಗದ ಸಂಕಟವನ್ನೂ ತೋರಿಸುವ ಚಿತ್ರದ ಸನ್ನಿವೇಶಗಳಲ್ಲಿ ಕಮಲ್ ಶ್ರೇಷ್ಠ ಅಭಿನಯ ನೀಡಿದ್ದಾನೆ. ಆದರೆ "ಸಾಗರ್" ಚಿತ್ರದ ಯಶಸ್ಸಿನ ನಂತರವೂ ಅವನನ್ನೂ ಹೊಸ ಹಿಂದೀ ಚಿತ್ರಕ್ಕೆ ಸಹಿ [illegible]. ಈಗಾತ "ದೇಖಾ ಪ್ಯಾರ್ ತುಮ್ಹಾರಾ" ಚಿತ್ರದ ಬಗ್ಗೆ ಬಹಳಷ್ಟು ನಿರೀಕ್ಷೆಗಳನ್ನಿಟ್ಟುಕೊಂಡಿದ್ದಾನೆ. ಕಮಲ್ ಈಗ ಹಿಂದಿಯಲ್ಲಿ ಚಿತ್ರವೊಂದನ್ನು ತಯಾರಿಸಲು ಉದ್ದೇಶಿಸಿದ್ದು ಈಗ ಚಿತ್ರಕಥೆ ಸಿದ್ಧವಾಗುತ್ತಿದೆ ಎಂದು ಸುದ್ದಿ.



ಮೀನಾಕ್ಷಿ ಶೇಷಾದ್ರಿ

ಇತ್ತೀಚಿನ ವರ್ಷಗಳಲ್ಲಿ ಮೀನಾಕ್ಷಿ ಶೇಷಾದ್ರಿ ಹಿಂದೀ ಚಿತ್ರರಂಗಕ್ಕೆ ದಕ್ಷಿಣವು ನೀಡಿದ ಅದ್ಭುತ ಕೊಡುಗೆ. ಮೀನಾಕ್ಷಿಯ ಜೊತೆಗೆ ಸದಾ ಅವಳ ತಾಯಿ ಜೆಂಗಾವಲಾಗಿ ಇರುತ್ತಾಳೆ.



"ತಾಯಿಯನ್ನು ಬಿಟ್ಟಿರಲು ನನ್ನಿಂದಾಗದು" ಎಂದು ಮೀನಾಕ್ಷಿ ಹೇಳಿಕೊಳ್ಳುತ್ತಾಳೆ. ಆದರೆ ಆಕೆಯ ತಾಯಿಯು ಜೊತೆಗಿರುವುದರಿಂದಾಗಿ ಆಗಬಹುದಾದ ಹೆಚ್ಚಿನ ಖರ್ಚಿನ ಬಗ್ಗೆ ಯಾವ ನಿರ್ಮಾಪಕನೂ ಗೊಣಗಿದಂತಿಲ್ಲ. ಅವಳನ್ನು "ಹೀರೋ" ಚಿತ್ರದಲ್ಲಿ ನಾಯಕಿಯಾಗಿ ಆರಿಸಿದ ಸುಭಾಷ್ ಘಾಯಿ ಅವರಂತೂ "ಅವಳಿಗಾಗಿ ಅಧಿಕ ಖರ್ಚು ಮಾಡಿದರೂ ಪರವಾಯಿಲ್ಲ. ಅತ್ಯಂತ ಶ್ರದ್ಧೆಯಿಂದ ಆಕೆ ದುಡಿಯುವುದರಿಂದ ಯಾರೂ ಅದರ ಬಗ್ಗೆ ಆಕ್ಷೇಪಣೆ ಎತ್ತುವಂತಿಲ್ಲ" ಎಂದು ಹೇಳುತ್ತಾರೆ.

ಈ ಶಿಸ್ತು, ಕೆಲಸದ ಬಗ್ಗೆ ಅನನ್ಯ ಶ್ರದ್ಧೆ ಅವಳನ್ನು ಹಿಂದೀ ರಂಗದ ಮೊದಲ ಐವರು ತಾರೆಯರಲ್ಲೊಬ್ಬಳನ್ನಾಗಿಸಿದೆ. ಇಷ್ಟೇ ಅಲ್ಲ "ನನ್ನಲ್ಲಿ ಪ್ರತಿಭೆಯೂ ಇದೆ, ನೀವೀಗಾಗಲೇ ಅನೇಕ ಚಿತ್ರಗಳಲ್ಲಿ ನೀವದನ್ನು ಕಂಡಿದ್ದೀರಿ" ಎಂದು ಮೀನಾಕ್ಷಿ ಹೇಳುತ್ತಾಳೆ.

ಚಿತ್ರರಂಗ ಸೇರಿದಾಗ ಹದಿನೇಳರ ಅಂದದ ಹರೆಯ. ಮುಖದ ತುಂಬ ಲಜ್ಜಾಭಾವ. ಅಮಾಯಕ ಕನ್ಯೆಯಾಗಿ ಚಿತ್ರರಂಗ ಸೇರಿದ ಮೀನಾಕ್ಷಿ ಇಂದು ಮಾದಕ ಕಂಗಳ ಸೊಬಗಿನ ತರುಣಿ. ಈಗವಳು ಚಿತ್ರವೊಂದಕ್ಕೆ 12 ಲಕ್ಷ ರೂ. ಪಡೆಯುತ್ತಾಳಂತೆ. ಚಿತ್ರೀಕರಣ ನಡೆವಾಗಿನ ಖರ್ಚು ವೆಚ್ಚಗಳನ್ನೂ ನಿರ್ಮಾಪಕರೇ ವಹಿಸಿಕೊಳ್ಳುತ್ತಾರೆ.

ಅವಳ ಮೊದಲ ಚಿತ್ರ "ಪೇಂಟರ್ ಬಾಬು" ವಿಫಲವಾಯಿತು, "ಅದೊಂದು ಕೆಟ್ಟ ಸಮಯ, 'ಹೀರೊ' ಚಿತ್ರದ ಪಾತ್ರವು ಸಿಗುವತನಕ ನಾನು ಹದಿನೆಂಟು ತಿಂಗಳು ಕಾಯಬೇಕಾಯಿತು" ಎಂದು ಮೀನಾಕ್ಷಿ ಹಿಂದಿನದನ್ನು ಮೆಲುಕು ಹಾಕುತ್ತ ಹೇಳುತ್ತಾಳೆ.

ಚೆಲುವು, ನೃತ್ಯ, ಧ್ವನಿಯ ಏರಿಳಿತದಲ್ಲಿ ಪರಿಣತಿ. ಯಾವ ಪಾತ್ರಕ್ಕೂ ಹೊಂದುವಂಥ ಮುಖ ಮೀನಾಕ್ಷಿಯ ಯಶಸ್ಸಿಗೆ ಕಾರಣವಾಗಿವೆ. 'ಹೀರೊ' ಚಿತ್ರದಲ್ಲಿ ಆಕೆ ಶಮ್ಮಿ ಕಪೂರ್‌ನ ಮಗಳಾಗಿ ಅಭಿನಯಿಸಿದಳು. ವರ್ಷಗಟ್ಟಲೇ ನಡೆದ ಆ ಚಿತ್ರದ ಪ್ರಚಂಡ ಯಶಸ್ಸು ಆಕೆಗೆ ಒಮ್ಮೆಲೇ ಡಜನ್ ಚಿತ್ರಗಳನ್ನು ತಂದು ಕೊಟ್ಟಿದ್ದೇನೂ ವಿಸ್ಮಯವಲ್ಲ. 'ಹೀರೊ'ದ ನಾಯಕ ಜಾಕಿಯೊಂದಿಗೇ ಪುನಃ ಅಭಿನಯಿಸುವ 40 ಚಿತ್ರಗಳನ್ನಾದರೂ ನಾನು ನಿರಾಕರಿಸಿರಬೇಕು ಎಂದು ಮೀನಾಕ್ಷಿ ಹೇಳಿಕೊಳ್ಳುತ್ತಾಳೆ. "ನಾವಿಬ್ಬರೂ ಮಿತ್ರರೇನೊ ನಿಜ. ಆದರೆ ಒಂದೇ ಜೋಡಿಯನ್ನು ಪದೇ ಪದೇ ನೋಡಿದರೆ ಜನರಿಗೆ ಬೋರ್ ಆಗುವದಿಲ್ಲವೇ?" ಎಂದಾಕೆ ಕೇಳುತ್ತಾಳೆ.

ಈಗ ಮೀನಾಕ್ಷಿ 35 ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾಳೆ. ಅಂದರೆ 30 ಕೋಟಿ ರೂ.ಗಳಷ್ಟು ಭಾರಿ ಮೊತ್ತವನ್ನು ನಿರ್ಮಾಪಕರು ಅವಳ ಮೇಲೆ ತೊಡಗಿಸಿದ್ದಾರೆ. ಇಂಥ ಅದ್ಭುತ ಯಶಸ್ಸಿನ ನಂತರವೂ ತನಗಿನ್ನೂ ತೃಪ್ತಿಕರ ಪಾತ್ರವು ಸಿಕ್ಕಿಲ್ಲೆಂದು ವಿನೀತ ಭಾವದಿಂದ ಆಕೆ ಹೇಳುತ್ತಾಳೆ. "ನಾನೊಬ್ಬ ಅಭಿನೇತ್ರಿ. ಬೆಡಗು ಬಿನ್ನಾಣದ ತಾರೆಯಲ್ಲ. ಅಂತೇ ಅಭಿನಯಕ್ಕೆ ಅವಕಾಶವಿರುವ ಪಾತ್ರಗಳು ನನಗಿಷ್ಟ" ಎಂದವಳು ಹೇಳುತ್ತಾಳೆ.

ಪ್ರಕಾಶ್ ಮೆಹರಾ ನಿರ್ದೇಶನದ "ಮುಕದ್ದರ್ ಕಾ ಫೈಸಲಾ" ಚಿತ್ರದಲ್ಲಾಕೆ ರಾಜ್‌ಬಬ್ಬರ್, ರಾಜಕುಮಾರ್, ರಾಖೀಯ ಜೊತೆ ಅಭಿನಯಿಸುತ್ತಿದ್ದಾಳೆ. ಆ ಚಿತ್ರದ ಬಗ್ಗೆ ಬಹಳಷ್ಟು ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾಳೆ. ಆದರೆ ಅನಿಲ್ ಕಪೂರ್ ಜೊತೆ ಮೊದಲ ಬಾರಿ ಅಭಿನಯಿಸುತ್ತಿರುವ "ಮೇರೀ ಜಂಗ್" ಬಗ್ಗೆ ಅವಳಿಗಂಥ ನಿರೀಕ್ಷೆಯಿಲ್ಲ. ಯಾಕೆಂದರೆ ಆ ಚಿತ್ರದಲ್ಲಿ ನಾಯಕನಿಗೆ ಪ್ರಾಧಾನ್ಯ.



ಶ್ರೀದೇವಿ

ನಿರ್ಮಾಪಕ-ನಿರ್ದೇಶಕರೊಬ್ಬರಿಗೆ ಕೆಲವು ದಿನಗಳ ಹಿಂದೆ ಪಾರ್ಟಿಯೊಂದರಲ್ಲಿ ಶ್ರೀದೇವಿಯನ್ನು ಪರಿಚಯಿಸಿದಾಗ "ಭಾಯೀ, ಇನ್‌ಕಾ ಪರಿಚಯ್ ಕರಾನೇಕೀ ಕ್ಯಾ ಜರೂರತ್ ಹೈ. ಇಂಡಿಯಾ ಮೇ ಕೋಯಿ ಹೋ ಜೋ ಇನ್ಹೇ ನ ಜಾನತಾ ಹೋ" ಎಂದರು. (ಇವಳ ಪರಿಚಯ ಮಾಡಿಕೊಡುವ ಅಗತ್ಯವೇನಿದೆ? ಭಾರತದಲ್ಲಿ ಈಕೆಯ ಪರಿಚಯ ಇಲ್ಲ' ಎಂದವರು ಯಾರಿದ್ದಾರೆ?)

ಇದು ಶ್ರೀದೇವಿಯ ಇಂದಿನ ಜನಪ್ರಿಯತೆಗೆ ಸಾಕ್ಷಿ. ಆಕೆಯ ಪ್ರಥಮ ಚಿತ್ರ "ಸೋಲ್ವಾ ಸಾಲ್" ನಂತರ ಹಿಂದಿಗೆ ಒಗ್ಗದ ಕಗ್ಗ ಹೆಣ್ಣು ಎಂದು ಮದ್ರಾಸಿಗೆ ಓಡಿಸಿದ ಮುಂಬೈ ನಿರ್ಮಾಪಕರು ಈಗ ಕೈ ಕೈ ಹಿಸುಕಿಕೊಳ್ಳುತ್ತಿದ್ದಾರೆ. "ಹಿಮ್ಮತ್‌ವಾಲಾ" "ಮವಾಲಿ" "ಜಸ್ಟೀಸ್ ಚೌಧರಿ" ಅವಳನ್ನು ಭಾರತೀಯ ಚಿತ್ರರಂಗದ ಅತ್ಯಂತ ದುಬಾರಿ ತಾರೆಯೆಂಬ ಖ್ಯಾತಿಯನ್ನು ತಂದುಕೊಟ್ಟಿವೆ. ಈಗವಳು ಚಿತ್ರವೊಂದಕ್ಕೆ ಹದಿನೆಂಟು ಲಕ್ಷ ರೂ. ಸಂಭಾವನೆ ಪಡೆಯುವಳೆಂದು ಸುದ್ದಿಯಿದ್ದು ಇಂಥ ಭಾರೀ ಮೊತ್ತವನ್ನು ಹಿಂದೆ ಯಾವ ತಾರೆಯೂ ಪಡೆದಿಲ್ಲ. ಪದ್ಮಾಲಯದ ಒಬ್ಬರು ಹೇಳುವಂತೆ- "ಏರಿದ ಬೆಲೆಯೂ ಈ ತಾರೆಯ ಬೇಡಿಕೆಯನ್ನು ತಗ್ಗಿಸಿಲ್ಲ. ಯಾಕೆಂದರೆ ಆಕೆಯಿರುವ ಚಿತ್ರಗಳು ಮೊದಲಿನ ವಾರಗಳಲ್ಲಂತೂ ಅಮಿತಾಬ್ ಬಚ್ಚನ್‌ನ ಚಿತ್ರಗಳಷ್ಟೇ ಭಾರೀ ಹಣ ಗಳಿಸುತ್ತವೆ."

"ನಾಯಕಿಯರಲ್ಲಿ ನಾನೊಬ್ಬ ಅಮಿತಾಬ್ ಎಂದು ಕರೆಯುವದು ನನಗೆ ಬೇಕಿಲ್ಲ. ಅದು ಕೇಳುವದಕ್ಕೆ ಹಿತಕರ ಎನಿಸುವುದೂ ಇಲ್ಲ" ಎಂದಾಕೆ ಇತ್ತೀಚೆಗೆ ಈ ಲೇಖಕನಿಗೆ ಭೇಟಿಯಾದಾಗ ತಿಳಿಸಿದಳು.

ಸೆಟ್‌ನಲ್ಲಿ ಅವಳದು ಪಾದರಸದ ಚಟುವಟಿಕೆ. ಬೆಳಿಗ್ಗೆ 6 ರಿಂದ ಮಾರನೇ ದಿನ ಬೆಳಗಿನ 7 ರವರೆಗೆ 20 ಗಂಟೆ ಸತತವಾಗಿ ಕೆಲಸ ಮಾಡುವ ಏಕಮೇವ ತಾರೆ ಅವಳು. ಕೆಲಕಾಲ ಕಾಫಿ ಇಲ್ಲವೇ ಹಣ್ಣಿನ ರಸ ಸೇವಿಸಿ ಆಕೆ ಇಷ್ಟು ದೀರ್ಘಕಾಲ ಪ್ರತಿದಿನ ಕೆಲಸ ಮಾಡುವದೇನೂ ಸಾಮಾನ್ಯ ವಿಷಯವಲ್ಲ.

"ಈಗ ನಾಯಕಿಯರಿಗೆ ಸಿನಿಮಾದಲ್ಲಿ ಸರಿಯಾದ ಕೆಲಸವಾದರೂ ಎಲ್ಲಿರುತ್ತದೆ?" ಎಂದು ಹೇಳುವ ಹುಡುಗಿಯರೇ ಜಾಸ್ತಿಯಿರುವಾಗ ಶ್ರೀದೇವಿ ಮಾತ್ರ 'ಕೈಲಿರುವ ಇಪ್ಪತ್ತು ಚಿತ್ರಗಳ ಪೈಕಿ 'ಸದ್ಮಾ'ದಂಥ ನಟಿಯ ಪ್ರತಿಭೆಗೆ ಸವಾಲೊಡ್ಡುವ ಪಾತ್ರ ಸಿಕ್ಕಿವೆ' ಎಂದು ಬಲು ಹಿಗ್ಗಿನಿಂದ ಹೇಳುತ್ತಾಳೆ.

ಇತ್ತೀಚೆಗೆ ಪದ್ಮಾಲಯದವರು ಶ್ರೀದೇವಿಯ ಬದಲು ಬೇರೆ ನಾಯಕಿಯರತ್ತ ಹೋಗುತ್ತಿದ್ದು ಅವರ ಚಿತ್ರಗಳಲ್ಲೀಗ ಮೀನಾಕ್ಷಿ ಹೆಚ್ಚಾಗಿ ಕಾಣತೊಡಗಿದ್ದಾಳೆ. ಆದರೆ ಈ ಬಗ್ಗೆ ಶ್ರೀದೇವಿಗೇನೂ ಅಸಮಾಧಾನವಿಲ್ಲ. ಮುಂಬೈಯಲ್ಲಿ ಅವಳ ಬೇಡಿಕೆ ಹೆಚ್ಚುತ್ತಿದ್ದು 1986ರ-ನೆನಪಿಡಿ 1985 ಅಲ್ಲ 1986-ಕೊನೆಯವರೆಗೂ ಶ್ರೀದೇವಿ ಈಗಾಗಲೇ ಬುಕ್ ಆಗಿದ್ದಾಳೆ.

ಶ್ರೀದೇವಿಗೆ ತೊಡೆ ತಟ್ಟಿಕೊಳ್ಳುವ ತಾರೆಯೆಂದೇ ಹೆಸರು. ಅವಳಿರುವ ಚಿತ್ರದ ಹಾಡಿನ ಚಿತ್ರೀಕರಣದಲ್ಲಂತೂ ನೀವಿದರ ಧಾರಾಳ ಪ್ರದರ್ಶನವನ್ನು ಕಾಣಬಹುದು. 'ಜನರಿಗೆ ಇಂಥ ದೃಶ್ಯಗಳ ದಾಹವಿರುವ ತನಕ ನಾನವರನ್ನು ತಣಿಸಲೇಬೇಕು. ಆದರೆ 'ಬಲಿದಾನ್'ದಂತೆ ಸ್ನಾನದ ಉಡುಪಿನಲ್ಲಿ ನಾನಿನ್ನು ಕಾಣಿಸುವದಿಲ್ಲ-ಯಾಕೆಂದರೆ ಜನರಿಗೆ ಅದು ಸೇರಿಕೆಯಾಗಲಿಲ್ಲ" ಎಂದವಳು ತಿಳಿಸಿದಳು.

"ಭಗವಾನ್ ದಾದಾ" ಚಿತ್ರದಲ್ಲಿ ಅಮಾಯಕ ಯುವಕ ರಾಕೇಶ್‌ನನ್ನು ಪ್ರೀತಿಸುವ ಬೀದಿಯ ಬಸವಿಯ ಪಾತ್ರ ಅವಳದು. ಈ ಚಿತ್ರದಲ್ಲಿ ರಜನೀಕಾಂತ್, ಟೀನಾ ಮುನೀಂ ಕೂಡ ಇರುವರಾದರೂ ತಾನು ಎಲ್ಲರಿಗಿಂತ ಉತ್ತಮ ಅಭಿನಯ ನೀಡುವ ಆತ್ಮವಿಶ್ವಾಸ ಅವಳದು. ಅವಳ ಅದಮ್ಯ ಆತ್ಮ ವಿಶ್ವಾಸ ಶ್ರೀದೇವಿಯನ್ನು ಯಾವ ಎತ್ತರಕ್ಕೂ ತಲುಪಿಸಬಲ್ಲದು.




ಜಯಪ್ರದಾ

ಜಯಪ್ರದಾಳ ಚೆಲುವು ಕಣ್ಣಿಗೆ ಹಬ್ಬ. 'ಟಕ್ಕರ್' ಹಾಗೂ ನಂತರ 'ಸರಗಂ' ಚಿತ್ರಗಳಲ್ಲಿ ತನ್ನ ಮೋಹಕ ಮೈಕಾಂತಿ ಚಿಮ್ಮಿ ಹಿಂದೀ ಪ್ರೇಕ್ಷಕರ ಎದೆ ಥ್ರಿಲ್ ಎನಿಸಿದ ತಾರೆ ಜಯಪ್ರದಾ. ಆದರೆ ಅವಳ ಹೃದಯಸ್ಪರ್ಶಿ ಅಭಿನಯ ಮನಸ್ಸನ್ನು ಕರಗಿಸಿದ್ದು 'ತೋಫಾ' ಚಿತ್ರದಲ್ಲಿ. ಜಯಪ್ರದಾ, ಶ್ರೀದೇವಿ ಇವರಿಬ್ಬರಲ್ಲಿ ಯಾರು ಹೆಚ್ಚು ಪ್ರತಿಭಾವಂತರು ಎಂಬುದನ್ನು ಒರೆಗೆ ಹಚ್ಚುವದಕ್ಕೂ ಆ ಚಿತ್ರವು ಒಳ್ಳೆಯ ಅವಕಾಶ ನೀಡಿತು.

ಜಯಪ್ರದಾ ಸಂಭಾವನೆಯ ದೃಷ್ಟಿಯಿಂದ ಶ್ರೀದೇವಿಗಿಂತ ಒಂದು ಮೆಟ್ಟಿಲು ಕೆಳಗಿರುವಳಾದರೂ ಆಕೆ ಮುಂಬೈನ ಪ್ರೊಸೆಂಜಿತ್‌ ಚಾನ್ಸ್ ಅಥವಾ ಬೇರಾವುದೇ ಬೆಡಗಿಯರಷ್ಟೇ ಬೇಡಿಕೆಯುಳ್ಳವಳಿರುವದಂತೂ ದಿಟ. ಮುಂಬೈನಲ್ಲಿ ನಟಿಯರ ಜನಪ್ರಿಯತೆಯ ಅಳತೆಗೋಲು ಅವರು ಅದೆಷ್ಟು ಚಿತ್ರಗಳಲ್ಲಿ ಅಭಿನಯಿಸುತ್ತಾರೆಂಬುದು. ಆ ಮಾನದಂಡದ ಪ್ರಕಾರ ನಂಬರ್ ಒಂದರ ಮೆಟ್ಟಲಿಗೆ ಆಕೆ ತೀರ ಹತ್ತಿರದಲ್ಲಿದ್ದಾಳೆ.

ಮುಂಬೈಯ ಒಬ್ಬ ಖ್ಯಾತ ನಿರ್ಮಾಪಕ ನಿರ್ದೇಶಕರ ಪ್ರಕಾರ" ಜಯಪ್ರದಾ ಭಾವಪೂರ್ಣ ಸನ್ನಿವೇಶಗಳಲ್ಲಿ ಶ್ರೇಷ್ಠ ಅಭಿನಯ ನೀಡಬಲ್ಲಳು." ಆದರೆ ಆಧುನಿಕ ಉಡುಗೆ ತೊಡುಗೆಯ ಕೊಡೆ ತಟ್ಟುವ ಪಾತ್ರಗಳು ಆಕೆಗೆ ಒಪ್ಪುವದಿಲ್ಲ. ಅಂಥ ಪಾತ್ರಗಳಿಗೆ ಆಕೆಯನ್ನು ಆರಿಸುವದು ಭಾರೀ ಅಪಾಯಕರ ಕೂಡ. ಆದರೆ ಅಪರೂಪವೆನಿಸುವ ಅಪ್ರತಿಮ ಸೌಂದರ್ಯ, ನಡತೆಯಲ್ಲಿ ಗಾಂಭೀರ್ಯ ಶಿಸ್ತು ಜೊತೆಗೆ ಸಹಕಾರ ಮನೋಭಾವ- ಅವಳ ಸಣ್ಣ ಪುಟ್ಟ ದೌರ್ಬಲ್ಯಗಳನ್ನೂ ಮುಚ್ಚಬಲ್ಲ ಶಕ್ತಿ ಪಡೆದಿವೆ. "ಈ ನಟಿ ಅದೆಂಥ ಪ್ರತಿಭಾಶಾಲಿಯೆಂದರೆ ಅಭಿನಯಕ್ಕೆ ಅವಕಾಶವಿರುವ ಯಾವ ಪಾತ್ರವೂ ಅವಳಿಗೆ ಒಪ್ಪುತ್ತದೆ. ಅವಳ ಸುಸ್ವಭಾವ, ನಯ-ವಿನಯ, ದೇವರ ಬಗ್ಗೆ ಭಯ-ಭಕ್ತಿ ಯಾರಾದರೂ ಮೆಚ್ಚತಕ್ಕ ಅಂಶಗಳು" ಎಂದು ಸ್ವರ್ಗಸೇ ಸುಂದರ್' ಚಿತ್ರದ ನಿರ್ಮಾಪಕ ಎ. ಕೃಷ್ಣಮೂರ್ತಿ ಹೇಳುತ್ತಾರೆ.

'ಕಾಮಚೋರ್'ನಪಾತ್ರಕ್ಕೆ ತಾನುಒಪ್ಪುವದಿಲ್ಲ ಎಂದು ಜಯಮಾಲಾಳಿಗೂ ಗೊತ್ತಿತ್ತು. ಯಾಕೆಂದರೆ ಆ ಚಿತ್ರದಲ್ಲಿ ಅವಳದು ಆಧುನಿಕ ಉಡುಗೆ ತೊಡುಗೆಯ ಶ್ರೀಮಂತ ಯುವತಿಯ ಥಳಕು ಬೆಳಕಿನ ಪಾತ್ರ. ಆದರೆ ಹಾಸ್ಯಕ್ಕೆ ಹೆಚ್ಚು ಅವಕಾಶವಿದ್ದು



ದರಿಂದ ನಾನೊಪ್ಪಿಕೊಂಡೆ" ಎಂದಾಕೆ ಹೇಳುತ್ತಾಳೆ.

'ಹಕೀಕತ್' ಹಾಗೂ ರಾಜೇಶ್ ಖನ್ನ ಜೊತೆ ಅಭಿನಯಿಸಿದ 'ಅವಾಜ್'ದಲ್ಲಿನ ಆಕೆಯ ಪಾತ್ರವೂ ಮೆಚ್ಚುಗೆ ಗಳಿಸಿತು. 'ಶರಾಬಿ' ಚಿತ್ರದ ಅವಳ ಪಾತ್ರವೂ ಮೆಚ್ಚುಗೆ ಗಳಿಸಿತು. ಅಮಿತಾಬ್ ನಾಯುಕನಾಗಿರುವ ಚಿತ್ರವೊಂದರಲ್ಲಿ ನಾಯಕಿಯ ಪ್ರಶಂಸೆಗೆ ಪಾತ್ರಳಾಗುವದು ತೀರ ಅಪರೂಪ.

ಬರಲಿರುವ ಆಕೆಯ ಬಹುಪಾಲು ಚಿತ್ರಗಳ ಜೊತೆಗಾರ ಜಿತೇಂದ್ರ. 'ಸಂಜೋಗ್' 'ದಿಲ್‌ವಾಲಾ' 'ಸಿಂಘಾಸನ' ಮೊದಲಾದ ಅನೇಕ ಚಿತ್ರಗಳಲ್ಲಿ ಆಕೆ ಅವನೊಡನೆ ಅಭಿನಯಿಸುತ್ತಿದ್ದಾಳೆ. ಮಿಥುನ್ ಸನ್ನಿ ದಿಯೊಲ್, ರಾಜೀವಕಪೂರ್, ಜಾಕ್ಕಿ ಶ್ರಾಫ್, ಅನಿಲ್ ಕಪೂರ್ ಅವರಂಥ ಹೊಸ ಪೀಳಿಗೆಯ ನಟರ ನಾಯಕಿಯಾಗಿಯೂ ಆಕೆ ನಟಿಸುತ್ತಿದ್ದಾಳೆ.

"ನಾನು ದಿಲೀಪ್‌ಕುಮಾರ್ ಅಥವಾ ರಾಜಕಪೂರ್ ಜೊತೆಗೂ ನಟಿಸಬಲ್ಲೆ." ಎಂದಾಕೆ ಮುಗುಳ್ನಗುತ್ತ ಹೇಳುತ್ತಾಳೆ. "ಯಾಕೆಂದರೆ 'ಮೇರಾ ಸಾಥೀ'ಯಲ್ಲಿ ವಯಸ್ಸಾದ ಮಹಿಳೆಯ ಪಾತ್ರದಲ್ಲೂ ಜನ ನನ್ನನ್ನು ಒಪ್ಪಿಕೊಂಡಿದ್ದಾರೆ."

ಪ್ರೇಕ್ಷಕರೇ ಆಗಲಿ. ನಿರ್ಮಾಪಕರೇ ಆಗಲಿ ಕೆಲಸದ ಬಗ್ಗೆ ನನಗಿರುವ ಶ್ರದ್ಧೆಯನ್ನು ಎಂದಿಗೂ ಕಂಡಿಲ್ಲ. ಆದರೆ ಹಿಂದೀ ಚಿತ್ರಗಳಲ್ಲಿ ನನಗೆ ಬೇಡಿಕೆಯಿದೆ" ಎಂದು ಜಯಪ್ರದಾ ಹೇಳುತ್ತಾಳೆ.

ಹಿಂದಿಯಲ್ಲಿ ಈಗಲೂ ಶ್ರೀದೇವಿಗೆ ಸರಿಯಾಗಿ ಸಂಭಾಷಣೆ ಹೇಳಲು ಬರುವದಿಲ್ಲ. ಪ್ರತಿ ಚಿತ್ರದಲ್ಲಿ ಆಕೆಗೆ ಮಾಜೀ ಬಾಲನಟಿ, ನಾಜ್ ಕಂಠದಾನ ಮಾಡುತ್ತಾಳೆ. 'ಆದರೆ ನನ್ನ ಸಂಭಾಷಣೆಯನ್ನು ನಾನೇ ಹೇಳುತ್ತೇನೆ' ಎಂದು ಜಯಾ ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ.

ಜಯಪ್ರದಾ ಉಳಿದ ಅನೇಕ ನಾಯಕಿಯರಿಗಿಂತ ಹೆಚ್ಚು ಕಾಲ ಹಿಂದೀ ರಂಗದಲ್ಲಿ ಉಳಿಯಲು ಇನ್ನೂ ಒಂದು



ನಂಬರ್ ಒನ್ ಸ್ಥಾನಕ್ಕಾಗಿ ಶ್ರೀದೇವಿ-ಜಯಪ್ರದಾ ಪೈಪೋಟಿ



ಕಾರಣವಿದೆಯೆಂದು ಚಿತ್ರೋದ್ಯಮದ ನಿರ್ಮಾಣ ಸಂಸ್ಥೆಯ ಒಬ್ಬರು ಇತ್ತೀಚೆಗೆ ಹೇಳುತ್ತಿದ್ದರು. ಅವರ ಪ್ರಕಾರ ದೇಹದ ಉಬ್ಬು-ತಗ್ಗುಗಳನ್ನೂ ಮೀರಿಸುವ ನೃತ್ಯಪಾಟವನ್ನೂ ಜಯಪ್ರದಾ ತೀರ ವಿರಳವಾಗಿ ಪ್ರದರ್ಶಿಸಿರುವದೇ ಆಕೆಯ ಬೇಡಿಕೆ ಬೇಗ ಕುಸಿಯದಿರಲು ಕಾರಣ.

ನಾಯಕಿಯಾದವಳು ತನ್ನಲ್ಲಿರುವದನ್ನೆಲ್ಲ ಒಮ್ಮೆ ತೋರಿಸಿ ಬಿಟ್ಟರೆ ಪ್ರೇಕ್ಷಕರು ಅವಳಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರಷ್ಟೇ ಅಲ್ಲ ಅವಳನ್ನು ಹೀನ ದೃಷ್ಟಿಯಿಂದ ಕಾಣಲು ಶುರು ಮಾಡುತ್ತಾರೆ. ಜಯಪ್ರದಾ ಈ ಅಂಶವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾಳೆ. ಚೆಲುವು, ನಾಟ್ಯದಲ್ಲಿ ಪರಿಣತಿ ಅವಳನ್ನು ಉತ್ತುಂಗ ಶಿಖರಕ್ಕೆ ಕರೆದೊಯ್ಯುವ ಸಾಮರ್ಥ್ಯ ಪಡೆದಿವೆ.

ರೇಖಾ

ಒಮ್ಮೆ ಪ್ರಕಾಶ್ ಮೆಹರಾ ಹೇಳಿದ್ದರು. 'ದಿ|| ಮೀನಾಕುಮಾರಿಯೊಂದಿಗೆ ಹೋಲಿಸಬಹುದಾದ ಎಪ್ಪತ್ತರ ಹಾಗೂ ಎಂಭತ್ತರ ದಶಕದ ತಾರೆ ಯಾರಾದರೂ ಇದ್ದರೆ ಆಕೆ ರೇಖಾ.'

ನಲ್ವತ್ತು ಚಿತ್ರಗಳ ಅಭಿನಯವನ್ನು ಪೂರ್ತಿಗೊಳಿಸಿದ ನಂತರವೂ ರೇಖಾಳ ಪ್ರತಿಭೆಯ ಸರಿಯಾದ ಪರಿಚಯವಾಗಿರಲಿಲ್ಲ. 'ಉಮ್ರಾವ್ ಜಾನ್' 'ಖೂಬ್ ಸೂರತ್' ಚಿತ್ರಗಳು ಅವಳೊಬ್ಬ ಸಂವೇದನಶೀಲ ತಾರೆಯೆಂಬುದನ್ನು ತೋರಿಸಿಕೊಟ್ಟವು.

ಬಹಳಷ್ಟು ಜನ ರೇಖಾಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಆಕೆ ಹೀಗೆ ಸುಲಭವಾಗಿ ಅರ್ಥವಾಗುವ ತಾರೆಯೂ ಅಲ್ಲ. ಹೀಗಾಗಿ ಅನೇಕ ಸಲ ಆಕೆ ಮಾನಸಿಕ ಚಿತ್ರಹಿಂಸೆಗೆ ಒಳಗಾದುದೂ ಉಂಟು. ಆಗ ಯೋಗಾಸನ ಅವಳ ನೆರವಿಗೆ ಬಂತು. ಪ್ರತಿದಿನ ಗಂಟೆಗಟ್ಟಲೆ ಯೋಗಾಸನ ಮಾಡಿ ಅವಳ ಮೈಕಾಂತಿ ಹೆಚ್ಚಿದೆ. ಶರೀರದ ಸಮತೋಲನ ಹತೋಟಿಯಲ್ಲಿದೆ. 'ಸಿಲ್ ಸಿಲಾ' 'ಮುಕದ್ದರ್ ಕಾ ಸಿಕಂದರ್' ಚಿತ್ರಗಳು ತಾನೊಬ್ಬ ಉತ್ತಮ ಅಭಿನೇತ್ರಿಯೆಂದು ಸಾಬೀತು ಮಾಡಲು ತನ್ನ ಖಾಸಗೀ ಬದುಕು ಕಾರಣವೆಂದು ಆಕೆ ಹೇಳುತ್ತಾಳೆ. "ವೈಯಕ್ತಿಕ ಜೀವನದಲ್ಲಿ ಸುಖಕ್ಕಿಂತ ವ್ಯಥೆಯನ್ನೇ ಹೆಚ್ಚು ಉಂಡವಳು ನಾನು. ಅಂತೇ ಜನರನ್ನು ನಗಿಸುವದಕ್ಕಿಂತ ಅಳಿಸುವ ವಿದ್ಯೆ ನನಗೆ ಚೆನ್ನಾಗಿ ಗೊತ್ತು" ಎಂದು ರೇಖಾ ಒಮ್ಮೆ ಹೇಳಿದ್ದಳು.



ಬದುಕಿನ ಪ್ರತಿಯೊಂದು ಅನುಭವವೂ ಅಭಿನಯದ ಮೇಲೆ ಪ್ರಭಾವ ಬೀರುವದೆಂದು ರೇಖಾ ಹೇಳುತ್ತಾಳೆ. 'ಕಹಾನಿ ಕಿಸ್ಮತ್ ಕೀ' ಹಾಗೂ 'ಖೂಬ್ ಸೂರತ್' ಚಿತ್ರಗಳ ನಂತರ ಮತ್ತೆ ಹಾಸ್ಯ ಪಾತ್ರದಲ್ಲಿ ಕಾಣಿಸಿಕೊಳ್ಳಲು ತಾನು ಉತ್ಸುಕಳಾಗಿರುವದಾಗಿಯೂ ಆಕೆ ಹೇಳಿದ್ದಾಳೆ.

ಇದೀಗ ನನಗೆ ಎರಡು ಮೂರು ಒಳ್ಳೆಯ ಚಿತ್ರಗಳು ಸಿಕ್ಕಿವೆ. 'ಕ್ಲರ್ಕ್' 'ಶಾಂತಿ' 'ಕಲಿಯುಗ್ ಕೀ ರಾಮಾಯಣ್' 'ಆಗ್ ಕಾ ದರಿಯಾ' ಇವು ನನಗೆ ಅಭಿನಯಕ್ಕೆ ಒಳ್ಳೆಯ ಅವಕಾಶ ನೀಡಲಿರುವ ಚಿತ್ರಗಳು" ಎಂದು ರೇಖಾ ಹೇಳಿದಳು.

"ಕೊನೆಯ ಚಿತ್ರದಲ್ಲಿ ನಾನು ಪದ್ಮಿನಿ ಕೊಲ್ಹಾಪುರೆಯ ತಾಯಿ. ಆದರೆ ದಿಲೀಪ್ ಕುಮಾರ್ ಅವರ ಪತ್ನಿಯಾಗಿ ಕಾಣಿಸಿಕೊಳ್ಳುವ ಅವಕಾಶ ಸಿಕ್ಕಿದ್ದರಿಂದ ನಾನು ಒಪ್ಪಿಕೊಂಡೆ" ಎಂದೂ ಆಕೆ ಹೇಳಿದಳು.

'ಜಾಲ್' ಚಿತ್ರದಲ್ಲಿ ಅವಳು ಪುಂಡರ ತಂಡದ ನಾಯಕಿಯಾಗಿ ಅತ್ಯಂತ ವಿಶಿಷ್ಟ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ.

ಕನಸಿನ ಕನ್ಯೆ ಹೇಮಾಮಾಲಿನಿಯನ್ನು ವರ್ಷಗಳ ಹಿಂದೆಯೇ ದಾಟಿ ಮುಂದೆ ಬಂದಿರುವ ರೇಖಾ-ನಾಯಕಿಗೆ ಪ್ರಾಧಾನ್ಯವಿರುವ ಪಾತ್ರಗಳಿಗೆ ಈಗಲೂ ಅತ್ಯಂತ ಸೂಕ್ತ ಆಯ್ಕೆ. ಆದರೆ ಪೂರ್ತಿ ತೃಪ್ತಿ ನೀಡುವಂಥ ಪಾತ್ರವಿನ್ನೂ ಆಕೆಗೆ ಸಿಕ್ಕಿಲ್ಲವಂತೆ.

"ಹಣ ಗಳಿಸುವ ಪ್ರಧಾನ ಉದ್ದೇಶವೊಂದನ್ನೇ ಇಟ್ಟುಕೊಳ್ಳದ ಕೆಚ್ಚೆದೆಯ ನಿರ್ಮಾಪಕರು ಇಂದು ಸಿನಿಮಾದ ದಿಕ್ಕನ್ನು ಬದಲಿಸಲು ಬೇಕಾಗಿದ್ದಾರೆ. ಆದರೆ ಅಂಥವರಿನ್ನೂ ಹುಟ್ಟೇ ಇಲ್ಲ. ಹಣವುಳ್ಳವರಿಗೆ ತಮ್ಮ ದುಡ್ಡನ್ನು ಸಿನಿಮಾದಂಥ ಜೂಜಿನಲ್ಲಿ ತೊಡಗಿಸುವ ಆಸಕ್ತಿ ಇಲ್ಲ. ಕ್ರಾಂತಿ ಮಾಡಬಯಸುವವರ ಬಳಿ ಹಣದ ಥೈಲಿಯಿಲ್ಲ. ಹೀಗಾಗಿ ಕಾರ್ಖಾನೆಯಲ್ಲಿ ತಯಾರಾಗುವ, ಒಂದೇ ಪಡಿಯಚ್ಚಿನ ವಸ್ತುಗಳಂತೆ ಕಾಣುವ, ಸಿನಿಮಾಗಳಿಂದ ನಾವು ತೃಪ್ತಿಪಡಬೇಕಾಗಿದೆ" ಎಂದು ರೇಖಾ ಹೇಳುತ್ತಾಳೆ.



The Deepavali Special Issue of "Karmaveer" was printed and published by Shri V. G. Vaidya, on behalf of the Court Receiver for Lok Shikshana Trust (Movables), at 'Samyukta Karnataka' offices, Koppikar Road, Hubli-20 and 2-Residency Road, Bangalore-25.

Licence No. 38 Licenced to post without prepayment KARMAVEER 31-10-1985 Registered with the Registrar of News Papers under No. 3558/57 Reg. No. BG 39.